THE BOOK WAS DRENCHED

TEXT FLY WITHIN THE BOOK ONLY

TEXT PROBLEM WITHIN THE BOOK ONLY

UNIVERSAL LIBRARY
OU_198827
UNIVERSAL LIBRARY

OUP—556—13-7-71—4,000.

OSMANIA UNIVERSITY LIBRARY

Call No. K 83 Accession No. K 4276

Author B18A

Title

This book should be returned on or before the date last marked below.

ಲಲಿತ ಸಾಹಿತ್ಯಮಾಲೆಯ ಮೂವತ್ತಯ್ದನೆಯ ಕುಡಿ
ಎಂಟನೆಯ ವರುಷದ ಎರಡನೆಯ ಪ್ರಕಟನೆ

ಅನುರಕ್ತೆ

ಕಾದಂಬರಿ

ವ್ಯಾಸರಾಯ ಬಲ್ಲಾಳ

ಲಲಿತ ಸಾಹಿತ್ಯಮಾಲೆ
ಧಾರವಾಡ

ಉತ್ತಮ ಪ್ರತಿ ೪-೦-೦

ಜನವರಿ ೧೯೫೩

ಸಾದಾ ಪ್ರತಿ ೩-೦-೦

ಸಂಪಾದಕರು-ಪ್ರಕಾಶಕರು :

ಚುಳಕಿ ಗೋವಿಂದರಾಯರು

ಲಲಿತ ಸಾಹಿತ್ಯಮಾಲೆ, ಧಾರವಾಡ

ಮನೋಹರ ಗ್ರಂಥ ಭಾಂಡಾರ, ಧಾರವಾಡ

ಕನ್ನಡ ಪುಸ್ತಕಾಲಯ, ಬೆಳಗಾವಿ

ಮುದ್ರಕರು :

ಎಸ್. ಎಮ್. ಕುಲಕರ್ಣಿ

ಲಲಿತ ಮುದ್ರಣಾಲಯ, ಧಾರವಾಡ

ಅರಿಕೆ

ಶ್ರೀಮಾನ್ ನಿ. ವ್ಯಾಸರಾಯ ಬಲ್ಲಾಳರ ಈ 'ಅನುರಕ್ತೆ' ಕಾದಂಬರಿಯ ಪ್ರಕಾಶನ ಕಾರಣಾಂತರದಿಂದ ಇಷ್ಟು ತಡವಾದುದಕ್ಕೆ ಈ ಲೇಖಕರ ಮತ್ತು ಮಾಲೆಯ ಚಂದಾದಾರರ ಕ್ಷಮೆ ಬೇಡುತ್ತೇವೆ.

ಇದು ಶ್ರೀ. ಬಲ್ಲಾಳರ ಪ್ರಥಮ ಕಾದಂಬರಿ. ಅವರು ಆಗಲೆ ಇನ್ನೊಂದನ್ನು ಬರೆದು ಮುಗಿಸಿದ್ದಾರೆ. ಕನ್ನಡ ಕಥಾಕ್ಷೇತ್ರದಲ್ಲಿ ಮೊದಲು ಕಾಲಿಟ್ಟ ಈ ಲೇಖಕರು ಕಾದಂಬರಿಯ ವಿಶಾಲ ಜಗತ್ತಿಗೆ ಅತ್ಯಂತ ಸಮರ್ಪಕವಾಗಿ ಪದಾರ್ಪಣ ಮಾಡಿರುವರೆಂದು 'ಅನುರಕ್ತೆ'ಯ ವಾಚಕರು ಗುರುತಿಸುವರೆಂಬ ಭರವಸೆ ನಮಗಿದೆ. ಇವರ ಮುಂದಿನ ಬರಹಗಳ ಭವ್ಯವು ಕನ್ನಡ ಕಾದಂಬರೀ ಸಾಹಿತ್ಯದ ಭವಿಷ್ಯವನ್ನು ರೂಪಿಸುವಲ್ಲಿ ನೆರವಾಗುವವೆಂದು ನಾವು ನಿರೀಕ್ಷಿಸಿದ್ದೇವೆ.

ಇಂಥ ಆಶಾದಾಯಕವಾದ ಶ್ರೀ. ಬಲ್ಲಾಳರ ಕೃತಿಯನ್ನು ಪ್ರಕಟಿಸಲು ನಮಗೆ ಹೆಮ್ಮೆಯೆನಿಸುತ್ತದೆ. ಇದಕ್ಕೆ ಅವಕಾಶವಿತ್ತ ಲೇಖಕರನ್ನೂ ಈ ಕಾರ್ಯದಲ್ಲಿ ನೆರವಾದ ಶ್ರೀ. ಐರಣಿ ಶ್ರೀನಿವಾಸರನ್ನೂ ನಾವು ಹೃತ್ಪೂರ್ವಕವಾಗಿ ವಂದಿಸುತ್ತೇವೆ.

ಮಾಲೆಯ ಮುಂದಿನ ಕುಡಿ ಹೆಸರಾಂತ ಕಾದಂಬರಿಕಾರರಾದ ಪ್ರೊ. ಇನಾಂದಾರರ '**ಈ ಪರಿಯ ಸೊಬಗು**'

ಇಂದು ಕನ್ನಡ ಪುಸ್ತಕಗಳ ಪ್ರಕಾಶನಕ್ಕೆ ಬಂದಿರುವ ಬಿಕ್ಕಟ್ಟು ಕ್ಷಣಿಕವಾಗಿ ಮುಂದಾದರೂ ಇದಕ್ಕೆ ತಕ್ಕ ಬಲ ವಾಚಕಲೋಕದಿಂದ ದೊರೆಯಲೆಂದು ಹಾರೈಸುತ್ತೇವೆ.

ಧಾರವಾಡ
೨೬-೧-೧೯೫೩

ಸಂಪಾದಕ
ಲಲಿತ ಸಾಹಿತ್ಯಮಾಲೆ

ಕೃತಜ್ಞತೆ

ನನ್ನ ಮೊದಲನೆಯ ಕಾದಂಬರಿ ಕನ್ನಡಿಗರ ಮುಂದೆ ಬರುತ್ತಿರುವ ಈ ಸಂದರ್ಭದಲ್ಲಿ ಕೃತಿರಚನೆಯ ಕಾಲಕ್ಕೆ ನನಗೆ ದೊರಕಿದ ಪ್ರೇರಣೆ ಪ್ರೋತ್ಸಾಹಗಳಿಗೆ ಕಾರಣವಾದ ಸ್ನೇಹದ ಋಣಭಾರವನ್ನು ಮರೆಯಲಾರೆ.

'ಕನವರಿಸದ ಕುಂಕುಮ' ಎಂಬ ಹೆಸರಿನಡಿ ಈ ಕಾದಂಬರಿಯ ಆರಂಭದ ಕೆಲವು ಪ್ರಕರಣಗಳು ಈ ಹಿಂದೆ ಮುಂಬಯಿಯಿಂದ ಪ್ರಕಟವಾಗುತ್ತಿದ್ದ 'ನುಡಿ' ಎಂಬ ಸಾಪ್ತಾಹಿಕದಲ್ಲಿ ಮೊದಲು ಬೆಳಕು ಕಂಡಾಗ, ಕಾದಂಬರಿಯನ್ನು ಸ್ವಾಗತಿಸಿ ಮೆಚ್ಚುಗೆ ವ್ಯಕ್ತಪಡಿಸಿದ ಹಲವಾರು ಓದುಗರನ್ನು ನಾನು ಈ ಸಂದರ್ಭದಲ್ಲಿ ನೆನೆಯಬೇಕಾಗಿದೆ.

ಹಸ್ತಪ್ರತಿ ಓದಿ ಮೆಚ್ಚುಗೆ ಸೂಚಿಸಿದ ಗೆಳೆಯರಾದ ಶ್ರೀ. ದ. ಬಾ. ಕುಲಕರ್ಣಿ, ಮತ್ತೆ ಪ್ರಕಟನೆಯ ಕೆಲಸದಲ್ಲೂ ನೆರವಿಗೆ ನಿಂತರು. ಅವರ ಉಪಕಾರವನ್ನು ಎಷ್ಟು ಸ್ಮರಿಸಿದರೂ ಕಡಿಮೆಯೆ. ವಿಶ್ವಾಸದಿಂದ ತಮ್ಮ ಮಾಲೆಯಲ್ಲಿ ನನ್ನ ಮೊದಲನೆಯ ಕಾದಂಬರಿಯನ್ನು ಪ್ರಕಟಿಸಲು ಒಪ್ಪಿಕೊಂಡ ಶ್ರೀ. ಚುಳಕಿಯವರಿಗೂ, ಶ್ರೀ. ದ ಬಾ. ರವರಿಗೂ ನನ್ನ ಧನ್ಯವಾದಗಳು ಸಲ್ಲಬೇಕು.

ಕಿರಿಯ ಸೋದರನೆಂಬಷ್ಟು ಅಭಿಮಾನದಿಂದ ನನ್ನ ಬರವಣಿಗೆಯ ಕುರಿತು ಮೊದಲಿನಿಂದಲೂ ಆಸಕ್ತಿ ವಹಿಸಿರುವ ಹಿರಿಯರಾದ ಶ್ರೀ. ಎನ್ಕೆ ಕುಲಕರ್ಣಿಯವರ ಪ್ರೀತಿಯ ಸಹಾಯ ಈ ಕೆಲಸದಲ್ಲಿ ಇಷ್ಟೇ ಎಂದು ಹೇಳುವಂತಿಲ್ಲ. ಹಸ್ತಪ್ರತಿಯನ್ನು ಓದಿ, ಹಲವಾರು ಅಮೂಲ್ಯ ಸೂಚನೆಗಳನ್ನಿತ್ತು, ತಿದ್ದಿ ನನ್ನನ್ನು ಋಣಿಯನ್ನಾಗಿ ಮಾಡಿದ್ದಾರೆ.

ಗೆಳೆಯರಾದ ಕಲಾವಿದ ರಾಘವೇಂದ್ರ, ಕೃತಿಯ ಬಾಹ್ಯ ಸೌಂದರ್ಯಕ್ಕೆ ತಾವು ಕಾರಣರಾಗಿ ನನ್ನ ಕೃತಿಯನ್ನು ಹರಸಿದ್ದಾರೆ. ಅವರಿಗೂ ನನ್ನ ಧನ್ಯವಾದಗಳು.

ಗೆಳೆಯ ಶ್ರೀ. ಐರಣಿ ಶ್ರೀನಿವಾಸರ ಸ್ನೇಹದ ನೆರಳಿನ ಆಸರೆಯಲ್ಲಿ ಈ ಕಾದಂಬರಿಯನ್ನು ಬರೆದಿದ್ದೇನೆ. ಅವರ ವಿಶ್ವಾಸದ ನೆನಪಿಗೆ 'ಅನುರಕ್ತೆ' ಮುಡಿಪು.

ಮುಂಬಯಿ
೧೪-೧-೧೯೬೪

ವ್ಯಾಸರಾಯ ಬಲ್ಲಾಳ

ಅನುರಕ್ತೆ

೧

ಎಂದೂ ಇಲ್ಲದ ರಾಜಕೀಯ ಚರ್ಚೆ ೫–೨೦ ರ ಕುರ್ಲಾ ಗಾಡಿಯ ವಾತಾವರಣವನ್ನೂ ಹದಗೆಡಿಸಿತೆಂದು ಗೋಪಿ ತುಂಬ ನೊಂದುಕೊಂಡ.

ದಿನದ ದುಡಿತದಿಂದ ಸೋತು ನಿಧಾನವಾಗಿ ನಡೆದು ವಿ. ಟಿ. ತಲುಪಿ, ತುಲನಾತ್ಮಕ ದೃಷ್ಟಿಗೆ ನೂಕು ನುಗ್ಗಲು ಕಡಿಮೆಯಿರುವ ಕುರ್ಲಾ ಬಂಡಿಯ ಫಸ್ಟ್ ಕ್ಲಾಸ್ ಡಬ್ಬಿಯಲ್ಲಿ ದಾದರ್ ಸೇರುವತನಕ ಒಂದಿಪ್ಪತ್ತು ಮಿನಿಟು ಹಾಯಾಗಿ ನಿದ್ರಿಸೋಣವೆಂದರೆ....

"ಕಮ್ಯೂನಿಸ್ಟರೆಲ್ಲ ದೇಶದ್ರೋಹಿಗಳು ಮಿಸ್ಟರ್ ಬಾಪಟ್, ಅವರನ್ನೆಲ್ಲ ಅಂಡಮಾನಕ್ಕೆ ಕಳುಹಿಸಬೇಕು."

"ಆದರೆ ಅಂದಮಾನಕ್ಕೆ ಕೈದಿಗಳನ್ನು ಕಳುಹಿಸುವ ಏರ್ಪಾಡು ನಿಂತು ಹೋಗಿದೆಯಲ್ಲ ಮಿಸ್ಟರ್ ರಾವ್. ಈಗ ಅದು ಸಾಧ್ಯವಿಲ್ಲ."

"ಅಂದಮಾನವಲ್ಲದಿದ್ದರೆ ಫೊರ್ಮೋಸಾಕ್ಕೆ ಕಳುಹಿಸಬಹುದಲ್ಲ." ಎಂದು ಮೂರನೆಯದೊಂದು ದನಿಯೆದ್ದಿತು.

"ಏನಿದ್ದರೂ ಅವರ ತತ್ವಪ್ರೇಮಕ್ಕೆ ಕೊಡಬೇಕು ಮನ್ನಣೆ." ಸಹಾನುಭೂತಿಯ ರಾಗ ಎಳೆದರು ಇನ್ನೊಬ್ಬರು.

" ತತ್ವಪ್ರೇಮ ! ಪ್ಯೂರ್ ಹಂಬಗ್. ಈ ಜಗತ್ತಿನಲ್ಲಿ ತತ್ವವೆಂಬುದೇ ಇಲ್ಲ. ಹಾಗಿರುವಾಗ ತತ್ವಪ್ರೇಮವೆಲ್ಲಿಂದ ಬಂತು ? ಇದೆಲ್ಲ ಅತಿರೇಕ ಭಾವೋದ್ರೇಕದ ಪರಿಣಾಮ. . ಎಲ್ಲಾ ಸಿಲ್ಲಿ...." ಮೊದಲು ಮಾತನಾಡಿದ ರಾವ್ ತಮ್ಮ ಸಂಭಾವಿತ ಜ್ಞಾನಪ್ರದರ್ಶನ ಮಾಡಿದರು.

ಬೇಡವಾದ ಮನಸ್ಸಿನಿಂದ ಗೋಪಿ ಇವರ ಸಂಭಾಷಣೆಯನ್ನು ಮೆಲುಕು ಹಾಕುತ್ತಿದ್ದ. ಮನಸ್ಸು ಬೇಡವೆಂದರೂ ಕಿವಿ ಕೇಳದೆ ಇರುತ್ತವೆಯೆ ? ಒಂದು ನಿಮಿಷದ ಹಿಂದೆ 'ಗಾಡಿ ಬಿಡಲು ಇನ್ನು ಎರಡು ಮಿನಿಟು ಉಳಿದಿವೆ. ಗಾಡಿ ಹೊರಡುವಾಗಲಾದರೂ ಈ ಒಣ ಚರ್ಚೆ ಕೊನೆಗೊಳ್ಳಬಹುದು' ಎಂದು ಗೋಪಿ ಭಾವಿಸಿದ್ದ. ಆದರೆ ಈಗ ಗಾಡಿ ಬಿಡಲು ಒಂದೇ ಮಿನಿಟಿದೆಯೆನ್ನುವಾಗ ಗಾಡಿ ಹೊರಡುವ ವಿಚಾರವನ್ನೇ ಮರೆತು ಗೋಪಿ ರಾವ್ ಹೇಳಿದ 'ತತ್ವಪ್ರೇಮ'ದ ಕುರಿತಾದ ಮಾತುಗಳ ವಿಚಾರ ಚಿಂತಿಸುತ್ತಿದ್ದ.

ಅಷ್ಟರಲ್ಲಿ....

" ಎಕ್ಸ್ಯೂಸ್ ಮಿ. ಪ್ಲೀಸ್...." ಎಂದು ಸೀಳವಾದ ತನ್ನ ಎರಡು ಜಡೆಗಳನ್ನು ಎದುರಿಗೆ ಹಾಯಬಿಟ್ಟಿದ್ದ ನಾಗವೇಣಿಯೊಬ್ಬಳು ಕುಳಿತುಕೊಳ್ಳಲು ಸ್ಥಳ ಬೇಡಿದಳು.

'ಹೆಂಗಸರಿಗೆ ಪ್ರತ್ಯೇಕ ಸ್ಥಳವಿರುವಾಗಲೂ ಫಸ್ಟ್ ಕ್ಲಾಸ್ ಡಬ್ಬಿಯಲ್ಲಿ ಕೂಡ ಗಂಡಸರ ಮಧ್ಯೆ ಬಂದು ಬೀಳುವರಲ್ಲಾ' ಎಂದು ಗೋಪಿ ಒಂದು ಕ್ಷಣ ಚಿಂತಿಸಿದರೂ ಪಕ್ಕದಲ್ಲೇ ಜಾಗಮಾಡಿಕೊಡದಿರಲಿಲ್ಲ. ಬಳಿಯಲ್ಲಿ ಕುಳಿತಿದ್ದವರೂ ತುಸು ಸರಿದರು. ಇಬ್ಬರ ನಡುವೆ 'ಸ್ಯಾಂಡ್‌ವಿಚ್' ಆಗಿಯೇ ಆ ನಾಗವೇಣಿ ಮೆರೆದಳು.

ಅಷ್ಟರಲ್ಲಿ ಗಾಡಿ ಹೊರಟಿತು. ಈ ಅನಿರೀಕ್ಷಿತ ವ್ಯಕ್ತಿಯ ಆಗಮನದಿಂದಾಗಿ ಡಬ್ಬಿಯ ರಾಜಕೀಯ ಚರ್ಚೆ ಒಮ್ಮೆಂದೊಮ್ಮೆಗೆ ನಿಂತು ಹೋದರೂ, ಗೋಪಿ ಕೂಡಾ ಕ್ಷಣಕಾಲ ದಿಗ್ಭ್ರಾಂತನಾಗಿ ಡಬ್ಬಿಯ ವಾತಾವರಣವನ್ನೇ ಮಾರ್ಪಡಿಸಿದ ಈ ಮಹಿಳೆಯನ್ನು ಹರಸಿದರೂ, ರಾವ್ ಹೇಳಿದ ತತ್ವಪ್ರೇಮದ ಕುರಿತಾದ ಮಾತುಗಳನ್ನು ಮನಸ್ಸಿನಲ್ಲೇ ವಿಮರ್ಶಿಸುವ ಕೆಲಸವನ್ನು ನಿಲ್ಲಿಸಿರಲಿಲ್ಲ.

ಮೈಗೆ ಮೈ, ಭುಜಕ್ಕೆ ಭುಜ ತಾಗಿಸಿ ಕುಳಿತು ಯಾವುದರ ಪರಿವೆಯೂ ಇಲ್ಲದೆ 'ಲೇಡಿಸ್ ಹೋಮ್ ಜರ್ನಲ್' ಹಿಡಿಸಿ ಓದಲಾರಂಭಿಸಿದ ಆ ನಾಗ ವೇಣಿ ಈ ವಿಮರ್ಶೆಯ ಕೆಲಸಕ್ಕೆ ಇನ್ನಷ್ಟು ಉತ್ತೇಜನ ಕೊಟ್ಟಳು.

ಲೆವೆಂಡರ್ ಪರಿಮಳ ಮೂಗಿಗೆ ಬಡಿಯುತ್ತಿತ್ತು. ಅವಸರದಲ್ಲಿ ಮುಡಿ ಮುಡದ ಪರಿಣಾಮವಾಗಿ ಒಂದು ಬದಿಗೆ ಜೋತುಬಿದ್ದಿದ್ದ ಮಲ್ಲಿಗೆಯ ದಂಡೆಯ ಪರಿಮಳ ಉನ್ಮಾದಕರವಾಗಿತ್ತು. ಬೆನ್ನ ಹಿಂದೆಯೇ ಸಿಕ್ಕುಬಿದ್ದ ಬಲತೋಳಿನ ಮೇಲೆ ಬರಲು ಸೆರಗು ನಿರಾಕರಿಸಿದ್ದರಿಂದ, ಚಾಕ್‌ಲೇಟ್ ಬಣ್ಣದ ಸೆಟಿನ್ ಬ್ಲೌಸಿನಿಂದಲಂಕೃತವಾದ ಆಕೆಯ ಗೌರವರ್ಣದ ಕೈ ಗೋಪಿಯ ಭುಜಕ್ಕೆ ತಾಗಿಯೇ ಮೇಲೆದ್ದು ನಿಂತಿತ್ತು. ತೋಳಿಗೆ ಜೋತು ಬಿದ್ದ ಕೈಚೀಲ, ಅವಸರದಲ್ಲಿ ಕುಳಿತುದರಿಂದಾಗಿ ಗೋಪಿಯ ಮೊಣಕಾಲಿನ ಮೇಲೆ ಮಲಗಿದೆಯೆಂಬುದನ್ನೂ ಆಕೆ ಗಮನಿಸಿರಲಿಲ್ಲ.

ಗೋಪಿ ಯೋಚಿಸುತ್ತಿದ್ದ : "ತತ್ವ ಮತ್ತು ಪ್ರೇಮ."

ತನ್ನ ಇಚ್ಛೆಯಂತೆ ಎಲ್ಲ ಕೆಲಸಗಳು ಕೈಗೂಡುವುದು ಸಾಧ್ಯವಿದ್ದರೆ ಇದೇ ಗಂಡುಬೀರಿ ಹುಡುಗಿಯನ್ನು ಮದುವೆಯಾಗುತ್ತಿದ್ದೆ— ಎಂದಂದು ಕೊಂಡ ಗೋಪಿ.

ಅವಳು ಯಾರೆಂದು ತಿಳಿದಿರಲಿಲ್ಲ. ಅವಳ ಕುಲಗೋತ್ರಗಳ ಕುರಿತು ಯಾವುದೊಂದು ಕಲ್ಪನೆಯೂ ಇದ್ದಿಲ್ಲ. ಆಕೆಯ ಮದುವೆಯಾಗಿದೆಯೇ ಇಲ್ಲವೇ ಎಂಬ ವಿಚಾರ ಕೂಡಾ ತಿಳಿಯುವಂತಿದ್ದಿಲ್ಲ.

ಆದರೂ ಬಳಿಯಲ್ಲಿ ಕುಳಿತ ಸುಂದರ ದೇಹದ, ಸುಂದರ ಮುಖದ ಸುಂದರಿ ತನ್ನ ಬಾಳ ಜೊತೆಗಾತಿಯಾಗಲಾರಳೇ ಎಂಬ ಪ್ರಶ್ನೆ ಮನಸ್ಸಿನಲ್ಲೇಕೆ ಉದ್ಭವಿಸಿತು ? ಇಲ್ಲಿ ಯಾವ ತತ್ವವೂ ಇಲ್ಲ; ಯಾವ ಪ್ರೇಮವೂ ಇಲ್ಲ.

ಒಂದು ತತ್ವವನ್ನು ಪೂಜಿಸುವ, ಪಾಲಿಸುವ ಚೈತನ್ಯ ಮನುಷ್ಯನಲ್ಲಿದೆ ಯೆಂದಾದರೆ ಆತ ನನ್ನ ಸೋದರತ್ತೆಯ ಮಗಳನ್ನು ನಾಲ್ಕು ವರ್ಷಗಳ ಕೆಳಗೆ ಮದುವೆಯಾಗಬೇಕಿತ್ತು. ತೆಳ್ಳನ್ನ ದೇಹದ ಲತೆಯಂತೆ ಬಳುಕುವ ಲಕ್ಷ್ಮಿ, ಮೆಂಟ್ರಿಕ್ ಕಲಿಯುವಾಗ ಆತನ ಆರಾಧ್ಯದೇವತೆಯಾಗಿದ್ದಳು. ಆದರೆ ಇಂಟರ್ ಮುಗಿಸಿದ ಮೇಲೆ ಆಕೆಯನ್ನು ಮದುವೆಯಾಗಲು 'ಒಲ್ಲೆ' ಎಂದು ಹೇಳಿದ. ಬಿ. ಎಸ್‌ಸಿ. ಮುಗಿಸಲು ಮಾವ ದುಡ್ಡು ಕೊಡಲು ನಿರಾಕರಿಸಿದುದೇ ಇದಕ್ಕೆ

ಕಾರಣ. ಇಂದು ಲಕ್ಷ್ಮಿ ಎರಡು ಮಕ್ಕಳ ತಾಯಿ. ಆದರೆ ಗೋಪಿಗೆ ಈ ಮದುವೆಯಾಗದಿದ್ದುದರಿಂದೇನೂ ಕೆಡುಕೆನಿಸಲಿಲ್ಲ. ಮೊದಲು ಲಕ್ಷ್ಮಿಯನ್ನು ಮನಸ್ಸಿನಲ್ಲಿ ಪೂಜಿಸುವಾಗ ಆತನಲ್ಲಿ ಯಾವ ಆದರ್ಶವಿತ್ತು ?

ಅಣ್ಣ 'ಮೆಡಿಕಲ್' ಕಲಿಯಲು ಒತ್ತಾಯಪಡಿಸಿದ. ಆದರೆ ತಾನು ಬಿ. ಎಸ್‌ಸಿ. ಆಗಿಯೇ ತೀರುವೆನೆಂಬ ಛಲ ಬಿಡಲಿಲ್ಲ. ಆಗ ತಾನೊಬ್ಬ ದೊಡ್ಡ ರಿಸರ್ಚ್ ಸ್ಕಾಲರ್ ಆಗಿ, ಜಗದ್ವಿಖ್ಯಾತ ಸಂಶೋಧಕನಾಗಿ ಮೆರೆಯಬೇಕೆಂದು ಆಸೆಯಿತ್ತು; ಆದರ್ಶವಿತ್ತು. ಆದರೆ ಎರಡನೆಯ ತರಗತಿಯಲ್ಲಿ ಬಿ. ಎಸ್‌ಸಿ. ಮುಗಿಸಿದಾಗ, ತನಗೆ ದೊರಕಬಹುದಾದುದು ಬರೇ ೭೫ ರೂಪಾಯಿಗಳ ಚಿಲ್ಲರೆ ಕೆಮಿಸ್ಟನ ಕೆಲಸವೆಂದು ತಿಳಿದಾಗ ಆತ 'ಎಕೌಂಟೆನ್ಸಿ'ಗೆ ಹಾರಲು ಹಿಂಜರಿಯಲಿಲ್ಲ.

ಈಗ ಸಿಗುತ್ತಿರುವ ೪೦೦ ರೂಪಾಯಿ ಸಂಬಳ ಯಾವ ಪ್ರೊಫೆಸರನಿಗೆ ಸಿಗುತ್ತಿದೆ ? ಎಂಟು ಘಂಟೆಗಳ ಕಾಲ ಪ್ರಯೋಗಶಾಲೆಯಲ್ಲಿ, ಹಗಲು ರಾತ್ರಿ ಸರಳುವ ಬಗೆ ಹೇಗೆ—ಆರು ತಾಸುಗಳ ಕಾಲ ಹವಾ ನಿಯಂತ್ರಿತ ಆಫೀಸಿನಲ್ಲಿ ಸುಖವಾಗಿ ಕಾಲ ಕಳೆಯುವ ಬಗೆ ಹೇಗೆ ?

ಗೋಪಿಯ ವಿಚಾರಪ್ರಣಾಲಿ ಒಂದು ಸಿದ್ಧಾಂತವನ್ನು ರೂಪಿಸುವದರಲ್ಲಿತ್ತು. ಹಣವಿದ್ದರೆ, ಎಲ್ಲವೂ ಇದೆ. ಇಲ್ಲವಾದರೆ, ಯಾವ ತತ್ವವೂ ಇಲ್ಲ; ಯಾವ ಆದರ್ಶವೂ ಇಲ್ಲ, ಯಾವ ತತ್ವಪ್ರೇಮವೂ ಇಲ್ಲ. ರಾವ್ ಹೇಳಿದಂತೆ 'ಎಲ್ಲಾ....ಸಿಲ್ಲಿ'.

ಗಾಡಿಯ 'ಖಟ್....ಖಟ್' ಜೋಗುಳ ಗೋಪಿಯ ವಿಚಾರಲಹರಿಯನ್ನು ನಿಲ್ಲಿಸಿತು. ಈ ಸಂಗೀತದ ತನ್ಮಯತೆಯಲ್ಲಿ ಗೋಪಿಗೆ ಜೊಂಪು ಹಿಡಿದಿತ್ತು.

ಮತ್ತೆ ಎಚ್ಚರವಾದುದು ಗಾಡಿ ದಾದರ್ ಸ್ಟೇಶನಿನಲ್ಲಿ ನಿಂತಾಗಲೆ. ಅಲ್ಲಿಯೂ ಬಹುಶಃ ಆತನಿಗೆ ಎಚ್ಚರಾಗುತ್ತಿದ್ದಿಲ್ಲ. ಬಳಿಯಲ್ಲಿ ಕುಳಿತಿದ್ದ ಯುವತಿ ಬಂದು ಕುಳಿತ ರೀತಿಯಲ್ಲಿಯೇ ಒಮ್ಮಿಂದೊಮ್ಮೆಗೆ ಎದ್ದು ಹೋಗುವ ಅವಸರ ತೋರಿದ್ದರಿಂದ ಗೋಪಿಗೆ ಎಚ್ಚರವಾಯಿತು. ಕಣ್ಣೊರಸಿಕೊಂಡು ನೋಡುವಾಗ 'ದಾದರ್'ನಲ್ಲಿ ಗಾಡಿ ನಿಂತಿತ್ತು. ಲಗುಬಗೆಯಿಂದೆದ್ದು ಟ್ಯಾ

ಸರಿಪಡಿಸಿಕೊಂಡು, ಕೆಳಗೆ ಬಿದ್ದಿದ್ದ 'ಟೈಮ್ಸ್' ಪತ್ರಿಕೆಯನ್ನು ಹಿಡಿದು ಕೊಂಡು ಆತ ಗಾಡಿಯಿಂದಿಳಿದ.

ಆದರೆ ಅಷ್ಟರಲ್ಲೇ ಬಳಿಯಲ್ಲಿ ಕುಳಿತಿದ್ದ ಜೊತೆಗಾತಿ ಎಲ್ಲಿಯೋ ಅದೃಶ್ಯಳಾಗಿದ್ದಳು. "ಏನು ಹೆಂಗಸರ ಧಿಮಾಕು ?" ಎಂದು ಗೋಪಿ ಮನಸ್ಸಿನಲ್ಲೇ ಆಲೋಚಿಸಿಕೊಂಡು ಮೆಲುನಗೆ ನಕ್ಕ.

ಸ್ಟೇಶನಿನಿಂದ ಹೊರಬಂದು ಸರ್ ಭಾಲಚಂದ್ರ ರಸ್ತೆ ಹಿಡಿದು ಹಿಂದೂ ಕಾಲನಿ ತಲುಪುವವರೆಗೂ ಗೋಪಿ ಯೋಚಿಸುತ್ತಿದ್ದುದು ತನ್ನ ಮದುವೆಯ ವಿಚಾರ. ತುಂಬ ಪ್ರತಿಫಲ ಕೊಡುವ ಉದ್ಯೋಗವಿದೆ. ಕೈತುಂಬ ಹಣವಿದೆ. ಮನಸ್ಸು ಸ್ನೇಹಕ್ಕಾಗಿ, ಆಧಾರಕ್ಕಾಗಿ, ಸಂಸಾರಜೀವನದ ಸಿಹಿಗಾಗಿ ಕಾತರಿಸುತ್ತಿದೆ.

ಮನೆಯಲ್ಲಿ ತಮ್ಮನಿಗಿಂತ ಹೆಚ್ಚಾಗಿ ತನ್ನನ್ನು ಪ್ರೀತಿಸುವ ಅತ್ತಿಗೆಯ ಒತ್ತಾಯ ಮದುವೆಯ ಆಸೆ ಬಲಿತುಬರಲು ಕಾರಣವಾಗಿದೆ.

ಮಾತುಮಾತಿಗೆ ಅತ್ತಿಗೆ ಶೀಲೆ ಮೈದುನನನ್ನು ಹಾಸ್ಯಕ್ಕಾಗಿ ಕೆಣಕಿ "ನಿನ್ನ ಮಹಾರಾಣಿಯನ್ನು ಕರೆದುಕೊಂಡು ಬಾ ಗೋಪೀssss" "ನೀನು ಕೈಹಿಡಿಯುವಾಕೆಯ ಗಟ್ಟಿಗತನ ನೋಡುತ್ತೇನೆ ಗೋಪೀssss" ನಿನ್ನ ಷೋಡಶೋಪಚಾರಕ್ಕೆ ಇನ್ನು ಎಂಥ ಹುಡುಗಿ ಬರಲಿದ್ದಾಳೆಯೊ ಗೋಪೀ" ಎನ್ನುವಾಗಲೆಲ್ಲ ಗೋಪಿಯ ಮನಸ್ಸು ಭವಿಷ್ಯತ್ತಿನ ಕನಸಿಗಾಗಿ ಮೀಸಲು.

ಆದರೆ ಅಣ್ಣ ಮಾತ್ರ ಸುಮ್ಮಗಿದ್ದ. ತಾನು ಹಿಡಿದ ಹಾದಿಯನ್ನು ತಮ್ಮ ಹಿಡಿಯಲಿಲ್ಲವಲ್ಲಾ ಎಂದು 'ಮೆಡಿಕಲ್' ಓದಲು ಗೋಪಿ ನಿರಾಕರಿಸಿದಂದಿನಿಂದ ಸೊಂದುಕೊಂಡಿದ್ದ ಅಣ್ಣ, ಓದೆಲ್ಲ ಮುಗಿದು ಇಷ್ಟು ದಿನವಾದರೂ ಮದುವೆಯ ವಿಚಾರ 'ಚಕಾರ' ಮಾತನಾಡಿರಲಿಲ್ಲ.

ಅಣ್ಣನ ತಾಟಸ್ಥ್ಯ ಧೋರಣೆಯಿಂದಾಗಿ ತನ್ನ ಮದುವೆಯ ಕುರಿತಾದ ನಿರ್ಣಯಕ್ಕೆ ಗೋಪಿ ತಡವರಿಸುತ್ತಿದ್ದ.

ಲಕ್ಷ್ಮಿಯೋ ಒಂದು ವೇಳೆ ಮದುವೆಯಾಗದೆ ಉಳಿದಿದ್ದರೆ ಈಗ ಖಂಡಿತವಾಗಿ ಬುದ್ಧಿನ ಮಾತೆತ್ತದೆ ಆಕೆಯನ್ನು ವರಿಸುತ್ತಿದ್ದ. ಆದರೆ ತಾನು ಅಂದು ನಿರಾಕರಿಸಿದೆನೆಂದು ಲಕ್ಷ್ಮಿಗೆ ಗಂಡ ಬಾರದೆ ಉಳಿಯಲಿಲ್ಲ. ತನ್ನ ಮದುವೆ ಮಾತ್ರ ಇನ್ನೂ ಆಗದೆ ಉಳಿದಿದೆ. ಅಣ್ಣನ ಮೌನದಿಂದಾಗಿ ಆತ ನೊಡನೆ ಮದುವೆಯ ವಿಚಾರ ಮಾತನಾಡಲು ಸ್ವಾಭಿಮಾನ ತಡೆಯಾಗಿ

ನಿಂತಿದೆ. ಬಂದಿದ್ದ ಹಲವು ಮಂದಿ ವರಾನ್ವೇಷಕರಿಗೆ, ಅಣ್ಣ ಏನು ಉತ್ತರ ಹೇಳಿದನೆಂದು ತಿಳಿಯಲು ಕೂಡ ಅಸಮರ್ಥನಾದ ಗೋಪಿ ಈಗ ತನ್ನ ಮದುವೆಯ ನಿರ್ಧಾರ ತನ್ನ ಕೈಲೇ ಇದೆ ಎಂಬ ಸಿದ್ಧಾಂತಕ್ಕೆ ಮಾತ್ರ ಮುಟ್ಟಿದ್ದ.

ಅಣ್ಣನ ಸಹಾಯ, ಸಹಾನುಭೂತಿಗಳನ್ನು ಒದವಿಸಿ ಕೊಡಲು ಅತ್ತಿಗೆ ಕೂಡಾ ಅಸಮರ್ಥಳಾಗಿದ್ದಳು.

ಗೋಪಿಯ ಬರವಿನ ನಿರೀಕ್ಷೆಯಲ್ಲಿದ್ದ ಶೀಲಾ ಆತ ಮನೆಯೊಳಗೆ ಬಂದು 'ಶೂಸ್' ಕಳಚುವುದರೊಳಗಾಗಿಯೇ ಕಾಫಿ ಹಿಡಿದುಕೊಂಡು ಕೋಣೆಯೊಳ ಬಂದಿದ್ದಳು. ಗೋಪಿ ನಿತ್ಯದ ಸ್ವಾಗತದ ನಗೆ ನಕ್ಕ.

"ನನ್ನ ತಲೆಯೆಲ್ಲ ಕೆಟ್ಟು ಹೋಗಿದೆ ಅತ್ತಿಗೆ. ಕಾಫಿ ಒಳ್ಳೆಯ ಸ್ಟ್ರಾಂಗ್ ಇರಬೇಕು."

"ನಿನ್ನ ತಲೆ ಸರಿಯಾಗಿರುವುದು ಯಾವಾಗ ಹೇಳು ಗೋಪಿ. ಅದೇ ಏನೋ ಹೇಳುತ್ತಾರಲ್ಲ, ಮದುವೆಯಾಗದೆ ಹುಚ್ಚು ಬಿಡದು, ಹುಚ್ಚು ಬಿಡದೆ ಮದುವೆಯಾಗದು."

"ಮದುವೆಯ ವಿಚಾರ ಅಲ್ಲ ಅತ್ತಿಗೆ. ಇವತ್ತು ಗಾಡಿಯಲ್ಲಿ ಒಬ್ಬಳು ಹುಡುಗಿ ಏನು ರಂಪಾ ಮಾಡಿದಳು ಗೊತ್ತೆ? ಅವಳಿಲ್ಲದಿದ್ದರೆ ನಾನಿಷ್ಟು ಬೇಗ ಮನೆ ಸೇರುತ್ತಿದ್ದಿಲ್ಲ. ನಿದ್ದೆಮಾಡಿ ಸೀದಾ ಕುರ್ಲಾಕ್ಕೆ ಹೋಗಲಿದ್ದವನನ್ನು ಹೊಡೆದೆಬ್ಬಿಸಿದಳು."

"ಹೊಡೆದೆ ?"

"ಕೈಯಿಂದ ಹೊಡೆಯಲಿಲ್ಲ ಬಿಡು. ಅವಳು ಎದ್ದ ರಭಸಕ್ಕೆ ಅವಳ 'ಹ್ಯಾಂಡ್‌ಬ್ಯಾಗ್' ನನ್ನ ಮುಖಕ್ಕೆ ಬಡಿಯಿತು. ಅದು ಕೂಡಾ ಹೊಡೆತ ತಾನೆ ?"

"ನಿನಗೆ ಅಂಥ ಹೆಂಡತಿಯೇ ಸಿಕ್ಕಲೆಂದು ನನ್ನ ಆಶೀರ್ವಾದ ಗೋಪೀ."

ಸಾಸರ್‌ಗೆ ಕಾಫಿ ಇಳಿಸಿಕೊಳ್ಳುತ್ತಿದ್ದ ಗೋಪಿ ಅತ್ತಿಗೆಯನ್ನು ನೋಡಿ ನಕ್ಕ.

"ಅಣ್ಣ ಇನ್ನೂ ಮನಸ್ಸು ಮಾಡಿಲ್ಲ ಬಿಡು ಅತ್ತಿಗೆ. ನನ್ನ ಬ್ರಹ್ಮಚರ್ಯ ಇನ್ನೂ ಒಂದೆರಡು ವರ್ಷ ಮುಂದುವರಿಯಲಿ ಎಂದು ಅವನು ಹರಸುವಾಗ ನಾನು ಅಡ್ಡ ಬರಬೇಕೆ ?"

"ಸುಮ್ಮಗೆ ಏನೇನೋ ಹೇಳುತ್ತಿ. ನೀನು ಮದುವೆಯಾಗುತ್ತೇನೆಂದು ಹೇಳಿದರೆ ಅವರು ಬೇಡವೆನ್ನುತ್ತಾರೆಯೆ ? ಸದ್ಯ ನಿನಗೇ ಮನಸಿಲ್ಲ. ಏನಾದರೊಂದು ಕಾರಣ ಸಿಗುತ್ತದೆ. ಇರಲಿ ಬಿಡು. ನಿನಗೊಂದು ಕಾಗದ ಬಂದಿದೆ. ಟೇಬಲಿನ ಮೇಲೆ ಇಟ್ಟಿದ್ದೇನೆ." ಎಂದು ಹೇಳಿದ ಶೀಲಾ ಮೈದುನನ ಸತ್ಕಾರ ಮುಗಿಸಿ ಕಪ್ ಸಾಸರ್ ತೆಗೆದುಕೊಂಡು ಅಡಿಗೆಯ ಮನೆಯ ಕಡೆ ನಡೆದಳು.

ಟೇಬಲಿನ ಬಳಿ ಬಂದು ಗೋಪಿ ಲಕೋಟೆಯ ಮೇಲಿದ್ದ 'ಮಂಗಳೂರು' ಮೊಹರನ್ನು ಕಂಡು ಕ್ಷಣಕಾಲ ಯಾರು ಬರೆದಿರಬಹುದೆಂದು ಆಶ್ಚರ್ಯಚಕಿತನಾದರೂ, ಲಕೋಟೆಯನ್ನು ಒಡೆದು ಪತ್ರ ಬಿಡಿಸಿ ಓದುತ್ತ ಹೋದಂತೆ ಈ ಆಶ್ಚರ್ಯ ಮರೆಯಾಯಿತು. ಅರ್ಧ ಬಿಡಿಸಿದ್ದ 'ಟೈ' ಪೂರ್ತಿ ಬಿಡಿಸಲು ಕೂಡಾ ಮರೆತುಹೋಯಿತು. ಅದೇ ರೀತಿ ಅರ್ಧ ತೆಗೆದ ಪೋಷಾಕಿನಲ್ಲೇ ಸೋಫಾದ ಮೇಲೊರಗಿ ಕುಳಿತು ಗೋಪಿ ಕಾಗದವನ್ನು ಓದಲಾರಂಭಿಸಿದ.

ಮಂಗಳೂರು

ನೆಚ್ಚಿನ ಗೆಳೆಯ ಗೋಪಿಗೆ—

'ನೆಚ್ಚಿನ ಗೆಳೆಯ ಗೋಪಿಗೆ' ಎಂದು ಕಾಗದ ಆರಂಭ ಮಾಡಿದ್ದೇನೆ. ಆದರೆ ಕಳೆದ ಮೂರು ವರ್ಷಗಳಲ್ಲಿ ಒಂದು ಮೂರು ಪಂಕ್ತಿ ಕೂಡಾ ಬರೆಯದ ಭೂಪನಿಗೆ 'ನೆಚ್ಚಿನ ಗೆಳೆಯ' ಎಂಬ ಸಂಬೋಧನೆ ಸರಿಯೇ ಎಂದು ನಾನು ಯೋಚಿಸಬೇಕಾಗಿದೆ. ನಾನು ಕಾಗದ ಬರೆಯಲಿಲ್ಲವೆಂದು ನೀನು ವಾದಿಸಬಹುದು. ಆದರೆ ನಾನು ಮುಂಬಯಿ ಬಿಡುವಾಗ ಪೂನಾ ಮೈಲು ಪ್ಲಾಟ್‌ಫಾರ್ಮಿಗೆ ಬಂದಿದ್ದ ನೀನು ಮೊದಲು ಬರೆಯುವೆನಾಗಿ ಕೊಟ್ಟಿದ್ದ ಮಾತು ಇನ್ನೂ ಮಾತಾಗಿಯೇ ಉಳಿದಿದೆ. ಆದರೂ ನಾನು ಮಂಗಳೂರು ಸೇರಿದೊಡನೆಯೇ ಸುಖವಾಗಿ ಊರು ಸೇರಿದೆನೆಂದು ಕಾಗದ ಗೀಚಿ ಹಾಕಿದ್ದೆ. ಅದಕ್ಕೆ ಕೂಡಾ ನಿನ್ನ ಉತ್ತರ ಬರಲಿಲ್ಲ. ಆ ಮೇಲೆ ನಾನು ಬರೆಯಲಿಲ್ಲ. ಈಗ ಪುನಃ ನಿನ್ನ ನೆನಪಾಗುವ ಪ್ರಸಂಗ ಬಂದಿದೆಯಾದ ಕಾರಣ ಎಲ್ಲ ಸ್ವಾಭಿಮಾನವನ್ನು ಬದಿಗಿರಿಸಿ ಬರೆಯುತ್ತಿದ್ದೇನೆ.

ಮೊದಲು ನನ್ನ ಪುರಾಣ ಸ್ವಲ್ಪ ಬೇಡವೆ ? ಮದರಾಸಿನಲ್ಲಿ ಒಂದು ವರ್ಷ ಕಳೆದು ಎಲ್. ಟಿ. ಮುಗಿಸಬೇಕಾದ ಪ್ರಸಂಗ ಬಂದಿತೆಂದರೆ ನಾನು

ಯಾವ ಪುರುಷಾರ್ಥಕ್ಕೆ ಮುಂಬಯಿ ತನಕ ಬಂದು ಬಿ. ಎಸ್ ಸಿ. ಮುಗಿಸಿದ್ದು ಎಂದು ನೀನು ಕೇಳಬಹುದು. ಆದರೆ ಆ ಮಾತು ನಿನಗೂ ಅನ್ವಯಿಸುವುದಾದ ಕಾರಣ ಈ ವಿಚಾರ ಚರ್ಚೆಯೇಕೆ ? ಒಂದೆರಡು ಶಾಲೆ ನೋಡಿಯಾದ ಮೇಲೆ ಈಗ ನನ್ನ ಡಿಗ್ರಿಯ ಸದುಪಯೋಗ ಸ್ಥಳೀಕ ಪ್ರೈವೇಟ್ ಹ್ಯಾಸ್ಕೂಲೊಂದರಲ್ಲಿ ಆಗುತ್ತಾ ಇದೆ. ನಿನ್ನಂತೆಯೇ ರಿಸರ್ಚ್ ಹುಚ್ಚು ಇಟ್ಟುಕೊಂಡಿದ್ದ ನಾನು ಈಗ 'ಆರ್ಕಿಮಿಡೀಸ್ ಪ್ರಿನ್ಸಿಪಲ್'ನ ಕುರಿತು ತಾಸುಗಟ್ಟಲೆ ವಿದ್ಯಾರ್ಥಿಗಳೆದುರು ಬೊಬ್ಬೆ ಹೊಡೆಯಬೇಕಾಗಿ ಬಂದಿದೆ. ಮುಂಬಯಿಯ ಸಂಪ್ರದಾಯದಂತಾದರೆ ನನ್ನ ಸಂಬಳ ಎಷ್ಟೆಂದು ಹೇಳಬಾರದು. ಆದರೆ ನಾನಿರುವುದು ಮಂಗಳೂರಿನಲ್ಲಿ. ಸುಮಾರು ನೂರು ರೂಪಾಯಿಗಳ ತನಕ ವರಮಾನವಿದೆ. ಹೆಡ್ಮಾಸ್ತರು ಇಲ್ಲದಾಗ ಶಾಲೆಗೆ ನಾನೇ ಹೆಡ್ಮಾಸ್ತರ್ (ಸದ್ಯ ಅಸಿಸ್ಟೆಂಟ್ ಹೆಡ್ ಮಾಸ್ತರ್). ನನ್ನ ಮಟ್ಟಿಗೆ ನನ್ನ ಜೀವನ ತೃಪ್ತಿಯದೆ. ನಾನು ಮಂಗಳೂರು ಬಿಟ್ಟರೆ ತಾನು ಜೀವ ಬಿಡುತ್ತೇನೆಂದು ಹೇಳುವ ಅಮ್ಮನ ಇದಿರಿಗೆ ಇಲ್ಲಿಂದ ಕದಲುವ ಮಾತು ಒರುವುದೇ ಇಲ್ಲ. ಕಲಿಯಲು ಮುಂಬಯಿಗೆ ಬಂದದ್ದೇ ನನ್ನ ಪುಣ್ಯವೆಂದು ಹೇಳಬೇಕು.

ನನ್ನ ಮದುವೆಯಾದ ಸಂಗತಿ ನಿನಗೆ ತಿಳಿದಿದೆ. ನಾನು ಆಮಂತ್ರಣ ಪತ್ರ ಕಳುಹಿಸಿದ್ದೆ. ಆದರೆ ನಿನ್ನಿಂದ ಒಂದು ಕಾಗದ ಕೂಡಾ ಬರಲಿಲ್ಲ. ತಂತಿ ಕೊಡಲು ದುಡ್ಡೇಕೆ ಖರ್ಚು ಮಾಡುವುದು ಎಂದು ಭಾವಿಸಿದಿಯೇನೊ. ಈಗ ನಾನು ಒಂದು ಮಗುವಿನ ತಂದೆ.

ನನ್ನ ವಿಚಾರ ಇಷ್ಟು ಪುರಾಣ ಸಾಲದೆ ? ಇನ್ನು ನಿನ್ನ ವಿಚಾರ. ಎರಡು ತಿಂಗಳ ಹಿಂದೆ ಹಂಪನಕಟ್ಟೆಯಲ್ಲಿ ನನಗೆ ಒಂದು ಆಶ್ಚರ್ಯ ಕಾದಿತ್ತು. ಮಾರ್ಕೆಟಿಗೆ ಬಂದಿದ್ದವ ಹಿಂದೆ ಹೋಗುವಾಗ ಒಮ್ಮಿಂದೊಮ್ಮೆಗೆ, ನಮ್ಮ ಜೊತೆಗೆ ಕಲಿಯುತ್ತಿದ್ದನಲ್ಲ ಆ ಗುಜರಾತಿ ಗುಗ್ಗು—ನಥುಲಾಲ್, ಅವನು ಸಿಕ್ಕಿದ. ಒಂದು ಭೂಕಂಪವಾಗಿದ್ದರೆ ನನಗೆ ಅಷ್ಟು ಆಶ್ಚರ್ಯವಾಗುತ್ತಿದ್ದಿಲ್ಲ. ಅವನೀಗ ಬಿಸಿನೆಸ್‌ನಲ್ಲಿ ತೊಡಗಿದ್ದಾನಂತೆ. ನಿನಗೆ ಆಗಾಗ ಸಿಗುತ್ತಿರುವನೆಂದು ಹೇಳಿದ. ಅವನು ಇಲ್ಲಿಗೆ ಬಂದದ್ದು ಯಾಕೆ ಗೊತ್ತೇ ? ಮಲ್ಪೆ ಬಂದರವಾಗುವುದೆಂಬ ಸುದ್ದಿ ಕೇಳಿ, ಲಾಭಕ್ಕಾಗಿ ಮೊದಲೇ ತಳವೂರಲು ಸಾಧ್ಯವೇ ಎಂದು ಸ್ಥಳದರ್ಶನ ಮಾಡಿಕೊಂಡು ಹೋಗಲು ಬಂದಿದ್ದ ಪುಣ್ಯಾತ್ಮ. ನೀನು

' ಎಕೌಂಟೆನ್ಸಿ ' ಗೆ ಶರಣು ಹೋಗಿ ' ಹೆಡ್ ಗುಮಾಸ್ತ ' ನಾದ ವಿಚಾರಕೂಡ ಅವನೇ ಹೇಳಿದ್ದು. ಅವನಿಂದಲೇ ನೀನಿನ್ನೂ ಚತುರ್ಭುಜನಾಗಿಲ್ಲವೆಂದು ತಿಳಿಯಿತು

ಈಗ ನನ್ನ ಪತ್ರದ ಮುಖ್ಯ ವಿಚಾರ. ಇದನ್ನು ಬರೆಯಲು ಕಾರಣ ನಮ್ಮ ಶಾಲೆಯ ಕನ್ನಡ ಪಂಡಿತರು; ಅಥವಾ ಅಪ್ರತ್ಯಕ್ಷವಾಗಿ ಅವರ ಮಗಳು ಸುಮಿತ್ರೆಯೆಂದರೂ ಸರಿಯೆ. ಇದರಿಂದ ಆಶ್ಚರ್ಯವಾಗುವುದೇ ನಿನಗೆ ? ಕನ್ನಡ ಪಂಡಿತರೆಂದರೆ ಮೂಗು ಮುರಿಯುವವ ನೀನು. ಆದರೆ ಮುಂಬಯಿ ಜೀವನ ಕಂಡ ನನಗೆ ಕೂಡಾ ಮಂಗಳೂರಿನಲ್ಲಿ ತೃಪ್ತಿ ದೊರಕುವಂತೆ, ವಯಸ್ಸಿನಲ್ಲಿ ನನಗೆ ತುಂಬ ಹಿರಿಯರಾದರೂ ತನ್ನ ಗೆಳೆತನದ ಭಾಗ್ಯ ಕೊಟ್ಟ ಅವರಿಂದಾಗಿಯೇ ನನಗೆ ಮಂಗಳೂರು ನೀರಸವೆನಿಸುವುದಿಲ್ಲ. ಅವರಿಗೆ ಮದುವೆಗೆ ಬೆಳೆದು ನಿಂತ ಇಬ್ಬರು ಹುಡುಗಿಯರಿದ್ದಾರೆ. ಇಬ್ಬರೂ ನನ್ನ ವಿದ್ಯಾರ್ಥಿಗಳೇ. ಸುಮಿತ್ರೆ ಈ ವರ್ಷ ಎಸ್. ಎಸ್. ಎಲ್. ಸಿ. ಮುಗಿಸುತ್ತಾಳೆ. ತುಂಬ ಚುರುಕಿನ ಹುಡುಗಿ. ಲಕ್ಷಣವತಿ. ಮದುವೆಗೆ ಹುಡುಗಿ ಬೆಳೆದು ನಿಂತಿದ್ದಾಳೆಂದು ' ಯಾರಾದರೂ ನಿಮ್ಮವರ ಪೈಕಿ ಯೋಗ್ಯ ವರನಿದ್ದರೆ ನೋಡಿ ' ಎಂದು ಪಂಡಿತರು ಕೇಳಿಕೊಂಡರು. ಹುಡುಗಿಯ ಗುಣ ತಿಳಿದಿರುವ ನನಗೆ ' ಯಾರನ್ನಾದರೂ ' ದೊರಕಿಸಿಕೊಟ್ಟರೆ ಸಾಕೆಂದು ತೋರಲಿಲ್ಲ. ಆದರೆ ನಿನ್ನ ನೆನಪಾಯಿತು. ಹೀಗಾಗಿ ಈ ಪತ್ರ ಬರೆಯುತ್ತಿದ್ದೇನೆ.

ಆದರೂ ಈ ಪತ್ರವನ್ನು ಅರ್ಧ ಧೈರ್ಯದಿಂದಲೇ ನಾನು ಬರೆಯುತ್ತಿದ್ದೇನೆ. ಹುಡುಗಿಯ ಭವಿಷ್ಯಜೀವನ ಒಳ್ಳೆಯದಾಗಬೇಕೆಂಬ ಆಸೆ ಮಾತ್ರ ನಿನ್ನ ಕಡೆ ನೋಡುವಂತೆ ಮಾಡಿತು. ಆದರೆ ನೀನು ಅವರಿಂದ ಯಾವುದೇ ತರದ ಹಣ ಸಹಾಯವನ್ನಪೇಕ್ಷಿಸುವಿಯಾದರೆ ದಯವಿಟ್ಟು ಈ ಕಾಗದಕ್ಕೆ ಉತ್ತರ ಬರೆಯುವುದೇ ಬೇಡ. ನೀನು ಕಾಲೇಜಿನಲ್ಲಿ ಹೇಳುತ್ತಿದ್ದ ನಿನ್ನ ಸೋದರತ್ತೆಯ ಮಗಳ ಮದುವೆಯ ನೆನಪು ಬಂದುದರಿಂದ ಈ ಮಾತು ಬರೆದೆ. ನಿನಗೀಗ ಕೈತುಂಬ ಹಣ ಬರುವ ಕೆಲಸವಿದೆ. ಒಂದು ಸಂಸಾರ ನಿರ್ವಹಿಸುವ ಚೈತನ್ಯವಿದೆ. ತುಂಬ ಸುಧಾರಿತ ಮನೋವೃತ್ತಿಯ ಅಣ್ಣನ ಆದರದ ಬೆಂಬಲವಿದೆ. ಮದುವೆಗೆ ವಯಸ್ಸೂ ಆಗಿದೆ. ಅಷ್ಟೇ ಅಲ್ಲದೆ ಮುಂಬಯಿಯ ' ಹೈಹೀಲ್ ಹೋಪ್‌ಲೆಸ್ ' ಗಳ ಗೋಜಿಗೆ ಹೋಗುವವ

ನೀನಲ್ಲವೆಂದು ನಾನು ತಿಳಿದಿರುವುದರಿಂದ ಊರಿನ ಹುಡುಗಿಯನ್ನು ಮದುವೆ 'ಒಲ್ಲೆ' ಎಂದು ಹೇಳಲಾರೆ, ಎಂದು ಈ ಪತ್ರ ಬರೆದಿದ್ದೇನೆ. ನಿನಗಿಷ್ಟವಿದ್ದರೆ, ಹುಡುಗಿಯ ಗುಣ ರೂಪಗಳನ್ನು ನೋಡಿ ಮದುವೆಯಾಗುವ ಆಶೆಯಿದ್ದರೆ, ದಯವಿಟ್ಟು ಒಮ್ಮೆ ಮಂಗಳೂರಿಗೆ ಬಂದು ಹೋಗು. ಹುಡುಗಿಯನ್ನು ನೋಡಿ ಮತ್ತೆ ನಿಶ್ಚಯಿಸೀಯ.

ಈ ಕಾಗದಕ್ಕೆ ಸಾಧ್ಯವಾದಷ್ಟು ಬೇಗ ಉತ್ತರ ಬರೆಯಬೇಕೆಂದು ಆಗ್ರಹದ ಕೋರಿಕೆ. ಬರುವಿಯಾದರೆ ತಿಳಿಸು. ಇಲ್ಲಿ ಮುಖತಃ ಹೇಳುವ ವಿಚಾರ ಇನ್ನೂ ಎಷ್ಟೊ ಇವೆ. ಈಗಲೇ ಪತ್ರ ತುಂಬ ದೊಡ್ಡದಾಯಿತು. ಸಮಯವೂ ಮುಗಿಯುತ್ತ ಬಂತು. ನಮ್ಮ ಕಾಲೇಜಿನ ಗೆಳೆಯರ ವಿಚಾರ ತಿಳಿಯುವ ಆಸೆ ತುಂಬ ಇದೆ. ನೀನು ಬಂದರೆ ಬಾಯಿತುಂಬ ಗಂಟೆಗಟ್ಟಲೆ ಮಾತನಾಡಬಹುದು. ಮದುವೆಗೆಂದಲ್ಲದಿದ್ದರೆ ಗೆಳೆಯನನ್ನು ನೋಡಲೆಂದಾದರೂ ಒಂದು ಹದಿನೈದು ದಿನಗಳ ರಜೆಪಡೆದು ಒಮ್ಮೆ ಮಂಗಳೂರಿಗೆ ಬರಬಾರದೆ ?

ನಿನ್ನ ಅಣ್ಣನವರಿಗೆ ನನ್ನ ನಮಸ್ಕಾರ ತಿಳಿಸು. ಅವರ ಪ್ರಾಕ್ಟೀಸ್ ಹೇಗಿದೆ. ನೀವೆಲ್ಲ ಸೌಖ್ಯವಷ್ಟೆ.

ಇಂತು
ನಿನ್ನ ನೆಚ್ಚಿನ ಗೆಳೆಯ
ಕೃಷ್ಣಮೂರ್ತಿ

ಕೃಷ್ಣಮೂರ್ತಿಯ ಪತ್ರ ಓದಿ ಮುಗಿಸಿದ ಗೋಪಿಯ ಹೃದಯದಲ್ಲಿ ವಿಚಾರದ ತುಮುಲವೆದ್ದಿರಲಿಲ್ಲ. ಆನಂದದ ತೆರೆಯುಕ್ಕಿ ಬಂದಿತ್ತು.

ಕಾಲೇಜಿನ ಗತಜೀವನವನ್ನೂ ಭವಿಷ್ಯತ್ತಿನ ಸಂಸಾರ ಜೀವನವನ್ನೂ ಬೆಸೆದು ಬರೆದ ಕೃಷ್ಣಮೂರ್ತಿಯ ಪತ್ರದಿಂದಾಗಿ ಗೋಪಿ ಸುಂದರವಾದ ಕನಸಿನ ಬಲೆಯಲ್ಲಿ ತಾನು ಕಂಡರಿಯದ ಸುಮಿತ್ರೆಯನ್ನು ಸೆರೆಹಿಡಿಯಲು ಯತ್ನಿಸುತ್ತಿದ್ದ.

ಕೃಷ್ಣಮೂರ್ತಿಯ ಸೂಕ್ಷ್ಮದೃಷ್ಟಿಗೆ ಚುರುಕಿನ ಹುಡುಗಿ, ಅನುರೂಪಿಯಾದ ಹುಡುಗಿ ಎಂದು ಕಂಡು ಬಂದಾಕೆಯನ್ನು ತಾನು ಒಪ್ಪದೆ ಇರುವುದು ಅಸಂಭವನೀಯವೆಂದು ಮನಸ್ಸು ಹೇಳುತ್ತಿದ್ದುದರಿಂದಲೇ ಬಹುಶಃ ಗೋಪಿಗೆ

ತನ್ನ ವಿವಾಹದ ವಿಚಾರ ಅಷ್ಟು ಸ್ಪಷ್ಟವಾಗಿ ಚಿಂತಿಸುವ ಧೈರ್ಯ ಬಂದಿರ್ತೇನೊ.

ಸಂಜೆಯಾಗುತ್ತ ಬಂದಂತೆ ಕೋಣೆಯ ಕತ್ತಲು ಕೂಡಾ ಹೆಚ್ಚುತ್ತಿತ್ತು. ಆದರೆ ಸೋಫಾದ ಮೇಲೊರಗಿ ಯೋಚನೆಯಲ್ಲಿ ಬಿದ್ದಿದ್ದ ಗೋಪಿ ದೀಪ ಹತ್ತಿಸುವ ಗೋಜಿಗೆ ಹೋಗಲಿಲ್ಲ.

" ಕತ್ತಲೆಯಲ್ಲಿ ಎಂಥಾ ಯೋಚನೆಯೋ ನಿನ್ನದು ?" ಎಂದು ಅತ್ತಿಗೆ ಕರೆದಾಗಲೇ ಆತನಿಗೆ ಎಚ್ಚರ.

ಭಗ್ಗನೆ ದೀಪ ಹತ್ತಿಕೊಂಡಿತು. ಕಾಲಿನ 'ಶೂಸ್' ಕೂಡ ಕಳಚದೆ ಸೋಫಾದ ಮೇಲೆ ಬಿದ್ದುಕೊಂಡಿದ್ದ ಗೋಪಿಯನ್ನು ಕಂಡು ಶೀಲೆಗೆ ಆಶ್ಚರ್ಯವಾಗಿರಬೇಕು.

" ಏನೋ ಇದು ? ಬಂದು ಒಂದು ಘಂಟೆಯಾದರೂ 'ಟ್ಯ' ಕೂಡಾ ಬಿಚ್ಚಿಲ್ಲ. "

" ಏನೂ ಇಲ್ಲ ಅತ್ತಿಗೆ. ಮಂಗಳೂರಿನಿಂದ ಮೂರ್ತಿ ಕಾಗದ ಬರೆದಿದ್ದಾನೆ. ಇಲ್ಲಿ ನಮ್ಮೊಟ್ಟಿಗೆ ಕಲಿಯುತ್ತಿದ್ದನಲ್ಲ; ನಮ್ಮಲ್ಲಿಗೆ ಯಾವಾಗಲೂ ಬರುತ್ತಿದ್ದ. ಅವನೇ. ಒಮ್ಮೆ ಮಂಗಳೂರಿಗೆ ಬಂದು ಹೋಗು ಎಂದು ಬರೆದಿದ್ದಾನೆ. ಹೋಗಬೇಕೋ ಬೇಡವೋ ಎಂದು ಯೋಚಿಸುತ್ತಿದ್ದೆ.

" ಇಷ್ಟೆಯೆ ? ನಾನು ಏನೋ ಎಂತ ಎಣಿಸಿದ್ದೆ. ನಿನ್ನ ಯೋಚನೆ ನೋಡುವಾಗ ಹತ್ತು ಮಕ್ಕಳ ತಂದೆ ಕೂಡ ಈ ರೀತಿ ಯೋಚನೆ ಮಾಡಲಿಕ್ಕಿಲ್ಲ ಎನ್ನುವ ಹಾಗೆ ಇತ್ತು. "

ಅಷ್ಟರಲ್ಲಿ ಬಾಗಿಲಲ್ಲಿ 'ಬೆಲ್" ಸದ್ದಾದುದರಿಂದ ಶೀಲೆ ಹೊರಗೋಡಿದಳು. 'ಶೂಸ್' ಕಳಚುತ್ತಿದ್ದ ಗೋಪಿಗೆ ಬಾಗಿಲು ತೆಗೆದಾಗ ಬಂದುದು ಅಣ್ಣನೆಂದು ಹೆಜ್ಜೆಯ ಸಪ್ಪಳದಿಂದಲೇ ತಿಳಿದಿತ್ತು.

" ಇದೇನು ಇಷ್ಟು ಬೇಗ ಬಂದುಬಿಟ್ಟಿರಿ ? " ಶೀಲೆ ಆಶ್ಚರ್ಯದಿಂದ ಕೇಳಿದಳು.

" ಆ ಡಾಯಬೆಟಿಕ್ ಪೇಶೆಂಟ್ ತೀರಿಕೊಂಡ ಶೀಲೀ. ಇದೇ ಗಲಾಟೆಯಲ್ಲಿ ಸಂಜೆ ಸಾಕಾಗಿ ಹೋಯಿತು. ನನ್ನದೇ ಒಂದು ನರ್ಸಿಂಗ್ ಹೋಮು ತೆಗೆಯುವತನಕ ಈ ರಗಳೆ ಇದ್ದೇ ಇದೆ. ಒಂದು ಆಪರೇಶನ್ ಆಗ

ಬೇಕಾದರೆ ಯಾರು ಯಾರಿಗೆ ದಮ್ಮಯ್ಯಹಾಕಬೇಕು. ನನ್ನ 'ಪಾರ್ಸಿ ಕಾಲನಿ' ನರ್ಸಿಂಗ್ ಹೋಮು ಯಾವಾಗ ಆಗುತ್ತದೆಯೊ ! ಅದಿರಲಿ ಬಿಡು. ಈಗ 'ಗಣೇಶ ಬಾಗ್'ನ ತನಕ ಹೋಗಬೇಕು. ನಮ್ಮವರದೇ ಒಂದು ಟೈಫಾಯ್ಡ್ ಕೇಸು ಇದೆ. ಒಂದು ಲೋಟ ಕಾಫಿ ಕುಡಿದು ಹೋಗೋಣವೆಂದು ಬಂದೆ. ಬೇಗ ಮಾಡಿ ಕೊಡುತ್ತೀಯಾ ?"

"ಅದಕ್ಕೆ ಕೇಳಬೇಕೆ ? ಎರಡೇ ನಿಮಿಷ" ಎಂದು ಹೇಳಿ ಶೀಲೆ ಅಡುಗೆಯ ಕೋಣೆಯ ಕಡೆ ನಡೆದಳು. ಮತ್ತೊಂದು ಕ್ಷಣದಲ್ಲಿ ಸ್ಟವ್ ಉರಿಯುವ ಸದ್ದು ಕೇಳಲಾರಂಭಿಸಿತು.

"ತುಂಬ ಚುರುಕಿನ ಹುಡುಗಿ........ಲಕ್ಷಣವತಿ........" ಕೃಷ್ಣಮೂರ್ತಿಯ ಕಾಗದದ ಒಕ್ಕಣಿಕೆಯನ್ನು ನೆನಸಿಕೊಂಡ ಗೋಪಿ ಸುಮಿತ್ರೆಯ ಕುರಿತಾದ ಕನಸು ಕಾಣಲಾರಂಭಿಸಿದ.

ದಿನವಿಡೀ ರೋಗಿಗಳ ಮಧ್ಯೆ ಇರುವ, ದಿನವಿಡೀ ರೋಗಿಗಳ ಕುರಿತೇ ಚಿಂತಿಸುವ, ಅವರ ವಿಚಾರವೇ ಮಾತನಾಡುವ ಅಣ್ಣನ ಜೀವನದೊಂದಿಗೆ ತನ್ನ ಜೀವನವನ್ನು ಹೊಂದಿಸಿಕೊಂಡು ನಗುತ್ತಲೇ ಸಂಸಾರ ಸಾಗಿಸುವ ಅತ್ತಿಗೆಯಂಥ ಅನುರೂಪ ವಧು ಸುಮಿತ್ರೆಯಾದರೆ, ತಾನು ಖಂಡಿತ ಮದುವೆಯಾಗುತ್ತೇನೆಂದು ಗೋಪಿ ನಿರ್ಧರಿಸಿಕೊಂಡ.

ಇವನ ಮನಸ್ಸಿನ ಭಾವವನ್ನು ಗ್ರಹಿಸಿಯೋ ಎಂಬಂತೆ ಅಡಿಗೆಯ ಮನೆಯಲ್ಲಿ ಅತ್ತಿಗೆ ಗಂಡನೊಡನೆ ಮಾತನಾಡುತ್ತಿದ್ದಳು:

"ಗೋಪಿ ಮಂಗಳೂರಿಗೆ ಹೋಗಿ ಬರುತ್ತಾನಂತೆ."

"ಮಂಗಳೂರಿಗೆ ! ಯಾಕೆ ?"

"ಯಾರೋ ಅವನ ಸ್ನೇಹಿತರು ಬರಹೇಳಿದ್ದಾರಂತೆ. ಆಫೀಸು ಬೇಸರ ಹಿಡಿಸಿರಬೇಕು ರಜೆಯಲ್ಲಿ ನಾಲ್ಕು ದಿನ ಹೋಗಿ ಬರುತ್ತಾನೆ."

"ಕೃಷ್ಣಮೂರ್ತಿಯಿರಬೇಕು. ಹೋಗಲಿ ಬಿಡು."

"ಈಗ ತಿರುಗಿದ್ದು ಬಂತು. ಮತ್ತೆ ಮದುವೆಯಾದ ಮೇಲೆ ಹಾಗೆಲ್ಲ ತಿರುಗಲಾಗುವುದೇ ?" ಶೀಲೆ ಪುನಃ ಕೇಳಿದಳು.

ಆಗ ಮಾತ್ರ ಡಾಕ್ಟರ್ ಮೋಹನರಾಯರು ಮೌನ.

ತನ್ನ ಕುರಿತಾದ ಚರ್ಚೆ ಇಲ್ಲಿಗೆ ಮುಗಿಯಿತೆಂದು ತಿಳಿದ ಗೋಪಿ ತಾನು ಮಂಗಳೂರಿಗೆ ಹೋಗಿ ಬರುವುದು ಖಂಡಿತವೆಂದು ನಿಶ್ಚಯಿಸಿದ.

ಇದೇ ನಿರ್ಧಾರದಿಂದ ಬಟ್ಟೆ ಬದಲಿಸಿ ತಲೆ ಬಾಚಿಕೊಳ್ಳುತ್ತಿದ್ದ ಗೋಪಿಯನ್ನು ಅತ್ತಿಗೆ ಅಡಿಗೆಯ ಮನೆಯಿಂದಲೇ ಕರೆದಳು.

" ಕಾಫಿ ಬೇಕೇನೋ ಗೋಪಿ ? "

೨

ಕಾಲೇಜು ಗೆಳೆತನದ ಸಲುಗೆಯ ಆಧಾರದಿಂದ ಕೃಷ್ಣಮೂರ್ತಿ ಗೋಪಿಗೆ ಪತ್ರ ಬರೆದಿದ್ದ. ಆದರೆ ಈ ಪತ್ರಕ್ಕೆ ಉತ್ತರ ಬಂದೀತೆಂಬ ಭರವಸೆ ಆತನಿಗಿದ್ದಿಲ್ಲ. ಎಂತಲೇ ಉತ್ತರದ ನಿರೀಕ್ಷೆಯ ಆತುರದಿಂದ ಆತ ತುಂಬ ದೂರವಿದ್ದ. ಇದಕ್ಕೆ ಕಾರಣವೂ ಇದೆ.

ಮೂರ್ತಿಗೆ ಕನ್ನಡ ಪಂಡಿತರ ಪರಿಚಯವಾದುದು ಆತ ಶಿಕ್ಷಕನಾಗಿ ಶಾಲೆಗೆ ಸೇರಿದ ಮೇಲೆಯೇ. ಅವರ ಸಹಕಾರದಿಂದಾಗಿಯೇ, ತಾನು ಮಂಗಳೂರಲ್ಲಿ ಖಾಯಂ ನಿಲ್ಲುವ ನಿಶ್ಚಯ ಮಾಡಿದಾಗ ಅವರ ಮನೆಗಿಂತ ತುಸು ದೂರದಲ್ಲೇ ತನಗೆ ಬಿಡಾರ ದೊರಕಿತ್ತು. ಸಾಮೀಪ್ಯ, ಸಹೋದ್ಯೋಗಗಳಿಂದ ಕೃಷ್ಣಮೂರ್ತಿಗೆ ದೊರಕಿದ ಪಂಡಿತಕುಟುಂಬದ ಆತ್ಮೀಯತೆಗೆ ಕೃತಜ್ಞತೆಯ ಕರ್ತವ್ಯವೆಂದು ಮಾತ್ರ ಆತ ಸುಮಿತ್ರೆಯ ಮದುವೆಯ ಯಾಜಮಾನ್ಯವನ್ನು ವಹಿಸಿರಲಿಲ್ಲ. ಈ ಮದುವೆಯ ಪ್ರಶ್ನೆಯಲ್ಲಿ ದಾರಿ ಕಾಣದೆ ಬಳಲಿದ್ದ ಆ ಬಡ ಕುಟುಂಬದ ದೀನ ಪರಿಸ್ಥಿತಿಯೇ, ಕೃಷ್ಣಮೂರ್ತಿ ತನ್ನ ಸಮವಯಸ್ಕ ಅಥವಾ ತನಗಿಂತ ಕಿರಿಯರಾದ ಗೆಳೆಯರ ಕಡೆ ಸುಮಿತ್ರೆಗೆ ಅನುರೂಪವಾದ ವರ ದೊರಕಿಯಾವೇ ಎಂದು ನೋಡುವಂತೆ ಮಾಡಿತ್ತು.

ಗೋಪಿಗೆ ಬರೆದ ಕಾಗದದಲ್ಲಿ ಕೃಷ್ಣಮೂರ್ತಿ ಒಂದು ಮಾತು ಮಾತ್ರ ಸುಳ್ಳೆಂದು ತಿಳಿದೇ ಬರೆದಿದ್ದ. " ಹುಡುಗಿಯ ನಿಕಟ ಪರಿಚಯವಿರುವ ನನಗೆ 'ಯಾರನ್ನಾದರೂ' ದೊರಕಿಸಿಕೊಟ್ಟರೆ ಸಾಕೆಂದು ತೋರಲಿಲ್ಲ. ಆದರೆ ನಿನ್ನ ನೆನಪಾಯಿತು" ಎಂದ ಮಾತಿಗೆ ಸತ್ಯದ ಆಧಾರವಿರಲಿಲ್ಲ. ಆದರೂ ಆತ ಆ ರೀತಿ ಬರೆಯದೆ ನಿವೃತ್ತಿಯಿದ್ದಿಲ್ಲ.

ಹೀಗೆಂದ ಮಾತ್ರಕ್ಕೆ ಆತ ಸುಮಿತ್ರೆಗೆ ಅನುರೂಪವಾದ ವರ ದೊರಕುವ ವಿಚಾರ ಉದಾಸೀನನಾಗಿದ್ದನೆಂದಲ್ಲ. ಶ್ರೀನಿವಾಸರಾಯರಿಗೆ ತನ್ನ ದೊಡ್ಡ ಮಗಳು ಸುಮಿತ್ರೆಯ ಮೇಲಿದ್ದ ಪ್ರೀತಿಯಷ್ಟೇ ಆದರವನ್ನು ಕಷ್ಣಮೂರ್ತಿ ಸುಮಿತ್ರೆಯ ವಿಚಾರ ತೋರಿಸುತ್ತಿದ್ದ. ಬರೀ ಹದಿನೇಳು ವಯಸ್ಸಾಗಿದೆಯಷ್ಟೇ. ಇನ್ನೂ ಮೆಟ್ರಿಕ್ ಮುಗಿದಿಲ್ಲ. ಇವಳ ಮದುವೆಯ ವಿಚಾರ ತಂದೆ ಇಷ್ಟೇಕೆ ಚಡಪಡಿಸುತ್ತಿರುವರೆಂದು ಒಂದು ಬಾರಿ ಆತ ಬೇಸರಿಸಿಕೊಂಡುದೂ ಉಂಟು.

ಸುಮಿತ್ರೆಯ ಮದುವೆಯ ವಿಚಾರ ಮೊದಲು ಕೃಷ್ಣಮೂರ್ತಿಯೊಡನೆ ಪ್ರಸ್ತಾಪ ಮಾಡಿದವರು ಶ್ರೀನಿವಾಸರಾಯರೆ. 'ಪೀರಿಯಡ್' ಇಲ್ಲದ ಒಂದು ದಿನ ಮಧ್ಯಾಹ್ನ 'ಟೀಚರ್ಸ್ ರೂಮ್'ನಲ್ಲಿ ಕೃಷ್ಣಮೂರ್ತಿ ಒಬ್ಬನೇ ಇರುವುದನ್ನು ಕಂಡು ಆತನೊಡನೆ ಮಾತನಾಡುವ ಸಾಹಸ ಮಾಡಿದ್ದರು.

"ನಾನು ಬೆಳಿಗ್ಗೆ 'ಕೇಜುವಲ್' ತೆಗೆದುಕೊಂಡಿದ್ದೆ ಮೂರ್ತಿರಾಯರೆ."

"ಹೌದು. ನಾನು ಬೆಳಿಗ್ಗೆ ವಿಚಾರಿಸಿದೆ. ಬಂದಿರಲಿಲ್ಲ. ಸುಮಿತ್ರೆ ಕೂಡಾ 'ಪ್ರಾಕ್ಟಿಕಲ್ಸ್'ಗೆ ಬಂದಂತೆ ಕಾಣಲಿಲ್ಲ. ಏನು? ಏನಾದರೂ ವಿಶೇಷವಿತ್ತೇ?"

"ಹೂಂ. ಮಗಳಿಗೆ ಮದುವೆಯಾಗುವುದೂ ಒಂದು ವಿಶೇಷ ಅಲ್ಲವೆ. ನಮ್ಮ ಸುಮಿಯನ್ನು ನೋಡಲು ಬಂದಿದ್ದರು ಒಬ್ಬರು."

"ಹಾಗೇನು? ಪರೀಕ್ಷೆಗೆ ಇನ್ನೂ ಎಂಟು ಹತ್ತು ತಿಂಗಳು ಇವೆಯೆನ್ನುವಾಗಲೇ ಮದುವೆಯ ವಿಚಾರ ನಡೆಸಿದ್ದೀರಿ. ಇಷ್ಟೇಕೆ ಅವಸರ?"

"ಅವಸರ! ನೀವೆಲ್ಲ ಹೊಸ ಕಾಲದವರು ರಾಯರೆ. ಆದರೆ ಬರುವ ಫಾಲ್ಗುಣಕ್ಕೆ ನಮ್ಮ ಸುಮಿತ್ರೆಗೆ ಹದಿನೇಳು ತುಂಬಿ ಹದಿನೆಂಟು ಆರಂಭವಾಗುತ್ತದೆ. ಇದನ್ನು ಹಳೆಯ ಕಾಲದವನಾದ ನಾನು ಮರೆಯುವುದು ಸಾಧ್ಯವೆ?"

"ಒಂದು ವರ್ಷಕ್ಕಾಗಿ ಏನು ಕಾಲದ ಮಾತು ಪಂಡಿತರೆ. ಅವಳ ಪರೀಕ್ಷೆಯಾಗುವತನಕಾದರೂ ತಡೆಯಬಾರದೆ? ಸುಮಿತ್ರೆಯಂಥ ಹುಡುಗಿಗೆ ಸರಿಯಾದ ವರ ದೊರಕುವುದು ಕಷ್ಟವೆ?"

ಈ ಮಾತು ಕೇಳಿ ಶ್ರೀನಿವಾಸರಾಯರ ಮುಖದಲ್ಲಿ ಬರೀ ಔಪಚಾರಿಕವಾದುದೊಂದು ಒಣ ನಗೆ ಮೂಡಿದುದನ್ನು ಕೃಷ್ಣಮೂರ್ತಿ ಗುರುತಿಸಿದ್ದ. ಆದರೆ ಅದರ ಕಾರಣ ತಿಳಿದುದು ಮಾತ್ರ ಆ ದಿನ ಸಂಜೆ.

ಸಂಜೆ ಶಾಲೆ ಮುಗಿಸಿ ಮೂರ್ತಿ ಮೈದಾನದ ದಾರಿ ಹಿಡಿದಿದ್ದ. ಹೆಡ್ಮಾಸ್ಟರರ ಜೊತೆಯಲ್ಲಿ ಮನೆಗೆ ಮರಳುತ್ತಿದ್ದ ಶ್ರೀನಿವಾಸರಾಯರು ಗೇಟಿನ ಬಳಿ ಸಿಕ್ಕಾಗ—

"ರಾತ್ರೆ ಊಟವಾದ ಮೇಲೆ, ಒಂದರ್ಧ ಘಂಟೆ ಮನೆಯತನಕ ಬರುವುದು ಸಾಧ್ಯವೆ ? ರಾಯರೆ" ಎಂದಿದ್ದರು.

ಸುಮಿತ್ರೆಯ ಮದುವೆಯ ಕುರಿತಾದ ಬೆಳಗಿನ ಮಾತುಗಳು ಕೂಡಲೇ ನೆನಪಿಗೆ ಬಂದ ಕೃಷ್ಣಮೂರ್ತಿ—

"ಓಹೊ. ಅದಕ್ಕೇನಂತೆ. ಏನಾದರೂ ವಿಶೇಷವಿದೆಯೆ ? ಅಥವಾ ಭಾರತ ವಾಚನ ಮಾಡುತ್ತೀರಾ ?" ಎಂದಿದ್ದ.

"ವಿಶೇಷವೇನಿಲ್ಲ. ಭಾರತ ಬೇಡ; ರಾಮಾಯಣ ಹೇಳುತ್ತೇನೆ, ಕೇಳಲಿಕ್ಕೆ ಬೇಸರವಾಗದಿದ್ದರೆ. ಬರತ್ತೀರಷ್ಟೆ" ಎಂದಿದ್ದರು.

ಅಂದು ಮೂರ್ತಿ ಮನೆಗೆ ಮರಳಿದುದು ಎಂದಿಗಿಂತ ತುಸು ಬೇಗನೆ. ಮನೆಯ ಅಂಗಳವನ್ನು ಪ್ರವೇಶಿಸುವಾಗಲೇ ಸುಮಿತ್ರೆ ಕಣ್ಣಿಗೆ ಬಿದ್ದಳು. ಗೇಟಿನ ಬಳಿ ಕಾಡಿನಂತೆ ಬೆಳೆದಿದ್ದ ದುಂಡುಮಲ್ಲಿಗೆಯ ಬಳ್ಳಿಯ ಮಧ್ಯೆ ಅವಿತುಕೊಂಡು ಹೂವು ಕೊಯ್ಯುತ್ತಿದ್ದ ಸುಮಿತ್ರೆಗೆ ಮೂರ್ತಿ ಬಂದುದು ಮೊದಲು ತಿಳಿಯಲಿಲ್ಲ. ಪಕ್ಕದಲ್ಲಿಯೇ ತುಳಸಿಕಟ್ಟೆಯ ಬಳಿ ತುಳಸಿಯ ಗಿಡದೊಂದಿಗೆ ಆಡುತ್ತಿದ್ದ ಮಗು ತಂಪೆಯನ್ನು ಕಂಡು ಸಂತೋಷದಿಂದ ಕೂಗಿಕೊಂಡಾಗಲೇ ಮಲ್ಲಿಗೆಯ ಬಳ್ಳಿಯಿಂದ ಮುಖ ಹೊರಗೆ ತಂದ ಸುಮಿತ್ರೆ ಕೃಷ್ಣಮೂರ್ತಿಯನ್ನು ನೋಡಿದುದು. ನೋಡಿದವಳೇ ದಂಡೆಯಿಂದ ಕೆಳಗೆ ನಗುತ್ತಲೇ ಹಾರಿದಳು.

ತಲೆಯ ತುಂಬ ಸಿಕ್ಕುಬಿದ್ದಿದ್ದ ಬಳ್ಳಿಯ ಒಣಗಿದೆಲೆ ಕಸಗಳನ್ನು ಬಿಡಿಸಿಕೊಳ್ಳುತ್ತ ಮಗುವಿನ ಬಳಿ ಬಂದ ಸುಮಿತ್ರೆಯನ್ನು ಕಂಡು ಕೃಷ್ಣಮೂರ್ತಿ ನಗು ನಗುತ್ತಲೇ ಕೇಳಿದ :

“ ಏನಮ್ಮಾ, ಗಂಡನನ್ನು ನೋಡಿದಾಕ್ಷಣ ಹೂವಿನ ಮಾಲೆ ಹೆಣೆಯಲು ಸುರುವೆ ? ಈ ಗೌಜಿಯಲ್ಲಿ ಪರೀಕ್ಷೆಯು ನೆನಪೇ ಹೋಗಿ, ಕಲಿತ ಪಾಠ ಘಟ್ಟಕ್ಕೆ ಹೋಗಬಹುದು, ಜೋಕೆ. ”

ಈ ಮಾತು ಕೇಳಿ ಸುಮಿತ್ರೆ ನಗಬೇಕಿತ್ತು. ಸ್ವಭಾವತಃ ಹಾಸ್ಯಪ್ರವೃತ್ತಿಯ, ಚುರುಕು ಬುದ್ಧಿಯ ಸುಮಿತ್ರೆಗೆ ಕೃಷ್ಣಮೂರ್ತಿಯ ಮಾತಿಗೆ ಸರಿಯಾದ ಉತ್ತರ ಕೊಡುವುದು ಸಾಧ್ಯವೆಂದೇ ನಗೆಯೆಬ್ಬಿಸಲು ಮೂರ್ತಿ ಆ ಪ್ರಶ್ನೆ ಕೇಳಿದ್ದ. ಆದರೆ ಆಕೆ ನಗಲಿಲ್ಲ. ಸ್ತ್ರೀ ಸುಲಭವಾದ ನಾಚಿಕೆಯಿಂದ ಆಕೆಯ ಮುಖ ಕೆಂಪಾಗಲೂ ಇಲ್ಲ.

ಇಳಿಮೋರೆ ಹಾಕಿಕೊಂಡು ಬಳಿಯಲ್ಲಿದ್ದ ಮಗುವನ್ನೆತ್ತಿಕೊಂಡು ವಿಮನಸ್ಕಳಾಗಿ ಮನೆಯೊಳಗೆ ನಡೆದ ಸುಮಿತ್ರೆಯನ್ನು, ಗಂಡನ ಮಾತು ಕೇಳಿ ಹೊರಬರುತ್ತಿದ್ದ ಮೀರೆ ಹೊಸ್ತಿಲಲ್ಲೇ ತಡೆಯಬೇಕಾಗಿ ಬಂತು.

ಮಗುವನ್ನು ಮೀರೆಯ ಕೈಗೆ ಕೊಡುತ್ತ “ ಹೊತ್ತಾಯಿತು ಮೀರಕ್ಕ. ನಾನು ಹೋಗುತ್ತೇನೆ. ಎಲ್ಲ ಮೊಗ್ಗುಗಳನ್ನು ಕೊಯ್ಯಲಾಗಲಿಲ್ಲ ” ಎಂದು ಅಂಗಳಕ್ಕಿಳಿದು ಕೃಷ್ಣಮೂರ್ತಿಯ ಕಡೆ ನೋಡದೆಯೇ ಗೇಟಿನ ಬಳಿ ಧಾವಿಸಿದ ಸುಮಿತ್ರೆಯ ವರ್ತನೆ ಕೃಷ್ಣಮೂರ್ತಿಗೆ ಆಶ್ಚರ್ಯವನ್ನುಂಟುಮಾಡಿತು.

“ ಸಿಟ್ಟಾದಿಯೇನೇ ಸುಮೀ. ಮದುವೆಯ ಮಾತೆತ್ತಿದೊಡನೆ ಜಿಂಕೆಯಂತೆ ಓಡಬೇಕೆ ? ” ಎಂದು ಕೃಷ್ಣಮೂರ್ತಿ ಕೂಗಿಕೊಂಡ. ಆದರೆ ಸುಮಿತ್ರೆ ಉತ್ತರ ಕೊಡದೆಯೇ ಹೋದಳು.

“ ಏನು, ಏನಾಯಿತು. ಏನು ಕೇಳಿದಿರಿ ಅವಳ ಹತ್ತಿರ ? ” ಎಂದು ಮೀರಾ ಪ್ರಶ್ನಿಸಿದಾಗಲೇ ಸುಮಿತ್ರೆಯ ಓಟದಿಂದುಂಟಾದ ಕಳವಳ ಮಾಯವಾಗಿ ಕೃಷ್ಣಮೂರ್ತಿಯ ಮನಸ್ಸು ಸ್ತಿಮಿತಕ್ಕೆ ಬಂದುದು.

“ ಬೇರೇನು ಕೇಳಿದೆ. ಮದುವೆಯ ಮಾತೆತ್ತಿದೊಡನೆ ಹಕ್ಕಿಯ ಹಾಗೆ ಹಾರಿಬಿಟ್ಟಳು. ”

“ ಹಾರದೆ ಮತ್ತೇನು ಮಾಡಬೇಕಿತ್ತು? ಗಂಡನಾಗಿ ಬರುವವನ ವಿಚಾರ ನಿಮ್ಮ ಹತ್ತಿರ ಚರ್ಚೆ ಮಾಡಬೇಕಿತ್ತೇನೋ. ” .

“ ಚರ್ಚೆಯಲ್ಲವೆ. ಕಲಿತ ಹುಡುಗಿ. ಮದುವೆಯ ಮಾತು ಕೇಳಿದ ಕೂಡಲೆ ಹಳ್ಳಿಯ ಹುಂಬಳಂತೆ ಓಡಬೇಕೇ ? ಅದೂ ಯಾರೋ ಅವಳನ್ನು

ನೋಡಲು ಬಂದಿದ್ದರೆಂದು ಪಂಡಿತರು ಹೇಳಿದ್ದರಿಂದ ಕೇಳಿದೆ '' ಎನ್ನುತ್ತಲೇ ಮೂರ್ತಿ ಒಳಗೆ ಪ್ರವೇಶಿಸಿದ. ಮಗುವನ್ನೆತ್ತಿಕೊಂಡು ಮೀರೆ ಅವನನ್ನನುಸರಿಸಿದಳು.

" ಹೌದು. ಬಂದಿದ್ದರು. ಉಡುಪಿಯವರು. ''

" ಹೊ ! ನಿನಗೆ ಗೊತ್ತಿದೆ. ನಿನ್ನ ಹತ್ತಿರ ಹೇಳಲು ನಾಚಿಕೆಯಿರಲಿಲ್ಲ. ನಾನು ತಮಾಷೆ ಮಾಡಿದಾಗ ಸಿಟ್ಟೇರಿಬಿಟ್ಟಿತು. "

" ನನ್ನ ಹತ್ತಿರ ಸುಮಿ ಏನನ್ನೂ ಹೇಳಲಿಲ್ಲ. ನಾನೇ ಹೋಗಿದ್ದೆ. ನೋಡಲು ಬರುವಾಗ ಮನೆಯಲ್ಲಿ ಯಾರೂ ಹೆಂಗಸರಿಲ್ಲ, ಬನ್ನಿ. ಎಂದು ಬೆಳಿಗ್ಗೆ ಶಾಲೆಗೆ ಹೋಗುವಾಗ ಪಂಡಿತರು ಹೇಳಿ ಹೋಗಿದ್ದರು. ಹೀಗಾಗಿ ನಾನೂ, ಅತ್ತೆ ಹೋಗಿದ್ದೆವು."

" ಒಹೋ ! ಇಷ್ಟೆಲ್ಲ ಕಾರಭಾರ ನಡೆದಿದೆ. ಹಾಗಾದರೆ ಮದುವೆ ನಿಶ್ಚಯವಾದ ಹಾಗೆಯೆ."

" ಇದಕ್ಕೆಯೆ ಹೇಳುವುದು ಅಧಿಕಪ್ರಸಂಗ, ಎಂದು. ಹುಡುಗಿಯನ್ನು ನೋಡಿದಾಕ್ಷಣ ಮದುವೆ ನಿಶ್ಚಯವಾಯಿತೆ ?"

" ನಾನು ಹಾಗೆಯೇ ಮಾಡಿದ್ದೆನಲ್ಲವೇನೆ ?"

ತನ್ನ ಮದುವೆಯ ಸಂಭ್ರಮವನ್ನು ನೆನೆಸಿಕೊಂಡ ಮೀರೆಯ ಮುಖದಲ್ಲಿ ನಗುವರಳಿತು.

" ಎಲ್ಲ ನಿಮ್ಮಂಥವರೇ ಇದ್ದಾರೇನೊ, ಲೋಕದಲ್ಲಿ."

" ಹಾಗಾದರೆ ಮತ್ತೇನು ಹೇಳಿದರು, ಬಂದವರು. ಹುಡುಗಿ ಲಕ್ಷಣವಾಗಿಲ್ಲ, ಎಂದರೆ ?"

" ಹಾಗೆ ಹೇಳಿದ್ದರಾದರೂ ಚಿಂತಿರಲಿಲ್ಲ. ಬರೆದು ತಿಳಿಸುತ್ತೇವೆ ಎಂತ ಹೇಳಿದರಂತೆ. ಆದರೆ ನನ್ನ ಹತ್ತಿರ ಮಾತನಾಡಿದ ಆ ಹುಡುಗನ ಅಕ್ಕನ ಅಭಿಪ್ರಾಯ ನೋಡಿದರೆ...."

" ಏನು, ಅಭಿಪ್ರಾಯ ನೋಡಿದರೆ...."

" ಪದ್ಮಾವತಿಯಾದರೆ ಆಗಬಹುದು ಎನ್ನುವಂತಿತ್ತು. ಸುಮಿತ್ರೆಯನ್ನು ನೋಡಿದ್ದು ಮಾತ್ರ. ಕೇಳಿದ್ದೆಲ್ಲ ಪದ್ಮಾವತಿಯ ವಿಚಾರವೆ."

" ಪದ್ಮಾ ! ಆ ಹದಿನೈದು ವರ್ಷದ ಮಗುವಿಗೆ ಮದುವೆಯೆ ?"

ಮೀರೆ ಸ್ವಲ್ಪ ಹೊತ್ತು ಸುಮ್ಮಗಿದ್ದಳು. ಗಂಡ ಬಟ್ಟೆ ಬದಲಿಸಿ, ಕಾಫಿ ಕುಡಿಯಲು ಅಡಿಗೆಯ ಮನೆಗೆ ಬಂದು ಲೋಟ ಹುಡುಕಲು ತೊಡಗಿದಾಗ ಪುನಃ ಸುಮಿತ್ರೆಯ ಮದುವೆಯ ಮಾತು ಬಂತು.

"ಸುಮಿ ಹುಟ್ಟಿದ ಗಳಿಗೆಯೇ ಚೆನ್ನಾಗಿಲ್ಲವೇನೊ. ಇಲ್ಲವಾದಲ್ಲಿ ಪ್ರತಿ ಸಲವೂ ಹೀಗೇಕಾಗುತ್ತಿದೆಯೆಂದು ದೇವರಿಗೇ ಗೊತ್ತು.'' ಎಂದು ಮೀರೆ ಮಾತು ಆರಂಭಿಸಿದಳು.

"ಪ್ರತಿಸಲ ! ಏನಾಯಿತು ಪ್ರತಿಸಲ ?"

"ಸುಮಿತ್ರೆಯನ್ನು ನೋಡ ಬಂದವರೆಲ್ಲ ಪದ್ಮಾವತಿಯನ್ನು ಕೇಳಿ ಹೋಗುತ್ತಾರೆ. ಇದು ನಾಲ್ಕನೆಯ ಸಲವಂತೆ. ಎರಡು ಮೂರು ಸಲ ಮನೆಯಲ್ಲಿ ಉಪಚಾರಕ್ಕಾದರೂ ಯಾರೂ ಇಲ್ಲ; ಪದ್ಮಾ ಹತ್ತಿರವಿರಲಿ ಎಂದು ಪಂಡಿತರೇ ಅವಳನ್ನು ನಿಲ್ಲಿಸಿಕೊಂಡಿದ್ದರಂತೆ. ಇವತ್ತೂ ಅಷ್ಟೇ. ತಲೆನೋವೆಂದು ಪದ್ಮಾ ಶಾಲೆಗೆ ಹೋಗಿರಲಿಲ್ಲ. ಅಷ್ಟು ಜನ ಹೊಸಬರು ಮನೆಗೆ ಬರುವಾಗ ನೋಡಬೇಕೆಂದು ಹುಡುಗಿಗೆ ತೋರದೆ ಇದ್ದೀತೇ ? ಸರಿ. ಪದ್ಮಾ ಇದಿರಿಗೆ ಬಿದ್ದ ಮೇಲೆ ವಿಚಾರಿಸಿದ್ದೆಲ್ಲ ಅವಳನ್ನೆ. ಪದ್ಮಾವತಿಯನ್ನು ನೋಡಿದವರು ಸುಮಿತ್ರೆಯನ್ನು ಮದುವೆಯಾಗಲು ಒಪ್ಪುತ್ತಾರೆಯೆ ?"

ಕೃಷ್ಣಮೂರ್ತಿ ಈ ಕೊನೆಯ ಮಾತಿನ ಸತ್ಯತೆಯನ್ನರಿತಿರಲಿಲ್ಲವೆಂದಲ್ಲ. ಸುಮಿತ್ರೆ ಪದ್ಮಾವತಿಯರಿಬ್ಬರೂ ಒಡಹುಟ್ಟಿದ ಅಕ್ಕ-ತಂಗಿಯಂದಿರು. ಸುಮಿತ್ರೆಯ ಮುಖ ಗಂಭೀರ. ಪದ್ಮಾವತಿಯದು ಶಾಂತ, ಸುಂದರ. ಸುಮಿತ್ರೆಯ ಮೈಬಣ್ಣ ಸ್ವಲ್ಪ ಎಣ್ಣೆಗಪ್ಪು. ಪದ್ಮಾವತಿಯದು ತೊಳೆದಿಟ್ಟ ಬಿಳಿಶಿಲೆಯಂತೆ. ಸುಮಿತ್ರೆಯ ಸೌಂದರ್ಯದಲ್ಲಿ ಗಾಂಭೀರ್ಯಕ್ಕೆ ಪ್ರಾಧಾನ್ಯ. ಕಾಂತಿಯುಕ್ತ ಕಣ್ಣುಗಳು. ಎದ್ದುಕಾಣುವ ಹಣೆ; ದೃಢತೆಯನ್ನು ಸೂಚಿಸುವ ಮೂಗು, ಉಬ್ಬಿದ ಕೆನ್ನೆ, ಇವುಗಳಿಂದ ಸುಮಿತ್ರೆಯ ಸೌಂದರ್ಯ ಗೌರವಿಸುವಂತಹ ಸೌಂದರ್ಯವಾಗಿತ್ತು. ಹಾಲುಗಲ್ಲಿನಲ್ಲಿ ಕಡೆದ ಸುಂದರ ಮೂರ್ತಿಯಂತೆ, ಸದಾ ಅರಿನಗುವ ಕಣ್ಣುಗಳಿಂದ, ಮುಗ್ಧ ಮಂದಹಾಸದಿಂದ ನೋಡುವವರನ್ನೆಲ್ಲ ಆಕರ್ಷಿಸುವ ಪದ್ಮಾವತಿಯ ಸೌಂದರ್ಯ ಮೋಹಕ ಸೌಂದರ್ಯವಾಗಿತ್ತು.

ಕಾಫಿ ಮುಗಿಸಿದ ಕೃಷ್ಣಮೂರ್ತಿಯ ವಿಚಾರ ಮಾತ್ರ ನಿಂತಿರಲಿಲ್ಲ. ಬರಿದಾದ ಲೋಟ ಹಿಡಿದು ಮಗುವಿನಂತೆ ಆಡುತ್ತಿದ್ದ ಗಂಡನನ್ನು ಕಂಡಾಗ ಮೀರಾಳ ಹುಸಿಮುನಿಸು ಕೆರಳಿತು.

“ ಎಷ್ಟು ಹೇಳಿದರೂ ಕೇಳುವುದಿಲ್ಲ. ಸಣ್ಣ ಮಗುವಿನ ಹಾಗೆ ಅಡಿಗೆಯ ಮನೆಯ ನೆಲ ಅಗೆಯಲು ಸುರುಮಾಡಿದಿರಿ. ಹೊಸದಾಗಿ ಮಣ್ಣು ಹಾಕಿ ಎರಡು ತಿಂಗಳಾಗಿಲ್ಲ. ಹೋಗಿ ನೋಡೋಣ, ಇಲ್ಲಿಂದ.” ಎಂದು ಲೋಟ ಯನ್ನು ಆತನ ಕೈಯಿಂದ ಎಳೆದುಕೊಂಡು ತೊಳೆದಿಟ್ಟಳು.

ಕೃಷ್ಣಮೂರ್ತಿ ನಗುವಂತಿತ್ತು ಸನ್ನಿವೇಶ. ಹೆಂಡತಿಯ ಹುಸಿಮುನಿಸು ಕಂಡು ತುಂಟತನದ ತೃಪ್ತಿಯಿಂದ ಆತ ನಗಬೇಕಿತ್ತು. ಬದಲು ಶಾಂತ ನಾಗಿಯೇ ಹೇಳಿದ.

“ ಇಲ್ಲ ಮೀರಾ. ನಾನು ಸುಮಿತ್ರೆಯ ಮದುವೆಯ ವಿಚಾರ ಯೋಚಿಸು ತ್ತಿದ್ದೆ. ಅಷ್ಟು ಒಳ್ಳೆಯ ಹುಡುಗಿಗೆ ಹುಡುಗ ಸಿಗುವುದಿಲ್ಲವಲ್ಲ ಎಂದು ನಂಬುವುದು ಕಷ್ಟವಾಗಿದೆ.

ಮೀರೆ ಪುನಃ ಮದುವೆಯ ಮಾತಿಗೇ ಬಂದಳು.

“ ಹೌದು ನೋಡಿ. ಪ್ರತಿಸಲ ಹೀಗಾಗುವುದರಿಂದ ಸುಮಿಯ ಮನ ಸ್ಸಿಗೆ ಎಷ್ಟು ಬೇಜಾರ ಬಂದಿದೆಯೋ ದೇವರಿಗೇ ಗೊತ್ತು. ಇವೊತ್ತು ಕೂಡಾ ಬಂದವರೆಲ್ಲ ಹೋಗುವವರೆಗೂ ಒಂದು ಮಾತು ಆಡಲಿಲ್ಲ. ಮಧ್ಯಾಹ್ನ ಒಂದು ಮುಷ್ಟಿ ಅನ್ನ ಮುಕ್ಕಿದ್ದು ಕೂಡ ಬಾಯಿಮುಚ್ಚಿಕೊಂಡೇ. ಮನೆ ಯಲ್ಲಿದ್ದರೆ ಇನ್ನಷ್ಟು ಬೇಸರ ಬಂದೀತು; ತಾಯಿಯನ್ನು ನೆನಸಿಕೊಂಡು ಹುಡುಗಿ ಅತ್ತುಕೊಂಡು ಕುಳಿತುಕೊಳ್ಳಬಹುದು ಎಂದು ಇಲ್ಲಿಯತನಕ ಎಳೆದುಕೊಂಡು ಬಂದೆ. ಆ ಹುಡುಗಿಯ ಕಷ್ಟ ನೋಡಿಯಾದರೂ ನಿಮ್ಮ ಸ್ನೇಹಿತರ ಪೈಕಿ ಯಾರಾದರೂ ಮದುವೆಗೆ ಸಿದ್ಧರಿದ್ದರೆ ಸುಮಿಗೆ ಸರಿಯಾಗ ಬಹುದೇ ಎಂದು ವಿಚಾರಿಸಬಾರದೆ ? ”

“ ಅದು ಸರಿ ಮೀರಾ. ಅಲ್ಲ, ಕಲಿಯುತ್ತಿರುವ ಹುಡುಗಿ. ಪಂಡಿತರು ಇಷ್ಟೇಕೆ ಅವಸರ ಮಾಡುತ್ತಾರೆಂದು ನನಗೆ ಆಶ್ಚರ್ಯ. ಯಾರೋ ನಾಲ್ಕು ಜನ ಬಂದು ನೋಡಿ ಹೋದರು ಎಂದುಕೊಂಡು ಹುಡುಗಿಗೆ ಗಂಡ ಬರುವುದೇ

ಇಲ್ಲ ಎಂದು ನಿಶ್ಚಯಿಸಬೇಕೇ, ಅಥವಾ ಸುಮಿತ್ರೆಗೇನು ಮೂವತ್ತು ವರ್ಷ ದಾಟಿಯಾಯಿತೆ ? "

" ಇದಕ್ಕೇ ಹೇಳಬೇಕು ಕುತರ್ಕ ಎಂದು. ತಾಯಿಯಿಲ್ಲದ ಹುಡುಗಿಯರು ಮದುವೆಗೆ ಬೆಳೆದು ನಿಂತಿದ್ದಾರೆ. ಇರುವಾಗಲೇ ಮಗುವಿನ ಕುತ್ತಿಗೆಗೆ ತಾಳಿ ಕಟ್ಟುವುದನ್ನು ನೋಡಬೇಕೆಂದು ಆಸೆಯಿಟ್ಟುಕೊಂಡೇ ಆ ಪುಣ್ಯಾತ್ಮಗಿತ್ತಿ ಕಣ್ಣು ಮುಚ್ಚಿದರು. ಪಂಡಿತರಿಗೂ ವಯಸ್ಸಾಗಿದೆ. ಒಂದು ದಿನ ಜ್ವರ, ಒಂದು ದಿನ ಕಾಲುನೋವು, ಇನ್ನೊಂದು ದಿನ ಬೆನ್ನುನೋವು ಹೀಗೆ ಒಂದಲ್ಲ ಒಂದು ತಪ್ಪಿದ್ದಲ್ಲ. ಹೇಗಾದರೂ ಮಗಳಿಗೊಂದು ಮದುವೆಯಾದರೆ, ಬಂದವನ ಯೋಗ್ಯತೆ ಚನ್ನಾಗಿದ್ದರೆ, ಏನಾದರೊಂದು ಆಪತ್ತು ಬಂದಾಗ ಅಳಿಯನಾದರೂ ಒಬ್ಬನಿದ್ದಾನಲ್ಲಾ ಎಂದು ಧೈರ್ಯದಿಂದಿರಬಹುದು ಎಂದು ಅವರು ಯೋಚಿಸಿದರೆ ತಪ್ಪೇ, ಹೇಗಾದರೂ ಸುಮಿಗೊಬ್ಬ ಯೋಗ್ಯ ಹುಡುಗ ಸಿಗುತ್ತಾನೆಯೋ ಎಂದು ನೋಡಿ ನಿಶ್ಚಯಮಾಡಿ. ಪದ್ಮಾವತಿಯನ್ನು ಎಂ. ಎ. ಕಲಿತವರೂ ಬೇಡಿಕೊಂಡು ಬಂದಾರು. "

ಕೃಷ್ಣಮೂರ್ತಿ ನಿರುತ್ತರನಾದ. ಮೀರೆಯ ವಾದದಲ್ಲಿ ಹುರುಳಿಲ್ಲವೆಂದು ಆತ ತಿರಸ್ಕರಿಸಿ ಬಿಡುವಂತಿರಲಿಲ್ಲ.

ತಾಯಿಯಿಲ್ಲದ ಇಬ್ಬರು ಬೆಳೆದ ಹುಡುಗಿಯರು. ನಾಳೆ ಏನಾದರೊಂದು ಗಂಡಾಂತರ ಸಂಭವಿಸಿದರೆ, ನೋಡಿಕೊಳ್ಳಲು ಯಾರಾದರೂ ಬೇಕಲ್ಲ ಎಂದು ಪಂಡಿತರು ಚಿಂತಿಸುವುದು ಸರಿಯೆ.

" ಕೆಲಸಕ್ಕೆ ಬಾರದ ದೂರದ ತಮ್ಮನೊಬ್ಬನಿದ್ದಾನೆ ರಾಯರೆ. ಬೇರೆ ಯಾರೂ ನನ್ನ ಪಾಲಿಗೆ ಬಂಧುಗಳಾಗಿ ಉಳಿದಿಲ್ಲ. " ಎಂದು ಹಿಂದೊಮ್ಮೆ ಪಂಡಿತರು ಹೇಳಿದ್ದರು. ಅದೂ ಸಾವಿತ್ರಮ್ಮ ತೀರಿ ಹೋದಮೇಲೆ ದಿನೇ ದಿನೇ ಕೊರಗಿ ಕ್ಷಯಿಸುತ್ತಿದ್ದ ಪಂಡಿತರ ದೇಹಸ್ಥಿತಿಯೂ ಗಮನಿಸಬೇಕಾದ ವಿಚಾರವಾಗಿತ್ತು.

ಆದರೂ ಶ್ರೀನಿವಾಸರಾಯರು ತನ್ನ ಚಿಂತೆಯನ್ನು ಹೊರಗೆ ಪ್ರದರ್ಶಿಸುತ್ತಿರಲಿಲ್ಲ. ಒಳಗೆ ಎಷ್ಟೇ ನೋವಿದ್ದರೂ, ಇತರರನ್ನು ಕಾಣುವಾಗ ಅವರು ಸದಾ ಹಸನ್ಮುಖಿ. ವ್ಯವಹಾರ ಲೌಕಿಕವಾಗಿದ್ದರೂ ವೈದಿಕ ಧರ್ಮದ ಮೇಲೆ ಪಂಡಿತರಿಗಿದ್ದ ಆಸಕ್ತಿಯ ಕುರುಹೆಂಬಂತೆ ಎದ್ದು ಕಾಣುತ್ತಿದ್ದ ಅಂಗಾರಕ

ಅಕ್ಷತೆಗಳಿಂದ ಅಲಂಕೃತವಾಗಿರುತ್ತಿದ್ದ ಅವರ ಮುಖದಲ್ಲಿ ಮಕ್ಕಳ ಕುರಿತಾದ ಕಳವಳವನ್ನು ಯಾರೂ ಗುರುತಿಸುವಂತಿರಲಿಲ್ಲ.

ಸುಮಿತ್ರೆಯ ಮದುವೆಯ ವಿಚಾರ ತನ್ನಿಂದ ಆಗಬಹುದಾದ ಸಹಾಯವೆಲ್ಲವನ್ನು ಮಾಡಿಯೇ ತೀರುವೆನೆಂದು ನಿಶ್ಚಯಿಸಿದ ಕೃಷ್ಣಮೂರ್ತಿ ಮಗುವನ್ನೆತ್ತಿಕೊಂಡು ಅಡಿಗೆಯ ಮನೆಯಿಂದ ಹೊರಬರುವಾಗ ಮೀರೆಯನ್ನುದ್ದೇಶಿಸಿ ಹೇಳಿದ.

"ನನಗೆ ಊಟ ಮುಗಿಸಿ ಪಂಡಿತರಲ್ಲಿಗೆ ಹೋಗಬೇಕಾಗಿದೆ ಮೀರಾ. ಸಾಧ್ಯವಾದಷ್ಟು ಬೇಗ ಒಂದು ಅಡಿಗೆಯ ಶಾಸ್ತ್ರ ಮುಗಿಸಿಬಿಡು."

ಮೀರೆಯ ಮೌನವೇ ಸಮ್ಮತಿಯಾಗಿತ್ತು.

ಲಗುಬಗೆಯ ಊಟ ತೀರಿಸಿದ ಕೃಷ್ಣಮೂರ್ತಿ ಪಂಡಿತರ ಮನೆಯ ದಾರಿ ಹಿಡಿದ. ಒಂದು ಫರ್ಲಾಂಗಿನೊಳಗೆ ಅವರ ಮನೆ. ಮಂಗಳೂರು–ಮಡಿಕೇರಿ ರಾಜಮಾರ್ಗಕ್ಕೆ ತಾಗಿಯೇ ಸಣ್ಣ ಮನೆ. ಮೂರ್ತಿ ಮಂಗಳೂರಿಗೆ ಬಂದು ಅಲ್ಲಿ ನೆಲೆಸುವ ನಿಶ್ಚಯ ಮಾಡಿ, ಪಂಡಿತರ ಸ್ನೇಹದಿಂದಾಗಿ ಹೊಸ ಮನೆಯನ್ನು ಬಾಡಿಗೆಗೆ ಹಿಡಿದಂದಿನಿಂದ ಆತ ಈ ದಾರಿ ತುಳಿದುದು ಇಷ್ಟೇ ಸಲ ಎಂದು ಹೇಳುವಂತಿಲ್ಲ. ಇದೇ ರೀತಿ, ರಾತ್ರಿ ಊಟ ತೀರಿಸಿ, ಭಾರತ ವಾಚನ ಕೇಳಲು, ಲಕ್ಷ್ಮೀಶ, ಕುಮಾರವ್ಯಾಸ, ಮುದ್ದಣರ ಹೆಸರೆತ್ತಿ ಹರಟೆ ಹೊಡೆಯಲು, ಹಳಗನ್ನಡ ಸಾಹಿತ್ಯದ ಹಿರಿಮೆಯ ಉಪನ್ಯಾಸ ಪಂಡಿತರ ಬಾಯಿಂದ ಕೇಳಲು, ತತ್ವ, ಮೀಮಾಂಸೆ, ಕಮ್ಯುನಿಸಂ, ಗಾಂಧೀವಾದಗಳಿಂದ ಹಿಡಿದು, ಹರ್ಷನ ಕಾಲದ ಭಾರತದ ವೈಭವ, ಚಾಲುಕ್ಯರ ಹಿರಿಮೆ, ಅಕ್ಬರನ ಆಡಳಿತೆಗಳತನಕ ಶ್ರೀನಿವಾಸರಾಯರೊಡನೆ ಆತ ಚರ್ಚಿಸದ ವಿಷಯವಿಲ್ಲ. ಪಂಡಿತರ ಸಂಪ್ರದಾಯ ದೃಷ್ಟಿಗೂ ಕೃಷ್ಣಮೂರ್ತಿಯ ಚಿಕಿತ್ಸಕ ದೃಷ್ಟಿಗೂ ಇರುವ ಅಂತರದಿಂದಾಗಿ ಚರ್ಚೆ ಎಷ್ಟು ಕಾಲವನ್ನು ವ್ಯಯಿಸಿದರೂ ಮೂರ್ತಿಗಾಗಲೀ ಪಂಡಿತರಿಗಾಗಲೀ ಅದರ ಅರಿವೇ ಇರುತ್ತಿರಲಿಲ್ಲ. ಸುಮಿತ್ರೆಯೇ ಬಂದು ಎಷ್ಟೋ ಬಾರಿ ಎಚ್ಚರಿಸಬೇಕಾಗುತ್ತಿತ್ತು.

"ಇನ್ನು ರಾತ್ರಿಯೆಲ್ಲ ನಿದ್ದೆಗೆಟ್ಟು ನಾಳೆ ಕೆಮ್ಮಲು ಸುರುಮಾಡುತ್ತೀರಿ ಅಪ್ಪಯ್ಯ. ನಾಳೆ ಮಾತನಾಡಬಾರದೆ. ಮೂರ್ತಿಮಾವ್ಪ್ಪ ಏನು ಓಡಿ ಹೋಗುತ್ತಾರೆಯೆ ?"

ಹಾಗೆಯೇ ಮೂರ್ತಿಯನ್ನುದ್ದೇಶಿಸಿ—

"ನಾಳೆ ಮೀರಕ್ಕನ ಬಾಯಿಂದ ನಾನು ಬೈಗಳು ಕೇಳಬೇಕಾಗುತ್ತದೆ. ಘಂಟೆ ಹದಿನೆರಡು ಹೊಡೆದಾಯಿತು. ಹೊತ್ತಾಗಲಿಲ್ಲವೆ ? "

ಇಷ್ಟೆಲ್ಲ ಸಲಿಗೆ ಆರಂಭವಾದುದು ಪಂಡಿತರ ಪತ್ನಿ ತೀರಿ ಹೋಗಿ ಆರು ತಿಂಗಳಾದ ನಂತರ. ಸಾವಿತ್ರಮ್ಮ ತೀರಿಕೊಂಡಾಗ ಮೂರ್ತಿ ಮಂಗಳೂರಿನ ಹೊಸ ಮನೆಯಲ್ಲಿ ಬಿಡಾರ ಹೂಡಿದ್ದನಷ್ಟೆ. ಪಂಡಿತಕುಟುಂಬದ ಆತ್ಮೀಯತೆ ಆಗಷ್ಟೆ ಆತನಿಗೆ ದೊರಕಿತ್ತು. ಎರಡು ವರ್ಷ 'ಕ್ಯಾನ್ಸರ್' ನಿಂದ ನರಳುತ್ತಿದ್ದು ಮನೆಯಿಂದ ಹೊರಗೆ ಹೊರಡದಿದ್ದ ಸಾವಿತ್ರಮ್ಮ ಒಂದು ರಾತ್ರಿ ತೀರಿಕೊಂಡರು. ಸಾಧಾರಣ ರಾತ್ರಿ ಇಷ್ಟೇ ಹೊತ್ತಿಗೆ, ಮೂರ್ತಿ ಊಟ ಮಾಡುತ್ತಿದ್ದಾಗಲೇ ಪದ್ಮಾವತಿ ಮನೆಗೆ ಓಡಿ ಬಂದಿದ್ದಳು.

"ಮೀರಕ್ಕ ! ಮಾಷ್ಟ್ರು ಈಗಲೇ ಮನೆಗೆ ಬರಬೇಕಂತೆ. ಡಾಕ್ಟರ್ ಸಂಜೀವರಾಯರನ್ನು ಕರೆದುಕೊಂಡು ಬರಬೇಕಂತೆ. ಅಮ್ಮನಿಗೆ ಮೇಲು ಶ್ವಾಸ ಬರುತ್ತಿದೆಯೆಂದು ಅಪ್ಪಯ್ಯ ಕಂಗಾಲಾಗಿದ್ದಾರೆ. ಅಕ್ಕನಂತೂ ಅಳುತ್ತಲೇ ಇದ್ದಾಳೆ. ಸ್ವಲ್ಪ ಡಾಕ್ಟರರನ್ನು ಕರೆದುಕೊಂಡು ಬರಲು ಹೇಳಿ."

ಅರ್ಧ ಊಟದಿಂದೆದ್ದು ಮೂರ್ತಿ ಡಾಕ್ಟರರಲ್ಲಿಗೆ ಧಾವಿಸಿದ್ದ. ಆದರೆ ಡಾಕ್ಟರರ ಸಹಿತ ಪಂಡಿತರ ಮನೆಗೆ ಹೋದಾಗ ಎಲ್ಲ ಮುಗಿದಿತ್ತು. ಪಂಡಿತರು ತಲೆಗೆ ಕೈಹಿಡಿದುಕೊಂಡು ಮಂಕರಂತೆ ಕುಳಿತಿದ್ದರು. ಸುಮಿತ್ರೆ ಬಿದ್ದಿದ್ದವಳನ್ನು ಯಾರೂ ಉಪಚರಿಸಲಿಲ್ಲ. ಸಾವಿತ್ರಮ್ಮನನ್ನು ನೋಡಲು ಹೋದ ಡಾಕ್ಟರರು ಸುಮಿತ್ರೆಯನ್ನು ಉಪಚರಿಸಬೇಕಾಗಿ ಬಂದಿತ್ತು.

ಇದೇ ಯೋಚನೆಯಲ್ಲಿಯೇ ಮೂರ್ತಿ ಪಂಡಿತರ ಮನೆಯ ಬಾಗಿಲ ಬಳಿ ಬಂದ. ಮನೆಯ ಸುತ್ತ ಸಣ್ಣದೊಂದು ತೋಟ. ಹಳೆಯಕಾಲದವರು ಹೊಸಯುಗವನ್ನು ಸ್ವಾಗತಿಸುವ ರೀತಿಯೆಂಬಂತೆ ಪಂಡಿತರು ಮನೆಯ ಬಾಗಿಲಿನಿಂದ ಹಿಡಿದು ಗೇಟಿನ ತನಕ ಎರಡು ಸಾಲು 'ಕ್ರೋಟನ್' ಗಿಡಗಳನ್ನು ನಡಿಸಿದ್ದರು. ಈ ಬಣ್ಣದ ಗಿಡಗಳ ಸಾಲನ್ನು ಹಾದುಕೊಂಡು ಮುಖಮಂಟಪದ ಬಳಿ ಬರುತ್ತಿದ್ದ ಮೂರ್ತಿಗೆ ಒಳಗಿನ ಕೋಣೆಯಲ್ಲಿ ಸುಮಿತ್ರೆ ಹಾಡುತ್ತಿರುವುದು ಸ್ಪಷ್ಟವಾಗಿ ಕೇಳಿಸುತ್ತಿತ್ತು.

" ಉತ್ತರ ಧ್ರುವದಿಂ,
ದಕ್ಷಿಣ ಧ್ರುವಕು
ಚುಂಬಕ ಗಾಳಿಯು ಬೀಸುತಿದೆ...."

ಮೂರ್ತಿ ಬಾಗಿಲು ಬಡಿದಾಗ ಪಡಸಾಲೆಯಲ್ಲಿದ್ದ ಪಂಡಿತರು ಓಡಿ ಬಂದು ಬಾಗಿಲು ತೆರೆದರು.

" ಎಷ್ಟು ಬೇಗ ಬಂದು ಬಿಟ್ಟಿರಿ. ಊಟ ಮುಗಿಸದೆ ಬಂದಿರುವಿರಾದರೆ ಇಲ್ಲಿಯೇ ಊಟದ ಶಾಸ್ತ್ರ ಮುಗಿಸಿ."

" ಛೆ ! ಇಲ್ಲಿಗೆ ಬರುವಾಗ ಊಟ ಮುಗಿಸದೆ ಬಂದರೆ ಮತ್ತೆ ಮನೆಗೆ ಹೋಗುವಾಗ ತೊಳೆದಿಟ್ಟ ಪಾತ್ರೆಯ ಹೊರತು ಬೇರೇನೂ ಸಿಗಲಿಕ್ಕಿಲ್ಲ. ಊಟ ಗೀಟ ಎಲ್ಲಾ ಆಗಿದೆ. ನೀವೇ ಮಾಡಿಲ್ಲವೆಂದು ತೋರುತ್ತದೆ."

" ನಮ್ಮದೆಲ್ಲ ಎಂಟು ಗಂಟೆಯೊಳಗೇ ಮುಗಿಯುತ್ತದೆ. ಸುಮಿತ್ರೆ ಈಗ ನೀವು ಹೇಳಿದ 'ಮುಂಬಯಿ ಸಂಪ್ರದಾಯ' ಆರಂಭಿಸಿದ್ದಾಳೆ. ರಾತ್ರೆಗೆ ಚಪಾತಿ ಮತ್ತು ಬೇಯಿಸಿದ ಮಾವಿನಕಾಯಿಯ ಬಜ್ಜಿ. ಎರಡು ಚಪಾತಿ ತಿಂದು ಒಂದು ಲೋಟ ಹಾಲು ಕುಡಿದರೆ ಸರಿಯಾಗುತ್ತದೆ, ಉಷ್ಣಕ್ಕೂ ತಂಪಿಗೂ ಜತೆ. ನನಗೆ ಚಪಾತಿ ಚೆನ್ನಾಗಿ ಹಿಡಿಸುತ್ತದೆ. ರೇಶನ್ ಅಕ್ಕಿಯ ಕಾಲದಲ್ಲಿ ಇದು ಒಳ್ಳೆಯ ಉಪಾಯವೇ ಅಲ್ಲವೆ ?"

" ಅದೇನು ಸುಮಿತ್ರೆ ಮುಂಬಯಿಯ ಗಂಡ ಗಂಟು ಬೀಳುವನೆಂದು ನಂಬಿದ್ದಾಳೆಯೆ ? ಮುಂಬಯಿ ಸಂಪ್ರದಾಯದ ಅಭ್ಯಾಸ ಈಗಲೇ ಸುರು ವಾಗಿದೆ." ಎಂದು ಮೂರ್ತಿ ನಗುತ್ತಲೇ ಹೇಳಿದ. ಮಾತು ಆರಂಭದಲ್ಲಿಯೇ 'ಮದುವೆ'ಯ ಕಡೆ ತಿರುಗಿದುದು ಪಂಡಿತರನ್ನು ಗಲಿಬಿಲಿಯಲ್ಲಿ ಕೆಡವಿ ತೇನೊ. ಕೃತಕವೆಂದು ಸ್ಪಷ್ಟವಾಗಿ ಕಾಣಿಸುತ್ತಿದ್ದ ನಗೆಯನ್ನು ತಂದುಕೊಂಡು ಅವರು ಉತ್ತರ ಕೊಟ್ಟರು.

" ಛೆ ! ಛೆ ! ಹಾಗೇನೂ ಇಲ್ಲ. ನನ್ನ ಪ್ರಕೃತಿಯೇ ನೆಟ್ಟಗಿಲ್ಲ ನೋಡಿ ಮೂರ್ತಿರಾಯರೆ. ನೀವು 'ಚಪಾತಿ'ಯ ದಾರಿ ತೋರಿಸಿ ಕೊಟ್ಟ ಮೇಲೆ ಸ್ವಲ್ಪ ಸುಧಾರಿಸಿಕೊಳ್ಳಹತ್ತಿದ್ದೇನೆ. ದೇಹಕ್ಕೆ ಒಗ್ಗುವುದೆಂದು ಸುಮಿ ಅದನ್ನು ನಿತ್ಯ ರೂಢಿಯಾಗಿ ಮಾಡಿದ್ದಾಳೆ. ಅಷ್ಟೆ."

" ಇಲ್ಲ. ನಾನು ಬರೀ ತಮಾಷೆಗೆ ಆ ಮಾತು ಆಡಿದೆ. ಆದರೆ ಸುಮಿಗೆ ಮುಂಬಯಿಯಿಂದ ಗಂಡ ಬಂದರೆ ನನಗೆ ಎಲ್ಲಿಲ್ಲದ ಸಂತೋಷವಾಗುತ್ತದೆ. ಸುಮಿಯ ಗಾಂಭೀರ್ಯಕ್ಕೂ ಮುಂಬಯಿ ಶಹರಿನ ಗಾಂಭೀರ್ಯಕ್ಕೂ ಜೊತೆ ಸರಿ " ಎಂದು ಮೂರ್ತಿ ಮದುವೆಯ ಮಾತನ್ನೇ ಬೆಳೆಸಿದ.

ಪಂಡಿತರು ಮೂರ್ತಿಯನ್ನು ಕರೆದುಕೊಂಡು ಪಡಸಾಲೆಯೊಳಗೆ ಬಂದಿದ್ದರು. ಪಕ್ಕದ ಕೋಣೆಯಲ್ಲಿ ಹಾಡುತ್ತಿದ್ದ ಸುಮಿತ್ರೆ ಒಮ್ಮಿಂದೊಮ್ಮೆಗೆ ಹಾಡಿಗೆ ತಡೆ ಹಾಕಿದ್ದಳು. ಮೂರ್ತಿ ಒಳಗೆ ಬರುವ ಹೊತ್ತಿಗೆ ಪದ್ಮಾವತಿ " ಏಕೆ ನಿಲ್ಲಿಸಿ ಬಿಟ್ಟೆಯೆ ? ಹೇಳಕ್ಕ. ಮಾಷ್ಟ್ರ ಇದಿರಿನಲ್ಲಿ ಹಾಡು ಹೇಳಿದರೆ ಏನು ಮರ್ಯಾದೆ ಹೋಗುತ್ತದೆಯೆ ? ಹೇಳೇ....ಬೇಂದ್ರೆಯವರ ಹಾಡು ಹೇಳೇ...." ಎನ್ನುತ್ತಿರುವುದು ಕೇಳಿಸುತ್ತಿತ್ತು. ಒಳಗೆ ಬಂದ ಮೂರ್ತಿ ಪಂಡಿತರ ಅಭ್ಯಾಸದ ಮೇಜಿನ ಬಳಿಯಲ್ಲಿದ್ದ ಮುರುಕಲು ಕುರ್ಚಿಯೊಂದನ್ನು ಗೋಡೆಗೊರಗಿಸಿ ಕುಳಿತ. ಮೂರ್ತಿ ' ಬೇಡ....ಬೇಡ ' ವೆನ್ನುತ್ತಿದ್ದಂತೆಯೇ ' ಮಾಷ್ಟ್ರಿಗೆ ಒಂದು ಲೋಟ ಹಾಲುತಂದು ಕೊಡಮ್ಮ ಸುಮೀ " ಎಂದ ಪಂಡಿತರು, ಕೆಳಗೆ ಹಾಸಿಯೇ ಇದ್ದಿದ್ದ ಜಮಖಾನೆಯ ಮೇಲೆ ಕುಳಿತು ಬಳಿಯಲ್ಲಿದ್ದ ಎಲೆಯಡಿಕೆಯ ತಟ್ಟೆಯನ್ನು ಹತ್ತಿರ ಸೆಳೆದುಕೊಂಡರು.

ಸುಮಿತ್ರೆಯ ಹಾಡು ಆಗಲೇ ನಿಂತಾಗಿತ್ತು. ಮೂರ್ತಿ ಒಳಗೆ ಬರುತ್ತಿದ್ದಾಗ ಮಾತನಾಡುತ್ತಿದ್ದ ಪದ್ಮಾವತಿಯೂ ತಂದೆ ಅಕ್ಕನನ್ನು ಹಾಲುತರಲೆಂದು ಕರೆದಾಗ ತಾನು ಕೂಡ ಮಾತು ನಿಲ್ಲಿಸಿದಳು. ಪಡಸಾಲೆಯನ್ನು ಹಾದು ಅಡಿಗೆಯ ಮನೆಯ ಕಡೆ ನಡೆದ ಸುಮಿತ್ರೆ, ಮೂರ್ತಿಯನ್ನು ಕಂಡವಳು ಇಂದು ಕೂಡ ನಿತ್ಯದಂತೆ ನಗಲಿಲ್ಲ.

ಹಾಲುತಂದು ಮೂರ್ತಿಯ ಬಳಿಯಿರಿಸಿ ನಿಂತ ಸುಮಿತ್ರೆಯನ್ನು ಕಂಡು ಪಂಡಿತರಿಗೇನೆನಿಸಿತೊ. " ದಂಟಿನ ಹುಡಿ ಎಲ್ಲ ಖರ್ಚಾಗಿ ಹೋಗಿದೆ ಸುಮಿ. ಅದಿಲ್ಲದೆ ಎಲೆ ಬಾಯಿಗೆ ಹಾಕಿಕೊಳ್ಳುವಂತಿಲ್ಲ. ಸ್ವಲ್ಪ ಹೋಗಿ ಎರಡಾಣೆಯ ದಂಟಿನ ಹುಡಿ ತರುತ್ತೀಯಾ ? ಪದ್ಮಾಳನ್ನೂ ಜೊತೆಗೆ ಕರೆದುಕೊಂಡು ಹೋಗು ಬೇಕಾದರೆ " ಎಂದರು. ತಂದೆ ಮೂರ್ತಿಯೊಡನೆ ಮಾತನಾಡುವಾಗ ತಾನು ಅಲ್ಲಿರಬಾರದೆಂಬ ಅಭಿಪ್ರಾಯ ಈ ಮಾತಿನಲ್ಲಿ ಸೂಚಿತವಾಗಿದೆ

ಆಕೆಗೆ ತಿಳಿದಿರಬೇಕು. ಆದರೆ ಸುಮಿತ್ರೆ ಮುಂದಿಟ್ಟ ಹೆಜ್ಜೆಗೆ ಹೊಸ್ತಿಲು ದಾಟುವುದರೊಳಗೇ ತಡೆ ಬಂತು.

“ ನಾನು ಹೋಗಿ ತರುತ್ತೇನೆ ಅಪ್ಪಯ್ಯ. ಅಕ್ಕ ತಲೆ ನೋವೆಂದು ಆಗಿನಿಂದ ಹೇಳುತ್ತಿದ್ದಾಳೆ ” ಎಂದು ಪದ್ಮಾವತಿ ಬಾಗಿಲು ದಾಟುತ್ತಿದ್ದ ಸುಮಿತ್ರೆಯನ್ನು ತಡೆದಳು. ಅಕ್ಕನ ಕೈಯಿಂದ ಎರಡಾಣೆ ಸೆಳೆದುಕೊಂಡು ಪ್ರತಿಮಾತು ಕೇಳುವ ಮನಸ್ಸೇ ಇಲ್ಲದೆ ಪದ್ಮಾವತಿ ಓಡಿಹೋದಾಗ ಪಂಡಿತರು ಬೇರೆ ಮಾತನಾಡುವಂತಿರಲಿಲ್ಲ.

ಸುಮಿತ್ರೆ ಪುನಃ ತನ್ನ ಕೋಣೆಯ ಕಡೆ ನಡೆದಳು. ಆದರೆ ಬಾಗಿಲು ಮುಟ್ಟಿದಾಗ ತಂದೆಯೊಡನೆ ಮಾತನಾಡುವ ಮನಸ್ಸಾಯಿತೆಂದು ತೋರುತ್ತದೆ.

“ ನಾನಿಲ್ಲಿದ್ದರೆ ನಿಮ್ಮ ಮಾತಿಗೆ ತೊಂದರೆಯಾಗುತ್ತದೆಯೆ ? ನಾನು ವಸಂತಿಯ ಮನೆಯತನಕ ಹೋಗಿಬರಲೆ? ” ಎಂದು ತಂದೆಯನ್ನುದ್ದೇಶಿಸಿ ಕೇಳಿದಳು.

ಪಂಡಿತರು ಮೂರ್ತಿಯೊಡನೆ ಮಾತನಾಡುವಾಗ ಸುಮಿತ್ರೆ ಬಳಿಯಲ್ಲಿರದಿರುವುದು ವಾಸಿಯೆಂದು ಭಾವಿಸಿದುದೇನೋ ನಿಜವೆ. ಆದರೆ ಮಗಳ ಮನಸ್ಸನ್ನು ನೋಯಿಸಿ, ಆಕೆಯನ್ನು ಬೇರೆ ಕಡೆಗೆ ಕಳುಹಿಸಿ, ಮೂರ್ತಿಯೊಡನೆ ಮನೆತನದ ಸುಖ ಕಷ್ಟ ಮಾತನಾಡಬೇಕೆಂಬುದು ಅವರ ಉದ್ದೇಶವಾಗಿರಲಿಲ್ಲ. ಸುಮಿತ್ರೆಯ ಮಾತು ಕೇಳಿದವರೇ ಕುಳಿತಲ್ಲಿಂದ ಎದ್ದು ಆಕೆಯ ಬಳಿ ಬಂದರು.

“ ಏನಮ್ಮಾ ಇದು. ಮನೆಯ ಯಜಮಾನಿ. ನಿನ್ನ ಮುಂದೆ ಮಾತನಾಡುವುದಕ್ಕೆ ಸಂಕೋಚವೆ ? ಬೇಡವಾದ ಮಾತಿನಿಂದ ಇನ್ನಷ್ಟು ದುಃಖ ನಿನಗೆ ಏಕೆ ಕೊಡುವುದು ಎಂದು ಸ್ವಲ್ಪ ಹೊರಗೆ ಹೋಗಿಬರಲು ಹೇಳಿದೆ. ನಿನಗೆ ತಲೆ ನೋವೆಂದು ಆಗ ಊಟ ಮಾಡುವಾಗಲೇ ತಿಳಿಸಬಾರದಿತ್ತೇ ? ಎಷ್ಟೆಂದು ಓದುವುದು. ಹೋಗಿ ಮಲಗಿಕೋ. ಅಮೃತಾಂಜನ ತಂದು ತಿಕ್ಕಲೆ ?”

ತಂದೆಯ ಆದರ ಕಟ್ಟೊಡೆದು ಹರಿದಾಗ ಸುಮಿತ್ರೆಗೆ ಬಿಕ್ಕಳಿಸಿ ಒಮ್ಮೊಂದೊಮ್ಮೆಗೆ ಅಳು ಬಂತು. ಅದನ್ನು ಪ್ರಯತ್ನಪೂರ್ವಕ ತಡೆದು

ಕೊಂಡು ಕೋಣೆಯೊಳಗೆ ಹೋಗಿ ಒಂದು ದಿಂಬನ್ನು ಮುಖಕ್ಕೆ ಅದುಮಿ ಕೊಂಡು ಅಳು ಕಡಿಮೆಯಾಗುವಂತೆ ಪ್ರಯತ್ನಿಸಿದಳು.

ಪಂಡಿತರು ಒಂದು ಕ್ಷಣ ಗಾಬರಿಗೊಂಡರು. ಮೂರ್ತಿಯೊಡನೆ ಎಷ್ಟೇ ಸಲಿಗೆಯಿದ್ದರೂ ಆತನ ಇದಿರಿನಲ್ಲಿ ಈ ದುಃಖದ ಪ್ರದರ್ಶನ ಅನುಚಿತವಾದು ದೆಂದೆನಿಸಿತೇನೊ. ಮೀರಿ ಮೀರಿ ಬರುತ್ತಿದ್ದ ತನ್ನ ದುಃಖವನ್ನು ನುಂಗಿ ಕೊಂಡು ನಗಲು ಯತ್ನಿಸಿ,

"ಅಳಬಾರದು ಸುಮೀ. ಅಳಲಿಕ್ಕೇನಾಯಿತೀಗ ?" ಎಂದಾಗ ಮೂರ್ತಿ ಏನುಮಾಡಲೂ ತೋಚದೆ ಗೋಡೆಯ ಸುಣ್ಣ ಕೆರೆಯುತ್ತಿದ್ದ.

ಮೂರ್ತಿಯ ಇದಿರಿನಲ್ಲಿ ಇಷ್ಟು ಮಾತು ಹೇಳಿ ಪಂಡಿತರು ಸುಮಿತ್ರೆ ಯನ್ನು ಸಮಾಧಾನಪಡಿಸಲು ಯತ್ನಿಸಿದರೂ, ಅವರಿಗೆ ಅಷ್ಟರಿಂದಲೇ ತೃಪ್ತಿ ಯಾಗಲಿಲ್ಲ. ಸುಮಿತ್ರೆ ಕುಳಿತಿದ್ದಲ್ಲಿಗೆ ಹೋಗಿ ಓದುವ ಮೇಜಿನಮೇಲೆ, ಒದ್ದೆಯಾದ ದಿಂಬಿನ ಮೇಲೆ ತಲೆಯಿಟ್ಟು ಮಲಗಿದ್ದ ಅವಳನ್ನು ಸಮಾಧಾನ ಪಡಿಸಲು ಯತ್ನಿಸಿದರು.

"ಸುಮ್ಮನೆ ಏನೆಲ್ಲ ಮನಸ್ಸಿಗೆ ಹಚ್ಚಿಕೊಂಡು ಅಳಬಾರದು ಸುಮಿ. ಅವಳು ಇದ್ದಿದ್ದರೆ ನಿನ್ನನ್ನು ಹೀಗೆ ಅಳಲು ಬಿಡುತ್ತಿದ್ದಳೆ ? ದೇವರ ಇಚ್ಛೆ ಹೇಗಿದೆಯೋ ಹಾಗೆ ಆಗುತ್ತದೆ. ನೀನು ಅಳುವುದರಿಂದ ನನ್ನ ದುಃಖ ಇನ್ನಷ್ಟು ಹೆಚ್ಚಾಗುತ್ತದೆ. ನೋಡು" ಎಂದಾಗ ಸುಮಿತ್ರೆಯ ಅಳು ಕಡಿಮೆ ಯಾಯಿತು. "ಇಲ್ಲ ಅಪ್ಪಯ್ಯ, ನೀವು ಹೋಗಿ. ಏನೇನೋ ನೆನೆಸಿಕೊಂಡು ಅತ್ತುಬಿಟ್ಟೆ. ನಾನು ಓದುತ್ತೇನೆ. ಹೋಗಿ" ಎಂದವಳೇ ದಿಂಬನ್ನು ಬದಿ ಗೊಗೆದು ಸಮಾಧಾನದ ನಗೆ ಬೀರಿ ಓದುವ ತಯಾರಿ ನಡೆಸಿದುದರಿಂದ ಪಂಡಿ ತರು ಮತ್ತೆ ಮೂರ್ತಿಯ ಬಳಿ ಬಂದರು.

ಮೂರ್ತಿ ಇಷ್ಟು ಹೊತ್ತಿನ ತನಕ ಈ ರೀತಿಯ ದುಃಖ ಪ್ರದರ್ಶನದ ಅರ್ಥವನ್ನು ಊಹಿಸಲು ಅಸಮರ್ಥನಾಗಿ ಚಿಂತಿಸುತ್ತ ಕುಳಿತಿದ್ದವನು ಪಂಡಿ ತರು ಬಂದು ಔಪಚಾರಿಕವಾಗಿಯಾದರೂ, ಏನೂ ಆಗಿಲ್ಲವೆಂದು ತೋರಿಸು ವವರಂತೆ ವೀಳ್ಯದೆಲೆಗೆ ಸುಣ್ಣಹಚ್ಚಲು ಆರಂಭಿಸಿದಾಗ ಮಾತನಾಡಿದ.

"ನಾನು ಬಂದೇ ಇಷ್ಟೆಲ್ಲ ತೊಂದರೆಯಾಯಿತೆಂದು ಕಾಣುತ್ತದೆ. ಆದರೆ ಕಲಿತ ಹುಡುಗಿ ಸುಮಿತ್ರೆ, ಮದುವೆಯ ಮಾತೆತ್ತಿದೊಡನೆ ಇಷ್ಟು ಹೆದರಬೇಕಾದ ಅಗತ್ಯವಿದೆಯೆ ?"

ಪಂಡಿತರು ನಗಲಾರಂಭಿಸಿದರು. ಮೂರ್ತಿಗೆ ಹೋದ ಜೀವ ಬಂದಂತಾಯಿತು.

“ ನೀವು ಹೇಳಿದ್ದು ಸರಿ ಮೂರ್ತಿರಾಯರೆ. ಕಲಿತ ಹುಡುಗಿ ಮದುವೆಗೆ ಹೆದರಬೇಕಾದ ಅಗತ್ಯವಿಲ್ಲವೆನ್ನುವ ನಿಮ್ಮ ಮಾತನ್ನು ಸುಳ್ಳು ಎಂದು ನಾನು ಸಾಧಿಸುವದಿಲ್ಲ. ಆದರೆ ಮದುವೆಗೂ ಕಲಿಯುವಿಕೆಗೂ ಏನಾದರೂ ಸಂಬಂಧವಿದೆಯೇ ಎಂದು ನಾನು ಕೇಳುವ ಪ್ರಶ್ನೆಗೆ ನೀವು ಏನು ಉತ್ತರ ಕೊಡುತ್ತೀರೋ ನನಗೆ ತಿಳಿದಿಲ್ಲ. ಅಷ್ಟೇ ಅಲ್ಲದೆ, ಸುಮಿತ್ರೆ ಅತ್ತದ್ದು ಮದುವೆಯ ಮಾತು ಬಂದುದರಿಂದ ಎಂದು ನೀವು ತಪ್ಪು ತಿಳಿದುಕೊಂಡಂತೆ ಕಾಣುತ್ತದೆ.”

ಪರಿಸ್ಥಿತಿಯ ಸಂಪೂರ್ಣ ಜ್ಞಾನವಿಲ್ಲದ ಮೂರ್ತಿ ಈಗ ಕಂಗಾಲಾದ. ಅವನ ಮೌನವನ್ನು ಕಂಡೇ ಪಂಡಿತರು ನಗಲಾರಂಭಿಸಿದರು.

“ ಇದಕ್ಕೇ ನೋಡಿ, ಕಲಿತವರ ಬುದ್ಧಿ, ಹೆಂಗಸರ ಬುದ್ಧಿಯ ಹಾಗೆ ಮೊಣಕಾಲ ಕೆಳಗೆ, ಎಂದು ಹೇಳುವುದು. ಸುಮಿತ್ರೆ ಅತ್ತುಬಿಟ್ಟಳೆಂದು, ಅವಳಿಗೆ ಬುದ್ಧಿಯಿಲ್ಲ ಎಂದು ಹೇಳಿದಿರಿ. ಮೊದಲು ನನ್ನ ಪ್ರಶ್ನೆಗೆ ಉತ್ತರ ಕೊಡಿ—ಇಲ್ಲಿಗೆ ಬರುವಾಗ ಇವತ್ತು ಏನಾದರೂ ವಿಶೇಷವಿರಬಹುದೆಂದು ನೀವು ಯೋಚಿಸಿದ್ದಿರಿ ?”

“ ವಿಶೇಷ ?....ವಿಶೇಷ ಏನೂ ನಾನು ಯೋಚನೆಮಾಡಲಿಲ್ಲ. ರಾಮಾಯಣ ಹೇಳುತ್ತೇನೆಂದು ಹೇಳಿದಿರಿ. ಆ ಕಾರಣ ಸುಮಿತ್ರೆಯ ಮದುವೆಯ ವಿಚಾರದ ಮಾತಿರಬಹುದು ಎಂದು ಎಣಿಸಿದ್ದೆ. ಅಥವಾ ಇನ್ನೇನಾದರೂ ಇದೆಯೆ ?”

“ ನೋಡಿ. ರಾಮಾಯಣವೆಂದ ಕೂಡಲೆ ಮದುವೆಯೆಂದು ನಿಶ್ಚಯ ಮಾಡಿ ಬಿಟ್ಟಿರಿ. ನಾನು ತರ್ಕ ಶಿರೋಮಣಿ ಪರೀಕ್ಷೆ ಪಾಸಾಗಿದ್ದೇನೆ ರಾಯರೆ. ನಿಮ್ಮನ್ನು ಹೀಗೆಯೇ ಬಿಡುವುದಿಲ್ಲ.”

ಪಂಡಿತರ ನಗುವಿನಲ್ಲಿ ಮೂರ್ತಿಯೂ ಬೆರೆಯಬೇಕಾಗಿ ಬಂತು. ಅವರು ಮಾತು ಮುಂದುವರಿಸಿದಾಗ ಮೂರ್ತಿಯನ್ನು ಕಾಡುತ್ತಿದ್ದ ಸಂದೇಹಗಳೆಲ್ಲ ಕರಗಲಾರಂಭಿಸಿದವು.

" ರಾಮಾಯಣ ನಮ್ಮ ಮನೆತನದ್ದೆ ರಾಯರೆ. ನಮ್ಮ ಸಂಸಾರ ಎಷ್ಟು ದೊಡ್ಡದೆಂಬುದು ನಿಮಗೆ ಗೊತ್ತೇ ಇದೆ. ಒಬ್ಬ ದೂರದ ತಮ್ಮ ಎಲ್ಲಿಯೋ ಬೆಳಗಾವಿಯಲ್ಲಿದ್ದಾನಂತೆ. ಒಂದು ಆಪತ್ತು ಬಂದರೆ ಕರೆದರೂ ಬರುತ್ತಾನೋ ಇಲ್ಲವೋ ಸಂದೇಹ. ಮತ್ತೆ ಹೆಸರಿಗಾಗಿ ಇರುವ ಕೆಲವು ನೆಂಟರು ನಮ್ಮ ಸಂಪತ್ತು ಕಂಡೇ ದೂರವಾಗಿದ್ದಾರೆ. ಇನ್ನು 'ಅವಳ' ಕಡೆಯವರು, ಒಬ್ಬಿಬ್ಬರು ಎಲ್ಲಿಯೋ ರಾಯಚೂರಂತೆ, ಗುಂಟಕಲ್ಲಂತೆ. ಹೋಟೆಲಿನ ಸಂಪಾದನೆಯಿಂದ ತಮ್ಮ ಮಟ್ಟಿಗೆ ತಾವಾಗಿ ಇದ್ದಾರೆ. ಹೀಗಿರುವಾಗ ನಮಗೆ ಹತ್ತಿರದವರೆಂದರೆ ನೀವೇ ಸರಿ. ಕರೆದಕೂಡಲೆ ಓಡಿ ಬಂದು ಬಿಡುತ್ತೀರಿ. ಏನು ಋಣಾನುಬಂಧವೋ, ಅಥವಾ ನನ್ನ ಅತಿರೇಕ ಸಲಿಗೆಯೋ, 'ಅವಳು' ಹೋದಮೇಲೆ ನನ್ನ ಧೈರ್ಯವೆಲ್ಲ ದಿಕ್ಕಾಪಾಲಾಗಿ ಓಡಿಹೋದರೂ ನೀವೊಬ್ಬರು ಹತ್ತಿರದಲ್ಲಿದ್ದೀರಲ್ಲ ಎಂಬ ಧೈರ್ಯವೊಂದಿದೆ. ಸುಮಿ, ಪದ್ಮಾ ಹೇಗೂ ನಿಮ್ಮ ವಿದ್ಯಾರ್ಥಿಗಳು ಹೀಗಾಗಿ ಹುಡುಗಿಯರ ಯೋಗ್ಯತೆ ನಿಮಗೆ ತಿಳಿದಿದೆ........ "

ಇಷ್ಟರಲ್ಲಿ ಕೆಮ್ಮು ಆರಂಭವಾದುದರಿಂದ ಪಂಡಿತರ ಮಾತಿಗೆ ತಡೆ ಬಂದಂತಾಯಿತು. ಕೆಮ್ಮು ನಿಂತು ಅದರಿಂದಾದ ಆಯಾಸವನ್ನು ಕಡಿಮೆ ಮಾಡಿಕೊಳ್ಳಲೆಂದು ಪಂಡಿತರು ಮೌನವಾಗಿದ್ದಾಗ ಮೂರ್ತಿ ಮಾತನಾಡಿದ.

" ಇದನ್ನೆಲ್ಲ ನೀವು ಹೇಳಬೇಕೆ ಪಂಡಿತರೆ. ಸುಮಿತ್ರೆಯ ಮದುವೆಯ ವಿಚಾರವನ್ನು ನೆನೆಸಿಕೊಂಡೇ ನೀವು ಹೀಗೆ ಹೇಳುತ್ತೀರೆಂದು ಕಾಣುತ್ತದೆ."

ಪಂಡಿತರು ಈ ಬಾರಿ ಉತ್ತರ ಕೊಡುವಾಗ ದನಿ ಸ್ವಲ್ಪ ಇಳಿದಿತ್ತು.

" ಹೌದು ರಾಯರೆ. ಸುಮಿತ್ರೆಯ ಕುತ್ತಿಗೆಯಲ್ಲಿ ಕರಿಮಣಿ ನೋಡುವ ದಿವಸ ಆದಷ್ಟು ಬೇಗ ಬರಲಿ ಎಂದು ನಾನು ಆಶಿಸುತ್ತಿದ್ದೇನೆ. ಹಗಲು ರಾತ್ರಿ ಇದೇ ವಿಚಾರ ಚಿಂತಿಸುತ್ತಿದ್ದೇನೆ. ಆದರೆ ಅದಕ್ಕೂ ಒಂದು ಕಾರಣವಿದೆ. ಎರಡು ತಿಂಗಳ ಹಿಂದೆ ಒಂದು ತಮಾಷೆ ನಡೆದುಹೋಯಿತು. ಆದರೆ ಆ ತಮಾಷೆಯೇ ಈಗ ಜೀವ ತಿನ್ನಲು ಸುರುಮಾಡಿದೆ. ನನಗಿಂತ ಹೆಚ್ಚಾಗಿ ಸುಮಿತ್ರೆ ಇದರಿಂದಾಗಿ ಕೊರಗಲು ಆರಂಭಿಸಿದ್ದಾಳೆ. ಇಷ್ಟು ದಿನ ನಿಮಗೆ ಇದನ್ನು ತಿಳಿಸಲಿಲ್ಲ. ಅದಕ್ಕೆಯೆ ಇವತ್ತು ರಾತ್ರಿ ಹೇಳಿಬಿಡಬೇಕೆಂದು ನಿಶ್ಚಯಿಸಿ ನಿಮ್ಮನ್ನು ಬರಹೇಳಿದ್ದು."

ಮೂರ್ತಿಯ ಆಶ್ಚರ್ಯ ಈಗ ಚಿಗುರಲು ಆರಂಭಿಸಿತು.

“ಏನು, ಏನಾಗಿದೆ ಹೇಳಿ. ನಾನು ಇಷ್ಟು ಸಮೀಪದಲ್ಲಿದ್ದು, ನನ್ನ ಮೇಲೆ ನೀವು ಇಷ್ಟು ವಿಶ್ವಾಸವಿರಿಸಿಯೂ ನನಗೆ ತಿಳಿಸದ ವಿಚಾರ ಏನದು ?” ಎಂದು ಕೃಷ್ಣಮೂರ್ತಿ ತುಂಬ ಆಶ್ಚರ್ಯದಿಂದ ಕೇಳಿದ.

ಪಂಡಿತರು ಕೃಷ್ಣಮೂರ್ತಿಯ ಪ್ರಶ್ನೆಗೆ ಉತ್ತರ ಕೊಡುವಾಗ ಸುಮಿತ್ರೆಯ ಕೋಣೆಯ ಕಡೆ ದೃಷ್ಟಿ ಹೊರಳಿಸಿದುದರಿಂದ ಸಹಜವಾಗಿಯೇ ಆತ ಆ ಕಡೆ ನೋಡಿದ. ಕೋಣೆಯ ಬಾಗಿಲಿನ ದಾರಂದಕ್ಕೊರಗಿ ಸುಮಿತ್ರೆ ನಿಂತಿದ್ದಳು. ಆದರೆ ಮಗಳು ನಿಂತಿದ್ದಾಳೆಂದು ಪಂಡಿತರು ಮಾತು ನಿಲ್ಲಿಸಲು ಮನಗೊಡಲಿಲ್ಲ.

“ಸುಮಿತ್ರೆಗೆ ಎಷ್ಟು ಹೇಳಿದೆ, ನನ್ನ ವಯಸ್ಸಿಗೆ ಇದೆಲ್ಲ ಬರುವಂಥದೆ; ಅದರಿಂದ ಹೆದರಬೇಕಾದುದೇನೂ ಇಲ್ಲ ಎಂದು. ಆದರೂ ಹುಚ್ಚು ಹುಡುಗಿ, ತುಂಬ ಹೆದರಿಕೊಂಡಿದ್ದಾಳೆ. ಅವಳ ತಾಯಿ ನಮ್ಮನ್ನೆಲ್ಲ ಬಿಟ್ಟುಹೋದ ಸಮಯ ಪಟ್ಟ ಕಷ್ಟ ನೆನೆಸಿಕೊಂಡು ಹೆದರಿಕೆಯುಂಟಾಗುವುದು ಸರಿಯೆ. ಆದರೂ ನಾವು ಹೆದರಿದಾಕ್ಷಣ ಆಗುವುದು ಆಗದೆ ಇರುತ್ತದೆಯೆ ? ದೇವರ ಇಚ್ಛೆ ಹೇಗಿದೆಯೋ ಹಾಗೆ ಆಗಿಯೇ ತೀರಬೇಕು.”

ಮಾತು ಸುತ್ತುಸುತ್ತಾಗಿ ವಿಷಯದ ಕಡೆ ಬರುತ್ತಿದ್ದಿತೆಂದು ಮೂರ್ತಿ ಗನಿಸಿದರೂ ಆತ ನಡುವೆಯೆ ಪ್ರಶ್ನಿಸಲು ಪ್ರಯತ್ನಿಸಲಿಲ್ಲ.

“ನನ್ನ ಆರೋಗ್ಯ ಮುಂಚಿನಿಂದಲೂ ಹಾಗೆಯೇ ಎಂದು ಎಷ್ಟು ಹೇಳಿದರೂ ಸುಮಿತ್ರೆಗೆ ಸಮಾಧಾನವಾಗುವುದಿಲ್ಲ. ಎರಡು ವರ್ಷ ‘ಅವಳ’ ಆರೈಕೆಯಲ್ಲಿ, ರಾತ್ರಿ ನಿದ್ರೆಯಿರಲಿಲ್ಲ; ಹಗಲು ಸರಿಯಾದ ಊಟವಿಲ್ಲ. ಪಿತ್ಥ ಪ್ರಕೋಪದಿಂದ ಹೀಗಾಗುವುದು ಉಂಟು ಎಂದು ಕಲಿಯುತ್ತಿರುವವಳಿಗೆ ತಿಳಿಯಬೇಡವೆ ? ಅದೂ ಸರ್ವೋತ್ತಮರಾಯರು ಏನು ಹೇಳಿದ್ದಾರೋ ಅವಳ ಹತ್ತಿರ. ಸರ್ವೋತ್ತಮರಾಯರೇನು ತ್ರಿಕಾಲ ಜ್ಞಾನಿಗಳೆ ? ಅಥವಾ ನಾಡಿ ಹಿಡಿದ ಕೂಡಲೆ ಎಲ್ಲ ಗೊತ್ತಾಗಿಬಿಡುತ್ತದೆಯೆ ?”

ಒಂದು ನಿಮಿಷ ತಡೆದು ಪಂಡಿತರು ಮಾತು ಮುಂದುವರಿಸಿದರು.

“‘ಅವಳ’ ವರ್ಷಾಂತಿಕದ ದಿನ ನೋಡಿ. ಬ್ರಹ್ಮಸಂಸ್ಕಾರಪಡೆದ ಒಂದು ಗಂಡುಮಗುವಿನ ಕೈಯಲ್ಲಿ ಅವಳಿಗೆ ತರ್ಪಣ ಕೊಡಿಸುವ ಭಾಗ್ಯವನ್ನು ದೇವರು ನನ್ನ ಹಣೆಯಲ್ಲಿ ಬರೆಯಲಿಲ್ಲ. ಆ ದಿವಸ ಈ ವಿಧಿಗೆ ಇದ್ದುದು

ನಾವು ಮನೆಯವರು ಮಾತ್ರ. ಪುರೋಹಿತರನ್ನು ಬಿಟ್ಟು ಹೊರಗಿನವರು ಯಾರನ್ನೂ ಹೇಳಿರಲಿಲ್ಲ. ವಿಧಿಯೆಲ್ಲ ಮುಗಿದು ಒಂದು ತುತ್ತು ಊಟದ ಶಾಸ್ತ್ರ ಮುಗಿಸಬೇಕೆನ್ನುವಾಗ ಒಮ್ಮಿಂದೊಮ್ಮೆಗೆ ಕೆಮ್ಮು ಆರಂಭವಾಗಿ ವಾಂತಿಯಾಯಿತು. ಕಫದಲ್ಲಿ ರಕ್ತವಿತ್ತಂತೆ. ಎರಡು ನಿಮಿಷ ಕಣ್ಣು ಕತ್ತಲೆ ಬಂದು ಬಿದ್ದುಬಿಟ್ಟೆ. ಸುಮಿತ್ರೆ ಓಡಿಹೋಗಿ ಸಂಜೀವರಾಯರನ್ನು ಕರೆದು ಕೊಂಡು ಬಂದಳು. ಅವರು ಏನೋ ಇಂಜಕ್ಶನ್ ಕೊಟ್ಟಮೇಲೆ ಎಲ್ಲ ಸರಿ ಯಾಯಿತು. ಆದರೂ, 'ಜಾಗ್ರತೆಯಿಂದಿರಬೇಕು. ಯಾರಾದರೂ ಸ್ಪೆಶ್ಯಲಿಸ್ಟ ರಿಗೆ ತೋರಿಸಿದರೆ ಒಳ್ಳೆಯದು; ಸರ್ವೋತ್ತಮರಾಯರನ್ನು ನೋಡಬಾರದೆ? ಎಂದರಂತೆ. ಬೇಡವಾದ ಮಾತು ಹೇಳಿದರು. ಸುಮಿತ್ರೆ ಅದನ್ನೆ ಮನಸ್ಸಿಗೆ ಹಚ್ಚಿಕೊಂಡು ಸರ್ವೋತ್ತಮರಾಯರ ಹತ್ತಿರ ಹೋಗಲು ಒತ್ತಾಯ ಮಾಡಲು ಆರಂಭಿಸಿದಳು. ನಿಮ್ಮ ಹತ್ತಿರ ಒಂದೆರಡು ಸಲ ಹೇಳಬೇಕೆಂದು ಮಾಡಿದೆ. ಆದರೆ ಯಾಕೆ ಈ ಬೇಸರದ ಪುರಾಣ ಎಂದು ಸುಮ್ಮಗಿದ್ದೆ. ಕಷಾಯದಲ್ಲಿಯೇ ಕೆಮ್ಮು ಸ್ವಲ್ಪ ಕಡಿಮೆಯಾಗಿತ್ತು. ಸುಮಿತ್ರೆಗೆ ಮಾತ್ರ ಇದರಿಂದ ಸಮಾಧಾನ ಬರಲಿಲ್ಲ. ಅವಳ ಒತ್ತಾಯಕ್ಕೆಂದೇ ಸರ್ವೋತ್ತಮ ರಾಯರ ಹತ್ತಿರ ಹೋಗಿಬಂದೆ, ಹದಿನೈದು ದಿನಗಳ ಹಿಂದೆ. ಅವರು ಪರೀಕ್ಷೆ ಮಾಡಿ ಹೊಟ್ಟೆಯಲ್ಲಿ ಏನೋ ದೋಷವಿದೆ; ಆಪರೇಶನ್ ಆಗಬೇಕು, ಎಂದರು. ನನ್ನ ಪ್ರಾಯಕ್ಕೆ ಆಪರೇಶನ್! ಅದೂ ಮದರಾಸಿಗಾಗಲೀ, ಬೊಂಬಾಯಿಗಾಗಲೀ ಹೋಗಬೇಕಂತೆ. ಡಾಕ್ಟರು ಮನಸ್ಸಿಗೆ ಬಂದ ಹಾಗೆ ಹೇಳುತ್ತಾರೆಂದು ನಾವು ಅದನ್ನು ಕಟ್ಟಿಕೊಳ್ಳಲು ಸಾಧ್ಯವೆ? ದೇವರು ನನಗೆ ಇನ್ನೂ ಆಯುಷ್ಯ ಕೊಟ್ಟಿದ್ದರೆ ಮುಂಡೆ ಮಾರಿಸಹ ಬರುವುದಿಲ್ಲ. ಹಾಗಿಲ್ಲದೆ ಹೋದರೆ, ನಿಮ್ಮ ಬೊಂಬಾಯಿ, ಮದರಾಸು ಸರ್ಜನ ಗಿರ್ಜನರೆಲ್ಲ ಸುಮ್ಮಗೆ. ಅವರಿಂದೇನಾದೀತು?'

ಮೂರ್ತಿ ಸುಮಿತ್ರೆಯ ಕಡೆ ನೋಡಿದ.

"ಸರ್ವೋತ್ತಮರಾಯರು ಏನು ಹೇಳಿದರು ಸುಮಿ. ನನ್ನ ಹತ್ತಿರ ತಿಳಿಸಲು ಸಂಕೋಚವಾಗಿದ್ದರೆ ಮೀರೆಯ ಹತ್ತಿರವಾದರೂ ತಿಳಿಸಬಹುದಿತ್ತಲ್ಲ!"

ಸುಮಿತ್ರೆಯಿಂದ ಉತ್ತರ ಬರಲು ತಡವಾಗಲಿಲ್ಲ.

" ಜೀವ ಹೋದರೂ ಯಾರ ಹತ್ತಿರವೂ ಹೇಳಬಾರದೆಂದು ಅಪ್ಪಯ್ಯ ಜೋರು ಮಾಡಿದ್ದರು ಮಾಷ್ಟ್ರೆ. ಸರ್ವೋತ್ತಮರಾಯರು 'ಹೊಟ್ಟೆಯಲ್ಲಿ ಏನೋ ಟ್ಯೂಮರ್ ಇದೆ. ಎಕ್ಸರೇ ತೆಗಿಸಿ ಅದರ ಪರಿಣಾಮ ನೋಡಿಕೊಂಡು ಮದ-ರಾಸಿಗೆ ಕರೆದುಕೊಂಡು ಹೋಗಿ ಆಪರೇಶನ್ ಮಾಡಿಸುವುದು ಅಗತ್ಯ' ಎಂದರು. 'ಜೊತೆಗೆ 'ಕ್ರಾನಿಕ್ ಬ್ರೊಂಕ್ಯಾಟೀಸ್'ನ ಲಕ್ಷಣವೂ ಕಾಣಿಸುತ್ತೆ' ಎಂದರು. ಆಮೇಲೆ ಎರಡು ಮೂರು ಸಲ ಅಪ್ಪಯ್ಯ ಉಗುಳುವಾಗ ರಕ್ತ ಬಂದಿದೆ. ಆದರೂ ಬೇಕೆಂದೇ ಗಾಬರಿಯಿಲ್ಲ ಎನ್ನುತ್ತಿದ್ದಾರೆ."

ಪಂಡಿತರು ಮಗಳ ಮಾತಿಗೆ ಪ್ರತಿ ಮಾತು ಹೇಳಲಿಲ್ಲ. ಪುಡಿ ಬುರುಡೆ ತೆಗೆದು ನಸ್ಯ ಮೂಗಿಗೇರಿಸುತ್ತ ಮೂರ್ತಿಯನ್ನುದ್ದೇಶಿಸಿ ಹೇಳಿದರು. ಈಗ ಅವರ ಮಾತಿನಲ್ಲಿ ಆತ್ಮಸಮರ್ಥನೆ ಕಂಡುಬರುತ್ತಿದ್ದಿಲ್ಲ. ಬದಲು ಕಳವಳ ವ್ಯಕ್ತವಾಗುತ್ತಿತ್ತು.

" ಸರ್ವೋತ್ತಮರಾಯರು ಏನೇ ಹೇಳಲಿ ಮೂರ್ತಿ ರಾಯರೆ. ನಾನು ಮದರಾಸಿಗೆ ಹೋಗುವ ಹಾಗೆಯೂ ಇಲ್ಲ; ಬೊಂಬಾಯಿಗೆ ಹೋಗುವ ಹಾಗೆಯೂ ಇಲ್ಲ. ನನಗೆ ನಾರಾಯಣ ಪಂಡಿತರ ಕಷಾಯವೇ ಸಾಕು. ಆದರೆ ಸುಮಿತ್ರೆಯ ಮದುವೆಯೊಂದು ಬೇಗ ಆಯಿತೆಂದರೆ, ಮನಸ್ಸಿಗೆ ಸ್ವಲ್ಪ ನೆಮ್ಮದಿ ಸಿಗಬಹುದು. ಮನಸ್ಸಿಗೆ ಶಾಂತಿ ಸಿಕ್ಕಿದರೆ ಎಂಥ ಕಾಯಿಲೆಯೂ ಎರಡು ದಿನದಲ್ಲಿ ಗುಣವಾಗಬಹುದು."

ಮಾತು ಪುನಃ ಮದುವೆಯ ಕಡೆ ಬಂದುದರಿಂದ ಸುಮಿತ್ರೆ ಒಳಗೆ ಹೋದಳು. ಇಷ್ಟರ ತನಕ ಸುಮ್ಮಗೆ ಕೇಳುತಿದ್ದ ಮೂರ್ತಿ ಈಗ ಮಾತ ನಾಡಿದ.

" ನೀವು ಹೇಳುವುದು ನನಗೇನೂ ಸರಿಕಾಣುವದಿಲ್ಲ ಪಂಡಿತರೆ. ನೀವು ಒಂದು 'ಸೂ' ಎಂದು ಸೂಚನೆ ಕೊಟ್ಟಿದ್ದರೆ ನಾನು ಸರ್ವೋತ್ತಮರಾಯ ರನ್ನು ನೋಡಿಕೊಂಡು ಬರುತ್ತಿದ್ದೆ. ನಾಳೆ ಅವಶ್ಯ ಹೋಗಿ ನೋಡುತ್ತೇನೆ. ಮದುವೆಯ ವಿಚಾರ ನನ್ನಿಂದೇನಾಗಬೇಕು, ಹೇಳಿ. ಸಾಧ್ಯವಿರುವ ಪ್ರಯತ್ನ ನಾನು ಮಾಡುತ್ತೇನೆ."

ಪಂಡಿತರು ನಗು ಬೆರೆಸಿ ಮಾತನಾಡಿದಾಗ ಮಾತಿನಲ್ಲಿ ಕೃತಜ್ಞತೆ ತುಂಬಿತ್ತು.

" ಸರ್ವೋತ್ತಮರಾಯರ ವಿಚಾರ ಹಾಗಿರಲಿ ಮೂರ್ತಿರಾಯರೆ. ಎಲ್ಲಾದರೂ ನಿಮ್ಮ ಪೈಕಿ ಯೋಗ್ಯ ಹುಡುಗನಿದ್ದಾನು ಎಂದು ವಿಚಾರಿಸಿ ಹೇಳಿದರೆ ತುಂಬ ಉಪಕಾರವಾಗುತ್ತದೆ. ಏನೆಲ್ಲ ಆಸೆಯಿಟ್ಟುಕೊಂಡು ಸುಮಿ, ಪದ್ಮಾರನ್ನು ಶಾಲೆಗೆ ಕಳುಹಿಸಿದೆ. ಆ ಆಸೆಯೆಲ್ಲ ನಿಜವಾಗಲಿಕ್ಕಿಲ್ಲ. ಆದರೂ, ಬಡವನಾದರೂ ಚಿಂತಿಲ್ಲ. ಸ್ವಲ್ಪವಾದರೂ ಓದಿ ತನ್ನ ಸಂಸಾರವನ್ನು ತಾನೇ ನಡೆಸಿಕೊಂಡು ಹೋಗುವ ಹುಡುಗನಾದರೆ ಸಾಕು. ಸುಮಿ ಗಂಡ ಬರದೆ ಉಳಿಯುತ್ತಾಳೆಂದು ನಾನು ತಿಳಿದಿಲ್ಲ. ಆದರೆ ಯಾರಾದರೂ ಹೋಟೆಲಿನವರ ಕೈಗೆ ನನ್ನ ಮುದ್ದು ಮಗಳನ್ನು ಕೊಡಲು ನನಗೆ ಎಳ್ಳಷ್ಟು ಇಷ್ಟವಿಲ್ಲ. ಅದೂ ಅಲ್ಲದೆ, ಸುಮಿಯ ಗ್ರಹಚಾರವೆಂಬಂತೆ, ಇಬ್ಬರು ಮೂವರು ಬಂದು ನೋಡಿದವರು, ಪದ್ಮಾವತಿಯಾದರೆ ಮಾತು ಬೆಳೆಸೋಣ ಎಂದರು. ಇವೊತ್ತು ಕೂಡಾ ಉಡುಪಿಯವರೊಬ್ಬರು ಬಂದಿದ್ದರು. ಹುಡುಗ ಮುನ್ಸೀಫ ಕೋರ್ಟಿನಲ್ಲಿ ಕೆಲಸಕ್ಕಿದ್ದಾನಂತೆ. ಅವರೂ ಹಿಂದಿನವರ ಹಾಗೆಯೇ 'ಪದ್ಮಾವತಿಗೆ ಮದುವೆ ಮಾಡುತ್ತೀರಾ ?' ಎಂದು ಕೇಳಿ ಹೋದರು."

ಮೂರ್ತಿ ಆಲೋಚನಾಮಗ್ನನಾಗಿದ್ದ. ಸುಮಿತ್ರೆಯ ಮದುವೆಯ ಅವಸರದ ಔಚಿತ್ಯಕ್ಕೆ ಪಂಡಿತರ ಆರೋಗ್ಯ ಮುಖ್ಯ ಕಾರಣವೆಂದು ತಿಳಿದ ಮೇಲೆ, ತಾನು ಮಾಡಬೇಕಾದ ಕೆಲಸದ ಕುರಿತು ಸಂದೇಹವೇ ಉಳಿಯಲಿಲ್ಲ. ಅವಿವಾಹಿತರಾಗಿ ಉಳಿದಿರುವ ತನ್ನ ಮಿತ್ರರನ್ನೆಲ್ಲ ನೆನಪಿಗೆ ತಂದುಕೊಳ್ಳಲು ಪ್ರಯತ್ನಿಸಿದ.

" ಏನು, ಏನೂ ಮಾತನಾಡುವುದಿಲ್ಲ. ಬೇಸರವಾಯಿತೆ, ರಾಮಾಯಣ ಕೇಳಿ " ಎಂದು ಪಂಡಿತರು ಕೇಳಿದರು.

" ಛೆ ! ಛೆ ! ಹಾಗೇನೂ ಇಲ್ಲ. ನನಗೆಲ್ಲ ತಿಳಿಯಿತು. ಮೊದಲೇ ಹೇಳಿದೆನಲ್ಲ. ಸುಮಿತ್ರೆಯ ವಯಸ್ಸು ನೋಡಿ ಅವಸರ ಬೇಡವೆಂದುಕೊಂಡಿದ್ದೆ. ನನ್ನ ಸ್ನೇಹಿತರು ಕೆಲವರಿದ್ದಾರೆ. ಖಂಡಿತ ಪ್ರಯತ್ನಿಸಿ ನೋಡುತ್ತೇನೆ " ಎಂದು ಹೇಳಿ ಮೂರ್ತಿ ಕುರ್ಚಿಯಿಂದೆದ್ದ.

ಗಡಿಯಾರ ಹನ್ನೊಂದು ಬಡಿಯುತ್ತಿತ್ತು. ಹೊರಡುತ್ತಿದ್ದ ಮೂರ್ತಿಯನ್ನು ಇಂದು ನಿಲ್ಲಿಸಿಕೊಳ್ಳಲು ಪಂಡಿತರು ಪ್ರಯತ್ನಿಸಲಿಲ್ಲ. ಮೂರ್ತಿ

ಹೊರಟನೆಂದು ತಿಳಿದು ಬಾಗಿಲಬಳಿ ಬಂದ ಸುಮಿತ್ರೆಗೆ ಆತ ಸಮಾಧಾನದ ಒಂದು ಮಾತು ಹೇಳಿದ.

" ಸರ್ವೋತ್ತಮರಾಯರನ್ನು ನಾನು ಕಾಣುತ್ತೇನೆ ಸುಮೀ. ಆ ವಿಚಾರ ನೀನು ಚಿಂತಿಸಬೇಡ."

೩

ಬ್ರಹ್ಮಚಾರಿ ಸ್ನೇಹಿತರ ಜಾತಕಗಳನ್ನೆಲ್ಲ ಪರಿಶೋಧಿಸಲು ನಿಶ್ಚಯಿಸಿದ ಕೃಷ್ಣಮೂರ್ತಿಯ ಆಸಕ್ತಿ ಪರಾಮಾವಧಿಯನ್ನು ತಲುಪಿದುದು ಸುಮಿತ್ರೆಯ ವರ್ತನೆಯಿಂದಾಗಿಯೆ. ತಂದೆಯ ಅನಾರೋಗ್ಯದ ವಿಚಾರ ಕೃಷ್ಣಮೂರ್ತಿಯ ಸಹಾಯದ ಭರವಸೆ ಸಿಕ್ಕಿದ ಕೂಡಲೆ ಸ್ವಲ್ಪಮಟ್ಟಿಗೆ ಸಮಾಧಾನ ತಂದು ಕೊಂಡ ಸುಮಿತ್ರೆ ಮಾರನೆಯ ದಿನ ಕೃಷ್ಣಮೂರ್ತಿಯ ಮನೆಗೆ ಬಂದವಳು ಮೀರೆಯೊಡನೆ ಸಮಯ ಸಾಧಿಸಿ ಮದುವೆಯ ಪ್ರಸ್ತಾಪವೆತ್ತಿದ್ದಳು. " ನನ್ನ ಮದುವೆಗಾಗಿ ಮೂರ್ತಿ ಮಾಷ್ಟು ಚಿಂತಿಸುವುದು ಬೇಡವೆಂದು ಹೇಳಿ ಮೀರಕ್ಕ. ನಾನು ಎಸ್. ಎಸ್. ಎಲ್. ಸಿ. ಮುಗಿಸಿದೊಡನೆ ಟ್ರೇನಿಂಗಿಗೆ ಹೋಗುತ್ತೇನೆ. ಸೆಕೆಂಡರಿ ಟ್ರೇಂಡ್ ಉಪಾಧ್ಯಾಯಿನಿಯರಿಗೆ ಕೆಲಸಕ್ಕೆ ಬರ ಗಾಲವಿಲ್ಲ. ಇದರಿಂದಾಗಿ ನಮ್ಮ ಮನೆಯ ಕಷ್ಟ ಕಡಿಮೆಯಾಗಬಹುದು" ಎಂದು ಹೇಳಿದ ಸುಮಿತ್ರೆಯ ವಿಚಾರಸರಣಿ ಮೀರೆಯಿಂದಾಗಿ ಕೃಷ್ಣ ಮೂರ್ತಿಗೆ ತಿಳಿದು ಬಂತು. ಪಂಡಿತರ ಅನಾರೋಗ್ಯದಿಂದಾಗಿ ಅವರ ಕೆಲ ಸಕ್ಕೆ ಚ್ಯುತಿ ಬಂದರೆ ಸುಮಿತ್ರೆ ದುಡಿದು, ಕುಟುಂಬದ ಪೋಷಣೆಯ ಭಾರ ಹೊರುವುದು ಆತನಿಗೆ ಸರಿಕಾಣಲಿಲ್ಲ. ಎಂತಲೇ ಪಂಡಿತರ ಅನಾರೋಗ್ಯದ ಮಟ್ಟದ ಸ್ಪಷ್ಟ ಚಿತ್ರ ಬೇಕೆಂದು ಆತ ಡಾಕ್ಟರ್ ಸರ್ವೋತ್ತಮರಾಯರಲ್ಲಿಗೆ ಹೋದ.

ಅಲ್ಲಿ ಕೃಷ್ಣಮೂರ್ತಿಗೆ ಸುಮಿತ್ರೆ ಹೇಳಿದುದಕ್ಕಿಂತ ಹೆಚ್ಚಿನ ಮಾಹಿತಿ ಯೇನನ್ನು ಸಂಗ್ರಹಿಸುವುದು ಸಾಧ್ಯವಾಗಲಿಲ್ಲ. " ವಯಸ್ಸಾಗಿದೆ ನೋಡಿ ರಾಯರೆ. ದುರ್ಬಲ ಪ್ರಕೃತಿ. ಒಂದು ಕೊರತೆಯ ಉಪಶಮನಕ್ಕೆಂದು ಮದ್ದು ಕೊಟ್ಟರೆ, ಇನ್ನೊಂದಕ್ಕೆ ತೊಂದರೆ. ಪಂಡಿತರು ಹೇಳಿದ ಲಕ್ಷಣಗಳಿಂದ

ಒಂದು 'ಟ್ಯೂಮರ್' ಇದೆಯೆಂದು ಹೇಳಬಹುದು. ಎಕ್ಸ್‌ರೇ ತೆಗೆದು ನೋಡಬೇಕು. ಆಪರೇಶನ್ ಸಾಧ್ಯವೆ ?" ಎಂದಿದ್ದರು. "ಸದ್ಯ ಬೇಕಾದರೆ ನಾನು ಔಷಧಿ ಕೊಡುತ್ತೇನೆ. ತಾತ್ಕಾಲಿಕ ಉಪಶಮನ ಸಿಗಬಹುದು. ನಿಮಗೆ ಧೈರ್ಯವಿದ್ದರೆ ಇಲ್ಲೇ ಆಪರೇಶನ್ ಆದರೂ ಸಾಕು. ಆದರೂ ಮದರಾಸಿನ ತನಕ ಹೋಗಿಬರುವುದು ಉತ್ತಮ" ಎಂದು ಕೂಡ ಹೇಳಿದ್ದರು. ಮೂರ್ತಿ ಪಂಡಿತರನ್ನು ಈ ವಿಚಾರ ಪುನಃ ಪ್ರಶ್ನಿಸಿ ನಿರಾಶನಾದ. ಔಷಧಿ ತೆಗೆದು ಕೊಳ್ಳುವಂತೆ ಒತ್ತಾಯಪಡಿಸಲು ಸಾಕುಬೇಕಾಯಿತು.

ಇದರಿಂದಾಗಿ ನೊಂದುಕೊಂಡ ಮೂರ್ತಿ ಮದುವೆಗಾಗಿ ದ್ವಿಗುಣಿತ ಆಸಕ್ತಿಯಿಂದ ಪರಿಶ್ರಮ ವಹಿಸಿದರೂ, ಗೋಪಿಗೆ ಕಾಗದ ಬರೆದುದು ಹತ್ತಿರದ ಪರಿಶ್ರಮವು ಫಲಕೊಡುತ್ತಿಲ್ಲವೆಂಬ ತಿಳುವಳಿಕೆಯುಂಟಾದ ಮೇಲೆಯೆ. ಗುರುತು ಪರಿಚಯವಿದ್ದ ಹಲವಾರು ಗೆಳೆಯರು ಒಂದಿಲ್ಲೊಂದು ನೆಪದಿಂದ ತಪ್ಪಿಸಿಕೊಂಡರು. ಉತ್ತರ ಬರದೆ ಉಳಿದ ಮೂರ್ತಿಯ ಕಾಗದಗಳೂ ಕಡಿಮೆಯಿರಲಿಲ್ಲ. ಇದೇ ಸಂದರ್ಭದಲ್ಲಿ ಮುಂಬಯಿಯ ಸಹಪಾಠಿಯೊಬ್ಬ ಸಿಕ್ಕಿದಾಗ ಆತ ಗೋಪಿಯ ಕುರಿತು ಹೇಳಿದ ಮಾತುಗಳು ನೆನಪಿಗೆ ಬಂದು ಗೋಪಿಯನ್ನೊಮ್ಮೆ ಏಕೆ ಕೇಳಿ ನೋಡಬಾರದು ಎಂದು ಮೂರ್ತಿ ಯೋಚಿಸ್ಸಿದ. ಮೂರ್ತಿಯ ಕಾಗದ ಮುಂಬಯಿಯ ದಾರಿ ಹಿಡಿಯಿತು.

ಕಂಕನಾಡಿಯಲ್ಲಿ ಎಕ್ಸ್‌ರೇ ತೆಗೆಸಿ ನೋಡಲು ಪಂಡಿತರು ಒಪ್ಪಿದರು. ಹೀಗೆ ಎಕ್ಸ್‌ರೇ ಚಿತ್ರ ತೆಗೆಸಿದಾಗ ಸರ್ವೋತ್ತಮರಾಯರ ಸಂದೇಹ ನಿಜವಾಗಿ ಪಂಡಿತರ ಹೊಟ್ಟೆಯಲ್ಲಿ ವ್ರಣವಿದ್ದೆಯೆಂದು ಖಚಿತವಾಯಿತು. ಗೋಪಿಯ ಉತ್ತರ ನಿರೀಕ್ಷೆಯ ಕಾಲದಲ್ಲಿ ಮೂರ್ತಿಯನ್ನು ಗಲಿಬಿಲಿಯಲ್ಲಿ ಕೆಡವಿದುದು ಪಂಡಿತರ ಪ್ರಕೃತಿಯ ಎಕ್ಸ್‌ರೇ ವರದಿ. ಅಂದು ಬೆಳಿಗ್ಗೆ ಡಾ॥ ಸರ್ವೋತ್ತಮರಾಯರಿಂದ ಈ ಸಂಗತಿ ತಿಳಿದು ಆಪರೇಶನಿಗಾಗಿ ಪಂಡಿತರನ್ನು ಒತ್ತಾಯಪಡಿಸುವ ಬಗೆ ಹೇಗೆಂದು ಚಿಂತಿಸುತ್ತ ಮೂರ್ತಿ ಮಧ್ಯಾಹ್ನದ ಊಟಕ್ಕೆಂದು ಮನೆಯ ದಾರಿ ಹಿಡಿದಿದ್ದ. ಆದರೆ ಮನೆಗೆ ಬಂದಾಗ ಆತನಿಗೆ ಸಂತೋಷದ ಆಶ್ಚರ್ಯವೊಂದು ಕಾದಿತ್ತು. ನಗುಮೊಗದಿಂದಲೇ ಗಂಡನನ್ನು ಸ್ವಾಗತಿಸಿದ ಮೀರೆ, ತೆರೆದಿರಿಸಿದ್ದ ತಂತಿಯೊಂದನ್ನು ಗಂಡನ ಕೈಗೆ ಕೊಟ್ಟಳು. "ಭಾನುವಾರದ ಹಡಗಿನಲ್ಲಿ ಹೊರಡುತ್ತೇನೆ. ಉಡುಪಿಗಾಗಿ ಮಂಗಳೂರಿಗೆ

ಬರುತ್ತೇನೆ '' ಎಂದು ಗೋಪಿ ವರ್ತಮಾನ ಕಳುಹಿಸಿದ್ದ. ಗೆಳೆಯು ಬರುವ ನೆಂದು ತಿಳಿದ ಮೂರ್ತಿಯ ಸಂತೋಷದ ಸಂಭ್ರಮದಲ್ಲಿ ಎಕ್ಸ್‌ರೇ ವರದಿ ಸಂಪೂರ್ಣ ಮರೆತುಹೋಯಿತು. ಊಟ ಮುಗಿಸಿ ಇದೇ ಆನಂದದ ಗುಂಗಿ ನಲ್ಲಿ ಶಾಲೆ ತಲುಪಿದ್ದ ಮೂರ್ತಿ ಮಾತಿಲ್ಲದೆ ಕುಳಿತಿದ್ದ ಪಂಡಿತರನ್ನು ಕಂಡೊಡ ನೆಯೇ ತುಂಬಿದ ಉತ್ಸಾಹದಿಂದ ಹೇಳಿಬಿಟ್ಟ.

" ಸುಮಿತ್ರೆಯ ಗಂಡ, ಬರುತ್ತೇನೆಂದು ತಂತಿ ಕಳುಹಿಸಿದ್ದಾನೆ, ಪಂಡಿ ತರೆ ಮುಂಬಯಿ ನನ್ನ ಸ್ನೇಹಿತ. ಕೊನೆಗೂ ಸುಮಿಗೆ ಮುಂಬಯಿಯ ಗಂಡನೇ ಸಿಗುವ ಲಕ್ಷಣ ಕಾಣಿಸುತ್ತದೆ. "

ಪಂಡಿತರ ಆಸಕ್ತಿ ಕ್ಷಣಕಾಲ ಕೆರಳಿತು. ಆದರೆ ನಿರಾಸೆಯ ಅನುಭವದ ಪರಂಪರೆಯ ಹಿನ್ನೆಲೆಯಿಂದಾಗಿ ಈ ಆಸಕ್ತಿ ಚೇತರಿಸಿಕೊಂಡು ಎದ್ದು ನಗ ಲಿಲ್ಲ.

" ಮಂಗಳೂರಿಗೆ ಬಂದರೆ ಮುಗಿಯಿತೇನು ಮೂರ್ತಿರಾಯರೆ ? ಇನ್ನೇನು ಕಾದಿದೆಯೊ ? ದೇವರ ಇಚ್ಛೆ ಹೇಗಿದೆಯೆಂದು ಯಾರಿಗೆ ಗೊತ್ತು?"

" ನಿರಾಶಾವಾದಿಗಳಿಗೆ ನೀವು ಮಾದರಿ ಪಂಡಿತರೆ. ಒಳ್ಳೆಯದನ್ನು ನೀವು ಯೋಚಿಸುವುದೇ ಇಲ್ಲ. ಯಾವಾಗಲೂ ಕೆಡಕಾಗುವುದೆಂದೇ ನಿಮ್ಮ ಭಾವನೆ. "

ಮೂರ್ತಿಯ ಮಾತು ಕೇಳಿ ಪಂಡಿತರಿಗೆ ನಗು ಬರುವಂತಾಯಿತು. ಆದರೆ ಅಷ್ಟರಲ್ಲಿ ಸಂಸ್ಕೃತ ಉಪಾಧ್ಯಾಯ ಶ್ರೀಕಂಠಶಾಸ್ತ್ರಿಗಳು ಬಂದು ಅವ ರನ್ನು ಕರೆದುದರಿಂದ ಪಂಡಿತರು ಎದ್ದುಹೋದರು. ' ಟೀಚರ್ಸ್ ರೂಮ್ ' ನಲ್ಲಿ ಮೂರ್ತಿಯೊಬ್ಬನೇ ಉಳಿದಿದ್ದ.

ಇದೇ ಸಂಧಿ ಸಾಧಿಸಿಯೋ ಎಂಬಂತೆ ಸುಮಿತ್ರೆ ನಗು ನಗುತ್ತ ಅಲ್ಲಿಗೆ ಬಂದಳು. ಮೂರ್ತಿಯ ಬಳಿ ಬಂದವಳೇ ಆತುರದಿಂದ ಕೇಳಿದಳು.

" ಎಕ್ಸ್‌ರೇ ರಿಪೋರ್ಟು ಏನಾಯಿತು ಮಾಷ್ಟ್ರೆ. ಸರ್ವೋತ್ತಮ ರಾಯರು ಏನು ಹೇಳಿದರು ? "

ಗೋಪಿ ಬರಲಿದ್ದಾನೆ ಎಂಬ ಸಂಭ್ರಮದಲ್ಲಿ ಬೇರೆಲ್ಲ ವಿಚಾರಗಳನ್ನು ಮರೆತಿದ್ದ ಮೂರ್ತಿಗೆ ಎಕ್ಸ್‌ರೇ ವರದಿಯ ನೆನಪು ಬಂದುದು ಸುಮಿತ್ರೆಯ

ಮಾತು ಕೇಳಿಯೆ. ಗೋಪಿಯ ಬರುವಿಕೆಯ ಸಂಭ್ರಮದಲ್ಲಿ ಕಳವಳವೆಬ್ಬಿಸುವ ಈ ಪ್ರಶ್ನೆಯಿಂದಾಗಿ ಆತ ತುಸು ನೊಂದುಕೊಂಡ.

" ಅದೇನು ವಿಶೇಷವಿಲ್ಲ ಸುಮಿ. ಏನೋ ಒಂದು ಸಣ್ಣ 'ಟ್ಯೂಮರ್'ನ ಲಕ್ಷಣವಿದೆ. ಸುಲಭದ ಆಪರೇಶನಿನಿಂದ ಅದು ಹೋಗಬಹುದೆಂದು ಡಾಕ್ಟರರ ಅಭಿಪ್ರಾಯ ನಿನ್ನ ತಂದೆಯನ್ನೊಪ್ಪಿಸುವ ಭಾರ ನಿನಗೆ...."

ಮೂರ್ತಿ ಮಾತು ನಿಲ್ಲಿಸಿದ. ಆದರೆ ಸುಮಿತ್ರೆ ಉತ್ತರಕೊಡಲಿಲ್ಲ. ನಿಂತೇ ಇದ್ದಳು. ಕ್ಷಣಕಾಲ ತಡೆದು, ನಗುತ್ತ ಮೂರ್ತಿ ಮಾತು ಮುಂದುವರಿಸಿದ.

" ನೀನು ಮುಂಬಯಿಗೆ ಹೋದರೆ, ನಿನ್ನ ತಂದೆಯವರು ಅಲ್ಲಿಯ ತನಕ ಬರುವದಿಲ್ಲವೆಂದು ಹೇಳುತ್ತಾರೆಯೆ ? ಮಗಳೂ ಅಳಿಯನೂ ಒತ್ತಾಯ ಮಾಡಿದರೆಂದರೆ, ಪಂಡಿತರು ಪ್ರತಿಮಾತು ಹೇಳದೆ ಆಪರೇಶನಿಗೆ ಒಪ್ಪುತ್ತಾರೆ."

ಮೂರ್ತಿಯ ಮಾತು ಸುಮಿತ್ರೆಗೆ ಒಗಟಾಗಿ ಕಂಡು ಬರುತ್ತಿತ್ತು ಆಕೆಯ ಮುಖಭಾವದಲ್ಲಿ ಪ್ರಶ್ನಾರ್ಥಕ ಚಿಹ್ನೆಯಿತ್ತು. ಇದನ್ನು ಕಂಡು ಮೂರ್ತಿ ತನ್ನ ಮಾತನ್ನು ಬಿಡಿಸಿ ಹೇಳಿದ.

" ಮುಂಬಯಿಯಿಂದ ನನ್ನ ಸ್ನೇಹಿತನೊಬ್ಬ ಬರಲಿದ್ದಾನೆ ಸುಮೀ. ಕಾಗದದಲ್ಲಿ ನಾನು ಬರೆದಿರುವುದನ್ನು ನೋಡಿಯೇ ಓಡಿ ಬರುವ ಇನ್ನು ನಿನ್ನನ್ನು ಕಂಡಮೇಲೆ ಮದುವೆಯಾಗದೆ ಮಂಗಳೂರು ಬಿಡುತ್ತಾನೆಯೇ ಎಂದು ಸಂದೇಹ."

ಸುಮಿತ್ರೆಯ ಮುಖ ನಾಚಿಕೆಯಿಂದ ಕೆಂಪಾಯಿತು. ಆದರೆ ಮೂರ್ತಿಯ ನಗೆಮಾತು ಕೇಳಿ ಹಿಂದಿನಂತೆ ಈ ಸಲ ಆಕೆ ಓಡಿ ಹೋಗಲಿಲ್ಲ. ಬದಲು

" ನಿಮಗೆ ಯಾವಾಗಲೂ ತಮಾಷೆಯೆ. ಮುಂಬಯಿಯಿಂದ ಬರಲಿ; ಲಂಡನಿನಿಂದ ಬರಲಿ. ನನ್ನ ಮದುವೆಗಿಂತ ಹೆಚ್ಚು ಮುಖ್ಯವಾದದ್ದು ಈಗ ಅಪ್ಪಯ್ಯನ ಆರೋಗ್ಯ."

" ನಿನ್ನ ಮದುವೆಯಾದರೆ ಪಂಡಿತರ ಆರೋಗ್ಯ ತಿಂಗಳೊಳಗೆ ಸರಿಯಾಗುತ್ತದೆ ಸುಮೀ."

ಮದುವೆಯ ಮಾತೆತ್ತಿ ಸುಮಿತ್ರೆಯ ಹುಸಿ ಮುನಿಸನ್ನು ಕೆಣಕಿಯೇ ತೀರುವೆನೆಂದು ಮೂರ್ತಿ ತಿಳಿದಂತಿತ್ತು. ಹೊರನೋಟಕ್ಕೆ ಮನದೊಳಗಿನ ಭಾವನೆಗಳ ತಾಕಲಾಟವನ್ನು ಅದುಮಿ ಹಿಡಿದು ನಿಲ್ಲಿಸುವ ಪ್ರಯತ್ನವನ್ನು ಸುಮಿತ್ರೆ ಮಾಡಿದ್ದರೂ, ತಂದೆಯ ಆರೋಗ್ಯ ಸುಧಾರಿಸೀತು ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಮದುವೆಯ ಮಾತು ಆಕೆಯ ಹೃದಯದಲ್ಲಿ ಉಕ್ಕಿಸಿದ ಆನಂದದ ತೆರೆಗಳನ್ನು ಆಕೆಯ ಮುಖ ಕೆಂಪೇರಿದುದರಿಂದಲೇ ಕಂಡುಕೊಳ್ಳಬಹುದಿತ್ತು. ವಿಷಯವನ್ನು ಬದಲಿಸಿಯಾದರೂ ಮನಸ್ಸಿನ ತುಮುಲವನ್ನು ನಿಲ್ಲಿಸುವ ಉದ್ದೇಶದಿಂದ ಸುಮಿತ್ರೆ ಹೇಳಿದಳು.

" ಹೋಗಲಿ ಮಾಷ್ಟ್ರೆ. ಸಿಲೆಕ್ಶನ್ ಹತ್ತಿರ ಬಂದಿದೆ. ನನ್ನ ' ಮ್ಯಾಥ್ಸ್ ' ಗೇನು ಮಾಡುತ್ತೀರಿ ? "

ಮೂರ್ತಿಯ ತುಂಟತನ ನಿಂತಿರಲಿಲ್ಲ.

" ನಾಳೆ ಬಂದಾಗ ನಿನ್ನ ಗಂಡನೊಡನೆಯೇ ಕೇಳಲ್ಲ. ಬಿ. ಎಸ್. ಸಿ. ಯಲ್ಲಿ ಸೆಕೆಂಡ್ ಕ್ಲಾಸ್ ಆನರ್ಸ್ ತೆಗೆದುಕೊಂಡವನು ಈಗ ಉತ್ತಮ ಎಕೌಂಟೆಂಟ್ ಆಗಿದ್ದಾನೆ. "

" ನೀವು ತಮಾಷೆ ಮಾಡುತ್ತಲೇ ಇರಿ. ನಾನು ಹೋಗುತ್ತೇನೆ " ಎಂದವಳೇ ಸುಮಿತ್ರೆ ಬಾಗಿಲ ಕಡೆ ನಡೆದಳು. ನಗುನಗುತ್ತಲೇ ಮೂರ್ತಿ ಬಾಗಿಲು ತಲುಪಿದ್ದ ಸುಮಿತ್ರೆಯನ್ನು ಕರೆದು ಹೇಳಿದ.

" ನಾಡಿದ್ದು ಬುಧವಾರ ರಜೆಯಿದೆಯಲ್ಲ. ಬೆಳಿಗ್ಗೆ ಮನೆಗೆ ಬಾ. ಒಂದೆರಡು ಘಂಟೆ ನಿನ್ನ ' ಮಾಥ್ಸ್ ' ನೋಡೋಣ. "

ಮಾತುಕೇಳಿ ಹಿಂದಿರುಗಿ ಮೂರ್ತಿಯನ್ನು ನೋಡಿ ಕೃತಜ್ಞತೆಯಿಂದ ನಕ್ಕಿದ್ದ ಸುಮಿತ್ರೆ ಮತ್ತೊಂದು ಕ್ಷಣದಲ್ಲಿ ಅದೃಶ್ಯಳಾದಳು.

ಸಿಲೆಕ್ಶನ್ ಪರೀಕ್ಷೆ ಸಮೀಪಿಸುತ್ತಿದ್ದುದರಿಂದ ' ಮ್ಯಾಥ್ಸ್ ' ಭೀತಿ ಸುಮಿತ್ರೆಯನ್ನು ಸೇರಿಕೊಂಡು ಓದಿನಕಡೆ ಆಕೆ ಹೆಚ್ಚು ಗಮನ ಕೊಡುವಂತೆ ಮಾಡಿದ್ದಿತು. ಸುಮಿತ್ರೆಯ ಬುದ್ಧಿಮತ್ತೆ ಚುರುಕಾಗಿಯೇ ಇದ್ದರೂ ಹಾಳಾದ ' ಲೆಕ್ಕ 'ವೊಂದು ಪರೀಕ್ಷೆಯ ವಿಷಯವಾಗಿ ಇರದಿದ್ದರೆ ಎಂಥ ಪಾಠಗಳನ್ನೂ ಅರಗಿಸಿಕೊಂಡೇನು ಎಂದು ಸುಮಿತ್ರೆ ತನಗೆ ಒಗ್ಗದ ' ಮ್ಯಾಥ್ಸ್ ' ಕಡೆ ಬೇಸರದ ದೃಷ್ಟಿಯಿಂದ ನೋಡುತ್ತಿದ್ದಳು. ಆದರೂ ತನ್ನ ಭವಿಷ್ಯವೆಲ್ಲ ಪರೀಕ್ಷೆ

ಯಲ್ಲಿ ಕೇಂದ್ರೀಕರಿಸಿದೆಯೆಂಬ ಭೀತಿ, ಹೇಗಾದರೂ ಇದರ ದವಡೆಯೊಳಗಿಂದ ಪಾರಾಗಿ ಹೋಗಬೇಕು ಎಂಬ ನಿಶ್ಚಯವನ್ನುಂಟು ಮಾಡಿದ್ದುದರಿಂದ, ತನ್ನ 'ಲೆಕ್ಕ' ದ ಜ್ಞಾನವನ್ನು ಪರೀಕ್ಷೆಯ ಮಟ್ಟಿಗಾದರೂ ಸುಧಾರಿಸಿಕೊಳ್ಳಲು ಮೂರ್ತಿಯ ಮೊರೆ ಹೋಗಬೇಕೆಂದು ನಿಶ್ಚಯಿಸಿಕೊಂಡಿದ್ದಳು.

ಕೃಷ್ಣಮೂರ್ತಿಯೊಡನೆ ಮಾತು ಮುಗಿಸಿ ತರಗತಿ ಸೇರಲು ಅವಸರವಸರವಾಗಿ ಹೆಜ್ಜೆ ಹಾಕುತ್ತಿದ್ದ ಸುಮಿತ್ರೆಗೆ ಒಂದು ವಿಚಿತ್ರ ಅನುಭವದ ಅರಿವುಂಟಾಗಿದ್ದಿತು. ಅವರೊಡನೆ ಮಾತನಾಡುವಾಗ ಮದುವೆಯ ಮಾತು ಬಂದುದು ಸಾಂದರ್ಭಿಕವಾಗಿ. ತಂದೆಯ ಆರೋಗ್ಯದ ಕುರಿತು ಮಾತು ಆರಂಭವಾಗಿ ಪರ್ಯಾಯವಾಗಿ ಮದುವೆಯ ಕಡೆ ತಿರುಗಿದ್ದಿತಷ್ಟೆ. ಆದರೆ ಮೂರ್ತಿಯ ಮುಂಬಯಿ ಸ್ನೇಹಿತ ಇಷ್ಟರಲ್ಲೇ ಸುಮಿತ್ರೆಯ ಮನಸ್ಸಿನಲ್ಲಿ ಅನಧಿಕೃತ ಪ್ರವೇಶಮಾಡಿದ್ದ. ಇದಕ್ಕೆ ಮುಖ್ಯ ಕಾರಣ, ತಂದೆಯ ಅನಾರೋಗ್ಯದ ಎಕ್ಸ್‌ರೇ ವರದಿಯ ಮಹತ್ವವನ್ನು ಕಡಿಮೆಮಾಡಿ, ಸುಮಿತ್ರೆಯ ಶಂಕೆ ಕುಶಂಕೆಗಳಿಗೆ ಮೂರ್ತಿ ಧೈರ್ಯದ ಬೇಲಿ ಹಾಕಿದುದೇ. ಸಣ್ಣದೊಂದು ಶಸ್ತ್ರಕ್ರಿಯೆಯಿಂದ ತಂದೆಯ ಆರೋಗ್ಯ ಸುಧಾರಿಸುವುದಾದರೆ, ತಾಯಿ ಪಟ್ಟ ಕಷ್ಟದ ಪುನವರ್ತನೆಯನ್ನು ನೋಡುವ ದುಃಖದ ಪ್ರಸಂಗ ಬಾರದೆ ಉಳಿಯುವುದಲ್ಲ ಎಂಬ ಸಂತೋಷದಿಂದಾಗಿ ಸುಮಿತ್ರೆಗೆ ತನ್ನ ಮದುವೆಯ ಮಹತ್ವ ಎಂದಿಗಿಂತ ತುಸು ಸ್ಪಷ್ಟವಾಗಿ ಗೋಚರಿಸಿತ್ತು. "ನಿನ್ನ ಮದುವೆಯಾದರೆ ಪಂಡಿತರ ಆರೋಗ್ಯ ತಿಂಗಳೊಳಗೆ ಸರಿಯಾಗುತ್ತದೆ ಸುಮೀ." ಎಂಬ ಮೂರ್ತಿಯ ಆಶ್ವಾಸನೆ ಆತನ ಮುಂಬಯಿ ಸ್ನೇಹಿತನನ್ನು ಬಲವಂತದಿಂದ ಆಕೆಯಿದಿರು ಎಳೆದು ತರುತ್ತಿದ್ದಿತು.

ಯಾರೋ ಬರುತ್ತಾರೆ. ಒಂದು ಪ್ರದರ್ಶನಕ್ಕಿರಿಸಿದ ವಸ್ತುವಿನಂತೆ ತನ್ನನ್ನು ನೋಡಿ ಹೋಗಬಹುದು. ಇಂಥ ವ್ಯವಹಾರದ ಅನುಚಿತತೆಯಿಂದ ಬೇಸರ ಹಿಡಿದು ಹೋಗಿದ್ದ ಸುಮಿತ್ರೆಗೆ ಮೂರ್ತಿಯ ಮುಂಬಯಿ ಸ್ನೇಹಿತನೂ ಇಂಥ ಪರಂಪರೆಯನ್ನು ಬೆಳೆಸಿಕೊಂಡು ಹೋಗಲು ಬರುವ ಇನ್ನೊಬ್ಬ ಮಹಾನುಭಾವ ಏಕಾಗಿರಬಾರದು ಎಂಬ ಶಂಕೆ ಸ್ವಾಭಾವಿಕವಾಗಿಯೇ ಬಂದಿತಾದರೂ, ಮೂರ್ತಿಯ ಧೈರ್ಯದಲ್ಲಿ ಆಕೆ ಆಸರೆಯನ್ನು ಕಂಡುಕೊಂಡಳು. ಮನಸ್ಸು ಮುಂಬಯಿಯ ವೈಭವದ ಕನಸು ಕಾಣತೊಡಗಿತು.

ಅಪ್ಪಯ್ಯನ ಶಸ್ತ್ರಕ್ರಿಯೆಗೆ ತನ್ನ ಮದುವೆ ಸಹಾಯಕವಾಗಬಹುದು. ತಂದೆಯ ದೊಡ್ಡದೊಂದು ಭಾರ ಇಳಿಸಲು ತನ್ನ ಮದುವೆ ಎಡೆಮಾಡಿ ಕೊಡಬಹುದು. ಪದ್ಮಾವತಿಯ ಓದು ತಡೆಯಿಲ್ಲದೆ ಮುಂದೆ ಸಾಗಲು ಆಸ್ಪದ ಕೊಟ್ಟಂತಾಗುವುದು. ಮನೆತನದ ದುಃಖ ನಿವಾರಣೆಯಾಗಿ ಸುಖದ ದಿನಗಳು ಮತ್ತೆ ಕಾಣಿಸಿಕೊಳ್ಳಬಹುದು.

ಕಲ್ಪನಾ ಸಾಮ್ರಾಜ್ಯದಲ್ಲಿ ವಿಹರಿಸುತ್ತ ತರಗತಿ ಸೇರಿದ ಸುಮಿತ್ರೆಗೆ ಅಂದಿನ ಪಾಠಗಳ ಕಡೆ ಸ್ವಲ್ಪವೂ ಲಕ್ಷ್ಯವಿರಲಿಲ್ಲ. ಮನಸ್ಸು ವಿಹ್ವಲವಾಗಿತ್ತು. ತರ್ಕ, ಕುತರ್ಕ, ಆಸೆ, ನಿರಾಶೆ, ಧೈರ್ಯ ಅಧೈರ್ಯಗಳ ವರ್ತುಲದಲ್ಲಿ ಮೂರ್ತಿಯ ಮುಂಬಯಿ ಸ್ನೇಹಿತನ ಕನಸು ಕಾಣುತ್ತಿದ್ದ ಸುಮಿತ್ರೆಗೆ ಅಂದಿನ ಅನುಭವ ತೀರ ವಿಚಿತ್ರವೆ.

ಸಂಜೆ ಮನೆಸೇರಿ ರಾತ್ರಿಯ ಅಡುಗೆಯ ಸಿದ್ಧತೆ ನಡೆಸಿದ್ದ ಸುಮಿತ್ರೆಗೆ ತಂಗಿ ಪದ್ಮಾವತಿ ತಡವಾಗಿ ಬಂದುದು ತಿಳಿಯಲಿಲ್ಲ. ಪುಸ್ತಕಗಳನ್ನೆಲ್ಲ ಬಿಸಾಡಿ, ಅನ್ನ ಬಸಿಯುತ್ತಿದ್ದ ಅಕ್ಕನ ಕಣ್ಣುಗಳಿಗೆ ಕೈ ಹಿಡಿದಾಗ ಸುಮಿತ್ರೆ ನಿತ್ಯದ ಉತ್ಸಾಹಕ್ಕಿಂತ ಹೆಚ್ಚಿನ ಉತ್ಸಾಹದಿಂದಲೇ ತಂಗಿಯನ್ನು ಸ್ವಾಗತಿಸಿದಳು.

“ ಬಿಡೆ ಪದ್ಮಾ . ಅನ್ನದ ಚಟಿಗೆ ಕಾಣಿಸುವುದಿಲ್ಲವೇನೇ. ತಿಳಿ ಚೆಲ್ಲಿ ಕಾಲೆಲ್ಲ ಸುಟ್ಟು ಹೋದೀತು ನೋಡು. ”

ಆದರೆ ಪದ್ಮಾವತಿಯ ಸಡಗರ ಬೇರೆ ರೀತಿಯದಾಗಿತ್ತು.

“ ಇರಲಿ ಬಿಡು. ಹಾಗೆಲ್ಲ ಬೀಳಲಿಕ್ಕೆ ಅದನ್ನು ಹಿಡಿದಿರುವುದು ಅಕ್ಕ. ನೀನು ಮೀರಕ್ಕನ ಮನೆಗೆ ಹೋಗಿ ಬಂದಿಯೋನೇ ?”

“ ಇಲ್ಲ, ಯಾಕೆ ?”

“ಮೂರ್ತಿ ಮಾಷ್ಟ್ರಿಗೆ ತಂತಿಬಂದಿದೆ. ಮುಂಬಯಿಯಿಂದ ಅವರ ಸ್ನೇಹಿತರು ಬರುತ್ತಾರಂತೆ ಬರುವ ವಾರ. ನಾಡಿದ್ದು ಆದಿತ್ಯವಾರ ಹೊರಡುತ್ತಾರಂತೆ. ಗುರುವಾರ ಶುಕ್ರವಾರದಲ್ಲಿ ಬರಬಹುದೆಂದು ಕಾಣುತ್ತದೆ.”

“ ಅದಕ್ಕೆ ?”

“ ಸುರುಮಾಡಿದಳು ಸಂಭಾವಿತತನ ತೋರಿಸಲಿಕ್ಕೆ. ಅವರು ಬರುವುದು ಯಾಕೆಂದು ಗೊತ್ತಿದ್ದು ಕೂಡ ಕೇಳುತ್ತಾಳೆ. ನಿನ್ನನ್ನು ಮುಂಬಯಿಗೆ

ಕರೆದುಕೊಂಡು ಹೋಗಲು ಬರುತ್ತಾರೆಯೆ. ಮದುವೆಯ ನಿಶ್ಚಯಕ್ಕೆ ಬರುತ್ತಾರೆ ಅಕ್ಕಾ."

ಅಕ್ಕನ ಕುತ್ತಿಗೆಗೆ ಜೋತುಬಿದ್ದು ಜಡೆಯೊಂದಿಗೆ ಜಗಳವಾಡುತ್ತಿದ್ದ ಪದ್ಮಾವತಿಯ ಮಾತು ಕೇಳಿ, ಅನ್ನದ ಚರಿಗೆಯನ್ನು ಕೆಳಗಿಳಿಸಿದ ಸುಮಿತ್ರೆ ತಂಗಿಯನ್ನು ಬಿಗಿ ಹಿಡಿದು

"ನೀನೂ ತಮಾಷೆ ಆರಂಭಿಸಿದಿಯೇನೇ ಪದ್ಮಾ" ಎಂದು ಮೃದುವಾಗಿಯೇ ಕೇಳಿದಳು.

ಪದ್ಮಾವತಿ ಮುಖ ಮೇಲಕ್ಕೆತ್ತಿ ಅಕ್ಕನನ್ನು ನೋಡಿದಾಗ ತುಂಟತನದ ನಗೆ ಮುಖದಲ್ಲಿ ಲಾಸ್ಯವಾಡುತ್ತಿತ್ತು.

"ತಮಾಷೆಗಲ್ಲಕ್ಕ. ಸತ್ಯವನ್ನೇ ಹೇಳಿದೆ. ಮೂರ್ತಿ ಮಾಷ್ಟ್ರ ತೀರ ಹತ್ತಿರದ ಸ್ನೇಹಿತರಂತೆ ಅವರು. ಮೀರಕ್ಕನ ಲೆಕ್ಚರ್ ಕೇಳಿದಾಗ ನನಗೆ, ಮದುವೆಗೆ ದಿನವಿಡುವುದು ಮಾತ್ರ ಬಾಕಿಯುಳಿದಿದೆ ಎನ್ನುವಂತಾಗಿತ್ತು."

ಸುಮಿತ್ರೆ ಕ್ಷಣಕಾಲ ತಡೆದು ಉತ್ತರ ಕೊಟ್ಟಳು.

"ನಿನಗೆ ಹುಚ್ಚು ಪದ್ಮಾ. ಮದುವೆಯ ಮಾತು ಯಾಕೆ ಈಗ? ಅಪ್ಪಯ್ಯನಿಗೆ ಹೇಗಾದರೂ ಬೇಗ ಗುಣವಾದರೆ, ಮದುವೆಗಿದುವೆ ಎಲ್ಲ ಮತ್ತೆ ನೋಡಿಕೊಳ್ಳಬಹುದು."

ಅಕ್ಕನ ಬಿಗಿಹಿಡಿತದೊಳಗಿಂದ ಮೈಯನ್ನು ಸಡಿಲಿಸಿಕೊಂಡ ಪದ್ಮಾವತಿ ಅಕ್ಕನ ತೊಡೆಯ ಮೇಲೆ ತಲೆಯಿರಿಸಿ ಮುಖನೋಡುತ್ತ ಹಾಯಾಗಿದ್ದಳು. ಮಗುವಿನಂತೆ ತನ್ನ ಮುಗ್ಧ ಸೌಂದರ್ಯವನ್ನು ಹರಡಿ ಮಲಗಿದ್ದ ಪದ್ಮಾವತಿಯನ್ನು ನೋಡಿದಾಗ ಸುಮಿತ್ರೆಯ ಕಕ್ಕುಲಾತಿ ಮೇರೆ ಮೀರಿ ಬಂತು. ತಂಗಿಯ ತಲೆಯನ್ನು ಪ್ರೀತಿಯಿಂದ ನೇವರಿಸ ತೊಡಗಿದಳು.

"ಅಕ್ಕಾ........"

"ಏನು ಪದ್ಮಾ?"

"ನೀನು ಬೇಸರಪಟ್ಟುಕೊಳ್ಳದಿದ್ದರೆ ನಾನೊಂದು ಮಾತು ಹೇಳುತ್ತೇನೆ."

"ಏನಮ್ಮಾ ಅದು?"

" ಈ ಸಲ ಮೂರ್ತಿ ಮಾಸ್ಟ್ರ ಸ್ನೇಹಿತರು ಮನೆಗೆ ಬರುವಾಗ ನಾನು ಇಲ್ಲಿರುವುದಿಲ್ಲ. "

" ನೀನು ಇದ್ದರೆ ಏನು ತೊಂದರೆಯಮ್ಮಾ ? "

" ನಾನಿರುವುದಿಲ್ಲಕ್ಕ. ಕಳೆದ ಸಲ ಜ್ವರ ಬಂತು; ಮನೆಯಲ್ಲೇ ಇದ್ದೆ. ಹೀಗಾಗಿ ಸಿಕ್ಕಿಬಿದ್ದೆ. ಈ ಸಲ ಖಂಡಿತವಾಗಿ ಮನೆಯಲ್ಲಿರುವುದಿಲ್ಲಕ್ಕ. ಎಲ್ಲ ಮುಗಿದ ಮೇಲೆ ನಾನು ಬರುತ್ತೇನೆ. "

" ಎಂಥ ಮಾತು ಪದ್ಮಾ. ನೀನಿದ್ದರೆ ನನಗೆ ಬೇಸರವೆ ? ಒಂದು ವೇಳೆ ಯಾರಾದರೂ ಬಂದರೂ, ಬಂದು ನೋಡಿ ಏನು ಹೇಳಿದರೂ ನಾನದನ್ನೆಲ್ಲ ಮನಸ್ಸಿಗೆ ಹಚ್ಚಿಕೊಳ್ಳುವವಳೇನೇ ? "

ಪದ್ಮಾವತಿ ತುಸು ಹೊತ್ತು ಸುಮ್ಮಗಿದ್ದವಳು ಮೆಲ್ಲಗೆ ಮಾತು ಮುಂದು ವರಿಸಿದಳು.

" ಅಪ್ಪಯ್ಯ ಮನಸ್ಸಿಗೆ ಹಚ್ಚಿಕೊಳ್ಳುತ್ತಾರಕ್ಕ. ನನ್ನಿಂದಾಗಿಯೇ ಈ ಮನೆಗೆ ಇಲ್ಲದ ಅನಿಷ್ಟ ಬಂತೆಂದು ಕಾಣುತ್ತದೆ. "

ಪದ್ಮಾವತಿಯ ಬೊಗಸೆಗಣ್ಣುಗಳಲ್ಲಿ ನೀರು ತುಂಬಿದುದನ್ನು ನೋಡಿ ಸುಮಿತ್ರೆಯ ಕಳವಳ ಹೆಚ್ಚಾಯಿತು.

" ಥೂ ! ಹುಚ್ಚು ಹುಡುಗಿ. ಏನೇನೆಲ್ಲ ನೆನೆಸಿಕೊಂಡು ಅಳುವುದೆ ? ಅಪ್ಪಯ್ಯನಿಗೆ ಗೊತ್ತಾದರೆ ಅವರು ಊಟವೇ ಮಾಡುವುದಿಲ್ಲ. ನೀನು ಸುಮ್ಮಗೆ ಇಲ್ಲದ್ದನ್ನು ಕಟ್ಟಿಕೊಳ್ಳಬೇಡ. ನಿನ್ನಿಂದಾಗಿ ಅನಿಷ್ಟವೆ ? ಇನ್ನು ಅಂಥ ಮಾತು ಹೇಳಿದರೆ ಹೊಡೆದು ಬಿಡುತ್ತೇನೆ ನೋಡು. "

ಸೀರೆಯ ಸೆರಗಿನಿಂದ ಕಣ್ಣೊರಸಿಕೊಂಡ ಪದ್ಮಾವತಿ ಅಕ್ಕನ ಮಾತು ಕೇಳಿ ನಕ್ಕಾಗ ಸುಮಿತ್ರೆಯ ಹೃದಯದ ಕಳವಳ ಕೊಂಚ ಕಡಿಮೆಯಾಯಿತು.

ಮನೆಯ ಕೆಲಸ, ಶಾಲೆಯ ಓದು, ತಂದೆಯ ಔಷಧಿ ಉಪಚಾರಗಳ ಕಡೆ ಗಮನ, ಇವೆಲ್ಲವುಗಳಿಂದಾಗಿ ಸುಮಿತ್ರೆಗೆ ಮುಂದಿನ ಬುಧವಾರದ ತನ ಕವೂ ಮೂರ್ತಿಯ ಮನೆಗೆ ಹೋಗಿಬರಲು ಅವಕಾಶ ಸಿಗಲಿಲ್ಲ. ಮನಸ್ಸು ಅದೇಕೋ ಮೀರಕ್ಕನೊಡನೆ ಮಾತನಾಡಿ ಬರಲು ತವಕಿಸುತ್ತಿತ್ತು. ಪ್ರಾಸಂಗಿಕ ವಾಗಿ ಗುರುವಿನ ಮುಂಬಯಿ ಸ್ನೇಹಿತರ ಕುರಿತಾದ ಮಾತು ಬರಬಹು

ದೆಂಬಾಸೆ ಈ ತೆರನಾದ ಕುತೂಹಲಕ್ಕೆ ಮುಖ್ಯ ಕಾರಣವಾಗಿದ್ದಿರಬಹುದಾದರೂ, ಸುಮಿತ್ರೆಗೆ ಮನೆ ಬಿಡಲು ಅವಕಾಶ ದೊರಕಲಿಲ್ಲ.

ಬುಧವಾರ ಶಾಲೆಗೆ ಏನೋ ಹಬ್ಬದ ನಿಮಿತ್ತ ರಜೆಯಿದ್ದುದರಿಂದಲೇ ಮೂರ್ತಿ ಸುಮಿತ್ರೆಯನ್ನು ಮನೆಗೆ ಬರಹೇಳಿದ್ದ. ಬೆಳಿಗ್ಗೆ ಎದ್ದವಳು ಸುಮಿತ್ರೆ ಬೇಗ ಬೇಗ ಕೆಲಸ ಮುಗಿಸಿ ಮೀರಕ್ಕನ ಮನೆಗೆ ಹೋಗುವ ಸಿದ್ಧತೆಯಲ್ಲಿ ತೊಡಗಿದಳು. ತಂಗಿಯನ್ನ ಸ್ನಾನವಾದ ಮೇಲೆ ಆಕೆಗೆ ಹೆಳಲು ಹಾಕಿ ಸಿಂಗರಿಸಿದಳು. ಮಧ್ಯಾಹ್ನದ ಅಡಿಗೆಗೆ ತಯಾರಿ ನಡೆಸಿದಳು. ತಂದೆ ಇನ್ನೂ ಎದ್ದಿಲ್ಲವಲ್ಲ; ಮತ್ತೆ ಬರುವಾಗ ಹೊತ್ತೇರಿ ಹೋಗಬಹುದು ಎಂದು ಸುಮಿತ್ರೆ ಪದ್ಮಾವತಿಯನ್ನು ಕರೆದು "ಅಪ್ಪಯ್ಯ ಎದ್ದಿದ್ದಾರೆಯೆ ನೋಡಮ್ಮ. ಕಾಫಿ ಸಿಮು ಹಿಡಿದುಹೋಗಿದೆ" ಎಂದಾಗ "ಅವರು ಎದ್ದು ಅರ್ಧ ಘಂಟೆಯಾಯಿತು. ಕಾಫಿ ತೆಗೆದುಕೊಂಡು ಬಾ" ಎಂದು ಪದ್ಮಾವತಿಯ ಉತ್ತರ ಬಂತು. ಸುಮಿತ್ರೆ ಕಾಫಿ ಹಿಡಿದುಕೊಂಡು ಪಂಡಿತರ ಮಲಗುವ ಕೋಣೆಗೆ ಬಂದಾಗ ಅವರ 'ಮಂಗಳಾಷ್ಟಕ' ಪಠಿಸುವ ವಿಧಿ ಮುಗಿದಿದ್ದಿತಷ್ಟೆ. ಮಗಳು ಕಾಫಿ ತಂದಾಗ ಪಂಡಿತರು ತುಂಬ ಪ್ರೀತಿಯಿಂದ ಕರೆದರು.

"ಸುಮೀ........"

"ಏನಪ್ಪಯ್ಯ ?"

"ನಿನ್ನೆ ರಾತ್ರೆ ಕೆಮ್ಮು ಸ್ವಲ್ಪ ಹೆಚ್ಚಾಗಿತ್ತು ನೋಡಮ್ಮ. ಇವತ್ತು ಶಾಲೆಗೆ ರಜೆಯೂ ಇದೆ. ಬಧವಾರ. ಸ್ವಲ್ಪ ನೀರು ಕಾಯಿಸುತ್ತೀಯಾ ? ಎಣ್ಣೆ ಹಚ್ಚಿಕೊಂಡು ಸ್ನಾನ ಮಾಡಿದರೆ ಒಳ್ಳೆಯದಾಗಬಹುದೆಂದು ತೋರುತ್ತದೆ."

ಪಂಡಿತರು ಹೀಗೆ ಕೇಳಿದ್ದುದು ಇದೇ ಮೊದಲನೆಯ ಸಲವಾಗಿರಲಿಲ್ಲ. ಆದರೆ ಸುಮಿತ್ರೆಯ ಮನಸ್ಸಿನಲ್ಲಿ ಇಂಥ ಕೇಳಿಕೆಯಿಂದ ಬೇಸರ ಮೂಡಿದುದು ಇದೇ ಮೊದಲನೆಯ ಸಲ. ಇಂದಾದರೂ ಮೂರ್ತಿ ಮಾಷ್ಟ್ರ ಮನೆಗೆ ಹೋಗಿ ಬರಬೇಕು; ಲೆಕ್ಕದ ಪಾಠಗಳನ್ನು ಸುಧಾರಿಸಿಕೊಳ್ಳುವುದರ ಜೊತೆಗೆ, ಮೂರ್ತಿಯ ಮುಂಬಯಿ ಗೆಳೆಯರ ವರ್ತಮಾನವೂ ತಿಳಿಯಬಹುದು ಎಂದಾಶಿಸಿದ್ದಾಕೆಗೆ ತಂದೆ ತನ್ನನ್ನು ನಿಲ್ಲಿಸಿಕೊಳ್ಳುವರಲ್ಲ ಎಂದು ತುಸು ಬೇಸರವಾದುದು ಸ್ವಾಭಾವಿಕವೆ. ಆದರೆ ತಗ್ಗಿಸಿದ ಮುಖ ಮೇಲಕ್ಕೆತ್ತಿ ತಂದೆಯ

ಬಾಡಿ ಹೋದ ಮುಖವನ್ನು ಮತ್ತೊಮ್ಮೆ ನೋಡಿದಾಗ ಸುಮಿತ್ರೆಯ ಬೇಸರ ಮಾಯವಾಗಿತ್ತು.

"ಆಗಬಹುದು ಅಪ್ಪಯ್ಯ. ನೀರು ಕಾಯಿಸುತ್ತೇನೆ. ಕಾಫಿ ತಣ್ಣಗಾಗಿ ಹೋಗುತ್ತದೆ. ಕುಡಿಯಿರಿ" ಎಂದವಳೇ 'ಪದ್ಮಾ' ಎಂದು ಕರೆಯುತ್ತ ಸುಮಿತ್ರೆ ತಂಗಿಯನ್ನು ಹುಡುಕಿಕೊಂಡು ಅಂಗಳಕ್ಕೆ ಬಂದಳು. ಪೂಜೆಗೆಂದು ಪಾರಿಜಾತ ಹೂಗಳನ್ನು ಸಂಗ್ರಹಿಸುತ್ತಿದ್ದ ಪದ್ಮಾವತಿ "ಏನಕ್ಕಾ ?" ಎಂದು ಅಲ್ಲಿಂದಲೇ ಕೂಗಿಕೊಂಡಳು.

"ನೀನು ಮೀರಕ್ಕನ ಮನೆಗೆ ಹೋಗುತ್ತೀಯಲ್ಲ ?"

"ನೀನು ಬರುವುದಿಲ್ಲವೇನೆ ?"

"ಇಲ್ಲಮ್ಮ. ಅಪ್ಪಯ್ಯ ಎಣ್ಣೆ ಹಚ್ಚಿಕೊಂಡು ಸ್ನಾನ ಮಾಡುತ್ತಾರಂತೆ, ನಾನು ಬರುವಾಗ ಮಧ್ಯಾಹ್ನವಾಗಬಹುದು. ಊಟ ಮಾಡಿಯೇ ಬರುತ್ತೇನೆ. ಮಾಷ್ಟ್ರ ಹತ್ತಿರ ಹಾಗೆ ಹೇಳುತ್ತೀಯಾ ?"

"ಆಯಿತಲ್ಲ ಮತ್ತೇನು ?" ಎಂದು ತಂಗಿ ಹೇಳಿದುದನ್ನು ಕೇಳಿ ಸುಮಿತ್ರೆ ನೀರು ಕಾಯಿಸಲೆಂದು ಬಚ್ಚಲು ಮನೆಯ ಕಡೆ ನಡೆದಳು.

ಎಷ್ಟು ಬೇಗವೆಂದರೂ ಗೆಳತಿಯರ ಮನೆಗಳನ್ನೆಲ್ಲ ಸುತ್ತಿಕೊಂಡು ಪದ್ಮಾವತಿ ಮೂರ್ತಿಯ ಮನೆ ತಲುಪಿದಾಗ ಘಂಟೆ ಹತ್ತೂವರೆಯಾಗಿದ್ದಿತು. ಓಡುತ್ತಲೇ ಬಂದು ಗೇಟಿನ ಕೈಬಾಗಿಲು ದೂಡಿ 'ಮೀರಕ್ಕಾ' ಎಂದು ಕರೆಯುತ್ತ ಒಳಬಂದ ಪದ್ಮಾವತಿಗೆ ಜಗಲಿಯಲ್ಲಿ ಆಡುತ್ತಿದ್ದ ಮಗು ಸುರೇಶನ ಹೊರತಾಗಿ ಬೇರಾರೂ ಕಾಣಿಸಲಿಲ್ಲ. ಓಡಿ ಬರುತ್ತಿದ್ದ ಪದ್ಮಾವತಿಯನ್ನು ಕಂಡು 'ಪಮ್ಮಾ' ಎಂದು ಕೂಗಿಕೊಂಡ ಮಗುವನ್ನು ಪದ್ಮಾವತಿ ಬಂದವಳೇ ಹಿಡಿದೆತ್ತಿದಳು. ನಗುತ್ತಿದ್ದ ಮಗುವನ್ನೆತ್ತಿಕೊಂಡು ತಾನೂ ನಗುತ್ತಾ 'ಮೀರಕ್ಕಾ' ಎಂದು ಪುನಃ ಕರೆದು ಒಳಗೆ ಹೋಗಲು ಬಾಗಿಲ ಬಳಿ ಬಂದಾಗ, ಬಾಗಿಲಲ್ಲಿ ಅಪರಿಚಿತ ವ್ಯಕ್ತಿಯೊಂದು ನಿಂತಿತ್ತು. ಪದ್ಮಾವತಿ ಗಕ್ಕನೆ ನಿಂತುದನ್ನು ಕಂಡು ಆ ವ್ಯಕ್ತಿಯ ಹಿಂದಿದ್ದ ಮೂರ್ತಿ "ಏನೇ ಪದ್ಮಾ! ಸುಮಿತ್ರೆ ಬರುವುದಿಲ್ಲವೆ ? ಪಾಠಕ್ಕೆ ಬರುತ್ತೇನೆಂದು ಹೇಳಿದ್ದಳಲ್ಲ" ಎಂದ.

ಪದ್ಮಾವತಿ ಸುಮ್ಮಗೆ ನಿಂತೇ ಇದ್ದಳು. ಗೋಪಿ ತನ್ನ ಮುಂದಿದ್ದ ಪದ್ಮಾವತಿಯನ್ನು ನೋಡುತ್ತಿದ್ದ.

ಮಗುವನ್ನು ಎತ್ತಿಕೊಂಡಿದ್ದುದರಿಂದ ತುಸು ಜಾರಿದ್ದ ಸೆರಗು. ಇದೆ ರಿಂದಾಗಿ ಎದ್ದುಕಾಣುತ್ತಿದ್ದ ಎದೆ. ಆಗಷ್ಟೆ ಅರಳುತ್ತಿರುವ ತುಂಬು ದೇಹದ ಸೌಂದರ್ಯ. ನಗುತ್ತಿದ್ದ ಕಣ್ಣುಗಳು, ಎದೆಯ ಮೇಲೆ ಹಾದು ಬಂದಿದ್ದ ಸೀಳಾದ ಎರಡು ಜಡೆಗಳು. ಉಟ್ಟಿದ್ದುದು ತೆಳ್ಳಗಿನ ಬಿಳಿಯ ವ್ಯಾಲ್ ಸೀರೆ. ಮಗುವನ್ನು ಎತ್ತಿಕೊಂಡು ನಿಂತಿದ್ದ ಪದ್ಮಾವತಿಯ ಮೋಹಕ ಭಂಗಿ ಗೋಪಿಯನ್ನು ಕ್ಷಣಕಾಲ ಮಾತ್ರ ಮಂತ್ರಮುಗ್ಧನನ್ನಾಗಿ ಮಾಡಿತ್ತು. ತನ್ನ ಮುಂದಿದ್ದವರು ಯಾರಿರಬಹುದೆಂದು ಊಹಿಸಿಯೇ ತಿಳಿದ ಪದ್ಮಾವತಿ ಮನಸ್ಸಿನ ಕಳವಳವನ್ನು ಕೊನೆಗೊಳಿಸಲೆಂದು ' ಮೀರಕ್ಕ ' ಎಂದು ಪುನಃ ಕರೆದಳು. ' ಓ ' ಎಂದು ಅಡಿಗೆಯ ಮನೆಯಿಂದ ಉತ್ತರ ಬಂತು. ಇಷ್ಟರಲ್ಲಿ ಮೂರ್ತಿ ಪುನಃ ಕೇಳಿದ.

" ಏನು, ಕೇಳಿಸುವುದಿಲ್ಲವೆ ಪದ್ಮಾ ? ಸುಮಿತ್ರೆ ಯಾಕೆ ಬರಲಿಲ್ಲ ? "

ಪದ್ಮಾವತಿ ಈಗ ಎಚ್ಚತ್ತಳು. ನಗುತ್ತಲೇ ಮೂರ್ತಿಯ ಪ್ರಶ್ನೆಗೆ ಉತ್ತರ ಕೊಟ್ಟಳು.

" ಅಪ್ಪಯ್ಯ ಎಣ್ಣೆ ಹಾಕಿ ಸ್ನಾನ ಮಾಡುತ್ತಾರೆಂದು ಅವಳಿಗೆ ಬರಲಾಗಲಿಲ್ಲ ಮಾಷ್ಟ್ರೆ. ಮಧ್ಯಾಹ್ನ ಊಟ ಮಾಡಿಯೇ ಬರುತ್ತಾಳಂತೆ. "

" ಊಟವಾದ ಮೇಲೆ ಬರುವುದು ಬೇಡ ಪದ್ಮಾ. ನಾನೇ ಮನೆಯ ಕಡೆ ಬರುತ್ತೇನೆ ಸಂಜೆ. ಪಂಡಿತರ ಹತ್ತಿರವೂ ನಾವು ಬರುತ್ತೇವೆಂದು ಹೇಳಿಬಿಡು " ಎಂದು ಮೂರ್ತಿ ಹೇಳಿದ.

" ಹೂಂ " ಎಂದವಳೇ ಪದ್ಮಾವತಿ ಮೀರೆಯನ್ನು ಹುಡುಕಿಕೊಂಡು ಹೋದಳು. ಗೆಳೆಯರಿಬ್ಬರೂ ಮಾತನಾಡುತ್ತ ಜಗಲಿಗೆ ಬಂದಿದ್ದುದರಿಂದ ಒಳಹೋಗಲು ಆಕೆಗೆ ಕಷ್ಟವಾಗಲಿಲ್ಲ.

ಮೀರೆಯನ್ನು ಕಂಡಮೇಲೆ ಬಂದವರು ಯಾರೆಂಬ ಸಂದೇಹ ಪದ್ಮಾವತಿಗೆ ಉಳಿಯಲಿಲ್ಲ. " ಇಷ್ಟು ಬೇಗ ಏನು ಬಂದುಬಿಟ್ಟರು ಮೀರಕ್ಕ " ಎಂದು ಕುತೂಹಲ ತಡೆಯಲಾಗದೆ ಕೇಳಿದಳು. " ನಿನ್ನೆ ಉಡುಪಿಗೆ ಬಂದರಂತೆ. ಇವತ್ತು ಬೆಳಿಗ್ಗೆ ಮೊದಲನೆಯ ಬಸ್ಸಿನಲ್ಲಿಯೇ ಹೊರಟು ಬಂದರು. ಬಂದೇನು ಅರ್ಧ ಘಂಟೆಯಾಗಬಹುದಷ್ಟೆ. " ಎಂದು ಮೀರೆ ಪದ್ಮಾವತಿಗೆ ಸಮಾಧಾನ ಹೇಳಿದಳು. ಆಮೇಲೆ ಪದ್ಮಾವತಿ ಹೆಚ್ಚು ಹೊತ್ತು ಅಲ್ಲಿ

ಉಳಿಯಲಿಲ್ಲ. ಕೊನೆಗೂ ತನ್ನನ್ನೇ ಮೊದಲು ನೋಡಿಬಿಟ್ಟರಲ್ಲಾ ಎಂದೊಂದು ಯೋಚನೆ ಆಕೆಯನ್ನು ಕಾಡತೊಡಗಿದರೂ, ಮಾಷ್ಟ್ರ ಸ್ನೇಹಿತರು ಬಂದಿದ್ದಾರೆಂದು ಅಕ್ಕನಿಗೆ ತಿಳಿಸುವ ಆತುರ ಆಕೆಯನ್ನು ಅಲ್ಲಿ ಹೆಚ್ಚು ಸಮಯ ನಿಲ್ಲಲು ಬಿಡಲಿಲ್ಲ. "ಸಂಜೆ ಅವರೆಲ್ಲರ ಜೊತೆಗೆ ನೀವೂ ಬರುತ್ತೀರಲ್ಲ ಮೀರಕ್ಕ. ಈಗ ನಾನು ಹೋಗುತ್ತೇನೆ." ಎಂದವಳೇ ಅಲ್ಲಿಂದೆದ್ದು ಮನೆಗೋಡಿದಳು.

ಗೆಳೆಯರಿಬ್ಬರೂ ಅಂಗಳದಲ್ಲಿ ಮಾತನಾಡುತ್ತ ನಿಂತಿದ್ದರು. ಪದ್ಮಾವತಿ ಗೇಟಿನ ಬಳಿ ಹೋಗುತ್ತಿದ್ದಂತೆ ಮೂರ್ತಿ ಪುನಃ ಹೇಳಿದ. "ನೆನಪು ಪದ್ಮಾ. ಪಂಡಿತರ ಹತ್ತಿರ ನಾವು ಬರುತ್ತೇವೆಂದು ಹೇಳಿಬಿಡು." "ಹೂಂ" ಎಂದು ಇನ್ನೊಮ್ಮೆ ಉತ್ತರಿಸಿದ ಪದ್ಮಾವತಿ ಅವಸರದಿಂದಲೇ ಗೇಟು ದಾಟಿ ಹೋದಳು.

ಇಷ್ಟರ ತನಕ ತನ್ನ ಕುತೂಹಲವನ್ನು ಪ್ರಯತ್ನಪೂರ್ವಕ ತಡೆದು ಹಿಡಿದಿದ್ದ ಗೋಪಿ ಈಗ ಗೆಳೆಯನೊಡನೆ ಕೇಳಿದ.

"ಇವಳೇ ಅಲ್ಲವೇನೋ ನಿನ್ನ ಕಾಗದದ ಹುಡುಗಿ ?"

ಮೂರ್ತಿ ನಗುತ್ತ ಉತ್ತರಕೊಟ್ಟ.

"ಇವಳಲ್ಲ ಗೋಪಿ. ಈ ಬಿನ್ನಾಣಗಿತ್ತಿಯೆ ? ಇವಳು ಪದ್ಮಾ. ನಿನ್ನ ಹೆಂಡತಿಯಾಗಲಿರುವ ಸುಮಿತ್ರೆಯ ತಂಗಿ."

೪

ಗುರುವಿನ ಮನೆಗೆ ಬೆಳಿಗ್ಗೆ ಬರಲಾಗುವುದಿಲ್ಲವೆಂದು ಸುಮಿತ್ರೆ ಸಂದೇಶವನ್ನೇನೋ ತಂಗಿಯ ಮುಖಾಂತರ ಕಳುಹಿಸಿದಳು. ಆದರೆ ಇಷ್ಟರಿಂದ ಆಕೆಯ ಮನಸ್ಸಿಗೆ ಪೂರ್ಣ ಸಮಾಧಾನ ದೊರಕಲಿಲ್ಲ. ಬಿಸಿನೀರಿನ ಒಲೆಗೆ ಬೆಂಕಿ ಹಾಕುತ್ತಿದ್ದ ಸುಮಿತ್ರೆ, ಮತ್ತೆ ಮತ್ತೆ ಮೀರಕ್ಕನೊಡನೆ ಮಾತನಾಡುವುದು ಸಾಧ್ಯವಾಗಲಿಲ್ಲವಲ್ಲಾ ಎಂದು ಚಿಂತಿಸುತ್ತಿದ್ದಳು. ಬೆಳಿಗ್ಗೆ ಹೋಗಲಾಗಲಿಲ್ಲವೆಂದು ಅಂಥ ಪ್ರಮಾದವೇನೂ ಆಗಿರಲಿಲ್ಲ. ಊಟ ತೀರಿಸಿ ಹೋಗಬಹುದು. ಆದರೆ ಮಧ್ಯಾಹ್ನದ ಹೊತ್ತು. ರಜಾದಿನ, ಮಾಷ್ಟ್ರು ದೇಖಾವೆ

ನೋಡಲು ಹೆಂಡತಿಯೊಂದಿಗೆ ಹೋದರೆ! ಅಥವಾ ಬೇರಾದರೂ ಗೆಳತಿಯರು ಬಂದು ಮೀರಕ್ಕನಿಗೆ ತನ್ನೊಂದಿಗೆ ಮಾತನಾಡಲು ಅವಕಾಶ ದೊರಕದಿದ್ದರೆ !

ಹಂಡೆಗೆ ನೀರು ತುಂಬಿಸಿ, ಉರಿ ಹಾಕಿ, ತಂದೆಗೆ ಎಣ್ಣೆ ಹಚ್ಚಲೆಂದು ಹೋದ ಸುಮಿತ್ರೆಯ ತಲೆತುಂಬ ಆಲೋಚನೆಯೆ.

ಈ ಆಲೋಚನೆಯ ಹಿಂದೆ ಸುಂದರವಾದುದೊಂದು ವ್ಯಕ್ತಿಯ ಅಸ್ಪಷ್ಟ ಚಿತ್ರವಿತ್ತು. ಬಿ. ಎಸ್‌ಸಿ. ಮುಗಿದಿದೆ. ಕೈತುಂಬ ಸಂಬಳ ಬರುವ ಕೆಲಸವಿದೆ. ಮೂರ್ತಿ ಮಾಷ್ಟ್ರ ಸ್ನೇಹಕ್ಕೆ ಪಾತ್ರರೆಂದ ಮೇಲೆ ಒಳ್ಳೆಯ ಗುಣಿಯಾಗಿರಲೇ ಬೇಕು. ಮಾಷ್ಟ್ರ ಮಾತಿಗೆ ಮನ್ನಣೆ ಕೊಟ್ಟು ಮಂಗಳೂರಿನ ತನಕ ಬರುವ ರೆಂದಾದ ಮೇಲೆ ಮದುವೆಯ ವಿಚಾರ ಚೆನ್ನಾಗಿ ಯೋಚಿಸದಿರಲಿಕ್ಕಿಲ್ಲ. ಮದುವೆ, ಮದುವೆಯ ಹಿಂದಿನಿಂದ ಮುಂಬಯಿ ಜೀವನ, ಮುಂಬಯಿಯ ಭಾಗ್ಯಶ್ರೀ ಕಣ್ಣು ತೆರೆದರೆ ತಂದೆಯ 'ಟ್ಯೂಮರ್'ನ ಶಸ್ತ್ರಕ್ರಿಯೆ ಸಾಧ್ಯ. ಆರೋಗ್ಯವಂತ ತಂದೆ, ನಗುವ, ನಗಿಸುವ ವಿದ್ವಾಂಸ ಗಂಡ, ಓದುವ ತಂಗಿ, ಸುಖ.

ತಂದೆಯ ಮೈಗೆ ಎಣ್ಣೆ ತಿಕ್ಕುತ್ತಿದ್ದ ಸುಮಿತ್ರೆ ಒಮ್ಮೊಂದೊಮ್ಮೆಗೆ ಮುಗುಳುನಗೆ ನಕ್ಕಳು. ಯೋಚನಾ ಮಗ್ನಳಾಗಿದ್ದ ಅವಳನ್ನೇ ನೋಡುತ್ತಿದ್ದ ಪಂಡಿತರಿಗೆ ಆಶ್ಚರ್ಯವಾಯಿತು.

" ಏನು ಸುಮೀ, ಬಹಳ ಸಂತೋಷದಲ್ಲಿರುವ ಹಾಗೆ ಕಾಣುತ್ತದೆ."

ತನ್ನ ಆಲೋಚನಾ ಗತಿ ತಂದೆಗೆ ತಿಳಿಯಿತೊ ಎಂಬ ಹೆದರಿಕೆಯಿಂದ ಸುಮಿತ್ರೆ ನಾಚಿದಳು. ಆದರೂ,

" ಏನಿಲ್ಲ ಅಪ್ಪಯ್ಯ. ಪದ್ಮಾ ನಿನ್ನೆ ನಿದ್ದೆಯಲ್ಲಿ ಏನೇನೊ ಮಾತನಾಡಿ ಕೊಳ್ಳುತ್ತಿದ್ದಳು. ನೆನಸಿದಾಗ ನಗುಬಂತು " ಎಂದಳು.

" ಹುಚ್ಚು ಹುಡುಗಿ. ಒಂದು ಕ್ಷಣ ಮನೆಯಲ್ಲಿರುವುದಿಲ್ಲ. ಏನು ತಿರು ಗಾಟವೋ, ಈ ರಂಭೆಗೆ ಇನ್ನು ಎಂಥ ಗಂಡ ಬರುತ್ತಾನೋ ದೇವರಿಗೇ ಗೊತ್ತು."

ಸುಮಿತ್ರೆ ಮಾತನಾಡಲಿಲ್ಲ. ಎಣ್ಣೆ ಹಚ್ಚುವ ಕೆಲಸ ಮುಗಿದಿತ್ತು. " ಮೆಲ್ಲಗೆ ಬನ್ನಿ ಅಪ್ಪಯ್ಯ, ನೀರು ಬಿಸಿಯಾಯಿತೆಂದು ತೋರುತ್ತದೆ ' ಎಂದ ವಳೇ ಬಚ್ಚಲುಮನೆಯ ಕಡೆಗೆ ನಡೆದಳು.

ಅಲ್ಲಿಯೂ ಆಲೋಚನೆ ಮುಂಬಯಿಯದೆ, ಹಂಡೆಯಿಂದ ನೀರು ತೆಗೆದು ಬೇಕಾಗುವಷ್ಟೇ ಬಿಸಿಗೆ ಸರಿಪಡಿಸಿಕೊಂಡು, ಸಾಬೂನಿನ ತಟ್ಟೆಯನ್ನು, ಕಡಲೇ ಹಿಟ್ಟಿನ ಪಾತ್ರೆಯನ್ನು, ತಲೆಯೊರಸಲು ಬೈರಾಸನ್ನು ಹುಡುಕಿ ತಂದಿಟ್ಟು, ಸುಮಿತ್ರೆ "ಅಪ್ಪಯ್ಯಾ" ಎಂದು ಕರೆಯುವಾಗ ಪಂಡಿತರು ಬಚ್ಚಲು ಮನೆಯೊಳಗೆ ಬಂದಿದ್ದರು.

ತಂದೆಯ ತಲೆಗೆ ನೀರು ಹೊಯ್ಯುತ್ತಿದ್ದ ಸುಮಿತ್ರೆಯ ಮನಸ್ಸಿನಲ್ಲಿ ಎಂದೂ ಇಲ್ಲದ ಆನಂದದ ಅನುಭವವು ಉಂಟಾಗಿದ್ದಿತು. ಕಡಲೆ ಹಿಟ್ಟಿನಿಂದ ಪಂಡಿತರು ಮೈಯುಜ್ಜಿಕೊಳ್ಳುತ್ತಿದ್ದಾಗ, ಸುಮಿತ್ರೆ ತಂದೆಯ ಬೆನ್ನಿಗೆ ಸಾಬೂನು ತಿಕ್ಕುತ್ತಿದ್ದಳು. ಮಗಳು ತನ್ನ ಮೈ ತಿಕ್ಕಿ ಸ್ನಾನಮಾಡಿಸುತ್ತಿದ್ದ ರೀತಿಯಲ್ಲಿ ಏನೂ ಒಂದು ಹೊಸ ಉತ್ಸಾಹವನ್ನು ಕಂಡುಕೊಂಡ ಪಂಡಿತರು, ಸುಮಿತ್ರೆಯನ್ನುದ್ದೇಶಿಸಿ ಹೇಳಿದರು.

"ಏನಮ್ಮಾ ಸುಮೀ. ನೀನು ಸ್ನಾನ ಮಾಡಿಸುವುದನ್ನು ನೋಡುವಾಗ ನಾನು ಮಗುವಿನ ಹಾಗೆ ಆಗಿದ್ದೇನೆಂದು ತೋರುತ್ತದೆ. ಅವಳು ಕೂಡಾ ಇಷ್ಟು ಚೆನ್ನಾಗಿ ಸ್ನಾನ ಮಾಡಿಸುತ್ತಿರಲಿಲ್ಲ."

ತಂದೆಯ ಮಾತು ಕೇಳಿ ಸುಮಿತ್ರೆ ನಕ್ಕಳಷ್ಟೆ. ಆದರೆ ಮನಸ್ಸು ಮಾತ್ರ ತನ್ನ ಗಂಡನಾಗಿ ಬರಲಿರುವವನನ್ನು ಇದೇ ರೀತಿ, ಬಹುಶಃ ಇದೇ ಬಚ್ಚಲು ಮನೆಯಲ್ಲಿ, ಇಷ್ಟೇ ಉತ್ಸಾಹದಿಂದ ಮೀಯಿಸುವ ದಿನ ಹತ್ತಿರದಲ್ಲಿಯೇ ಎಂದು ಪ್ರಶ್ನಿಸುತ್ತಿತ್ತು.

"ಸಾಕಮ್ಮ ಇನ್ನು ತಲೆಗೆ ನಾಲ್ಕು ತಂಬಿಗೆ ನೀರು ಹಾಕು. ಆಮೇಲೆ ಮಡಿ ನೀರು ಹಾಕಿಕೊಂಡು ನಾನು ತಲೆಯೊರಿಸಿಕೊಳ್ಳುತ್ತೇನೆ" ಎಂದು ಪಂಡಿತರು ಹೇಳಿದಾಗಲೇ ಆಕೆ ತಂದೆಯ ಮೈ ತೊಳೆಯುವ ಕೆಲಸವನ್ನು ನಿಲ್ಲಿಸಿದುದು.

"ಇಂಥ ಮಾತನ್ನೇ ತನ್ನ ಗಂಡನಿಂದ ಕೇಳುವ ದಿನ ಬಂದಾಗ...." ಇದೇ ಆಲೋಚನೆಯಲ್ಲಿ ಸುಮಿತ್ರೆ ತಂಬಿಗೆ ತೆಗೆದುಕೊಂಡು ಹಂಡೆಗೆ ಕೈ ಹಾಕಿದಳು. ಹಂಡೆಯ ನೀರು ಸರಿಪಡಿಸಿಟ್ಟ ನೀರಲ್ಲ; ಕಾದು ಕುದಿಯುವ ನೀರು ಎಂಬ ವಿಚಾರ ಮರೆತುಹೋಗಿತ್ತು. ಭವಿಷ್ಯತ್ತಿನ ಕಲ್ಪನೆಯ ಸಂತೋಷದ ಉನ್ಮಾದದಲ್ಲಿ ನೀರು ತುಂಬ ಬಿಸಿಯಿದೆಯೆಂದು ಆಕೆಗೆ ತಿಳಿಯಲೇ ಇಲ್ಲ. ತಂದೆಯ ತಲೆಗೆ ನೀರು ಬಿದ್ದಾಗ ಅವರು—

" ಅಯ್ಯೋ ಸುಮೀ ನೋಡಮ್ಮ. ನೀರು ಭೆಂಕಿಯ ಹಾಗಿದೆ " ಎಂದು ಕೂಗಿಕೊಂಡಾಗಲೇ ಆಕೆಗೆ ತಿಳಿವು ಬಂದುದು. ನಿಂತುಕೊಂಡಿದ್ದ ತಂದೆ ಒಮ್ಮಿಂದೊಮ್ಮೆಗೆ ಕುಳಿತುಕೊಂಡು ಬಿಟ್ಟಿದ್ದರು. ತಂಬಿಗೆಯನ್ನು ಒಂದೆಡೆ ಬಿಸಾಡಿದ ಸುಮಿತ್ರೆ ಹೆದರಿ

" ಏನಾಯಿತು ಅಪ್ಪಯ್ಯ, ಅಪ್ಪಯ್ಯ. ಮರೆತುಹೋಗಿ ಬಿಸಿನೀರು ಹಾಕಿಬಿಟ್ಟೆ. ತುಂಬ ಬಿಸಿಯಿತ್ತೇ ಅಪ್ಪಯ್ಯ " ಎಂದು ಕೂಗಿಕೊಂಡು ಬಗ್ಗಿದಳು.

ತಲೆ ತಗ್ಗಿಸಿ ಕಣ್ಣು ಮುಚ್ಚಿ ಕುಳಿತಿದ್ದ ಮುದಿ ತಂದೆಯನ್ನು ನೋಡಿದಾಗ ಸುಮಿತ್ರೆಗೆ ತನ್ನ ತಪ್ಪಿನ ಮಹತ್ವದ ಅರಿವಾಗಿ ಕಣ್ಣು ತುಂಬಿ ಬಂತು. ನೀರು ಬಿದ್ದ ಜಗದಲ್ಲಿ ತಂದೆಯ ಬೆನ್ನು ಕೆಂಪಾಗಿದ್ದಿತು. ತನ್ನ ಮಾತಿಗೆ ತಂದೆಯ ಉತ್ತರವೇ ಇಲ್ಲದುದನ್ನು ಕಂಡು ಆಕೆ ಕಂಗಾಲಾದಳು.

" ಅಪ್ಪಯ್ಯ. ಮಾತನಾಡಿ ಅಪ್ಪಯ್ಯ. ಎಂಥ ಹುಚ್ಚಿ ನಾನು. ನೋವಾಗುತ್ತದೆಯೇ ಅಪ್ಪಯ್ಯ " ಎಂದವಳೇ ಸುಮಿತ್ರೆ ಬಿಕ್ಕಿಬಿಕ್ಕಿ ಅಳಲಾರಂಭಿಸಿದಳು. ಅಷ್ಟರಲ್ಲಿ ಪಂಡಿತರು

" ಅಳಬೇಡ ಸುಮೀ. ಏನೊ ಕಣ್ಣು ಕತ್ತಲೆ ಬಂತು. ಸ್ವಲ್ಪ ವಸ್ತ್ರ ತಾ. ನನ್ನ ತಲೆಯೊರಸು. ಆಮೇಲೆ ದೇವರ ಕೋಣೆಯವರೆಗೆ ಕರೆದು ಕೊಂಡು ಹೋಗು. ನೀರು ಸ್ವಲ್ಪ ಬಿಸಿ ಹೆಚ್ಚಾಯಿತು ಅಷ್ಟೆ " ಎಂದು ಮೆಲ್ಲಗೆ ಹೇಳಿದರು.

ತಂದೆಯ ಮಾತು ಕೇಳಿ ಧೈರ್ಯ ತಂದುಕೊಂಡ ಸುಮಿತ್ರೆ ಬೈರಾಸನ್ನು ಒದ್ದೆಮಾಡಿ, ಅವರ ತಲೆ ಮೈಗಳನ್ನು ಒರೆಸಿ ಕೈಹಿಡಿದು ಅವರನ್ನು ಮನೆಯೊಳಗೆ ಕರೆದುತಂದಳು. ಪ್ರಯಾಸದಿಂದ ಮಡಿಯುಟ್ಟು ನಿತ್ಯಾಹ್ನಿಕಕ್ಕೆ ತೊಡಗಿದ ತಂದೆಯ ಮುಖದಲ್ಲಿ ಕುದಿಯುತ್ತಿದ್ದ ಬಿಸಿನೀರು ಉಂಟುಮಾಡಿದ ವೇದನೆ ಸ್ಪಷ್ಟವಾಗಿ ಕಂಡುಬರುತ್ತಿತ್ತು. ಅರ್ಧ ಕಣ್ಣು ಮುಚ್ಚಿ ಮಣೆಯ ಮೇಲೆ ಪದ್ಮಾಸನ ಹಾಕಿ ಕುಳಿತಿದ್ದ ತಂದೆಯನ್ನು ಕಾಣುವಾಗ ಸುಮಿತ್ರೆ ಕಂಗಾಲಾದಳು. ಆದರೂ ತಾನಾಗಿ ಜೇನು ತಂದು ನೀರು ಬಿದ್ದು ಸುಟ್ಟು ಹೋಗಿದ್ದ ಜಾಗಕ್ಕೆ ಸವರಿದಳು. ಪಂಡಿತರಿಗೆ ಸ್ವಲ್ಪ ಸಮಾಧಾನವಾಯಿತೆನ್ನುವಂತೆ ಕಣ್ಣು ತೆರೆದು ಮಗಳನ್ನು ನೋಡಿದರು.

ತಪ್ಪಾಗಿ ಹೋಯಿತು ಅಪ್ಪಯ್ಯ, ಮರೆತುಬಿಟ್ಟು ಏನೋ ಮಾಡಿ ಬಿಟ್ಟೆ. ”

“ ಇಲ್ಲಮ್ಮ, ಅದು ಹೋಗುತ್ತದೆ ಬಿಡು. ಒಂದಿಷ್ಟು ಸಕ್ಕರೆ ಪಾನಕ ಮಾಡುತ್ತೀಯಾ ? ಹೊಟ್ಟೆಯಲ್ಲಿ ಯಾಕೊ ಸಂಕಟವಾಗುತ್ತದೆ. ”

ತಂದೆ ಇಷ್ಟು ಮಾತಾಡಿದುದನ್ನು ಕೇಳಿ ಸಂತೋಷದಿಂದ ಸಕ್ಕರೆ ಪಾನಕ ತಯಾರಿಸಿ ತರುವಾಗ ಪಂಡಿತರು ನಿತ್ಯವಿಧಿಯ ಶಾಸ್ತ್ರ ಮುಗಿಸಿ, ತಮ್ಮ ಕೋಣೆಗೆ ಹೋಗಿ ಮಲಗಿದ್ದರು. ಸುಮಿತ್ರೆ ಬಂದಾಗ ಅವರಿಗೆ ನಿದ್ರೆ ಬಂದಂತೆ ಕಂಡುಬಂದುದರಿಂದ “ ಪಾನಕ ತಂದಿದ್ದೇನೆ ಅಪ್ಪಯ್ಯಾ ” ಎಂದು ಹೇಳಿದಳು. ಆದರೂ ಪಂಡಿತರು ಏಳಲಿಲ್ಲ. ಇದರಿಂದ ಗಾಬರಿಗೊಂಡ ಸುಮಿತ್ರೆ ತಂದೆಯ ಬಳಿ ಬಂದು ಅವರ ಹಣೆಯ ಮೇಲೆ ಕೈಯಿರಿಸಿದಾಗ ತನ್ನ ತಾನೆ ಹಿಂದೆ ಬಂತು. ಹಣೆ ಕಾದ ಕೆಂಡದಂತಿತ್ತು.

ಮಗಳ ಹಸ್ತಸ್ಪರ್ಶದಿಂದ ಪಂಡಿತರಿಗೆ ಎಚ್ಚರವಾಯಿತೆಂದು ತೋರುತ್ತದೆ. ಸಾವರಿಸಿಕೊಂಡು ಎದ್ದು ಕುಳಿತುಕೊಳ್ಳಲು ಪ್ರಯತ್ನಿಸಿ

“ ನಿನ್ನೆ ರಾತ್ರೆಯೆ ಸ್ವಲ್ಪ ಜ್ವರ ಬಂದಿತ್ತೆಂದು ತೋರುತ್ತದೆ ಸುಮೀ. ಸ್ವಲ್ಪ ಸರ್ವೋತ್ತಮರಾಯರ ಹತ್ತಿರ ಹೋಗಿ ಬರುತ್ತೀಯಾ ? ಅಥವಾ ಪದ್ಮಾ ಹೋಗಿಬರಲಿ. ನೀನು ಇಲ್ಲೇ ಇರು ” ಎಂದರು.

“ ಆಗಬಹುದು ಅಪ್ಪಯ್ಯ. ಈಗ ಈ ಪಾನಕ ಕುಡಿಯಿರಿ. ” ಎಂದು ಲೋಟವನ್ನು ಸುಮಿತ್ರೆ ತಂದೆಯ ಕೈಗೆ ಕೊಡುವಾಗ

“ ಅಕ್ಕಾ....ಅಕ್ಕಾ....ಮೂರ್ತಿ ಮಾಷ್ಟ್ರ ದೋಸ್ತಿ ಬಂದಾಗಿದೆ ಅಕ್ಕಾ. ಇವತ್ತು ಬೆಳಿಗ್ಗೆ ಹತ್ತು ಗಂಟೆಗೆ ” ಎನ್ನುತ್ತಾ ಪದ್ಮಾವತಿ ಒಳಬಂದಳು. ಆದರೆ ಒಳಗೆ ತಂದೆಯ ಕೋಣೆಯ ಬಾಗಿಲ ಬಳಿ ಬಂದಾಗ ಆಕೆಯ ಉತ್ಸಾಹವೆಲ್ಲ ಮಾಯವಾಯಿತು. ತಂದೆಯ ವೇದನೆ ತುಂಬಿದ ಮುಖ, ಬಳಿಯಲ್ಲಿ ಕುಳಿತಿದ್ದ, ಅಕ್ಕ ಇವರನ್ನು ಕಂಡಾಗ ಏನೊ ಅನಾಹುತ ಸಂಭವಿಸಿದೆಯೆಂದು ಪದ್ಮಾವತಿಗೆ ಅನಿಸಿತು.

“ ಏನಾಯಿತಕ್ಕ ” ಎಂದು ಆಕೆ ಕೇಳಿದಾಗ ಸುಮಿತ್ರೆ ಉತ್ತರ ಕೊಡಲಿಲ್ಲ. “ ಅಕ್ಕಾ ” ಎಂದು ಆಕೆ ಪುನಃ ಕರೆದಾಗ ಸಣ್ಣ ದನಿಯಲ್ಲಿ ಪಂಡಿತರೇ ಮಾತನಾಡಿದರು.

" ಏನೂ ಆಗಿಲ್ಲ ಪದ್ಮಾ. ಸ್ವಲ್ಪ ಜ್ವರ ಬರುತ್ತದೆ. ನೀನು ಸರ್ವೋತ್ತಮರಾಯರ ಹತ್ತಿರ ಹೇಳಿ ಏನಾದರೂ ಔಷಧಿ ಹಿಡಿದುಕೊಂಡು ಬಾ. ತಪ್ಪಿ ಹೋಗಿ ಮೈಗೆ ಸ್ವಲ್ಪ ಬಿಸಿನೀರು ಬಿತ್ತು. ಅದರಿಂದಲೇ ಜ್ವರ ಬಂದಿದೆ ಯೆಂದು ಕಾಣುತ್ತದೆ ಎಂದು ಹೇಳು. ''

" ಹೂಂ " ಎಂದ ಪದ್ಮಾವತಿ ಔಷಧಿಯ ಸೀಸೆ ಹುಡುಕಲು ತೊಡಗಿದಾಗ ಪಂಡಿತರು ಪುನಃ ಮಾತನಾಡಿದರು.

" ಯಾರೊ ಬಂದರು ಎಂದೆಯಲ್ಲ. ಮೂರ್ತಿರಾಯರ ಮುಂಬಯಿ ಸ್ನೇಹಿತರೇನು ? ಮೂರ್ತಿರಾಯರಲ್ಲಿಯೇ ಇದ್ದಾರೆಯೆ ?"

" ಹೌದಪ್ಪಯ್ಯ. ಇವತ್ತು ಸಂಜೆ ಮನೆಯ ಕಡೆ ಬರುತ್ತಾರೆಂದು ನಿಮ್ಮ ಹತ್ತಿರ ಹೇಳಬೇಕೆಂದು ಮಾಪ್ಪು ಹೇಳಿದ್ದರು. ಬೆಳಿಗ್ಗೆ ಬಂದರಂತೆ. "

ಪಂಡಿತರು ಕ್ಷಣಕಾಲ ಮೌನವಾಗಿದ್ದರು. ಆ ಮೇಲೆ ಹಿರಿಮಗಳನ್ನು ದ್ದೇಶಿಸಿ

" ಒಳ್ಳೇ ದಿನ ನೋಡಿ ಬಂದ ಹಾಗಿದೆಯಲ್ಲ ಸುಮೀ. ಸ್ವಲ್ಪ ಒಟ್ಟಿಗಿಟ್ಟಿ ನೋಡಿಕೋಮ್ಮ. ಒಂದು ಉಪ್ಪಿಟ್ಟು ಕಾಫಿ ಮಾಡು, ಸಾಕು. ಅವಳ ಧರ್ಮಾವರದ ಸೀರೆ ಉಂಟಲ್ಲ. ಅದನ್ನೆ ಉಟ್ಟುಕೊಳ್ಳು. ಸ್ವಲ್ಪ ತಲೆಗಿಲೆ ಚೊಕ್ಕಟವಾಗಿರಲಿ. ಹಿಮಾಲಯಕ್ಕೆ ಹೋಗುವ ಸನ್ಯಾಸಿನಿಯಂಥ ವೈರಾಗ್ಯ ಮಾತ್ರ ತಾಳಬೇಡ. ಕಲಿತ ಹುಡುಗಿ, ನಿನಗೆ ಇದೆಲ್ಲಿ ತಿಳಿಯದೇ. ಮನೆಯಲ್ಲಿ ಬೇರೆ ಯಾರೂ ಹೆಂಗಸರಿಲ್ಲವೆಂದು ಉದಾಸೀನ ಮಾಡಬೇಡ...." ಪಂಡಿತರ ಮಾತು ತೀರ ಸಣ್ಣದನಿಯಲ್ಲಿ ಹೊರಡುತ್ತಿತ್ತು. ತಂದೆಯ ಕಣ್ಣಲ್ಲಿ ನೀರು ತುಂಬಿದುದನ್ನು ಕಂಡು ಸುಮಿತ್ರೆಗೆ ಅಳು ತಡೆಯಲಾಗಲಿಲ್ಲ.

" ನನಗೇನೂ ಬೇಡ ಅಪ್ಪಯ್ಯ. ನಾನು ಹೀಗೆಯೇ ಇರುತ್ತೇನೆ. ನನ್ನ ಕೈಯಾರೆ ಇವತ್ತು ನಿಮ್ಮನ್ನು ಕೊಲ್ಲುತ್ತಿದ್ದೆ. ಇಂಥವಳಿಗೆ ಮದುವೆ ಯಾಕೆ "

ಆಯಾಸವಿದ್ದರೂ ಪಂಡಿತರು ಮುಂದೆ ಬಂದು ಮಗಳ ಬಾಯಿಗೆ ಕೈ ಹಿಡಿದರು.

" ಏನೆಲ್ಲ ಅಮಂಗಳ ಮಾತನಾಡುವುದು ಸುಮೀ. ಒಂದಿಷ್ಟು ಬಿಸಿ ನೀರು ಬಿದ್ದ ಕೂಡಲೆ ಏನಾಗಿ ಹೋಯಿತೀಗ ? ನನ್ನ ಮನಸ್ಸಿಗೆ ಸಂತೋಷ ವಾಗಬೇಕಿದ್ದರೆ ನಾನು ಹೇಳಿದ ಹಾಗೆ ಮಾಡು, ನಮ್ಮ ಕೆಲಸ ಯಾವಾಗಲೂ ನಾವು ಮಾಡಬೇಕು. ಆಗುವುದು ಹೋಗುವುದು ದೈವೇಚ್ಛೆ. "

ತುಂಬ ಮಾತನಾಡಿದುದರಿಂದ ಪಂಡಿತರಿಗೆ ಆಯಾಸವಾಗಿತ್ತು. ಸುಮಿತ್ರೆ ಬೇಗ ಎದ್ದು ಹಾಸಿಗೆ ಬಿಡಿಸಿ ತಂದೆಯನ್ನು ಮಲಗಿಕೊಳ್ಳುವಂತೆ ಒತ್ತಾಯಪಡಿಸಿದಳು. "ನಾನು ಹೇಳಿದುದೆಲ್ಲ ತಿಳಿಯಿತಲ್ಲ ಸುಮೀ. ಮಧ್ಯಾಹ್ನ ಸ್ವಲ್ಪ ಗಂಜಿ ಮಾಡಿಬಿಡು ನನಗೆ. ಸಂಜೆ ಅವರು ಬರುವಾಗ ಲಾದರೂ ಎದ್ದು ಕುಳಿತುಕೊಳ್ಳುವ ಹಾಗೆ ಆದರೆ ಸಾಕು" ಎಂದ ತಂದೆಯ ಮಾತಿಗೆ ಏನೊಂದೂ ಉತ್ತರ ಹೇಳದೆ ಸುಮಿತ್ರೆ ಅಡುಗೆಯ ಮನೆ ಕಡೆ ಹೊರಟಾಗ, ಪದ್ಮಾವತಿ "ನಾನು ಡಾಕ್ಟರರ ಹತ್ತಿರ ಹೋಗಿ ಬರುತ್ತೇನೆ ಅಕ್ಕಾ" ಎಂದು ಕೂಗಿಕೊಂಡು ಹೊರಗೆ ಹೋದಳು.

ಸುಮಿತ್ರೆಯ ಮನಸ್ಸಿನಲ್ಲೀಗ ತೀರ ವಿಕಲ್ಪ ರೀತಿಯ ಹೊಯ್ದಾಟವೆದ್ದಿತು. ತನ್ನ ಸುಖದ ಕನಸು ಕಾಣುತ್ತಿದ್ದಾಗ ಅಕ್ಷಮ್ಯ ಅನ್ಯಾಯವೊಂದು ನಡೆದು ಹೋಯಿತು. ಒಂದು ಅಪರಿಚಿತ ವ್ಯಕ್ತಿಯ ನಿರೀಕ್ಷೆಯ ಕಾತರ ಇಷ್ಟೆಲ್ಲ ಅನರ್ಥಕ್ಕೆ ಕಾರಣವಾಯಿತಲ್ಲ....

ಮೂರ್ತಿ ಮಾಷ್ಟ್ರ ಮನೆಗೆ ತಾನಿಂದು ಹೋಗುವ ಅಗತ್ಯವಿಲ್ಲ. ಅವರೇ ಬರುತ್ತಾರೆ. ಆ ವ್ಯಕ್ತಿಯೂ ಬರಲಿದೆ. ಮೀರಕ್ಕನೊಡನೆ ಮಾತನಾಡುವಾಗ ಅವರ ಗುಣಗಾನ ಎಲ್ಲಿಯಾದರೂ ಕೇಳಬಹುದೆಂಬ ಆಸೆ ಇನ್ನು ಅನಗತ್ಯ. ಆದರೆ ಹಿಂದೆ ಬಂದು ನೋಡಿ ಕಣ್ಣು ಬಿಟ್ಟುಹೋದ ನಾಲ್ಕಾರು ವ್ಯಕ್ತಿಗಳಂತೆಯೇ ಮನೆಯಲ್ಲಿ ಕಾಫಿ ಸತ್ಕಾರದ ಜೊತೆಗೆ, ಪ್ರದರ್ಶನವೊಂದು ನಡೆದು ಹೋಗಬಹುದು.

ಛೀ ! ಮೂರ್ತಿ ಮಾಷ್ಟ್ರು ಅಷ್ಟು ಆಲೋಚಿಸದವರೆ ? ಅವರ ಮಾತಿಗೆ ಬೆಲೆ ಕೊಟ್ಟು ಬಂದ ಅವರ ಗೆಳೆಯರಲ್ಲವೆ ಇವರು ?

ತಂದೆ ಸರಿಯಾಗಿ ಎದ್ದು ಕುಳಿತುಕೊಳ್ಳುವ ಸ್ಥಿತಿಯಲ್ಲಿಲ್ಲ. ಅವರು ಬಂದವರನ್ನುಪಚರಿಸುವ ಮಾತು ಒತ್ತಟ್ಟಿಗುಳಿಯಿತು.........ಬರೀ ತನ್ನನ್ನು ನೋಡಿದೊಡನೆಯೇ ನೋಡಬಂದವರಿಗೆ ಸಮಾಧಾನವಾಗಬಹುದೆ ?

ಗಂಜಿಗೆ ನೀರಿಟ್ಟು, ರಸಾಯನ ಶಾಸ್ತ್ರದ ಪುಸ್ತಕವೊಂದನ್ನು ಬಿಡಿಸಿ ಓದಲು ಕುಳಿತಿದ್ದ ಸುಮಿತ್ರೆಗೆ ಪಡಸಾಲೆಯಲ್ಲಿದ್ದ ಕನ್ನಡಿಯ ಬಳಿ ಹೋಗಬೇಕೆಂಬಾಸೆಯಾಯಿತು. ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ಕಾಣುವಾಗ ಅವಳಿಗೆ ಯಾವ ಸುಖಾನುಭವವೂ ಆಗಲಿಲ್ಲ.

ಅತ್ತುದರಿಂದ ಕಣ್ಣು ಕೆಂಪಾಗಿದ್ದುವು. ಮುಖ ತುಸು ಊದಿ ಕೊಂಡಂತಿತ್ತು. ಕ್ಷಣಕಾಲ ತನ್ನ ಸೌಂದರ್ಯವನ್ನು ಸುಮಿತ್ರೆ ಪರೀಕ್ಷಿಸಿ ದಳು. ಅವರು ಈ ಸೌಂದರ್ಯದಲ್ಲಿ ಏನನ್ನು ಕಂಡುಕೊಳ್ಳುವರೋ.

ಪೌಡರ ಡಬ್ಬಿ ಹತ್ತಿರದಲ್ಲಿತ್ತು. ಸುಮಿತ್ರೆ ಅದರ ಮುಚ್ಚಳ ತೆಗೆದು, ಕೈಗೆ ಪೌಡರ್ ಸವರಿಕೊಂಡು ಮುಖಕ್ಕೆ ಹಚ್ಚಿಕೊಳ್ಳಲು ಕೈ ಮೇಲಕ್ಕೆತ್ತಿ ದಾಗ

'ಸುಮೀ....'' ಎಂದು ತಂದೆ ಕರೆಯುವ ಸ್ವರ ಕೇಳಿಸಿತು.

"ಹಾಳಾಗಲಿ ಈ ಅಲಂಕಾರ" ಎಂದು ಸಿಟ್ಟಿನಲ್ಲಿ ಪೌಡರ್ ಕರಡಿಕೆ ಯನ್ನು ದೂಡಿ, ತನ್ನ ಕೈಗಳನ್ನು ಸೆರಗಿಗೆ ಸವರಿಕೊಂಡು ಸುಮಿತ್ರೆ ತಂದೆಯ ಕೋಣೆಗೆ ಧಾವಿಸಿದಳು.

"ಪದ್ಮಾ ಬಂದಳೇನಮ್ಮಾ" ಎಂದು ಪಂಡಿತರು ಕೇಳಿದರು.

"ಇಲ್ಲ. ಈಗ ಬಂದಾಳು"

"ಸುಡುವ ಬಿಸಿಲಿಗೆ ಮಗುವನ್ನು ಹೊರಗೆ ಕಳುಹಿಸಿದೆ. ಕಾಫಿ ಯಾದರೂ ಕುಡಿದು ಹೋದಳೋ ಇಲ್ಲವೋ ?''

ಸುಮಿತ್ರೆ ಮೌನ.

"ಸುಮೀ...."

"ಏನಪ್ಪಯ್ಯ ?''

"ಸಂಜೆ ಪದ್ಮಾಗೆ ಏನಾದರೂ ಕೆಲಸವಿದೆಯೆ ? ಎಲ್ಲಿಗಾದರೂ ಹೋಗು ತ್ತಾಳೆಯೆ ?''

"ಇಲ್ಲವಲ್ಲ."

"ಅವರೆಲ್ಲ ಬರುವಾಗ ಇಲ್ಲಿ ಇರುತ್ತಾಳೆ ಹಾಗಾದರೆ ?"

"ಇರದೆ ಮತ್ತೆಲ್ಲಿಗೆ ಹೋಗುತ್ತಾಳೆ.''

"ಹಾಗಲ್ಲ ಸುಮೀ. ಪುನಃ ಮುಂಚೆ ಎರಡು ಮೂರು ಸಲ ಆದ ಹಾಗೆಯೇ ಆದರೆ ?"

ಸುಮಿತ್ರೆಗೆ ತಂದೆಯ ಸಂಶಯ ತಿಳಿಯಿತು. ಒಂದು ವೇಳೆ ಹಾಗೆಯೇ ಆಗುವುದಾದರೂ ಇನ್ನು ಏನೂ ಮಾಡುವಂತಿರಲಿಲ್ಲ. ಅವರು ಆಗಲೇ ಪದ್ಮಾವತಿಯನ್ನು ನೋಡಿಯಾಗಿದೆ.

"ನೀವು ಸುಮ್ಮನೆ ಯೋಚನೆ ಮಾಡಬೇಡಿ ಅಪ್ಪಯ್ಯ. ಪದ್ಮಾ ಇದ್ದರೆ ಊರು ಮುಳುಗಿ ಹೋಗುವದಿಲ್ಲ. ಅಲ್ಲದೆ ಪದ್ಮಾ ಇವತ್ತು ಮಾಷ್ಟ ಮನೆಗೆ ಹೋದಾಗ ಅವಳನ್ನು ಅಲ್ಲಿ ಯಾರೂ ನೋಡಿಲ್ಲವೆ ?"

ಪಂಡಿತರು 'ಹೋ' ಎಂದರಷ್ಟೇ. ಸುಮಿತ್ರೆ ಮರಳಿ ಅಡುಗೆಯ ಮನೆಗೆ ಬಂದಾಗ ಗಂಜಿಯ ನೀರು ಕುದಿಯುತ್ತಿತ್ತು. ಅಕ್ಕಿಯನ್ನು ತೊಳೆದು ನೀರಿಗೆ ಹಾಕುತ್ತಿದ್ದಾಗ ಪದ್ಮಾವತಿ ಬಂದಳು.

"ತೆಗೆದುಕೊ ಅಕ್ಕ. ನಾಲ್ಕು ಘಂಟೆಗೊಮ್ಮೆ ಕೊಡಬೇಕಂತೆ. ಜ್ವರ ವಿದ್ದವರು ಸ್ನಾನಮಾಡಲಿಕ್ಕೆ ಹೋದದ್ದು ಯಾಕೆ ಎಂದು ಡಾಕ್ಟರರು ಜೋರು ಮಾಡಿದರು. ನೀನಾಗಲೀ, ಮೂರ್ತಿ ಮಾಷ್ಟ್ರಾಗಲೀ ಒಮ್ಮೆ ಅಲ್ಲಿಗೆ ಹೋಗಿ ಬರಬೇಕಂತೆ."

ಸುಮಿತ್ರೆ 'ಹೂಂ' ಎಂದಳಷ್ಟೆ. ಆದರೆ ಪದ್ಮಾವತಿ ಕಾಡತೊಡಗಿದಳು.

"ಏನಾಯಿತಕ್ಕ ಬೆಳಿಗ್ಗೆ, ಅಪ್ಪಯನ ಬೆನ್ನು ಸುಟ್ಟು ಹೋಗಿದೆ."

ಸುಮಿತ್ರೆಯ ಕಣ್ಣಲ್ಲಿ ನೀರು ತುಂಬಿತು.

"ಪುನಃ ಪುನಃ ಕೇಳಬೇಡ ಪದ್ಮಾ. ಮರೆತು ಹೋಗಿ ಹಂಡೆಯ ಕುದಿಯುವ ನೀರು ಒಂದು ತಂಬಿಗೆ ಸುರಿದು ಬಿಟ್ಟೆ. ಮನಸ್ಸು ಎಲ್ಲಿಯೋ, ನಾನೆಲ್ಲಿಯೊ. ಪುಣ್ಯಕ್ಕೆ ಇಷ್ಟೇ ಆಯಿತು."

"ಮನಸ್ಸು ಬೇರೆಲ್ಲಿಗೆ ಹೋಗುತ್ತದೆ ಅಕ್ಕಾ. ಮೂರ್ತಿ ಮಾಷ್ಟ್ರ ಮನೆಗೆ ಹೋಗಿದ್ದಿರಬೇಕು.

ಸುಮಿತ್ರೆ ಮಾತನಾಡಲಿಲ್ಲ. ಆದರೆ ಪದ್ಮಾವತಿ ಮಾತು ನಿಲ್ಲಿಸುವ ಮನಸ್ಸು ಮಾಡಲಿಲ್ಲ.

"ಸಾಧಾರಣ ಮೂರ್ತಿ ಮಾಷ್ಟ್ರ ಹಾಗೇ ಇದ್ದಾರೆ ಅಕ್ಕಾ. ಬೆಳ್ಳಗೆ, ಸಪೂರ, ಉದ್ದ."

"ನಿನ್ನ ಹತ್ತಿರ ಸಿಕ್ಕಿದವರ ಉದ್ದ, ಅಗಲ, ಬಣ್ಣ ಎಲ್ಲ ಕೇಳಿದೆನೇನೇ ನಾನು ?"

"ನಿನಗೆ ಸಿಟ್ಟು ಬಂದರೆ ನಾನು ಮಾತನಾಡುವುದೇ ಇಲ್ಲ, ಅಕ್ಕಾ."

ಸುಮಿತ್ರೆ ಪುನಃ ಮೌನ.

"ಅಕ್ಕಾ ನಾನು ಮೊನ್ನೆ ಹೇಳಿದ್ದು ಒಂದು. ಇವೊತ್ತು ಆದದ್ದು ಇನ್ನೊಂದು."

"ಏನಾಯಿತೀಗ ?"

" ನಿನ್ನ ಮದುವೆಯ ನಿಶ್ಚಯದ ಸಮಯ ಇನ್ನು ಯಾರೂ ನನ್ನನ್ನು ಮೊದಲು ನೋಡಬಾರದು ಎಂದು ಹೇಳಿದ್ದೆ. ಇವೊತ್ತು ಬೆಳಿಗ್ಗೆ ಮೂರ್ತಿ ಪಾಪ್ಪ ದೋಸ್ತಿ ಬರಬಹುದೆಂದು ನನಗೆ ಗೊತ್ತಿಲ್ಲದೆ ಹೋಯಿತು."

" ನೀನು ಅಧಿಕ ಪ್ರಸಂಗ ಮಾಡಿದರೆ ಹೊಡೆದೇ ಬಿಡುತ್ತೇನೆ ನೋಡು. ನನ್ನ ಮದುವೆಯ ಹೊರತು ಬೇರೆ ಯೋಚನೆಯೇ ಇಲ್ಲವೆ ಈ ಮನೆಯಲ್ಲಿ." ಸುಮಿತ್ರೆ ಕೊಂಚ ಸಿಟ್ಟಿನಲ್ಲಿಯೇ ಹೇಳಿದಳು.

" ಬೇಸರವಾಯಿತೇನು ಅಕ್ಕಾ " ಎಂದು ದೀನ ಮುಖದಿಂದ ಆಕೆ ಕೇಳಿದಾಗ, ತಾಯಿಯಿಲ್ಲದ ಪದ್ಮಾವತಿಗೆ, ಸುಮಿತ್ರೆಯೇ ತಾಯಿಯಾಗ ಬೇಕಾಗಿ ಬಂತು. ತಂಗಿಯನ್ನು ತಬ್ಬಿಕೊಂಡು, ತಾಯಿಯನ್ನು ನೆನೆಸಿಕೊಂಡು ಕಣ್ಣೀರಿಳಿಸುವಾಗ ಪದ್ಮಾವತಿ ಮೌನ.

ಪಂಡಿತರ ಗಂಜಿಯೂಟ ಮುಗಿಯುವಾಗಲೇ ಘಂಟೆ ಒಂದಾಗಿತ್ತು. ಊಟಕ್ಕೆ ತುಸು ಮುಂಚೆ ಮೈಯೆಲ್ಲ ಬೆವರಿ ಜ್ವರ ಇಳಿದ ಲಕ್ಷಣ ಕಾಣಿಸಿದುದರಿಂದ ಸುಮಿತ್ರೆ ಪದ್ಮಾವತಿಯರು ತುಸು ಸಮಾಧಾನದಿಂದಿದ್ದರು. ತಂದೆ ಊಟ ತೀರಿಸಿ ಮಲಗಿಕೊಂಡ ಮೇಲೆ ಅಕ್ಕ ತಂಗಿಯರು ತಮ್ಮ ಊಟ ತೀರಿಸಿ ಎಂಜಲು ಸಾರಿಸುವ ಹೊತ್ತಿಗೆ ಸರಿಯಾಗಿ ಮೀರೆ ಬಾಗಿಲು ದೂಡಿಕೊಂಡು ಒಳಬಂದಳು

" ಇನ್ನೂ ಊಟವೇ ಮುಗಿಯಲಿಲ್ಲವೇನೇ ಸುಮೀ ?" ಎಂದು ಕೇಳುತ್ತ.

" ಸ್ವಲ್ಪ ತಡವಾಯಿತು ಮೀರಕ್ಕ. ಅಪ್ಪಯ್ಯನಿಗೆ ಜ್ವರ. ಹೀಗಾಗಿ ಎಲ್ಲ ಕೆಲಸ ಸ್ವಲ್ಪ ವಿಲಂಬವಾಯಿತು."

" ಏನು, ಏನಾಯಿತು ಪಂಡಿತರಿಗೆ. ಬೆಳಿಗ್ಗೆ ಪದ್ಮಾ ಬಂದವಳು ಏನೂ ಹೇಳಲೇ ಇಲ್ಲವಲ್ಲ."

" ಅವಳು ಹೋಗುವಾಗ ಗೊತ್ತಿರಲಿಲ್ಲ. ಸ್ನಾನ ಮಾಡಿದರು. ಸ್ನಾನ ಮಾಡುವಾಗ ನಾನು ಕೈತಪ್ಪಿ ಕುದಿಯುತ್ತಿದ್ದ ನೀರು ಒಂದು ತಂಬಿಗೆ ಅವರ ಮೈಮೇಲೆ ಹಾಕಿದೆ. ಅದೇ ನೋವಿನಿಂದ ಜ್ವರಬಂದಿತೆಂದು ಕಾಣುತ್ತದೆ. ಆದರೆ ಈಗ ಒಂದರ್ಧ ಘಂಟೆ ಮುಂಚೆ ಮೈಯೆಲ್ಲ ಬೆವರಿತ್ತು. ಜ್ವರ ಬಿಟ್ಟಿದೆಯೋ ಏನೊ ಗೊತ್ತಿಲ್ಲ."

" ಒಳ್ಳೇ ದಿನ ನೋಡಿ ಹೀಗಾಯಿತಲ್ಲ ಸುಮೀ. ಸಂಜೆ ನಿಶ್ಚಯಕ್ಕೆ ಬರುವಾಗ."

ಮಾರುಗಳಿಗೆಗೆ ಮೀರೆ ಮನೆಯ ಯಜಮಾನಿತಿಯಾದಳು. ಒತ್ತಾಯದಿಂದ ಸುಮಿತ್ರೆಯನ್ನು ಸಿಂಗರಿಸಲು ಮುಂದಾದಳು. ತಲೆಬಾಚಿ ಹೆಳಲು ಹಾಕಿ ಸಾವಿತ್ರಮ್ಮನ ಧರ್ಮಾವರದ ಸೀರೆ, ಮಗಳ ಹುಟ್ಟುಹಬ್ಬಕ್ಕೆಂದು ಪಂಡಿತರು ತಂದಿದ್ದ ಜರತಾರಿ ಕಣದಿಂದ ಹೊಲಿಸಿದ್ದ ಕುಪ್ಪಸ ಇವುಗಳನ್ನು ತೊಡಿಸಿ, ಸಂಜೆಯ ಉಪಹಾರದ ಸಿದ್ಧತೆಗೆ ನೆರವಾಗುವಲ್ಲಿ ಘಂಟೆ ಮೂರಾಗಿತ್ತು. ಮೀರೆಯ ಸ್ನೇಹದ ವರ್ಚಸ್ಸಿಗೆ ಒಳಗಾಗಿ ಮಾತನಾಡದೆ ಕುಳಿತಿದ್ದ ಸುಮಿತ್ರೆಯ ಹೃದಯದಲ್ಲಿ ಪುನಃ ಹೊಯ್ದಾಟ ಆರಂಭವಾಗಿತ್ತು. ಇದೇ ರೀತಿ ಸಿಂಗರಿಸಿಕೊಂಡ ಹಿಂದಿನ ದಿನಗಳನ್ನು ನೆನೆಸಿಕೊಂಡಾಗ ಉಂಟಾದ ವ್ಯಾಕುಲತೆ ಮಾತಿನಲ್ಲಿ ಹೊರಬಂತು.

" ಎಷ್ಟು ಸಲ ಮೀರಕ್ಕ ಈ ಬೇಡವಾದ ಸಿಂಗಾರ ?"

ಸುಮಿತ್ರೆಯ ಮಾತನ್ನು ಮೀರೆ ಹಾಸ್ಯದ ಮಾತೆಂದು ಅಲ್ಲಗಳೆಯುವಂತಿರಲಿಲ್ಲ.

" ಇಲ್ಲ ಸುಮೀ. ಅವರು ಹೇಳುವಂತೆ ಈ ಸಲ ನಿನಗೆ ಮದುವೆಯಾಗಲೇಬೇಕು. ಮೊನ್ನೆ ರಾತ್ರಿ ನಿನ್ನ ಜಾತಕ ಹಿಡಿದುಕೊಂಡು ಅರ್ಧ ಘಂಟೆ ಬಡಬಡಿಸುತ್ತಿದ್ದರು. ಈಗ ಅದರ ಹುಚ್ಚು ಸುರುವಾಗಿದೆ. ಈ ಸಲ ನಿನ್ನ ಮದುವೆ ಹೊಂದಿಕೆಯಾಗುವುದೆಂದೇ ಅವರ ನಂಬಿಕೆ. ಇಷ್ಟಕ್ಕೂ ಏನು ಮಾಡಲಾಗುತ್ತದೆ ಸುಮೀ. ನಮ್ಮ ಹಣೆಯಲ್ಲಿ ಬರೆದಿರುವುದನ್ನು ನಾವು ಅನುಭವಿಸದೆ ಇರುತ್ತೇವೆಂದು ಹೇಳಿದರೆ ಆಗುವುದೆ ?"

ಸುಮಿತ್ರೆ ಪ್ರತಿಮಾತು ಆಡಲಿಲ್ಲ. ಅವಳ ಮನಸ್ಸಿನ ಕಳವಳದ ಹಿನ್ನೆಲೆಯ ಕುರಿತು ಚಿಂತಿಸುವಾಗ ಮೀರೆಗೆ ಪದ್ಮಾವತಿಯ ನೆನಪಾಯಿತು. ಅವಳು ಬಂದು ಇಷ್ಟು ಸಮಯವಾದರೂ ಪದ್ಮಾವತಿ ಇದಿರು ಬಂದಿರಲಿಲ್ಲ.

" ಪದ್ಮಾ ಎಲ್ಲಿ ಸುಮೀ ? " ಎಂದು ಕೇಳಿದಳು.

" ಇಲ್ಲೇ ಇದ್ದಳಲ್ಲ ಎಲ್ಲಿ ಹೋದಳು ? " ಎಂದು ಸುಮಿತ್ರೆ ಎದ್ದು ಬಂದು ಮನೆಯೆಲ್ಲ ಹುಡುಕಿದರೂ ಪದ್ಮಾವತಿ ಕಾಣಿಸಿಗಲಿಲ್ಲ.

ಸಂಜೆ ಐದು ಘಂಟೆಗೆ ಸರಿಯಾಗಿ ಮೂರ್ತಿ ‘ ಪಂಡಿತರೇ ? ’ ಎಂದು ಕೂಗಿಕೊಂಡೇ ಗೋಪಿಯನ್ನು ಕರೆದುಕೊಂಡು ಮನೆಯೊಳಗೆ ಬಂದ. ಪಂಡಿತರು ನಾಲ್ಕು ಘಂಟೆಯಿಂದಲೇ ಮುಖಮಂಟಪದಲ್ಲಿ ಕುಳಿತು ಕಾಯುತ್ತಿದ್ದರು. ಮಧ್ಯಾಹ್ನದ ಹೊತ್ತಿಗೆ ಜ್ವರ ಇಳಿದುದರಿಂದ ತುಸು ಸಮಾಧಾನವಾಗಿದ್ದಿತಾದರೂ ಅತೀವ ಆಯಾಸದಿಂದ ಮುಖ ಕಳೆಗುಂದಿತ್ತು. ಗೆಳೆಯನ ಜೊತೆಗೆ ಬಂದ ಮೂರ್ತಿ ಪಂಡಿತರನ್ನು ನೋಡಿ ಕಂಗಾಲಾದ.

“ ಏನು ಸೌಖ್ಯವಿಲ್ಲವೆ ? ”

“ ಇಲ್ಲ. ಸ್ವಲ್ಪ ಜ್ವರ ಬಂದಿತ್ತು ನೋಡಿ. ಈಗ ಕಡಿಮೆಯಾಗಿದೆ. ಇರಲಿ ಬಿಡಿ. ಇವರೇ ಏನು ನಿಮ್ಮ ಸ್ನೇಹಿತರು ? ಬೆಳಿಗ್ಗೆ ಬಂದರೆಂದು ಕಾಣಿಸುತ್ತದೆ. ನಮಸ್ಕಾರ ” ಎಂದು ಪಂಡಿತರು ಗೋಪಿಯನ್ನು ಸ್ವಾಗತಿಸುತ್ತ ಹೇಳಿದರು.

ಗೋಪಿ “ ನಮಸ್ಕಾರ ” ಎಂದು ಹೇಳಿ ನಕ್ಕ. ಮೂರ್ತಿ ಏಳುತ್ತಿದ್ದ ಪಂಡಿತರನ್ನು ತಡೆದು “ ನೀವು ಕುಳಿತುಕೊಳ್ಳಿ. ನಾವೇನು ಅಪರಿಚಿತರಲ್ಲ. ಇವನೋ ನಾನು ಎರಡು ಏಟು ಬಿಗಿದರೂ ಮಾತನಾಡುವವನಲ್ಲ. ನಾನು ಹೇಳುತ್ತಿದ್ದ ಗೋಪೀನಾಥ ಇವರೇ. ಎರಡು ವಾರಗಳ ರಜೆಯಲ್ಲಿ ಓಡಿ ಬಂದಿದ್ದಾನೆ. ಅಲ್ಲದೆ ಈ ವಾರಾಂತ್ಯದಲ್ಲಿ ಪುನಃ ಉಡುಪಿಗೆ ಹೋಗಬೇಕಂತೆ. ಅದಕ್ಕಾಗಿ ಇವೊತ್ತೇ ನಿಮ್ಮನ್ನು ನೋಡಿ ಹೋಗೋಣ ಎಂದು ಕಂಡದ್ದರಿಂದ ಎಳೆದುಕೊಂಡು ಬಂದೆ ” ಎಂದ.

“ ಬಂದಿರಲ್ಲ, ಸಂತೋಷವಾಯಿತು ” ಎಂದರು ಪಂಡಿತರು. ಗೆಳೆಯರಿಬ್ಬರೂ ಅಲ್ಲಿಯೇ ಇದ್ದ ಕುರ್ಚಿಗಳನ್ನು ಸರಿಪಡಿಸಿಕೊಂಡು ಕುಳಿತರು.

ಪಂಡಿತರ ಪ್ರಕೃತಿ ಅವರನ್ನು ಏಳಗೊಡುವಂತಿರಲಿಲ್ಲ. ಮದುವೆಯ ವ್ಯವಹಾರದಲ್ಲಿ ಮೂರ್ತಿ ಹೊಸಬ. ಏನು ಮಾಡಬೇಕೆಂದು ತಿಳಿಯದೆ ಎರಡು ನಿಮಿಷ ಮೌನವಾಗಿದ್ದ ಪಂಡಿತರು ‘ ಸುಮೀ ’ ಎಂದು ಕರೆಯುವ ಹೊತ್ತಿಗೆ ಸರಿಯಾಗಿ ಮೀರೆ ನಗುತ್ತ ಬಾಗಿಲಿಗೆ ಬಂದು ಗಂಡನನ್ನುದ್ದೇಶಿಸಿ “ ಸುಮಿತ್ರೆ ತಾನಾಗಿಯೇ ಓಡಿ ಬರಬೇಕೆ ನೀವು ಕರೆಯಬಾರದೆ ? ತೀರ ಹೊಸಬರಂತೆ ಮಾಡುತ್ತೀರಲ್ಲಾ ” ಎಂದಳು. ಆದರೆ ಇದಿಷ್ಟರಲ್ಲೇ ಸುಮಿತ್ರೆ ಹೊರಬಂದಿದ್ದಳು.

ಪರಂಪರೆ ಉಳಿಸಿರುವ ಒಂದು ಸಂಪ್ರದಾಯದ ಪುನರಾವರ್ತನೆ ನಡೆಯಿತು. ಸುಮಿತ್ರೆ ಗೋಪಿಯೇ ಮೊದಲಾಗಿ ಎಲ್ಲರಿಗೂ ನಮಸ್ಕರಿಸಿ ಒಂದೆಡೆ ಸರಿದುಕೊಂಡು ನಿಂತಳು.

ಗೋಪಿ ಸುಮಿತ್ರೆಯನ್ನು ಮೊದಲ ಬಾರಿಗೆ ನೋಡಿದ.

ದೃಢತೆಯನ್ನು ಸೂಚಿಸುವ ಆಕೆಯ ಮೊಗದಲ್ಲಿ ಅಂದು ವಿಲಕ್ಷಣ ಸೌಂದರ್ಯವೊಂದು ಕಂಡು ಬರುತ್ತಿತ್ತು. ಎವೆಯಿಕ್ಕದೆ ಗೋಪಿ ಆಕೆಯನ್ನು ನೋಡುತ್ತಿದ್ದ. ಸುಮಿತ್ರೆಯೂ ಗೋಪಿಯನ್ನು ನೋಡದಿರಲಿಲ್ಲ. "ಸಾಧಾರಣ ಮೂರ್ತಿಮಾಷ್ಟ್ರು ಹಾಗೇ ಇದ್ದಾರೆ ಅಕ್ಕಾ. ಬೆಳ್ಳಗೆ, ಸಪೂರ, ಉದ್ದ !" ಪದ್ಮಾವತಿಯ ಮಾತು ಆಕೆಯ ಹೃದಯದಲ್ಲಿ ಪ್ರತಿಧ್ವನಿಸುತ್ತಿತ್ತು. ಗೋಪಿಯ ದೃಷ್ಟಿಗೆ ಅಂಜಿ ಸುಮಿತ್ರೆ ಮುಖ ತಗ್ಗಿಸಲಿಲ್ಲ. ಆ ಮುಖದ ಗಾಂಭೀರ್ಯ ಮನೆಯ ಆ ಮುಖಮಂಟಪದ ತುಂಬ ತನ್ನ ವರ್ಚಸ್ಸನ್ನು ಪಸರಿಸಿದಂತಿತ್ತು. ಗೋಪಿ ಏನನ್ನೋ ಯೋಚಿಸುತ್ತಿದ್ದ.

ಸುಮಿತ್ರೆ ಕಾಫಿ ತರಲು ಒಳಹೋದಳು. ಉಪಹಾರದ ಕೆಲಸ ಮುಗಿಯಿತು. ಗೋಪಿ ಮತ್ತೊಮ್ಮೆ ಸುಮಿತ್ರೆಯನ್ನು ನೋಡಿದ. ಮೂರ್ತಿ ಆ ಮಾತು ಈ ಮಾತು ತೆಗೆದು ಸಂದರ್ಭದ ರಸಿಕತೆಯನ್ನು ಹೆಚ್ಚಿಸಲು ಪ್ರಯತ್ನಿಸಿದ. ಪಂಡಿತರು ಔಪಚಾರಿಕವಾಗಿ ಅಗತ್ಯವಿರುವಷ್ಟು ಮಾತುಗಳನ್ನಾಡಿದರು.

ಹೊತ್ತು ಇಳಿಯುತ್ತ ಬಂತೆಂದು ಪಂಡಿತರ ಅನುಮತಿ ಪಡೆದು ಮೂರ್ತಿ ಗೆಳೆಯನೊಡನೆ ಮೇಲಕ್ಕೆದ್ದ. ಹೊರಡುವಾಗ ಒಳಗೆ ಬಂದು ಸುಮಿತ್ರೆಯನ್ನು ಕುರಿತು "ಹೋಗಿ ಬರುತ್ತೇನೆ ಸುಮೀ. ಔಷಧಿ ತಂದಿದೆಯಲ್ಲ. ನಾಳೆ ಬಂದು ನೋಡುತ್ತೇನೆ" ಎಂದ. ಸುಮಿತ್ರೆ ಕೃತಜ್ಞತೆಯಿಂದ ನಕ್ಕಳು. "ನೀವು ಒಮ್ಮೆ ಸರ್ವೋತ್ತಮರಾಯರನ್ನು ಕಾಣಬೇಕಂತ ಮಾಷ್ಟ್ರೆ. ಔಷಧಿಗೆ ಹೋದಾಗ ಹೇಳಿದರು" ಎಂದಳು. "ಹಾಗೇನು ? ಆಗಬಹುದು" ಎನ್ನುತ್ತ ಮೂರ್ತಿ ಹೊರಬಂದ. ಗೋಪಿ ತಿರುಗಿ ಪಂಡಿತರಿಗೆ 'ನಮಸ್ಕಾರ' ಎಂದು ಹೇಳಿ ಗೆಳೆಯನನ್ನು ಹಿಂಬಾಲಿಸಿದ.

ಮನೆಯ ಆವರಣ ದಾಟಿ ರಸ್ತೆಗೆ ಬರುವತನಕ ಗೆಳೆಯರಿಬ್ಬರೂ ಮೌನವಾಗಿದ್ದರು. ತುಸು ದೂರ ಹೋದ ಮೇಲೆ ಮೂರ್ತಿಗೆ ಈ ಮೌನ ತಡೆಯಲಾರದಾಯಿತು. ನಗೆಯೆಬ್ಬಿಸಲೆಂದು ಮಾತನಾಡಿದ.

“ ಹುಡುಗಿಯನ್ನು ನೋಡಿದೊಡನೆಯೆ ಇಷ್ಟು ಆಲೋಚನೆ ಆರಂಭವೆ? ಸುಮಿತ್ರೆ ಎಂಥ ಮಾಟ ಮಾಡಿಬಿಟ್ಟಳೊ. ಇನ್ನು ಮದುವೆಗೆ ನಿಶ್ಚಯಿಸುವುದು ಮಾತ್ರ ಬಾಕಿಯೆಂದು ಕಾಣುತ್ತದೆ.”

“ ಮೂರ್ತೀ....” ಎಂದು ಆತನ ನಗೆಮಾತನ್ನು ಕಡೆಗಣಿಸಿಯೇ ಗೋಪಿ ಹೇಳಲಿಂದ.

“ ಏನೋ....”

“ ಆ ಹುಡುಗಿಯ ತಂಗಿ ಪದ್ಮಾವತಿಯನ್ನಾದರೆ ನಾನು ಮದುವೆಯಾಗಲು ಸಿದ್ಧನಿದ್ದೇನೆ.”

೫

ಗೆಳೆಯರಿಬ್ಬರೂ ಮೌನವಾಗಿಯೇ ಮುಂದೆ ಸಾಗಿದ್ದರು. ಐದು ನಿಮಿಷಗಳ ದಾರಿ ಹೀಗೆಯೇ ಸಾಗಿದರೂ ಮೂರ್ತಿ ಮಾತನಾಡದುದನ್ನು ಕಂಡು ಗೋಪಿ ಕೇಳಿದ.

“ ಏನೋ ಇದು. ಸಿಟ್ಟು ಬಂತೇನು ಮತ್ತೆ ನನ್ನ ಮಾತು ಕೇಳಿ. ”

“ ಛೇ. ಛೇ. ಹಾಗೇನೂ ಇಲ್ಲ. ಸುಮ್ಮನೆ ಏನೊ ಆಲೋಚಿಸುತ್ತಿದ್ದೆ. ಏನು, ಏನು ಮಾತು ಹೇಳಿದೆ ? ” ಎಂದು ಬೇಕೆಂದೇ ಗೋಪಿಯ ನಿರ್ಣಯವನ್ನು ಪುನಃ ಕೇಳುವ ಇಚ್ಛೆ ಪ್ರಕಟಿಸಿದ.

“ ನಾನು ಸುಮಿತ್ರೆಯನ್ನು ಮದುವೆಯಾಗಲಾರೆ. ಪದ್ಮಾವತಿಯ ಕುರಿತಾದರೆ ಅಣ್ಣನೊಡನೆ ಮಾತನಾಡಿ ನೋಡುತ್ತೇನೆ. ”

ಮೂರ್ತಿ ತೋರಿಕೆಯ ಆಶ್ಚರ್ಯವನ್ನು ಪ್ರಕಟಿಸುತ್ತ,

“ ನಿನಗೆ ಹುಚ್ಚುಗಿಚ್ಚು ಹಿಡಿದಿಲ್ಲವಷ್ಟೆ ಗೋಪಿ. ನೀನು ನೋಡಿರುವುದು ಸುಮಿತ್ರೆಯನ್ನು. ಮದುವೆಯಾಗಬಯಸುವುದು ಪದ್ಮಾವತಿಯನ್ನು.”

“ ಬೆಳಿಗ್ಗೆಯೇ ನೋಡಿದೆನಲ್ಲ ಪದ್ಮಾವತಿಯನ್ನು. ಸುಮಿತ್ರೆಯನ್ನು ನಾನು ಮದುವೆಯಾಗುವಂತಿಲ್ಲ.”

“ ಸುಮಿತ್ರೆಯಲ್ಲಿ ನೀನು ಏನು ದೋಷ ಕಂಡೆ, ಗೋಪೀ ?”

“ ನಾನು ದೋಷ ಆರೋಪಿಸಿ ಹೇಳಿದೆನೇ ?”

"ಹಾಗಾದರೆ ಅಕ್ಕನನ್ನು ತಿರಸ್ಕರಿಸಿ ತಂಗಿಯನ್ನು ಮದುವೆಯಾಗುವ ಇಚ್ಛೆ ತೋರಿಸಲು ಕಾರಣ ?''

ಈಗ ಗೋಪಿಯ ಮಾತು ಸ್ವಲ್ಪ ತಡವಾಗಿ ಬಂತು.

"ಸುಮಿತ್ರೆಯನ್ನು ನೋಡುವಾಗ ನನಗೆ ಹೆದರಿಕೆಯಾಗುತ್ತದೆ."

"ಹೆದರಿಕೆ ?"

"ಹೌದು; ಹೆದರಿಕೆ. ನೀನು ನಗಬಹುದು ಮೂರ್ತಿ. ಆದರೆ ನಾನು ಅವಳನ್ನು ಮದುವೆಯಾಗುವಂತಿಲ್ಲ. ಮದುವೆಯಾದರೆ ನನ್ನ ಸಂಸಾರ ಅಷ್ಟೊಂದು ಸುಖಮಯವಾದೀತೆಂದು ನಾನು ನಂಬುವದಿಲ್ಲ. ಆ ಹುಡುಗಿಯ ಮುಖದಲ್ಲಿ ಕಾಣುವ ದಿಟ್ಟತನವನ್ನು ನಾನು ಇದಿರಿಸಲಾರೆ. ನಾನೇನು ಸೈಕಾಲಜಿ ಅಭ್ಯಾಸ ಮಾಡಿಲ್ಲ ಮೂರ್ತಿ. ಆದರೆ ಮುಖ ನೋಡಿ ಹೇಳುವದಾದರೆ ಪದ್ಮಾವತಿಯನ್ನಾದರೆ ಮದುವೆಯಾಗಬಹುದೆಂದು ತೋರುತ್ತದೆ. ಪಂಡಿತರ ಬಡತನ ಇಲ್ಲಿ ತಡೆಯಾಗಿ ಬರುವಂತಿಲ್ಲ. ನನ್ನ ಅಣ್ಣನನ್ನು ಒಪ್ಪಿಸುವ ಭಾರವೂ ನನಗೇ ಸೇರಿದೆ.

"ಪದ್ಮಾವತಿಯ ಮದುವೆಗೆಂದು ನಿನ್ನನ್ನು ಇಲ್ಲಿಯತನಕ ಬರಹೇಳಿಲ್ಲ ಗೋಪಿ" ಮೂರ್ತಿಯ ದನಿಯಲ್ಲಿ ಸ್ವಲ್ಪ ತಿರಸ್ಕಾರದ ಛಾಯೆಯಿತ್ತು. ಒಂದು ಆಸೆಯ ಸಮಾಧಿ ಸ್ನೇಹವನ್ನು ಮರೆಸಿತ್ತು—ಆ ಕ್ಷಣಕ್ಕೆ.

ಗೋಪಿ ಮಾತ್ರ ಸಿಟ್ಟಾಗಲಿಲ್ಲ. ಬದಲು ನಗುತ್ತಲೇ ಹೇಳಿದ.

"ಎಷ್ಟು ಬೇಗ ಸಿಟ್ಟು ಬರುತ್ತದೆ ಮೂರ್ತಿ ! ಒಂದು ಮಗುವಿನ ತಂದೆಯಾದರೂ ನೀನಿನ್ನೂ ಕಾಲೇಜು ವಿದ್ಯಾರ್ಥಿಯಂತೆಯೇ ಇದ್ದೀಯ."

ಮೂರ್ತಿಗೆ ತನ್ನ ಸಿಟ್ಟಿನ ಅರಿವಾಗಿ ಮುಖದಲ್ಲಿ ನಗೆ ತಂದುಕೊಳ್ಳ ಯತ್ನಿಸಿದ.

ಗೆಳೆಯರಿಬ್ಬರೂ ಬಾವುಟೆ ಗುಡ್ಡದ ಮೇಲೇರಿ ಬಂದಿದ್ದರು. ಅರಬೀ ಸಮುದ್ರದ ಭವ್ಯ ನೋಟವನ್ನು ನೋಡುವುದರಲ್ಲಿ ಗೋಪಿ ತನ್ನನ್ನು ತಾನೇ ಮರೆತಿದ್ದ. ಸೂರ್ಯ ಅದೇ ಅಸ್ತಂಗತನಾಗುತ್ತಿದ್ದ.

"ಬಹುಶಃ ಸುಮಿತ್ರೆಗೆ ಮದುವೆಯಾಗುವ ಯೋಗವೇ ಇಲ್ಲವೆಂದು ತೋರುತ್ತದೆ. ಅದೇ ಕಾರಣ ಇಂಥ ಅವಸ್ಥೆ" ಮೂರ್ತಿ ಮಾತು ಆರಂಭಿಸಿದ. ಆದರೆ ಗೋಪಿಯಿಂದ ಉತ್ತರ ಬರಲು ತಡವಾಗಲಿಲ್ಲ.

“ ಎಂಥ ಮಾತು ಮೂರ್ತಿ ! ನಾನು ಬೇಡವೆಂದೆನೆಂದು ಆ ಹುಡುಗಿ ಮದುವೆಯಾಗುವಂತಿಲ್ಲವೆ ? ಏನು ಹುಚ್ಚು ಕಲ್ಪನೆ ನಿನ್ನದು ? ”

“ ಹೌದು ಹುಚ್ಚಿರಬಹುದು ” ಎಂದು ಮೂರ್ತಿ ನಕ್ಕ. ಆದರೆ ಸುಮಿತ್ರೆಯ ಮದುವೆಯ ಕುರಿತು ಮತ್ತೆ ಗೋಪಿಯೊಡನೆ ಮಾತಿಗೆ ತೊಡಗಲಿಲ್ಲ.

ಪೇಟೆಯೆಲ್ಲ ಸುತ್ತಿ ಮನೆ ಸೇರುವಾಗ ಘಂಟೆ ಎಂಟಾಗಿತ್ತು. ಮೀರೆ ಪಂಡಿತರ ಮನೆಯಿಂದ ಬಂದವಳು ರಾತ್ರಿಯ ಅಡುಗೆಯನ್ನು ತಯಾರಿಸಿಯೂ ಆಗಿತ್ತು. ಗೋಪಿಯ ಇದಿರಿನಲ್ಲಿ ಮದುವೆಯ ಮಾತು ಆಡುವುದೆಂತು ಎಂದು ಮನದಂದು ಗಂಡನೆಡೆಗೆ ನೋಡುತ್ತ ಪ್ರಶ್ನಾರ್ಥಕ ನಗೆ ನಕ್ಕಳು. ಆದರೆ ಮೂರ್ತಿಯ ಮುಖಭಾವದಿಂದ ಆಕೆ ಏನನ್ನೂ ತಿಳಿದುಕೊಳ್ಳುವಂತಿರಲಿಲ್ಲ.

ರಾತ್ರಿ ಏಕಾಂತದಲ್ಲಿ ಗಂಡನೊಡನೆ ಮಾತನಾಡುವ ಅವಕಾಶ ದೊರಕಿದಾಗ

“ ಏನು ಒಪ್ಪಿದರೆ ? ” ಎಂದು ಕೇಳಿದಳು.

“ ಸುಮಿತ್ರೆ ಏನು ಹೇಳುತ್ತಾಳೆ ? ”

“ ಒಂದು ಮಾತನ್ನೂ ಆಡಲಿಲ್ಲ ಹುಡುಗಿ. ‘ ನಿನಗೆ ಒಪ್ಪಿಗೆಯಷ್ಟೆ ಸುಮಿ ’ ಎಂದು ಪಂಡಿತರು ಕೇಳಿದಾಗ ‘ನಾನು ಹೋದರೆ ನಿಮ್ಮನ್ನು ಯಾರು ನೋಡಿಕೊಳ್ಳುತ್ತಾರೆ ಅಪ್ಪಯ್ಯ’ ಎಂದು ಹೇಳಿ ನಗಾಡಿದಳು. ಆದರೆ ನಾನು ಕೇಳಿದಾಗ ಮದುವೆಯ ವಿಚಾರ ಯಾವ ಮಾತೂ ಇಲ್ಲ ”

“ ಪದ್ಮಾವತಿ ಎಲ್ಲಿ ಹೋಗಿದ್ದಳು ? ಕಾಣಿಸಲೇ ಇಲ್ಲ. ”

“ ನೀವು ಹೋಗಿ ಒಂದರ್ಧ ಘಂಟೆಯಲ್ಲಿ ಬಂದಳು. ಬಂದವಳೇ ಸುಮಿತ್ರೆಯನ್ನು ಅಭಿಪ್ರಾಯ ತಿಳಿಯಲು ಕಾಡತೊಡಗಿದಾಗ ಸುಮಿತ್ರೆ ಸಿಟ್ಟುಗೊಂಡು ಬೈದಮೇಲೆ ಯಾರೊಡನೆಯೂ ಮಾತನಾಡದೇ ಮಲಗಿಕೊಂಡಳು. ಅದಿರಲಿ. ನಿಮ್ಮ ಸ್ನೇಹಿತರು ಏನನ್ನುತ್ತಾರೆ ಹೇಳಿರಲ್ಲ. ಒಪ್ಪಿದರೋ ಇಲ್ಲವೊ.”

“ ಇಲ್ಲ. ಪದ್ಮಾವತಿಯನ್ನಾದರೆ ಮದುವೆಯಾಗುತ್ತಾನಂತೆ. ಸುಮಿತ್ರೆಯನ್ನು ಒಲ್ಲನಂತೆ. ”

“ ನನ್ನಾಣೆ ? ”

“ ನಿನ್ನಾಣೆ ”

ಮೀರೆಯ ಮುಖ ಬಾಡಿತು. ಸ್ವಲ್ಪ ಸಮಯ ಮೌನವಾಗಿ ಇದ್ದಳು. ಆಮೇಲೆ ತನ್ನಷ್ಟಕ್ಕೆ ತಾನೇ

" ಆ ಹುಡುಗಿಯ ಹಣೆಬರಹವೇ ಹೀಗಿದೆಯೋನೊ " ಎಂದಳು.

" ಅದು ಏನೇ ಇರಲಿ. ನೀನು ನಾಳೆ ಸಂಜೆಯವರೆಗೆ ಪಂಡಿತರಲ್ಲಿಗೆ ಹೋಗಬೇಡ. ನಾನೇ ಶಾಲೆ ಬಿಟ್ಟಮೇಲೆ ಸಂಜೆ ಹೋಗಿ ಬರುತ್ತೇನೆ. ಅವರು ಬಹುಶಃ ಶಾಲೆಗೆ ಬರಲಿಕ್ಕಿಲ್ಲ " ಎಂದು ಮೂರ್ತಿ ಹೇಳಿದುದಕ್ಕೆ ಮೀರೆ ಸೈಗುಟ್ಟಿದಳು.

ಆದರೆ ಶಾಲೆ ಮುಗಿದೊಡನೆಯೇ ಮೂರ್ತಿ ನೇರವಾಗಿ ಮೊದಲು ಸರ್ವೋತ್ತಮರಾಯರಲ್ಲಿಗೆ ಹೋದ. ಪಂಡಿತರು ಪೂರ್ಣ ಸುಧಾರಿಸಿಲ್ಲವೆಂದು ಶಾಲೆಗೆ ಒಬ್ಬಳೇ ಬಂದಿದ್ದ ಪದ್ಮಾವತಿ ತಿಳಿಸಿದ್ದಳು. ಗೋಪಿಯ ಅಭಿಪ್ರಾಯವನ್ನು ಪಂಡಿತರಿಗೆ ಯಾವ ರೀತಿ ತಿಳಿಸುವುದು, ತನ್ನ ಪ್ರಯತ್ನ ಮುಂದುವರಿಯಬೇಕೆ, ಸುಮಿತ್ರೆಯ ಮದುವೆ ಸಾಧ್ಯವೇ ಇಲ್ಲ ಎನ್ನುವ ಸ್ಥಿತಿ ಬಂದೊದಗುತ್ತಿದೆಯಲ್ಲ, ಎಂದೆಲ್ಲ ವಿಚಾರಗಳನ್ನು ಮೆಲುಕು ಹಾಕುತ್ತ ಸುಮಿತ್ರೆಗೆ ಕೊಟ್ಟ ಮಾತಿನಂತೆ ಸರ್ವೋತ್ತಮರಾಯರಲ್ಲಿಗೆ ಮೂರ್ತಿ ಹೊರಟಿದ್ದ. ಅವರು ಇವನನ್ನು ಕಂಡೊಡನೆಯೇ

" ಶ್ರೀನಿವಾಸರಾಯರು ಹೇಗಿದ್ದಾರೆ. ನಿನ್ನೆ ಏನೊ ಜ್ವರವಿರುವಾಗಲೇ ಬಿಸಿ ನೀರು ಹಾಕಿಕೊಂಡರಂತಲ್ಲ. ಈಗ ಹೇಗಿದೆ ?" ಎಂದು ಪ್ರಶ್ನಿಸಿದರು.

" ಜ್ವರ ಬಿಟ್ಟಿದೆಯಂತೆ, ಇವತ್ತು ಬೆಳಿಗ್ಗೆ. ಆದರೂ ತುಂಬ ನಿತ್ರಾಣವಿದೆಯಂತೆ. ಈಗ ಅಲ್ಲಿಗೇ ಹೊರಟಿದ್ದೇನೆ."

" ಹೊಟ್ಟೆನೋವು, ಕೆಮ್ಮು ಈಗ ಕಡಿಮೆಯಾಗಿಲ್ಲವೆ ? " ಎಂದು ಸರ್ವೋತ್ತಮರಾಯರು ಪಂಡಿತರ ದೇಹಸ್ಥಿತಿಯ ಎಕ್ಸರೇ ವರದಿಯನ್ನು ನೆನೆಸಿಕೊಂಡು ಕೇಳಿದರು.

" ಕೆಮ್ಮು ಸ್ವಲ್ಪ ಕಡಿಮೆಯೆಂದು ಮೊನ್ನೆ ಹೇಳಿದ್ದರು. ಹೊಟ್ಟೆನೋವು ಇನ್ನೂ ಆಗಾಗ ಬರುತ್ತಿದೆ. ಮೊನ್ನೆ ಕ್ಲಾಸಿನಲ್ಲಿ ಒಂದು ದಿನ ಪಾಠವನ್ನು ಅರ್ಧಕ್ಕೆ ನಿಲ್ಲಿಸುವ ಪ್ರಸಂಗ ಬಂದಿತ್ತು. "

" ಆಪರೇಶನ್ ವಿಚಾರ ಏನು ನಿಶ್ಚಯಿಸಿದಿರಿ ? "

" ಏನೂ ನಿಶ್ಚಯಿಸಿಲ್ಲ. ಅವರು ಒಪ್ಪುವಂತೆಯೂ ಕಾಣುವುದಿಲ್ಲ." ಎಂದು ಹೇಳಿ ಒಂದು ಕ್ಷಣ ತಡೆದು, " ಇನ್ನು ಒಂದೆರಡು ತಿಂಗಳ ಮೇಲೆ ನಿಶ್ಚಯಿಸಿದರೆ ಏನಾದರೂ ತೊಂದರೆಯಿದೆಯೆ ? "

" ಒಂದೆರಡು ತಿಂಗಳೆ ?....ಅಷ್ಟು ಕಾಲ ವಿಲಂಬಿಸುವುದು ತುಂಬ ಅಪಾಯಕರವಲ್ಲವಾದರೂ ಅಷ್ಟು ಒಳ್ಳೆಯದೆಂದು ನನಗನಿಸುವುದಿಲ್ಲ. ಅಲ್ಲದೆ ಅವರಿಗೆ ಕೆಲಸದಿಂದ ವಿಶ್ರಾಂತಿಯೂ ಅವಶ್ಯ. ನಿಮಗೆ ತಿಳಿಸುವುದು ಒಳ್ಳೆಯದೆಂದು ಕಂಡುದರಿಂದ ಬರಹೇಳಿದೆ.

ಸರ್ವೋತ್ತಮರಾಯರನ್ನು ಕಂಡ ಮೇಲೆ ಮೂರ್ತಿ ಪಂಡಿತರ ಮನೆಯ ದಾರಿ ಹಿಡಿದ. ಗೋಪಿಯ ಅಭಿಪ್ರಾಯವನ್ನು ಪಂಡಿತರಿಗೆ ತಿಳಿಸುವ ಬಗೆ ಹೇಗೆ, ಎಂದು ಯೋಚಿಸಿ ಯೋಚಿಸಿ ಆತ ಹಣ್ಣಾಗಿದ್ದ. ತಾನು ತಡಮಾಡಿದೆನೆಂದು ಅವರು ಅರ್ಧಮರ್ಧ ಊಹಿಸಿರಲೂ ಬಹುದು ಎಂದೆನಿಸಿತು. ಅದರಿಂದ ಅವನ ಮನಸ್ಸಿನ ದುಗುಡ ಹೆಚ್ಚಿತೇ ಹೊರತು ಸಮಾಧಾನವೆನಿಸಲಿಲ್ಲ.

ಮುಖಮಂಟಪದಲ್ಲಿ ಮೇಜಿನ ತುಂಬ ಲೆಕ್ಕದ ಪುಸ್ತಕಗಳನ್ನು ಹರಪಿಕೊಂಡು ಸುಮಿತ್ರೆ ಅಭ್ಯಾಸ ನಡೆಸಿದ್ದಳು. ಮೂರ್ತಿ ಮೆಟ್ಟಿಲೇರಿ ಬರುವವರೆಗೂ ಆಕೆ ಮುಖವೆತ್ತಲಿಲ್ಲ. ಮೂರ್ತಿಯೇ ' ಪಂಡಿತರು ಹೇಗಿದ್ದಾರೆ, ಸುಮೀ ' ಎಂದಾಗಲೇ ಮೂರ್ತಿಯನ್ನು ನೋಡಿದುದು. ಆದರೆ ಸುಮಿತ್ರೆಯ ನಿತ್ಯ ನಗು ಅವಳಲ್ಲಿರಲಿಲ್ಲ.

" ಜ್ವರ ಬಿಟ್ಟಿದೆ. ಒಳಗೆ ಮಲಗಿಕೊಂಡಿದ್ದಾರೆ. ಬನ್ನಿ " ಎಂದು ಮೂರ್ತಿಯನ್ನು ಪಂಡಿತರ ಕೋಣೆಯೊಳಗೆ ಕರೆದುಕೊಂಡು ಹೋದಳು. ಪಂಡಿತರಿಗೆ ಜೊಂಪುಹಿಡಿದಿತ್ತು. ಮಾಷ್ಟ್ರು ಬಂದಿದ್ದಾರೆಂದು ಸುಮಿತ್ರೆ ಮೆಲ್ಲನೆ ಹೇಳಿದಾಗ ಕಣ್ಣು ತೆರೆದರು.

" ಏನು ಹೇಗಿದ್ದೀರಿ ?" ಎಂದು .ಮೂರ್ತಿ ಮಾತಿನ ಪೀಠಿಕೆ ಹಾಕಿ ಕುಳಿತುಕೊಂಡ.

" ಸ್ವಲ್ಪ ಹುಶಾರಾಗಿದ್ದೇನೆ. ಜ್ವರ ಬಿಟ್ಟಿದೆ. ಎರಡು ದಿನಗಳ ರಜೆಗೆ ಬರೆದುಕೊಂಟದ್ದೇನೆ. ನನ್ನ ' ಕೇಜುವಲ್ ' ಎಲ್ಲ ಮುಗಿದಿದೆ. ಸ್ವಲ್ಪ ಹೆಡ್ಮಾಷ್ಟ್ರ ಹತ್ತಿರ ಹೇಳಿ " ಎಂದರು ಪಂಡಿತರು. ತಯಾರಿಸಿಟ್ಟಿದ್ದ ಒಂದು ಲೋಟ ಕಾಫಿಯನ್ನು ಮೂರ್ತಿಗೆ ತಂದು ಕೊಟ್ಟ ಸುಮಿತ್ರೆಯನ್ನು ಕಂಡು

" ನನ್ನಿಂದಾಗಿ ಸುಮಿತ್ರೆಗೂ ಶಾಲೆಗೆ ಹೋಗಲಾಗಲಿಲ್ಲ." ಎಂದು ಮಾತು ಮುಂದುವರಿಸಿದರು.

" ನನ್ನ ವಿಚಾರ ಹಾಗಿರಲಿ, ಅಪ್ಪಯ್ಯ. ಇನ್ನು ನೀವು ತುಂಬ ಮಾತ ನಾಡುತ್ತ ಕುಳಿತುಕೊಳ್ಳಬೇಡಿ. ಮತ್ತಷ್ಟು ಸಿತ್ರಾಣಕ್ಕೆ ಕಾರಣವಾದೀತು." ಎಂದು ಹೇಳಿ ಸುಮಿತ್ರೆ ಅಲ್ಲಿಂದ ಹೊರಬಂದಳು.

" ಹುಚ್ಚುಹುಡುಗಿ. ಮದುವೆಯಾಗಿ ಸುಮೀ ಗಂಡನ ಮನೆಗೆ ಹೋದರೆ ಮತ್ತೆ ನನಗೆ ದೇವರೇ ಗತಿ." ಪಂಡಿತರ ಮಾತು ದುಃಖ, ದಾರಿದ್ರ್ಯ, ಕಳವಳಗಳ ಸ್ಪಷ್ಟ ಹಿನ್ನೆಲೆಯಲ್ಲೇ ಆರಂಭವಾಯಿತು. " ಗೋಪೀನಾಥ ರಾಯರು ಮನೆಯಲ್ಲಿಯೋ ಇದ್ದಾರೆಯೆ ? ಅಥವಾ ಎಲ್ಲಿಗಾದರೂ ಹೋಗಿರು ವರೇ ?"

" ಬೆಳಿಗ್ಗೆ ಯಾರೋ ಸ್ನೇಹಿತರನ್ನು ಕಾಣಲೆಂದು ಹೋಗಿದ್ದ. ಬಂದಿರ ಬಹುದು ಇಷ್ಟರಲ್ಲಿ."

ಮತ್ತೆರಡು ನಿಮಿಷ ಪಂಡಿತರು ಮೌನ. ಮೂರ್ತಿಯೂ ಮೌನ.

" ಏನು, ಏನಾದರೂ ಹೇಳಿದರೇ ? ಏನಾದರೂ ಆಸೆಯುಳಿದಿದೆಯೆ ? " ಎಂದು ಕೇಳಿದ ಪಂಡಿತರ ಹೃದಯದಲ್ಲಿ ಆಸೆಯ ಗೋಪುರವಿತ್ತು. ಆದರೆ ಮಾತು ಮಾತ್ರ ಹಿಂದಿನ ಅನುಭವ ಬೆಳೆಸಿದ ನಿರಾಸೆಯ ಹಿನ್ನೆಲೆಯಲ್ಲಿ ಅಸ್ಪಷ್ಟ ವಾಗಿ ಪ್ರಕಟವಾಯಿತು.

ಮೂರ್ತಿ ಒಂದು ಕ್ಷಣ ತಡವರಿಸಿದ. ಸುಳ್ಳು ಹೇಳಿ ಒಂದೆರಡು ದಿನ ದೂಡೋಣವೇ ಎಂದೊಂದು ಆಲೋಚನೆ ತಲೆಯೆತ್ತಿತ್ತು. ಆದರೆ ಸುಮಿತ್ರೆಯ ಮುಖ ಮನಸ್ಸಿನೆದುರು ಬಂದು, ವಿಷಯವನ್ನು ಮುಂದೂಡುವ ಧೈರ್ಯ ಬರಲಿಲ್ಲ.

" ನಮ್ಮ ಅದೃಷ್ಟವೇ ಕೆಟ್ಟಂತಿದೆ ಪಂಡಿತರೆ. ಪದ್ಮಾವತಿಯನ್ನಾದರೆ ಮದುವೆಯಾಗಲು ತಯಾರಿದ್ದೇನೆ ಎನ್ನುತ್ತಾನೆ ಗೋಪಿ. "

ಪಂಡಿತರು ಗೋಡೆಗೊರಗಿ ತಲೆಯನ್ನು ಎಡಭುಜಕ್ಕೆ ತಾಗುವಂತೆ ತಗ್ಗಿಸಿ ಕುಳಿತರು. ಮುಖದಲ್ಲಿ ವೇದನೆ ಸ್ಪಷ್ಟವಾಗಿ ಕಂಡುಬರುತ್ತಿತ್ತು. ಆದರೂ ಒಂದೆರಡು ನಿಮಿಷಗಳಲ್ಲಿ ಚೇತರಿಸಿಕೊಂಡರು.

"ಸಾವಿತ್ರಿಯು ಹಿಂದೆಯೇ ನಮ್ಮ ಮನೆಯ ಭಾಗ್ಯಲಕ್ಷ್ಮಿ ಓಡಿಹೋಗಿದ್ದಾಳೆ ಮೂರ್ತಿರಾಯರೆ. ನಮ್ಮ ಹಣೆಬರೆಹ ಕೆಟ್ಟದಾದರೆ ಯಾರೇನು ಮಾಡಿಯಾರು ?"

ಮೂರ್ತಿ ಮೌನವಾಗಿದ್ದ.

"ಆಪ್ತರಾಗಿ ಬಂದು ಬೇಕಾದ ಪ್ರಯತ್ನ ಮಾಡಿದಿರಿ. ಸುಮಿತ್ರೆಗೆ ಯಾವಾಗಾದರೊಂದು ದಿವಸ ಮದುವೆಯಾಗದೆ ಉಳಿಯಲಿಕ್ಕಿಲ್ಲ. ಆದರೆ ನಿಮ್ಮ ಸಹಾಯವನ್ನು ನಾವು ಎಷ್ಟು ಸ್ಮರಿಸಿಕೊಂಡರೂ ಕಡಿಮೆಯೆ."

"ನನ್ನ ಸಹಾಯದ ಮಾತು ಮುಖ್ಯವಲ್ಲ ಪಂಡಿತರೆ. ಸುಮಿತ್ರೆಯ ಮದುವೆಯ ಮಾತು ಮುಖ್ಯ."

"ಮದುವೆಯಾಗದೆ ಹೋಗುತ್ತದೆಯೆ ? ಯಾರಾದರೂ ನಮ್ಮಂಥ ಬಡವರಾದರೂ ಸಿಕ್ಕಿಯೇ ಸಿಕ್ಕುತ್ತಾರೆ."

"ಅದು ನಿಜ. ಆದರೆ ನಾವು ಇಷ್ಟರ ತನಕ ದೊಡ್ಡವರ ಮುಖನೋಡಿ ಪ್ರಯತ್ನಿಸಿಲ್ಲ. ಬಡವರಾದರೂ ಯೋಗ್ಯ ಹುಡುಗ ಸಿಕ್ಕಿಲ್ಲವಲ್ಲ."

ಪಂಡಿತರ ವಿಚಾರಗತಿ ಈಗ ಬೇರೆ ಹಾದಿ ಹಿಡಿದು ಸಾಗಿತ್ತು.

"ಎಲ್ಲಿಯಾದರೂ ಈ ಕಾಹಿಲೆ ನನ್ನನ್ನು ನುಂಗಿಬಿಟ್ಟರೆ ಮುಂದೇನಾಗೀತು ಮೂರ್ತಿರಾಯರೇ. ಬರೇ ನನ್ನ ಫಂಡಿನ ಹಣದಿಂದ ನನ್ನ ಕಂದಮ್ಮಗಳು ಏನುಮಾಡಿಯಾವು ?" ಪಂಡಿತರ ಕಣ್ಣಲ್ಲಿ ನೀರು ತುಂಬಿತ್ತು.

"ಏನೆಲ್ಲ ಹುಚ್ಚು ಆಲೋಚನೆ ನಿಮ್ಮದು. ನನ್ನನ್ನು ಹೊರಗಿನವನಂತೆ ತಿಳಿದು ಮಾತನಾಡುತ್ತೀರಲ್ಲ."

"ಇಲ್ಲ ಮೂರ್ತಿರಾಯರೇ. ಈಗ ನಿಮ್ಮ ಧೈರ್ಯವೇ ನನ್ನ ಧೈರ್ಯ."

ಗೋಪಿಯ ಅಭಿಪ್ರಾಯ ತಿಳಿಸುವ ಕಷ್ಟದ ಒಂದು ಪ್ರಕರಣ ಮುಗಿದಿತ್ತು. ಮೂರ್ತಿ ಮುಂದಿನ ದಾರಿಯ ಕುರಿತು ಚಿಂತಿಸುವಾಗ, ಫಕ್ಕನೆ ಒಂದು ವಿಚಾರ ಹೊಳೆಯಿತು.

"ನಾನೊಂದು ಮಾತು ಹೇಳುತ್ತೇನೆ ಪಂಡಿತರೆ. ನೀವು ಬೇಸರಿಸಿಕೊಳ್ಳಬಾರದು. ನನ್ನ ಹೊಣೆಗಾರಿಕೆಯನ್ನು ಮರೆತು ನಾನು ಅದನ್ನು ಹೇಳುತ್ತಿಲ್ಲ. ಆದರೆ ಪ್ರಕೃತ ಅದೇ ದಾರಿ ಒಳ್ಳೆಯದೆಂದು ತೋರಿಬಂದುದರಿಂದ ಹೇಳುತ್ತಿದ್ದೇನೆ."

" ಹೇಳಿ ರಾಯರೆ, ನನ್ನಲ್ಲಿಯೂ ಸಂಕೋಚವೆ ?"

" ಪದ್ಮಾವತಿಯ ಮದುವೆಯನ್ನು ಮೊದಲು ಮುಗಿಸಲು ನಿಮಗೆ ಒಪ್ಪಿಗೆಯಿದೆಯೆ ?"

ಈಗ ಪಂಡಿತರು ಮೌನವಾಗಿರುವ ಪ್ರಸಂಗ ಬಂದೊದಗಿತ್ತು.

" ಇದರಿಂದ ಸುಮಿತ್ರೆಗೆ ತುಂಬ ಅನ್ಯಾಯವಾಗುತ್ತದೆಂದು ನನಗೆ ಗೊತ್ತು. ಆದರೆ ಸುಮಿತ್ರೆ ಕಲಿತ ಹುಡುಗಿ. ತಿಳುವಳಿಕೆಯುಳ್ಳವಳು. ಇಷ್ಟರ ತನಕ ಪದ್ಮಾವತಿಯನ್ನು ಮದುವೆಯಾಗುವೆನೆಂದು ಬಂದವರೆಷ್ಟೋ ಮಂದಿ. ಅವಳ ಮದುವೆಯನ್ನು ಮೊದಲು ಮುಗಿಸಿ ಬಳಿಕ ಸಾಧ್ಯವಾದಷ್ಟು ಬೇಗನೆ ಸುಮಿತ್ರೆಯ ಮದುವೆಯಾಗುವಂತೆ ಪ್ರಯತ್ನಿಸಬಹುದು."

ಇಷ್ಟರ ತನಕ ಯೋಚಿಸಿದ ಹೊಸದೊಂದು ವಿಚಾರ ಅವರನ್ನು ಆಲೋಚನೆಗೀಡುಮಾಡಿತ್ತು. ಆದರೂ ನಿರ್ಧಾರದ ದನಿಯಲ್ಲಿ ಹೇಳಿದರು.

" ಇದು ಸಾಧ್ಯವಿಲ್ಲ ಮಾಷ್ಟ್ರೆ. ಸುಮಿತ್ರೆ ನನ್ನ ಜೀವನದ ಸರ್ವಸ್ವ. ಅವಳಿಗೆ ಅನ್ಯಾಯವಾಗಿ ಪದ್ಮಾವತಿಯ ಮದುವೆ ಮೊದಲು ಆಗಬೇಕಿಲ್ಲ. ನನ್ನ ಜೀವವಿರುವ ತನಕ ಪ್ರಯತ್ನಿಸದೆ ಬಿಡುತ್ತೇನೆಯೆ ? ಇನ್ನು ದೈವೇಚ್ಛೆ."

ಮೂರ್ತಿ ನಿರಾಶನಾದ. ಅಷ್ಟರಲ್ಲಿ ' ಅಪ್ಪಯ್ಯಾ ' ಎಂದು ಸುಮಿತ್ರೆಯ ಸ್ವರ ಕೇಳಿಸಿತು. ಸುಮಿತ್ರೆ ಕೋಣೆಯೊಳ ಬಂದಿದ್ದಳು. ಮೂರ್ತಿ ಅವಳನ್ನೆ ನೋಡುತ್ತಿದ್ದ. ಅದನ್ನು ಕಂಡು ಸುಮಿತ್ರೆ " ಕ್ಷಮಿಸಿ ಮಾಷ್ಟ್ರೆ. ನಾನು ಎಲ್ಲ ಮಾತು ಕೇಳುತಿದ್ದೆ " ಎಂದಳು. ಹಾಗೆಯೇ ತಂದೆಯನ್ನುದ್ದೇಶಿಸಿ—

" ಪದ್ಮಾವತಿಯ ಮದುವೆ ಮಾಡಿಸಿ ಅಪ್ಪಯ್ಯ. ನನಗೆ ಅದರಿಂದ ಎಳ್ಳಷ್ಟೂ ಬೇಸರವಿಲ್ಲ. ಈ ವರ್ಷ ನನ್ನ ಎಸ್. ಎಸ್. ಎಲ್. ಸಿ. ಮುಗಿದ ಮೇಲೆ ಇಲ್ಲಿಯೇ ಟ್ರೇನಿಂಗಿಗೆ ಹೋಗಿ ಉಪಾಧ್ಯಾಯಿನಿಯಾಗಿ ಯಾವಾಗಲೂ ನಿಮ್ಮ ಹತ್ತಿರವೇ ಇರುತ್ತೇನೆ. ಪದ್ಮಾವತಿಯ ಮದುವೆ ಆದಷ್ಟು ಬೇಗ ಮಾಡಿಸಿ. ಅದರಿಂದ ನನಗೆ ಸಂತೋಷವೇ."

ಮಗಳ ಸ್ನಿಗ್ಧ ಪ್ರೇಮದ ಒರತೆ ಪಂಡಿತರ ಕಣ್ಣಲ್ಲಿ ಹನಿ ತರಿಸಿತು. ಮಗಳ ಮಾತಿನ ಯುಕ್ತಾಯುಕ್ತತೆ, ಸಾಧ್ಯಾಸಾಧ್ಯತೆಗಳ ಕುರಿತು ಪಂಡಿತರು ಚಿಂತಿಸುತ್ತ ಕುಳಿತರು. ಆದರೂ ಮೂರ್ತಿ ತೋರಿಸಿದ ದಾರಿ ಸರಿಯೆಂದು ಮೊದಮೊದಲು ಅವರಿಗೆ ಕಂಡುಬರಲಿಲ್ಲ.

"ಒಂದು ಸಂಪ್ರದಾಯದ ವಿರುದ್ಧ ಹೋಗಬೇಕೆ ಮೂರ್ತಿರಾಯರೆ. ಇಷ್ಟರತನಕ ಎಲ್ಲಿಯೂ ಈ ರೀತಿ ನಡೆದುದನ್ನು ನಾನು ಕೇಳಿಲ್ಲ. ಹುಡುಗರಾದರೆ ನಾನು ಇಷ್ಟು ಯೋಚಿಸುತ್ತಿದ್ದಿಲ್ಲ. ಆದರೆ ತಂಗಿಯ ಮದುವೆ ಅಕ್ಕನ ಮದುವೆಗಿಂತ ಮೊದಲು ಆಗುವುದೆಂದರೆ ?"

"ಪರಿಸ್ಥಿತಿಯಿಂದಾಗಿ ತಂಗಿಯ ಮದುವೆ ಮೊದಲು ಮಾಡಬೇಕಾಗಿ ಬಂದರೆ ಅದಕ್ಕೇಕೆ ಇಷ್ಟು ನೊಂದುಕೊಳ್ಳುವುದು ? ಈ ಸಂಪ್ರದಾಯದಿಂದ ಹುಡುಗಿಯ ಭವಿಷ್ಯವೇ ಹಾಳಾಗಬೇಕೆ, ಅಥವಾ ಸುಮಿತ್ರೆಗೇನು ಮದುವೆ ಮಾಡದೆಯೇ ಕುಳಿತುಕೊಳ್ಳುವ ಆಲೋಚನೆ ನಮಗಿದೆಯೆ ? ಸ್ವಲ್ಪ ಸಮಯವನ್ನು ನಮ್ಮ ಅನುಕೂಲಕ್ಕೆ ತಕ್ಕ ಹಾಗೆ ಹೊಂದಿಸಿಕೊಳ್ಳೋಣ ಎಂದು ಈ ಮಾತು ಹೇಳಿದೆ."

ಪಂಡಿತರು ಗೊಂದಲದಲ್ಲಿ ಬಿದ್ದರು. ಒಂದೆಡೆ ವ್ಯಾವಹಾರಿಕ ಕರ್ತವ್ಯ. ಇನ್ನೊಂದೆಡೆ ಮಗಳು. ಒಂದೆಡೆ ಸಂಪ್ರದಾಯ. ಇನ್ನೊಂದೆಡೆ ಭಯ ತರಿಸುವ ಭವಿಷ್ಯತ್ತು.. ಈ ಹೊಯ್ದಾಟ ಬಹುಕಾಲವಿರಲಿಲ್ಲ.

"ಹಾಗೆಯೇ ಮಾಡೋಣವೇ ಮೂರ್ತಿರಾಯರೆ. ಮೊದಲು ಪದ್ಮಾವತಿಯ ಮದುವೆಯೇ ಆಗಬೇಕೆಂದು ದೈವೇಚ್ಛೆಯಿದ್ದರೆ ನಾವು ಅಡ್ಡಬರಲು ಸಾಧ್ಯವೆ ?" ಎಂದರು.

ಮೂರ್ತಿ ಸಮಾಧಾನದ ಉಸಿರುಬಿಟ್ಟ. ಒಂದು ದೊಡ್ಡ ಭಾರವನ್ನು ಕೆಳಗಿಳಿಸಿದಷ್ಟು ಆನಂದವಾಯಿತು.

"ಪದ್ಮಾವತಿಯ ಜಾತಕವೂ ಗೋಪಿಯ ಜಾತಕಕ್ಕೆ ಸಾಧಾರಣ ಹೊಂದಿಕೊಂಡು ಬರುತ್ತದೆ. ಅವನು ಹುಡುಗಿಯನ್ನು ಮೆಚ್ಚಿದ್ದಾನೆ. ಹುಡುಗನ ಯೋಗ್ಯತೆಯ ಕುರಿತು ನಿಮಗೆ ತಿಳಿದಿದೆ. ಹಾಗಾದರೆ ಪದ್ಮಾವತಿಯನ್ನು ಗೋಪಿಯ ಕುತ್ತಿಗೆಗೇ ಏಕೆ ಕಟ್ಟಬಾರದು ?" ಮೂರ್ತಿಯ ಮುಂದಿನ ಮಾತು ಸಂದರ್ಭದ ಔಚಿತ್ಯವನ್ನು ಮರೆತು ಹೊರಬಂದುದಾದರೂ ಆತನ ವಿಚಾರಗತಿಯ ಪ್ರತೀಕವಾಗಿತ್ತು.

"ಆದರೆ ಇದು ಪದ್ಮಾವತಿಯ ಮದುವೆ ಮಾತ್ರ. ಅವಳ ಅಭಿಪ್ರಾಯ ತಿಳಿಯದೆ ಯಾವ ನಿಶ್ಚಯವನ್ನೂ ಮಾಡಲು ಸಾಧ್ಯವಿಲ್ಲ. ನಿಮ್ಮ ಸ್ನೇಹಿತರು ಪದ್ಮಾವತಿಯನ್ನು ನೋಡಿದಾಕ್ಷಣ ಪದ್ಮಾವತಿ ಅವರನ್ನು ಒಪ್ಪಬೇಕೆಂದೇನಿಲ್ಲ."

ಅಲ್ಲೇ ಇದ್ದು ನೆಪಕ್ಕೆ ಮಾತ್ರ ಮೇಜಿನ ಮೇಲಿನ ಪುಸ್ತಕಗಳನ್ನು, ಔಷಧಿಗಳ ಸೀಸೆಗಳನ್ನು ಸರಿಪಡಿಸುತ್ತಿದ್ದ ಸುಮಿತ್ರೆ ಈಗ ಮಾತನಾಡಿದಳು. ಸುಮಿತ್ರೆಯ ಮಾತಿನಲ್ಲಿ ಗೋಪಿಯ ಕುರಿತಾದ ತಿರಸ್ಕಾರ ಸ್ಪಷ್ಟವಾಗಿತ್ತು. ಸ್ವಭಾವ ಸಹಜ ದುಃಖದಿಂದುಂಟಾದ ಸ್ವಾರ್ಥವಿದೆಂದು ಮೂರ್ತಿ ಸಮಾಧಾನ ತಂದುಕೊಂಡ; ಆದರೆ ಪಂಡಿತರು ಮಾತ್ರ ಎಲ್ಲಿ ಮೂರ್ತಿ ನೊಂದುಕೊಂಡನೊ ಎಂಬ ಭೀತಿಯಿಂದ—

"ಏನು ಮಾತು ಸುಮೀ, ಸಮಗ್ರಾಗಿ ಜೀವ ಬಿಡುತ್ತಿರುವ ಮೂರ್ತಿರಾಯರಿಗೂ ಈ ಮಾತೆ? ಪದ್ಮಾವತಿಗೇನು ತಿಳಿಯುತ್ತದೆ ಬಿಡು. ಅದು ಇನ್ನೂ ಮಗು."

"ಮಗುವಲ್ಲ ಅಪ್ಪಯ್ಯ. ಮದುವೆಗೆ ಬೆಳೆದು ನಿಂತ ಹುಡುಗಿ" ಎಂದು ಸುಮಿತ್ರೆ ಹೇಳುವಷ್ಟರಲ್ಲಿ, ಪದ್ಮಾವತಿ ಒಳಬಂದಳು.

"ಮೀರಕ್ಕ ನಿಮ್ಮ ದಾರಿ ಕಾಯುತ್ತಿದ್ದಾರೆ, ಮಾಷ್ಟ್ರೆ. ಇಲ್ಲಿ ಬಂದ. ನಿಮ್ಮ ಪಟ್ಟಾಂಗ ಸುರುವಾಗಿದೆ'' ಎಂದು ನಗುತ್ತಲೇ ಪದ್ಮಾವತಿ ಹೇಳಿದಳು

"ಅಲ್ಲಿಗೆ ಹೋಗಿದ್ದೆಯೇನೇ?" ಎಂದು ಸುಮಿತ್ರೆ ಪ್ರಶ್ನಿಸಿದಳು.

"ಹೋಗದೇ ಹೇಳುತ್ತೇನೆಯೆ? ಎಂಥ ಪ್ರಶ್ನೆ?" ಎಂದು ಪದ್ಮಾವತಿ ಹಿಂದಿನ ದಿನದ ಸಿಟ್ಟನ್ನು ತೀರಿಸಿಕೊಳ್ಳಲು ಯತ್ನಿಸಿದಳು.

"ಗೋಪಿನಾಥರಾಯರು ಇದ್ದರೇ ಅಲ್ಲಿ?'' ಅನಿರೀಕ್ಷಿತವಾದ ಸುಮಿತ್ರೆಯ ಈ ಪ್ರಶ್ನೆಯಿಂದ ಪದ್ಮಾವತಿಯ ಮುಖ ಒಮ್ಮಿಂದೊಮ್ಮೆಗೇ ಕೆಂಪೇರಿತು. ಆದರೆ ಅವಳ ಪ್ರಸಂಗಾವಧಾನತೆ ಸಹಾಯಕ್ಕೆ ಬಂತು.

"ನೀನೇ ಹೋಗಿ ನೋಡು ಬೇಕಾದರೆ. ನನಗೇನು ಕೆಲಸ ಅವರ ಹತ್ತಿರ?" ಎಂದು ಪದ್ಮಾವತಿ ಉತ್ತರಕೊಟ್ಟಳು.

"ಇನ್ನು ನಿನಗೇ ಅವರ ಹತ್ತಿರ ಕೆಲಸ ಪದ್ಮಾ. ನಿನ್ನನ್ನು ಕೇಳಿಕೊಂಡು ಮುಂಬಯಿಯಿಂದ ಇಷ್ಟು ದೂರ ಬಂದಿದ್ದಾರೆ ಗೋಪೀನಾಥರಾಯರು. ಕಳ್ಳಿಯಂತೆ ಓಡಿಹೋಗಿ ನೋಡಿ ಬಂದು ಈಗ ಉಡಾಪಿ ಮಾತನಾಡುತ್ತಾಳೆ." ಎಂದು ಸುಮಿತ್ರೆ ನಗುತ್ತಾ ತಂಗಿಯ ಕೆನ್ನೆಗೆ ಮೃದುವಾಗಿ ತಟ್ಟಿ ಅಡುಗೆಯ ಮನೆಯ ಕಡೆ ನಡೆದಳು.

ಈ ಮಾತು ಪದ್ಮಾವತಿಯನ್ನು ಮಾತ್ರ ಗಲಿಬಿಲಿಯಲ್ಲಿ ಕೆಡವಿತ್ತು. ಆಗ ಪಂಡಿತರೇ ಅವಳ ಸಹಾಯಕ್ಕೆ ಬರಬೇಕಾಗಿ ಬಂತು.

" ಮೂರ್ತಿಮಾಷ್ಟ್ರ ಸ್ನೇಹಿತರನ್ನು ಮದುವೆಯಾಗಲು ನಿನಗೆ ಒಪ್ಪಿಗೆಯೋ ಪದ್ಮಾ" ಎಂದರು.

ಪದ್ಮಾವತಿ ಮಾತನಾಡಲಿಲ್ಲ. ಅಕ್ಕನ ಮದುವೆಗಿಂತ ಮೊದಲು ತನ್ನ ಮದುವೆಯಾಗಬಹುದು ಎಂಬು ಕನಸಿನಲ್ಲಿಯೂ ಯೋಚಿಸಿರದ ಆಕೆಗೆ ಈಗ ತಂದೆ, ಅಕ್ಕ ಮತ್ತು ಮೂರ್ತಿಮಾಷ್ಟ್ರು ತನ್ನನ್ನು ಗೇಲಿ ಮಾಡುತ್ತಿರುವರೇ ಎಂದು ತೋರಿತು. ಆದರೆ ತಂದೆಯ ಮುಖವನ್ನು ಪುನಃ ನೋಡಿದಾಗ ಇದು ತಮಾಷೆಯ ಪ್ರಸಂಗವಲ್ಲ ಎಂದು ಪದ್ಮಾವತಿಗೆ ತಿಳಿಯಲು ಹೆಚ್ಚು ಸಮಯ ಬೇಕಾಗಲಿಲ್ಲ.

" ಏನು ಪದ್ಮಾ ? ತುಂಬ ಯೋಚನೆ ಮಾಡಬೇಕೇನು ?" ಪಂಡಿತರು ಮೃದುವಾಗಿಯೇ ಪುನಃ ಕೇಳಿದರು.

ಈಗಲೂ ಪದ್ಮಾವತಿಗೆ ಮಾತನಾಡುವುದು ಸಾಧ್ಯವಾಗಲಿಲ್ಲ. ಆಕೆಯ ಹೃದಯ ಕಳವಳದ ಸಾಗರವಾಯಿತು. ಮದುವೆಯ ಯೋಚನೆ ಬಂದಾಗ ಲೆಲ್ಲ ಅಕ್ಕನನ್ನು ಈ ಯೋಚನೆಯ ವರ್ತುಲದಿಂದ ಹೊರಗಿರಿಸುವುದು ಆಕೆಗೆ ಸಾಧ್ಯವಾಗುತ್ತಿರಲಿಲ್ಲ. ಆದರೆ ತಂದೆಯ ಪ್ರಶ್ನೆ ಒಮ್ಮಿಂದೊಮ್ಮೆಗೆ ತನ್ನ ಕಣ್ಣೆದುರು ಸೃಷ್ಟಿಸಿದ ಸಂಭ್ರಮದ ಸಾಮ್ರಾಜ್ಯವನ್ನು ಬಿಟ್ಟೋಡುವುದೂ ಅಸಾಧ್ಯವಾಗಿತ್ತು.

' ಸಪುರ ಬೆಳ್ಳಗೆ, ಉದ್ದ, ಅಕ್ಕಾ ! " ತಾನು ಅಕ್ಕನೊಡನೆ ಆಡಿದ್ದ ಮಾತೇ ಸೂಚಿಸಿದ್ದ ಅಭಿಪ್ರಾಯವೇ ಈಗ ಪದ್ಮಾವತಿಯನ್ನು ಅಣಕಿಸುತ್ತಿತ್ತು.

ಮೊದಲಬಾರಿಗೆ ಗೋಪೀನಾಥರಾಯರನ್ನು ಕಂಡಾಗ ಆಕೆಯ ಮೇಲೆ ಬಿದ್ದಿದ್ದ ಆ ನೋಟ. ಮಗು ಸುರೇಶನನ್ನು ಒಳಗೆಹೋಗಲು ತಡವರಿಸುತ್ತಿದ್ದಾಗ, ಬಾಗಿಲ ಬಳಿ ನಿಂತಿದ್ದ ಆ ನಗೆಮೊಗದ ವ್ಯಕ್ತಿ.

ಅವರೊಂದಿಗೆ ತನ್ನ ಮದುವೆಯು !

ವಯಸ್ಸು ಚಿಗುರಿಸಿದ್ದ ಮಧುರ ಭಾವನೆಗಳೊಂದಿಗೆ ತಂದೆಯ ಪ್ರಶ್ನೆ ಕಚಕುಳಿಯಾಡುತ್ತಿತ್ತು. ಪದ್ಮಾವತಿಯ ಮುಖ ಕೂಡ ಓಕುಳಿಯ ಬಣ್ಣವನ್ನ

ತಳೆದಿತ್ತು. ಅಕ್ಕ ಮೆಲ್ಲ ಮೆಲ್ಲ ಆಕೆಯ ವಿಚಾರಗತಿಯ ಕ್ಷೇತ್ರದಿಂದ ಹೊರ ಸರಿಯಲಾರಂಭಿಸಿದ್ದಳು.

ಸುಮಿತ್ರೆ ಅಡುಗೆಯ ಮನೆಯಿಂದ ಬಂದವಳು ಪ್ರತಿಮೆಯಂತೆ ನಿಂತಿದ್ದ ತಂಗಿಯನ್ನು ನೋಡಿ " ಏನಾಯಿತೇ ! " ಎಂದಳು.

ಪದ್ಮಾವತಿಗೆ ಮತ್ತೇನು ಹೇಳುವುದೆಂದು ತಿಳಿಯಲಿಲ್ಲ. ಅಕ್ಕನನ್ನು ತಬ್ಬಿಕೊಂಡು ಆಕೆಯ ಎದೆಯಲ್ಲಿ ತಲೆಯನ್ನು ಹುದುಗಿಸಿ " ಅಕ್ಕಾ, ಅಕ್ಕಾ " ಎನ್ನುತ್ತ ಅಳತೊಡಗಿದಳು.

" ಹುಚ್ಚಿ ! ಮದುವೆಯಾಗುವುದೆಂದು ಯಾರಾದರೂ ಇಷ್ಟು ಹೆದರುತ್ತಾರೆಯೆ ? " ಎಂದು ಸುಮಿತ್ರೆ ಕೇಳಿದಾಗ ಪದ್ಮಾವತಿ ತಲೆಯೆತ್ತಿ ಅಕ್ಕನ ಕಡೆ ನೋಡಿದಳು.

ನೀರು ತುಂಬಿದ್ದ ಆ ಕಣ್ಣುಗಳಲ್ಲೂ ಭವಿಷ್ಯದ ಕನಸಿನ ಆನಂದದ ನಗುವಿತ್ತು.

ಪಂಡಿತರಿಗೆ ಬೇರೆ ಉತ್ತರ ಅಗತ್ಯವಿರಲಿಲ್ಲ. ಆದರೆ ಸುಮಿತ್ರೆಗೆ ಮಾತ್ರ ಒಂದು ಕ್ಷಣ, ಬರೇ ಒಂದು ಕ್ಷಣ, ಸಹನಾತೀತ ವೇದನೆಯ ಅನುಭವ.

ಪ್ರಕೃತಿ ಸೌಂದರ್ಯವನ್ನು ನಿರೀಕ್ಷಿಸಲು ಬೆಟ್ಟವೇರಿ, ಕೆಳಗೆ ಪ್ರಪಾತಕ್ಕೆ ಬಿದ್ದಂತೆ.

ಪಂಡಿತರ ಮನೆಯಿಂದ ಮೂರ್ತಿ ತುಂಬಿದ ಉತ್ಸಾಹದಿಂದ ಹೊರ ಬಿದ್ದವನಾದರೂ, ಗೇಟುದಾಟಿ ರಸ್ತೆಯ ಬಳಿ ಬರುವುದರೊಳಗೆ ಆ ಉತ್ಸಾಹ ಮಾಯವಾಗಿತ್ತು. ಮನಸ್ಸೆಲ್ಲ ಸುಮಿತ್ರೆಯ ಕುರಿತು ಯೋಚಿಸುತ್ತಿತ್ತು.

ಮನೆಯಲ್ಲಿ ಮೀರೆ ಆತನ ದಾರಿ ಕಾಯುತ್ತಿದ್ದಳು. ಸಂಜೆ ಹಿಂದಿರುಗಿ ಬಂದಿದ್ದ ಗೋಪಿ, ಮೂರ್ತಿಯಿಲ್ಲದುದನ್ನು ಕಂಡು ಪುನಹ ಸುತ್ತಾಡಿಕೊಂಡು ಬರೋಣವೆಂದು ಹೋಗಿದ್ದ. ಆ ಕಾರಣ ಗಂಡ ಮನೆಯ ಮೆಟ್ಟಲೇರುತ್ತಿರುವಾಗಲೇ ಮೀರೆ ಕೇಳಿದಳು :

" ಹೇಳಿದಿರಾ ? "

" ಒಂದು ಬೆಟ್ಟಹತ್ತಿ ಇಳಿಯುವಷ್ಟು ಕಷ್ಟವಾಯಿತು ನೋಡು. ಅಂತೂ ಹೇಳದೇ ಇರಲಿಕ್ಕೆ ಆಗುತ್ತದೆಯೆ ? ಗೋಪಿಯೆಲ್ಲಿ ? "

" ಎಲ್ಲೋ ತಿರುಗಾಡಲು ಹೋಗಿದ್ದಾರೆ. ಈಗ ಬಂದಾರು. "

" ಪದ್ಮಾವತಿಗೆ ಮದುವೆಯಾಗುವ ಯೋಗ; ಸುಮಿತ್ರೆ ಕಷ್ಟಪಡುವ ಯೋಗ ಇರುವಾಗ ಅದನ್ನು ತಪ್ಪಿಸಲು ನಾವು ಪ್ರಯತ್ನಿಸಿದರೆ ಆಗುತ್ತದೆಯೆ? ಪದ್ಮನ ಮದುವೆಯಾದ ಮೇಲಾದರೂ ಸುಮಿತ್ರೆಯ ಗ್ರಹಗತಿ ಒಳ್ಳೆಯದಾಗುವುದೋ ಏನೋ ? "

" ಪದ್ಮನಿಗೆ ಮದುವೆಯೆ ? ಅರೆ ! ಪಂಡಿತರು ಇದಕ್ಕೆ ಒಪ್ಪಿದರೆ ? "

" ಸುಮಿತ್ರೆಯೇ ಹಾಗೆ ಆಗಬೇಕೆಂದು ಹಟ ಹಿಡಿದಾಗ ಒಪ್ಪದೆ ಹೇಗೆ ಇರುತ್ತಾರೆ ? ಗೋಪಿ, ಸುಮಿತ್ರೆ ತನಗೆ ಬೇಡ ಎಂದು ಹೇಳಿದರೂ ನಿನಗೆ ಮದುವೆಯ ಗೌಜಿ ತಪ್ಪಲಿಲ್ಲ."

ಮೂರ್ತಿ ಮಾತನ್ನು ನಗೆಯಲ್ಲಿ ತೇಲಿಸಿ ಹೇಳಿದರೂ ಮೀರೆ ಮೌನವಾಗಿದ್ದಳು. ಮದುವೆ ಸುಮಿತ್ರೆಯದಲ್ಲ; ಪದ್ಮಾವತಿಯದು.

" ನಿಮಗಾದರೂ ತಿಳಿಯಬಾರದಿತ್ತೇ ಈ ತಪ್ಪು ಕೆಲಸಕ್ಕೆ ಒಪ್ಪಿಕೊಳ್ಳುವುದು ಸರಿಯಲ್ಲ ಎಂದು. ಒಂದು ಹುಡುಗಿಯ ಆಯುಷ್ಯವೇ ಹಾಳಾಗಬೇಕೆ ? ಅದೂ ಸುಮಿತ್ರೆಯಂಥ ಹುಡುಗಿಗೆ ಈ ಅವಸ್ಥೆಯೇ ! ಈಗ ಏನು ನಿಮ್ಮ ಸ್ನೇಹಿತರೊಬ್ಬರಲ್ಲದಿದ್ದರೆ ದೇಶದಲ್ಲಿ ಬೇರೆ ಹುಡುಗರೇ ಇಲ್ಲವೇನೊ?"

ಮೀರೆಯ ಈ ಸಿಟ್ಟಿನ ಮಾತಿನಿಂದ ಮೂರ್ತಿ ಕ್ಷಣಕಾಲ ದಿಗ್ಭ್ರಾಂತನಾದ.

" ಏನೇ ಇದು ? ನೀನೂ ಈ ರೀತಿ ಮಾತನಾಡಲು ಸುರು. ಪದ್ಮಾವತಿಯ ಮದುವೆಯಾದರೆ ಸುಮಿತ್ರೆಯ ಮದುವೆಯಾಗದೆ ಹೊಗುತ್ತದೆಯೇ?"

" ಹೌದು. ಆದರೆ, ಹೋದರೆ ಹತ್ತಿ ಬೆಳೆದರೆ........ತಂಗಿಯ ಕುತ್ತಿಗೆಗೆ ಕರಿಮಣಿ ಕಟ್ಟುವುದನ್ನು ನೋಡಿಕೊಂಡು ಬರೀ ಕುತ್ತಿಗೆಯಲ್ಲಿ ಅಕ್ಕ ಕಣ್ಣೀರಿಳಿಸುತ್ತ ನಿಲ್ಲಬೇಕೇನೊ. ನಿಮ್ಮ ತರ್ಕ ನಿಮಗೇ ಸರಿ " ಎಂದು ಹೇಳುತ್ತ ಹೆಚ್ಚು ಮಾತನಾಡುವ ಇಚ್ಛೆಯಿಲ್ಲದೆ ಮೀರೆ ಒಳಗೆ ಹೋದಳು. ಮೂರ್ತಿಯು ಪುನಃ ಸುಮಿತ್ರೆಯ ಕುರಿತು ಚಿಂತಿಸತೊಡಗಿದ.

ಸುಮಿತ್ರೆ ! ಮನೆಯ ಅಂಗಳಲ್ಲಿ ಮಲ್ಲಿಗೆ ಕೊಯ್ಯುತ್ತಿದ್ದ ಸುಮಿತ್ರೆ, ಮೀರೆಯೊಂದಿಗೆ ಸರಸವಾಡುತ್ತಿದ್ದ ಸುಮಿತ್ರೆ, ಪಂಡಿತರಿಗೆ ಮಗಳಾಗಿಯೂ ತಾಯಿಯಾಗಿಯೂ ನಿಂತ ಸುಮಿತ್ರೆ, ಸದಾ ಹಾಸ್ಯಪ್ರವೃತ್ತಿಯ ನಿರ್ಮಲ ಅಂತಃಕರಣದ, ಸುಂದರ ನಡೆವಳಿಕೆಯ ಸುಮಿತ್ರೆ. ನಡೆ, ನುಡಿ, ಅಭ್ಯಾಸಗಳಲ್ಲಿ

ಶಾಲೆಯ ಅಧ್ಯಾಪಕ ವರ್ಗದ ಆದರವನ್ನು ಸಂಪಾದಿಸಿದ್ದ ಸುಮಿತ್ರೆ ಈಗ ಪರಿಸ್ಥಿತಿಯಿಂದಾಗಿ ಈ ರೀತಿಯ ತ್ಯಾಗ ಮಾಡಬೇಕಾಗಿ ಬಂದಿದೆ. ರೂಢಿಯ ವಿರುದ್ಧ ಹೋಗಿ, ತಂಗಿಯ ಮದುವೆಯಾಗುವುದನ್ನು ನೋಡಿ ಕುಳಿತಿರ ಬೇಕಾಗಿ ಬಂದಿದೆ.

ಆ ಸಂಜೆ ಸುಮಿತ್ರೆ ಆಡಿದ ನೋವಿನ ನುಡಿಗಳು ನೆನಪಿಗೆ ಬಂದು ಈಗ ಆಕೆ ತನ್ನ ಕುರಿತು ಮುಂಚಿನ ಆದರವನ್ನು ಕಳೆದುಕೊಂಡಿರಲೂಬಹುದು, ಎಂಬ ಸಂದೇಹ ಮೂರ್ತಿಗೆ ಅಸಮಾಧಾನವನ್ನುಂಟುಮಾಡಿತು.

'ಒಮ್ಮೆ ಹೇಗೂ ಮದುವೆಯಾಗಲಿ. ಆಮೇಲೆ ಎಲ್ಲ ಸರಿಯಾಗುತ್ತದೆ. ಗೋಪಿ ಮುಂಬಯಿಯಲ್ಲಿ ಮನೆ ಮಾಡಿದಾಗ, ಅಲ್ಲ, ಗೋಪಿ ಸಂಸಾರ ಆರಂಭಿಸಿದಾಗ ಸುಮಿತ್ರೆಯ ಮದುವೆಯೂ ಅವನ ಪಾಲಿನ ನೈತಿಕ ಹೊಣೆ ಗಾರಿಕೆಯಾಗಿ ಬರುವುದಷ್ಟೆ. ಅವನು ಕೂಡ ಪ್ರಯತ್ನಿಸದೆ ಇರುತ್ತಾನೆಯೆ ? ಇಬ್ಬರ ಪ್ರಯತ್ನಗಳಿಂದ ಸುಮಿತ್ರೆಗೆ ಯೋಗ್ಯ ವರ ದೊರಕುವುದು ಕಷ್ಟವಾಗ ಲಿಕ್ಕಿಲ್ಲ. ಪಂಡಿತರ ಆಪರೇಶನ್ ಕೂಡ ಮುಂಬಯಿಯಲ್ಲಿ ಸುಲಭವಾಗಿ ಸಾಧ್ಯವಾಗಬಹುದು. ಅವರೂ ಮುಂಚಿನ ಆರೋಗ್ಯವನ್ನು ಸಂಪಾದಿಸಿದರೆ ಮನಸ್ಸು ಎಷ್ಟು ಹಗುರಾಗುತ್ತದೆ !'

ಈಗ ಮೂರ್ತಿಯ ಮನಸ್ಸಿಗೆ ಪದ್ಮಾವತಿಯ ಮದುವೆ ಆಗಲೇಬೇಕಾ ದುದು ಸರಿ, ಎಂದು ಆತ್ಮಸಮಾಧಾನ ಕೊಡುವುದಕ್ಕೆ ಪಂಡಿತರ ಅನಾರೋಗ್ಯ ವಿಚಾರವೂ, ಸರ್ವೋತ್ತಮರಾಯರು ಆ ಕುರಿತು ಹೇಳಿದ ಮಾತುಗಳೂ ಕಾರಣವಾದುವು.

ಮಾರನೆಯ ದಿನ ಬೆಳಿಗ್ಗೆ ಕಾಫಿ ಕುಡಿಯುವ ಹೊತ್ತಿಗೆ ಮೂರ್ತಿ ಗೋಪಿಯೊಂದಿಗೆ ಮದುವೆಯ ವಿಚಾರ ಮಾತನಾಡಿದ.

"ಬೇಗನೇ ಮದುವೆ ನಿಶ್ಚಯವಾದರೆ, ನಿನಗೆ ಪುನಃ ರಜೆ ಸಿಕ್ಕೀತಲ್ಲ ಗೋಪಿ ?"

ಗೋಪಿಗೆ ಈ ಅನಿರೀಕ್ಷಿತ ಪ್ರಶ್ನೆಯಿಂದ ತುಂಬ ಆಶ್ಚರ್ಯವಾಯಿತು. ಸುಮಿತ್ರೆಯ ಮದುವೆಗಿಂತ ಮೊದಲು ಪದ್ಮಾವತಿಯ ಮದುವೆಯಾಗುವಂತಿಲ್ಲ ಎಂಬ ಸಂದೇಹ ಆತನಿಗಿರುವಾಗ, ಪದ್ಮಾವತಿಯ ಕಡೆ ತನಗಿರುವ ಒಲವನ್ನು

ಪ್ರಕಟಿಸಿದಾಗ ಮೂರ್ತಿ ಸಿಟ್ಟುಗೊಂಡುದನ್ನು ಆತ ಮರೆಯದಿದ್ದಾಗ, ಈ ಮಾತು ಆಶ್ಚರ್ಯವನ್ನುಂಟುಮಾಡಿದುದು ಸಹಜವಾಗಿತ್ತು.

" ಯಾರ ಮದುವೆ ಮೂರ್ತಿ ?"

" ಏನಯ್ಯ, ಅಷ್ಟು ಬೇಗ ಮರೆತು ಹೋಯಿತೇನು ? ಬರೀ ಬೀದಿ ತಿರುಗಲು ನೀನು ಮಂಗಳೂರಿಗೆ ಬಂದಿಲ್ಲ."

" ಹಾಗಾದರೆ ಈಗ ಪದ್ಮಾವತಿಯ ಮದುವೆಗೆ ಪಂಡಿತರು ಒಪ್ಪಿದ್ದಾರೆಯೆ ?"

" ಅದರಿಂದಾಗಿಯೇ ಕೇಳಿದೆ. ಮದುವೆಗೆ ದಿನ ನಿಶ್ಚಯಿಸೋಣವೆ ? ಅಥವಾ ನಿನ್ನ ಅಣ್ಣನ ಹತ್ತಿರ ಮೊದಲು ನೀನು ಮಾತನಾಡಿ ಆಮೇಲೆ ನಿಶ್ಚಯಿಸುವುದೆ ? ಏನಾದರೂ ಆದಷ್ಟು ಬೇಗ ಮದುವೆಯಾಗಬೇಕು ನೋಡು, ಗೋಪಿ. ಪಂಡಿತರಿಗೆ ಮನಃ ಸಮಾಧಾನ ಸಿಗದಿದ್ದರೆ ಅವರು ಹೆಚ್ಚು ದಿವಸ ಬದುಕುವುದಿಲ್ಲ."

ಗೋಪಿ ವಾಸ್ತವ ಪ್ರಪಂಚಕ್ಕೆ ಬಂದ. ತನ್ನ ಮದುವೆ ಭವಿಷ್ಯತ್ತಿನ ಗರ್ಭದಲ್ಲಿ ಅಡಗಿರುವ ಒಂದು ಸುಂದರ ಸ್ವಪ್ನವಲ್ಲ. ಅಣ್ಣನ ಅನುಮತಿಗಾಗಿ ಕಾಯುತ್ತ ಅವನಿಂದ ಈ ಕುರಿತು ಏನಾದರೂ ಮಾತು ಬರಬಹುದೇ ಎಂದು ಚಿಂತಿಸುತ್ತ, ಅತ್ತಿಗೆಯನ್ನು ಕಾಡಿ ದಿನ ಕಳೆಯುವ ಪರಿಸ್ಥಿತಿಯೂ ಇಂದು, ನಿನ್ನೆಯದು ಕುರ್ಲಾ ಲೋಕಲ್ ಗಾಡಿಯಲ್ಲಿ ಬಿರುಗಾಳಿಯೆಬ್ಬಿಸಿದ ಆ ನಾಗವೇಣಿಯನ್ನು ನೆನೆಸಿಕೊಂಡು, ತಾನು ಮದುವೆಯಾಗಬಹುದಾದವಳ ಬಗ್ಗೆ ಕಲ್ಪನೆಯ ಮೊರೆಹೋಗಿ, ಅಸ್ಪಷ್ಟ, ಭವಿಷ್ಯತ್ತಿನ ಚಿಂತನೆಯಲ್ಲಿ ತೃಪ್ತಿ ಪಡೆಯುವ ದಿನವೂ ಮರೆಯಾಗಿದೆ.

ಪದ್ಮಾವತಿ ತನ್ನ ಹೃದಯದ ರಾಣಿಯಾಗಿ ತನ್ನ ಮುಂದೆ ನಿಂತಿದ್ದಾಳೆ. ಚೆಳ್ಳಿಯನ್ನು ನಾಚಿಸುವ ಮೋಹಕ ಸೌಂದರ್ಯದ ಮುದ್ದು ಮೂರ್ತಿ. ತುಂಬಿದ ಮೈಕಟ್ಟಿನ, ನಿತ್ಯ ನಗುವ ಕಣ್ಣುಗಳ, ತುಂಟತನವನ್ನು ಸೂಚಿಸುವ ಮೂಗಿನ, ಚಪಲತೆಯ ಪ್ರತೀಕವಾಗಿ, ನಗುವಾಗ ಗುಳಿಬೀಳುವ ತುಂಬು ಗೆನ್ನೆಗಳ, ಹಾವಿನಂಥ ಜಡೆಗಳ ಮಾಟಗಾತಿ ಪದ್ಮಾವತಿ !

' ಆದಷ್ಟು ಬೇಗ ಮದುವೆಯಾಗಬೇಕು ನೋಡು ಗೋಪಿ.'

ಗೋಪಿಯ ಹೃದಯದಲ್ಲಿ ಸಂತೋಷ ಸಾಗರವಾಗಿತ್ತು. ಉಕ್ಕಿ ಬಂದ ಆನಂದ ಆತನ ಮುಖದಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು. ನಗುತ್ತಾ ಕುಳಿತು ಬಿಟ್ಟಿದ್ದ.

ಅರ್ಧ ಕುಡಿದಿದ್ದ ಕಾಫಿ ಹಾಗೆಯೇ ಇತ್ತು. ಗೆಳೆಯನ ಅವಸ್ಥೆಯನ್ನು ಕಂಡು ಮೂರ್ತಿಗೆ ಕನಿಕರವಾಯಿತೇನೋ. ನಗುತ್ತಲೇ ಹೇಳಿದ.

" ಮದುವೆಯ ಯೋಚನೆ ಇರಲಿ ಬಿಡು, ಗೋಪಿ. ಮೊದಲು ಕಾಪಿ ಕುಡಿ. ಹಿಮ ಹಿಡಿದು ಹೋದ ಕಾಫಿ ಕುಡಿದರೆ ಮೀರೆ ಕೋಪಿಸಿಕೊಳ್ಳು ತ್ತಾಳೆ."

" ಎಕ್ಸ್ಕ್ಯೂಸ್ ಮಿ " ಎಂದು ಹೇಳಿ ಗೋಪಿ ಕುಡಿಯಲಾರಂಭಿಸಿದ.

" ಮದುವೆ ತಿರುಪತಿಯಲ್ಲಾದರೆ ನಿನಗಾಗಲೀ ನಿನ್ನ ಅಣ್ಣನಿಗಾಗಲೀ ಆಕ್ಷೇಪವಿಲ್ಲವಷ್ಟೇ " ಪಂಡಿತರು ಹಿಂದೊಮ್ಮೆ ಪ್ರಕಟಿಸಿದ ಅಭಿಪ್ರಾಯದ ಆಧಾರದಿಂದ ಮೂರ್ತಿ ಮದುವೆಯ ಮಾತು ಮುಂದುವರಿಸಿದ.

" ಎಲ್ಲಾದರೇನು ಮೂರ್ತಿ. ನಾನು ಸಂಪ್ರದಾಯವಾದಿಯಲ್ಲ. ಆದರೆ ಅಣ್ಣನನ್ನೊಂದು ಮಾತು ಕೇಳದೆ, ಇದೆಲ್ಲ ನಿಶ್ಚಯಿಸುವುದು ಸರಿಯಲ್ಲ ನೋಡು. ಆದುದರಿಂದ ಮುಂಬಯಿಗೆ ಹೋಗಿ ಬರೆಯುತ್ತೇನೆ."

" ನಿನ್ನ ಅಣ್ಣನ ಆಕ್ಷೇಪವೇನೂ ಇಲ್ಲವಷ್ಟೆ. "

" ಈ ಭಾರವನ್ನು ಶೀಲತ್ತಿಗೆ ಹೊರುತ್ತಾಳೆ ಮೂರ್ತಿ. ಅಣ್ಣ ಆಕ್ಷೇಪಿಸಿ ಯಾನೆಂದು ನಾನು ತಿಳಿದಿಲ್ಲ. ನೀನು ಈ ವಿಚಾರ ಯೋಚಿಸುವುದು ಬೇಡ. ನನ್ನ ಮದುವೆಯ ವಿಚಾರ ಅಣ್ಣನಿಗೆ ಉದಾಸೀನವಿರಬಹುದಾದರೂ ಖಡಾ ಖಂಡಿತ ಆಕ್ಷೇಪಿಸಲು ಯಾವುದಾದರೊಂದು ಕಾರಣ ಬೇಕಲ್ಲ. ಅಣ್ಣನ ಉದಾಸೀನಕ್ಕೆ ಮದ್ದರೆಯಲು ಅತ್ತಿಗೆ ಸಾಕು. ನೀನು ಯೋಚನೆ ಮಾಡುವುದು ಬೇಡ.

" ಪುನಃ ಬೇಗ ರಜೆ ಸಿಗಬಹುದೇ ? "

" ನಿನಗಿನ್ನೂ ಸಂದೇಹವೇ ಮೂರ್ತಿ ? ಉಡುಗೊರೆ ಏನು ಕೊಡುವು ದೆಂದು ನಿಶ್ಚಯ ಮಾಡು." ಮೂರ್ತಿ ತನ್ನ ಸಂದೇಹಕ್ಕಾಗಿ ತಾನೇ ನಗು ವಂತಾಯಿತು. ಗೋಪಿ ಆಮೇಲೆ ಹೇಳಿದ.

"ಆದರೆ ನನ್ನ ಕಾರ್ಯಕ್ರಮವೆಲ್ಲ ಕೆಟ್ಟುಹೋಯಿತು ನೋಡು. ನಾಳೆ ಉಡುಪಿಗೆ ಹೋಗಿ ೪-೫ ದಿನ ಇದ್ದು ಮುಂಬಯಿಗೆ ಹೊರಡಬೇಕೆಂದಿದ್ದೆ. ನಾನು ನಾಳೆ, ನಾಡಿದ್ದು ಇಲ್ಲೇ ಇದ್ದು ಸೋಮವಾರ ಮುಂಬಯಿಗೇ ಹೊರಟು ಹೋಗುತ್ತೇನೆ. ಮದುವೆಯೆಂದಾದ ಮೇಲೆ ಕೆಲಸ ಇದ್ದೇ ಇದೆಯಲ್ಲ. ಅದೂ ಅಲ್ಲದೆ ಅತ್ತಿಗೆಗೆ ಈ ಸಮಾಚಾರ ಕೂಡಲೇ ತಿಳಿಸದಿದ್ದರೆ ತುಂಬ ನೊಂದುಕೊಂಡಾಳು."

ಮೂರ್ತಿ ನಗುತ್ತಿದ್ದ. ಎರಡು ದಿನಗಳನ್ನು ಮತ್ತೆ ಮಂಗಳೂರಲ್ಲೇ ಕಳೆಯುವ ಗೋಪಿಯ ಹುಚ್ಚಿಗೆ ಆತ ಸರಿಯಾದ ಅರ್ಥವನ್ನೇ ಊಹಿಸಿದ.

೬

ಪುಣೆ ತಲುಪುವ ತನಕ ಗೋಪಿಗೆ ಪದ್ಮಾವತಿಯದೇ ಚಿಂತೆ. ಕೂತಲ್ಲಿ, ನಿಂತಲ್ಲಿ ಆತ ಪದ್ಮಾವತಿಯನ್ನು ಕಾಣುತ್ತಿದ್ದ. ಆದರೆ ಪುಣೆಯಲ್ಲಿ ಗಾಡಿ ಬದಲಿಸಿ, ಮುಂಬಯಿ ಗಾಡಿ ಹತ್ತಿದಾಗ, ಗೋಪಿಗೆ ಅತ್ತಿಗೆಯ ನೆನಪಾಯಿತು. ಅದರೊಡನೆಯೇ ಗೋಪಿಯ ಮನಸ್ಸಿನಲ್ಲಿ ಇಷ್ಟರತನಕ ಸ್ಪಷ್ಟವಾಗಿ ಇದ್ದಿರದ ಶಂಕೆಯೊಂದು ಈಗ ತಲೆಯೆತ್ತಿತು.

"ಅಣ್ಣ ಈ ಮದುವೆಗೆ ಒಪ್ಪಿಯಾನೇ ? ಅವನೇ ಮನೆಗೆ ಯಜಮಾನನಾಗಿರುವಾಗ, ಅವನು ಹುಡುಗಿಯನ್ನು ನೋಡದೆ, ಅವನ ಅನುಮತಿಯನ್ನು ನಾನು ಕೇಳದೆ, ಮದುವೆಗೆ ಸಮ್ಮತಿಸಿದೆನೆಂದು ಅವನು ನೊಂದುಕೊಂಡರೆ?"

ಪ್ರಸಂಗ ನೊಂದುಕೊಳ್ಳುವಂಥದೇ ಆಗಿದ್ದಿತು. ಸೋದರತ್ತೆಯ ಮಗಳು ಲಕ್ಷ್ಮಿಯ ಮದುವೆಯ ಮಾತುಕತೆ ನಿಂತಮೇಲೆ ಮೋಹನ ಗೋಪಿಯೊಡನೆ ಮದುವೆಯ ಕುರಿತು ಚಕಾರ ಎತ್ತಿರಲಿಲ್ಲ. ಮೋಹನ ಸ್ವಭಾವತಃ ಮಿತಭಾಷಿಯೇನೊ ನಿಜ; ಆದರೆ ವಯಸ್ಸಿಗೆ ಬಂದ ಗೋಪಿಯ ಮದುವೆಯ ವಿಚಾರ ಆತನಲ್ಲಿ ಏನಾದರೊಂದು ಅಭಿಪ್ರಾಯವಿದ್ದಿರಬೇಕಲ್ಲ ! ಈಗ ಗೋಪಿಯ ನಿರ್ಣಯಕ್ಕೆ ಆತ ಏನೆನ್ನುವನೋ.

ಕರ್ಕಿ ದಾಟಿಹೋಯಿತು. ಗಾಡಿ ವೇಗ ಹೆಚ್ಚಿಸಿಕೊಳ್ಳುತ್ತಿತ್ತು. ಗೋಪಿ ಮದುವೆಯ ವಿಚಾರದ ಯೋಚನೆಯೇ ಈಗ ಬೇಡವೆಂದು ಕೈಲಿದ್ದ ಪುಸ್ತಕ ಬಿಡಿಸಿ ಓದಲು ಯತ್ನಿಸಿದ.

ಗೋಪಿ ದಾದರಿನಲ್ಲಿಳಿಯುವಾಗ ರಾತ್ರಿ ಹತ್ತು ಗಂಟೆ. ಕೈಯಲ್ಲಿ ಹೆಚ್ಚಿಗೆ ಸಾಮಾನೇನೂ ಇರಲಿಲ್ಲವೆಂದು ನಡೆದೇ ಹೊರಟ. ಮತ್ತೆ ಹದಿನೈದು ನಿಮಿಷಗಳಲ್ಲಿ, ಆ ರಾತ್ರಿಗೆ ಕರೆಯುವ ಆಗಂತುಕರು ಯಾರಿರಬಹುದೆಂದು ಶೀಲೆ ಬಾಗಿಲು ತೆರೆದಳು.

ಗೋಪಿ ನಗುತ್ತಾ ನಿಂತಿದ್ದ.

"ಅರೆ! ಗೋಪಿ, ಏನೋ ಇದು. ಹೋಗಿ ಒಂದು ವಾರ ಆಗುವುದರೊಳಗೆ ವಾಪಸು ಓಡಿ ಬಂದಿ. ಅದೂ ಈ ರಾತ್ರಿಗೆ. ಮಂಗಳೂರು ಅಷ್ಟು ಬೇಗ ಬೇಸರ ತರಿಸಿತೆ?" ಎಂದಳು.

"ಹೌದು ಅತ್ತಿಗೆ. ಸಾಕಾಗಿಹೋಯಿತು. ಅದಕ್ಕೇ ಓಡಿ ಬಂದುಬಿಟ್ಟೆ. ಈಗ ಮೊದಲು ನನಗೊಂದಿಷ್ಟು ಅನ್ನ ಹಾಕು. ನಿನ್ನೆ ಬೆಳಿಗ್ಗೆ ಊಟಮಾಡಿದ್ದು. ಹೊಟ್ಟೆ ತುಂಬಿದ ಮೇಲೆ ಎಲ್ಲ ಹೇಳುತ್ತೇನೆ. ಅಣ್ಣ ಎಲ್ಲಿ?"

"ದೇವರೇ ನನ್ನನ್ನು ಮನೆಯಲ್ಲಿ ನಿಲ್ಲಿಸಿದ್ದು ನೋಡು ಗೋಪಿ. ಎಂಟೂವರೆಗೇ ಮನೆಗೆ ಬಂದಿದ್ದರು. 'ಅರೋರಾ'ಕ್ಕೆ ಹೋಗಿದ್ದಾರೆ. ಗೊತ್ತೇ ಇದೆಯಲ್ಲ—ನನಗೆ ಆ ಇಂಗ್ಲಿಷ್ ಸಿನೆಮಾ ತಲೆನೋವು ಸುರುವಾಗುತ್ತದೆ. ಇಬ್ಬರೂ ಯಾವುದಾದರೊಂದು ಹಿಂದೀ ಸಿನೆಮಾಕ್ಕೆ ಹೋಗಿದ್ದರೆ ನೀನು ಮಧ್ಯರಾತ್ರಿಯವರೆಗೆ ಕಾಯಬೇಕಿತ್ತು."

ಶೀಲೆ ಮಾತನಾಡುತ್ತ ಸ್ಟವ್ ಹಚ್ಚಿದ್ದಳು. ಗೋಪಿ ಸಾಮಾನೆಲ್ಲ ಸರಿಪಡಿಸಿಟ್ಟು, ಸ್ನಾನ ತೀರಿಸಿ ಸೀದಾ ಅಡುಗೆಯ ಮನೆಗೇ ಬಂದು ಕುಳಿತ.

"ನಿನ್ನ ರಜೆ ಇನ್ನೂ ಆರೇಳು ದಿನ ಉಂಟಲ್ಲ ಗೋಪಿ. ಹೋದವ ನಾಲ್ಕು ದಿವಸ ಕೂಡ ಸರಿಯಾಗಿ ನಿಲ್ಲದೆ ಬಂದುಬಿಟ್ಟೆ ಯಾಕೊ?"

"ಸುಮ್ಮನೆ ಬಂದಿಲ್ಲ ಅತ್ತಿಗೆ. ಮದುವೆ ನಿಶ್ಚಯಿಸಿಕೊಂಡು ಬಂದಿದ್ದೇನೆ. ನಿನ್ನನ್ನೂ ಅಣ್ಣನನ್ನೂ ಕರೆದುಕೊಂಡು ಹೋಗುವುದು ಮಾತ್ರ ಬಾಕಿ."

ಶೀಲೆ ಅವನನ್ನೇ ನೋಡುತ್ತಾ ಕೇಳಿದಳು.

"ಸತ್ಯವೇನೊ ಗೋಪಿ? ನೀನು ಮಂಗಳೂರಿಗೆ ಹೋದದ್ದು ಹುಡುಗಿಯ ಬೇಟೆಗಾಗಿಯೆ? ಯಾರು ಆ ಹುಡುಗಿ?"

"ಹೆಸರು ಪದ್ಮಾವತಿ ಅಂತ, ಅತ್ತಿಗೆ. ನಿನಗಿಂತಲೂ ಬಿಳಿ ಎಂದರೆ ನಿನಗೆ ಸಿಟ್ಟು ಬರಬಹುದು. ಹೈಸ್ಕೂಲಿನಲ್ಲಿ ಓದುತ್ತಿದ್ದಾಳೆ" ಎಂದು ಗೋಪಿ ಅವಳಿಗೆ ಮಂಗಳೂರಿನ ವಿದ್ಯಮಾನಗಳನ್ನೆಲ್ಲ ವಿವರಿಸಿದ. ತಾನು ತಂದಿದ್ದ ಪದ್ಮಾವತಿಯ ಭಾವಚಿತ್ರವನ್ನು ಅತ್ತಿಗೆಯ ಕೈಯಲ್ಲಿಟ್ಟ. ಅಕ್ಕ ಸುಮಿತ್ರೆಯ ಮದುವೆಯಾಗದೆಯೆ ಪದ್ಮಾವತಿಯ ಮದುವೆಯಾಗಬೇಕಿದೆಯೆಂದು ತಿಳಿದು ಶೀಲೆಗೂ ಆಶ್ಚರ್ಯವಾಯಿತು. ಆದರೂ ಮೈದುನನ ಮದುವೆಯಾಗಿ ಮನೆಗೆ ತಂಗಿ ಬರಲಿದ್ದಾಳೆ ಎಂಬ ಸಂತೋಷದಲ್ಲಿ ಶೀಲೆಗೆ ಹೊತ್ತು ಹೋದುದೇ ತಿಳಿಯಲಿಲ್ಲ. ಕೊನೆಗೊಮ್ಮೆ, ಊಟ ಮುಗಿಸಿ ಆಕಳಿಸುತ್ತಿದ್ದ ಗೋಪಿಯನ್ನು ಕುರಿತು—

"ಹೋಗು ಗೋಪಿ. ನಿನ್ನೆಯೂ ರೈಲಿನಲ್ಲಿ ಸರಿಯಾದ ನಿದ್ದೆಯಿದ್ದಿರ ಲಿಕ್ಕಿಲ್ಲ; ಮಲಗಿಕೋ. ಇನ್ನೇನು, ಅವರು ಕೂಡಾ ಸಿನೆಮಾ ಬಿಟ್ಟು ಬರುವ ಹೊತ್ತಾಯಿತು. ಪುನಃ ಮಾತು ತೊಡಗಿತೆಂದರೆ ಇಡೀ ರಾತ್ರೆ ಜಾಗರಣೆ ಮಾಡಬೇಕಾದೀತು" ಎಂದಳು.

ಗೋಪಿಗೆ ಬೇಕಾಗಿದ್ದುದೂ ಅಷ್ಟೆ! ಅವನಾಗಿ ಅಣ್ಣನೊಡನೆ ಮದು ವೆಯ ಪ್ರಸ್ತಾಪವೆತ್ತಲು ಎಲ್ಲಿಲ್ಲದ ಸಂಕೋಚ ತಡೆಯಾಗಿತ್ತು. ಶೀಲೆಯೇ ಆ ಕೆಲಸ ಮಾಡಿ, ಅಣ್ಣನ ಪ್ರಶ್ನೆಗಳಿಗೆ ಉತ್ತರಕೊಡುವ ಕೆಲಸ ಮಾತ್ರ ತನ ಗುಳಿದರೆ ಚೆನ್ನು ಎಂದು ಆತ ಭಾವಿಸಿದ.

"ಹುಡುಗಿಯ ಮನೆಯವರೇನೂ ಸ್ಥಿತಿವಂತರಲ್ಲ; ಅತ್ತಿಗೆ ತುಂಬಾ ಬಡವರು. ಆದರೆ ಹುಡುಗಿ ಚಿನ್ನದಂತಿದ್ದಾಳೆ. ನಾನು ಲಕ್ಷ್ಮಿಯನ್ನು ಮದುವೆ ಯಾಗಲಿಕ್ಕೆ ಒಪ್ಪಲಿಲ್ಲ ಎಂದು ಅಣ್ಣ ಇನ್ನು ಏನೆಲ್ಲ ತರ್ಕ ಸುರುಮಾಡು ತ್ತಾನೋ ಗೊತ್ತಿಲ್ಲ" ಎಂದು ಕೊನೆಯದಾಗಿ ತನ್ನ ಸಂದೇಹವನ್ನು ಅತ್ತಿಗೆಗೆ ತಿಳಿಸದೆ ಇರಲಿಲ್ಲ.

"ತರ್ಕವೋ ಮತ್ತೆಂಥದೊ. ಮನೆಗೆ ಭಾಗ್ಯಲಕ್ಷ್ಮಿ ಬರುವಾಗ ಬೇಡ ಎಂದು ಯಾರಾದರೂ ಹೇಳುತ್ತಾರೆಯೇ? ನಿನಗೆಯೇ ಮನಸ್ಸಿನಲ್ಲಿ ಇಲ್ಲದ ಸಲ್ಲದ ಕಲ್ಪನೆ" ಎಂದಳು ಶೀಲೆ.

ಗೋಪಿಗೆ ನಿದ್ದೆ ಹತ್ತಲೇ ಬೇಡವೇ ಎನ್ನುತ್ತಿರುವಾಗ ಮಾತು ಕೇಳಿಸಿತು.

" ಗೋಪಿ ಇಷ್ಟು ಬೇಗ ಯಾಕೆ ಬರುತ್ತಾನೆಯೆ ? ರಜೆ ಇನ್ನೂ ಸುಮಾರು ದಿನ ಇದೆ."

" ನಿಜ. ಆದರೆ ಇನ್ನೂ ಹೆಚ್ಚು ರಜೆ ತೆಗೆದುಕೊಂಡು ಹೋಗಲು ಬಂದಿದ್ದಾನೆ. ಒಂದು ಹುಡುಗಿಯನ್ನು ನೋಡಿ ಮದುವೆಗೆ ನಿಶ್ಚಯಿಸಿಕೊಂಡು ಬಂದಿದ್ದಾನಂತೆ. ಇನ್ನು ನಿಮ್ಮ ಮನಸ್ಸು, ಸಮಯ ಎಲ್ಲ ಕಾಯಬೇಕಲ್ಲ."

" ಮದುವೆಯೆ ! ನಿಶ್ಚಯ ಸಹಿತ ಮಾಡಿಕೊಂಡು ಬಂದಿದ್ದಾನೆಯೆ ?"

" ಸ್ವಲ್ಪ ಹಾಗೇ ಅನ್ನಿ. ಹುಡುಗಿಯ ಹೆಸರು ಪದ್ಮಾವತಿ. ಗೋಪಿಯ ಸ್ನೇಹಿತ ಮೂರ್ತಿ ಎಂತ ಇದ್ದಾರಲ್ಲ, ಅವರ ಪ್ರಯತ್ನದ ಮದುವೆಯಂತೆ. ಅವರ ಗುರುತಿನ ಹುಡುಗಿ. ಹುಡುಗಿಯನ್ನು ಗೋಪಿ ಮೆಚ್ಚಿದ್ದಾನೆ. ಇದಕ್ಕಿಂತ ಹೆಚ್ಚಿನ ನಿಶ್ಚಯ ಎಂತಹದು ? ಈಗ ನಿಮ್ಮನ್ನು ಕೇಳಲಿಕ್ಕೆಂದೇ ಬಂದಿದ್ದಾನೆ."

" ಗೋಪಿ ಇಷ್ಟು ಅವಿವೇಕಿಯೇನೆ ?"

" ಶ್ಶ್. ದಮ್ಮಯ್ಯ ! ಸ್ವಲ್ಪ ಮೆಲ್ಲಗೆ ಮಾತನಾಡಿ...."

ಗೋಪಿಗೆ ಮುಂದೆ ಮಾತು ಸ್ಪಷ್ಟ ಕೇಳಿಸಲಿಲ್ಲ. ಉದ್ವಿಗ್ನಗೊಂಡ ಮನಸ್ಸಿನಿಂದ ಆಚೀಚೆ ಹೊರಳಾಡಿದ.

ಮಾರನೆಯ ದಿನ ಬೆಳಿಗ್ಗೆ ಗೋಪಿ ಎದ್ದು ಬಂದಾಗ ಮೋಹನ ಆಗಲೇ ಕಾಫಿ ಕುಡಿದು ' ಟೈಮ್ಸ್ ' ಬಿಡಿಸಿ ಕುಳಿತಿದ್ದ. ಕಾಫಿಗೆಂದು ಅಡುಗೆಯ ಮನೆಗೆ ಬಂದ ಮೈದುನನೊಡನೆ ಶೀಲೆ ಕಳ್ಳದನಿಯಲ್ಲಿ " ಅವರ ಹತ್ತಿರ ಮಾತನಾಡುವಾಗ ಸ್ವಲ್ಪ ಜಾಗ್ರತೆ ಗೋಪಿ, ಏಕೋ ವಿನಾಕಾರಣ ನೊಂದುಕೊಂಡಿದ್ದಾರೆ. ಇನ್ನು ನೀನೂ ಸಿಟ್ಟಿಗೇಳಬೇಡ " ಎಂದಿದ್ದಳು. ಗೋಪಿ ಪ್ರತಿಮಾತು ಹೇಳದೆ ಅತ್ತಿಗೆಯ ಸಲಹೆಗೆ ಸಮ್ಮತಿಯನ್ನು ಸೂಚಿಸಿ ನಕ್ಕ.

ಆದರೂ ಗೋಪಿ ಅಣ್ಣನ ಬಳಿಗೆ ಬಂದಾಗ, ಅವನು ' ಏನೋ ' ಎಂದಿಷ್ಟೇ ಕೇಳಿ ಪುನಃ ' ಟೈಮ್ಸ್'ನ ಕಡೆ ಏಕಾಗ್ರಚಿತ್ತನಾಗಿ ಓದತೊಡಗಿದುದರಿಂದ ಗೋಪಿಯ ಕೆಲಸ ಕಷ್ಟವಾಯಿತು.

" ಆಂ, ಮೂರ್ತಿ ನಿನಗೆ ನಮಸ್ಕಾರ ಹೇಳಿದ್ದಾನಣ್ಣ."

" ಹಾಗೇನು ? ಅವನಿಗೆ ನನ್ನ ವಿಳಾಸ ಚೆನ್ನಾಗಿ ತಿಳಿದಿರಬೇಕು. ಕಾಗದ ಬರೆಯಲು ಅನುಕೂಲವಿದ್ದಿಲ್ಲವೇನೋ ?" ಮೋಹನನ ಸಿಟ್ಟಿನಲ್ಲಿ ನಂಜು ಬೆರೆತಿತ್ತು.

" ಇಷ್ಟರವರೆಗೆ ಕಾಗದ ಬರೆಯುವ ಅಗತ್ಯದ ವಿಷಯವೇನೂ ಇದ್ದಿರಲಿಲ್ಲಣ್ಣ. "

" ಮದುವೆ ಮುಗಿಸಿಕೊಂಡು ನೀನು ಹುಡುಗಿಯನ್ನು ಕರೆದುಕೊಂಡೇ ಬರಬಹುದಿತ್ತಲ್ಲ. ಇಷ್ಟೇಕೆ ಅವಸರದಲ್ಲಿ ಓಡಿಬಂದಿ ? " ಮೋಹನನ ಮಾತಿನಲ್ಲಿ ಎಲ್ಲರ ಕುರಿತಾದ ಸ್ಪಷ್ಟವಾದ ತಿರಸ್ಕಾರ ಪ್ರಕಟವಾಯಿತು.

" ನೀನು ಹೀಗೆಲ್ಲ ಮಾತಿಗೆ ತೊಡಗಿದರೆ ನಾನೇನು ಹೇಳುವುದಕ್ಕಿದೆ ? ನಿನ್ನ ಮಾತು ನಾನು ಇಷ್ಟರತನಕ ಮೀರಿ ಹೋಗಲಿಲ್ಲ. ಮಂಗಳೂರಿಗೆ ಹೋದಾಗ ಸರಿಯಾದ ಒಂದು ಸಂದರ್ಭ ಸಿಕ್ಕಿದುದರಿಂದ ಒಂದು ಹುಡುಗಿಯನ್ನು ನೋಡಿ ಬಂದೆ. ಅಷ್ಟಕ್ಕೆಯೇ ನೀನು.... "

" ನಾನು ಮಾತನಾಡುವುದು ನಿನಗೆ ಅಧಿಕಪ್ರಸಂಗವಾಗಿ ಕಾಣುತ್ತದೆಂದು ನನಗೆ ತಿಳಿದುದು ಇವತ್ತೇ ನೋಡು, ಗೋಪಿ. "

" ಹಾಗಲ್ಲಣ್ಣ. ಇಷ್ಟು ಸಿಟ್ಟು ಬರಲು ಅಂಥದೇನು ನಾನು ಮಾಡಿದೆ?"

" ನಿನಗೆ ಕಲಿಸಿ, ಒಂದು ದಾರಿ ಹಿಡಿಯಲು ಅನುಕೂಲ ಮಾಡಿಕೊಟ್ಟುದಕ್ಕೆ ಮದುವೆಯ ಪ್ರಸಂಗ ಬರುವಾಗ ಅಣ್ಣನೊಡನೆ ಒಂದು ಮಾತು ಕೇಳಬೇಕು ಎಂದು ನಿನಗೆ ಅನಿಸಲಿಲ್ಲ. ಅಲ್ಲವೆ ? "

" ಈಗ ಕೇಳಲಿಕ್ಕೇ ಬಂದಿದ್ದೇನಲ್ಲ. ನಾನು ಮೆಚ್ಚಿ ನಿನಗೆ ತಿಳಿಸುವ ಮುಂಚೆ ಕೇಳಲಿಕ್ಕೇನಿದೆ ? ನೀನೇ ಯಾವುದಾದರೂ ಹುಡುಗಿಯನ್ನು ನೋಡಿ ಮದುವೆಯಾಗು ಎಂದು ನನ್ನನ್ನು ಕೇಳುವಷ್ಟು ಹಳೆಯ ಕಾಲದವ ನೀನಲ್ಲ ಎಂತ ತಿಳಿದಿದ್ದೆ. ಒಂದು ವೇಳೆ ನೀನು ಹಾಗೆ ಹೇಳಿದ್ದರೂ ನಾನು ಒಪ್ಪುತ್ತಿರಲಿಲ್ಲ ಬಿಡು. "

" ಹಾಗಾದರೆ ಲಕ್ಷ್ಮಿಯನ್ನು ಮದುವೆಯಾಗಬಹುದಿತ್ತಲ್ಲ. ಅಮ್ಮ ಕೂಡ ಸಾಯುವ ಮುಂಚೇ ಆಸೆ ತೋರಿಸಿದ್ದಾಳೆಂದು ಗೊತ್ತಿದ್ದೂ ' ಬೇಡ ' ಎಂದು ಏಕೆ ಬೊಬ್ಬೆ ಹಾಕಿದೆಯೆಂದು ಕೇಳಲೇ ? "

ಮಾತು ಇಲ್ಲಿಗೆ ಬರುತ್ತದೆಂದು ಗೋಪಿಗೆ ಮೊದಲೇ ತಿಳಿದಿತ್ತು.

" ಆಗ ಇನ್ನೂ ಕಲಿಯುತ್ತಿದ್ದೆನಲ್ಲ. ಅಷ್ಟೇ ಅಲ್ಲ. ನನ್ನ ಬಿ. ಎಸ್ಸಿ.ಗೆ ಮಾವನಿಗೆ ಒಂದೆರಡು ಸಾವಿರ ಖರ್ಚು ಮಾಡುವುದೇನೂ ಕಷ್ಟವಿರಲಿಲ್ಲ.

ಅವರು ಕೊಡುವುದಿಲ್ಲ ಎಂದು ಹೇಳಿದುದರಿಂದಲ್ಲವೇ ನೀನು ಮದುವೆಯ ಮಾತೇ ಈಗ ಬೇಡ ಎಂದು ನಿಲ್ಲಿಸಿಬಿಟ್ಟದ್ದು ? "

" ಈಗ ನಿನ್ನ ಮಾವನಾಗಿ ಬರುವವರು ಸಾವಿರಗಟ್ಟಲೆ ಕೊಡುತ್ತಾರೇನೋ. "

" ಇಲ್ಲ. ಅವರು ಕೊಡುವ ಸ್ಥಿತಿಯಲ್ಲಿಲ್ಲ. ಅಷ್ಟು ಬಡ ಮನೆತನ ಎಂದು ತಿಳಿದೂ ಒಪ್ಪಿದ್ದೇನೆ. ಆಗ ನನಗೆ ಹಣದ ಅವಶ್ಯಕತೆ ಇತ್ತು. ಈಗ ಹಾಗಿಲ್ಲವಲ್ಲ. ಎಂದಮೇಲೆ ಚಿನ್ನದಂಥ ಹುಡುಗಿ ಮನೆಗೆ ಬರುವಾಗ ಜೊತೆಗೆ ಸಾವಿರಗಟ್ಟಲೆ ಸುರಿಯಿರಿ ಎಂದು ಹೇಳುವುದು ಸರಿಯೆ ? "

" ಆಗಲೂ ನಿನಗೆಲ್ಲಿ ಹಣದ ಅವಶ್ಯಕತೆ ಇತ್ತು ? ಇಲ್ಲಿ ನಾನು ಇದ್ದೆನಲ್ಲ ಕೇಳಿದಷ್ಟು ಹಣ ಸುರಿಯಲಿಕ್ಕೆ. ನಿನಗೆ ಹಣ ಕೊಡಲು ನಾನು ಪಟ್ಟ ಕಷ್ಟದ ನೆನಪಿದ್ದರಲ್ಲವೇ ನೀನು ಆ ವಿಚಾರ ಚಿಂತಿಸುವುದು ? "

ತನ್ನ ಮದುವೆಯ ವಿಚಾರದಲ್ಲಿ ಹಣದ ಮಾತು ಹೀಗೆ ತಲೆ ಎತ್ತಿದುದರಿಂದ ಗೋಪಿಗೆ ಬೇಸರಕ್ಕಿಂತ ಹೆಚ್ಚಿಗೆ ದುಃಖವೇ ಆಯಿತು.

" ಈಗ ಇಷ್ಟೆಲ್ಲ ಮಾತು ದುಡ್ಡಿಗಾಗಿಯೋ ? ನಿನ್ನಲ್ಲಿ ಈ ರೀತಿಯ ಬದಲಾವಣೆಯಾಗಿರುವುದು ನನಗೆ ತಿಳಿದಿರಲಿಲ್ಲ. ಅಣ್ಣ, ಅತ್ತಿಗೆಯನು ಮದುವೆಯಾಗುವಾಗ ಒಂದು ಬಿಡಿಕಾಸು ತೆಗೆದುಕೊಂಡಿರಲಿಲ್ಲ. ಅದು ನಿನ್ನ ತತ್ವಕ್ಕೆ ವಿರುದ್ಧ ಎಂದು ಆಗ ಬಡಾಯಿ ಕೊಚ್ಚಿಕೊಂಡಿ. ಈಗ ನನ್ನ ಮದುವೆಯ ಮಾತು ಬರುವಾಗ ಈ ತತ್ವ ಮಾಯವಾಗಿ ಹೋಯಿತೇನೋ ! "

ಮೋಹನನ ತರ್ಕ ಸೋಲನ್ನೊಪ್ಪಿಕೊಳ್ಳುವುದರಲ್ಲಿತ್ತು. ಆದ ಮೋಹನ ಅದಕ್ಕೆ ಸಿದ್ಧನಿರಲಿಲ್ಲ.

" ಹೋಗೋ. ನಿನಗೇನು ಗೊತ್ತಿದೆ ವ್ಯವಹಾರಜ್ಞಾನ. ನಾನು ಬೇ ಯಾವರ ಹಣವನ್ನಪೇಕ್ಷಿಸಲಿಲ್ಲ. ಪಾರ್ಸಿ ಕಾಲನಿಯ ನರ್ಸಿಂಗ್ ಹೋಮ ನಲ್ಲಿ ನನಗಾಗುವ ಖರ್ಚನ್ನು ತುಂಬಿಸಲು ನೀನೇನೂ ಬರುವುದಿಲ್ಲವಷ್ಟೆ. "

ಗೋಪಿಗೆ ಈಗ ಸ್ಪಷ್ಟವಾಗತೊಡಗಿತು ಅಣ್ಣ ಅಪೇಕ್ಷಿಸಿದ್ದುದು, (ನರ್ಸಿಂಗ್ ಹೋಮ್‌ಗೆ ತನ್ನ ಮದುವೆಯಿಂದಾಗಿ ಏನಾದರೂ ಲಾಭವಾ ಬಹುದೆಂದು.

"ಹಾಗಾದರೆ ನಾನು ಮೂರ್ತಿಗೆ ಏನೆಂದು ಕಾಗದ ಬರೆಯಲಿ, ಅಣ್ಣಾ ?"

"ನನ್ನನ್ನೇನು ಕೇಳುವುದಿದೆ ? ನಿನ್ನ ಇಷ್ಟವಿದ್ದ ಹಾಗೆ ಮಾಡು. ಮದುವೆ ಮಾಡಿಕೊಂಡು ಸಂಸಾರ ನಡೆಸುವವನ ನೀನು. ನನ್ನೊಡನೆ ಕೇಳ ಬೇಕಾಗಿದೆಯೇ ?"

ಗೋಪಿಗೂ ಸಿಟ್ಟು ಏರತೊಡಗಿತು.

"ಮದುವೆಯ ನಿಶ್ಚಯದ ವಿಚಾರ ಕೇಳಲಿಕ್ಕೆ ಏನೂ ಉಳಿದಿಲ್ಲ ಅಣ್ಣ. ಆದರೆ ದಿನ ಯಾವಾಗ ನಿಶ್ಚಯಿಸಬೇಕು, ನಿನಗೆ ಯಾವಾಗ ಅನುಕೂಲ ವಾಗಬಹುದು ಎಂದು ಕೇಳುವುದಷ್ಟೇ ಉಳಿದಿದೆ."

"ಅದಕ್ಕೂ ನನ್ನನ್ನು ಕೇಳಬೇಕಾಗಿಲ್ಲ" ಎಂದು ಮೋಹನ ಸ್ನಾನ ಕ್ಕೆಂದು ಹೊರಡಲಿದ್ದ.

ಎದುರಿಗೆ ಶೀಲೆ ನಿಂತಿದ್ದಳು.

"ನೀವು ಇಷ್ಟು ತಿಳಿದವರು ಈ ರೀತಿ ಮಾತನಾಡುವುದೆ ? ಗೋಪಿಗೆ ನಿಮ್ಮನ್ನು ಬಿಟ್ಟು ಯಾರಿದ್ದಾರೆ ? ತಂದೆಯಿಲ್ಲ, ತಾಯಿಯಿಲ್ಲ. ನಿಮ್ಮ ಮದು ವೆಯ ಸಮಯಕ್ಕೆ ಎಲ್ಲರೂ ಇದ್ದರೆಂದಾದರೂ ನೆನಪು ಬೇಡವೆ ? ಮದುವೆಯ ಮಂಗಲ ಕೆಲಸ ಬರುವಾಗ ಬೇಡವಾದ ತರ್ಕ ಸುರುಮಾಡಿ ಗುದ್ದಾಡಿ ಕೊಳ್ಳಲು ಆರಂಭ. ನೀವು ಬನ್ನಿ; ಬಾರದೆ ಕುಳಿತುಕೊಳ್ಳಿ. ನನಗೆ ಗೋಪಿಯ ಮದುವೆಗೆ ಹೋಗದೆ ನಿರ್ವಾಹವಿಲ್ಲ" ಎಂದಳು.

ತಂದೆ ತಾಯಿಯರ ನೆನಪು ತೆಗೆದುದರಿಂದ ಮೋಹನ ತಣ್ಣಗಾದ.

"ನಾನು ಬರುವುದಿಲ್ಲ ಎಂದು ಹೇಳಲಿಲ್ಲ. ಎಲ್ಲ ಅವನೇ ನಿಶ್ಚಯ ಮಾಡಿಕೊಳ್ಳುತ್ತಿರುವಾಗ ಇದೊಂದಕ್ಕೆ ನನ್ನನ್ನೇಕೆ ಕೇಳಬೇಕು ಎಂದು ಹೇಳಿದೆ, ಅಷ್ಟೆ. ಹೆಚ್ಚು ಮಾತಾಡಲು ನನಗೇನು ಅಧಿಕಾರವಿದೆ ?" ಎಂದು ಮೋಹನ ಟವಲ್ ಹಿಡಿದುಕೊಂಡು ಬಚ್ಚಲು ಮನೆಯತ್ತ ತೆರಳಿದ.

ಗೋಪಿ ತಗ್ಗಿಸಿದ ಮುಖವೆತ್ತಿ ಅತ್ತಿಗೆಯ ಕಡೆ ನೋಡಿ ಕೃತಜ್ಞತೆಯ ನಗು ನಗಬೇಕೆನ್ನುವಾಗ ಅವಳು ಅಲ್ಲಿಂದ ಮಾಯವಾಗಿದ್ದಳು.

ಮುಂದೆ ಎರಡು ದಿನ ಕಳೆದ ಮೇಲೊಂದು ಸಂಜೆ ಶೀಲೆ_ಗೋಪಿ ಯೊಡನೆ ಪಾರ್ಸಿ ಕಾಲನಿ ನರ್ಸಿಂಗ್ ಹೋಮ್‌ನ ವಿಚಾರ ಮಾತನಾಡಿದಾಗ

ಆತ ಅಣ್ಣನ ಮನಸ್ಸಿನ ಕಳವಳದ ಹಿನ್ನೆಲೆಯನ್ನು ಚೆನ್ನಾಗಿ ಅರಿತುಕೊಳ್ಳುವಂತಾಯಿತು.

"ಪಾರ್ಸಿ ಕಾಲನಿ ನರ್ಸಿಂಗ್ ಹೋಮ್ ಆದಂತೆಯೇ ಗೋಪಿ. ಇವರು ಅದರ ಆಲೋಚನೆಯನ್ನೆ ಬಿಟ್ಟಂತೆ ಕಾಣುತ್ತದೆ."

"ಯಾಕೆ ಅತ್ತಿಗೆ ?"

"ಶ್ರೀಧರರಾಯರು ೧೦ ಸಾವಿರ ರೂಪಾಯಿ ಬಡ್ಡಿಯಿಲ್ಲದೆ ಸಾಲ ಕೊಡುತ್ತೇನೆಂದವರು ಈಗ ಇಲ್ಲ ಎನ್ನುತ್ತಾರಂತೆ. ನೋಡುವಾಗ, ಅವರ ಪಾರ್ವತಿಯನ್ನು ನಿನ್ನ ಕುತ್ತಿಗೆಗೆ ಕಟ್ಟುವ ಯೋಚನೆ ಇತ್ತೆಂದು ತೋರುತ್ತದೆ. ನೀನು ಮಂಗಳೂರಿಗೆ ಹೋಗಿ ಯಾರನ್ನೋ ನೋಡಿಕೊಂಡು ಬಂದು ಅವರ ಆಸೆಗೆ ಕಲ್ಲು ಹಾಕಿದಿ. ಬರುವ ಮೇಯಲ್ಲಿ ಪಾರ್ವತಿಯು ಇಂಟರ್ ಮುಗಿಯುತ್ತದಲ್ಲ ! ಆ ಸಮಯ ನಿನ್ನ ಹತ್ತಿರ ಪ್ರಸ್ತಾಪ ಮಾಡುವುದು ಎಂದುಕೊಂಡಿದ್ದರಂತೆ. "

ಗೋಪಿ ಮಂಗಳೂರಿನಿಂದ ಮರಳಿ ಬಂದ ಮಾರನೆಯ ಸಂಜೆ ಆತ ಶ್ರೀಧರರಾಯರಲ್ಲಿಗೆ ಹೋಗಿದ್ದ. ಹಾಗೆ ಹೋಗಿ ಬರುವುದು ವಾಡಿಕೆಯಾಗಿತ್ತು. ಆದಾಯ ತೆರಿಗೆಯ ಇಲಾಖೆಯ ನಿವೃತ್ತ ಅಧಿಕಾರಿಗಳಾಗಿದ್ದ ಅವರಿಗೆ ಗೋಪಿಯೊಡನೆ ಹರಟೆ ತುಂಬ ಸೇರುತ್ತಿತ್ತು. ಆದರೆ ಆ ಸಲಿಗೆ ಮಗಳು ಪಾರ್ವತಿಯ ಮದುವೆಯ ಹಂಚಿಕೆಯಿದ್ದಿತೆಂದು ಆತ ಎಣಿಸಿರಲಿಲ್ಲ. ಈಗ ಅತ್ತಿಗೆ ಹೇಳುವಾಗ ಎರಡು ದಿನಗಳ ಹಿಂದೆ ಶ್ರೀಧರರಾಯರು ಮನೆಯಲ್ಲಿ ಒಮ್ಮಿಂದೊಮ್ಮೆಗೆ ಇವನೊಡನಿದ್ದ ಸಲುಗೆಯನ್ನು ನಿಲ್ಲಿಸಿಬಿಟ್ಟುದರ ಅರ್ಥ ಅವನಿಗಾಯಿತು.

"ಅದೇ ನೋಡು ಅತ್ತಿಗೆ. ಮೊನ್ನೆ ಸಾಯಂಕಾಲ ಶ್ರೀಧರರಾಯರಲ್ಲಿಗೆ ಹೋದಾಗ ನನ್ನನ್ನು ಕುತ್ತಿಗೆ ಹಿಡಿದು ದಬ್ಬಲಿಲ್ಲ, ಅಷ್ಟೆ. "

"ಒಳ್ಳೇದೇ ಆಯಿತು ಗೋಪಿ. ಪಾರ್ವತಿಯಂಥ ಹುಡುಗಿಯನ್ನು ಕಟ್ಟಿಕೊಂಡು ನೀನು ಸಂಸಾರ ಮಾಡಿದ ಹಾಗೆಯೇ. ರೂಪವೂ ಅಷ್ಟಕ್ಕಷ್ಟೆ. ಜಂಭ ಬೇಕಾದಷ್ಟಿದೆ. "

"ಆದರೆ ಈ ಹುಡುಗಿಯ ಅಕ್ಕ ಸುಮಿತ್ರೆಯನ್ನು ನೆನೆಸಿಕೊಂಡಾಗ ನಾನೆಲ್ಲಾದರೂ ಆ ಹುಡುಗಿಗೆ ಅನ್ಯಾಯ ಮಾಡಿದೆನೇ ಎಂದು ಒಮ್ಮೊಮ್ಮೆ ಬೇಸರವಾಗುತ್ತದೆ. ಅವಳಿಗೆ ಮೊದಲು ಮದುವೆಯಾಗಬೇಕಿತ್ತು ನೋಡು. "

"ನಾವುನಾವು ಪಡೆಕೊಂಡು ಬಂದದ್ದನ್ನು ಅನುಭವಿಸಲೇಬೇಕು ಗೋಪಿ. ಇದನ್ನೆಲ್ಲ ಮನಸ್ಸಿಗೆ ಹಚ್ಚಿಕೊಂಡರೆ ಆದೀತೇ ?"

"ಅದೂ ಸರಿ ಅತ್ತಿಗೆ. ಅಲ್ಲದೆ ಒಮ್ಮೊಮ್ಮೆ ನೋಡುವಾಗ ತಂಗಿಯು ಮದುವೆಯಾದ ಮೇಲೆ ಅಕ್ಕನ ಮದುವೆ ಸುಲಭದಲ್ಲೇ ಆಗಬಹುದೆಂದು ತೋರುತ್ತದೆ."

"ಮದುವೆಯಾಗದೇ ಯಾರಾದರೂ ಉಳಿಯುತ್ತಾರೇನೋ ಹುಚ್ಚು ಹುಡುಗ. ಈಗ ನಿನ್ನ ಮದುವೆಗೆ ದಿನ ನೋಡುವ ವಿಚಾರ ಆಲೋಚನೆ ಮಾಡು. ಜನವರಿಯಲ್ಲಾದರೆ ಅವರಿಗೆ ಒಂದು ಎಂಟುಹತ್ತು ದಿನಗಳ ಮಟ್ಟಿಗೆ ಅವಕಾಶ ಮಾಡಿಕೊಳ್ಳುವುದು ಸಾಧ್ಯವಂತೆ. ಆಗ ದಿನವಿದೆಯೋ ನೋಡುವಂತೆ ಕಾಗದ ಬರಿ."

ಗೋಪಿಗೆ ಅಣ್ಣನ ವಿಷಯಕ್ಕೆ ತುಸು ಆದರ ಮೂಡಿತು. ಮೊದಲಿನ ವಿರೋಧವನ್ನು ಮರೆತು ಮದುವೆಗೆ ಒಪ್ಪಿಕೊಂಡನಲ್ಲಾ ಎಂದು ಸಂತೋಷ ವಾಯಿತು. ಜನವರಿಯಲ್ಲಿ ಅಣ್ಣನ ಸಮಯಕ್ಕೆ ಹೊಂದಿಕೆಯಾಗುವಂತೆ ದಿನವಿದೆಯೋ ಎಂದು ನೋಡಲು ಮೂರ್ತಿಗೆ ಕಾಗದ ಬರೆದ.

ಕಾಗದ ಮೂರ್ತಿಗೆ ಶಾಲೆಯಲ್ಲೇ ಸಿಕ್ಕಿತು. ಆ ಸಂಜೆಗೇ ಪಂಡಿತರ ಮನೆಗೋಡಿದ. ತನ್ನ ರಾಯಭಾರ ಯಶಸ್ವಿಯಾದುದರ ಸಮಾಧಾನ ಅವನಿಗಿದ್ದರೆ ಕಲಿತ, ಹೆಚ್ಚು ಸಂಬಳದ ಗೌರವಸ್ಥ ಅಳಿಯ ಮನೆಗೆ ಬರುವನೆಂಬ ಸ್ವಾಭಾವಿಕ ಆನಂದ ಪಂಡಿತರ ಹೃದಯದಲ್ಲಿ ಮೂಡಿಬಂದಿತ್ತು. ಸುಮಿತ್ರೆಗಾದ ಅನ್ಯಾಯದ ವಿಚಾರವನ್ನೂ ಸಹ ಕೆಲಕಾಲ ಅದು ಮರೆಯಿಸಿತ್ತು. ಜನವರಿ ಮೂರನೆಯ ವಾರದಲ್ಲಿ ಒಂದು ದಿನ ನಿಶ್ಚಯಿಸಿ ಮದುವೆ ತಿರುಪತಿಯಲ್ಲಿ ಆಗಬೇಕೆಂಬುದನ್ನು ಸೂಚಿಸಿ, ಪಂಡಿತರು ಗೋಪಿಯ ಅಣ್ಣನಿಗೆ ಕಾಗದ ಬರೆದರು. ಅಲ್ಲಿಂದ ಅದಕ್ಕೆ ಒಪ್ಪಿಗೆ ಸೂಚಿಸಿ ಮಾರೋಲೆ ಬರಲು ತಡವಾಗಲಿಲ್ಲ. ಇತ್ತ ಸಿದ್ಧತೆ ನಡೆಯಿತು.

ತಿರುಪತಿಯಲ್ಲಿ ಮದುವೆಯೆಂದು ಮೂರ್ತಿ ಸಂತೋಷಪಡಲು ಇನ್ನೊಂದು ಕಾರಣವಿದ್ದಿತು. ಅದು ಪಂಡಿತರಿಗೆ ಅನಾಯಾಸವಾಗಿ ಮದ್ರಾಸನ್ನು ಸಂದರ್ಶಿಸಲು ಅವಕಾಶ ಸಿಗುವುದೆಂದು. ಇದೇ ಸಂಧಿಯಲ್ಲಿ ಆಪರೇಶನ್ ಸಾಧ್ಯವಾದರೂ ಆಗಬಹುದು. ಇಲ್ಲವಾದರೆ ದೇಹಪರೀಕ್ಷೆಯಾದರೂ

ಒಮ್ಮೆಗೆ ಚೆನ್ನಾಗಿ ಆಯಿತೆಂದರೆ ಮುಂದಿನ ಕಾರ್ಯಕ್ರಮ ನಿರ್ಧರಿಸಲು ತುಂಬ ಸಹಾಯವಾಗುವುದೆಂದು ಆತ ಭಾವಿಸಿದ.

ಇತ್ತ ಸಿಲೆಕ್ಶನ್ ಮುಗಿದಿದ್ದ ಸುಮಿತ್ರೆಗೆ ಒಂದು ಕಡೆ ಮಾರ್ಚಿನ 'ಪಬ್ಲಿಕ್' ಪರೀಕ್ಷೆಯ ಕಡೆ ದೃಷ್ಟಿಯಿದ್ದರೂ, ತಂಗಿಯ ಮದುವೆಯ ಸಡಗರದಲ್ಲಿ ಆಕೆ ಉದಾಸೀನಳಾಗಿರಲಿಲ್ಲ. ತಂದೆ ನಿಶ್ಚಿಂತೆಯಿಂದ ಅಳಿಯನ ಆಗಮನದ ಕನಸು ಕಾಣುತ್ತಿದ್ದಾಗ, ಸುಮಿತ್ರೆ ಅವರ ಸಂತೋಷದಲ್ಲಿ ಪಾಲು ಗಾತಿಯಾಗಿ ನಲಿದಳು. ಪದ್ಮಾವತಿಯನ್ನು ಹಾಸ್ಯದಲ್ಲಿ, ಅಣಕದಲ್ಲಿ ಹಿಂಸಿಸಿ, ಬಡ ಪಂಡಿತರ ಮನೆಯ ನೀರಸತೆ ಮಾಯವಾಗಿ, ಹೊಸ ದಾಂಪತ್ಯದ ಸ್ವಾಗತದ ಬೆನ್ನಿನಲ್ಲಿ ಬರುವ ರಸಿಕತೆ ನಗುವಿನ ಬುಗ್ಗೆಯನ್ನು ಚಿಮ್ಮಿಸುವಂತೆ ಮಾಡಲು ಆಕೆ ನೆರವಾದಳು.

ಆದರೂ ಇದೆಲ್ಲ ಸಂಭ್ರಮದ ನಡುವೆ ಕೆಲವು ಬಾರಿ ಒಮ್ಮೊಂದೊಮ್ಮೆಗೆ ತಟಸ್ಥಳಾಗಿ ಅಂತರ್ಮುಖಿಯಾಗುವಂತೆ ಮಾಡುತ್ತಿದ್ದ ಹೊಸ ರೋಗವೊಂದು ತನ್ನನ್ನು ಯಾಕೆ ಕಾಡುತ್ತಿದೆಯೆಂಬುದು ಸುಮಿತ್ರೆಗೆ ಸಮಸ್ಯೆಯಾಗಿತ್ತು. ಒಮ್ಮೊಮ್ಮೆ ಪುಸ್ತಕ ಬಿಡಿಸಿದಾಗ ಹಾಳೆಗಳ ನಡುವೆಯೇ ಗೋಪೀನಾಥರಾಯರ ಚಿತ್ರ ಎದ್ದು ನಿಂತಂತೆ ಕಾಣುತ್ತಿತ್ತು. ಕೆಲವೊಮ್ಮೆ ಶಾಲೆಯ ಪ್ರಯೋಗಶಾಲೆಯಲ್ಲಿ ಪ್ರಯೋಗ ಮಾಡುತ್ತಿರುವಾಗ ಹಾಲಿನ ಸುತ್ತ ತಿರುಗುವುದು ಮೂರ್ತಿಮಾಷ್ಟ್ರಲ್ಲ, ಗೋಪೀನಾಥರಾಯರು ಎಂದು ಭಾಸವಾದುದೂ ಉಂಟು. ಅಂದು ತಂದೆಯ ತಲೆಗೆ ಕೈತಪ್ಪಿ ಬಿಸಿನೀರು ಚೆಲ್ಲಿದಂದಿನಿಂದ ತಂದೆಯನ್ನು ಸ್ನಾನ ಮಾಡಿಸುವಾಗಲೆಲ್ಲ ಆಕೆ ಎಷ್ಟು ಪ್ರಯತ್ನಿಸಿದರೂ ಅಂದಿನ ಅನುಚಿತ ನಡತೆಯ ಹಿಂದಿನ ಸಂದರ್ಭವನ್ನು ನೆನಸಿಕೊಳ್ಳದಿರಲಾಗಲಿಲ್ಲ.

"ನಿನ್ನ ಎಸ್. ಎಸ್. ಎಲ್. ಸಿ. ಸುಲಭದಲ್ಲಿ ಮುಗಿಯುತ್ತದೆ. ರಜೆ ಬರುವುದರೊಳಗಾಗಿ ತಂದೆಯ ಆಪರೇಶನ್ ಮುಗಿದು ಗುಣವಾಗಿ, ಮುಂಚಿನಂತೆ ನಗುತ್ತ ಮನೆ ತುಂಬ ಓಡಾಡುತ್ತಿರುತ್ತಾರೆ, ಪರೀಕ್ಷೆಯ ಫಲಿತಾಂಶ ನೋಡುವ ಮುಂಚೆಯೇ. ನೀನು ಮುಂದೆ ಓದಲೇಬೇಕು ಸುಮೀ. ಇಂಟರ್ ಮುಗಿಸು. ಮತ್ತೆ ನಿನಗೆ ಮನಸಿದೆಯೆಂದಾದರೆ 'ಮೆಡಿಕಲ್' ಓದುವುದಾದರೂ ನನ್ನ ಆಕ್ಷೇಪವಿಲ್ಲ. ಓದಿ ಮುಂದೆ ಬಾ. ಬುದ್ಧಿವಂತಿಕೆಯ ಭಾಂಡಾರವೇ ಆಗಿಬಾ. ನಿನ್ನ ಅಪೇಕ್ಷೆಯ ಸೇವಾಧರ್ಮದ ದೀಕ್ಷೆ ಹಿಡಿದು

ಬಡಜನರ ಉದ್ಧಾರಕ್ಕಾಗಿಯೆ ಮೆಡಿಕಲ್ ಕೋರ್ಸ ಮುಗಿಸಿ ಬಾ ಅಷ್ಟರ ತನಕ ನಿನಗಾಗಿ ಕಾದಿರುತ್ತೇನೆ, ಸುಮೀ. ಮದುವೆಯಾದರೇನಾಯಿತು ಸುಮೀ, ಓದಿನ ಮುಕ್ತಾಯ ಇಲ್ಲಿಗೇ ಆಗಬೇಕೆಂದಿಲ್ಲವಷ್ಟೆ. ಅದರಿಂದ ದಾಂಪತ್ಯದಲ್ಲಿ ಸಮರಸತೆ ಬರಲು ಅನುಕೂಲ ಹೆಚ್ಚುತ್ತದೆ. ಅದಕ್ಕಾಗಿ ಓದು ಸುಮೀ. ನಾನು ಕಾದಿರುತ್ತೇನೆ. ನಿನ್ನ ಅಭ್ಯಾಸ ಮುಗಿಯುವತನಕ ನಗುನಗುತ್ತ ಕಾದಿರುತ್ತೇನೆ. ಆಮೇಲೆ ಸೇವೆಯ ಬಾಳುವೆಗಾಗಿ ಜೊತೆಗಾಗಿಯೇ ಮಡಿಯೋಣ. ಕೈಕೈಹಿಡಿದು ಮುಂಪೆ ಮುಂದೆ ಹೋಗೋಣ. ಅಷ್ಟರೊಳಗೆ ಪದ್ಮಾವತಿಗೆ ಮದುವೆಯಾಗುತ್ತದೆ. ನಿನ್ನ ತಂದೆಯವರೂ ಇಬ್ಬರು ಮಕ್ಕಳ ದಾಂಪತ್ಯ ಜೀವನ ಸುಸೂತ್ರವಾಗಿ ಸಾಗುವುದನ್ನು ನೋಡುತ್ತ ಸಂತೋಷದಲ್ಲಿರುವಾಗ, ನಿನ್ನ ದಾರಿಗೆ ಯಾರ ತಡೆಯೂ ಬರುವಂತಿಲ್ಲ. ಹೌದು ಸುಮಿತ್ರಾ.....ಎಸ್. ಎಸ್. ಎಲ್. ಸಿ. ಮುಗಿದೊಡನೆಯೇ ಇಂಟರ್. ಅದು ಮುಗಿದ ಮೇಲೆ ಮೆಡಿಕಲ್........ ”

ಯಾರು ಈ ಮಾತು ಹೇಳುತ್ತಾರೆ. ಯಾಕೆ ಮನಸ್ಸಿನಲ್ಲಿ ಈ ಆಸೆ ಕುಣಿಯುತ್ತದೆ ಎಂದು ಸುಮತ್ರೆ ಉದ್ವಿಗ್ನಳಾಗಿ ಯೋಚಿಸುತ್ತಾಳೆ. ಗೋಪೀನಾಥರಾಯರ ಮುಖ ಮೇಲೆದ್ದು ನಿಲ್ಲುತ್ತದೆ.

ಆದರೆ ಮದುವೆ ಯಾರಿಗೆ ?

ಸುಮಿತ್ರೆ ವಾಸ್ತವ ಜಗತ್ತಿಗೆ ಬರುವಾಗ, ಹಗಲುಗನಸಿನ ಅಮಲು ಕಡಿಮೆಯಾಗುವಾಗ, ಪದ್ಮಾವತಿ ಕಣ್ಣ ಮುಂದೆ ಸುಳಿಯುವಾಗ ನೆನಪಾಗುತ್ತದೆ—‘ ಮದುವೆ ಪದ್ಮಾವತಿಗೆ; ತನಗಲ್ಲ’ ಎಂದು.

ಸುಮಿತ್ರೆ ಪ್ರಯತ್ನಪೂರ್ವಕವಾಗಿ ಇಂಥ ವಿಚಾರಂಗಳನ್ನು ಕೊಲ್ಲಲೆತ್ನಿಸುತ್ತಿದ್ದಳು. ಆದರೆ ಇನ್ನು ಇಂಥ ವಿಚಾರಗಳಿಗೆ ಮನಸ್ಸಿನಲ್ಲಿ ಎಡೆ ಕೊಡುವುದೇ ಇಲ್ಲ ಎನ್ನುವಾಗ ಗೋಪೀನಾಥರಾಯರು ಅನುಮತಿಯಿಲ್ಲದೆಯೇ ಮನಸ್ಸಿನ ಕಾರ್ಯಕ್ಷೇತ್ರದೊಳಗೆ ಪ್ರವೇಶಿಸುತ್ತಾರೆ.

“ ಸಪೂರ, ಉದ್ದ, ಬೆಳ್ಳಗೆ ಅಕ್ಕ. ಮೂರ್ತಿಮಾಷ್ಟ್ರ ಹಾಗೆ. ”

ಆ ಮಾತನ್ನು ನೆನಸಿಕೊಂಡೇ ಒಮ್ಮೊಮ್ಮೆ ಮೈ ರೋಮಾಂಚನವಾಗುತ್ತಿತ್ತು.

ಗರ್ವ, ಅಭಿಮಾನ, ರಸಿಕತೆ ಈ ಮೂರರ ಸಂಗಮದಲ್ಲಿ ರೂಪು ಗೊಂಡಂತಿದ್ದ ಗೋಪೀನಾಥರಾಯರು! ಆ ತೆಳ್ಳನ್ನ ವ್ಯಕ್ತಿಯ ನಿಡಿದಾದ ತೋಳುಗಳಲ್ಲಿ ಸಿಕ್ಕುಬಿದ್ದು ಹಾಯಾಗಿ ನಿದ್ರಿಸುವ ಮನಸ್ಸಾಗುತ್ತಿತ್ತು. ಎದೆ ತುಂಬ ಬೇಗುದಿಯೆದ್ದು ಮನಸಿನ ಅಳಲನ್ನು ಕಣ್ಣೀರಿನ ರೂಪದಲ್ಲಿಯಾದರೂ ಹೊರಗೆ ಹಾಕೋಣವೆಂದೆನಿಸುತ್ತಿತ್ತು.

ಆದರೆ ಕಣ್ಣಲ್ಲಿ ನೀರು ತುಂಬುತ್ತಿರಲಿಲ್ಲ. ವೇದನೆ ಅತಿ ಅಸಹನೀಯವಾಗಿ ಕಣ್ಣೆಲ್ಲ ಉರಿಯತೊಡಗಿ 'ಥೂ!' ಎಂಥ ವಿಚಾರಗಳೆಲ್ಲ ನನ್ನ ಮನಸ್ಸನ್ನು ಹಾಳುಮಾಡತೊಡಗಿವೆ ಎಂದು, ಬಳಿಯಲ್ಲಿ ಯಾರೂ ಇರದಿದ್ದರೆ ಸುಮಿತ್ರೆ ಗಟ್ಟಿಯಾಗಿ ಒದರಿಕೊಳ್ಳುವಳು. ಆದರೆ ಮರುಕ್ಷಣದಲ್ಲೇ ಈ ವಿಚಾರ ತುಮುಲ ನಿಂತುಹೋಗಿ ಅವಳ ಹೃದಯದಲ್ಲಿ ಗಭೀರ ಶಾಂತಿ ನೆಲಸುತ್ತಿತ್ತು.

ಆ ಮೇಲೆ ಸುಮಿತ್ರೆ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ದುಃಖದ ಉದ್ವೇಗ ಕಡಿಮೆಯಾಗಿ, ಮನಸ್ಸು ತಿಳಿಯಾದಾಗ ಅನಿರ್ವಚನೀಯ ಸುಖಾನುಭವ ಆಕೆಗೆ ಉಂಟಾಗುತ್ತಿದ್ದಿತು. ರಾತ್ರಿಯ ಹೊತ್ತಾದರೆ ಬಳಿಯಲ್ಲೇ ಮಲಗಿರುವ ಪದ್ಮಾವತಿಯನ್ನು ತಬ್ಬಿಕೊಂಡು ತಂಗಿಯ ತಲೆಯನ್ನು ನೇವರಿಸುತ್ತ ನಿದ್ರಿಸಲು ಯತ್ನಿಸುತ್ತಿದ್ದಳು.

ಆದರೆ ಒಂದು ಬಾರಿ ಪದ್ಮಾವತಿಗೆ ಎಚ್ಚರವಿದ್ದುದರಿಂದ ಕಳವಳ ತುಂಬಿದ ದನಿಯಲ್ಲಿ ಆಕೆ ಪ್ರಶ್ನಿಸಿದಳು.

"ಅಳುತ್ತೀಯಲ್ಲ ಅಕ್ಕಾ. ಬೇಸರವಾಗಿದೆಯೋ ನನ್ನ ಮೇಲೆ?"

"ಇಲ್ಲ ಪದ್ಮಾ. ಅಮ್ಮನ ನೆನಪಾಯಿತು."

ಹಾಗೆ ಹೇಳಿದವಳು ಮುಂದೆ, ತನ್ನ ಮದುವೆಯ ಸಂದರ್ಭದಲ್ಲಿ ತಾಯಿಯಿಲ್ಲವಲ್ಲಾ ಎಂಬ ಕೊರಗು ಪದ್ಮಾವತಿಯನ್ನು ಬಾಧಿಸಬಾರದೆಂದು ಸುಮಿತ್ರೆ ತುಂಬ ಆಸಕ್ತಿಯಿಂದ ಮದುವೆಯ ಪಾರುಪತ್ಯ ವಹಿಸಿದಳು. ತಂಗಿಯ ಧಾರೆ ಸೀರೆಯನ್ನು ಕೊಂಡುಕೊಳ್ಳುವಲ್ಲಿ, ಪಂಡಿತರು ಸಾಲ ತೆಗೆದು ತಂದು ಮಾಡಿಸಿದ ಎರಡು ಪವನಿನ ಚಿನ್ನದ ಸರ, ಕೈಗೊಂದು ಜತೆ ಬಳೆ ಇವುಗಳನ್ನು ತಯಾರಿಸುವಲ್ಲಿ, ಅಳಿಯನಿಗೆ ಕೊಡಬೇಕಾದ ಉಡುಗೊರೆ

ಯನ್ನು ನಿಶ್ಚಯಿಸುವಲ್ಲಿ—ಎಲ್ಲದರಲ್ಲೂ ಸುಮಿತ್ರೆ, ಮುಂದಾಗಿ ನಿಂತು ಕೆಲಸ ಮಾಡಿದಳು.

ಸುಮಿತ್ರೆಯ ಮದುವೆಯ ಸಮಯ ಅವಳ ಕಿವಿಯಲ್ಲಿರಬೇಕೆಂದು ಸಾವಿತ್ರಮ್ಮ ಸಾಯುವ ಕಾಲಕ್ಕೆ ತನ್ನ ಮುತ್ತಿನ ಬೆಂಡೋಲೆಗಳ ಜತೆಯ ಇತ್ಯರ್ಥದ ಆಸೆ ಸೂಚಿಸಿದ್ದುದನ್ನು ಪಂಡಿತರು ಮರೆತಿರಲಿಲ್ಲ. ಕುತ್ತಿಗೆಯ ಕರಿಮಣಿ ತಾಳಿಯ ಚಿನ್ನದ ಹೊರತು ಸಾವಿತ್ರಮ್ಮನಿಗೆ ಇದ್ದುದು ಅದೊಂದೇ ಆಭರಣ. ಅದನ್ನು ಹಿರಿಯ ಮಗಳಿಗೆ ತೊಡಿಸಿ ತಲೆಯ ಮೇಲೆ ಅಕ್ಷತೆಕಾಳು ಹಾಕಿ ಸಾಯಬೇಕೆನ್ನುವ ಅವರ ಆಸೆ ಆಸೆಯಾಗಿಯೇ ಉಳಿಯಿತಾದರೂ, ಆ ಬೆಂಡೋಲೆ ಜತೆ ಸುಮಿತ್ರೆಯದೇ ಎಂದು ಪಂಡಿತರು ಭಾವಿಸಿಕೊಂಡು ಬಂದಿದ್ದರು. ಆ ಕಾರಣ ಪದ್ಮಾವತಿಯ ಮದುವೆಯ ಸಂದರ್ಭದಲ್ಲಿ ಬೆಂಡೋಲೆ ಮನೆಯಲ್ಲಿದೆಯೆಂದು ತಿಳಿದೂ ಅದರ ವಿಚಾರ ಅವರು ಮಾತೇ ಎತ್ತಿರಲಿಲ್ಲ. ಪದ್ಮಾಳ ಕಿವಿಯಲ್ಲಿದ್ದ ಇಮಿಟೇಶನ್ ಕಿಡಿಗಳ ಆಭರಣವೇ ಸಾಕು ಎಂದುಕೊಂಡಿದ್ದರು. ಆದರೆ ಸುಮಿತ್ರೆ ತಂದೆಗೆ ತಿಳಿಯದಂತೆಯೇ ಆ ಚಿನ್ನವನ್ನು ಹೊರಡುವ ದಿನ ಸಮೀಪಿಸಿದಾಗ ಎಲ್ಲ ಚಿನ್ನದ ಜತೆಯಲ್ಲಿ ಪೆಟ್ಟಿಗೆಯೊಳಗೆ ಹಾಕಿದಳು. ಮದುವೆಯ ದಿನ ಅದನ್ನು ತಾನೇ ತೊಡಿಸಿ ತಂಗಿಯನ್ನು ಹರಸಬೇಕು ಎಂಬ ಹಿರಿಯಾಸೆಯಿಂದ ಹಿಗ್ಗಿದಳು.

ಆದರೆ ಮದುವೆಗೆಂದು ಮದರಾಸಿಗೆ ಹೊರಡುವ ದಿನ ಸುಮಿತ್ರೆಯ ಮೇಲೆ ದೈವ ತನ್ನ ಸೇಡು ತೀರಿಸಿಕೊಂಡಿತು. ಚೆಳಿಗ್ಗೆ ಸಾಮಾನೆಲ್ಲ ಸರಿ ಪಡಿಸಿ, ಮೂರ್ತಿ ಮೀರೆಯರ ಹಾದಿಯನ್ನು ಪಂಡಿತರು ಕಾಯುತ್ತಿದ್ದರು. ರೈಲು ಹೊರಡುವ ಒಂದು ತಾಸು ಮುಂಚೆಯೇ ಗಾಡಿಯವನನ್ನು ಬರ ಹೇಳಿದ್ದರು. ಮೂರ್ತಿ ಮೀರೆಯರು ಬಂದು, ಗಾಡಿಯೂ ಬಂದಾಗ ಪಂಡಿತರು "ಸುಮೀ, ಸಾಮಾನೆಲ್ಲ ಹೊರಗಿಡಮ್ಮ. ಪದ್ಮಾ, ದೇವರಿಗೆ ನಮಸ್ಕಾರಮಾಡಿ ಹೊರಡು." ಎಂದಾಗ ಸುಮಿತ್ರೆ ಕಾಣಸಿಗಲಿಲ್ಲ. ಪದ್ಮಾವತಿ ಮಾತ್ರ ಹೊರಗೆ ಬಂದಳು. "ಸುಮಿಯೆಲ್ಲಿ ಪದ್ಮಾ ?" ಎಂದು ಪಂಡಿತರು ಕೇಳಿದಾಗ ಅಂಗಳದ ಮೂಲೆಯ ಪಾರಿಜಾತದ ಗಿಡದ ಬದಿಯಿಂದ ಸುಮಿತ್ರೆ ನಿಧಾನವಾಗಿ ನಡೆದು ಮುಖಮಂಟಪದ ಬಳಿ ಬಂದಳು. "ಏನೇ ಅಕ್ಕ, ನೀನು ಸೀರೆ ಸಹ ಉಟ್ಟುಕೊಳ್ಳಲಿಲ್ಲವೇನೇ; ಗಾಡಿ ಬಂದಾಯ್ತು" ಎಂದು

ಪದ್ಮಾ ಗದರಿಸಿದಾಗ ಸುಮಿತ್ರೆ ಮುಖ ತಗ್ಗಿಸಿದಳು. ಕಾರಣ ಮೊದಲು ತಿಳಿದದ್ದು ಮೀರೆಗೆ.

ಸುಮಿತ್ರೆಯಿಂದ ಕಾರಣ ತಿಳಿದಾಗ ಮೀರೆಗೆ ಕಣ್ಣು ತುಂಬಿ ಬಂತು. “ ದೇವರು ಕೂಡ ನಿನ್ನ ಮೇಲೆ ಹಟ ಸಾಧಿಸುತ್ತಿದ್ದಾರೇನಮ್ಮ ಸುಮೀ ?” ಎಂದವಳು ಗಂಡನೊಡನೆ “ ಸುಮಿ ಬರುವ ಹಾಗಿಲ್ಲ. ಅವಳು ಮುಟ್ಟಾಗಿದ್ದಾಳೆ. ಹತ್ತು ದಿನ ಮುಂಚೆಯೇ ಹಟಹಿಡಿದು ಬಂದಿದೆಯಂತೆ ” ಎಂದಳು.

ಮಾತು ಮುಂದುವರಿಯಲು ಅಳು ತಡೆಯಾಗಿ ಬಂತು.

೭

ಪದ್ಮಾವತಿಯ ಮದುವೆಯ ಪಾರ್ಟಿ ಮಂಗಳೂರಿನಿಂದ ಮೈಲುಗಾಡಿ ಹಿಡಿದು ಹೊರಟುದು ದುಃಖದಿಂದಲೇ. ಸುಮಿತ್ರೆಗೆ ಬರಲಾಗುವುದಿಲ್ಲವೆಂದು ತಿಳಿದಾಗ ಪಂಡಿತರಿಗೆ ಒಮ್ಮಿಂದೊಮ್ಮೆಗೆ ಎದೆನೋವು ಆರಂಭವಾಯಿತು. ನಿಂತಲ್ಲಿಯೇ ಕುಳಿತುಬಿಟ್ಟರು ಆ ಅವಸರದಲ್ಲೂ ಪದ್ಮಾವತಿ ಕೂಡಲೇ ಒಳಗೆ ಓಡಿಹೋಗಿ ಲಿಂಬೆಹಣ್ಣಿನ ಪಾನಕ ಮಾಡಿ ಒಂದು ಲೋಟ ತಂದು ಕುಡಿಸಿದ ಮೇಲೆ ಪಂಡಿತರು ಸ್ವಲ್ಪ ಸರಿಯಾಗಿ ಮಾತನಾಡಿದರು. ಸುಮಿತ್ರೆಯೇ ಬಲವಂತದಿಂದ ನಗಲು ಪ್ರಯತ್ನಿಸಿ ತಂದೆಯನ್ನು ಸಮಾಧಾನಪಡಿಸಬೇಕಾಗಿ ಬಂತು.

“ ಈಗ ನೀವು ಕಣ್ಣೀರು ಹಾಕಿದರೆ ಪದ್ಮಾ ಅಳತೊಡಗುತ್ತಾಳೆ ಅಪ್ಪಯ್ಯ. ನಾನು ಬಂದೇನು, ಬಾರದೆ ಇದ್ದರೆ ಏನು ? ಮದುವೆ ಮುಗಿಸಿಕೊಂಡು ಬನ್ನಿ. ಮನೆಯನ್ನು ನೋಡಿಕೊಂಡ ಹಾಗೂ ಆಗುತ್ತದೆ. ಊಟಕ್ಕೆ, ಮಲಗಿಕೊಳ್ಳಲಿಕ್ಕೆ ಮೂರ್ತಿಮಾಷ್ಟ್ರ ಮನೆಗೆ ಹೋಗುತ್ತೇನೆ.” ಎಂದ ಮೇಲೆಯೇ ಪಂಡಿತರು ಗಾಡಿಯವನ ಅವಸರವನ್ನು ಗಮನಿಸಿದುದು.

ಎಲ್ಲ ಗಾಡಿಯಲ್ಲಿ ಕುಳಿತು ಕಣ್ಮರೆಯಾದಾಗ ಮಾತ್ರ ಸುಮಿತ್ರೆ ಮುಖ ಮಂಟಪಕ್ಕೆ ಬಂದು ಬಿದ್ದು ಬಿಕ್ಕಿ ಬಿಕ್ಕಿ ಅತ್ತಳು.

ಮದುವೆಯ ಪಾರ್ಟಿ ಮದರಾಸು ತಲುಪಿದಾಗ, ಹಿಂದಿನ ದಿನದ ‘ ಮದ್ರಾಸು ಎಕ್ಸ್‌ಪ್ರೆಸ್ ’ ಗಾಡಿಯಲ್ಲಿ ಬಂದಿದ್ದ ಗೋಪಿ ಸೆಂಟ್ರಲ್ ಸ್ಟೇಶನಿನಲ್ಲಿ ಇವರೆಲ್ಲರ ಸ್ವಾಗತಕ್ಕೆ ಸಿದ್ಧನಾಗಿದ್ದ.

ಗಾಡಿಯಿಂದಿಳಿದು ಬಂದ ನಾಲ್ಕೇ ಮಂದಿಯನ್ನು ಕಂಡಾಗ ಗೋಪಿಗೆ ತುಂಬ ಆಶ್ಚರ್ಯವಾಯಿತು. ಸುಮಿತ್ರೆಯನ್ನು ಕಾಣದೆ ಮನಸ್ಸು ತಳಮಳ ಗೊಂಡಿತು. 'ತನ್ನ ಮೇಲಣ ಸಿಟ್ಟಿನಿಂದ ಆಕೆ ಬಾರದೆ ಉಳಿದಳೇ ?' ಎಂದು ಆತ ಶಂಕಿಸಿದ. ಆದರೆ ಕ್ಷಣಕಾಲ ಮಾತ್ರ. ಪ್ರಯಾಣದ ಆಯಾಸದಿಂದ ಮುಖ ಬಾಡಿದ್ದರೂ, ಆಗ ತಾನೇ ನಿದ್ದೆ ತೀರಿಸಿ ಎದ್ದು ಬಂದವಳಂತೆ ತೋರು ತ್ತಿದ್ದರೂ, ಪದ್ಮಾವತಿಯನ್ನು ಸರಿಯಾಗಿ ನೋಡಿದಾಗ ಗೋಪಿ ಸುಮಿತ್ರೆ ಬಾರದೆ ಉಳಿದುದರ ಕಾರಣ ಕೇಳಬೇಕೆನ್ನುವ ವಿಚಾರವನ್ನು ಸಂಪೂರ್ಣ ಮರೆತುಬಿಟ್ಟ.

ಗೋಪಿಯ ಹಸಿದ ಕಣ್ಣುಗಳಿಗೆ ಹಬ್ಬದೂಟವಾಗಿತ್ತು. ಗೋಪಿಯ ದೃಷ್ಟಿ ತನ್ನನ್ನು ಬಿಟ್ಟು ಕದಲುವುದಿಲ್ಲ ಎಂದು ತಿಳಿದ ಪದ್ಮಾವತಿ ನಾಚಿ ಮೀರೆಯ ಹಿಂಬದಿಗೆ ಜಾರಿದಳು.

ಮೂರ್ತಿಯ ಸ್ನೇಹಿತ ಮದರಾಸಿನ ಕಾಲೇಜೊಂದರಲ್ಲಿ ಪ್ರೊಫೆಸರ್. ಅಚ್ಚುಕಟ್ಟಿನ ಸಂಸಾರ. ಪಂಡಿತ ಕುಟುಂಬಕ್ಕೆ ರಾಜಾತಿಥ್ಯವೇ ಅಲ್ಲಿ ದೊರ ಕಿತು. ಮನೆ ಸೇರಿದೊಡನೆಯೇ ಪಂಡಿತರಿಗೆ ಗೆಳೆಯನ ಪರಿಚಯವನ್ನು, ಇವರೆಲ್ಲರನ್ನು ಕಾಯುತ್ತಿದ್ದ ಮೋಹನ ಶೀಲೆಯರ ಪರಿಚಯವನ್ನೂ ಮೂರ್ತಿ ಮಾಡಿಸಿಕೊಟ್ಟ. ಮೋಹನ "ಏನೋ ಮೂರ್ತಿ, ಮಂಗಳೂರಿಗೆ ಕರೆಸಿ ಕೊಂಡು ಯಾರಿಗೂ ತಿಳಿಸದೆ ಗೋಪಿಗೆ ಗಾಳ ಹಾಕಿದೆಯಲ್ಲಾ ?" ಎಂದು ತಮಾಷೆಗಾಗಿ ಮೂರ್ತಿಯನ್ನು ಚುಚ್ಚಿದ. ಮದುವೆಯ ಸಂಭ್ರಮದಲ್ಲಿ ಮೋಹನ ಉದಾಸೀನ ಪ್ರೇಕ್ಷಕನಾಗಿ ನಿಲ್ಲಲಿಲ್ಲ. ತುಂಬ ಆಸಕ್ತಿಯಿಂದಲೇ ಎಲ್ಲ ಕೆಲಸಗಳಲ್ಲೂ ನೆರವಾದ.

ಗೋಪಿಯ ಕಡೆಯಿಂದ ಮದುವೆಗಾಗಿ ಬಂದಿದ್ದವರು ಹೈದರಾಬಾದಿ ನಲ್ಲಿದ್ದ ಗೋಪಿ ಮೋಹನರ ಹಿರಿಯ ಅಕ್ಕ ಮಾತ್ರ. ಅವರಿಗೆ ಪದ್ಮಾವತಿ ಯನ್ನು ಕಂಡು ಹಿಡಿಸಲಾರದಷ್ಟು ಸಂತೋಷವಾಯಿತು. ಗೋಪಿಯನ್ನು ಎಷ್ಟು ಪರಿಹಾಸ್ಯ ಮಾಡಿದರೂ, ಪದ್ಮಾವತಿಯನ್ನು ಎಷ್ಟು ಹೊಗಳಿದರೂ ಅವರಿಗೆ ತೃಪ್ತಿಯೇ ಇರಲಿಲ್ಲ.

ಮಾರನೆಯ ದಿನ ಮದುವೆಗಾಗಿ ಎಲ್ಲ ತಿರುಪತಿ ಯಾತ್ರೆ ಬೆಳೆಸಿದರು. ಇವರೆಲ್ಲರ ಜೊತೆಗೆ, ಮೂರ್ತಿಯ ಸ್ನೇಹಿತರಾದ ಪ್ರೊಫೆಸರ್ ಹಾಗೂ ಅವರ

ಪತ್ನಿ ಹೊರಡದೆ ನಿವೃತ್ತಿಯಿದ್ದಿಲ್ಲ. ಹೆಣ್ಣಿನ ಕಡೆಯವಳಾಗಿ ಮೀರಿಯೊಬ್ಬಳೇ ಉಳಿಯುವುದರಿಂದ, ಗಂಡಿನ ಕಡೆಯ ಗಂಡಸರಾಗಿ ಮೋಹನರಾಯರೊಬ್ಬರೇ ಇರುವುದರಿಂದ, ಪ್ರೊಫೆಸರ್ ಗಂಡಿನ ಕಡೆಯವರಾಗಿಯೂ ಅವರ ಪತ್ನಿ ಪದ್ಮಾವತಿಯ ಕಡೆಯವರಾಗಿಯೂ ಮದುವೆಯ ದಿಬ್ಬಣದ ಸಂಭ್ರಮದಲ್ಲಿ ಭಾಗವಹಿಸಬೇಕೆಂದು ನಿಶ್ಚಯವಾಯಿತು.

ತಿರುಪತಿಯ ಪ್ರಯಾಣ ಮಂಗಳೂರಿನಿಂದ ಮದ್ರಾಸಿನತನಕದ ಪ್ರಯಾಣದಂತಿರಲಿಲ್ಲ. ಪ್ರೊಫೆಸರರ ರಸಿಕತೆಗೆ ಮೋಹನನ ವ್ಯವಹಾರಜ್ಞಾನ, ಮೂರ್ತಿಯ ಪಾಂಡಿತ್ಯ, ಗೋಪಿಯ ಹಾಸ್ಯ ಇವೆಲ್ಲ ಬೆರೆತು ಸಮಯ ಹೋದುದು ತಿಳಿಯಲೇ ಇಲ್ಲ.

ಶ್ರೀನಿವಾಸನ ಸಾನ್ನಿಧ್ಯದಲ್ಲಿ ಮದುವೆ ಯಥಾವಿಧಿಯಾಗಿ ಜರುಗಿತು. ಪದ್ಮಾವತಿ ಗೋಪಿಯ ಕೈಹಿಡಿದಳು. ಮೂರ್ತಿ ಮೀರಿಯರು ಹಸೆಯಲ್ಲಿ ಕುಳಿತು ಪಂಡಿತರ ಇಚ್ಛೆಯಂತೆ ಪದ್ಮಾವತಿಯನ್ನು ಧಾರೆಯೆರೆದು ಕೊಟ್ಟರು. ಅಗ್ನಿಯ ಮುಂದೆ ಗೋಪಿಯ ಹೆಂಡತಿಯಾಗಿ ಕುಳಿತ ಪದ್ಮಾವತಿಯನ್ನು ನೋಡುತ್ತ ಪಂಡಿತರ ಕಣ್ಣಲ್ಲಿ ನೀರು ತುಂಬಿ ಬಂತು. ಸುಮಿತ್ರೆಯನ್ನು ನೆನೆಸಿ ಕೊಂಡು ತುಂಬ ಅತ್ತುಬಿಟ್ಟರು.

ಮದುವೆ ಮುಗಿಸಿಕೊಂಡು, ತಿರುಪತಿಯ ಕ್ಷೇತ್ರ ಸಂದರ್ಶನ ಮುಗಿಸಿ ಎಲ್ಲ ಮದರಾಸಿಗೆ ಹಿಂದುರುಗಿದ ವರೆಗಿನ ಎರಡು ದಿನಗಳು ಎರಡು ಘಂಟೆ ಗಳಂತೆ ಕಳೆದುಹೋದವು. ಗೋಪಿಯಂತೂ ಪದ್ಮಾವತಿಯ ಕೈಹಿಡಿದ ಕ್ಷಣ ದಿಂದ ಸ್ವರ್ಗಸುಖವನ್ನೇ ಅನುಭವಿಸುವವನಂತಿದ್ದ.

ಮದರಾಸಿಗೆ ಮರಳಿ ಬಂದೊಡನೆ ಅದೇ ದಿನದ ಮುಂಬಯಿ ಗಾಡಿ ಹಿಡಿದು ಹೋಗುವೆನಾಗಿ ಮೋಹನ ಹೇಳಿದ. ಮೋಹನನ ಮಾತಿಗೆ ಬೇರಾರೂ ಪ್ರತಿ ಹೇಳುವಂತಿರಲಿಲ್ಲವಾದರೂ ಪ್ರೊಫೆಸರರೇ ಆಕ್ಷೇಪಿಸಿದರು. ಮಾರನೆಯ ದಿನ ಮನೆಯಲ್ಲಿ ಹೊಸ ದಂಪತಿಗಳಿಗೆ 'ಆರತಿ-ಅಕ್ಷತೆ' ಯಾಗಲೇಬೇಕೆಂದೂ ಮೋಹನ ಆ ಸಮಾರಂಭಕ್ಕಾಗಿ ಇರಲೇಬೇಕೆಂದೂ ಒತ್ತಾಯಿಸಿದುದರಿಂದ ಮೋಹನ ಒಪ್ಪಿಕೊಂಡು ನಿಂತ.

ಮದುವೆ ತೊಂದರೆಯಿಲ್ಲದೆ ಜರುಗಿದುದನ್ನು ಕಂಡು ಮೂರ್ತಿ ಸಂತೋಷದಿಂದಲೆ ಇದ್ದ. ಪದ್ಮಾವತಿಯನ್ನು ಮಗಳೆಂದೇ ತಿಳಿದು ಮದುವೆಯ

ಕೆಲಸ ಪೂರೈಸಿದ್ದ. ಪದ್ಮಾವತಿಗೆ ಒಂದು ಪವನಿನ ಚಿನ್ನದ ಉಂಗುರ, ಗೋಪಿಗೆ ಬೆಳ್ಳಿಯ ಸಿಗರೇಟ್ ಕೇಸ್ ಇವನ್ನು ಮೀರೆಯ ಕೈಯಲ್ಲಿ ಉಡುಗೊರೆ ಕೊಡಿಸಿದ್ದ. ಆದರೆ ಮದ್ರಾಸಿಗೆ ಮರಳಿದೊಡನೆ ಮೋಹನ ಹೊರಡುವ ಅವಸರ ಸೂಚಿಸಿದಾಗ, ಇನ್ನೊಂದು ಕೆಲಸ ಬಾಕಿ ಉಳಿದಿದೆ, ಪಂಡಿತರ ಆಪರೇಶನಿನ ವಿಚಾರ ಏನಾದರೊಂದು ನಿರ್ಧಾರ ಈಗಲೇ ಆಗಬೇಕಾಗಿದೆ ಎಂದು ನೆನಪು ಬಂತು. ಸಮಯ ಸಾಧಿಸಿ ಗೋಪಿಯೊಡನೆ ಈ ವಿಚಾರ ಪ್ರಸ್ತಾಪ ಮಾಡಿದ. "ನಿನ್ನ ಅಣ್ಣನ ಹತ್ತಿರ ಸ್ವಲ್ಪ ಹೇಳಿದರೆ ಒಳ್ಳೆಯದಿತ್ತು ನೋಡು ಗೋಪಿ. ಅವರು ಸಹಾಯದ ಭರವಸೆಕೊಟ್ಟರೆ, ಇನ್ನೆರಡು ತಿಂಗಳು ನಿಂತರೆ ಚಿಂತಿಲ್ಲ ಎಂದು ಹೇಳಿದರೆ ಬೇಸಗೆಯ ರಜೆಯಲ್ಲಿ ನಾನೇ ಪಂಡಿತರನ್ನು ಮುಂಬಯಿಗೆ ಕರೆದುಕೊಂಡು ಬರುತ್ತೇನೆ. ಅಥವಾ ಇಲ್ಲಿಯೇ ನಿನ್ನಣ್ಣನ ಗುರುತಿನವರು ಯಾರಾದರೂ ಇರುವರಾದರೆ, ಈಗಲೇ ಆಪರೇಶನ್ ಆಗುವುದಾದರೂ ಚಿಂತಿಲ್ಲ." ಎಂದ.

ಗೋಪಿಗೆ ಮೂರ್ತಿಯ ಮಾತುಕೇಳಿ ಆಶ್ಚರ್ಯವಾಗಲಿಲ್ಲವಾದರೂ ಪಂಡಿತ ಕುಟುಂಬದ ಮೇಲೆ ಮೂರ್ತಿಗಿರುವ ವಿಶ್ವಾಸ ಕಂಡು ಆತನಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ.

"ಖಂಡಿತ ಅಣ್ಣನ ಹತ್ತಿರ ಮಾತನಾಡುತ್ತೇನೆ ಮೂರ್ತಿ. ನನ್ನ ಮಾವನ ವಿಚಾರ ಮಾತನಾಡಲು ನನಗೇಕೆ ಸಂಕೋಚ ? ಆದರೆ ಒಂದು ಮಾತು ಹೇಳುತ್ತೇನೆ. ಅವರ ವಿಚಾರ ನಿನಗಿರುವ ಆಸಕ್ತಿಯನ್ನು ನೋಡುವಾಗಲೆಲ್ಲ ರಕ್ತ ಸಂಬಧವೆಂಬುದು ಬರಿ ಹುಚ್ಚುಕಲ್ಪನೆಯೆಂದು ಕಾಣುತ್ತದೆ. ನಿನ್ನಂಥ ಸ್ನೇಹಿತರನ್ನು ಪಡೆಯಲು ಮಾವನೂ ಪುಣ್ಯಮಾಡಿರಬೇಕು.

ಮೂರ್ತಿ ಉತ್ತರ ಹೇಳಲಿಲ್ಲ. ಬರೀ ನಕ್ಕ.

ಮಾರನೆಯ ದಿನ ಬೆಳಿಗ್ಗೆ ಗೋಪಿ ಮೂರ್ತಿಗೆ ಮಾತುಕೊಟ್ಟಂತೆ ಅಣ್ಣನೊಡನೆ ಈ ವಿಚಾರ ಪ್ರಸ್ತಾಪಮಾಡಿದ. ಗೋಪಿ ಪಂಡಿತರ ಅನಾರೋಗ್ಯದ ವಿಚಾರ ಹೇಳಿದಾಗ ಮೋಹನನ ಕಣ್ಣಲ್ಲಿ ತುಂಟನಗೆ ಮಿಂಚಿತು.

"ಈ ಸುದ್ದಿ ನೀನು ಮೊದಲು ಹೇಳಲೇ ಇಲ್ಲ."

"ಇಲ್ಲ. ಮಂಗಳೂರಿನಲ್ಲಿಯೇ ಎಕ್ಸ್-ರೇ ತೆಗೆಸಿನೋಡಿದ್ದಾರಂತೆ. ಮೂರ್ತಿ ಫೋಟೋಹಿಡಿದುಕೊಂಡು ಬಂದಿದ್ದಾನೆ. ನೀನು ನೋಡಿ ಒಮ್ಮೆ

ಪರೀಕ್ಷೆಮಾಡಿ ಹೇಳು. ಆಪರೇಶನ್ ಈಗಲೇ ಆಗಬೇಕಾದರೆ ಮದರಾಸಿ
ನಲ್ಲೇ ಎಲ್ಲಿ ಸಾಧ್ಯ ಎಂದು ನೋಡಬೇಕು."

ತಮ್ಮನ ಮಾತಿಗೆ ಪ್ರತಿಮಾತು ಹೇಳದೆ ಮೋಹನ ಎಕ್ಸ್-ರೇ ಫೋಟೊ ನೋಡಿಕೊಂಡು ಮಧ್ಯಾಹ್ನ, ಮೂರ್ತಿಯ ಒತ್ತಾಯದಿಂದ ಪರೀಕ್ಷೆಗೊ ಗಾಗಲು ಒಪ್ಪಿದ ಪಂಡಿತರನ್ನು ಪರೀಕ್ಷಿಸಿದ. ಆ ಮೇಲೆ ಆತ ಹೇಳಿದ ದಿಷ್ಟೆ.

"ಹೊಟ್ಟೆಯಲ್ಲಿ ವ್ರಣವಿರುವುದು ನಿಜ ಮೂರ್ತಿ. ಆದಷ್ಟುಬೇಗ ಆ ರೇಶನ್ ಮಾಡಿಸಿಕೊಳ್ಳುವುದು ಒಳ್ಳೆಯದು."

"ಈಗಲೇ ಆಗಬೇಕೇ ?"

ಮೋಹನ ಕ್ಷಣಕಾಲ ಮಾತನಾಡಲಿಲ್ಲ. ಆಮೇಲೆ

"ಸರ್ವೋತ್ತಮರಾಯರು ಏನು ಹೇಳಿದ್ದಾರೆ ? ಅವರ ಔಷಧಿಯಿಂದ ಏನಾದರೂ ಪ್ರಯೋಜನ ಸಿಕ್ಕಿದೆಯೆ ? "

"ಹೌದು. ಹೊಟ್ಟೆನೋವು ತುಂಬ ಕಡಿಮೆಯಾಗಿದೆ. ಆದ ಆಪರೇಶನ್ ಆದಷ್ಟು ಬೇಗ ಆಗುವುದು ಒಳ್ಳೆಯದು ಎಂದು ಹೇಳಿದರು."

"ಹಾಗಾದರೆ ಈಗಲೇ ಇಲ್ಲಿ ಏನಾದರೊಂದು ವ್ಯವಸ್ಥೆ ಮಾಡ ಬಹುದಲ್ಲ ! "

"ಒಟ್ಟು ಎಷ್ಟು ದಿನ ಇಲ್ಲಿರಬೇಕಾದೀತು ? " ಎಂದು ಪಂಡಿತರು ನಡ ವೆಯೆ ಬಾಯಿ ಹಾಕಿ ಕೇಳಿದರು.

"ಕಡಿಮೆ ಪಕ್ಷ ಒಂದು ತಿಂಗಳಾದರೂ ಇರಬೇಕಾದೀತು " ಎಂದ ಮೋಹನ ಹೇಳಿದ.

ಪಂಡಿತರಿಂದ ಕೂಡಲೆ ಉತ್ತರ ಬಂತು.

"ಅದು ಸಾಧ್ಯವೇ ಇಲ್ಲ. ನನಗೆ ಈ ವಾರದೊಳಗೆ ಮನೆ ಸೇರಲೆ ಬೇಕು. ಸುಮಿತ್ರೆ ಏನು ಮಾಡುತ್ತಿದ್ದಳೋ ದೇವರಿಗೇ ಗೊತ್ತು. "

ಮೋಹನ "ಹಾಗಾದರೆ ಕೆಲವು ದಿವಸ ಕಳೆದ ಮೇಲೆ ಮುಂಬಯಿ ಬನ್ನಿ. ಗೋಪಿ ಹೇಗೂ ನಿಮ್ಮಲ್ಲಿಗೆ ಬರುತ್ತಾನಲ್ಲ. ನನಗೆ ಜೊತೆಗೆ ಬರಲಿಕಾ ಗುವುದಿಲ್ಲವೆಂದು ತುಂಬ ಬೇಸರವಾಗುತ್ತದೆ. ಏನೆಲ್ಲ ಆಗಬೇಕೋ ಹೇ

ಬಿಡಿ. ಎರಡೂ ಕಡೆಯವನಾಗಿ ಮೂರ್ತಿ ಇದ್ದಾನಲ್ಲ. ಗೋಪಿ ಪದ್ಮಾವತಿಯನ್ನು ಕರೆದುಕೊಂಡೇ ಮುಂಬಯಿಗೆ ಬರಲಿ. ಆಗ ನೀವೂ ಜೊತೆಗೆ ಬನ್ನಿ. ಅಲ್ಲಿ ಸುಲಭವಲ್ಲಿ ಆಪರೇಶನಿನ ವ್ಯವಸ್ಥೆ ನಾನು ಮಾಡುತ್ತೇನೆ. ಗಾಬರಿಯಾಗಬೇಕಾದ್ದೇನೂ ಇಲ್ಲ. " ಎಂದ.

ಮೂರ್ತಿ, ಗೋಪಿ ಸೈಗುಟ್ಟಿದರು. ಪಂಡಿತರು ಮಾತನಾಡಲಿಲ್ಲ.

ಮಾರನೆಯ ದಿನ ಬೆಳಗಿನ ಗಾಡಿಗೆ ಮೋಹನ ಹೊರಡುವವನಿದ್ದ. ಅದೇ ದಿನ ಸಂಜೆಗೆ ಪಂಡಿತರು ಮಗಳು ಅಳಿಯರ ಜೊತೆಗೆ ಮೂರ್ತಿ ಮೀರೆಯರ ಜೊತೆಗೆ ಮಂಗಳೂರು ಗಾಡಿ ಹಿಡಿಯಬೇಕೆಂದು ಕಾರ್ಯಕ್ರಮ ಸಿದ್ಧವಾಗಿತ್ತು.

ಮನೆಯ ನೆನಪು ಬರುವಾಗಲೆಲ್ಲ ಪಂಡಿತರಿಗೆ ಸುಮಿತ್ರೆಯ ನೆನಪಾಗುತ್ತಿತ್ತು. ದೂರದ ಮಂಗಳೂರಲ್ಲಿ ಒಬ್ಬಾಕೆ ಮನೆಯಲ್ಲಿ ಏನು ಮಾಡುತ್ತಿದ್ದಳೋ. ಹಿರಿಯ ಮಗಳು. ಮದುವೆಯಾಗಬೇಕಾಗಿದ್ದುದು ಸುಮಿತ್ರೆಯದು. ಗಂಡನ ಜೊತೆಗೆ ನಿಂತು ತಂಗಿ ಪದ್ಮಾವತಿಯ ಮದುವೆಯ ಕೆಲಸಗಳನ್ನು ನಿರ್ವಹಿಸಬೇಕಾಗಿದ್ದ ಸುಮಿತ್ರೆ, ಮಂಗಳೂರಲ್ಲಿ ಏಕಾಕಿಯಾಗಿ ಇದ್ದಾಳೆ.

" ಸುಮಿತ್ರೆ ಈಗ ಏನು ಮಾಡುತ್ತಿರಬಹುದು ? " ಎಂದು ಪಂಡಿತರು ಯೋಚಿಸಿದರು. ಅದೇ ದಿನ ದೂರದ ಮಂಗಳೂರಲ್ಲಿ ಸುಮಿತ್ರೆ ಕೂಡ ಅದೇ ರೀತಿ ತಂದೆಯ ಕುರಿತು ಯೋಚಿಸುತ್ತಿದ್ದಳು.

" ಅಪ್ಪಯ್ಯ ಇವತ್ತು ಎಲ್ಲಿರಬಹುದು ? ಏನು ಮಾಡುತ್ತಿರಬಹುದು ? ಪದ್ಮಾವತಿ ಗಂಡನ ಜೊತೆಗೆ ಸಂತೋಷದಿಂದ ಇರಬಹುದೆ ? ತನ್ನನ್ನು ಒಂದು ಗಳಿಗೆಯಾದರೂ ನೆನೆಸಿಕೊಳ್ಳಬಹುದೆ ? "

ತಂದೆ ಮದರಾಸಿಗೆ ಹೋದಮೇಲೆ ಸುಮಿತ್ರೆ ದಿನ ಕಳೆದುದು ಮುಳ್ಳಿನ ಮೇಲೆ ಕುಳಿತಂತೆ. ಅಷ್ಟು ಚಿಕ್ಕ ಮನೆಯೂ ವಿಶ್ವದಂತೆ ಕಾಣಿಸುತ್ತಿತ್ತು. ಅಡಿಗೆಯ ಮನೆಗೆ ಹೋದಾಗ, ಪಡಸಾಲೆಯಲ್ಲಿ ಕುಳಿತಾಗ, ತಂದೆಯ ಮಲಗುವ ಕೋಣೆಗೆ ಹೋದಾಗ, ಮುಖಮಂಟಪದಲ್ಲಿ ಬಂದು ಲೆಕ್ಕದ ಪುಸ್ತಕ ಬಿಡಿಸಿ ಕುಳಿತಾಗ, ಮನಸ್ಸು ಮಾತ್ರ ' ಬಿಕೋ ' ಎನ್ನುತ್ತಿತ್ತು.

ಊಟಕ್ಕೆ, ಮಲಗಿಕೊಳ್ಳಲು ಸುಮಿತ್ರೆ ಮೂರು ದಿನ ಮೂರ್ತಿಯ ಮನೆಗೆ ಹೋಗುತ್ತಿದ್ದಳು. ಮೂರ್ತಿಯ ಮುದಿತಾಯಿಗೆ ಸುಮಿತ್ರೆಯ ದುಃಖ

ನೋಡಿ ತುಂಬ ಕಳವಳವಾಯಿತು. ಸುಮಿತ್ರೆಯ ಮನಸ್ಸಿಗೆ ಸಮಾಧಾನವಾಗ ಬಹುದೆಂದು ಮತ್ತೆ ಮತ್ತೆ ಮದುವೆಯ ವಿಚಾರ ಮಾತನಾಡಿ ತಮಗಾದ ಕಳವಳವನ್ನು ಬಣ್ಣಿಸುತ್ತಿದ್ದರು. ಆದರೆ ಇದರಿಂದಾಗಿ ಸುಮಿತ್ರೆಯ ಮನ ಸ್ಸಿನ ವ್ಯಗ್ರತೆ ಹೆಚ್ಚಿತೇ ವಿನಾ ಕಡಿಮೆಯಾಗಲಿಲ್ಲ.

ಅವಳ ಮನಸ್ಸು ಏಕಾಂತವನ್ನು ಬಯಸುತ್ತಿತ್ತು. ತನ್ನ ಮನೆಯಲ್ಲಿ ಅಂಥ ಏಕಾಂತತೆ ಈಗ ಬೇಕಷ್ಟು ಸಿಗುತ್ತಿತ್ತು.

ಈ ಅವಧಿಯಲ್ಲಿ ತಂದೆಯ ಮಲಗುವ ಕೋಣೆಯ ಕಿಟಕಿಯಲ್ಲಿ ತಲೆ ಯಿರಿಸಿ ಸುಮಿತ್ರೆ ಘಂಟೆ ಘಂಟೆಗಳ ಕಾಲ ಕಳೆದುದಿದೆ. ತಿಳಿಯದೆಯೇ ಮನಸ್ಸು ಹಿಂದೆ ಹಿಂದೆ ಓಡುತ್ತಿತ್ತು.

ಇನ್ನೂ ಲಂಗ ಹುಡುಕಿಕೊಂಡು ಮನೆತುಂಬ "ಅಮ್ಮಾ ನನ್ನ ಅಂಗಿ ಎಲ್ಲಿಯೆ ? ಅಂಗಿ ಎಲ್ಲಿಯೆ ?" ಎಂದು ಓಡಾಡುತ್ತಿದ್ದ ಕಾಲ. ಕೊನೆಗೆ ಬಚ್ಚಲು ಮನೆಯಲ್ಲೋ, ದೇವರ ಕೋಣೆಯಲ್ಲೋ, ತಂದೆಯ ಉದ್ದ ಕೈಯ ಕೋಟಿನ ದೊಡ್ಡ ಜೋಬಿನೊಳಗೋ ಇರುತ್ತಿದ್ದ ಅಂಗಿಯನ್ನು ತಂದು ಸಾವಿ ತ್ರಮ್ಮ "ಮನೆಯೆಲ್ಲಾ ಅಂಗಿ ರಾಜ್ಯ. ದೇವರ ಕೋಣೆಯಲ್ಲಿಯೂ ಮಕ್ಕಳ ಅಂಗಿ" ಎಂದು ಗೊಣಗಿಕೊಂಡು ಬಂದು ಮಕ್ಕಳಿಗೆ ಅಂಗಿ ತೊಡಿಸುತ್ತಿ ದ್ದರು.

ತುಂಟ ಹುಡುಗಿ ಪದ್ಮಾ 'ಅಂಗಿ' ಬಂತೆಂದೊಡನೆ ಮನೆ ತುಂಬ ಓಡಾಡಿ ತಾಯಿಯ ಕೈಗೆ ಸಿಗದಂತೆ ತೋಟಕ್ಕೆ, ಬೀದಿಗೆ ಕೂಡ ಓಡಿದು ದುಂಟು.

ಇಂದು ಅದೇ ಪದ್ಮಾವತಿಗೆ ಮದುವೆಯಾಗುತ್ತಿದೆ. ಅಮ್ಮನೆಲ್ಲಿಯೋ. ಪದ್ಮಾವತಿ ಎಲ್ಲಿಯೋ.

ತಾನು ಮಾತ್ರ ಇದ್ದೇನೆ, ಮಂಗಳೂರಿನ ಈ ಮನೆಯಲ್ಲಿ ಎಂದು ಸುಮಿತ್ರೆ ಕಳವಳ ತುಂಬಿದ ಹೃದಯದಿಂದ ಮೆಲ್ಲಮೆಲ್ಲ ದನಿ ತೆಗೆದು ಹಾಡು ವಳು.

ಹಾಳಾದ ಹಾಡು. ಅದು ಕೂಡ ವರ್ತಮಾನದಿಂದ ಜಾರಿ ಭೂತದ ಗತ ವೈಭವದಲ್ಲಿ ಸಿಲುಕಿಕೊಂಡು ಆ ನರಳಾಟದ ನೋವಿನಿಂದ ಸಂತೋಷ ಪಡಬೇಕೆ ?

ಮಕ್ಕಳಿಗೆ ಸಂಗೀತಾಭ್ಯಾಸ ಚೆನ್ನಾಗಿ ಆಗಬೇಕು ಎಂಬ ಆಸೆಯಿಂದ ಸಾವಿತ್ರಮ್ಮ ಬೆಳಿಗ್ಗೆ ಐದು ಘಂಟೆಗೇ ಸಕ್ಕರೆ ನಿದ್ದೆಯಲ್ಲಿರುತ್ತಿದ್ದ ಸುಮಿ-ಪದ್ಮಾರನ್ನು ಎಬ್ಬಿಸಿ, ಹಿಂದಿನ ದಿನ ಹೇಳಿಸಿಕೊಂಡ ವರ್ಣವನ್ನೋ ಕೃತಿಯನ್ನೋ ಅಭ್ಯಾಸಮಾಡುವಂತೆ ಹೇಳುವರು.

ನಿದ್ದೆ ಕಣ್ಣನ್ನು ಹಿಸುಕಿಕೊಳ್ಳುತ್ತ ಸುಮಿತ್ರೆ ಹಾಡತೊಡಗುವಳು.

"ಕೆರೆಯ ನೀSSS ರನು ಕೆರೆಗೆ ಚೆಲ್ಲಿSS
ವರವ ಪಡೆದವರಂತೆ ಕಾಣಿರೊ....
ಹರಿಯ ಚರಣದೊಳಾದ ಭಾಗ್ಯವ
ಹರಿ ಸಮSSSರ್ಪಣೆ ಮಾಡಿ ಬದುಕಿರೊ...."

ತಾಯಿಯ ಒತ್ತಾಯಕ್ಕೆ ಪದ್ಮಾವತಿಯೂ ಎದ್ದು ಹಾಡತೊಡಗುವಳು. ಆದರೆ ಅಭ್ಯಾಸ ಮುಗಿಯುವಾಗ ಸ್ವರ ಹೊರಡುತ್ತಿರುವುದು ಒಂದೇ ಕಂಠದಿಂದ. ಪದ್ಮಾ ಹಾಯಾಗಿ ಅಕ್ಕನ ತೊಡೆಯ ಮೇಲೆ ತಲೆಯಿರಿಸಿ ಮಲಗಿಬಿಡುತ್ತಿದ್ದಳು.

ಇನ್ನೂ ಪಡಸಾಲೆಯಿಂದ ಸಂಗೀತಾಭ್ಯಾಸ ಕೇಳಿಬರುವಂತಿತ್ತು. ಅಂದಿನ ಸನ್ನಿವೇಶಗಳೆಲ್ಲ ಸುಮಿತ್ರೆಯ ಕಣ್ಣೆದುರು ಬಂದು ಕಾಣಿಯುತ್ತಿದ್ದವು.

ಇಂದು ಅಮ್ಮನೂ ಇಲ್ಲ. ಪದ್ಮಾವತಿ ತಿರುಪತಿಯಲ್ಲಿ. ಮರಳಿ ಮನೆಗೆ ಬರಲಿರುವ ಪದ್ಮಾ 'ಅಕ್ಕಾ, ಅಕ್ಕಾ' ಎಂದು ಅಕ್ಕರೆಯಿಂದ ದಿನಕ್ಕೆ ಸಾವಿರ ಬಾರಿ ಕೂಗಿಕೊಳ್ಳುವ ಪದ್ಮಾವತಿಯಲ್ಲ. ತಾಯಿಯ ಸಿಟ್ಟಿನ ಏಟು ತಪ್ಪಿಸಿಕೊಳ್ಳಲು ಓಡಿಬಂದು ಅಕ್ಕನನ್ನು ತಬ್ಬಿಕೊಳ್ಳುವ ಪದ್ಮಾ ಇಂದು ಎಲ್ಲಿದ್ದಾಳೆ!

ಮರಳಿಬರುವ ಪದ್ಮಾ ಮುಂಬಯಿಗೆ ಸಂಸಾರ ಜೀವನ ಸಾಗಿಸಲು ಹೋಗಲಿರುವ ಗೃಹಿಣಿ. ಗೋಪೀನಾಥರಾಯರ ಹೆಂಡತಿ, ಪದ್ಮಾವತಿ.

ಅವರು ಪದ್ಮಾವತಿಯನ್ನು ಹೇಗೆ ನೋಡಿಕೊಳ್ಳುತ್ತಾರೆ!

ಇಷ್ಟರಲ್ಲೇ ಅವರು ಪದ್ಮಾವತಿಯನ್ನು ಮಾತನಾಡಿಸಿರಬಹುದು. ಏಕಾಂತದಲ್ಲಿ ಕಂಡು ಪ್ರೀತಿಯ ಮಾತುಗಳನ್ನಾಡಿರಬಹುದೆ?

ಆ ಮದುವೆಯ ಗೌಜಿಯಲ್ಲಿ ಏಕಾಂತ ಎಲ್ಲಿ ಸಾಧ್ಯ? ಟ್ರೈನಿನಲ್ಲಿ ತಿರುಪತಿಯಿಂದ ಬರುವಾಗಲಾದರೂ ಮಾತನಾಡಿಸಿರಬಹುದು. ಮದರಾಸು ನೋಡಲು ಹೋಗುವ ನೆಪದಿಂದ ಪದ್ಮಾವತಿಯನ್ನು ಕರೆದುಕೊಂಡು ಹೋಗಿ

ಮುಂದಿನ ಸಂಸಾರ ಜೀವನದ ಕನಸು ಕಾಣುತ್ತ ಆಕೆಯೊಡನೆ ಸರಸವಾಡಿರ ಬಹುದು.

ಮಂಗಳೂರಿಗೆ ಮರಳುವಾಗ ದಾರಿಯಲ್ಲಿ ತುಂಬ ಮಾತನಾಡಬಹುದು.

ಮಂಗಳೂರಿಗೆ ಎಲ್ಲ ಮರಳಿ ಬರುತ್ತಾರೆ. ಇದೇ ಮನೆಯಲ್ಲಿ ಗೋಪೀನಾಥರಾಯರು ಬಂದಿಳಿಯುತ್ತಾರೆ. ತನ್ನನ್ನು ಅವಮಾನಿಸಿಹೋದ ಗೋಪೀನಾಥರಾಯರು ಮನೆಗೆ ಅಧಿಕಾರಿಯಾಗಿ, ತನಗೆ ಭಾವನಾಗಿ, ಪದ್ಮಾವತಿಯೊಡನೆ ಬಂದಿಳಿಯುತ್ತಾರೆ; ಉಳಿದುಕೊಳ್ಳುತ್ತಾರೆ.

ಮನಸ್ಸಿನಲ್ಲಿ ಹೊಯ್ದಾಟ ಹೆಚ್ಚಾಗಿ ಸುಮಿತ್ರೆ ಕಿಟಿಕಿ ಬಿಟ್ಟು ಕೆಳಗೆ ಕುಳಿತುಬಿಡುವಳು.

"ನನ್ನನ್ನು ಅವಮಾನಿಸಿ ಹೋದ ಗೋಪೀನಾಥರಾಯರನ್ನು ನಾನು ಸ್ವಾಗತಿಸಿ ಸತ್ಕರಿಸಬೇಕು."

"ಹೌದು" ಎಂದು ವಿಚಾರ ಹೇಳುತ್ತಿತ್ತು. ಹಾಳಾದ ಮನಸ್ಸು. ಅವರು ಬರುತ್ತಾರೆಂದು ಸಂಕಟವಾಗುತ್ತಿತ್ತು. ಆದರೆ ಅದು ಅವರು ಬರಲಿ ಎಂದೇ ಆಶಿಸುತ್ತಿತ್ತು.

'ಪಬ್ಲಿಕ್' ಸಮೀಪಿಸುತ್ತಿದೆಯೆನ್ನುವುದನ್ನು ಮರೆತು, ಸುಮಿತ್ರೆ ಎರಡುದಿನ ಮನೆಯನ್ನು ಚೊಕ್ಕಮಾಡಿ ಸಿಂಗರಿಸುವ ಕೆಲಸದಿಂದಾಗಿ ಓದಿನ ವಿಚಾರ ಸಂಪೂರ್ಣ ಕಡೆಗಣಿಸಿದಳು. ಅವಳ ವಿರಾಮದ ಸಮಯದ ಕಸೂತಿಯ ಕೈಗಾರಿಕೆಗಳೆಲ್ಲ ಮೊದಲನೆಯ ಬಾರಿಗೆ ಪೆಟ್ಟಿಗೆಯಿಂದ ಹೊರಬಂದು ಬಾಗಿಲನ್ನೂ ಮೇಜನ್ನೂ ಅಲಂಕರಿಸಿದವು. ಸಂದುಗೊಂದುಗಳೆಲ್ಲ ಚೊಕ್ಕವಾಗಿ, ನೆಲವೆಲ್ಲ ಶುಭ್ರವಾಗಿ, ಕುರ್ಚಿ ಮೇಜು ಪುಸ್ತಕಗಳೆಲ್ಲ ಓರಣವಾಗಿ, ಸಾವಿತ್ರಮ್ಮನ ಸಾವಿನ ನೋವನ್ನು ಮರೆತು ಮನೆ ಹೊಸ ದಂಪತಿಗಳನ್ನು ಸ್ವಾಗತಿಸಲು ಸಿದ್ಧವಾಯಿತು.

ತಂದೆ ಮರಳಿ ಬರುವ ದಿನ ಸುಮಿತ್ರೆಯ ಸಂತೋಷ ಇಷ್ಟೇ ಎಂದು ಹೇಳುವಂತಿರಲಿಲ್ಲ. ಶಾಲೆ ಬಿಡುವತನಕ ಮೈಲು ಗಾಡಿ ಬರುವಂತಿರಲಿಲ್ಲ ವಾದರೂ ಅಂದು ಮಧ್ಯಾಹ್ನ ಸುಮಿತ್ರೆ ಶಾಲೆಗೆ ಹೋಗಲಿಲ್ಲ. ಸ್ಟೇಶನಿಗೆ ಹೋಗಲು ಮನಸ್ಸು ತವಕಿಸುತ್ತಿತ್ತು. ಆದರೆ ಬಂಧುಗಳಿಲ್ಲದ ಬರಿ ಮನೆಗೆ

ದಂಪತಿಗಳು ಬರುವಂತಾಗಬಾರದು ಎಂಬ ವಿಚಾರ ಆಕೆ ಮನೆಯಲ್ಲೇ ನಿಲ್ಲು ವಂತೆ ಮಾಡಿತು.

ಆ ದಿನ ದುರದೃಷ್ಟವಶಾತ್ ಗಾಡಿ ಎರಡು ಘಂಟೆ ತಡ.

ಸುಮಿತ್ರೆಗೆ ಮುಖಮಂಟಪದಲ್ಲಿ ನಿಂತು ಕೊರಳುಕೊಂಕಿಸಿ ದಾರಿ ನೋಡಿ ನೋಡಿ ಸಾಕಾಯಿತು. ಕೊನೆಗೆ, ಆದಿನ ಖಂಡಿತ ಬರುತ್ತೇವೆಂದು ತಂದೆ ಬರೆದ ಕಾರ್ಡು ಆಕೆಯ ಕೈಸೇರಿದ್ದರೂ "ಮದರಾಸಿನಲ್ಲಿ ಒತ್ತಾಯ ಜೋರಾಗಿ ಇನ್ನೊಂದು ದಿವಸ ನಿಂತು ಬರುತ್ತಾರೋ ಏನೋ. ಇನ್ನೂ ೨೪ ಘಂಟೆ ಕಾಯಬೇಕಲ್ಲಾ" ಎಂದು ತಳಮಳಗೊಂಡಳು

ತುಂಬ ಎಣ್ಣೆ ಹಾಕಿ ದೇವರ ಮನೆಯಲ್ಲಿ ಹಚ್ಚಿರಿಸಿದ್ದ ದೀಪ ಉರಿ ಯುತ್ತಲೇ ಇತ್ತು. ಸುಮಿತ್ರೆಯ ಕೇಳಿಕೆಯಂತೆ ಆರತಿ ಮಾಡಲೆಂದು ಬಂದಿದ್ದ ಗೆಳತಿಯರಾದ ವಸಂತಿ, ನೀರದೆ ಕಾದು ಕಾದು "ಇನ್ನು ಹೋಗುವು ದೇನೇ ಸುಮೀ. ಪದ್ಮಾ ಇವತ್ತು ಬರುವಹಾಗೆ ಕಾಣಿಸುವುದಿಲ್ಲ" ಎಂದರು. ಹೊಸ ದಂಪತಿಗಳನ್ನು ಕಾಣಬೇಕೆಂದು ಬಂದಿದ್ದ ಮೂರ್ತಿಯ ತಾಯಿ, ವಸಂತಿಯ ತಾಯಿ, ಪಕ್ಕದ ಮನೆಯ ರಾಧಕ್ಕ ಇವರೆಲ್ಲ ಕತ್ತಲಾಗುತ್ತಿದೆ ಯೆಂದು ಹೊರಡುವ ಸಿದ್ಧತೆಯಲ್ಲಿದ್ದರು.

ಅಷ್ಟರಲ್ಲಿ ಹೊರಗೆ ಗಾಡಿಬಂತು. ಮರುಕ್ಷಣದಲ್ಲಿ ಪಂಡಿತರು 'ಸುಮೀ' ಎಂದೂ, ಪದ್ಮಾವತಿ 'ಅಕ್ಕಾ' ಎಂದೂ ಕರೆಯುವ ಸ್ವರ ಕೇಳಿಸಿದವು.

ದೇವರ ಕೋಣೆಯಲ್ಲಿದ್ದ ದೀಪದ ಎಣ್ಣೆ ತೀರಿತೇ ಏನೆಂದು ನೋಡಲು ಹೋಗಿದ್ದ ಸುಮಿತ್ರೆಯನ್ನು ಮುಖಮಂಟಪದಿಂದ ವಸಂತಿಯ ತಾಯಿ ಕರೆ ದರು.

"ಓಕುಳಿ ನೀರು ತಾರಮ್ಮ ಸುಮಿತ್ರಾ. ಒಂದು ದೀಪ ಹಚ್ಚಿ ತಾ ಮುಖಮಂಟಪಕ್ಕೆ" ಎಂದು.

ಓಕುಳಿಯ ನೀರಿನ ತಟ್ಟೆಯನ್ನೆತ್ತಿಕೊಳ್ಳುವಾಗ ಸುಮಿತ್ರೆಯ ಕೈ ನಡುಗುತ್ತಿತ್ತು. ಅವಸರದಿಂದಲೇ ಕಾಲುದೀಪ ಹಚ್ಚಿಕೊಂಡು ಹೊರಬಾಗಿ ಲಿಗೆ ಬಂದಳು.

ಮೆಟ್ಟಿಲಲ್ಲಿ ಗೋಪಿ ಪದ್ಮಾವತಿ ನಿಂತಿದ್ದರು. ಮೂರ್ತಿ ಮೀರೆಯರು ಆಗಲೇ ಮೇಲೆ ಬಂದಾಗಿತ್ತು. ಪಂಡಿತರು ಅಂಗಳದಲ್ಲಿದ್ದರು. ಮುಖ ಮಂಟಪ ತುಂಬ ಮಾತಿನ ಮಳೆ ಬಂದಂತಿತ್ತು

ದೀಪ ಕೆಳಗಿರಿಸುವಾಗ ಸುಮಿತ್ರೆಯ ಕೈ ಪುನಃ ನಡುಗಿತು. “ ನೀನೇ ಓಕುಳಿಯ ಶಾಸ್ತ್ರಮಾಡಿ ನೀರು ಚೆಲ್ಲು ಸುಮೀ ” ಎಂದು ಮೀರಿ ಹೇಳಿದಾಗ ಸುಮಿತ್ರೆ ತಂಗಿಯನ್ನು ಸ್ವಾಗತಿಸಲು ಮುಂದುವರಿದು ಹೋದಳು. ಗೋಪಿ ನಗುತ್ತಿದ್ದ. ಪದ್ಮಾವತಿಯ ಮುಖ ಲಜ್ಜೆಯಿಂದ ಕೆಂಪೇರಿತ್ತು.

ಕಷ್ಟದಿಂದ ಓಕುಳಿ ನೀರು ಚೆಲ್ಲಿ ಸುಮಿತ್ರೆ ತಂದೆಯೊಡನೆಯೂ ಮಾತನಾಡದೆ ಓಡಿ ದೇವರ ಕೋಣೆಗೆ ಬಂದಳು. ಆಕೆಯ ದೇಹಾದ್ಯಂತ ಕಂಪಿಸುತ್ತಿತ್ತು. ಮುಖವೆಲ್ಲ ಬೆವರಿ ತೊಯ್ದಿತ್ತು.

ಪಂಡಿತರು “ ದೇವರಿಗೆ ನಮಸ್ಕಾರಮಾಡಿ ಬಾ ಪದ್ಮಾ . ಸುಮೀ ದೀಪ ಹಚ್ಚಿಟ್ಟಿದ್ದಿಯಲ್ಲಮ್ಮಾ ” ಎಂದು ಹೇಳಿದ ಮಾತು ಸುಮಿತ್ರೆಗೆ ಅಸ್ಪಷ್ಟವಾಗಿ ಕೇಳಿಸಿತು. ಏನೋ ಆಲೋಚನೆಯಿಂದ ಆಕೆ ಸೀದಾ ದೇವರ ಕೋಣೆಗೆ ಬಂದಿದ್ದಳು. ಆದರೆ ಪದ್ಮಾ , ಗೋಪೀನಾಥರಾಯರು ಇನ್ನೊಂದು ಕ್ಷಣದಲ್ಲಿ ಅಲ್ಲಿಗೆ ಬರುತ್ತಾರೆ ಎಂಬ ತಿಳುವಳಿಕೆ ಮೂಡಿದೊಡನೆ ಅಲ್ಲಿಂದ ಅಡಿಗೆಯ ಮನೆಗೆ ಹೋಗಲೆತ್ನಿಸಿದಳು.

ಆದರೆ ಫಕ್ಕನೆ ಎಚ್ಚರವಾದಂತಾಯಿತು. ಕಾಲು ಮುಂದುವರಿಯಲಿಲ್ಲ. ದೇವರ ದೀಪ ನಂದಿಹೋಗಿತ್ತು.

೮

ಸುಮಿತ್ರೆಯ ಮನಸಿನಲ್ಲಿ ಅಮಂಗಲದ ಶಂಕೆ ತಲೆದೋರಿದೊಡನೆ ಆಕೆ ಕ್ಷಣಕಾಲ ಕಂಗಾಲಾದಳು. ಆದರೆ ಕ್ಷಣಕಾಲ ಮಾತ್ರ. ದೀಪದ ಎಣ್ಣೆ ಮುಗಿದುಹೋಗಿದೆಯೋ ಎಂದು ನೋಡಲು ಬಂದ ತಾನು ವಸಂತಿಯ ತಾಯಿಯ ಕೂಗು ಕೇಳಿದೊಡನೆ ಹೊರಗೋಡಿದುದು ನೆನಪಿಗೆ ಬಂದು ಆಕೆ ನಗುವಂತಾಯಿತು. ತುಂಬ ಪ್ರಸಂಗಾವಧಾನತೆ ತಂದುಕೊಂಡು ಅವಸರ ದಿಂದ ಅಡಿಗೆಯ ಮನೆಗೆ ಹೋಗಿ ಬೆಂಕಿಪೆಟ್ಟಿಗೆ ತಂದು ದೀಪಹಚ್ಚುವ ಕೆಲಸ ದಲ್ಲಿದ್ದಾಗ ತಂದೆ, ಗೋಪಿ ಪದ್ಮಾವತಿಯರೊಂದಿಗೆ ಒಳಬಂದರು.

ದೇವರ ಇದಿರು ದೀಪವಿರದುದನ್ನು ಕಂಡು ಪಂಡಿತರಿಗೆ ನೋವಾಯಿ ತೇನೊ. “ಸಂಜೆಯೇ ಹಚ್ಚಿಡಬಹುದಿತ್ತಲ್ಲ ಸುಮೀ.” ಎಂದರು. “ದೀಪವಿತ್ತು

ಅಪ್ಪಯ್ಯ. ಎಣ್ಣೆ ಮುಗಿದುಹೋಗಿತ್ತೆಂದು ತೋರುತ್ತದೆ." ಎಂದು ಸುಮಿತ್ರೆ ನಗುತ್ತ ಹೇಳಿದಾಗ ಅವರಿಗೆಷ್ಟು ಸಮಾಧಾನವಾಯಿತೋ.

ಪದ್ಮಾವತಿ ಸುಮಿತ್ರೆಗೆ ನಮಸ್ಕರಿಸಿದಾಗ ಗೋಪಿ ನಿಂತು ನಗುತ್ತಿದ್ದ. "ಆಶೀರ್ವಾದ ಮಾಡೆ ಅಕ್ಕಾ." ಎಂದು ತಂಗಿ ಕೇಳಿದಾಗ ಸುಮಿತ್ರೆಗೂ ನಗು ತಡೆಯಲಾಗಲಿಲ್ಲ.

ಆ ರಾತ್ರಿ ಎಲ್ಲ ಕೆಲಸ ಮುಗಿದ ಮೇಲೆ ಬಳಿಯಲ್ಲಿ ಮಲಗಿದ ತಂಗಿಯ ಬಾಯಿಂದ ಮದುವೆಯ ವೈಭವದ ವಿವರವನ್ನೆಲ್ಲ ಕೇಳಬೇಕೆಂದು ಸುಮಿತ್ರೆಯ ಮನಸ್ಸು ಬಯಸುತ್ತಿತ್ತು. ಗೋಪಿ ಪದ್ಮಾವತಿಯನ್ನು ಆದರಿಸಿದ ಬಗೆ ಹೇಗೆಂದು ತಂಗಿಯಿಂದ ಕೇಳಿ ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯಿತ್ತು.

ಆದರೆ ಪದ್ಮಾವತಿ ಮಾತನಾಡಲಿಲ್ಲ.

ಅಂದು, ರಾತ್ರಿಯ ಮೌನಕ್ಕೆ ಆ ಮನೆಯಲ್ಲಿ ಎಚ್ಚರವಿದ್ದು ಸಾಕ್ಷಿ ಹೇಳುವಂತಿದ್ದುದು ಸುಮಿತ್ರೆ ಮಾತ್ರ. "ಪದ್ಮಾವತಿ ನಿನ್ನಿಂದ ಬಹುದೂರ ಹೋಗಿದ್ದಾಳೆ" ಎಂದು ಮನಸ್ಸು ಹೇಳುತ್ತಿತ್ತು. ತನ್ನನ್ನು ತಿರಸ್ಕರಿಸಿದ ಗೋಪಿ ಪದ್ಮಾವತಿಯ ಒಲವನ್ನು ಕಸಿದುಕೊಂಡು ಹೋಗಿದ್ದಾನೆ ಎಂದು ವಿಚಾರ ಹೇಳಿತು.

ಗೋಪೀನಾಥರಾಯರ ಮುಖ ನೋಡಬಾರದು ಎಂಬಷ್ಟು ಸಿಟ್ಟಿನಿಂದ ಸುಮಿತ್ರೆ ರಾತ್ರಿಯ ಬಹುಭಾಗವನ್ನು ನಿದ್ದೆಯಿಲ್ಲದೆಯೇ ಕಳೆದಳು.

ಬೆಳಗಿನ ಜಾವಕ್ಕೆ ಮಾತ್ರ ಸುಮಿತ್ರೆಗೆ ಚೆನ್ನಾಗಿ ನಿದ್ದೆ ಬಂತು. ಹೀಗಾಗಿ ಎಚ್ಚರಾಗುವಾಗ ನಿತ್ಯಕ್ಕಿಂತ ತುಸು ತಡವಾಯಿತು. ಬೆಳಕು ಮೂಡಿಯಾಗಿದೆ ಯೆಂಬ ಗಡಿಬಿಡಿಯಿಂದ ಸುಮಿತ್ರೆ ಎದ್ದು ಮನೆಗೆಲಸ ತೊಡಗಿದಳು. ತಂಗಿ ಪದ್ಮಾ ಇನ್ನೂ ಎದ್ದಿರಲಿಲ್ಲ. ತಂದೆಯ ಕೋಣೆಯಿಂದ ಮಂಗಳಾಷ್ಟಕ ಕೇಳಿಸಿರಲಿಲ್ಲ. ಎಲ್ಲರಿಗೂ ಪ್ರಯಾಣದ ಆಯಾಸ, ಆ ಕಾರಣ ಚೆನ್ನಾಗಿ ನಿದ್ದೆ ಬಂದಿದೆಯೆಂದುಕೊಂಡು ಸುಮಿತ್ರೆ ಕಾಫಿಗೆ ನೀರಿಟ್ಟು ರಂಗವಲ್ಲಿ ಹಾಕಲೆಂದು ಅಂಗಳಕ್ಕೆ ಬರುವಾಗ ಮುಖಮಂಟಪದ ಬದಿಯ ಕೋಣೆಯಲ್ಲಿ ಮಲಗಿದ್ದ ಗೋಪಿ ಎದ್ದಾಗಿದೆಯೆ ಎಂದು ನೋಡಿದಳು. ಗೋಪಿ ಕಾಣಿಸಲಿಲ್ಲ. ಮುಖಮಂಟಪದ ಬಾಗಿಲು ತೆರೆದಿತ್ತು. ಸುಮಿತ್ರೆ ಅಂಗಳಕ್ಕಿಳಿದು ಬಂದು ಸುತ್ತ ನೋಡಿದರೂ ಎಲ್ಲಿಯೂ ಗೋಪಿ ಕಾಣಿಸಲಿಲ್ಲ. "ಮನೆಯಲ್ಲಿ

ಯಾರೂ ಎದ್ದಿಲ್ಲವೆಂದು ಸೀದಾ ಮೂರ್ತಿಮಾಷ್ಟ್ರ ಮನೆಗೆ ಹೋದರೆ ?" ಎಂದು ಸುಮಿತ್ರೆಯ ಮನಸ್ಸು ಅಳುಕಿತು. ಗೋಪಿಯ ಕುರಿತು ರಾತ್ರೆ ಮನಸ್ಸಿನಲ್ಲಿ ಉಂಟಾಗಿದ್ದ ಸಿಟ್ಟೆಲ್ಲ ಮಾಯವಾಗಿ "ಹಾಳಾದ ನಿದ್ದೆ. ಯಾವಾಗಲೂ ಬೇಗ ಏಳುವವಳಿಗೆ ಈಹೊತ್ತೇ ಕುಂಭಕರ್ಣನ ನಿದ್ದೆಬರಬೇಕೆ ?" ಎಂದುಕೊಂಡು ಸುಮಿತ್ರೆ ರಂಗವಲ್ಲಿ ಬಿಡಿಸಲು ತೊಡಗಿದಳು.

ಚೊಕ್ಕಪಡಿಸಿದ, ನಯವಾದ ಅರ್ಧ ವರ್ತುಲ ಜಾಗದಲ್ಲಿ ಸುಮಿತ್ರೆಯ ಕಲಾವಂತಿಕೆಯ ಕುರುಹಾಗಿ ಮೂಡಣ ದಿಗಂತದಲ್ಲಿ ಮೇಲೆದ್ದು ಬರುತ್ತಿದ್ದ ಉಷೆಯನ್ನು ಸ್ವಾಗತಿಸುವ ರಂಗವಲ್ಲಿ ರೂಪುಗೊಳ್ಳುತ್ತಿತ್ತು. ಮನಸ್ಸಿನಲ್ಲಿ ಎಷ್ಟೇ ದುಗುಡ ದುಮ್ಮಾನವಿರಲಿ, ಮನೆಯಲ್ಲಿ ಎಂಥದೇ ಕಷ್ಟವಿರಲಿ, ರಂಗವಲ್ಲಿ ಬಿಡಿಸುವಾಗ ಯಾವಾಗಲೂ ಸುಮಿತ್ರೆ ಸುಖಿ. ಭೂಮಿತಾಯಿಯನ್ನು ಸಿಂಗರಿಸುವ ಸಡಗರದಲ್ಲಿ ಸುಮಿತ್ರೆ ಅನುಭವಿಸುತ್ತಿದ್ದ ತನ್ಮಯತೆ, ಆ ಹತ್ತುಹದಿನೈದು ನಿಮಿಷಗಳ ಕಾಲ, ಜಗತ್ತಿನ ಎಲ್ಲ ಸುಖದುಃಖಗಳಿಂದ ಅವಳನ್ನು ನಿರ್ಲಿಪ್ತಳನ್ನಾಗಿ ಮಾಡುತ್ತಿತ್ತು.

ಹೀಗಾಗಿಯೇ ಸುಮಿತ್ರೆಗೆ ಗೇಟಿನ ಬಾಗಿಲು ತೆರೆದುದು ತಿಳಿಯಲಿಲ್ಲ. ಗೋಪಿ ಒಳಬಂದು ತನ್ನ ಬಳಿಯಲ್ಲಿಯೇ ತುಸು ದೂರದಲ್ಲಿ ನಿಂತು ತನ್ನ ಕೆಲಸವನ್ನು ತದೇಕಚಿತ್ತನಾಗಿ ನೋಡುತ್ತಿದ್ದುದು ತಿಳಿಯಲಿಲ್ಲ. ಕೆಲಸವೆಲ್ಲ ಮುಗಿಸಿ ಅರಸಿನ ಕುಂಕುಮ ಹಚ್ಚಿ, ಸುಮಿತ್ರೆ ಎದ್ದಾಗ ಎದುರಿಗೆ ಗೋಪಿಯನ್ನು ಕಂಡಳು. ಆತ ಹಿಂದಿನ ದಿನ ರಾತ್ರಿ ಪದ್ಮಾ ತನಗೆ ನಮಸ್ಕರಿಸಿದಾಗ ನಕ್ಕಂತೆ ಈಗಲೂ ನಗುತ್ತಿದ್ದ.

ಗೋಪಿಯನ್ನು, ಈ ಬಾರಿ ಯಾರೂ ಜೊತೆಗಿಲ್ಲದೆ, ನೋಡಿದ ಸುಮಿತ್ರೆ ಪುನಃ ಅಧೀರೆ.

ಸುಮಿತ್ರೆಯ ಕೈ ಕಂಪಿಸತೊಡಗಿತು. ಹೊತ್ತಲ್ಲದ ಹೊತ್ತಿನಲ್ಲಿ ಮೈಯೆಲ್ಲ ಬೆವರಲಾರಂಭಿಸಿತು. ತೀವ್ರತಮ ಶ್ವಾಸನಿಶ್ವಾಸ ಸುಮಿತ್ರೆಯನ್ನು ಗಲಿಬಿಲಿಯಲ್ಲಿ ಕೆಡವಿತು. ಗೋಪಿಯ ಪ್ರಭಾವ ಇಷ್ಟೇಕೆ ತನ್ನ ಮೇಲಾಗುತ್ತಿದೆಯೆಂದು ಸುಮಿತ್ರೆ ತಿಳಿಯಲಸಮರ್ಥೆಯಾದಳು.

ಒಳಗೆ ತಂದೆಯ ಮಂಗಳಾಷ್ಟಕ ಪಠನ ಸುಮಿತ್ರೆಯನ್ನು ವಾಸ್ತವ ಜಗತ್ತಿಗೆ ಎಳೆದು ತಂದಿತು.

“ ಲಕ್ಷ್ಮೀರ್ಯಸ್ಯ ಪರಿಗ್ರಹಃ ಕಮಲಭೂಃ....”

“ ರಂಗವಲ್ಲಿ ಕೂಡ ಇಷ್ಟು ಸುಂದರವಾಗಬಹುದೆಂದು ನನಗೆ ಇಂದೇ ತಿಳಿದದ್ದು. ” ಸಹನಾತೀತ ಮೌನವನ್ನು ಕೊನೆಗೊಳಿಸಿ ಗೋಪಿಯೇ ಹೇಳಿದ.

ಈ ಮಾತಿನಿಂದ ಸುಮಿತ್ರೆ ಲಜ್ಜಿತಳಾಗಲಿಲ್ಲ. ತನ್ನ ರಂಗವಲ್ಲಿಯು ಪ್ರಶಂಸೆಯ ಪಾತ್ರತೆಯ ಬಗ್ಗೆ ಆಕೆಗೆ ಸಂದೇಹವೇ ಇರಲಿಲ್ಲವಾದ ಕಾರಣ ಸಹಜ ಗರ್ವದಿಂದಲೇ ಅವಳು ಉತ್ತರ ಕೊಟ್ಟಳು.

“ ಬೆಳಗಿನ ಹೊಂಬಿಸಿಲ ಸೌಂದರ್ಯವನ್ನು ಹುಡುಕಿಕೊಂಡು ಎಲ್ಲರು ಏಳುವುದಕ್ಕೆ ಮುಂಚೆಯೇ ‘ ವಾಕಿಂಗ್ ’ ಹೋಗುವವರಿಗೆ ರಂಗವಲ್ಲಿಯ ಸೌಂದರ್ಯವನ್ನು ಗುರುತಿಸುವುದು ಕಷ್ಟವಲ್ಲ ಭಾವಾ. ಆದರೆ ವಾಕಿಂಗ್ ಹೋಗುವವರು ಹೇಳಿಯಾದರೂ ಹೋಗುವುದು ಬೇಡವೆ ? ಜೊತೆಗೆ ಪದ್ಮಾವತಿಯನ್ನೂ ಕರೆದುಕೊಂಡು ಹೋಗಬಹುದಿತ್ತಲ್ಲ. ”

ಆಕೆಯ ಮನಸ್ಸಿನ ಹೊಯ್ದಾಟ ದನಿಯಲ್ಲಿ ಪರಿಣಾಮ ಮಾಡಲಿಲ್ಲ. ಅದು ಶಾಂತವಾಗಿ ಗಂಭೀರವಾಗಿಯೇ ಇತ್ತು. ಸುಮಿತ್ರೆಗೂ ಇದು ಆಶ್ಚರ್ಯವನ್ನುಂಟುಮಾಡಿತ್ತು. ಸ್ವಾಭಾವಿಕವಾಗಿಯೇ ಮೊದಲಬಾರಿಗೆ ತಂಗಿ ಪದ್ಮೆಯ ಗಂಡನನ್ನು ‘ ಭಾವಾ ’ ಎಂದು ಸುಮಿತ್ರೆ ಕರೆದಳು. ಆದರೆ ಮಾತು ಮುಗಿಸಿದ ಮೇಲೆ ಮಾತ್ರ ಕೊರಳು ಹಿಡಿದು ಯಾರೊ ಹಿಸುಕಿದಂತಾಯಿತು.

ಗೋಪಿಗೆ ಎಲ್ಲಕ್ಕಿಂತ ಹೆಚ್ಚು ಸುಮಿತ್ರೆಯ ಉತ್ತರದಿಂದ ದೊರಕಿದ ಸಮಾಧಾನವೆಂದರೆ “ ಆಕೆ ತನ್ನ ಮೇಲೆ ಸಿಟ್ಟುಗೊಂಡಿಲ್ಲ ” ಎಂಬುದು. ಅವನು ಅದಕ್ಕಾಗಿಯೆ ಹಿಂದಿನ ದಿನದಿಂದ ಪ್ರಯತ್ನಿಸುತ್ತಿದ್ದ. ಮನಸ್ಸಿನ ಆಳದಲ್ಲಿ ಯಾವುದೋ ಒಂದು ಅವ್ಯಕ್ತ ನೋವು ‘ ನೀನು ತಪ್ಪುಗಾರ ’ ಎಂದು ಹೇಳಿಸುತ್ತಿದ್ದುದರಿಂದ ಈ ಆತ್ಮವಿವೇಚನೆಯ ಅನುಭವದಲ್ಲಿ, ತನ್ನ ಕೃತಿಯ ಸಮರ್ಥನೆ ಸುಮಿತ್ರೆಯ ಮಾತಿನಿಂದ ಆಗಬೇಕೆಂದು ಬಯಸುತ್ತಿದ್ದ ಅವನಿಗೆ, ಆಕೆಯ ಉತ್ತರ ತುಂಬ ಸಮಾಧಾನವನ್ನು ಕೊಟ್ಟಿತು.

“ ಅವಳು ಇನ್ನೂ ಎದ್ದಿಲ್ಲವಲ್ಲ. ನಿದ್ದೆಯಿಂದ ಎಬ್ಬಿಸಿ ಕರೆದುಕೊಂಡು ಹೋಗುವಷ್ಟು ಸಲಿಗೆ ಮದುವೆಯಾಗಿ ಎಂಟು ದಿನಗಳೊಳಗೆ ಹೇಗೆ ಬರಬೇಕು. ”

"ಸ್ವತಃ ಅಷ್ಟು ಧೈರ್ಯವನ್ನು ತಂದುಕೊಳ್ಳುವುದು ಸಾಧ್ಯವಿಲ್ಲವಾದರೆ ನಿಮ್ಮ ಪೈಕಿ ಯಾರನ್ನಾದರೂ ಕರೆದುಕೊಂಡು ಬರಬಾರದಿತ್ತೆ? ನಿಮ್ಮ ಅಕ್ಕನನ್ನಾಗಲಿ, ಅತ್ತಿಗೆಯನ್ನಾಗಲಿ ಒಂದು ಎಂಟು ದಿನಗಳ ಮಾತಿಗಾದರೂ ಕರೆದುಕೊಂಡು ಬರಬಾರದಿತ್ತೆ. ಅವರು ಯಾರಾದರೂ ಬಂದಿದ್ದರೆ, ಧೈರ್ಯ, ಸಲಿಗೆ ಎಲ್ಲ ಬರುತ್ತಿದ್ದವು. ಮೊದಲಬಾರಿಗೆ ಒಬ್ಬಂಟಿಗನಾಗಿ ಮಾವನ ಮನೆಗೆ ಬಂದಿದ್ದೀರಿ."

ಈಗ ಗೋಪಿಯೊಡನೆ ಮಾತನಾಡುವಾಗ ಸುಮಿತ್ರೆಗೆ ಯಾವ ಸಂಕೋಚವೂ ಇರಲಿಲ್ಲ. ಅಷ್ಟೇ ಅಲ್ಲದೆ ಪದ್ಮೆಯ ಹಿರಿತನದ ಹೊಣೆಗಾರಿಕೆ ತನ್ನ ಮೇಲಿದೆ; ತಾನು ಮನೆಗೆ ಯಜಮಾನಿ ಎಂಬ ಗರ್ವವೂ ಜೊತೆಗಿತ್ತು.

"ಅಯ್ಯೋ, ಅತ್ತಿಗೆಯೆ? ಅವಳಿಲ್ಲವಾದರೆ ಅಣ್ಣ ಮುಂಬಯಿಯಲ್ಲಿ ಒಂದು ದಿನ ಜೀವ ಹಿಡಿದು ನಿಂತಿರಲಾರ. ಅವಳು ನಾಲ್ಕು ದಿನ ಹೊರಗಿರುವಾಗ ಅಣ್ಣನ ಸ್ಟೆತೊಸ್ಕೋಪು ಬಾತ್‌ರೂಮಿನಲ್ಲಿರುತ್ತೆ. ಹೇಂಡ್‌ಬ್ಯಾಗ್ ಉಪ್ಪಿನಕಾಯಿ ಭರಣಿಗಳ ಜೊತೆಗಿರುವುದೂ ಇದೆ. ಅತ್ತಿಗೆಯು ಹಿಡಿತವಿರುವದರಿಂದ ಅವನು ಡಾಕ್ಟರ್. ಇಲ್ಲವಾದರೆ ಅವನಿಗೆ ದೇವರೇ ಗತಿ. ಅತ್ತಿಗೆಗೆ ಮಂಗಳೂರಿಗೆ ಬರಬೇಕೆಂದು ತುಂಬ ಮನಸ್ಸಿತ್ತು. ಆದರೆ ಅಣ್ಣ ವಾಪಸು ಹೋಗುತ್ತಾನೆಂದು ನಿಶ್ಚಯವಾದ ಮೇಲೆ ಅವಳನ್ನು ನಿಲ್ಲಿಸಿಕೊಳ್ಳಲು ಬ್ರಹ್ಮನಿಗೂ ಸಾಧ್ಯವಿಲ್ಲ. ಇನ್ನು ನಮ್ಮಕ್ಕನೋ. ಅವಳನ್ನು ಮದುವೆಗೆ ಕಳಿಸಿಕೊಡಲಿಕ್ಕೇ ಭಾವ ಮೂರು ಘಂಟೆ ಪುರಾಣ ಹೇಳಿದರು."

"ನೀವೂ ಏನಾದರೂ ನೆಪಹೇಳಿ ಪದ್ಮಾಳನ್ನು ಕರೆದುಕೊಂಡು ಸೀದ ಮುಂಬಯಿಗೆ ಹೋಗಲಿಲ್ಲವಲ್ಲ. ಅದೇ ಪುಣ್ಯ. ಇರಲಿಬಿಡಿ. ಇನ್ನೂ ಇಲ್ಲಿ ಮಾತನಾಡುತ್ತ ನಿಂತರೆ ಕಾಫಿ ಪೂರ ತಣ್ಣಗಾಗಿ ಹೋದೀತು. ಒಳಗೆ ಬನ್ನಿ" ಎಂದವಳೆ ಸುಮಿತ್ರೆ ಮನೆಯೊಳಗೆ ಹೋದಳು. ಗೋಪಿ ಹಿಂಬಾಲಿಸಿದ.

ಪಂಡಿತರು ಆಗಲೇ ಮುಖಮಂಟಪಕ್ಕೆ ಬಂದಿದ್ದರು. ಗೋಪಿ ಅಂಗಳದಿಂದ ಬರುತ್ತಿರುವುದನ್ನು ಕಂಡು ಕಂಗಾಲಾದರೋ ಏನೊ. "ಏನು ಆಗಲೇ ಎದ್ದುಬಿಟ್ಟಿರಾ? ನಿದ್ದೆ ಚೆನ್ನಾಗಿ ಬಂತೇ, ಇಲ್ಲವೆ?" ಎಂದುದಕ್ಕೆ ಸುಮಿತ್ರೆಯೇ ಉತ್ತರ ಕೊಟ್ಟಳು.

"ಅವರಿಗೆ ಬೇಗ ಏಳುವ ಅಭ್ಯಾಸವಂತೆ. ವಾಕಿಂಗ್ ಹೋಗಿದ್ದರು." ಈ ಮಾತು ಆಡಿದವಳೇ ಸುಮಿತ್ರೆ ಅಡಿಗೆಯ ಕೋಣೆಗೆ ಹೋದಳು. ಅಲ್ಲಿ ಪದ್ಮಾ ಆಗಲೇ ಕಾಫಿಗೆ ಹಾಲು ಬೆರಸಿಯಾಗಿತ್ತು.

"ಎಷ್ಟು ಹೊತ್ತೇ ನಿನಗೆ? ಕುದಿಯುವ ನೀರು ಇಂಗಿ ಹೋಗುವ ವರೆಗೂ ನಿನ್ನ ರಂಗೋಲೆ ಮುಗಿಯುವುದಿಲ್ಲ" ಎಂದು ಪದ್ಮಾ ಹೇಳಿದಾಗ ಸುಮಿತ್ರೆಗೆ ನಗು ತಡೆಯಲಾಗಲಿಲ್ಲ. "ಗಂಡನಿಗೆ ಕಾಫಿ ತಯಾರಿಸುವ ಗೌಜಿಯಲ್ಲಿ ಯಾರಾರ ಮೇಲೆ ಸಿಟ್ಟಿಗೇಳಬೇಡ ಪದ್ಮಾ. ಕಾಫಿಯಾಯಿತಲ್ಲ. ಬೇಗ ತೆಗೆದುಕೊಂಡು ಹೋಗಿ ಕೊಡು. ಕಾಯುತ್ತಿದ್ದಾರೆ, ನಿನ್ನ ಯಜಮಾನರು." ಎನ್ನುವಾಗ ಪದ್ಮೆಯ ಮುಖದಲ್ಲಿ ಸಂತೋಷದ ನಗು ಮಲ್ಲಿಗೆಯಂತೆ ಅರಳಿತ್ತು. ಆದರೆ ಆ ಸರಸ ಸೇವೆಗೆ ಅವಕಾಶ ಕೊಡದಂತೆ ಗೋಪಿಯೂ ಪಂಡಿತರೂ ಅಡಿಗೆಯ ಮನೆಯೊಳಗೆ ಬಂದರು.

ಪದ್ಮಾವತಿಗೆ ಮದುವೆಯ ದಿನ ನಿಶ್ಚಯಿಸಿದಂದೇ ಆಕೆಯ ಶಾಲಾ ಜೀವನಕ್ಕೂ ಪೂರ್ಣವಿರಾಮ ದೊರಕಿತ್ತು. ತಿಂಗಳೆರಡು ತಿಂಗಳೊಳಗೆ ಮುಂಬಯಿಗೆ ಗಂಡನ ಜೊತೆಗೆ ಹೋಗುವವಳಿಗೆ ಇನ್ನು ಶಾಲೆ ಯಾಕೆಂದು ಪಂಡಿತರೇ ಸೂಚಿಸಿದ್ದುದರಿಂದ ಪದ್ಮಾ ಸಂಕೋಚವಿಲ್ಲದೆ ಶಾಲೆಗೆ ಹೋಗುವುದನ್ನು ನಿಲ್ಲಿಸಿದ್ದಳು. ಆದರೆ ಸುಮಿತ್ರೆಗೆ 'ಪಬ್ಲಿಕ್' ಪರೀಕ್ಷೆ ಇಂದು ಸರ್ವಸ್ವವಾಗಿತ್ತು. ತಂಗಿ ಬರುವ ಸಡಗರದ ನೆಪದಿಂದ ಒಂದು ದಿನ ಶಾಲೆಗೆ ಹೋಗಿರಲಿಲ್ಲ. ಆದರೆ ಇಂದು ಕೂಡ ಆರೀತಿ ಹೋಗದಿರಲು ಅವಳು ಬಯಸಲಿಲ್ಲ. ಮನೆಯಲ್ಲಿ ಅಳಿಯ ಬಂದಿರುವ ಮೊದಲದಿನವಾದುದರಿಂದ "ಇವತ್ತು ಒಂದು ದಿನ ಮನೆಯಲ್ಲಿ ಇರಬಾರದೇ ಸುಮೀ" ಎಂದು ಪಂಡಿತರು ಕೇಳಿದರೂ ಸುಮಿತ್ರೆ "ಇಲ್ಲ ಅಪ್ಪಯ್ಯ. ಮಧ್ಯಾಹ್ನ ಊಟಕ್ಕೆ ಕೂಡ ನಾನು ಬರುವುದಿಲ್ಲ. ಸ್ಪೆಶ್ಯಲ್ ಕ್ಲಾಸು ಇದೆ" ಎಂದು ಹೇಳಿ ಶಾಲೆಗೆ ಹೊರಟಿದ್ದಳು. ತಂಗಿಗೆ ಗ್ರಹಕೃತ್ಯ, ಗಂಡನ ಆತಿಥ್ಯಗಳ ಕುರಿತು ಸೂಕ್ಷ್ಮವಾಗಿ ತಿಳಿಸಿಹೇಳಿ ಶಾಲೆಗೆ ಹೋಗಿದ್ದಳು.

ಆದರೆ ಶಾಲೆಯಲ್ಲಿ ಕುಳಿತ ಸುಮಿತ್ರೆಯ ಮನಸ್ಸು ಮನೆಯ ಕುರಿತು ಚಿಂತಿಸುತ್ತಿತ್ತು. ಶಾಲೆಗೆ ಬಂದ ಮೇಲೆ "ಅಯ್ಯೋ, ಇವತ್ತು ನಾನು ಬರಬಾರದಿತ್ತು. ಪದ್ಮಾ ಸಂಕೋಚದಿಂದ ಏನೆಲ್ಲ ಮಾಡುತ್ತಾಳೋ, ಎಷ್ಟು

ಕಷ್ಟಪಡುತ್ತಾಳೊ.'' ಎಂದು ಕಳವಳವಾಯಿತು. ತಾನು ಬೇಕೆಂದೇ ಓಡಿ ಬಂದಿದ್ದೇನೆ. ಒಂದು ದಿನ ಶಾಲೆ ನಿಂತಲ್ಲಿ 'ಪಬ್ಲಿಕ್' ಹಾಳಾಗುವುದು ಅಷ್ಟರಲ್ಲೇ ಇದೆ ಎಂದು ಮನಸ್ಸು ಹಳಿಯಲಾರಂಭಿಸಿತು. ಪದ್ಮಾಳಿಗೆ ತೊಂದರೆಯಾಗಬೇಕು, ಆ ಹಿಂಸೆಯಿಂದ ತನಗೆ ಸುಖವಾಗಬೇಕು ಎಂಬ ಕೆಟ್ಟ ಆಸೆಯಿಂದ ತಾನು ಓಡಿ ಬಂದಿದೇನೆಯೆ ಎಂದು ಸುಮಿತ್ರೆ ನೊಂದು ಕೊಂಡಳು. ತಾಯಿಯಿರದ ಪದ್ಮೆಯನ್ನು ಆ ರೀತಿ ಒಬ್ಬಂಟಿಗಳಾಗಿ ಬಿಟ್ಟು ಬಂದುದು ಸರಿಯಲ್ಲವೆಂದು ಸುಮಿತ್ರೆಯ ಮನಸ್ಸಿಗೆ ಹೊಳೆದಾಗ ಆಕೆಗೆ ಅತೀವ ವೇದನೆಯಾಯಿತು.

ಸಂಜೆ ಶಾಲೆ ಮುಗಿದ ಮೇಲೆ ಸುಮಿತ್ರೆ ಓಡುತ್ತಲೇ ಮನೆಯ ಕಡೆ ಹೋದಳು ಮಧ್ಯಾಹ್ನ ಊಟವಿರದ್ದರಿಂದ ಹೊಟ್ಟೆ ಹಸಿದಿದ್ದರೂ ಅದರ ಪರಿವೆಯಿಲ್ಲದೆ ಮಾರ್ಕೆಟಿನ ತನಕ ಹೋಗಿ ಎರಡು ದಂಡೆ ಅರಳುಮಲ್ಲಿಗೆ ಯನ್ನು ಕೊಂಡುಕೊಂಡೇ ಮನೆಯ ದಾರಿ ಹಿಡಿದಳು.

ಆದರೆ ಮನೆಗೆ ಬರುವಾಗ ಮನೆಯಲ್ಲಿ ಪದ್ಮಾವತಿಯೂ ಇರಲಿಲ್ಲ. ಗೋಪೀನಾಥರಾಯರೂ ಇರಲಿಲ್ಲ. ಮಗಳ ದಾರಿ ಕಾಯುತ್ತ ಕುಳಿತಿದ್ದುದು ಪಂಡಿತರು ಮಾತ್ರ.

ಮಗಳ ಕೈಯಲ್ಲಿ ಹೂವಿನ ಚೆಂಡನ್ನು ಕಂಡೇ ಆಕೆಯ ಉದ್ದೇಶವನ್ನು ಊಹಿಸಿ ಪಂಡಿತರು ಹೇಳಿದರು.

"ಗಂಡ ಹೆಂಡತಿ ವಾಕಿಂಗ್ ಹೋಗಿದ್ದಾರೆ ಸುಮೀ. ಸಂಜೆ ಮೂರ್ತಿ ರಾಯರು ಒಂದು ಪೀರಿಯಡ್ ಇರಲಿಲ್ಲವಾದಕಾರಣ ಬೇಗ ಬಂದಿದ್ದರು. ಅವರೂ ಜೊತೆಗಿದ್ದರು. ಬಹುಶಃ ಅವರಲ್ಲಿಗೆ ಹೋಗಿಯೇ ತಿರುಗಲು ಹೋಗಿರಬಹುದು. ಸಿನೆಮಾಕ್ಕೆ ಹೋದರೂ ಹೋಗಬಹುದೆಂದು ತೋರು ತ್ತದೆ. ಬಾ. ಊಟಮಾಡು. ಬೆಳಗಿನಿಂದ ಏನೂ ಇಲ್ಲ."

ಆದರೆ ಈಗ ಸುಮಿತ್ರೆಗೆ ತಂದೆಯ ಕಕುಲಾತಿ ಬೇಕಿರಲಿಲ್ಲ. ಹಸಿವು ಹಿಂಗುವ ಅಗತ್ಯವಿರಲಿಲ್ಲ. ತನಗಾದ ನಿರಾಸೆಯ ವೇದನೆಯ ಉಪಶಮನ ಬೇಕಾಗಿದ್ದಿತು. ತಂದ ಹೂವನ್ನು ಅಂಗಳದಲ್ಲಿ ತುಳಸಿಗೆ ಮುಡಿಸಿ ಸುಮಿತ್ರೆ ಪಿಟ್ಟೆನ್ನದೆ ಒಳಹೋದಳು. "ರಾತ್ರಿ ಬಂದ ಮೇಲಾದರೂ ತಂಗಿಗೆ ಮುಡಿಸು ತ್ತೇನೆ" ಎಂದು ಸಮಾಧಾನ ತಂದುಕೊಂಡು ಮನೆಗೆಲಸದಲ್ಲಿ ತೊಡಗಿದಳು.

ಒಂದು ಬದಿಯಲ್ಲಿ ಪುಸ್ತಕ ಬಿಡಿಸಿಕೊಂಡು ರಾತ್ರೆಯ ಅಡುಗೆಯ ಸಿದ್ಧತೆ ನಡೆಸಿದ್ದ ಮಗಳನ್ನು ಹುಡುಕಿಕೊಂಡೇ ಪಂಡಿತರು ಅಡುಗೆಯ ಮನೆಗೆ ಬಂದರು.

" ಅವರಿಗೆ ರಜೆ ಇನ್ನು ಹತ್ತೇ ದಿನ ಇರುವುದಂತೆ ಸುಮೀ. ಅಷ್ಟರಲ್ಲಿ ಮುಂಬಯಿ ಸೇರಬೇಕು. "

" ಹೂಂ. "

" ಅದರೊಳಗೆ ನಿಷೇಕದ ಶಾಸ್ತ್ರವೊಂದು ಆಗಬೇಕು. ಪದ್ಮೆಯನ್ನು ಕರೆದುಕೊಂಡು ಹೋಗುವುದು ಖಂಡಿತವಂತೆ. "

" ಹೌದು. "

" ನನ್ನನ್ನು ಜೊತೆಗೆ ' ಬಾ ' ಎಂದು ಕೇಳುತ್ತಿದ್ದಾರೆ. ಮೋಹನ ರಾಯರೂ ಹಾಗೆಯೇ ಹೇಳುತ್ತಿದ್ದರು. "

ಈ ಮಾತಿಗೆ ಸುಮಿತ್ರೆ ಮೌನ.

" ಹೋದರೆ ಈ ಆಪರೇಶನ್ನೋ ಗೀಪರೇಶನ್ನೋ ಮುಗಿಸಿಬಿಡಬಹು ದೆಂದು ಕಾಣುತ್ತದೆ. "

" ಹೌದು. "

" ಮೂರ್ತಿರಾಯರೂ ಹಾಗೆಯೇ ಹೇಳಿದರು. "

ಈ ಮಾತಿಗೂ ಸುಮಿತ್ರೆ ಮೌನ.

" ನಾನು ಹೋದರೆ ನೀನು ಇಲ್ಲಿ ಒಬ್ಬಳೇ ಇರಬೇಕಾಗುತ್ತದಲ್ಲ ಸುಮೀ. ಮೂರ್ತಿರಾಯರು ತಮ್ಮ ಮನೆಯಲ್ಲಿ ಒಂದೆರಡು ತಿಂಗಳು ಇದ್ದುಬಿಡಲಿ ಎಂದು ಹೇಳಿದರು. ಅದು ಎಷ್ಟಾದರೂ ಸಾಧ್ಯವೆ ? "

ಈಗ ಮಾತ್ರ ಸುಮಿತ್ರೆಯ ಉತ್ತರ ತಂದೆಯ ಮಾತು ಮುಗಿಯುವುದ ರೊಳಗಾಗಿಯೇ ಬಂತು.

" ನನ್ನ ವಿಚಾರ ಯೋಚನೆ ಮಾಡಬೇಡಿ ಅಪ್ಪಯ್ಯ. ನಿಮಗೆ ಆಪರೇ ಶನ್ ಆಗುವುದಾದರೆ, ಮನಸ್ಸಿದ್ದರೆ ಖಂಡಿತ ಹೋಗಿ. "

" ಆದರೆ ಪರೀಕ್ಷೆಯ ಸಮಯ ನೀನು ಒಬ್ಬಳೇ ಹೇಗೆ ಇರುತ್ತೀ ಸುಮೀ. ಮೂರ್ತಿರಾಯರು ಹೇಳಿದರೆಂದು ಅವರ ಮನೆಯಲ್ಲಿ ಇರುವುದು ಸಾಧ್ಯವೆ ? ಅಲ್ಲಿ ಜಾಗ ಕೂಡ ಸಂಕೋಚ "

ಸುಮಿತ್ರೆ ಈಗಲೂ ಮೌನ.

" ಆದರೆ ಪದ್ಮಾ ' ಬನ್ನಿ ಅಪ್ಪಯ್ಯ ' ಎಂದು ಹೇಳುವುದನ್ನು ನೋಡು ವಾಗ ಹೋಗೋಣವೇ ಎಂದು ಕಾಣುತ್ತದೆ. ಯಾರೂ ಜೊತೆಗಿರದೆ ಹೋಗ ಬೇಕು. ಎಲ್ಲಿ ಮಂಗಳೂರು, ಎಲ್ಲಿ ಮುಂಬಯಿ. "

ಸುಮಿತ್ರೆ ಈ ಮಾತಿಗೂ ಉತ್ತರ ಹೇಳಲಿಲ್ಲ. ಆದರೆ ಆಕೆಯ ಕಣ್ಣಲ್ಲಿ ಕೂಡಲೆ ನೀರು ತುಂಬಿತು. " ಪದ್ಮೆಗೆ ಗಂಡನಾದರೂ ಇದ್ದಾರೆ. ತಾಯಿ ಯಿರದೆ ತಬ್ಬಲಿ ನನ್ನನ್ನು ನೀವೂ ಬಿಟ್ಟು ಹೋಗುತ್ತೀರಲ್ಲ ಅಪ್ಪಯ್ಯ. " ಎಂದು ಮನಸ್ಸಿನಲ್ಲಿ ದುಃಖದ ತೆರೆಯೆದ್ದಾಗ ಆಕೆ ಮುಖವನ್ನು ತಂದೆಗೆ ಕಾಣ ದಂತೆ ಆಕಡೆ ತಿರುಗಿಸಿದಳು.

" ನೀನು ಮಾತನಾಡುವುದೇ ಇಲ್ಲ. ಬಹುಶಃ ನಿನಗೆ ನಾನು ಹೋಗು ವುದು ಇಷ್ಟವಿಲ್ಲವೆಂದು ಕಾಣುತ್ತದೆ." ಎಂದು ಪಂಡಿತರು ಹೇಳಿದರು.

ಸುಮಿತ್ರೆ ಮಾತನಾಡಿದರೆ ತನ್ನ ದುಃಖದ ಪರಿಚಯ ತಂದೆಗಾಗಿ ಅವರ ಮನ ನೋಯಬಹುದೆಂದು ಮುಖ ತಿರುಗಿಸಲೇ ಇಲ್ಲ. ಸುಮಿತ್ರೆಯ ಮೌನ ತನ್ನ ಅಭಿಪ್ರಾಯವನ್ನು ಸಮರ್ಥಿಸಿದೆಯೆಂದು ತಿಳಿದ ಪಂಡಿತರು ಮತ್ತೆ ಮಾತನಾಡದೆ ಮುಖಮಂಟಪದತ್ತ ನಡೆದರು.

ಗೋಪಿ ಪದ್ಮಾವತಿಯರು ಸಿನೆಮಾ ನೋಡಲು ಹೋಗಿರಲಿಲ್ಲವಾದರೂ ಮನೆಗೆ ಮರಳುವಾಗ ಘಂಟೆ ಎಂಟರ ಸುಮಾರಿಗೆ ಬಂದಿತ್ತು. ತಂಗಿಯ ಮಾತು ಮುಖಮಂಟಪದಲ್ಲಿ ಕೇಳಿಸಿದರೂ ಸುಮಿತ್ರೆ ಅಡುಗೆಯಮನೆ ಬಿಟ್ಟು ಬರಲಿಲ್ಲ. ಪದ್ಮಾ ತುಂಬಿದ ಉತ್ಸಾಹದಿಂದ ' ಅಕ್ಕಾ ' ಎಂದು ಕರೆದುದು ಕೇಳಿಸಿದರೂ ಸುಮಿತ್ರೆ ಓ ಕೊಡಲಿಲ್ಲ. ಅಡುಗೆಯ ಮನೆಯ ಬಾಗಿಲಿ ನಿಂದಲೇ ಅಂಗಳಕ್ಕಿಳಿದು ತುಳಸಿಯ ಮೇಲಿರಿಸಿದ್ದ ಮಲ್ಲಿಗೆಯ ದಂಡೆಯನ್ನು ತರಲೆಂದು ಸುಮಿತ್ರೆ ಹೊರಡಲೆದ್ದಾಗ ಪದ್ಮಾವತಿಯೇ ಧಾವಿಸಿ ಅಡುಗೆಯ ಮನೆಗೆ ಬಂದಳು. " ಕೇಳಿಸುವುದಿಲ್ಲವೇನೇ.... ತೆಗೋ " ಎಂದು ತಂಗಿ ಹೊಸದಾಗಿ ತಂದು ಕೈಯ್ಯಲ್ಲಿ ಹಿಡಿದು ತೋರಿಸಿದ ಮಲ್ಲಿಗೆಯ ದಂಡೆಯನ್ನು ನೋಡಿದಾಗ ಸುಮಿತ್ರೆಯ ಕರಳು ಕಿವುಚಿ ಬಂತು.

" ಅಲ್ಲಿಯೇ, ಲಕ್ಷ್ಮೀದೇವರ ಪಟದಡಿ ಇಟ್ಟುಬಿಡು ಪದ್ಮಾ. ಈಗ ಯಾರು ಈ ರಾತ್ರಿಗೆ ಮುಡಿದುಕೊಳ್ಳುತ್ತಾರೆ ?" ಎಂದು ಮೆಲ್ಲ ಹೇಳಿದಳು.

ತುಳಸಿಯ ಮೇಲಿದ್ದ ಮಲ್ಲಿಗೆಯ ದಂಡೆ ಬೆಳಗಿನ ತನಕವೂ ಹಾಗೆಯೇ ಇತ್ತು.

೯

ಹಿರಿಯ ಮಗಳಿಗೆ ತಾನು ಈಗ ಪದ್ಮಾವತಿಯ ಜೊತೆಗೆ ಮುಂಬಯಿಗೆ ಹೋಗುವುದು ಇಷ್ಟವಿಲ್ಲವೆಂದು ಪಂಡಿತರಿಗೆ ತಿಳಿದೊಡನೆಯೇ ಅವರು ಆ ವಿಚಾರ ಯೋಚಿಸುವುದನ್ನು ನಿಲ್ಲಿಸಿದರು. ಪದ್ಮೆಯ ಜೊತೆಗೆ ತಾನು ಖಂಡಿತ ಹೋಗುವುದಿಲ್ಲವೆಂಬ ನಿರ್ಧಾರವನ್ನು ಮಾಡಿ, ಮುಂಬಯಿಗೆ ಹೋಗುವುದೆಂದೇ ಆದರೆ ಅದು ಸುಮಿತ್ರೆಯ ಪರೀಕ್ಷೆ ಮುಗಿದು ರಜೆ ಬಂದಾಗ, ಜೊತೆಗೆ ಆಕೆಯನ್ನು ಕರೆದುಕೊಂಡೇ, ಎಂದು ನಿಶ್ಚಯಿಸಿದರು. ಈ ನಿಶ್ಚಯ ಮನಸ್ಸಿನಲ್ಲಿ ಮೂಡಿದೊಡನೆ ಜೊತೆಗೆ ಒಂದು ಆಶೆಯೂ ಚಿಗುರೊಡೆದು ಇಷ್ಟು ದಿನ ಪದ್ಮಾವತಿಯ ಮದುವೆಯ ಸಂಭ್ರಮದಿಂದ ಬದಿಗೆ ಸರಿದಿದ್ದ ಸುಮಿತ್ರೆಯ ಮದುವೆಯ ಪ್ರಶ್ನೆಯನ್ನು ಮುಂದೆ ತರದಿರಲಿಲ್ಲ. ಮುಂಬಯಿಯಲ್ಲಿ ನಮ್ಮವರು ಸಾಕಷ್ಟು ಮಂದಿ ಇದ್ದಾರೆ; ಮೆಟ್ರಿಕ್ ಮುಗಿಸುವ ಸುಮಿತ್ರೆಗೆ, ಡಾಕ್ಟರ್ ಮೋಹನರಾಯರ ಸಂಪತ್ತಿಕೆ, ಆತಿಥ್ಯ ಇವೆಲ್ಲ ಇರುವಾಗ ಯೋಗ್ಯ ಸಂಬಂಧವೊಂದನ್ನು ಹುಡುಕುವುದು ಕಷ್ಟವಾಗಲಾರದು, ಇದಕ್ಕಾಗಿ ಅಳಿಯ ಗೋಪೀನಾಥರಾಯರೂ ಬೇಕಾದಷ್ಟು ಪ್ರಯತ್ನಿಸಬಹುದು ಎಂದು ಪಂಡಿತರು ಮನಸ್ಸಿನಲ್ಲಿಯೇ ಮುಂಬಯಿಯ ಕನಸು ಕಾಣಲಾರಂಭಿಸಿದರು. ಈ ಸಂದರ್ಭದಲ್ಲಿ, ತನಗೊಂದು ಆಪರೇಶನ್ ಆಗಬೇಕಾಗಿದೆ; ಅದಕ್ಕಾಗಿ ತಾನು ಮುಂಬಯಿಗೆ ಹೋಗಬೇಕಾಗಿರುವುದು ಎಂಬ ವಿಚಾರವನ್ನು ಅವರು ಮರೆತಂತಿತ್ತು.

ಮಾವ ಮುಂಬಯಿಗೆ ಬರುವುದಿಲ್ಲವೆಂದು ನಿಶ್ಚಯವಾದೊಡನೆ ಗೋಪಿ ಮತ್ತಾರು ದಿನ ಮಂಗಳೂರಲ್ಲಿದ್ದು ಮುಂಬಯಿಗೆ ಹೊರಡುವುದಾಗಿ ನಿಶ್ಚಯಿಸಿದ. ಗೋಪಿ ಹೊರಡುವ ದಿನಕ್ಕೆ ಎರಡು ದಿನ ಮುಂಚೆ ನಿಷೇಕದ ಶಾಸ್ತ್ರ ಮುಗಿಸುವುದಾಗಿ ಪಂಡಿತರು ನಿಶ್ಚಯಿಸಿದರು. ಅದರ ಮಾರನೆಯ ದಿನ, ಅಂದರೆ ಗೋಪಿ ಹೊರಡುವ ಮುನ್ನಾದಿನ, ಶಾಲೆಯ ಅಧ್ಯಾಪಕ ವರ್ಗದ

ಸಹೋದ್ಯೋಗಿಗಳನ್ನೆಲ್ಲ ಕರೆದು ಕಾಫಿ ಉಪಹಾರದ ಸತ್ಕಾರ ಮಾಡಬೇಕೆಂದು ಪಂಡಿತರಿಗೆ ಆಸೆಯಿತ್ತು. ಮೂರ್ತಿಯೂ ಈ ಯೋಚನೆಗೆ 'ಬೇಡ' ಎನ್ನಲಿಲ್ಲ. ಅಂತೂ ಈ ಎಲ್ಲ ಸಂಭ್ರಮಗಳು ಜರಗಲು, ಹಾಗೆಯೇ ಪದ್ಮಾವತಿಯನ್ನು ಕಳುಹಿಸಿ ಕೊಡಲು ಸನ್ನಾಹ ನಡೆಸುವ ಸಡಗರದಲ್ಲಿ ದಿನಗಳು ಘಂಟಿಗಳಂತೆ ಉರುಳತೊಡಗಿದವು.

ಈ ಸಂದಿಗ್ಧ ಸಮಯದಲ್ಲಿ, ಪರೀಕ್ಷಾ ಕಾಲದಲ್ಲಿ ತಂದೆಯೂ ತನ್ನನ್ನು ಬಿಟ್ಟು ಹೋಗಬಹುದು ಎಂದು ತಿಳಿದಿದ್ದ ಸುಮಿತ್ರೆಗೆ ಪಂಡಿತರ ಬದಲಿದ ನಿರ್ಧಾರದಿಂದ ಸಂತೋಷವೇ ಆಯಿತು. ತಂಗಿಯ ಒಡನಾಟ ತಪ್ಪುವುದಲ್ಲಾ ಎಂಬ ಕಳವಳವಿದ್ದರೂ ಎಲ್ಲ ಗಲಭೆಯಿಂದ ವಿಮುಕ್ತಳಾಗಿ ತಂದೆಯನ್ನು ನೋಡಿಕೊಂಡು ಇರಬಹುದು ಎಂಬ ಸಂತೋಷದಿಂದಾಗಿ ಈ ಕಳವಳ ಸೀಮಿತವಾಗಿತ್ತು.

ಪದ್ಮಾವತಿಯ ನಿಷೇಕ ಹೆಚ್ಚೇನು ಆಡಂಬರವಿಲ್ಲದೆ ಜರಗಿದರೂ ಸುಮಿತ್ರೆ ಆದಿನ ಪದ್ಮಾವತಿಯ ನೆನಪಿನಲ್ಲಿ ಮರೆಯದ ದಿನವಾಗಿ ಉಳಿಯುವಂತೆ ಶಕ್ತಿ ಮೀರಿ ಪ್ರಯತ್ನಿಸಿದಳು. ಈ ಕೆಲಸದಲ್ಲಿ ಮೀರೆಯ ನೆರವಿಲ್ಲದಿದ್ದರೆ ಮಾತ್ರ ಅವಳು ಎಷ್ಟು ಯಶಸ್ವಿಯಾಗುತ್ತಿದ್ದಳೋ ಹೇಳುವಂತಿಲ್ಲ. ಹರೆಯದ ಹೊಸಲು ದಾಟುವ ಈ ಹಬ್ಬದ ಮೇಲ್ವಿಚಾರ ನೋಡಿಕೊಳ್ಳಲು ಮೀರೆಯೇ ಸರಿಯಾಗಿದ್ದ ಕಾರಣ ಅವಳ ನಿರ್ದೇಶನದಡಿ ಸುಮಿತ್ರೆ ಪರಿಚಾರಿಕೆಯಾಗಿ ತಂಗಿಯ ಪ್ರಣಯ ಜೀವನದ ಪ್ರಥಮ ರಾತ್ರಿ ಚಿರಸ್ಮರಣೀಯ ರಾತ್ರಿಯಾಗುವಂತೆ, ತಮ್ಮ ನಿತ್ಯದ ಓದಿನ ಆಟದ ಮಧುರಸ್ಮೃತಿಗಳ ಕೋಣೆಯನ್ನೆ ಸಿಂಗರಿಸಿ, ತನ್ನ ಮಾತಿನಲ್ಲಿ ರಸಿಕತೆಯನ್ನೂ, ಪರಿಹಾಸ್ಯವನ್ನೂ ತುಂಬಿ ಸೋದರಿ ಪದ್ಮಾಳನ್ನು ಅರಿಯದ ಗೋಪಿಗೆ ಆಜನ್ಮ ಜೊತೆಗಾತಿಯಾಗಿ ಇರುವಂತೆ ಒಪ್ಪಿಸುವ ಕೆಲಸವನ್ನು ತುಂಬ ಉತ್ಸಾಹದಿಂದಲೇ ಮಾಡಿದಳು.

ಆದರೆ ಅಂದು ಸ್ವಲ್ಪಮಟ್ಟಿಗೆ ಖಿನ್ನವಾಗಿದ್ದ ವ್ಯಕ್ತಿಯೆಂದರೆ ಮೂರ್ತಿ ಮಾತ್ರ. ಸುದ್ದಿ ತಿಳಿದಮೇಲೆ ಪಂಡಿತರು ಕೂಡ.

ನಿಷೇಕದ ದಿನ ಮಧ್ಯಾಹ್ನ ಪಂಡಿತರು ಯಾವ ವಿಶೇಷವನ್ನೂ ಹಚ್ಚಿಕೊಂಡಿರಲಿಲ್ಲ. ಮೂರ್ತಿಗೆ ಶಾಲೆ ಬಿಟ್ಟು ಬರುವುದು ಸಾಧ್ಯವಿರಲಿಲ್ಲವಾದ ಕಾರಣ ಮಧ್ಯಾಹ್ನ ಮೀರೆಯೊಬ್ಬಳನ್ನು ಬಿಟ್ಟು ಬೇರಾರೂ ಬಂದಿರಲಿಲ್ಲ.

ರಾತ್ರಿಯ ಊಟಕ್ಕೆ ಪಂಡಿತರು ಶಾಲೆಯ ಮುಖ್ಯೋಪಾಧ್ಯಾಯರನ್ನೂ ಸಂಸ್ಕೃತ ಪಂಡಿತ ಶ್ರೀಕಂಠ ಶಾಸ್ತ್ರಿಗಳನ್ನೂ ಕರೆದಿದ್ದರು. ಇವರಿಬ್ಬರೂ ಹೇಳಿದ ಹೊತ್ತಿಗೆ ಸರಿಯಾಗಿ ಬಂದಿದ್ದರೂ ಮೂರ್ತಿ ಮಾತ್ರ ಬಂದಿರಲಿಲ್ಲ. ಅದಕ್ಕೆ ಕಾರಣವೂ ಇತ್ತು.

ಅಂದು ಮಧ್ಯಾಹ್ನ ಪಂಡಿತ ಶ್ರೀನಿವಾಸರಾಯರನ್ನು ಹುಡುಕಿಕೊಂಡು ಯಾರೋ ಉಡುಪಿಯವರು ಶಾಲೆಗೆ ಬಂದಿದ್ದರು. ಪಂಡಿತರನ್ನು ಹುಡುಕಿಕೊಂಡು ಅವರು ಟೀಚರ್ಸ್ ರೂಮಿಗೆ ಬಂದಾಗ ಅಲ್ಲಿ ಲೆಕ್ಕದ ಅಧ್ಯಾಪಕ ಕುಡುಮತ್ತಾಯರ ಹೊರತಾಗಿ ಬೇರಾರೂ ಇದ್ದಿರಲಿಲ್ಲ. ಕುಡುಮತ್ತಾಯರು ಇದೇ ಶಾಲೆಯಲ್ಲಿ ಮೂರ್ತಿಗಿಂತಲೂ ಹೆಚ್ಚಿನ ಸರ್ವೀಸು ಮಾಡಿದ ಉಪಾಧ್ಯಾಯರು. 'ಒಂದು ಬಿ. ಎ. ಮುಗಿಸಲು ಹದಿನಾರು ಬಾರಿ ಪ್ರಯತ್ನ ಮಾಡಿದ್ದೇನೆ; ಸುಮ್ಮಗೇನಲ್ಲ' ಎಂದು ತಮ್ಮ ಪರಾಜಯದ ಇತಿಹಾಸವನ್ನು ತುಂಬ ಅಭಿಮಾನದಿಂದಲೇ ಹೇಳಿಕೊಳ್ಳುತ್ತಿದ್ದವರು. ಖಾಸಗಿ ಶಾಲೆಯಿದ್ದುದರಿಂದ 'ಸೀನಿಯಾರಿಟಿ' ನಿರ್ಬಂಧವಿರದೆ ಮೂರ್ತಿಗೆ ಅಸಿಸ್ಟಂಟ ಹೆಡ್ಮಾಸ್ತರರ ಪದವಿ ದೊರಕಿದಂದಿನಿಂದ ಕುಡುಮತ್ತಾಯರ ಅಭಿಮಾನಕ್ಕೆ ಏಟು ಕೊಟ್ಟಂತಾಗಿತ್ತು. ಅಂದಿನಿಂದ ಅವರು ಮೂರ್ತಿಯನ್ನು ನೋಡುವ ರೀತಿಯಲ್ಲಿಯೂ ಗಮನಾರ್ಹ ಬದಲಾವಣೆಯಾಗಿತ್ತು. ಮೂರ್ತಿ ಪಂಡಿತರ ಆಪ್ತ ಸ್ನೇಹಿತನಾಗಿದ್ದುದರಿಂದ ಪಂಡಿತರನ್ನೂ ಕುಡುಮತ್ತಾಯರು ಒಂದು ತೆರನಾದ ತಿರಸ್ಕಾರ ದೃಷ್ಟಿಯಿಂದ ನೋಡುತ್ತಿದ್ದರು. ಆದರೆ ಮೂರ್ತಿ ಇದಾವುದನ್ನೂ ಗಮನಿಸಿರಲಿಲ್ಲ. ಕುಡುಮತ್ತಾಯ-ಮೂರ್ತಿಯರ ವೈಷಮ್ಯ ಬಿಡುವಿನ ವೇಳೆಯಲ್ಲಿ ಟೀಚರ್ಸ್ ರೂಮಿಗೆ ಸಾಕಷ್ಟು ಟೀಕೆ ಪ್ರತಿಟೀಕೆಗಳಿಗವಕಾಶ ಕೊಡುತ್ತಿದ್ದಿತಷ್ಟಲ್ಲದೆ ಬೇರೇನನ್ನೂ ಮಾಡಿರಲಿಲ್ಲ.

ಇಂದು ಶ್ರೀನಿವಾಸರಾಯರನ್ನು ಕೇಳಿಕೊಂಡು ಯಾರೋ ಹೊಸಬರು ಕುಡುಮತ್ತಾಯರ ಬಳಿಗೆ ಬಂದಾಗ, ಟೀಚರ್ಸ್ ರೂಮಿನಲ್ಲಿ ಯಾರೂ ಇರದ ಸಂಧಿಯನ್ನು ಮೂರ್ತಿಯ ಕುರಿತು ತನಗಿದ್ದ ದ್ವೇಷವನ್ನು ಕೆದರಿಸಿಕೊಳ್ಳಲು ಉಪಯೋಗಿಸಬಹುದೆಂದು ತಿಳಿದ ಅವರು ಬಂದವರನ್ನು ಗಲಿಬಿಲಿಯಲ್ಲಿ ಕೆಡವಿದರು.

"ಯಾರು ಕನ್ನಡ ಪಂಡಿತ ಶ್ರೀನಿವಾಸರಾಯರೇನು ? ಖಾಯಂ ಕನ್ನಡ ಪಂಡಿತರು, ಅಲ್ಲವೆ ? ಹಾಗೆ ಹೇಳಿ. ಈಗ 'ಟೆಂಪರರಿ' ಕನ್ನಡ ಪಂಡಿತರು ಇರುವವರು ಶ್ರೀನಿವಾಸರಾಯರಲ್ಲ. ಖಾಯಂ ಪಂಡಿತರು ರಜೆಯಲ್ಲಿದ್ದಾರೆ."

"ನಮಗೆ ಶ್ರೀನಿವಾಸರಾಯರನ್ನು ಕಾಣಬೇಕಿತ್ತು. ಅವರು ಇಲ್ಲಿಯ ಕನ್ನಡ ಪಂಡಿತರಂತೆ. ಅವರು ಶಾಲೆಯಲ್ಲಿಲ್ಲವಾದರೆ ಅವರ ವಿಳಾಸವನ್ನಾದರೂ ತಿಳಿಸಿದ್ದರೆ ತುಂಬ ಉಪಕಾರವಾಗುತ್ತದೆ."

"ಹೊ ! ನಿಮಗೆ ಅವರ ಪರಿಚಯ ಕೂಡ ಇಲ್ಲ ಹಾಗಾದರೆ. ಏನಾದರೂ ವಿಶೇಷ ಕೆಲಸವಿತ್ತೇ. ಮದುವೆ–ಗಿದುವೆ ?"

ತಮ್ಮ ಉದ್ದೇಶವನ್ನು ಚೆನ್ನಾಗಿಯೇ ಗುರುತಿಸಿದರೆಂದು ಸಂತೋಷದಿಂದ ಮುಖದಲ್ಲಿ ನಗು ತಂದುಕೊಂಡು ಬಂದವರು ಹೇಳಿದರು.

"ಹೌದು. ಅವರಿಗೆ ಮದುವೆಗೆ ಸರಿಯಾದ ಹುಡುಗಿಯರಿದ್ದಾರಂತಲ್ಲ. ಈ ವಿಚಾರ ಮಾತನಾಡಬೇಕಿತ್ತು."

"ಮದುವೆಗೆ ಸರಿಯೇನು, ಮುಗುಳಿಯೇನು ಸ್ವಾಮಿ ? ಕುದುರೆಗಳ ಹಾಗೆ ಬೆಳೆದಿದ್ದಾರೆ ಹುಡುಗಿಯರು. ಇಲ್ಲಿಯೇ ಓದುತ್ತಿದ್ದಾರೆ. ನಮಗೆ ಗೊತ್ತಿಲ್ಲವೆ? ಬೇಕಾದರೆ ನೀವೇ 'ಸಾಯನ್ಸ್ ರೂಮಿ'ನ ಹತ್ತಿರ ಹೋಗಿ ಬನ್ನಿ. ದೊಡ್ಡವಳು ಅಲ್ಲಿಯೇ ಇರಬಹುದು ಈಗ, ಆ ಸಾಯನ್ಸ್ ಮಾಷ್ಟ್ರು ಮೂರ್ತಿರಾಯರ ಒಟ್ಟಿಗೆ ನಗುತ್ತ, ಹರಟೆ ಹೊಡೆಯುತ್ತ."

ಬಂದವರಿಗೆ ಈ ಮಾತಿನ ಗೂಢಾರ್ಥ ಹೊಳೆಯಲಿಲ್ಲ.

"ನಮಗೆ ಸ್ವಲ್ಪ ಪ್ರಾಯ ಹೆಚ್ಚಾದರೂ ಚಿಂತಿಲ್ಲ ನೋಡಿ. ಹುಡುಗ, ನನ್ನ ತಮ್ಮ, ಬೊಂಬಾಯಿಯಲ್ಲಿ ದೊಡ್ಡ ಕೆಲಸದಲ್ಲಿದ್ದಾನೆ."

"ಹಾಗೇನು, ಚೆನ್ನಾಯಿತು. ಎರಡು ಹುಡುಗಿಯರಿಗೂ ಬೊಂಬಾಯಿ ಸಿಕ್ಕ ಹಾಗಾಯಿತು. ಹೋಗಿ ಮಾತನಾಡಿ."

"ಎರಡು ಹುಡುಗಿಯರಿಗೂ ! ಅಂದರೆ ದೊಡ್ಡವಳಿಗೆ ಮದುವೆಯಾಗಿಯಾಯಿತೆ, ಅಥವಾ ನಿಶ್ಚಯವಾಗಿದೆಯೆ ?"

"ದೊಡ್ಡವಳಿಗೆ ಹೇಗೆ ಸ್ವಾಮಿ ನಿಶ್ಚಯವಾಗುವುದು ? ಸಣ್ಣವಳಿಗೆ. ಸಣ್ಣವಳಿಗೆ ಮೊನ್ನೆ ಮದುವೆ ಆಯಿತು, ತಿರುಪತಿಯಲ್ಲಿ. ಊರಿನಲ್ಲಿ ಈ ಸುದ್ದಿ ಹರಡುವುದು ಬೇಕಿರಲಿಲ್ಲ. ಅದಕ್ಕೇ ತಿರುಪತಿಯಲ್ಲಾಯಿತು.

" ಹಿರಿಯ ಮಗಳಿಗೆ ಮದುವೆಯಾಗದೆ ಸಣ್ಣವಳಿಗೆ ಹೇಗಾಯಿತು ಸ್ವಾಮಿ. ನಮಗೆ ಅರ್ಥವಾಗುವುದಿಲ್ಲ."

" ನನಗೂ ಅರ್ಥವಾಗುವುದಿಲ್ಲ ಮಹಾರಾಯರೆ. ಆದರೆ ಮೂರ್ತಿ ರಾಯರಿಗೆ ಚೆನ್ನಾಗಿ ಅರ್ಥವಾಗಿರಬೇಕು. ಅವರೇ ಅಲ್ಲವೆ, ತಿರುಪತಿಯ ತನಕ ಹೋಗಿ ಈ ಮದುವೆ ಮಾಡಿಸಿ ಬಂದವರು ?"

" ಇವರು ಯಾರು ಮೂರ್ತಿರಾಯರು ? ನಮಗೆ ಅವರ ವಿಚಾರ ತಿಳಿ ದಿಲ್ಲ. ಅವರು ಪಂಡಿತರಿಗೆ ಸಂಬಂಧಿಕರೆ ? "

" ಓಹೊ ! ತುಂಬ ಸಂಬಂಧವಿದೆ. ನನಗೂ ನಿಮಗೂ ಇರುವಷ್ಟು. ಈಗಿನ ಕಾಲದಲ್ಲಿ ಸಂಬಂಧ ಯಾಕೆ ರಾಯರೆ ? ಸಂಬಂಧವಿಲ್ಲದೆ ಎಂಥೆಂಥ ಕೆಲಸಗಳೆಲ್ಲ ಆಗಿಹೋಗುತ್ತವೆ. "

" ಅಂದರೆ ? ಸ್ವಲ್ಪ ಸರಿಯಾಗಿ ಹೇಳಿ. ನಮಗೇನೂ ತಿಳಿದಿಲ್ಲ. ಒಂದು ನೆಂಟಸ್ತಿಕೆ ಕೂಡಿಸಲು ಬಂದಿದ್ದೇವೆ. ನೀವು ತಿಳಿದವರು ಸ್ವಲ್ಪ ಬಿಡಿಸಿ ಹೇಳಿ ದ್ದರೆ ಉಪಕಾರವಾಗುತ್ತಿತ್ತು. "

" ನನಗೆ ಮಡಿಸಿ ಹೇಳುವ ಅಭ್ಯಾಸವೇ ಇಲ್ಲ ರಾಯರೆ. ಎಲ್ಲಾ ಬಿಡಿ ಸಿಯೆ. ದೊಡ್ಡವಳ ಮದುವೆ ನಿಮ್ಮ ತಮ್ಮನೊಂದಿಗೆ ಆಗಬೇಕೆಂದಿದ್ದರೆ ಮೂರ್ತಿರಾಯರನ್ನು ಕೇಳಿ ಹೋಗಿ. ಅವರು ಸಮ್ಮತಿ ಕೊಡದೆ ಮದುವೆ ಯಾಗುವ ಹಾಗೆ ಇಲ್ಲ. "

" ಇವರು ಯಾರು ಸ್ವಾಮೀ, ಮೂರ್ತಿರಾಯರು ? "

" ಏನಯ್ಯಾ ಇದು ! ಒಮ್ಮೆ ಹೇಳಿದರೆ ತಿಳಿಯುವುದಿಲ್ಲವೆ ? ನಮ್ಮ ಶಾಲೆಯ ಸಾಯನ್ಸ್ ಟೀಚರ್. ಅವರಿಗೆ ಸುಮಿತ್ರೆಯ—ಅದೇ ಆ ಹುಡುಗಿಯ ಹೆಸರು—ಪರಿಚಯ ಬಹಳ. ಅವರು ಹೇಳಿದ ಹಾಗೆ ಪಂಡಿತರು ಕೇಳುತ್ತಾರೆ. ಸುಮಿತ್ರೆಯ ಮದುವೆ ಆಗಬಾರದೆಂದು ಮೂರ್ತಿರಾಯರು ಹೇಳಿದರೆ, ಬ್ರಹ್ಮ ನಿಂದಲೂ ಆ ಮದುವೆ ಮಾಡಿಸಲು ಸಾಧ್ಯವಿಲ್ಲ. "

" ಅಲ್ಲ, ಎರಡನೆಯ ಹುಡುಗಿಯ ಮದುವೆ ಮೊದಲೇ ಹೇಗಾಯಿತು? ಎಲ್ಲಾದರೂ ಇದೆಯೇ ಹೀಗಾಗುವುದು ? "

ಆಸಾಮಿ ತನ್ನ ದಾರಿಗೆ ಬರುತ್ತಿದ್ದಾನೆ ಎಂದು ತಿಳಿಯಲು ಕುಡು ಮತ್ತಾಯರಿಗೆ ಹೆಚ್ಚು ಸಮಯ ಬೇಕಾಗಿರಲಿಲ್ಲ.

"ಅದೇ ರಹಸ್ಯ ಸ್ವಾಮೀ, ಅದೇ ರಹಸ್ಯ. ಈ ಮೂರ್ತಿರಾಯರು ಮೊನ್ನೆ ಮೊನ್ನೆ ಬಂದ ಹುಡುಗ. ನಾನು ಪಂಡಿತರ ಜೊತೆಗೆ ಹದಿನೈದು ವರ್ಷ ಸರ್ವೀಸು ಮಾಡಿದ್ದೇನೆ ಸ್ವಾಮೀ. ಆದರೂ........"

"ಏನು ಆದರೂ........ಸಂಕೋಚವಿಲ್ಲದೆ ಹೇಳಿ ಸ್ವಾಮೀ. ಇದು ಮದುವೆ. ಒಂದು ಜೀವಕ್ಕೆ ಇನ್ನೊಂದು ಜೀವ ಜನ್ಮಾವಧಿ ಕೂಡಿಸುವ ಮಹಾ ಕೆಲಸ. ತಿಳುವಳಿಕೆಯಿಲ್ಲದೆ ತಪ್ಪಾಗಿ ಹೋಗಬಾರದು."

"ಸತ್ಯ ಹೇಳಿದಿರಿ ಆಚಾರ್ಯರೆ. ನೀವು ಆಚಾರ್ಯರೇನು? ಉಡುಪಿಯವರ ಹಾಗೆ ಕಾಣುತ್ತೀರಾದ ಕಾರಣ ಹಾಗೆ ಕರೆದೆ. ಬೇಸರ ಮಾಡಬೇಡಿ. ಸತ್ಯ ಹೇಳಿದಿರಿ. ಆದರೂ ಇದು ರಹಸ್ಯ ನೋಡಿ. ಸುಮಿತ್ರೆಯ ಮೇಲೆ ಮೂರ್ತಿರಾಯರಿಗೆ ಇಷ್ಟು ಚೆನ್ನಾದ ಹಿಡಿತ ಹೇಗೆ ಸಿಕ್ಕಿದೆಯೆಂಬುದು ರಹಸ್ಯ ಸ್ವಾಮೀ. ಆದರೆ, ಇದೆಲ್ಲ ಏನೆಂದರೂ ಏನಾದರೂ........"

ಕುಡುಮತ್ತಾಯರು ಹೀಗೆ ಹೇಳುತ್ತಿದ್ದ ಹೊತ್ತಿಗೇ ಮೂರ್ತಿ ಟೀಚರ್ಸ್ ರೂಮಿನ ಕಡೆ ಬರುತ್ತಿದ್ದ. ಮುಖ್ಯೋಪಾಧ್ಯಾಯರು ಕರೆಕಳುಹಿಸಿದ್ದದು ರಿಂದ ಅವರ ಕೋಣೆಗೆ ಹೋಗಲೆಂದು ಟೀಚರ್ಸ್ ರೂಮನ್ನು ಹಾದು ಮೂರ್ತಿ ಹೋಗಬೇಕಾಗಿದ್ದಿತು. ಮೂರ್ತಿಯನ್ನು ನೋಡಿದ ಕುಡುಮತ್ತಾಯರು ಕೂಡಲೆ ಮಾತು ನಿಲ್ಲಿಸಿದರು. ಮೂರ್ತಿ ಕೋಣೆಯೊಳಗೆ ಬರುತ್ತಿದ್ದಂತೆಯೆ,

"ಇವರೇ ನೋಡಿ ಮೂರ್ತಿರಾಯರು. ಇವರನ್ನು ವಿಚಾರಿಸುತ್ತಿದ್ದಿರಲ್ಲ." ಎಂದು ಹೇಳಿ ಮೂರ್ತಿಯನ್ನುದ್ದೇಶಿಸಿ "ಮೂರ್ತಿರಾಯರೇ ಇವರಿಗೆ ನಿಮ್ಮೊಡನೆ ಮಾತನಾಡಲಿದೆಯಂತೆ, ನೋಡಿ." ಎಂದು ಹೇಳಿದವರೇ ಅಲ್ಲಿಂದೆದ್ದು ಹೋದರು.

ಬಂದವರು ಉಭಯ ಸಂಕಟದಲ್ಲಿ ಬಿದ್ದರು. ಕುಡುಮತ್ತಾಯರ ಮಾತು ಕೇಳಿದಮೇಲೆ ನೆಂಟಸ್ತಿಕೆಯ ಮಾತನ್ನು ಇಲ್ಲಿಗೇ ಕೊನೆಗೊಳಿಸಿ ಹಿಂದಿರುಗೋಣ ಎಂದು ಅವರು ಅರ್ಧ ನಿಶ್ಚಯಮಾಡಿಯಾಗಿತ್ತು. ಆದರೆ ಮೂರ್ತಿಯನ್ನು ಇದಿರಿಗೆ ನಿಲ್ಲಿಸಿ ಪರಿಚಯ ಮಾಡಿಕೊಟ್ಟು ಕುಡುಮತ್ತಾಯರು ಹೋಗಿಬಿಟ್ಟಾಗ ಮೂರ್ತಿಯೊಡನೆ ಮಾತನಾಡದೆ ಬೇರೆ ದಾರಿಯಿದ್ದಿಲ್ಲ. ಮೂರ್ತಿಯೇ ಮೊದಲು ಮಾತನಾಡಿದ.

" ಏನು ಬೇಕಾಗಿತ್ತು ನಿಮಗೆ ?"

" ವಿಶೇಷ ಏನೂ ಇಲ್ಲ. ಶ್ರೀನಿವಾಸರಾಯರ ವಿಳಾಸ ಬೇಕಾಗಿತ್ತು. ಒಂದು ನೆಂಟಸ್ತಿಕೆಯ ವಿಚಾರ ಮಾತನಾಡಬೇಕಿತ್ತು." ಎಂದರು. ಈ ಮಾತು ಆಡಿದಮೇಲೆ ಹಾಗೆ ಹೇಳಬಾರದಿತ್ತು ಎಂದು ಅವರಿಗನಿಸಿದುದು. ಬರೇ ಶ್ರೀನಿವಾಸರಾಯರ ವಿಳಾಸ ಕೇಳಿ ಅಲ್ಲಿಂದ ಜಾರಿದ್ದರೆ ಏನೊಂದು ತೊಂದರೆ ಯಿದ್ದಿಲ್ಲ. ಆದರೆ ' ನೆಂಟಸ್ತಿಕೆ'ಯ ಮಾತು ಹೇಳಿದುದರಿಂದ ಪ್ರಸಂಗ ಕೈಮೀರಿ ಹೋಗಿತ್ತು.

" ಎರಡೇ ನಿಮಿಷ ಇಲ್ಲಿ ನಿಲ್ಲಿ. ಈಗ ಬರುತ್ತೇನೆ." ಎಂದು ಮೂರ್ತಿ ಹೆಡ್ಮಾಸ್ಟರರ ಕೋಣೆಗೆ ಹೋಗಿ ಕೆಲಸ ತೀರಿಸಿಕೊಂಡು ಅವಸರದಿಂದಲೆ ಮರಳಿ ಬಂದ.

" ನೆಂಟಸ್ತಿಕೆಯ ಮಾತು ಹೇಳಿದಿರಿ. ಶ್ರೀನಿವಾಸರಾಯರ ಮಗಳ ವಿಚಾರ ಎಂದು ಕಾಣುತ್ತದೆ. ಅವರು ಈಗ ರಜೆಯಲ್ಲಿದ್ದಾರೆ. ಅವರು ನನ್ನ ಆಪ್ತ ಸ್ನೇಹಿತರು. ನೀವು ಎಲ್ಲಿಂದ ಬಂದಿರಿ ?" ಎಂದು ಕೇಳಿದ.

ಕುಡುಮತ್ತಾಯರು ಹಾಕಿದ್ದ ಸಂಶಯದ ತಳಹದಿಯಲ್ಲಿ, ಮೂರ್ತಿಯ ಆಸಕ್ತಿ ಬಂದವರ ಮೇಲೆ ಪರಿಣಾಮ ಮಾಡದಿರಲಿಲ್ಲ.

" ನಾನು ಬಂದದ್ದು ಉಡುಪಿಯಿಂದ. ಅಲ್ಲಿ ಮುನ್ಸೀಫ್ ಕೋರ್ಟಿನ ಗೆಳೆಯರೊಬ್ಬರು ಶ್ರೀನಿವಾಸರಾಯರ ಮಕ್ಕಳ ವಿಚಾರ ಹೇಳಿದರು. ನನ್ನ ತಮ್ಮ ಬೊಂಬಾಯಿಯಲ್ಲಿದ್ದಾನೆ. ಅವನಿಗೆ ಮದುವೆಯಾಗಬೇಕಾಗಿದೆ. ಮಂಗಳೂರಿಗೆ ಬರುವ ಕೆಲಸವಿತ್ತು. ಬಂದಾಗ ನೋಡಿಕೊಂಡು ಹೋಗೋಣ ಎಂತ ಇಲ್ಲಿಗೆ ಬಂದೆ." ಎಂದು ಅವರು ಹೇಳಿದರು.

" ಎಲ್ಲಿ ಉಳಿದುಕೊಂಡಿದ್ದೀರಿ ?" ಎಂದು ಮೂರ್ತಿ ಕೇಳಿದ.

" ಕೃಷ್ಣಭವನದಲ್ಲಿದ್ದೇವೆ " ಎಂದು ಹೇಳಿ ಬಂದವರು ಎರಡನೆಯ ತಪ್ಪುಮಾಡಿದರು. ಆ ಮೇಲೆ ಆ ತಪ್ಪನ್ನು ಮರೆಸಲೆಂದು " ಆದರೆ ನಮಗೆ ನಾಳೆ ಸಂಜೆಯೊಳಗೆ ಉಡುಪಿಗೆ ಮರಳಬೇಕಾಗಿದೆ. ಇನ್ನೊಂದು ವಾರದಲ್ಲಿ ಪುನಃ ಮಂಗಳೂರಿಗೆ ಬರಬೇಕು. ಈಗ ಶ್ರೀನಿವಾಸರಾಯರನ್ನು ಕಾಣು ವುದು ಸಾಧ್ಯವಿಲ್ಲವಾದರೆ ಇನ್ನೊಂದು ಸಲ ಬಂದಾಗ ನೋಡುತ್ತೇವೆ. ಅವರ ವಿಳಾಸ ಕೊಡುತ್ತೀರಾ ?" ಎಂದು ಕೇಳಿದರು.

“ ನಾಳೆ ಸಂಜೆಯುವರೆಗೆ ಇದ್ದೀರಲ್ಲ. ನಾಳೆ ಬೆಳಿಗ್ಗೆ ಬನ್ನಿ. ಶ್ರೀನಿವಾಸ ರಾಯರು ಮನೆಯಲ್ಲಿಯೇ ಇರುತ್ತಾರೆ. ಆ ಹೊತ್ತಿಗೆ ನಾನೂ ಇರುತ್ತೇನೆ. ಆಗದೇ ? ” ಎಂದು ಹೇಳಿ ಮೂರ್ತಿ ಪಂಡಿತರ ಮನೆಯ ವಿಳಾಸ ಬರೆದು ಕೊಟ್ಟ.

“ ಬರುತ್ತೇನೆ, ನಮಸ್ಕಾರ ” ಎಂದು ಹೇಳಿ ಬಂದವರು ಅಲ್ಲಿಂದ ಹೋದರು.

ಸಂಜೆ ಮೂರ್ತಿ ಪಂಡಿತರಿಗೆ ಹೇಳದೇನೇ ಕೃಷ್ಣಭವನಕ್ಕೆ ಹೋಗಿದ್ದ. ಅದೃಷ್ಟವಶಾತ್ ಮಧ್ಯಾಹ್ನ ಶಾಲೆಗೆ ಬಂದಿದ್ದವರು ಬಾಗಿಲಲ್ಲೇ ಸಿಕ್ಕಿದರು. ಮೂರ್ತಿಯನ್ನು ಅಲ್ಲಿ ಕಂಡಾಗ ಅವರ ಆಶ್ಚರ್ಯ, ಸಂಶಯ ಎರಡೂ ಹೆಚ್ಚಿದವು. ಮೂರ್ತಿಗೆ ಅವರ ತಮ್ಮ ಸಿಗದಿದ್ದರೂ ಅವನ ವಿಚಾರ ಬೇಕಾದಷ್ಟು ಮಾಹಿತಿಯನ್ನು ತುಂಬ ಪ್ರಯಾಸದಿಂದ ಸಂಗ್ರಹಿಸಿದ. ಈ ಪ್ರಯಾಸದಿಂದಾಗಿ ಅವನಿಗೆ ಆಶ್ಚರ್ಯವಾಗಿತ್ತು. ತನ್ನ ಪ್ರಶ್ನೆಗಳಿಗೆ ಇವರೇಕೆ ಇಷ್ಟು ಉದಾಸೀನರಾಗಿ ಉತ್ತರ ಕೊಡುತ್ತಿದಾರೆ, ಸುಮಿತ್ರೆಯ ವಿಚಾರ ಅಥವಾ ಪಂಡಿತರ ವಿಚಾರ ಇವರು ಏನನ್ನೂ ಏಕೆ ಕೇಳುತ್ತಿಲ್ಲ ಎಂಬುದು ಅವನಿಗೆ ಸಮಸ್ಯೆಯಾಗಿಯೇ ಉಳಿಯಿತು. ಸುಮಿತ್ರೆಗೂ ಮದುವೆಯಾದರೆ, ಅದೂ ಮುಂಬಯಿಗೇ ಅವಳು ಹೋಗುವಂತಾದರೆ ದೊಡ್ಡದೊಂದು ಭಾರ ಇಳಿದಂತಾಗುವುದಲ್ಲಾ, ಪಂಡಿತ ಕುಟುಂಬಕ್ಕೆ ಸುಖವಾಗುವುದಲ್ಲಾ ಎಂಬ ಆಸೆಯಿಂದ ಅವನು ಸುಮಿತ್ರೆಯ ಮದುವೆಯ ವಿಚಾರ ಪುನಃ ಆಸಕ್ತಿ ವಹಿಸಿ ಓಡಿ ಬಂದಿದ್ದ. ಆದರೆ ಕೇಳಿಕೊಂಡು ಬಂದ ಈ ಆಗಂತುಕರ ಉದಾಸೀನ ಭಾವ ನೋಡಿದಾಗ ಅವನಿಗೆ ಅಷ್ಟೇನು ಆಸೆ ಉಳಿಯಲಿಲ್ಲ. ಆದರೂ “ ನಾಳೆ ಬೆಳಿಗ್ಗೆ ಬರುತ್ತೀರಲ್ಲ, ಹಾಗಾದರೆ ” ಎಂದು ಹೋಗುವಾಗ ಕೇಳಿದ. “ ಆಗಲಿ ಬರುತ್ತೇವೆ ” ಎಂದು ಅವರು ಉತ್ತರ ಕೊಟ್ಟರು.

ಮೂರ್ತಿಯ ಖಿನ್ನತೆಗೆ ಇದೇ ಕಾರಣವಾಗಿತ್ತು. ಅವನು ಬರಲು ತಡವಾದುದಕ್ಕೂ ಇದೇ ಕಾರಣ. ಬಂದವನು ಪಂಡಿತರ ಬಳಿ ಅವನು ಏನನ್ನೂ ಹೇಳಲಿಲ್ಲ. ಶ್ರೀಕಂಠಶಾಸ್ತ್ರಿಗಳೊಡನೆ ಪಂಡಿತರು ಹರಟೆ ಕೊಚ್ಚುತ್ತಿದ್ದರು. ಮುಖ್ಯೋಪಾಧ್ಯಾಯರು ಗೋಪಿಯೊಡನೆ ಮಾತನಾಡಲಾರಂಭಿಸಿದರು.

ಊಟದ ವೇಳೆಯೂ ಮೂರ್ತಿ ಮೌನವಾಗಿಯೇ ಇದ್ದ. ಊಟ

ಮುಗಿದ ಮೇಲೆ ಹೆಡ್ಮಾಸ್ತರರು " ಇನ್ನೆಲ್ಲ ಹೆಂಗಸರ ರಾಜ್ಯದ ಉಸ್ತುವಾರಿ. ನಮಗೇನು ಕೆಲಸ ಬಾಕಿ ಉಳಿದಿದೆ. ಬರುತ್ತೀರೇನು ಶಾಸ್ತ್ರಿಗಳೆ ? " ಎಂದಾಗ ಶಾಸ್ತ್ರಿಗಳು ಮೂರ್ತಿಯ ಕಡೆ ನೋಡಿ ಹೊರಡಲಿದ್ದರು. ಮೂರ್ತಿ " ನಾನು ಸ್ವಲ್ಪ ಹೊತ್ತು ನಿಂತು ಬರುತ್ತೇನೆ. ಪಂಡಿತರ ಹತ್ತಿರ ಸ್ವಲ್ಪ ಮಾತನಾಡುವ ಕೆಲಸವಿದೆ. " ಎಂದ. ಪಂಡಿತರು ಆಗ ಆಶ್ಚರ್ಯದಿಂದ ಮೂರ್ತಿಯ ಕಡೆ ನೋಡಿದರು. ಶಾಸ್ತ್ರಿಗಳು " ಸರಿ. ಬರುತ್ತೇವೆ, ಹಾಗಾದರೆ " ಎಂದು ಹೇಳಿ ಹೆಡ್ಮಾಸ್ತರರ ಜೊತೆಗೆ ಅಲ್ಲಿಂದ ಹೊರಬಿದ್ದರು.

ಮುಖಮಂಟಪದಲ್ಲಿ ಬೇರಾರೂ ಇರಲಿಲ್ಲ. ನವದಂಪತಿಗಳ ಶಯ್ಯಾಗೃಹದ ಬಾಗಿಲ ಬಳಿ ಪದ್ಧತಿಯಂತೆ ಬಾಗಿಲು ತಡೆಯುವ ವಿಧಿ ಮುಗಿಸಲು ಮೀರೆ ಸುಮಿತ್ರೆಯರ ಸುತ್ತ ಹೆಣ್ಣುಮಕ್ಕಳ ಪರಿವಾರ ನೆರೆದಿತ್ತು. ಅಲ್ಲಿಯ ಕುಲುಕುಲು ನಗೆ, ರಸಮಯ ವಾತಾವರಣ ಇವುಗಳಿಂದೆಲ್ಲ ಮೂರ್ತಿ ನಿರ್ಲಿಪ್ತನಾಗಿದ್ದಂತೆ ಕಂಡುಬರುತ್ತಿತ್ತು. ಪಂಡಿತರೇ ಕೇಳಿದರು.

" ಏನು ಮೂರ್ತಿರಾಯರೆ, ಮಾತನಾಡುವ ಕೆಲಸ ಉಂಟೆಂದು ಹೇಳಿದಿರಿ. ಶಾಸ್ತ್ರಿಯನ್ನು ಓಡಿಸಲು ಉಪಾಯವೋ ಅಥವಾ ಏನಾದರೂ ವಿಶೇಷವಿದೆಯೆ ?"

ಮೂರ್ತಿ ನಸುನಗುತ್ತ ಉತ್ತರಕೊಟ್ಟ.

" ಸುಮಿತ್ರೆಯನ್ನು ಕೇಳಿಕೊಂಡು ಪುನಃ ಯಾರೋ ಬಂದಿದ್ದಾರೆ, ಪಂಡಿತರೆ."

" ಹಾಗೇನು ? ಎಲ್ಲಿದ್ದಾರೆ ?"

" ಶಾಲೆಗೆ ಬಂದಿದ್ದರು. ಕೃಷ್ಣಭವನದಲ್ಲಿದ್ದಾರೆ. ಆದರೆ ಕೇಳಿಕೊಂಡು ಶಾಲೆಯ ತನಕ ಬಂದವರು, ನಾನು ಕೇಳಿದ ಪ್ರಶ್ನೆಗಳಿಗೆ ಯಾಕೆ ಸರಿಯಾಗಿ ಉತ್ತರಕೊಡಲಿಲ್ಲವೆಂದು ಆಶ್ಚರ್ಯವಾಗುತ್ತದೆ."

" ಏನು ಕೇಳಿದಿರಿ ? ಇಲ್ಲಿಗೆ ಬರುತ್ತಾರೇನು ?"

" ಅವರ ಅವಸರ ನೋಡಿದರೆ, ಇಲ್ಲಿಗೆ ಹೇಗಾದರೂ ಬಂದು ನೋಡಿ ಬೇಗ ಓಡಿಹೋದರೆ ಸಾಕೆಂದು ಕಾಣುವ ಹಾಗಿದೆ. ನಾಳೆ ಬೆಳಿಗ್ಗೆ ಬರುತ್ತೇವೆಂದಿದ್ದಾರೆ. ಹುಡುಗ ಮುಂಬಯಿಯವನಂತೆ. ಸ್ವಲ್ಪ ದೊಡ್ಡ ಹುಡಗಿ

ಯಾದರೂ ಚಿಂತಿಲ್ಲ ಎಂದು ಹೇಳಿದರು. ಆ ಕಾರಣ ಎರಡನೆಯ ಸಂಬಂಧವೋ ಏನೆಂದು ಸಂದೇಹ. ಹುಡುಗನಿಗೆ ಮೂವತ್ತು ವರ್ಷ ಪ್ರಾಯವಂತೆ."

ಪಂಡಿತರು ಸ್ವಲ್ಪ ಹೊತ್ತು ಮಾತನಾಡಲಿಲ್ಲ. ಪದ್ಮಾವತಿಯ ಮದುವೆಯ ಸಡಗರದಲ್ಲಿ ಸುಮಿತ್ರೆಗಾದ ಅನ್ಯಾಯ ಕೂಡ ಮರೆಗೆ ಸರಿದಿತ್ತು. ಈಗ ಆಸೆಯ ಪ್ರಪಂಚ ಪುನಃ ಕಣ್ಣಮುಂದೆ ಬಂದಾಗ ಅವರು ಮೂಕರಾದುದರಲ್ಲಿ ಆಶ್ಚರ್ಯವಿರಲಿಲ್ಲ.

" ಅಕ್ಕ ತಂಗಿಯರಿಬ್ಬರೂ ಮುಂಬಯಿಯಲ್ಲಿರುವಂತಾದರೆ ನಿಮಗೂ ಎಷ್ಟೋ ಸಮಾಧಾನ ಪಂಡಿತರೆ." ಎಂದು ಮೂರ್ತಿ ಹೇಳಿದ.

" ಹೌದು ಮೂರ್ತಿರಾಯರೆ. ಇನ್ನು ಸುಮಿಯ ಅದೃಷ್ಟದಲ್ಲಿ ಈಸಲ ಏನು ಬರೆದಿದೆಯೋ. ನಾಳೆ ಬೆಳಿಗ್ಗೆಯೋ ಸಿದ್ಧಳಾಗಬೇಕೇ ?" ಎಂದು ಕೇಳಿದರು.

" ಹೌದು. ಎಂಟು ಘಂಟೆಯ ಸುಮಾರಿಗೆ ಬರುತ್ತೇವೆಂದು ಹೇಳಿದ್ದಾರೆ. ನಾನೂ ಇರುತ್ತೇನೆಂದು ಹೇಳಿದ್ದೇನೆ. ನಾನು ಶಾಲೆಗೆ ಹೊರಡುವುದರೊಳಗೆ ಬಂದರೆ ಒಳ್ಳೆಯದೆಂದು ತಿಳಿಸಿದ್ದೇನೆ. ಬಂದಾರು." ಎಂದು ಮೂರ್ತಿ ಹೇಳಿದ.

ಅಷ್ಟರಲ್ಲಿ ಮೀರೆ, " ಹೋಗೋಣ ?" ಎಂದು ಗಂಡನನ್ನು ಕೇಳುತ್ತ ಮುಖಮಂಟಪಕ್ಕೆ ಬಂದಿದ್ದಳು. ಸುಮಿತ್ರೆಯೂ ಜೊತೆಯಲ್ಲಿದ್ದಳು. ಉಳಿದ ನೆರೆಕರೆಯ ಹೆಣ್ಣು ಮಕ್ಕಳೆಲ್ಲ ಚೆದರಲಾರಂಭಿಸಿದ್ದರು.

" ಸರಿ. ಇನ್ನೇನು " ಎಂದು ಮೂರ್ತಿ ಹೊರಡಲಿದ್ದ. ಪಂಡಿತರೊಡನೆ ' ನಾಳೆ ಸಿಗುತ್ತೇನೆ ಹಾಗಾದರೆ " ಎಂದು ಹೇಳಿದ. ಸುಮಿತ್ರೆಯನ್ನು ನೋಡಿ ನಕ್ಕು " ಬರುತ್ತೇನೆ ಸುಮೀ " ಎಂದು ಹೇಳಿ ಮೀರೆಯ ಜೊತೆಗೆ ಮನೆಯ ದಾರಿ ಹಿಡಿದ.

ಎಲ್ಲ ಚೆದರಿದ ಮೇಲೆ ಮುಖಮಂಟಪದಲ್ಲಿ ಉಳಿದುದು ಸುಮಿತ್ರೆ ಮತ್ತು ಪಂಡಿತರು ಮಾತ್ರ. ಎಲ್ಲರೂ ಹೋದಮೇಲೆ ಸುಮಿತ್ರೆಯ ಹೃದಯದಲ್ಲಿಯೂ ಕಸಿವಿಸಿಯಾಯಿತು. ತಂಗಿ ಪದ್ಮಾವತಿಯ ಅಗಲುವಿಕೆಯ ನೋವು ಮೊದಲು ಸ್ಪಷ್ಟವಾಗಿ ಅನುಭವಕ್ಕೆ ಬರುವಂತಾಯಿತು. ಆದರೂ ತಂದೆ

ಯನ್ನುದ್ದೇಶಿಸಿ "ಹಾಸಿಗೆ ಹಾಸಿದ್ದೇನೆ, ಅಪ್ಪಯ್ಯ. ಸುಮ್ಮಗೆ ತಡಮಾಡುವುದೇಕೆ ? ಮಲಗಿಕೊಳ್ಳಿ" ಎಂದಳು. ಪಂಡಿತರು

"ಸುಮಿ" ಎಂದು ಮೃದುವಾಗಿ ಕರೆದರು. ತಂದೆಯ ದನಿ ಕೇಳಿಯೇ ಸುಮಿತ್ರೆಗಾದ ಆಶ್ಚರ್ಯ ಅಷ್ಟಿಷ್ಟಲ್ಲ. "ಏನಪ್ಪಯ್ಯ ?" ಎಂದಳು. "ಇಲ್ಲಿ ಬಾ" ಎಂದು ಇನ್ನೂ ಮೃದುವಾಗಿಯೇ ಮಗಳನ್ನು ಕರೆದು ತಾನು ಕುಳಿತಿದ್ದ ಬೆಂಚಿನಲ್ಲಿ ತನ್ನ ಪಕ್ಕದಲ್ಲಿಯೇ ಕುಳ್ಳಿರಿಸಿಕೊಂಡು "ಒಂದು ಮಾತು ಹೇಳುತ್ತೇನೆ. ಕೇಳುತ್ತೀಯಾ ?" ಎಂದರು.

"ನೀವು ಹೇಳಿದ್ದನ್ನು ಯಾವಾಗಲಾದರೂ ವಿರೋಧಿಸಿದ್ದೇನೆಯೇ ಅಪ್ಪಯ್ಯ ?'' ಎಂದು ಸುಮಿತ್ರೆ ಕೊಂಚ ಅಧೀರೆಯಾಗಿ ಹೇಳಿದಳು.

"ಅದಕ್ಕಲ್ಲ ಚಿನ್ನಾ. ನಾಳೆ ಬೆಳಿಗ್ಗೆ ಯಾರೋ ಬರುತ್ತಾರೆಂದು ಕಾಣುತ್ತದೆ. ಹೇಗಿದ್ದರೂ ತಿಂಡಿತೀರ್ಥ ಆಗಬೇಕು. ಸ್ವಲ್ಪ ಹೆಚ್ಚಿಗೆ ಮಾಡು. ನಾಳೆ ಶಾಲೆಗೆ ಹೇಗೂ ಹೋಗಲಿಕ್ಕಾಗುವುದಿಲ್ಲ. ನಿನ್ನ ಬಟ್ಟೆಬರೆ ಸ್ವಲ್ಪ ಚೆನ್ನಾಗಿ ನೋಡಿಕೊಳ್ಳಮ್ಮ."

ಈಗ ಮಾತ್ರ ಸುಮಿತ್ರೆ ಸಿಡಿದೆದ್ದಳು.

"ಏನು ಹೇಳುತ್ತೀರಿ ಅಪ್ಪಯ್ಯ. ಯಾರದು ಬರುವವರು ? ಪದ್ಮೆಯ ಮದುವೆಯಾದ ಮೇಲೂ ಈ ರಗಳೆ ನಿಲ್ಲುವುದಿಲ್ಲವೆ ? ಈಗ ಯಾಕೆ ಮದುವೆಯ ಆಲೋಚನೆ ? ನಾನೇನು ಬಂದ ಬಂದವರಿಗೆ ಮುಖತೋರಿಸಿ ಕುಳಿತುಕೊಳ್ಳಲು ಸಂತೆಯ ಸಾಮಾನೇ ?"

ಇಷ್ಟು ಸಿಟ್ಟಿನಿಂದ ಸುಮಿತ್ರೆ ತಂದೆಯೊಡನೆ ಎಂದೂ ಮಾತನಾಡಿರಲಿಲ್ಲ. ಅವಳ ಮಾತು ಕೇಳಿ ಪಂಡಿತರಿಗೂ ತುಂಬ ನೋವಾಯಿತು. ಆದರೂ ಅದನ್ನು ತೋರಿಸದೆ ಮೌನವಾಗಿಯೇ ಹೇಳಿದರು.

"ನಿನ್ನ ಒಳ್ಳೆಯದಕ್ಕಲ್ಲದೆ, ನಾನು ಯಾವಾಗಲಾದರೂ ನನ್ನ ಮಗುವಿಗೆ ಕೆಡುಕಾಗಬೇಕೆಂದು ಯೋಚಿಸುತ್ತೇನೆಯೆ ಸುಮೀ." ಎಂದು ಕೇಳಿದಾಗ ಸುಮಿತ್ರೆಗೆ ದುಃಖ ತಡೆಯಲಾಗಲಿಲ್ಲ. ಅಲ್ಲಿಂದೆದ್ದು ಒಳಗೋಡಿದಳು.

ಪಂಡಿತರು ಮಗುವಿನ ದುಃಖದ ಉಪಶಮನಕ್ಕೆಂದು ಒಳಗೆ ಬರಲಿಲ್ಲ. ಬಂದರೆ ಆ ದುಃಖ ಇನ್ನಷ್ಟು ಹೆಚ್ಚಾಗುವುದೆಂದು ಅವರಿಗೆ ತಿಳಿದಿತ್ತು. ಆ

ಠರಣ ಮುಖಮಂಟಪದಲ್ಲಿ ಮೌನವಾಗಿ ಹಾಗೆಯೇ ಕುಳಿತಿದ್ದರು—ರಾತ್ರಿ ದಿನೆರಡು ಹೊಡೆಯುವತನಕ.

ಸುಮಿತ್ರೆಯೂ ದುಃಖಾತಿರೇಕದಿಂದ ಒಳಗೆ ಹೋಗಿ ಬರಿನೆಲದಲ್ಲಿ ಮಲಗಿದಳು. ಬೆಳಗಿನತನಕ ಏಳಲೇ ಇಲ್ಲ. ಹದಿನೈದು ವರ್ಷ ಕಾಲ ಜೊತೆಗೇ ಮಲಗಿರುತ್ತಿದ್ದ ಪದ್ಮಾವತಿ ಇಂದು ಜೊತೆಗಿರಲಿಲ್ಲ. ತಂಗಿ ತಿರುಪ ಗೆ ಹೋದ ಎಂಟು ಹತ್ತು ದಿನಗಳಲ್ಲಿಯೇ ಆಕೆ ಈ ಅಗಲಿಕೆಯ ನೋವನ್ನು ಸ್ವಲ್ಪ ಸ್ವಲ್ಪ ಅನುಭವಿಸಿದುದು. ಇಂದು ಮಂಗಳೂರಲ್ಲಿ ಮುದ್ದಿನ ತಂಗಿ ಬೇರೆಯಾದ ದುಃಖ, ಜೊತೆಗೆ ತಂದೆ ಈಗ ತಂದಿದ್ದ ವರ್ತಮಾನ ಇವು ಗಳಿಂದಾಗಿ ಸುಮಿತ್ರೆಗೆ ಆರಾತ್ರಿ ದುಃಖರಾತ್ರಿಯಾಗಿತ್ತು. ಆ ಏಕಾಂತತೆಯ ದುಃಖದ ಅನುಭವಕ್ಕೆ ಸಾಕ್ಷಿ ಹೇಳಲು ಹೊರಗಿದ್ದುದು ಮುದಿತಂದೆ, ಒಳಗಿ ದ್ದುದು ದೊಡ್ಡ ಜಪಾನೀ ಗಡಿಯಾರ.

ಸುಮಿತ್ರೆ ಬೆಳಿಗ್ಗೆ ಐದು ಘಂಟೆಗೇ ಎದ್ದಳು. ಪಂಡಿತರು ಮುಖ ಮಂಟಪದಲ್ಲಿ ಮಲಗಿದ್ದರು. ರಾತ್ರೆಯ ಕೊನೆಯ ಭಾಗದಲ್ಲಿ ಅವರಿಗೆ ಸ್ವಲ್ಪ ಹತ್ತಿರಬೇಕು. ಈಗ ಚೆನ್ನಾಗಿ ನಿದ್ದೆ ಬಂದಿತ್ತು. ಸುಮಿತ್ರೆ ಬೆಳಗಿನ ಕೆಲಸಗಳನ್ನೆಲ್ಲ ತೀರಿಸಿ, ರಂಗವಲ್ಲಿಯಿಕ್ಕಿ ಬಂದು ಕಾಫಿ ತಯಾರಿಸುವವರೆಗೂ ಯಾರೂ ಏಳಲಿಲ್ಲ. ತಂದೆಯ ಹಿಂದಿನ ದಿನದ ಸೂಚನೆಯನ್ನು ಸುಮಿತ್ರೆ ಮರೆತಿರಲಿಲ್ಲ. ತನ್ನ ಮನಸ್ಸಿನ ಎಲ್ಲ ಭಾವನೆಗಳನ್ನು ಹತ್ತಿಕ್ಕಿ ತಂದೆಗೆ ವಿಧೇಯ ಳಾಗಿ ನಡೆಯುವುದೊಂದೇ ಆಕೆಗೆ ಉಳಿದ ದಾರಿಯಾಗಿತ್ತು. ಗೋಪಿಯಿದ್ದು ದರಿಂದ ಬೆಳಗಿನ ಕಾಫಿಯ ಜೊತೆಗೆ ತಿಂಡಿಯಾಗಲೇಬೇಕಿತ್ತು. ಮೂರನೆಯ ದಿನವೇ ಹೊರಡಲಿದ್ದ ತಂಗಿಗೆ ದಾರಿಯ ಉಪಯೋಗಕ್ಕೆಂದು ಸುಮಿತ್ರೆ ರವೆ ಲಾಡು ಮಾಡಿದ್ದಳು. ಜೊತೆಗೆ ಖಾರದ ತಿಂಡಿಯೆಂದು ವಾಂಗೀಬಾತ್ ತಯಾರಿಸಿದಳು. ಪ್ರಸ್ತಕ್ಕೆಂದು ತಂದು ಉಳಿದಿದ್ದ ನಾಲ್ಕು ನೇಂದ್ರ ಬಾಳೆಯ ಕಾಯಿಗಳನ್ನು ಕರಿದು ಇನ್ನೊಂದು ತಿಂಡಿ ತಯಾರಿಸಿದಳು. ಇಷ್ಟಾಗುವಾಗ ಚೆನ್ನಾಗಿ ಬೆಳಕಾಗಿತ್ತು. ಪಂಡಿತರ ಪ್ರಾತಃಸ್ತೋತ್ರ ಪಠಣ ಮುಖಮಂಟಪ ದಿಂದ ಕೇಳಿಬರುತ್ತಿತ್ತು.

ಸುಮಿತ್ರೆಯ ಭವಿಷ್ಯ ತೀರ್ಮಾನದ ಇನ್ನೊಂದು ದಿನ ಬೆಳಗಾಯಿತು.

ಅಡುಗೆಯ ಮನೆಯ ಎಲ್ಲ ಕೆಲಸಗಳು ಸಾಧಾರಣ ತೀರಿದಂತೆಯೇ ಎಂದು ತಿಳಿದು ಸುಮಿತ್ರೆ ತಾಯಿಯ ಸೀರೆಯನ್ನು ಪೆಟ್ಟಿಗೆಯಿಂದ ಹೊರಗೆ ತೆಗೆಯಲೆಂದು ಅಲ್ಲಿಂದ ಹೊರಟಾಗ ಪದ್ಮಾ ಎದ್ದು ಬಂದಳು.

ಎದ್ದು ಬಂದ ಪದ್ಮಾ ಸುಮಿತ್ರೆಯ ಹುಡುಗಾಟದ ತಂಗಿ ಮುಗ್ಧೆ ಪದ್ಮಾವತಿಯಾಗಿರಲಿಲ್ಲ. ಅರಳು ಮಲ್ಲಿಗೆಯಂತೆ, ಅಮರ ಅಪ್ಸರೆಯಂತೆ ಕಾಣುತ್ತಿದ್ದ ತಂಗಿಯನ್ನು ನೋಡಿ ಸುಮಿತ್ರೆಗೆ ತನ್ನ ದುಃಖವೆಲ್ಲ ಮರೆತು ಹೋಯಿತು. ನಗುವಿನಿಂದ ಗುಳಿಬಿದ್ದ ತಂಗಿಯ ಹಾಲುಗೆನ್ನೆಗಳನ್ನು ಮುದ್ದಿಡ ಬೇಕೆಂದೆನಿಸಿತು.

" ಏನೇ ! ಎಷ್ಟುಬೇಗ ಎದ್ದುಬಿಟ್ಟೆಯೋ ?'' ಎಂದು ಸಂಭ್ರಮದಿಂದ ತಂಗಿಯನ್ನು ಕರೆದಳು.

ಆದರೆ ಅಕ್ಕನನ್ನು ನೋಡುತ್ತ ನಗುತ್ತ ಬಂದ ಪದ್ಮಾವತಿಯ ಮುಖ ತೀರ ಹತ್ತಿರಕ್ಕೆ ಬಂದಾಗ ಕಪ್ಪಿಟ್ಟಿತು. " ಏನಕ್ಕಾ ಇದು. ಕಣ್ಣು ಊದಿ ಕೊಂಡಿವೆ. ರಾತ್ರಿ ನಿದ್ದೆ ಮಾಡಿಲ್ಲವೇನೇ ?'' ಎಂದು ಕೇಳಿದಳು.

" ಇಲ್ಲವೆ, ಹುಚ್ಚಿ. ಹಸಿ ಕಟ್ಟಿಗೆ—ಒಲೆ ಹಿಡಿಯುವುದೇ ಇಲ್ಲ. ಅದಕ್ಕೇ ಕಣ್ಣು ಕೆಂಪಾಗಿವೆ." ಎಂದು ಹೇಳಿದವಳೇ ಸುಮಿತ್ರೆ ಅಲ್ಲಿ ನಿಲ್ಲದೆ ಪೌಡರ್ ಡಬ್ಬಿ ಹುಡುಕಿಕೊಂಡು ಕನ್ನಡಿಯಿದ್ದಲ್ಲಿಗೆ ಹೋದಳು.

ಮುಖ ತೊಳೆದು ಅಡುಗೆಯ ಮನೆಗೆ ಬಂದ ಪದ್ಮಾವತಿಗೆ ಅಕ್ಕನ ಸಂಭ್ರಮದ ಉಪಹಾರದ ತಯಾರಿ ಆಶ್ಚರ್ಯವನ್ನುಂಟುಮಾಡಿತು. " ಏನೇ ಇದು. ಟೀಪಾರ್ಟಿ ಸಂಜೆಗಲ್ಲವೇನೇ ?'' ಎಂದು ಕೇಳಿದಾಗ ಸುಮಿತ್ರೆ ದೂರ ದಿಂದಲೇ ಉತ್ತರಕೊಟ್ಟಳು. " ನಾಳೆ ಇಷ್ಟು ಹೊತ್ತಿಗೆ ನೀನು ಗಂಡನ ಜೊತೆ ಯಲ್ಲಿ ಬಸ್ಸಿನಲ್ಲಿ ಪದ್ಮಾ. ಇವೊತ್ತು ಕೊನೆಯದಿನ-ಜೊತೆಗೆ. ನಿನ್ನ ಬಾಯಿ ಸಿಹಿಮಾಡದಿದ್ದರೆ, ಬೊಂಬಾಯಿಗೆ ನಾನು ಬಂದರೆ ಉಪ್ಪುನೀರೇ ಕೊಡು ತ್ತೀಯೋ ಏನೋ " ಎಂದಳು. ಪದ್ಮಾವತಿಯ ನಗು ಮನೆತುಂಬ ಮರುದನಿ ಕೊಟ್ಟಿತು.

ಗೋಪಿ ಮುಖ ತೊಳೆದುಕೊಂಡು ಬಂದಾಗ ಮುಖಮಂಟಪದಲ್ಲಿ ಪಂಡಿತರು ಮಾತ್ರ ಇದ್ದರು. ತಮ್ಮ ಸಂಸಾರದಲ್ಲಿ ಈಗ ಗೋಪಿಯೂ ಒಬ್ಬ

ಅಧಿಕಾರಿ ಎಂದು ತಿಳಿದ ಪಂಡಿತರು ಅಂದಿನ ' ಕನ್ಯಾಪರೀಕ್ಷೆ 'ಯ ವಿಚಾರ ಅಳಿಯನಿಗೆ ತಿಳಿಸಿದರು. ಗೋಪಿಗೆ ಈ ಸುದ್ದಿ ಸ್ವಲ್ಪ ಆಶ್ಚರ್ಯವನ್ನುಂಟು ಮಾಡಿದರೂ ಸಂತೋಷವನ್ನು ಕೊಟ್ಟಿತು. ಹೀಗಾಗಿ ಸುಮಿತ್ರೆ ಜರತಾರಿ ಸೀರೆ ಯುಟ್ಟು ಬಂದಾಗ ಆಶ್ಚರ್ಯವಾದುದು ಪದ್ಮಾವತಿಗೆ ಮಾತ್ರ.

" ಇದೇನೇ ? ಇವೊತ್ತು ಹಬ್ಬವೇನೇ ?"

" ನೀನು ಮಂಗಳೂರಲ್ಲಿ ಕೊನೆಯ ದಿವಸ ಇರುವುದು ಹಬ್ಬವಲ್ಲ ವೇನೇ ?" ಎಂದು ಸುಮಿತ್ರೆ ತಂಗಿಯ ಬಾಯಿ ಮುಚ್ಚಿಸಿದಳು.

ಎಂಟು ಘಂಟೆಯ ಹೊತ್ತಿಗೆ ಮೂರ್ತಿ ಬಂದ. ಮೂರ್ತಿ ಬಂದೊಡನೆ ಮನೆಯವರೆಲ್ಲ ಕಾಫಿ ಉಪಹಾರ ಮುಗಿಸಿದರು. ಗಂಡಸರು ಮೂವರೂ ಮುಖಮಂಟಪದಲ್ಲಿ ಮಾತನಾಡುತ್ತ ಕುಳಿತರು. ಪದ್ಮೆಯ ಸಾಮಾನುಗಳ ' ಪ್ಯಾಕಿಂಗ್ ' ಕೆಲಸವನ್ನು ಅಕ್ಕ ತಂಗಿಯರು ಜೊತೆಗೂಡಿ ಮಾಡತೊಡ ಗಿದರು.

ಘಂಟೆ ಒಂಭತ್ತಾದರೂ ಪಂಡಿತರ ಮನೆಗೆ ಬೇರಾರೂ ಬರಲಿಲ್ಲ. ಮೂರ್ತಿಯ ಚಡಪಡಿಕೆ ಹೆಚ್ಚಾಯಿತು. ಹತ್ತು ನಿಮಿಷಕ್ಕೊಮ್ಮೆ ಬೀದಿಯ ತನಕ ಹೋಗಿ ಬರುತ್ತಿದ್ದ. ಒಂಭತ್ತೂವರೆಯಾದರೂ ಯಾರೂ ಬರದುದನ್ನು ಕಂಡು ಮೂರ್ತಿ ಶಾಲೆಗೆ ಹೋಗುವುದೆಂದು ಪಂಡಿತರ ಅನುಮತಿ ಪಡೆದು ಹೊರಟುಹೋದ.

ಹೊರಗಿನಿಂದ ಯಾವಾಗ ಕರೆಬರುವುದೆಂದು ಮನಸ್ಸಿಲ್ಲದ ಮನಸ್ಸಿ ನಿಂದ ಕಾಯುತ್ತಿದ್ದ ಸುಮಿತ್ರೆಗೆ ಮೂರ್ತಿ ಹೊರಟುಹೋದುದು ತಿಳಿದಾಗ ಆಶ್ಚರ್ಯವಾಯಿತು ಆದರೆ ಮಾತನಾಡಲಿಲ್ಲ. ಪಂಡಿತರು ಈ ನಿರಾಸೆಯ ಪೆಟ್ಟಿನಿಂದ ಮೌನ. ಗೋಪಿ ತಾಟಸ್ಥ್ಯನೀತಿ ವಹಿಸಿದ್ದ.

ಸುಮಿತ್ರೆಯ ಪರೀಕ್ಷೆ ವ್ಯರ್ಥ ಕಾಯುವಿಕೆಯಿಂದ ಕೊನೆಗಂಡಿತು.

" ಏನು ಕಾರಣ ಬರಲಿಲ್ಲವೋ " ಎಂದು ಪಂಡಿತರು ಹನ್ನೊಂದು ಘಂಟೆಯತನಕ ಹಾದಿ ನೋಡಿದರು. ಆಮೇಲೆ ಸಂಜೆಯ ಅಧ್ಯಾಪಕ ವರ್ಗದ ಸತ್ಕಾರದ ಸಿದ್ಧತೆಯ ಕಡೆ ಗಮನ ಕೊಡಬೇಕಿತ್ತು. ಒಬ್ಬ ಸ್ವಯಂಪಾಗಿ ಯನ್ನು ಬರಹೇಳಿದ್ದರು. ಮೀರೆಯೂ ಬಂದಿದ್ದಳು. ಜೊತೆಗೆ ಗೋಪಿ ಪದ್ಮಾ ವತಿಯರ ಸಾಮಾನಿನ ' ಪ್ಯಾಕಿಂಗ್ ' ಕೆಲಸ ಮುಗಿಯಬೇಕಿತ್ತು. ಹೀಗಾಗಿ ಪಂಡಿತರಿಗೆ ಸಂಜೆಯತನಕ ಆಲೋಚನೆಗೆ ಬಿಡುವು ದೊರಕಲಿಲ್ಲ.

ಸಂಜೆ ಆರು ಘಂಟೆಗೆ ಶಾಲೆಯ ಅಧ್ಯಾಪಕ ವರ್ಗದ ಎಲ್ಲ ಸದಸ್ಯರೂ ಬಂದಿದ್ದರು, ಕುಡುಮತ್ತಾಯರನ್ನುಳಿದು. ಕುಡುಮತ್ತಾಯರು ಬಾರದುದರ ಕಾರಣವನ್ನು ಪಂಡಿತರು ಒಬ್ಬ ಸಹೋದ್ಯೋಗಿಯೊಡನೆ ವಿಚಾರಿಸಿದಾಗ, ಅವರ ಹೆಂಡತಿಗೆ ಸೌಖ್ಯವಿರದ್ದರಿಂದ ಬರಲಾಗುವುದಿಲ್ಲವೆಂದು ಹೇಳಿ ಕಳುಹಿಸಿದ್ದಾರೆಂದು ತಿಳಿದುಬಂತು.

ಮೂರ್ತಿ ಬಂದವನೇ ಪಂಡಿತರೊಡನೆ ಬೆಳಗಿನ ಕಾಯುವಿಕೆಯ ಫಲಿತಾಂಶವೇನೆಂದು ಕೇಳಿದ. ಆದರೆ ಪಂಡಿತರ ಉತ್ತರದಿಂದ ಅವನಿಗೆ ನಿರಾಸೆಯಾಯಿತು. ಒಮ್ಮೆ ಕೃಷ್ಣಭವನದತನಕ ಹೋಗಿಬರೋಣವೇ ಎಂದೆನಿಸಿತು. ಆದರೆ ಸತ್ಕಾರದ ಗಲಾಟೆಯ ನಡುವೆ ಹೋಗುವಂತಿರಲಿಲ್ಲ. ಅಷ್ಟೇ ಅಲ್ಲದೆ ಗೋಪಿ ಮಾರನೆಯ ದಿನ ಹೋಗುವವನಿದ್ದುದರಿಂದ ಅವನನ್ನು ಬಿಟ್ಟು ಹೋಗುವಂತೆಯೂ ಇರಲಿಲ್ಲ.

ಅಂದಿನ ಸತ್ಕಾರದ ಸಂಭ್ರಮದಲ್ಲಿ ಶ್ರೀಕಂಠಶಾಸ್ತ್ರಿಗಳ ಮೌನ ಮಾತ್ರ ಪಂಡಿತರಿಗೆ ಆಶ್ಚರ್ಯವನ್ನುಂಟುಮಾಡಿತು. "ಎಲ್ಲ ಮುಗಿದ ಮೇಲೆ ನಿನ್ನ ಹತ್ತಿರ ಸ್ವಲ್ಪ ಮಾತನಾಡಲಿಕ್ಕಿದೆ ಶ್ರೀನಿವಾಸಾ" ಎಂದಿದ್ದರು. ಅವರು ಪಂಡಿತರನ್ನೂ, ಪಂಡಿತರು ಅವರನ್ನೂ ಸಂಬೋಧಿಸುತ್ತಿದ್ದುದು ಏಕವಚನದಲ್ಲೇ. ಶಾಲೆಯ ಕನ್ನಡ ಸಕ್ಕದ ಅಧ್ಯಾಪಕರ ಆತ್ಮೀಯತೆಯಿಂದಾಗಿ ಬಂದ ಸಲಿಗೆಯ ಸಂಪ್ರದಾಯ ಇದು.

ರಾತ್ರೆ ಎಂಟು ಘಂಟೆಯ ಹೊತ್ತಿಗೆ ಸತ್ಕಾರ ಉಡುಗೊರೆಗಳ ಕೆಲಸವೆಲ್ಲ ಮುಗಿದವು. ಮುಖ್ಯೋಪಾಧ್ಯಾಯರನ್ನೂ ಶ್ರೀಕಂಠಶಾಸ್ತ್ರಿಗಳನ್ನೂ ಬಿಟ್ಟು ಉಳಿದವರೆಲ್ಲ ಹೊರಟು ಹೋದರು. ಹೆಡ್ಮಾಸ್ತರರು ಗೋಪಿಯನ್ನು ಬೀಳ್ಕೊಡಲೆಂದು ಹೋದಾಗ ಶಾಸ್ತ್ರಿಗಳು ಪಂಡಿತರ ಬಳಿ ಬಂದರು.

"ಹೌದಾ ಶ್ರೀನಿವಾಸಾ. ಸುಮಿತ್ರೆಯನ್ನು ನೋಡಲಿಕ್ಕೆ ಯಾರಾದರೂ ಬಂದಿದ್ದರೆ ? ಅಥವಾ ಬರುವವರಿದ್ದಾರೆಯೆ ?"

ಇದರಿಂದ ಪಂಡಿತರಿಗೆ ಆಶ್ಚರ್ಯವಾಯಿತು. "ಹೌದು. ಇವೊತ್ತು ಬೆಳಿಗ್ಗೆ ಯಾರೋ ಬರುತ್ತೇವೆಂದು ಹೇಳಿದ್ದರಂತೆ ಮೂರ್ತಿರಾಯರ ಹತ್ತಿರ. ಎಲ್ಲ ಮಾಡಿಟ್ಟು ದಾರಿ ಕಾದು ಸಾಕಾಯಿತು. ಏನಾಯಿತೋ ಯಾರಿಗೆ ಗೊತ್ತು ?"

" ಅವು ಬೇರೆ ಯಾರೂ ಅಲ್ಲ ಶ್ರೀನಿವಾಸ. ಆ ಸಲ ವಿದ್ವಾನ್ ಪರೀಕ್ಷೆಗೆ ಒಬ್ಬರು ಬಂದು ನಮ್ಮಲ್ಲಿ ಉಳಕೊಂಡಿದ್ದರಲ್ಲ—ವೆಂಕಪ್ಪಯ್ಯ, ಅವರ ಸೋದರ ಮಾವನ ಮಕ್ಕಳು. ನಾನು ಉಡುಪಿಯಲ್ಲಿ ಅವರನ್ನು ನೋಡಿದ್ದೆ. ಇವೊತ್ತು ಬೆಳಿಗ್ಗೆ ಗಣಪತಿ ದೇವಸ್ಥಾನಕ್ಕೆ ಹೋಗುವಾಗ ಕೃಷ್ಣಭವನದಿಂದ ಹೊರಗೆ ಬರುತ್ತಿತ್ತು ಸವಾರಿ. ಯೋಗಕ್ಷೇಮ ಎಲ್ಲ ವಿಚಾರಿಸಿದಾಗ ನಮ್ಮ ಶಾಲೆಯ ಹೆಸರು ಕೇಳಿ ನಿನ್ನ ವಿಚಾರ ಬಂತು. ಅವನು ಏನು ಕೇಳಿದ ಗೊತ್ತಿದೆಯೆ ? ' ಸುಮಿತ್ರೆಯ ಶೀಲ ಹೇಗಿದೆ ?' ಎಂದು. ಅಲ್ಲಿಯೇ ಕಪಾಳ ಮೋಕ್ಷ ಮಾಡಿಬಿಡೋಣವೇ ? ಎನ್ನಿಸಿತು. ಆದರೆ ದಾರಿಯಲ್ಲಿ ಸಿಟ್ಟಾಗುವುದು ಚಂದವಲ್ಲ ಎಂದು " ಇದು ಎಂಥ ಪ್ರಶ್ನೆ ಕಾಣಯ್ಯ ?" ಎಂದೆ. ಅಷ್ಟೆಯೇ, ಸುಮಿತ್ರೆಯ ಮದುವೆಗೆ ಮೂರ್ತಿರಾಯರು........"

ಶಾಸ್ತ್ರಿಗಳ ಮಾತಿನಿಂದುಂಟಾದ ಆಘಾತದಿಂದ ಪಂಡಿತರು ಇನ್ನೂ ಚೇತರಿಸಿಕೊಂಡಿರಲಿಲ್ಲವಾದ ಕಾರಣ ಮೂರ್ತಿ ಬಂದು ಬಳಿಯಲ್ಲಿ ನಿಂತುದು ಅವರಿಗೆ ತಿಳಿಯಲಿಲ್ಲ. ಹಿಂದಿನಿಂದ ಬಂದ ಮೂರ್ತಿಯನ್ನು ನೋಡಿದೊಡನೆಯೇ ಶಾಸ್ತ್ರಿಗಳು ಮಾತು ನಿಲ್ಲಿಸಿದರು.

ಮೂರ್ತಿಯ ಮುಖ ಬೆವರಿತ್ತು. ಆದರೂ ತುಂಬ ಶಾಂತ ಸ್ವರದಲ್ಲಿಯೇ ಕೇಳಿದ.

" ಮತ್ತೇನು ಶಾಸ್ತ್ರಿಗಳೇ ?"

ಶಾಸ್ತ್ರಿಗಳು ಈಗ ಕಂಗಾಲಾದರು. " ಏನೂ ಇಲ್ಲ. ಯಾರೋ ಸುಮಿತ್ರೆಯನ್ನು ವಿಚಾರಿಸಿದರು. ಆದರೆ ಎಂಥ ವಿಚಾರವಯ್ಯ ? ಮದುವೆಗಾಗಿ ಬಂದವರಾದರೂ ಕಂಡವರ ಹುಡುಗಿಯರ ಬಗ್ಗೆ ವಿಚಾರಿಸುವಾಗ ಸ್ವಲ್ಪವಾದರೂ ಯೋಗ್ಯಾಯೋಗ್ಯ ವಿವೇಚನೆ ಬೇಡವೆ ? ಪಶುಗಳು........"

" ಅದಿರಲಿ ಶಾಸ್ತ್ರಿಗಳೆ. ನನ್ನ ವಿಚಾರ ಏನು ಹೇಳಿದರು. ದಯಮಾಡಿ ಹೇಳಿ."

ಇಷ್ಟರಲ್ಲಿ ಹೆಡ್ಮಾಸ್ಟರರು ಶಾಸ್ತ್ರಿಗಳನ್ನು ಕರೆದುದರಿಂದ ಅವರಿಗೆ ಉಸಿರು ಬಿಡಲು ಅವಕಾಶ ಸಿಕ್ಕಿದಂತಾಯಿತು. " ಏನೂ ಇಲ್ಲ ಮೂರ್ತಿರಾಯರೆ. ಅಂಥ ಮಾತಿಗೆಲ್ಲ ಕಿವಿಗೊಡುತ್ತ ಕುಳಿತರೆ ಲೋಕ ನಡೆಯಲಿಕ್ಕಿಲ್ಲ. ನಾನು

ಹಾಗೆಯೇ ಹೇಳಿದೆ ಆ ಮುಟ್ಠಾಳನಿಗೆ" ಎಂದು ಹೇಳಿದವರೇ ಅಲ್ಲಿಂದ ಹೊರಟು ಹೋದರು.

ಪಂಡಿತರಿಗೆ ಇಬ್ಬರು ಸಹೋದ್ಯೋಗಿಗಳು ತನ್ನನ್ನು ನಮಸ್ಕರಿಸಿ ಬೀಳ್ಕೊಟ್ಟುದು ಕನಸಿನಲ್ಲಿ ನಡೆದಂತೆ ಕಂಡಿತು.

ಮೂರ್ತಿ ತಟಸ್ಥನಾಗಿದ್ದ. ಗೋಪಿ ಬಂದು ಎಚ್ಚರಿಸಿದಾಗಲೂ ಮೂರ್ತಿ ಕಲ್ಲಿನಂತೆ ನಿಂತಿದ್ದ. ಪಂಡಿತರು ಸಾವರಿಸಿ ನಡೆದುಕೊಂಡು ಹೋಗಿ ತಲೆ ನೋವೆಂದು ಮಲಗಿದರು. ಗೋಪಿಗೆ ಮಾತ್ರ ಇದಾವುದೂ ಅರ್ಥವಾಗಲಿಲ್ಲ. ಮೂರ್ತಿ "ನನಗೂ ಏಕೋ ತುಂಬ ತಲೆ ನೋವು ಗೋಪೀ" ಎಂದು ಮಾತನಾಡಿದಾಗ ಸ್ವಲ್ಪ ಸಮಾಧಾನವಾದರೂ ತಾನು ಹೊರಡುವ ಮುನ್ನಾ ದಿನ ಒಮ್ಮಿಂದೊಮ್ಮೆಗೆ ಇವರೆಲ್ಲ ಏಕೆ ಈ ರೀತಿ? ಎಂದು ಆಶ್ಚರ್ಯವಾಯಿತು.

ಗೆಳೆಯನ ಆಶ್ಚರ್ಯವನ್ನು ಗುರುತಿಸಿದ ಮೂರ್ತಿ ಪ್ರಸಂಗಾವಧಾನತೆ ತಂದುಕೊಂಡು ನಗಲು ಯತ್ನಿಸಿದ. ಗೋಪಿಯ ಸಾಮಾನು ಸರಿಪಡಿಸುವ ಕೆಲಸ ಮುಗಿಯುವಾಗ ರಾತ್ರಿ ಹನ್ನೆರಡಾಗಿತ್ತು. ಬೆಳಿಗ್ಗೆ ಕಡೂರು ಬಸ್ಸಿಗೆ ಗೋಪಿ ಪದ್ಮಾವತಿಯರು ಹೊರಡಬೇಕಿತ್ತು.

ಹೊರಡುವ ಹೊತ್ತಿಗೆ ಅಲ್ಲೇ ಇರಬೇಕೆಂದು ಮೂರ್ತಿ ಮೀರೆಯರೂ ರಾತ್ರಿಯ ಉಳಿದ ಭಾಗವನ್ನು ಅಲ್ಲಿಯೇ ಕಳೆದರು. ಸುಮಿತ್ರೆಗೆ ಹಿಂದಿನ ದಿನದಂತೆಯೇ ಇಂದು ಕೂಡ ಜಾಗರಣೆಯಾಗಿತ್ತು. ರಾತ್ರೆ ಮೂರು ಘಂಟೆಗೇ ಎದ್ದಳು. ಅವಳ ಹಿಂದಿನಿಂದಲೇ ಉಳಿದವರೂ ಎದ್ದರು. ಕಷ್ಟದಿಂದ ಪಂಡಿತರೂ ಎದ್ದರು. ಆ ರಾತ್ರಿಯಲ್ಲಿ ಪಂಡಿತರ ಬಾಡಿದ, ಆಯಾಸದ, ನೋವಿನ ಮುಖವನ್ನು ಚೆನ್ನಾಗಿ ಗುರುತಿಸುವುದು ಸುಮಿತ್ರೆಗೂ ಸಾಧ್ಯವಾಗಲಿಲ್ಲ. ಮಗಳ ವಿದಾಯದ ಕಳವಳವಿದೆಯಾದುದರಿಂದ ಹೀಗಿದಾರೆ ಎಂದು ಸಮಾಧಾನ ಮಾಡಿಕೊಂಡಳು.

ಎಲ್ಲ ಹೊರಡುವಾಗ ಮನೆಯಲ್ಲಿ ದುಃಖ ತುಂಬಿತು. ಸಾಮಾನೆಲ್ಲ ಗಾಡಿಯಲ್ಲಿ ತುಂಬಿ ಮನೆಗೆ ಬೀಗ ಹಾಕಿ, ಎಲ್ಲರೂ ಬಸ್ ಆಫೀಸಿಗೆ ಬಂದರು. ಪದ್ಮಾವತಿ ಅಳುವುದನ್ನು ನಿಲ್ಲಿಸಿಯೇ ಇರಲಿಲ್ಲ. ಸುಮಿತ್ರೆಯ ದುಃಖ ಯಾರ ಕಣ್ಣಿಗೂ ಕಾಣುವಂತೆ ಇರಲಿಲ್ಲ.

ಆದರೂ ಕಡೂರು ಬಸ್ಸು ಹೊರಟು ಗೋಪಿ " ಮಾವಾ, ಮೂರ್ತಿ, ಹೋಗಿಬರುತ್ತೇನೆ; ಮೀರಾ, ಸುಮಿತ್ರಾ ಬರುತ್ತೇವೆ " ಎಂದಾಗ, ಪದ್ಮಾವತಿ " ಅಕ್ಕಾ, ಅಪ್ಪಯ್ಯ, ಮೀರಕ್ಕ ಹೋಗಿಬರುತ್ತೇನೆ " ಎಂದಾಗ ಪಂಡಿತರು ದುಃಖ ತಡೆಯಲಾಗದೆ ನಿಂತಿದ್ದವರು ಕುಳಿತುಬಿಟ್ಟರು. ಸುಮಿತ್ರೆಯ ಕಣ್ಣಿಂದ ಧಾರಾಕಾರವಾಗಿ ನೀರು ಸುರಿಯುತ್ತಿತ್ತು. ಮೀರೆಯೂ ಅಳುತ್ತಿದ್ದಳು. ಗಂಭೀರನಾಗಿದ್ದುದು ಮೂರ್ತಿ ಮಾತ್ರ.

ಪಂಡಿತರನ್ನು ಗಾಡಿಯಲ್ಲಿ ಮನೆಗೆ ಕರೆದು ತರಬೇಕಾಗಿ ಬಂತು. ಮನೆಗೆ ಮರಳಿ ಮಲಗಿದ ಪಂಡಿತರಿಗೆ ೧೦೪ ಡಿಗ್ರಿ ಜ್ವರ.

೧೦

ಮತ್ತೇಳು ದಿನ ಕಳೆದು ಬಂದ ಶುಕ್ರವಾರ ರಾತ್ರೆ ಎಂಟು ಘಂಟೆಗೆ ಪಂಡಿತರು ತೀರಿಕೊಂಡರು.

ಪದ್ಮಾವತಿಯನ್ನು ಬಸ್ ಆಫೀಸಿನಲ್ಲಿ ಬಿಟ್ಟುಬಂದ ಪಂಡಿತರು ಜ್ವರ ದಿಂದ ಮೇಲೆ ಏಳಲೇ ಇಲ್ಲ. ೧೦೪° ಯಲ್ಲಿ ಆರಂಭವಾದ ಜ್ವರ ಆ ದಿನ ಸಂಜೆ ಮಾತ್ರ ೧೦೩° ಗೆ ಬಂದಿತ್ತು. ಮಾರನೆಯ ದಿನ ಪುನಃ ಏರಿದುದು ಕೆಳ ಗಿಳಿಯಲೇ ಇಲ್ಲ.

ಬುಧವಾರ ದಿನ ಪಂಡಿತರಿಗೆ ಮಾತನಾಡಲು ಕಷ್ಟವಾಗುತ್ತಿತ್ತು. ಗುರು ವಾರ ಕಷ್ಟದಿಂದ ಮಾತನಾಡುವಾಗ ನಾಲಿಗೆ ತೊದಲುತ್ತಿತ್ತು. ಶುಕ್ರವಾರ ಬೆಳಿಗ್ಗೆ ಮಾತ್ರ ಅರ್ಧ ಘಂಟೆ ಕಾಲ ಪಂಡಿತರು ಚೆನ್ನಾಗಿ ಮಾತನಾಡಿದರು. ಸುಮಿತ್ರೆ ಶುಕ್ರವಾರವೆಂದು ತಲೆಗೆ ಎರೆದುಕೊಂಡು, ದೇವರಿಗೆ ದೀಪವಿಟ್ಟು, ಕುಂಕುಮ ಹಚ್ಚಿಕೊಂಡು ಒಳಗೆ ತಂದೆಯ ಬಳಿ ಬಂದಾಗ ಮೂರ್ತಿ ಥರ್ಮಾಮೀಟರ್ ಹಚ್ಚಿ ಜ್ವರ ನೋಡುತ್ತಿದ್ದ

ಪಂಡಿತರು ಕಣ್ಣು ಮುಚ್ಚಿ ಮಲಗಿದ್ದುದರಿಂದ ತಂದೆಗೆ ಎಚ್ಚರವಿರ ಲಿಕ್ಕಿಲ್ಲವೆಂದು ತಿಳಿದ ಸುಮಿತ್ರೆ ದನಿಯನ್ನು ಕೆಳಗಿಳಿಸಿ ಮೂರ್ತಿಯೊಡನೆ ಕೇಳಿದಳು.

" ಟೆಂಪರೇಚರ್ ಇಳಿದಿದೆಯೋ ಮಾಷ್ಟೆ ?" ಎಂದು.

ಮೂರ್ತಿ ಥರ್ಮಾಮೀಟರ್ ನೋಡುತ್ತಿದ್ದವನು ತಲೆಯೆತ್ತಿ ಸುಮಿತ್ರೆಯ ಕಡೆ ನೋಡಿದ. ಹಾಗೆಯೇ ತಲೆ ತಗ್ಗಿಸಿ ಮೇಲಕ್ಕೆದ್ದು ಥರ್ಮಾಮೀಟರ್ ತೊಳೆಯಲೆಂದು ಅಡುಗೆಯ ಮನೆಗೆ ಹೋದ. ಅವನು ಮಾತನಾಡದಿದ್ದುದರಿಂದಲೇ ಸುಮಿತ್ರೆಗೆ ತಂದೆಯ ಪರಿಸ್ಥಿತಿಯಲ್ಲಿ ಏನೂ ಬದಲಾವಣೆಯಿಲ್ಲವೆಂದು ತಿಳಿದಿತ್ತು.

ಆದರೆ ಅಧೈರ್ಯದ ಚರಮಸೀಮೆಯನ್ನು ತಲುಪಿದ್ದ ಸುಮಿತ್ರೆಯ ಮನಸ್ಸಿನಲ್ಲಿ ಇದರಿಂದ ಮಹತ್ವದ ಪರಿಣಾಮವೇನೂ ಆಗಲಿಲ್ಲ.

ಅಷ್ಟರಲ್ಲಿ ಪಂಡಿತರು ಕಣ್ಣು ತೆರೆದು ಸುಮಿತ್ರೆಯನ್ನು ನೋಡಿದವರು " ಸುಮೀ " ಎಂದು ಪ್ರೀತಿಯಿಂದ ಕರೆದರು.

ಮೂಸುಂಬಿಯ ರಸ ಸರಿಪಡಿಸುತ್ತಿದ್ದ ಸುಮಿತ್ರೆ ತಂದೆ ಕರೆದುದನ್ನು ಕೇಳಿದೊಡನೆಯೇ " ಏನಪ್ಪಯ್ಯಾ ?" ಎಂದು ಓಡಿ ಬಳಿಗೆ ಬಂದಳು.

" ಮೂರ್ತಿರಾಯರು ಎಲ್ಲಿದ್ದಾರೆ ?" ಎಂದು ಅವರು ಕೇಳುವಷ್ಟರಲ್ಲಿಯೇ ಮೂರ್ತಿ ಒಳಗೆ ಬಂದಿದ್ದ. ಪಂಡಿತರು ಮಾತನಾಡುತ್ತಿದ್ದುದನ್ನು ಕಂಡು, ಅದೂ ಸ್ಪಷ್ಟವಾಗಿ ಮಾತನಾಡುತ್ತಿದ್ದುದನ್ನು ಕಂಡು ಅವನಿಗೆ ಆಶ್ಚರ್ಯಕ್ಕಿಂತ ಹೆಚ್ಚು ಸಂತೋಷವಾಯಿತು.

" ಏನು ಪಂಡಿತರೆ ? ಮಾತನಾಡಿ ಆಯಾಸಮಾಡಿಕೊಳ್ಳಬೇಡಿ." ಎಂದು ಹತ್ತಿರ ಬರುತ್ತಿರುವಂತೆಯೇ ಹೇಳಿದ.

" ಇಲ್ಲ ಮೂರ್ತಿರಾಯರೆ. ಸ್ವಲ್ಪ ಬನ್ನಿ. ಇಲ್ಲಿ ಕುಳಿತುಕೊಳ್ಳಿ.'' ಎಂದು ತನ್ನ ಬಳಿಯಲ್ಲಿಯೇ ಕುಳಿತುಕೊಳ್ಳುವಂತೆ ಪಂಡಿತರು ಹೇಳಿದಾಗ ಮಾತ್ರ ಮೂರ್ತಿಗೆ ಆಶ್ಚರ್ಯವಾಗತೊಡಗಿತು. ಆದರೂ ಬಳಿ ಬಂದು ಕುಳಿತುಕೊಂಡ. ಪಂಡಿತರ ತಲೆಯ ಸಮೀಪ ಸುಮಿತ್ರೆ ಕುಳಿತಿದ್ದಳು.

" ನಿಮ್ಮನ್ನು ನಾನು ಒಡಹುಟ್ಟಿದ ತಮ್ಮನೆಂದೇ ತಿಳಿದಿದ್ದೇನೆ ಮೂರ್ತಿರಾಯರೆ. " ಎಂದು ಪಂಡಿತರು ಮಾತು ಆರಂಭಿಸಿದರು.

" ಛೆ ! ಇದೆಲ್ಲ ಹೇಳಲು ಈಗ ಸಮಯವೆ ? ಎಲ್ಲ ಗುಣವಾದ ಮೇಲೆ ಮಾತನಾಡೋಣ. ಸದ್ಯ ನಿಮಗಿಂತ ಹೆಚ್ಚಿನ ಬಂಧು ನನಗೆ ಬೇರೆ ಯಾರು ಇದ್ದಾರೆ ? " ಎಂದು ಮೂರ್ತಿ ಪಂಡಿತರನ್ನು ಸಮಾಧಾನಪಡಿಸಲೆಂದು ಹೇಳಿದ. ಆದರೆ ಪಂಡಿತರಿಗೆ ಈ ಸಮಾಧಾನ ಬೇಕಿರಲಿಲ್ಲ.

" ನನಗೆ ಗೊತ್ತು ಮೂರ್ತಿರಾಯರೆ. ಆದರೆ ನಮ್ಮ ಸಹವಾಸದಿಂದ ನಿಮಗೆ ದುಃಖ ತಪ್ಪಲೇ ಇಲ್ಲ. ನಮ್ಮ ಮನೆಯ ಎಲ್ಲ ದುಃಖದಲ್ಲಿ ಪಾಲುಗಾರ ರಾಗಿ ಬಂದಿರಿ. ಈ ಋಣ ನಾನು ಈ ಜನ್ಮದಲ್ಲಿ ಸಂದಾಯ ಮಾಡುವ ಹಾಗೆ ಇಲ್ಲ."

" ಈ ಮಾತೆಲ್ಲ ಯಾಕೆ ಈಗ ಪಂಡಿತರೆ. ಸರ್ವೋತ್ತಮರಾಯರು ಬರುವ ಹೊತ್ತಾಯಿತು. ನೀವು ಮಾತನಾಡುವುದನ್ನು ನೋಡಿದರೆ ಅವರು ಸಿಟ್ಟಾಗುತ್ತಾರೆ."

" ನಾನು ಸರ್ವೋತ್ತಮನ ಕೈಯ್ಯಲ್ಲೇ ಇದ್ದೇನೆ ' ಈಗ ಮೂರ್ತಿ ರಾಯರೆ. ಸುಮ್ಮಗೆ ನನ್ನ ವಿಚಾರ ವ್ಯಥೆ ಕಟ್ಟಿಕೊಳ್ಳಬೇಡಿ. ಆದರೆ ನನ್ನ ಕಂದಮ್ಮನನ್ನು ಮಾತ್ರ ನಿಮ್ಮ ವಶ ಒಪ್ಪಿಸಿ ಹೋಗುತ್ತೇನೆ."

" ಅಪ್ಪಯ್ಯಾ.... ಅಪ್ಪಯ್ಯಾ...." ಎಂದು ಸುಮಿತ್ರೆ ದನಿ ತೆಗೆದು ಅಳ ಲಾರಂಭಿಸಿದಳು. ಪಂಡಿತರು ಕುಳಿತಲ್ಲಿಂದಲೇ ಪ್ರಯಾಸದಿಂದ ಕೈಯ್ಯನ್ನು ಬದಿಗೆ ಸರಿಸಿ ಮಗಳ ಬೆನ್ನುಸವರಿ ಹೇಳಿದರು.

" ಅಳಬಾರದು ಸುಮೀ. ಮೂರ್ತಿರಾಯರು ನಿನ್ನ ಅಣ್ಣನ ಹಾಗೆ ಇದ್ದಾರೆ. ನನ್ನ ದಿನ....ಬಹುಶಃ ಮುಗಿಯಿತೆಂದೇ ಕಾಣುತ್ತದೆ.'' ಎಂದರು. ಮತ್ತೆ ಸುಮಿತ್ರೆ ಅಳುತ್ತಿರುವಂತೆಯೇ ಗೋಡೆಯನ್ನು ನೋಡಿ " ಅಲ್ಲವೆ ?" ಎಂದು ಮೆಲ್ಲ ಹೇಳಿದರು.

ಮೂರ್ತಿಗೂ ಗಾಬರಿಯಾಯಿತು.

" ಶಾಸ್ತ್ರಿ ಹೇಳಿದ್ದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಿ ಮೂರ್ತಿರಾಯರೆ. ಯಾರೋ ಆಗದವರು ಮಾಡಿದ ಅಪಪ್ರಚಾರ. ಅದರಲ್ಲಿ ನನಗೆ ನಂಬಿಕೆ ಯಿಲ್ಲ. ಅಂಥ ಮಾತನ್ನು ಕೇಳುವ ಯೋಗ ಬ್ರಹ್ಮ ನನ್ನ ಹಣೆಯಲ್ಲಿ ಬರೆದಿದ್ದ. ಅಷ್ಟೆ."

ಅಳುತ್ತಿದ್ದ ಸುಮಿತ್ರೆಗೆ ತಂದೆಯ ಮಾತು ಸಮಸ್ಯಾತ್ಮಕವಾಗಿ ಕಂಡು ಬಂತು. ಮೂರ್ತಿಯಿಂದ ಏನಾದರೂ ಸ್ಪಷ್ಟೀಕರಣ ಸಿಗಬಹುದೆಂದು ಅವ ನೆಡೆ ನೋಡಿದಳು. ಆದರೆ ಮೂರ್ತಿ ಮಾತ್ರ ಬೇಕೆಂದೇ ಸುಮಿತ್ರೆಯ ಕಡೆ ನೋಡುತ್ತಿರಲಿಲ್ಲ.

"ಬೇಡವಾದ ವಿಚಾರಗಳನ್ನೆಲ್ಲ ಕಟ್ಟಿಕೊಂಡು ಈಗ ಮಾತನಾಡ ಬಾರದು ಪಂಡಿತರೆ. ಇದೂ ನಮ್ಮ ಮನೆಯೆಂದೇ ತಿಳಿದು ನಾಸಿಲ್ಲಿ ಇದ್ದೇನೆ. ನೀವು ಮೊದಲು ಹುಶಾರಾಗುವ ವಿಚಾರ ಪ್ರಯತ್ನಿಸಬೇಕು" ಎಂದ.

ಪಂಡಿತರ ಮುಖದಲ್ಲಿ, ಆ ಕೃಶವಾದ, ಕಳೆಗುಂದಿದ ಮುಖದಲ್ಲಿ, ಸಮಾಧಾನದ ನಗೆ ಮಿಂಚಿತು.

"ಇದು ನಿಮ್ಮ ಮನೆಯೆ ಮೂರ್ತಿರಾಯರೆ. ಇದೇ ವಿಶ್ವಾಸ ನೀವು ಇಟ್ಟುಕೊಂಡಿರಬೇಕು. ಸುಮಿಯ ಕುತ್ತಿಗೆಯಲ್ಲಿ ತಾಳಿ ಕಾಣುವ ಯೋಗ ನನಗಿಲ್ಲವೆಂದು ಕಾಣುತ್ತದೆ. ಈ ಭಾರ ನಿಮ್ಮ ಮೇಲೆ ಹಾಕಿ ಹೋಗುತ್ತೇನೆ. ನಿಮಗೆ ಕಷ್ಟದ ಮೇಲೆ ಕಷ್ಟ ಕೊಡುತ್ತಿದ್ದೇನೆಂದು ನನಗೆ ಗೊತ್ತು. ಆದರೆ ನನಗೆ ಬೇರಾರೂ ಇಲ್ಲ. ನನ್ನದೆಂದು ಇರುವ ಈ ಮನೆಯಡಿ ಸುಮಿಯ ಹೆಸರಿನಲ್ಲೇ ಇದೆ. ಫಂಡಿನ ಅಲ್ಪಸ್ವಲ್ಪ ಹಣದಿಂದ ಯಾವ ಉಪಯೋಗ ಮಾಡಿಕೊಳ್ಳಬಹುದೋ ಹಾಗೆ ಮಾಡಿ...."

ಇಷ್ಟು ಮಾತನಾಡುವಾಗಲೇ ಪ್ರಯಾಸದಿಂದ ಪಂಡಿತರ ಕಂಠ ಬಿಗಿದು ಬಂದಿತ್ತು. ಕುತ್ತಿಗೆಯ ಸುತ್ತ ನರಗಳು ಉಬ್ಬಿ ಜ್ವರದಿಂದ ಅಂದ ಗೆಟ್ಟ ಮುಖಕ್ಕೆ ಇನ್ನಷ್ಟು ಭಯಾನಕ ಸ್ವರೂಪ ಕೊಡಲು ಕಾರಣವಾದುವು. ಸುಮಿತ್ರೆ ಅಳು ನಿಲ್ಲಿಸಿರಲೇ ಇಲ್ಲ. ಮೂರ್ತಿಗೆ ಮಾತನಾಡಲು ಸಾಧ್ಯವಾಗ ದಷ್ಟು ದುಃಖ ಬಂದಿತ್ತು. ಆದರೂ

"ಮಾತನಾಡಬೇಡಿ ಪಂಡಿತರೆ. ಆಯಾಸವಾಗುತ್ತದೆ." ಎಂದು ಹೇಳಿದ. ಅದಕ್ಕೆ ಸರಿಯಾಗಿಯೋ "ಹೇಗಿದ್ದಾರೆ ?" ಎಂದು ಕೇಳುತ್ತಾ ಸರ್ವೋತ್ತಮರಾಯರು ತನ್ನ ಬ್ಯಾಗ್ ಹಿಡಿದುಕೊಂಡು ಒಳ ಬಂದರು.

ಆ ಮೇಲೆ ನಡೆಯಿತು ಪರೀಕ್ಷೆಯ ವಿಧಿ. ನಾಡಿ ಹಿಡಿದು, ಸ್ಟೆತೊ ಸ್ಕೋಪು ಹಚ್ಚಿ, ಥರ್ಮಾಮೀಟರ್ ಪುನಃ ಇಟ್ಟು ಜ್ವರ ನೋಡಿ ಇಂಜೆಕ್ಷನ್ ಚುಚ್ಚುವ ವರೆಗೂ ಪಂಡಿತರು ಪಿಳಿಪಿಳಿ ನೋಡುತ್ತಿದ್ದರು. ಮಾತನಾಡಲಿಲ್ಲ. ಡಾಕ್ಟರರ ಆಗಮನದಿಂದುಂಟಾದ ಭರವಸೆಯಿಂದಲೋ ಏನೋ, ಅವರಿ ದ್ದಷ್ಟು ಕಾಲ ಮೂರ್ತಿ ಸುಮಿತ್ರೆಯರಿಗೆ ಪಂಡಿತರ ವಿಚಿತ್ರ ವರ್ತನೆ ಯಿಂದುಂಟಾದ ಉದ್ವೇಗ ಮರೆತು ಹೋಯಿತು. ಡಾಕ್ಟರರು ಎಲ್ಲ ಕೆಲಸ

ಮುಗಿಸಿ ಮುಖಮಂಟಪಕ್ಕೆ ಬಂದಾಗ ಮೂರ್ತಿ ಹಿಂಬಾಲಿಸಿ ಬಂದಿದ್ದಾತ ಕೇಳಿದ, " ಏನು ಬದಲಾವಣೆಯಿದೆ ಡಾಕ್ಟರರೆ ?" ಎಂದು.

ಸರ್ವೋತ್ತಮರಾಯರು ಮೂರ್ತಿಯ ಮುಖ ನೋಡಿ ನಗುವ ಸಾಹಸ ಮಾಡಿದರು. "ಟ್ರ್ಯಾಫ್ಯಾಡ್ ನೋಡಿ. ಸ್ವಲ್ಪ ಜಾಗ್ರತೆಯಾಗಿರಬೇಕು." ಎಂದರು. " ಸಂಜೆ ಪ್ರಕೃತಿಯಲ್ಲಿ ಏನಾದರೂ ಬದಲಾವಣೆಯಿದ್ದರೆ ಹೇಳಿ ಕಳಿಸಿ, ಬರುತ್ತೇನೆ." ಎಂದು ಪುನಃ ಹೇಳಿ ಹೊರಟು ಹೋದರು.

ಮೂರ್ತಿ ಸುಮಿತ್ರೆಗೆ ಸಮಾಧಾನ ಹೇಳಿ ಶಾಲೆಗೆ ಹೊರಟು ಹೋದ, ಸುಮಿತ್ರೆ ಶಾಲೆಗೆ ಹೋಗುವಂತಿರಲಿಲ್ಲ. ಪರೀಕ್ಷೆ ಸಮೀಪಿಸಿದುದರಿಂದ, ಪಾಠದ ಅಂಶ ಮುಗಿದಿದ್ದುದರಿಂದ, ಇದರಿಂದಾಗಿ ಅವಳಿಗೆ ಅಷ್ಟೇನು ನಷ್ಟ ವಾಗುವಂತಿರಲಿಲ್ಲ.

ಮಧ್ಯಾಹ್ನ ಮೂರು ಘಂಟೆಯ ಹೊತ್ತಿಗೆ ಮೂರ್ತಿಗೆ ಸುಮಿತ್ರೆ ನೆರೆಯ ಹುಡುಗನೊಬ್ಬನೊಡನೆ ಹೇಳಿ ಕಳುಹಿಸಿದ್ದಳು, " ಕೂಡಲೇ ಬರಬೇಕು " ಎಂದು. ಧಾವಿಸಿ ಬಂದಿದ್ದ ಮೂರ್ತಿಗೆ ಪಂಡಿತರನ್ನು ಕಂಡು ಗಾಬರಿ ಯಾಯಿತು. ಬೆಳಿಗ್ಗೆಯಿಂದ ಪಂಡಿತರಿಗೆ ಔಷಧಿ ಕುಡಿಸುವುದೂ ಸಾಧ್ಯ ವಾಗಿರಲಿಲ್ಲ. ಪಥ್ಯ ಕುಡಿಸುವ ಮಾತಂತೂ ಉಳಿಯಿತು. ಸುಮಿತ್ರೆ ಕರೆ ದರೂ ಮಾತನಾಡುತ್ತಿದ್ದಿಲ್ಲ. ಇಷ್ಟು ದಿನಗಳ ' ಹೂಂ 'ಕಾರ ಕೂಡ ಇಂದು ಇರಲಿಲ್ಲ ಅರೆತೆರೆದ ಕಣ್ಣುಗಳಿಂದ ಅವರು ನೋಡುತ್ತಿರುವುದು ತನ್ನನ್ನೇ, ಗೋಡೆಯನ್ನೇ ಅಥವಾ ಶೂನ್ಯವನ್ನೇ ಎಂದು ಸುಮಿತ್ರೆ ಹೇಳುವಂತಿರಲಿಲ್ಲ. ರೋಗಜ್ಞಾನವೇನೂ ಇರದಿದ್ದರೂ ಆಶೆಯ ಆಸರೆಯನ್ನು ಹುಡುಕಿಕೊಂಡು ಆ ಏಕಾಂತತೆಯಲ್ಲಿ ತನ್ನ ಅಧೈರ್ಯವನ್ನು ಹೋಗಲಾಡಿಸಿಕೊಳ್ಳಬೇಕು ಎಂದು ತಂದೆಯ ನಾಡಿ ಹಿಡಿದು ಸುಮಿತ್ರೆ ನೋಡಿದಳು. ಅದರ ಗತಿ ಮಂದ ವಾಗಿತ್ತು. ಅಷ್ಟು ಮಾತ್ರ ಅವಳು ಹೇಳಬಲ್ಲವಳಾಗಿದ್ದಳು ಅವಳಿಗೆ ಧೈರ್ಯ ಗೆಡಲು ಅದಕ್ಕಿಂತ ಹೆಚ್ಚಿನದೇನೂ ಬೇಕಾಗಿರಲಿಲ್ಲ. ಮೂರ್ತಿಗೆ ಹೇಳಿ ಕಳುಹಿಸಿದಳು.

ಮೂರ್ತಿ ಸರ್ವೋತ್ತಮರಾಯರನ್ನು ಕರೆದುಕೊಂಡೇ ಬಂದ.

ಪುನಃ ಪರೀಕ್ಷೆಯ ವಿಧಿ ಮುಗಿಸಿದ ಸರ್ವೋತ್ತಮರಾಯರು ಮುಖ ಮಂಟಪಕ್ಕೆ ಬಂದು ಮೂರ್ತಿಯನ್ನು ಕರೆದು " ಸುಮಿತ್ರೆಗೆ ಸ್ವಲ್ಪ ಧೈರ್ಯ

ಹೇಳಿ. ನನಗೇಕೋ ಕೈಮೀರಿದೆಯೆಂದು ಕಾಣುತ್ತದೆ. ” ಎಂದು ಹೇಳಿದರು. ಆದರೂ ಅವರ ಪ್ರಯತ್ನ ಮಾಡಿದರು. ಪುನಃ ಇಂಜೆಕ್ಶನ್ ಚುಚ್ಚಿದರು. ಔಷಧಿ ಕುಡಿಸಲು ಪ್ರಯತ್ನಿಸಿದರು.

ಆದರೆ ಯಾವ ಪ್ರಯತ್ನವೂ ಪರಿಣಾಮ ಮಾಡಲಿಲ್ಲ.

ಎಂಟು ಘಂಟೆಗೆ ಪಂಡಿತರು ಮುಚ್ಚಿದ ಕಣ್ಣು ತೆರೆಯಲಿಲ್ಲ. ಕೊನೆಯ ಗಳಿಗೆಗೆ ಶಾಂತಿಯ ವಾತಾವರಣದಲ್ಲೇ ಅವರ ಜೀವ ಹಾರಿಹೋಯಿತು.

ಮನೆ ತುಂಬ ಅಳು ತುಂಬಿಕೊಂಡಿತು. ಮೀರೆ, ಮೂರ್ತಿಯ ತಾಯಿ, ಶಾಲೆಯ ಅಧ್ಯಾಪಕವರ್ಗದಲ್ಲಿ ಹಲವರು, ಹೆಡ್ಮಾಸ್ಟರರು, ಶ್ರೀಕಂಠಶಾಸ್ತ್ರಿಗಳು ನೆರೆಕರೆಯವರು ಎಲ್ಲ ಪಂಡಿತರ ಮರಣ ಕಾಲದಲ್ಲಿ ಬಳಿಯಲ್ಲಿ ಇದ್ದರು.

ತಂದೆ ಕೊನೆಯುಸಿರೆಳೆದಾಗ ಅವರ ವಿಕಾರ ಮುಖ ನೋಡಿ ಚೀರಿಕೊಂಡು ಪ್ರಜ್ಞೆ ತಪ್ಪಿ ಬಿದ್ದಿದ್ದ ಸುಮಿತ್ರೆಯನ್ನು ಎಚ್ಚರಿಸಲು ಅರ್ಧ ತಾಸು ಬೇಕಾಯಿತು. ಎಚ್ಚರವಾದರೂ ಸುಮಿತ್ರೆ ಮಂಕು ಹಿಡಿದವರಂತೆ ಕುಳಿತಿದ್ದಳು.

ಮೂರ್ತಿ ಕೂಡ ಅಳುತ್ತಿದ್ದ—ಮಗುವಿನಂತೆ. ಆದರೆ ದುಃಖದ ಉದ್ವೇಗ ಕಡಿಮೆಯಾದಾಗ ಕರ್ತವ್ಯದ ಪ್ರಜ್ಞೆಬಂದು ಅವನು ಪ್ರಯತ್ನಪೂರ್ವಕ ದುಃಖವನ್ನು ತಡೆದುಕೊಂಡು ಮುಂದಿನ ಕೆಲಸದಲ್ಲಿ ನಿರತನಾದ. ಸಹೋದ್ಯೋಗಿ, ಸ್ನೇಹಿತ, ಬಂಧು ಪಂಡಿತರಿಗೆ ಸಾಕು ಮಗನಾಗಿ ಕೊನೆಯ ಸೇವೆ ಸಲ್ಲಿಸಿದ.

ಶವಸಂಸ್ಕಾರವೆಲ್ಲ ಮುಗಿದು ಪಂಡಿತರಿಲ್ಲದ ಮನೆಗೆ ಮರಳುವಾಗ ಇನ್ನೊಂದು ದಿನ ಬೆಳಗಾಗುವುದರಲ್ಲಿತ್ತು.

ಮೀರೆ ಸುಮಿತ್ರೆಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಲು ಶತಪ್ರಯತ್ನ ಮಾಡಿದಳು. ಆದರೆ ಸುಮಿತ್ರೆ ಸಮ್ಮತಿಸಲಿಲ್ಲ. ಈ ದುಃಖದ ಸಂದರ್ಭದಲ್ಲಿ ಅವಳಿಗೆ ಏಕಾಂತತೆಯ ಅನುವು ಮಾಡಿಕೊಡುವುದು ತರವಲ್ಲವೆಂದು ಮೀರೆ ಕೂಡ ಸುಮಿತ್ರೆಯ ಜೊತೆಗೆ ಇರಬೇಕಾಗಿ ಬಂತು. ಆದರೆ ಬಾಹ್ಯಪ್ರಪಂಚದ ಅರಿವೇ ಇಲ್ಲದವರಂತೆ ವರ್ತಿಸುತ್ತಿದ್ದ ಸುಮಿತ್ರೆಗೆ ಇದರಿಂದ ದೊರಕಿದ ನೆರವು ಹೆಚ್ಚಿನದಾಗಿರಲಿಲ್ಲ.

ಮಾರನೆಯ ದಿನ ಬೆಳಿಗ್ಗೆ ಮೂರ್ತಿಯ ಮುಂದೆ ದೊಡ್ಡದೊಂದು ಸಮಸ್ಯೆ ತಲೆಯೆತ್ತಿ ನಿಂತಿತ್ತು.

" ಮುಂದೇನು ? " ಎಂದು.

ಮುಂದಿನ ಕುರಿತು ಆಲೋಚಿಸುವಾಗಲೆಲ್ಲ ಪದ್ಮಾವತಿಯ ಮದುವೆಯ ಪಾರ್ಟಿಯ ದಿನ ಶ್ರೀಕಂಠಶಾಸ್ತ್ರಿಗಳು ಆಡಿದ ಮಾತುಗಳು ನೆನಪಿಗೆ ಬರುತ್ತಿದ್ದವು. ಆ ರಾತ್ರಿ ಜೊತೆಗೇ ಇದ್ದ ಶಾಸ್ತ್ರಿಗಳೊಡನೆ ಈ ವಿಚಾರ ಮಾತನಾಡಬೇಕು ಎಂದು ಆತ ಒಂದೆರಡು ಬಾರಿ ಯೋಚಿಸಿದ್ದ. ಆದರೆ ಈ ದುಃಖದ ಸಂದರ್ಭದಲ್ಲಿ ಈ ವಿಚಾರ ಮಾತನಾಡುವುದು ತಪ್ಪು ಎಂದು ತಿಳಿದುದರಿಂದ ಸುಮ್ಮಗಾದ.

ಬೆಳಗಾದಮೇಲೆ ಶಾಸ್ತ್ರಿಗಳ ಹಾಗೂ ಹೆಡ್ಮಾಸ್ಟರರ ಸಲಹೆಯಂತೆ ಮೂರ್ತಿ ಪಂಡಿತರ ಹಳೆಯ ಕಾಗದಗಳ ಕಟ್ಟಿನಿಂದ ಅವರ ದೂರದ ಸಂಬಂಧಿ ತಮ್ಮನ ವಿಳಾಸ ಪಡೆದು ಅವನಿಗೆ ಬರುವಂತೆ ತಾರು ಕೊಟ್ಟ. ಹಾಗೆಯೇ ಗೋಪಿಗೆ ಪಂಡಿತರ ಮರಣದ ವಿಚಾರ ತಿಳಿಸಿ ತಂತಿ ಕೊಟ್ಟ.

ಈ ಕೆಲಸ ಮುಗಿಸಿ ಬಂದ ಮೂರ್ತಿಗೆ ಮನೆಯಲ್ಲಿ ಪಂಡಿತರ ವಿಳಾಸಕ್ಕೆ ಬಂದಿದ್ದ ಕಾಗದವೊಂದು ಕಂಡುಬಂತು. ಸುಮಿತ್ರೆ ವಿಮನಸ್ಕಳಾಗಿ ಮಲಗಿದ್ದಳಾದ ಕಾರಣ ಎದ್ದು ಅದನ್ನು ಒಡೆದು ನೋಡಿರಲಿಲ್ಲ. ಮೀರೆ ಕಾಗದವನ್ನು ಗಂಡನ ಕೈಗೆ ಕೊಟ್ಟಳು. ಮೂರ್ತಿ ಒಡೆದು ಓದಿ ನೋಡಿದ.

ಸುಖವಾಗಿ ಮುಂಬಯಿ ಸೇರಿದ ವರ್ತಮಾನವನ್ನು ಪದ್ಮಾವತಿ ತನ್ನ ಮೊದಲನೆಯ ಪತ್ರದಲ್ಲಿ ತಿಳಿಸಿದ್ದಳು.

ಸೋಮವಾರ ಸಂಜೆ ಬೆಳಗಾವಿಯಿಂದ ಪಂಡಿತರ ಬಂಧು ಸೀತಾರಾಮರಾಯರು ಬರುವೆನಾಗಿ ತಿಳಿಸಿದ ತಂತಿ ಮೂರ್ತಿಯ ಕೈಸೇರಿತು. ಮೂರ್ತಿ ಹಿಂದಿನ ದಿನವೇ ಶ್ರೀಕಂಠ ಶಾಸ್ತ್ರಿಗಳೊಡನೆ ಹಾಗೆಯೇ ಹೆಡ್ಮಾಸ್ಟರರೊಡನೆ ಮುಂದೇನು ಮಾಡಬೇಕೆಂದು ವಿಚಾರಿಸಿದ್ದರೂ, ಸೀತಾರಾಮರಾಯರ ತಂತಿ ಬಂದಾಗ ಸ್ವಲ್ಪ ಸಮಾಧಾನವಾಯಿತು.

ಶ್ರೀಕಂಠಶಾಸ್ತ್ರಿಗಳು ಮಾತ್ರ ಸ್ಪಷ್ಟವಾಗಿ ಮೂರ್ತಿಗೆ ತಿಳಿಸಿದ್ದರು. " ಶ್ರೀನಿವಾಸ ನಿಮ್ಮನ್ನೇ ನಂಬಿಕೊಂಡಿದ್ದ ಮೂರ್ತಿರಾಯರೆ. ಈ ಸೀತಾರಾಮರಾಯರು ಯಾರೋ ಏನೋ ನನಗೊಂದೂ ಗೊತ್ತಿಲ್ಲ. ಅವರು ಬಂದರೆ

ಸರಿ- ಮುಂದಿನ ಸಂಸ್ಕಾರಗಳನ್ನಷ್ಟು ಮಾಡಿ ಹೋಗಲಿ. ಸುಮಿತ್ರೆಗೆ ಪರೀಕ್ಷೆ ಮುಗಿದ ಮೇಲೆ ಯಾವುದಾದರೊಂದು ದಾರಿಮಾಡಿ ಕೊಟ್ಟರೆ ಸರಿ. ಶ್ರೀನಿವಾಸನ ಫಂಡಿನ ಹಣವನ್ನು ಅವನು ಹೇಳಿದಂತೆ ಮದುವೆಯ ಖರ್ಚಿಗೆ ಉಪಯೋಗಿಸಿಕೊಳ್ಳೋಣ. ಅವಳಿಗೆ ಮದುವೆಯಾಗುವ ತನಕ ನಾವೆಲ್ಲ ಇದ್ದೇವಲ್ಲ. ಶ್ರೀನಿವಾಸನ ಒಂದು ಹುಡುಗಿಯನ್ನು ಹೆಚ್ಚೆಂದರೆ ಇನ್ನೊಂದು ವರ್ಷ ನೋಡಿಕೊಳ್ಳುವುದು ನಮಗೆ ಕಷ್ಟವೆ ?"

ಆದರೆ ಮೂರ್ತಿ ಶಾಸ್ತ್ರಿಗಳ ಮಾತಿಗೆ ಸೈಗುಟ್ಟಲು ಹಿಂಜರಿಯುತ್ತಿದ್ದ.

"ಸುಮಿತ್ರೆಯ ಹೊಣೆಗಾರಿಕೆಯನ್ನು ಯಾರ ನೆರವೂ ಇಲ್ಲದೆ ಅವಳ ಮದುವೆಯಾಗುವ ತನಕ ನೋಡಿಕೊಳ್ಳಲು ನಾನು ಹಿಂಜರಿಯುವುದಿಲ್ಲ ಶಾಸ್ತ್ರಿಗಳೆ. ಆದರೆ....ಆ ದಿವಸ, ಪಾರ್ಟಿಯ ದಿವಸ ನೀವು ಪಂಡಿತರ ಹತ್ತಿರ ಮಾತನಾಡುತ್ತಿದ್ದಾಗ ನಾನು ಒಳಿಯಲ್ಲಿದ್ದು ಒಂದು ದೊಡ್ಡ ತಪ್ಪು ಮಾಡಿದೆ. ಯಾರು ಏನೇ ಹೇಳಲಿ—ಒಂದು ಅಪವಾದದ ಸೆರೆಯಲ್ಲಿ ಇನ್ನಷ್ಟು ಆಕ್ಷೇಪಗಳಿಗೆಡೆಗೊಡುವುದು ಸೂಕ್ತವೆಂದು ಕಾಣುವುದಿಲ್ಲವಾದ ಕಾರಣ ಏನು ಮಾಡಲಿ ಎಂದುಕೊಂಡಿದ್ದೇನೆ."

"ಛೆ ! ಛೆ ! ನೀವು ಅದನ್ನೆಲ್ಲ ಮನಸ್ಸಿಗೆ ತೆಗೆದುಕೊಂಡರೆ ಹೇಗೆ. ಏನೋ ಯಾವುದೋ ಒಂದು ವಿಚಿತ್ರಪ್ರಾಣಿ ನಂಜು ಕಾರಿತು ಎಂದು ಜಗತ್ತೇ ಮುಳುಗಿಹೋಯಿತೆಂದು ತಿಳಿಯಬೇಕೆ ?" ಎಂದು ಶಾಸ್ತ್ರಿಗಳು ಸಮಾಧಾನ ಹೇಳಿದರೂ ಮೂರ್ತಿಯ ಮನಸ್ಸಿನ ಶಂಕೆ ತೊಲಗಿಹೋಗಲಿಲ್ಲ.

ಪಂಡಿತರು ಸತ್ತು ಐದು ದಿನಗಳಾದ ಮೇಲೆ ಸೀತಾರಾಮರಾಯರು ಮನೆಗೆ ಬಂದರು. ಅವರು ಬರುವ ಮುನ್ನಾದಿನ ಗೋಪಿಯಿಂದ ಮೂರ್ತಿಗೆ ತಂತಿ ಬಂದಿತ್ತು. "ರಜೆಗಾಗಿ ಪ್ರಯತ್ನ ಮಾಡಿದೆ. ಸಿಗಲಿಲ್ಲ." ಎಂದು. ಮದುವೆಗಾಗಿ ಎರಡು ಬಾರಿ ರಜೆ ಪಡೆದು ಈಗ ಪುನಃ ರಜೆ ದೊರಕಿಸಿಕೊಳ್ಳುವುದು ಕಷ್ಟವೆಂದು ತಿಳಿದ ಮೂರ್ತಿ ಗೋಪಿ ಪದ್ಮಾವತಿಯರು ಬರಬಹುದೆಂಬ ಆಸೆಯನ್ನು ಬಿಟ್ಟುಬಿಟ್ಟ. ಮಾರನೆಯ ದಿನ ಹತ್ತು ಹದಿನೆರಡು ವರ್ಷ ನೋಡಿರದ 'ಚಿಕ್ಕಪ್ಪ' ನನ್ನು ಸುಮಿತ್ರೆ ಅಳುಮೋರೆಯಿಂದಲೇ ಬರಮಾಡಿಕೊಂಡಳು.

ಅಂತಿಮ ಕ್ರಿಯೆಯ ಕೆಲಸವನ್ನೆಲ್ಲ ಸೀತಾರಾಮರಾಯರು ಅಚ್ಚುಕಟ್ಟಿನಲ್ಲೇ ಆದರೂ ಸುಸೂತ್ರವಾಗಿ ನೆರವೇರಿಸಿದರು. ಆದರೆ, ಹೇಗಾದರೂ ಆದಷ್ಟು ಬೇಗ ಇಲ್ಲಿಂದ ಪಾರಾಗಿ, ತನ್ನ ಹೊಣೆಗಾರಿಕೆಯನ್ನು ತಪ್ಪಿಸಿಕೊಂಡು ಹೋದರೆ ಸಾಕು ಎನ್ನುವಂತಿತ್ತು ಅವರ ವರ್ತನೆ.

ಈ ಎಲ್ಲ ವಿಚಾರ ವಿಪ್ಲವದಲ್ಲಿ ನಾಯಿಕೆಯಾದ ಸುಮಿತ್ರೆ ಮಾತ್ರ ನಿರ್ಲಿಪ್ತಳಂತೆ ಇದ್ದಳು. ಅವಳು ಮಾತನಾಡುವುದೇ ಅಪರೂಪವಾಯಿತು. "ಪದ್ಮಾವತಿಗೆ ಬರಲಾಗುವುದಿಲ್ಲ" ವೆಂದು ಮೂರ್ತಿ ತಿಳಿಸಿದಾಗಲೂ ಮಾತನಾಡಲಿಲ್ಲ. ಸೀತಾರಾಮರಾಯರು ಮದುವೆಯ ಹೊಣೆ ತನ್ನ ಮೇಲೆ ಬರಬಹುದೆಂದು "ಇಷ್ಟ ದೊಡ್ಡ ಹುಡುಗಿ ಮದುವೆಯಾಗದೆ ಅನಾಥಳಾಗುವ ಗತಿ ಬಂತೇ" ಎಂದು ಕೊರಗಿದಾಗಲೂ ಮಾತನಾಡಲಿಲ್ಲ. ಮೀರೆಯ ಸ್ನೇಹ ಕೂಡ ಆಕೆಯ ದುಃಖವನ್ನು ಕಡಿಮೆಮಾಡಲಿಲ್ಲ. ಮೀರೆಯ ಮಗು ಸುರೇಶನ ಚೇಷ್ಟೆಯಿಂದ ಆಗೊಮ್ಮೆ ಈಗೊಮ್ಮೆ ಅವಳ ಮುಖದಲ್ಲಿ ಅರೆನಗುವೊಂದು ಮಿಂಚಿದಾಗಲೂ, ಅದು "ಅಯ್ಯೋ! ಈ ದುಃಖ ಸಾಗರದಲ್ಲಿ ಇಂಥ ನಗೆಯ ತೆರೆ ಏಳುವುದು ಇನ್ನಷ್ಟು ದುಃಖಕ್ಕೆಂದೇ ಕಾರಣ" ಎಂದು ಹೇಳಿಸುವಷ್ಟು ಅರ್ಥಶೂನ್ಯವಾಗಿದ್ದಿತು.

ಎಲ್ಲ ಕೆಲಸ ಮುಗಿದ ಮೇಲೆ ಸೀತಾರಾಮರಾಯರು ಮುಂದಿನ ವಿಚಾರ ಮಾತುಕತೆ ನಡೆಸಿದರು. ಶ್ರೀಕಂಠಶಾಸ್ತ್ರಿಗಳು ಎಲ್ಲ ಭಾರವನ್ನು ಮೂರ್ತಿಯ ತಲೆಯ ಮೇಲೆ ಹೇರುವುದು ಸೂಕ್ತವಾದುದೆಂದು ತನ್ನ ಅಭಿಪ್ರಾಯವನ್ನೂ ಮಂಡಿಸಿದರು. ಮೂರ್ತಿ ಮಾತನ್ನೇ ಆಡಲಿಲ್ಲ. ಹೆಡ್ಮಾಸ್ಟರರು ಮಾತ್ರ ಸೀತಾರಾಮರಾಯರು ಸುಮಿತ್ರೆಯನ್ನೇ ಕೇಳಿ, ಆಮೇಲೆ ಅವರ ಮನಸ್ಸಿಗೆ ಸರಿಕಂಡಂತೆ ಮುಂದಿನ ದಾರಿಯನ್ನು ನಿಶ್ಚಯಿಸಬೇಕಾಗಿ ಸೂಚಿಸಿದರು.

ಉಭಯಸಂಕಟದಲ್ಲಿ ಸಿಲುಕಿದ ಸೀತಾರಾಮರಾಯರಿಗೆ ಈ ಪೇಚಿನ ಪ್ರಸಂಗದಿಂದ ಪಾರಾಗುವುದು ತುಂಬ ಕಷ್ಟದ ಕೆಲಸವಾಯಿತು. "ಸುಮಿತ್ರೆ ಬೆಳಗಾವಿಗೆ ಬರುವ ಹಾಗಿದ್ದರೆ ಕರೆದುಕೊಂಡು ಹೋಗುತ್ತೇನೆ. ಆದರೂ ಓದುವ ಹುಡುಗಿ ಅರ್ಧದಲ್ಲೇ ಓದು ನಿಲ್ಲಿಸುವುದು ಸರಿಯಲ್ಲ" ಎಂದು ಎರಡು ವೈಯ ಕತ್ತಿಯಂತೆ ತನ್ನ ಅಭಿಪ್ರಾಯವನ್ನು ಸೂಚಿಸಿದರು.

" ಓದು ಇನ್ನು ಒರೇ ತಿಂಗಳೆರಡು ತಿಂಗಳ ಮಾತು ರಾಯರೆ. ಆಮೇಲೆ ಮೆಟ್ರಿಕ್ ಮುಗಿಯುತ್ತದೆ. ನಾವು ಮಾತನಾಡುತ್ತಿರುವುದು ಆಮೇಲೆ ಏನು ಮಾಡುವುದೆಂದು. " ಎಂದು ಶಾಸ್ತ್ರಿಗಳು ಸ್ವಲ್ಪ ಸಿಟ್ಟಿನಿಂದಲೇ ಹೇಳಿದರು.

" ಆಮೇಲಾದರೂ ಬರುವ ಹಾಗಿದ್ದರೆ ಬೇಡ ಎನ್ನುವುದಿಲ್ಲ. ಆದರೆ ಬೆಳಗಾವಿ ಸುಮಿತ್ರೆಗೆ ಒಗ್ಗೀತೇ, ಅದೂ ಕಲಿತ ಹುಡುಗಿಗೆ ನಮ್ಮ ಖಾನಾವಳಿಯ ಗಾಳಿ ಸೇರದಿದ್ದರೆ ಅವಳಿಗೂ ಬೇಸರವಾದೀತು. " ಎಂದು ಸೀತಾರಾಮರಾಯರು ಪುನಃ ತಮ್ಮ ಹೊಣೆಗಾರಿಕೆಯನ್ನು ಪರಿಹರಿಸಿಕೊಳ್ಳಲೆತ್ನಿಸಿದರು. ಈಗ ಅವರ ಸಹಾಯಕ್ಕೆ ಬಂದುದು ಸುಮಿತ್ರೆಯೆ. ತಂದೆ ತೀರಿಕೊಂಡ ಮೇಲೆ ಸುಮಿತ್ರೆ ಸರಿಯಾಗಿ ಮಾತನಾಡಿದ್ದುದೂ ಅದೇ ಮೊದಲು.

" ನಾನು ಬೆಳಗಾವಿಗೆ ಬರುವುದಿಲ್ಲ ಚಿಕ್ಕಪ್ಪ. ಮೆಟ್ರಿಕ್ ಮುಗಿದ ಮೇಲೆ ಇಲ್ಲಿಯೇ ಏನಾದರೂ ಕೆಲಸ ಹಿಡಿಯುವ ಪ್ರಯತ್ನ ಮಾಡುತ್ತೇನೆ. ಮುಂದಿನ ವಿಚಾರ ಮುಂದೆ ನೋಡಿಕೊಳ್ಳಬಹುದು. " ಎಂದು.

ಅಲ್ಲಿ ನೆರೆದಿದ್ದವರಲ್ಲಿ ಯಾರೂ ಆಗ ಮಾತನಾಡಲಿಲ್ಲ

ಸುಮಿತ್ರೆಯ ಮದುವೆಯ ವಿಚಾರ ತಾನು ಪ್ರಯತ್ನಿಸುವುದಾಗಿ ಆಶ್ವಾಸನೆ ಕೊಟ್ಟು, ಆಕೆಯ ಪರೀಕ್ಷೆ ಮುಗಿದ ಮೇಲೆ ಕೆಲಸ ಸಿಗದಿದ್ದರೆ ಸೀದ ಬೆಳಗಾವಿಗೆ ಬರಬೇಕೆಂದು ಸೂಚಿಸಿ, ಸೀತಾರಾಮರಾಯರು ಅಷ್ಟರತನಕ ಸುಮಿತ್ರೆಯನ್ನು ನೋಡಿಕೊಳ್ಳುವ ಭಾರವನ್ನು ಮೂರ್ತಿಗೆ ಒಪ್ಪಿಸಿ ಬೆಳಗಾವಿಯ ದಾರಿ ಹಿಡಿದರು. ಮೂರ್ತಿ ಎಲ್ಲದಕ್ಕೂ ' ಸರಿ ' ಎಂದುಬಿಟ್ಟು ಸುಮ್ಮಗಾದ.

ಪರೀಕ್ಷೆ ಮುಗಿಯದೆ ಯಾವ ವಿಚಾರ ಚಿಂತಿಸುವುದೂ ಬೇಡವೆಂದು ಅವನೂ ನಿಶ್ಚಯಿಸಿದ.

ಆದರೆ ಸುಮಿತ್ರೆಯನ್ನು ಅದೇ ಮನೆಯಲ್ಲಿ ಇರಗೊಡಬಾರದು ಎಂಬ ವಿಚಾರ ಮೂರ್ತಿ ಮೀರೆಯರಿಗೆ ಒಂದು ಚಿಕ್ಕ ಕಾದಾಟವೇ ಆಯಿತು. ಸುಮಿತ್ರೆಯನ್ನು ಅಲ್ಲಿರಗೊಟ್ಟರೆ ಅವಳು ನಿತ್ಯ ಅಳುತ್ತಲೇ ಉಳಿಯುತ್ತಾಳೆ ಎಂದು ವಾದಿಸಿ ಅವಳನ್ನು ಹೇಗಾದರೂ ತಮ್ಮ ಮನೆಗೆ ಕರೆದೊಯ್ಯುಬೇಕೆಂದು ಮೀರೆ ಪ್ರಯತ್ನಿಸಿದಳು. ಆದರೆ ಮೂರ್ತಿ ಮಾತ್ರ ಈ ವಿಚಾರ ತುಸು ಉದಾಸೀನನಾಗಿದ್ದನೆಂದರೂ ಸರಿಯೆ. ಸುಮಿತ್ರೆ, ತನ್ನ ಮನೆಯಲ್ಲಿರುವುದರಿಂದ

ಅವನಿಗೆ ಬೇಸರವಾಗುವ ಪ್ರಶ್ನೆಯೇ ಇರಲಿಲ್ಲ. ಆದರೆ ಅತಿಯಾದ ಆಸಕ್ತಿ ಅಪವಾದಕ್ಕೆಡೆಗೊಡಬಹುದೆಂಬ ಹೆದರಿಕೆಯಿಂದ ಹೆಚ್ಚು ಒತ್ತಾಯವನ್ನೂ ಮಾಡಿರಲಿಲ್ಲ. ಇಲ್ಲಿಯೂ ಸುಮಿತ್ರೆಯೇ ಅವನ ಬಿಡುಗಡೆಗೆ ಬಂದಳು. ಮೀರೆಯ ಆಗ್ರಹದ ಕರೆಗೆ ನಿರ್ಧಾರಪೂರ್ವಕವಾಗಿ 'ಒಲ್ಲೆ' ಎಂದು ಹೇಳಿ "ನಾನು ಬರೋಲ್ಲ ಮೀರಕ್ಕ. ಪರೀಕ್ಷೆ ಹೇಗೂ ಮುಗಿಯಲಿ. ಆಚೆಯ ಮನೆಯಲ್ಲಿ ವಸಂತಿ ಇದ್ದಾಳೆ. ಜೊತೆಗೇ ಅಭ್ಯಾಸ ಮಾಡುತ್ತೇವೆ. ಒಂದು ಅನ್ನ ಸಾರು ಮಾಡಿಕೊಳ್ಳಲು ನನಗೆ ಸಾಧ್ಯವಿಲ್ಲವೆ ? ಮಲಗಿಕೊಳ್ಳಲು ವಸಂತಿಯ ಮನೆಗೇ ಹೋಗುತ್ತೇನೆ. ರಾತ್ರೆ ಅಭ್ಯಾಸ ಮಾಡಲು ಅನುಕೂಲ ವಾಗುತ್ತದೆ ಪರೀಕ್ಷೆ ಮುಗಿದ ಮೇಲೆ ಮತ್ತೆ ನೋಡೋಣ" ಎಂದಳು.

ತಂದೆಯ ಮರಣದ ದುಃಖದ ಪ್ರತ್ಯಕ್ಷ ಪ್ರತಿಕ್ರಿಯೆಗಳನ್ನು ಕಾಲ ಧರ್ಮಕ್ಕನುಗುಣವಾಗಿ ಮರೆಯುತ್ತ ನಿತ್ಯ ಜೀವನದಲ್ಲಿ ತೊಡಗಲು ಸಿದ್ಧ ಳಾಗುತ್ತಿದ್ದ ಸುಮಿತ್ರೆಯನ್ನು ಕಂಡು ಮೀರೆಯೂ ತನ್ನ ಒತ್ತಾಯವನ್ನು ಬಲ ಪಡಿಸಲಿಲ್ಲ.

ಆದರೆ ಸುಮಿತ್ರೆ ಎಲ್ಲರಿಂದಲೂ ಬಿಡುಗಡೆಹೊಂದಿ ಏಕಾಂತತೆಗಾಗಿ ಹಾತೊರೆಯುತ್ತಿದ್ದಾಳೆ ಎಂಬುದರ ಕಲ್ಪನೆ ಯಾರಿಗೂ—ಮೂರ್ತಿಗೆ ಕೂಡ ಬರಲಿಲ್ಲ.

೧೧

ಪರೀಕ್ಷೆ ತೀರ ಹತ್ತಿರ ಬಂದಿದ್ದುದರಿಂದ, ಪರೀಕ್ಷೆಯ ಫಲಿತಾಂಶ ವನ್ನು ತನ್ನ ಭವಿಷ್ಯ ಹೊಂದಿಕೊಂಡಿದೆಯೆಂಬ ತಿಳಿವು ಸದಾ ಆಕೆಯನ್ನು ಕಾಡುತ್ತಿದ್ದುದರಿಂದ, ಸುಮಿತ್ರೆಯ ಏಕಾಂತತೆಗೆ ಅಭ್ಯಾಸ ಬಲವಾದ ತಡೆ ಯಾಗಿತ್ತು.

ಪಂಡಿತರು ತೀರಿಹೋದ ಮೇಲೆ, ತನ್ನ ಮುದ್ದು ಅಕ್ಷರಗಳಲ್ಲಿ ಆ ದೂರದ ಮುಂಬಯಿಯಲ್ಲಿ, ಅಪ್ಪಯ್ಯನ ಆಕಸ್ಮಿಕ ಮರಣದಿಂದ ತನಗಾದ ನೋವನ್ನು ಪದ್ಮಾವತಿ ಅಕ್ಕನಿಗೆ ಬರೆದ ಎರಡು ಮೂರು ಕಾಗದಗಳಲ್ಲಿ ಚಿತ್ರಿ ಸಲು ಪ್ರಯತ್ನಿಸಿದ್ದಳು. ಸಮಾನ ದುಃಖದ ಕಣ್ಣೀರನ್ನು ಅಕ್ಕ ತಂಗಿಯ

ರಿಬ್ಬರೂ ಹಂಚಿಕೊಂಡಿದ್ದರು. ಆದರೆ ಮುಂಬಯಿಯಿಂದ ಆಮೇಲೆ ಬಂದುದು ಒಂದೋ, ಎರಡೋ ಪತ್ರಗಳು.

ಆಮೇಲೆ ಒಮ್ಮೆಂದೊಮ್ಮೆಗೆ ಮೌನ.

ಗೋಪಿ, ಮೂರ್ತಿಗೆ 'ತನಗೆ ಬರಲಾಗುವುದಿಲ್ಲ'ವೆಂದು ತಂತಿ ಕಳಿಸಿದ್ದ. ಜೊತೆಗೇ ರಜೆಗಾಗಿ ಶತಪ್ರಯತ್ನ ಮಾಡುತ್ತಿದ್ದೇನೆ, ತಾನು ಬರಲು ಅಸಾಧ್ಯವಾದರೆ, ಪದ್ಮಾವತಿಯನ್ನಾದರೂ ಒಂದೆರಡು ತಿಂಗಳ ಮಟ್ಟಿಗೆ ಕಳುಹಿಸಿಕೊಡುತ್ತೇನೆ, ಎಂಬರ್ಥದ ಪತ್ರ ಕೂಡಾ ಬರೆದಿದ್ದ.

ಆಮೇಲೆ ಅವನೂ ಮೌನ.

ಗೋಪಿ ಪದ್ಮಾವತಿಯರ ಮೌನಕ್ಕೆ ಕಾರಣವಾಗುವಂಥ ವಾತಾವರಣ ಮುಂಬಯಿಯಲ್ಲಿ ಉಂಟಾಗಿತ್ತು—ಪಂಡಿತರ ಮರಣದಿಂದಾಗಿ.

ಮೂರ್ತಿಯ ತಂತಿ ಬಂದಾಗ ಗೋಪಿ-ಪದ್ಮಾವತಿಯರಿಬ್ಬರೂ ಮನೆಯಲ್ಲಿರಲಿಲ್ಲ. ಶನಿವಾರದ ಅರ್ಧ ದಿನದ ಬಿಡುವು—ಅದೂ ಮುಂಬಯಿಗೆ ಮಡದಿಯೊಂದಿಗೆ ಮರಳಿಬಂದ ಮೊದಲನೆಯ ವಾರಾಂತ್ಯದ ಬಿಡುವು. ಶೀಲೆಯ ಒತ್ತಾಯ ನೆಪಮಾತ್ರವಾಗಿತ್ತು; ಗೋಪಿ, ಪದ್ಮಾವತಿಯನ್ನು ಕರೆದುಕೊಂಡು 'ರೀಗಲ್'ನಲ್ಲಿ ಚಿತ್ರನೋಡಲು ತೆರಳಿದ್ದ. ಹೊಸ ದಾಂಪತ್ಯದ, ಹರೆಯದ ಹುಚ್ಚಿನಲ್ಲಿ ಜಗವಿಡೀ ತಮ್ಮದು ಎಂಬ ವಿಶ್ವಾಸದಿಂದ ಕುಣಿಯುವಂತೆ ಕಾಣುವ ಸಾವಿರಾರು ದಂಪತಿಗಳಂತೆ, ಗೋಪಿಯೂ, ಸಿನೆಮಾ ಮುಗಿಸಿ, ಪದ್ಮಾವತಿಗೆ, ಮುಂಬಯಿಯ ವೈಭವದ ಪ್ರತೀಕಗಳಾದ, ಗೇಟವೇ, ಬ್ಯಾಕ್‌ಬೇ ದರ್ಶನ ಮಾಡಿಸಿ ಮರುಳುವಾಗ, ರಾತ್ರಿ ಘಂಟೆ ಎಂಟಾಗಿತ್ತು.

ನಗುತ್ತ, ಓಡುತ್ತ ಬಂದ ದಂಪತಿಗಳನ್ನು ಶೀಲೆ ನಗು ಮೊಗದಿಂದಲೇ ಸ್ವಾಗತಿಸಬೇಕಾಗಿತ್ತು. ಆದರೆ ಬಾಗಿಲು ತೆಗೆದ ಶೀಲೆ ನಗಲಿಲ್ಲ. 'ಸಿನೆಮಾ ಹೇಗಿತ್ತೋ' ಎಂಬ ಸಂಪ್ರದಾಯದ ಮಾತನ್ನೂ ಆಡಲಿಲ್ಲ. ಎಂದಿಗಿಂತ ತುಸು ಬೇಗನೆ ಮರಳಿದ್ದ ಅಣ್ಣ ಕೂಡಾ ಒಳಗೆ ಕುಳಿತಿದ್ದವನು, ಪದ್ಮಾವತಿಯೊಡನಾದರೂ ಎಂದಿನ ನಗೆಮಾತು ಆಡಲಿಲ್ಲ.

ಗೋಪಿ, ಏನೋ ವಿಪರೀತವಾಗಿದೆಯೆಂದು ಗ್ರಹಿಸಲು ಹೆಚ್ಚು ಹೊತ್ತಾಗಲಿಲ್ಲ. ಶೀಲೆ, ಪದ್ಮಾವತಿಯನ್ನು ಆ ರಾತ್ರಿಗೂ 'ಮಸಾಲೆ' ತರಿಸುವ

ನೆಪದಿಂದ ಹೊರಗೆ ಕಳುಹಿಸಿ, ಗೋಪಿಯನ್ನು ಅಡುಗೆಯ ಮನೆಗೆ ಕರೆದು ತೆರೆದಿಟ್ಟ ತಂತಿಯನ್ನು ಕೊಟ್ಟಳು.

— ಪಂಡಿತರ ಮರಣವಾರ್ತೆ ಗೋಪಿಗೆ ತಿಳಿದುದು ಹೀಗೆ.

ಒಂದು ವಾರದ ಹಿಂದೆ ಬಿಟ್ಟುಬಂದ ಮಾವನ ಮರಣದ ಸುದ್ದಿಯ ಆಘಾತದಿಂದ ಗೋಪಿ ಚೇತರಿಸಿಕೊಂಡುದು ಪದ್ಮಾ ಒಳಗೆ ಬಂದಾಗಲೇ. ಏನೋ ನೆಪಹೇಳಿ ಪದ್ಮಾಳನ್ನು ಕೈಹಿಡಿದು ತನ್ನ ಕೋಣೆಗೆ ಕರೆದುಕೊಂಡು ಹೋಗಿ, ಅವಳಿಗೆ ಈ ಸುದ್ದಿ ತಿಳಿಸಬೇಕಾದರೆ ಅವನಿಗೆ ಸಾಕು ಬೇಕಾಯಿತು.

ಗಂಡನ ಎದೆಗೆ ಜೋತುಬಿದ್ದು ಪದ್ಮಾ 'ಗೋಳೋ' ಎಂದು ಅತ್ತಳು. ಅಳುವಿನ ವೇಗ ಕಡಿಮೆಯಾಗುವತನಕ, ರಾತ್ರಿ ಸುಮಾರು ಹದಿನೆರಡರತನಕ ಗೋಪಿ ಪದ್ಮಾವತಿಯನ್ನು ಸಂತೈಸುತ್ತಲೇ ಇದ್ದ.

ಗೋಪಿ ರಜೆಗಾಗಿ ಮೂರ್ತಿಗೆ ಬರೆದಂತೆಯೇ ಪ್ರಯತ್ನಿಸಿದ. ಆದರೆ ಅದು ಸಿಗುವ ಸಂಭವವೇ ಇರಲಿಲ್ಲ. ಆಗತಾನೇ ಎರಡುಬಾರಿ ಪಡೆದ ರಜೆಯಿಂದ ಮರಳಿ ಬಂದಿದ್ದು ಪುನಃ ರಜೆ ಪಡೆಯುವುದು ಪ್ರಯಾಸದ ಮಾತಾಗಿತ್ತು. ಪದ್ಮಾವತಿಯನ್ನಾದರೂ ಊರಿಗೆ ಕಳಿಸಿಕೊಡೋಣವೇ ಎಂದರೆ ಒಬ್ಬಾಕೆಯನ್ನೇ ಕಳಿಸುವಂತಿರಲಿಲ್ಲ.

ಹೀಗಾಗಿ ಪದ್ಮಾವತಿ ಪುನಃ ಮಂಗಳೂರು ಕಾಣಲು ಎರಡು ತಿಂಗಳು ಕಾಯಬೇಕಾಗಿ ಬಂತು.

ಇದಕ್ಕೆ ಸರಿಯಾಗಿ ಹೊಸದೊಂದು ಸಮಸ್ಯೆಯೆದ್ದು ನಿಂತಿತ್ತು— ಸುಮಿತ್ರೆಯ ಭವಿಷ್ಯದ ಚಿಂತೆ. ಬಂಧುಗಳಿಲ್ಲದೆ ಅನಾಥೆಯಾದ, ಬೆಳೆದ ಹುಡುಗಿ ಸುಮಿತ್ರೆಯ ಸಮಸ್ಯೆ.

ಸುದ್ದಿ ತಿಳಿದು ಎರಡು ವಾರ ಗೋಪಿ ಈ ವಿಚಾರ ಯೋಚಿಸಿರಲಿಲ್ಲ. ಮಂಗಳೂರಿಗೆ ಹೋಗಿಯೇ ಏನಾದರೂ ಮಾಡೋಣ, ಎಲ್ಲ ವಿವರಗಳನ್ನು ತಿಳಿದುಕೊಂಡು, ಮೂರ್ತಿಯೊಡನೆ ಆಲೋಚಿಸಿ ನಿಶ್ಚಯಿಸಬಹುದು ಎಂಬ ಸಮಾಧಾನ ತಂದುಕೊಂಡಿದ್ದುದರಿಂದ, ಈ ವಿಚಾರ ಆಲೋಚಿಸಿರಲಿಲ್ಲ. ಆದರೆ, ರಜೆ ಖಂಡಿತ ಸಿಗುವಂತಿಲ್ಲ. ಪದ್ಮಾವತಿಯನ್ನು ಮಂಗಳೂರಿಗೆ

ಕಳಿಸುವುದು ಕೂಡಾ ಸದ್ಯ ಸಾಧ್ಯವಾಗುವಂತಿಲ್ಲ ಎಂದಾದಾಗ, ಗೋಪಿಗೆ ಮುಂದಿನ ದಾರಿಯ ಕುರಿತು ಚಿಂತಿಸದೆ ಗತ್ಯಂತರವಿರಲಿಲ್ಲ. ಇದಕ್ಕೆ ಸರಿಯಾಗಿಯೇ ಶೀಲೆ ಕೂಡಾ 'ಆ ಹುಡುಗಿಯ ಗತಿಯೇನೋ ಗೋಪಿ' ಎಂದೆರಡು ಮೂರು ಬಾರಿ ಕೇಳಿದ್ದಳು. "ಅದೇ ನಾನೂ ಯೋಚನೆ ಮಾಡುತ್ತಿದ್ದೇನೆ ಅತ್ತಿಗೆ—ಅಣ್ಣ ಏಕೋ ಈ ವಿಚಾರ ಮಾತನಾಡಲೇ ಇಲ್ಲ. ಅವನನ್ನೇ ಕೇಳಲು ಸಂಕೋಚವಾಗುತ್ತದೆ" ಎಂದಿದ್ದ.

ಮೋಹನ ಈ ವಿಚಾರ ತಮ್ಮನೊಡನೆ ಯಾವ ಮಾತನ್ನೂ ಆಡಿರಲಿಲ್ಲ. ಮದುವೆಯ ಸಮಯದಲ್ಲಿ ಆತ ತೋರಿಸಿದಷ್ಟು ತಾಳ್ಮೆಯನ್ನೂ, ಸಮಾಧಾನವನ್ನೂ ಮದುವೆಯಾದಮೇಲೆ ತೋರಿಸಿದ್ದಿಲ್ಲ. ತಮ್ಮನೊಡನೆ ಮಾತನಾಡುವುದೇ ಕಡಿಮೆಯಾಗಿತ್ತು. ಗೋಪಿಯೊಡನೆ ಮಾತಾಡುವ ಸಂದರ್ಭವಿದ್ದಾಗಲೂ, ಹೆಚ್ಚಾಗಿ ಪದ್ಮಾವತಿಯು ಮೂಲಕವೇ ಮಾತು ಬೆಳೆಸುತ್ತಿದ್ದ.

ತನ್ನ ಮೇಲಣ ಸಿಟ್ಟು ಅಣ್ಣನಿಗೆ ತೀರ ಕಡಿಮೆಯಾಗಿಲ್ಲ ಎಂದು ಸ್ಪಷ್ಟವಾಗಿ ತೋರುತ್ತಿದ್ದಾಗ, ಗೋಪಿಗೆ, ಸುಮಿತ್ರೆಯ ಹೊಣೆಗಾರಿಕೆಯ ವಿಚಾರ ಅಣ್ಣನೊಡನೆ ಮಾತಾಡಲು ಕಷ್ಟವಾಯಿತು.

ಈ ಮೌನದ ಸಂಧಿಕಾಲದಲ್ಲಿ ಪದ್ಮಾವತಿ ಕಂಗಾಲಾದಳು.

ಅಕ್ಕನ ಭವಿಷ್ಯಜೀವನ ಇದೇ ರೀತಿ ಇರಬೇಕೆಂದು ತೀರ್ಮಾನಿಸುವ ಧಾರ್ಷ್ಟ್ಯ ತನಗಿರಲಿಲ್ಲ. ಅಕ್ಕ ಯಾರ ಅಭಿಪ್ರಾಯದಂತೆ ನಡೆಯಲು ಸಿದ್ಧಳಿದ್ದಾಳೆ ಎನ್ನುವುದನ್ನರಿಯಲು ಸಾಧ್ಯವಿರಲಿಲ್ಲ. ಆದರೆ ಅಕ್ಕನ ಭವಿಷ್ಯ ಜೀವನಕ್ಕೆ ತನ್ನ-ಗೋಪಿಯ ಹೊಣೆಗಾರಿಕೆಯಿದೆಯೆನ್ನುವುದು ಮನಸಿನಲ್ಲಿ ನೆಲೆನಿಂತ ಅಭಿಪ್ರಾಯವಾಗಿತ್ತು. ಹೀಗಾಗಿ ಪದ್ಮಳಿಗೆ ಶೀಲೆಯ ಮೊರೆಹೊಗುವುದು ಮಾತ್ರ ಆಗ ತೋರುತ್ತಿದ್ದ ಒಂದೇ ದಾರಿಯಾಗಿತ್ತು.

"ಅಕ್ಕನಿಗೆ ಏನೂಂತ ಬರೆಯಲಿ ಶೀಲಕ್ಕ. ಮಾರ್ಚಿನಲ್ಲಿ ಪರೀಕ್ಷೆ ಮುಗಿಯುತ್ತದೆ. ಆಮೇಲೆ ಏನು ಮಾಡುತ್ತಾಳೋ."

ಗೋಪಿಯೊಡನೆಯೂ ಪದ್ಮಾ ಇದೇ ಮಾತನ್ನು ಹೇಳುತ್ತಿದ್ದಳು.

"ಮೂರ್ತಿಮಾಸ್ತು ಏನೆಂದು ಕಾಗದ ಬರೆದಿದ್ದಾರೆ? ನಾನು ಹೋಗಿ ಅಕ್ಕನನ್ನು ನೋಡಿಕೊಂಡು ಬರುವುದು ಬೇಡವೆ. ಅವಳಿಗೆ ಇನ್ನು ಬೇರೆ ಯಾರಿದ್ದಾರೆ ಹತ್ತಿರದವರು?"

ಗೋಪಿ 'ಯೋಚನೆ ಮಾಡುತ್ತಿದ್ದೇನೆ ಪದ್ಮಾ' ಎನ್ನುತ್ತಿದ್ದ. ಈ ಯೋಚನೆ ಯಾವುದೊಂದು ನಿರ್ಧಾರದಲ್ಲಿ ಪರಿಣಮಿಸುತ್ತಿಲ್ಲವೆಂಬ ಸಂಶಯ ದೃಢವಾದಾಗ ಪದ್ಮ ಪುನಃ ಕೇಳಿದಳು.

"ಅಕ್ಕನನ್ನು ಬೊಂಬಾಯಿಗೆ ಬರಲಿಕ್ಕೆ ಹೇಳೋಣವೆ? ಅವಳ ಪರೀಕ್ಷೆ ಮುಗಿಸಿ ಬಂದರೆ, ಇಲ್ಲಿ ಎಲ್ಲಿಯಾದರೂ ಕೆಲಸಕ್ಕೆ ಸೇರಬಹುದು. ಕೆಲಸ ಮಾಡಿಕೊಂಡೇ ಕಾಲೇಜಿನಲ್ಲಿ ಓದಬಹುದು. ಅವಳಿಗೆ 'ಮೆಡಿಕಲ್' ಓದಬೇಕೆಂತ ತುಂಬ ಮನಸ್ಸಿತ್ತು. ಅಪ್ಪಯ್ಯನಿಲ್ಲದೆ ಊರಲ್ಲಿ ಒಬ್ಬಳೇ ಏನು ಮಾಡುತ್ತಾಳೆ?"

"ಅಕ್ಕನನ್ನು ಬೊಂಬಾಯಿಗೆ ಬರಲಿಕ್ಕೆ ಹೇಳೋಣವೆ?"

ಗೋಪಿಯ ಮನಸ್ಸಿನಲ್ಲಿದ್ದ ಯೋಚನೆಯನ್ನು ಪದ್ಮಾವತಿ ಬಾಯಲ್ಲಿ ಆಡಿ ತೋರಿಸಿದ್ದಳು.

ಸುಮಿತ್ರೆಯನ್ನು ಮುಂಬಯಿಗೆ ಕರೆಸಬಾರದೇಕೆ ಎಂಬ ಆಲೋಚನೆ ಅವನ ಮನಸ್ಸಿನಲ್ಲಿ ಮೂಡಿದುದು ಅದೇ ಮೊದಲಲ್ಲ. ಆದರೆ ಅದರ ವಿಚಾರ ಸರಿಯಾಗಿ ಚಿಂತಿಸಲು ಆರಂಭಿಸಿದುದು ಮಾತ್ರ ಆಮೇಲೆಯೆ.

ಚಿಂತಿಸಿದಾಗಲೆಲ್ಲ ಇದರ ಪರಿಣಾಮ-ಪ್ರತಿಕ್ರಿಯೆಗಳ ಒಟ್ಟು ಮೊತ್ತ ಅವನ ಧೈರ್ಯವನ್ನೆಲ್ಲ ಅಲುಗಿಸುತ್ತಿತ್ತು.

ಸುಮಿತ್ರೆಯನ್ನು ಮುಂಬಯಿಗೆ ಬರಹೇಳುವುದು ಸುಲಭದ ಮಾತಾಗಿತ್ತು. ವಿದ್ಯಾವತಿ ಸುಮಿತ್ರೆಗೆ ಮುಂಬಯಿಯಲ್ಲಿ ಗೋಪಿಯ ಸಹಾಯದಿಂದಲಾದರೂ ಕೆಲಸ ದೊರಕುವುದು ಕಷ್ಟದ ಮಾತಾಗಿರಲಿಲ್ಲ ಸುಮಿತ್ರೆ ಮುಂಬಯಿಗೆ ಬರುವುದರಿಂದ ಪದ್ಮಾವತಿಯ ಮನಸಿನ ಕಳವಳ ಎಷ್ಟೋ ಕಡಿಮೆಯಾಗುತ್ತದೆ; ಮೂರ್ತಿಯ ಹೊರಲಾರದ ಭಾರದ ಹೊರೆ ಇಳಿದಂತಾಗುತ್ತದೆ; ಸುಮಿತ್ರೆಯ ಸ್ವಾವಲಂಬಿ ಜೀವನದ ಕಲ್ಪನೆಗೆ ಆಶ್ರಯ ಕೊಟ್ಟಂತಾಗುತ್ತದೆ-ಈಯೆಲ್ಲ ವಿಚಾರಗಳೂ ಸರಿಯಾದುವೆ. ಆದರೆ ಸುಮಿತ್ರೆ ಬಂದರೆ ಈ ಮನೆಯಲ್ಲಿ ಉಳಿಯುವುದಕ್ಕೆ ಅಣ್ಣನ ಸಮ್ಮತಿ ಬೇಕಾಗಿದೆ. ಅದು ಸಿಗುವಂತಿದೆಯೆ ಎಂದು ಮಾತ್ರ ಚಿಂತಿಸಬೇಕಾಗಿತ್ತು.

ಸುಮಿತ್ರೆಯ ಆಗಮನವನ್ನು ಶೀಲಿ ಪ್ರತಿಭಟಿಸುವಂತಿರಲಿಲ್ಲ. ಶೀಲೆಯೇ ಅವಳ ಕುರಿತು ಗೋಪಿ, ಪದ್ಮಾವತಿಯರೊಡನೆ, ಅತ್ಯಂತ ಸಹಾನುಭೂತಿಯ ಮಾತುಗಳನ್ನು ಹಲವಾರು ಬಾರಿ ಆಡಿದ್ದಳು. ‘ಆ ಊರೇ ಬಿಟ್ಟು ಅವಳಿಗೆ ಇಲ್ಲಿಗೆ ಬಂದರಾಗದೆ” ಎಂದು ಕೂಡಾ ಒಮ್ಮೆ ಆಡಿ ತೋರಿಸಿದ್ದಳು.

ಆದರೆ ಮೋಹನನ ಅನುಮತಿಯಿಲ್ಲದೆ ಸುಮಿತ್ರೆ ಮುಂಬಯಿಗೆ ಬಂದು ಇವರೆಲ್ಲರ ಜೊತೆಯಲ್ಲಿರುವಂತಿಲ್ಲ. ಮೋಹನನ ಅಭಿಪ್ರಾಯನ್ನು ವಿರೋಧಿಸಿ ಶೀಲೆ, ಸುಮಿತ್ರೆ ಇಲ್ಲಿಗೆ ಬರುವಂತೆ ಒತ್ತಾಯಪಡಿಸಿಯಾಳು ಎನ್ನುವಂತಿರ ಲಿಲ್ಲ.

ಇದೇ ಪ್ರಶ್ನೆ ಗೋಪಿಯನ್ನು ಕಾಡುತ್ತಿತ್ತು.

ಆದರೆ ಬಹಳ ಸಮಯ ಹೀಗೆ ಕಾಯಬೇಕಾಗಿ ಬರಲಿಲ್ಲ.

‘ಸುಮಿತ್ರೆ ಪರೀಕ್ಷೆಯ ತಯಾರಿಯಲ್ಲಿದ್ದಾಳೆ. ಪರೀಕ್ಷೆ ಮುಗಿಯುವ ವರೆಗೆ ಅವಳ ವಿಚಾರ ಏನೂ ಯೋಚನೆ ಮಾಡುವುದು ಬೇಡ. ಇಲ್ಲಿ ಪಂಡಿ ತರ ಸಂಬಂಧದ ಎಲ್ಲ ಕೆಲಸಗಳು ಮುಗಿದಿವೆ’ ಎಂದು ಮೂರ್ತಿಯ ಕಾಗದ ಬಂದ ಮೇಲೆ, ಗೋಪಿ ಎಪ್ರಿಲ್‌ನಲ್ಲಿ ಸುಮಿತ್ರೆಯ ರಜೆಗೆ ಸರಿಯಾಗಿ ಪದ್ಮಾ ವತಿಯನ್ನು ಊರಿಗೆ ಕಳುಹಿಸಿ ಕೊಡುವುದೆಂದು ನಿಶ್ಚಯಿಸಿದ. ಪದ್ಮಾ ಮರಳಿ ಮುಂಬಯಿಗೆ ಜೂನ್ ತಿಂಗಳಲ್ಲಿ ಬರುವುದರೊಳಗೆ, ಅಣ್ಣನ ಅನು ಮತಿಯನ್ನು ಪಡೆದುಕೊಂಡು, ಪದ್ಮಾ, ಜೊತೆಗೆ ಸುಮಿತ್ರೆಯನ್ನು ಕರೆದು ಕೊಂಡು ಬರುವಂತೆ ಏರ್ಪಾಡು ಮಾಡಿದರೆ ಎಲ್ಲ ಸರಿಯಾಗುವುದು, ಆಮೇಲೆ ಸುಮಿತ್ರೆಗೊಂದು ಕೆಲಸ ದೊರಕಿಸಿಕೊಟ್ಟರೆ, ಅವಳ ವಿವಾಹದ ವಿಚಾರ ಹಿಂದಿನಿಂದ ಯೋಚಿಸಬಹುದು, ಮೂರ್ತಿ ಮಾಡುತ್ತಿದ್ದ ಕೆಲಸ ವನ್ನು ತಾನು ಮಾಡಬೇಕಾಗಿ ಬರುವುದಷ್ಟೆ—ಎಂದು ಗೋಪಿ ನಿಶ್ಚಯಿಸಿ ಪದ್ಮಾವತಿಯನ್ನು ಗೆಳೆಯರೊಬ್ಬರ ಜೊತೆಗೆ ಮಂಗಳೂರಿಗೆ ಕಳಿಸುವ ಏರ್ಪಾಡು ಮಾಡಿದ. ಇದೇ ಸಂದರ್ಭದಲ್ಲಿ ಅಣ್ಣನೊಡನೆ ಮಾತನಾಡಿದಾಗ ಮಾತು ಪರ್ಯಾಯವಾಗಿ ಸುಮಿತ್ರೆಯೆಡೆ ತಿರುಗಿತು.

" ಪದ್ಮೆಯನ್ನು ಊರಿಗೆ ಕಳಿಸಿಕೊಡುತ್ತೇನಣ್ಣ. ಎರಡು ತಿಂಗಳು ಇದ್ದು ಬರುತ್ತಾಳೆ " ಎಂದಾಗ ಮೋಹನ ಒಮ್ಮೆಗೇ ಮಾತನಾಡಲಿಲ್ಲ. ತುಸು ತಡೆದು ನಿಧಾನವಾಗಿಯೇ ಕೇಳಿದ.

" ಯಾರಿದ್ದಾರೋ ಅಲ್ಲಿ ಈಗ. "

" ಯಾರಿಲ್ಲವಾದರೇನು, ಸುಮಿತ್ರೆಯಿಲ್ಲವೆ ? ಅವಳ ಪರೀಕ್ಷೆಯೂ ಮುಗಿದಿರಬೇಕು. ರಜೆಯ ಬೇಸರ ಹೋಗಲು ತಂಗಿ ಜೊತೆಗಿದ್ದರೆ ಸ್ವಲ್ಪ ಸಮಾಧಾನವಾದೀತು."

" ಆ ಹುಡುಗಿ ಈಗ ಮೂರ್ತಿಯ ಮನೆಯಲ್ಲೆ ಇದ್ದಾಳೆಯೆ ?" ಸುಮಿತ್ರೆಯ ಕುರಿತು ಮೋಹನ ಕೇಳಿದ ಆಸಕ್ತಿಯ ಪ್ರಶ್ನೆ ಅದು.

" ಇಲ್ಲ; ತನ್ನ ಮನೆಯಲ್ಲೆ ಇದ್ದಾಳೆ. "

" ಒಬ್ಬಳೇ ಹುಡುಗಿ ಎಷ್ಟು ದಿನ ಹಾಗೆ ಇದ್ದಾಳೋ ? "

" ರಿಸಲ್ಟ್ ಬರುವವರೆಗಣ್ಣ. ಆಮೇಲೆ ಏನಾದರೊಂದು ಯೋಚನೆ ಮಾಡದೆ ಆಗುತ್ತದೆಯೆ ? "

" ಮೂರ್ತಿ ಏನು ಹೇಳುತ್ತಾನೆ. "

" ಏನೂ ಹೇಳಿಲ್ಲ. ರಿಸಲ್ಟ್ ಬರಲಿ. ನೋಡೋಣ ಅಂದಿದ್ದಾನೆ........ ನಾನು........ಬೊಂಬಾಯಿಗೆ ಬರಲಿಕ್ಕೆ ಬರಿಯೋಣವೇ ಅಂತ ಯೋಚನೆ ಮಾಡುತ್ತಿದ್ದೇನೆ. "

" ಬೊಂಬಾಯಿಗೆ ? "

" ಹೌದು........ಇಲ್ಲಿಯಾದರೆ ಏನಾದರೊಂದು ಕೆಲಸ ಸಿಕ್ಕೀತು, ಬೇಗನೆ. ಕೆಲಸ ಮಾಡಿಕೊಂಡು ಅವಳು ತನ್ನ ಪಾಡಿಗೆ ಇದ್ದರೆ ಮತ್ತೆ ಸರಿಯಾದ ನೆಂಟಸ್ತಿಕೆ ಎಲ್ಲಿಯಾದರೂ ಸಿಕ್ಕೀತೇ ಎಂದು ಹುಡುಕುತ್ತಿರಬಹುದು."

ಸುಮಿತ್ರೆ ಮುಂಬಯಿಗೆ ಬರುವ ವಿಚಾರ ಅಣ್ಣನ ಆಕ್ಷೇಪವಿಲ್ಲವಲ್ಲ ಎಂದು ಗೋಪಿ ಸಮಾಧಾನ ತಂದುಕೊಂಡು ತನ್ನ ಮುಂದಿನ ಯೋಜನೆಯನ್ನೆಲ್ಲ ವಿವರಿಸುತ್ತಿದ್ದ. ಆದರೆ ಆತನ ನಂಬಿಕೆ ಸುಳ್ಳಾಯಿತು.

"ಅಲ್ಲ, ಗೋಪಿ, ಬೊಂಬಾಯಿಗೆ ಬಂದು ಅವಳು ಏನು ಹಾಸ್ಟೆಲಿನಲ್ಲಿರು ತ್ತಾಳೆಯೆ ?"

ಗೋಪಿ ಕ್ಷಣಕಾಲ ಮಾತಾಡಲಿಲ್ಲ. ಸುಮಿತ್ರೆ ಈ ಮನೆಯಲ್ಲಿರುವುದು ಸಾಧ್ಯವಿಲ್ಲ ಎಂದು ಮೋಹನ ಸ್ಪಷ್ಟವಾಗಿ ಹೇಳಿದ್ದರೆ ಅವನು ಆ ಉತ್ತರ ಕ್ಕಾಗಿ ಬೇಸರಿಸುತ್ತಿದ್ದಿಲ್ಲ. ಆದರೆ ಸುಮಿತ್ರೆಯ ಆಗಮನಕ್ಕೂ ಈ ಮನೆಗೂ ಯಾವ ಸಂಬಂಧವೂ ಇಲ್ಲ ಎಂಬರ್ಥದ ಮಾತು ಅಣ್ಣನ ಬಾಯಿಂದ ಹೊರ ಬಿದ್ದಾಗ ಗೋಪಿಗೆ ಬೇಸರಕ್ಕಿಂತ ಹೆಚ್ಚಿಗೆ ದುಃಖವಾಯಿತು. ದುಃಖದ ಜೊತೆಗೆ ಸಿಟ್ಟೂ ಬಂತು.

"ಹಾಸ್ಟೆಲಿನಲ್ಲಿರುವಷ್ಟೇನು ತೊಂದರೆಯಾಗಿಲ್ಲ ಬಿಡಣ್ಣ ಅವಳಿಗೆ. ತಂಗಿಯ ಮನೆಯಿರುವಾಗ ಹಾಸ್ಟೆಲಿಗೇಕೆ ಹೋಗಬೇಕು ಅವಳು ?"

"ಹೊ ! ಹಾಗಾದರೆ ಬೇರೆ ಮನೆ ಮಾಡುವ ಆಲೋಚನೆಯೇನೋ ನಿನ್ನದು ?" ಎಂದು ಮೋಹನ ಅಣಕಿಸುವಂತೆ ಕೇಳಿದ.

"ಮಾಡಬೇಕಾಗಿ ಬಂದರೆ ಮಾಡದಿರಲಿಕ್ಕಾಗುತ್ತದೆಯೆ ?" ಎಂದವನೆ ಗೋಪಿ ಅಲ್ಲಿ ನಿಲ್ಲದೆ ಒಳಗೆ ನಡೆದ.

ಗೋಪಿ ಶೀಲೆಯೊಡನೆ ಈ ವಿಚಾರ ಮಾತನಾಡುವಾಗ ತನ್ನ ದುಃಖ ವನ್ನೆಲ್ಲ ತೋಡಿಕೊಂಡ.

"ನೋಡು ಅತ್ತಿಗೆ, ನಾನು ಅವನನ್ನು ಕೇಳದೆ ಮದುವೆ ಮಾಡಿಕೊಂಡೆ ಎಂಬುದಕ್ಕೆ ಏನಿಲ್ಲದ ಪ್ರಾಯಶ್ಚಿತ್ತ ಹಾಕುತ್ತಿದ್ದಾನೆ. ಸುಮಿತ್ರೆ ಏನೆಂದರೂ ಪದ್ಮಾನ ಅಕ್ಕನಲ್ಲವೆ, ಅವಳಿಗೂ ನಮ್ಮ ಮನೆಗೂ ಯಾವ ಸಂಬಂಧವೂ ಇಲ್ಲ ವೆಂದು ಅವನು ಯೋಚನೆ ಮಾಡುವಾಗ ನನಗೆ ಈ ಮನೆಯಲ್ಲಿರುವುದು ಸಾಧ್ಯವೆ ?"

ಯಾವಾಗಲೂ ಗೋಪಿಗೆ ಧೈರ್ಯ ತುಂಬುತ್ತಿದ್ದ ಶೀಲೆ, ಯಾವಾಗಲೂ ಸಮಾಧಾನ ಹೇಳಿ ಗೋಪಿಯ ಪರವಾಗಿ ವಾದಿಸುತ್ತಿದ್ದ ಶೀಲೆ, ಇಂದು ಮಾತ್ರ ನಿರುತ್ತರಳಾದಳು. ತಮ್ಮನಂತೆಯೇ ಇದ್ದ ಗೋಪಿ, ಬಂದು ಒಂದೆ ರಡು ತಿಂಗಳು ಮಾತ್ರ ಕಳೆದಿದ್ದರೂ ತಂಗಿಗಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ಪದ್ಮಾವತಿ ಈ ಮನೆಯನ್ನು ಬಿಟ್ಟು ಹೊಸ ಸಂಸಾರ ಹೂಡುವರಲ್ಲಾ ಎಂಬ

ಕಳವಳದ ಸಂದರ್ಭದಲ್ಲೂ ಗೋಪಿಗೆ ಸಮಾಧಾನ ಹೇಳುವುದು ಶೀಲೆಗೆ ಸಾಧ್ಯವಾಗಲಿಲ್ಲ.

ಮೋಹನನ ಸ್ವಭಾವ ಪರಿಚಯ ಚೆನ್ನಾಗಿದ್ದ ಆಕೆಗೆ, ಸುಮಿತ್ರೆಯ ಪರವಾದ ಮಾತು ಆಡಲು ಮನಸ್ಸು ಅಳುಕುತ್ತಿತ್ತು. ಈ ಅಳುಕಿನ ಹಿನ್ನೆಲೆಯಲ್ಲೇ ಅರ್ಧ ನೋವಿನ, ಅರ್ಧ ಸಂದೇಹದ, ತನ್ನ ಗಂಡನ ವರ್ತನೆಯ ಸಮರ್ಥನೆಯ ಒಂದು ಮಾತನ್ನು ಅವಳು ಹೇಳಿದಾಗ ಗೋಪಿಗೆ ಆ ಮನೆಯಲ್ಲಿ ಸುಮಿತ್ರೆಯನ್ನು ಕರೆಸಿ ಸಂಭ್ರಮದ ಕುಟುಂಬ ಜೀವನ ಸಾಗಿಸುವ ಆಶೆಯೇ ಉಳಿಯಲಿಲ್ಲ.

ಪದ್ಮಾವತಿ ಬಳಿಯಿರದ ಸಂದರ್ಭ ನೋಡಿ ಶೀಲೆ ಆ ಮಾತು ಆಡಿದಳು.

" ಬೆಳೆದ ಹುಡುಗಿಯೆಂದು ನೀನೇ ಹೇಳಿದ್ದಿ ಗೋಪಿ. ತಂಗಿಗೆ ಮದುವೆಯಾಗುವವರೆಗೂ ಮದುವೆಯಾಗದಿರಲಿಕ್ಕೆ ಏನಾದರೊಂದು ಕಾರಣ ಬೇಕಲ್ಲ. ಈಗಿನ ಕಾಲದ ಹುಡುಗಿಯರು. ನಡತೆ ಹೇಗೋ, ನಡವಳಿಕೆ ಹೇಗೋ. ಕರೆಸಿ, ಕರೆಸಿ, ಮೈಮೇಲೆ ಅಪವಾದ ಹೊರಿಸಿಕೊಳ್ಳುವುದಕ್ಕಿಂತ ಮೊದಲೇ ಜಾಗ್ರತೆ ವಾಸಿ ಎಂದು ಅವರ ಆಲೋಚನೆಯೊ ಏನೊ. ತಂದೆ, ತಾಯಿಯಿಲ್ಲದ ಹುಡುಗಿ ನಿಜ. ಪಾಪ, ಆದರೆ........ನಿನ್ನ ಅಣ್ಣನ ಸ್ವಭಾವ ನಿನಗೆ ಗೊತ್ತೇ ಇದೆ...............ಮಂಗಳೂರಲ್ಲೆ ಏನಾದರೂ ವ್ಯವಸ್ಥೆ ಮಾಡಬಾರದೆ ? "

ಗೋಪಿ ಅತ್ತಿಗೆಯನ್ನು ಪರೀಕ್ಷಿಸುವಂತೆ ಒಮ್ಮೆ ನೋಡಿದ. ಅತ್ತಿಗೆಯಿಂದ ಆತ ಸಹಾನುಭೂತಿಯನ್ನೂ ಸಹಾಯವನ್ನೂ ನಿರೀಕ್ಷಿಸಿದ್ದ. ಆದರೆ ಅತ್ತಿಗೆಯ ಸಂಶಯ ಆತನ ಮನಸಿಗೆ ಜುಗುಪ್ಸೆಯುಂಟುಮಾಡಿತು.

ಕೆಲವೇ ದಿನಗಳ ಮಟ್ಟಿಗಾದರೂ ತಾನು ಕಂಡಿದ್ದ, ಸಮೀಪದ ಒಡನಾಟದಲ್ಲಿ ತನ್ನ ವರ್ತನೆಯಿಂದಲೇ ಮಾರ್ದವದ ಪ್ರತಿರೂಪಿನಂತೆ ತೋರಿದ್ದ ಸುಮಿತ್ರೆಯ ಕುರಿತು ಅವಹೇಳನೆಯೇ ಎಂಬುಕೊಂಡ.

ತಾನೂ ಅವಳನ್ನು ತಿರಸ್ಕರಿಸಿ ಪದ್ಮಾವತಿಯನ್ನು ಮದುವೆಯಾಗಿದ್ದೇನೆ ಎಂಬ ಅವ್ಯಕ್ತ ನೋವು ಸುಮಿತ್ರೆಯ ಕುರಿತು ಆತನಿಗಿದ್ದ ಸಹಾನುಭೂತಿಯನ್ನು ಇನ್ನಷ್ಟು ಹೆಚ್ಚಿಸಲು ಕಾರಣವಾಯಿತು.

ಪದ್ಮಾವತಿಯನ್ನು ಊರಿಗೆ ಕಳುಹಿಸಿ ಕೊಡುವಾಗ ಆತ ಹೇಳಿದುದಿಷ್ಟೆ.

"ಹೋಗಿ ಬಾ....ಎರಡು ತಿಂಗಳು ಅವಳ ಜೊತೆಗಿದ್ದು ಬಾ........ಬರುವಾಗ, ಯಾರಾದರೂ ಜೊತೆಗೆ ಸಿಕ್ಕಿದರೆ ಸರಿ, ಒಟ್ಟಿಗೆ ಬನ್ನಿ. ಇಲ್ಲವಾದಲ್ಲಿ ಮೂರ್ತಿಗೆ ಬರೆಯುತ್ತೇನೆ, ಕಡೂರಿನತನಕ ಕರೆದುಕೊಂಡು ಬಂದುಬಿಟ್ಟಾನು. ಪೂನಾಕ್ಕೆ ನಾನು ಬರುತ್ತೇನೆ."

೧೨

ಮಂಗಳೂರು ತಲುಪಿದ ಪದ್ಮಾವತಿಗೆ ಒಂದು ನಿರಾಸೆ ಕಾದಿತ್ತು. ಸುಮಿತ್ರೆ ಮಂಗಳೂರಿನಲ್ಲಿರಲಿಲ್ಲ. ಪದ್ಮಾ ಬರುವ ಸುದ್ದಿಯ ಕಾಗದ ತಲುಪುವ ಎರಡುದಿನ ಮುಂಚೆ, ಅವಳು ನೆರೆಮನೆಯ ಗೆಳತಿ ವಸಂತಿಯ ಒತ್ತಾಯಕ್ಕೆ ಸೈಗುಟ್ಟಿ ಅವಳ ಜೊತೆಗೆ ಪುತ್ತೂರಿಗೆ, ವಸಂತಿಯ ಚಿಕ್ಕಪ್ಪನ ಮನೆಗೆ ಹೋಗಿದ್ದಳು. ಅಕ್ಕ ತಂಗಿಯರ ಭೆಟ್ಟಿಯಲ್ಲಿ ಸಂತೋಷಕ್ಕಿಂತ ನೋವೇ ಹೆಚ್ಚಿದ್ದುದರಿಂದ, ಮೂರ್ತಿ, ಎರಡುವಾರ ಸುಮಿತ್ರೆ ಹಾಯಾಗಿ ಇದ್ದುಕೊಳ್ಳಲಿ ಎಂದು ಪದ್ಮ ಬರುವ ಸುದ್ದಿಯನ್ನು ತಿಳಿಸಿರಲೇ ಇಲ್ಲ.

ಸ್ಟೀಮರ್ ಇಳಿದ ಪದ್ಮಾವತಿಗೆ ಮೂರ್ತಿಯೊಬ್ಬನನ್ನೇ ಕಂಡು ಆಶ್ಚರ್ಯವಾಯಿತು. ಜೊತೆಗೆ ಬಂದಿದ್ದವರನ್ನು ಬೀಳ್ಕೊಟ್ಟು ಮೂರ್ತಿಯ ಜೊತೆಯಲ್ಲಿ ಗಾಡಿಯೇರುವ ತನಕವೂ ಅವಳು ಮಾತನಾಡಿರಲಿಲ್ಲ. ಮೂರ್ತಿಯನ್ನು ಗುರುತಿಸಿ ಬರೇ ನಕ್ಕಿದ್ದಳಷ್ಟೆ. ಗಾಡಿಯೇರಿದ ಮೇಲೆ ಮೂರ್ತಿಯೇ ಮಾತನಾಡಿದ.

"ಗೋಪಿ ಚೆನ್ನಾಗಿದ್ದಾನೆಯೆ ? ಏನಾದರೂ ಹೇಳಿದ್ದಾನೆಯೆ ?"

"ಚೆನ್ನಾಗಿದ್ದಾರೆ. ಏನಾದರೂ ಹೇಳಬೇಕೇ ಎಂದು ಕೇಳಿದಾಗ, ಕಾಗದ ಬರೆಯುತ್ತೇನೆ ಎಂದು ಹೇಳಿದರು. ಅಕ್ಕನನ್ನು ಬರುವಾಗ ಕರೆದುಕೊಂಡು ಬರಲಿಕ್ಕೆ ಹೇಳಿದಾರೆ."

ಮೂರ್ತಿ ಮೊದಲಬಾರಿಗೆ ಸಮಾಧಾನದ ನಗೆ ನಕ್ಕ.

"ಅಕ್ಕ ಏನು ಸ್ಟೀಮರಿಗೆ ಬರಲಿಲ್ಲ ? ಪರೀಕ್ಷೆಯಲ್ಲಿ ಹೇಗೆ ಮಾಡಿದ್ದಾಳಂತೆ ?"

" ಅವಳು ವಸಂತಿಯ ಒಟ್ಟಿಗೆ ಪುತ್ತೂರಿಗೆ ಹೋಗಿದ್ದಾಳೆ. ಎಂಟು ದಿನ ಸುತ್ತಾಡಿಕೊಂಡು ಬರಲಿ ಎಂದು ನಾನೂ ನಿನ್ನ ಕಾಗದವನ್ನು ಪುತ್ತೂರಿಗೆ ಕಳುಹಿಸಲಿಲ್ಲ........ಬೇಸರವಾಗುತ್ತದೆಯೇ ?"

" ಇಲ್ಲಪ್ಪ ! ಹೇಗಿದ್ದಾಳೋ ಎಂದು ಕೇಳಿದೆ ಅಷ್ಟೆ. ಮೀರಕ್ಕ ಹೇಗಿದ್ದಾರೆ, ಸುರೇಶ ಹೇಗಿದ್ದಾನೆ, ದೊಡ್ಡಮ್ಮ........?"

" ಎಲ್ಲ ಚೆನ್ನಾಗಿದ್ದಾರೆ. ಮನೆಗೇ ಹೋಗೋಣ...."

" ಅಕ್ಕ ಪರೀಕ್ಷೆಯಲ್ಲಿ ಹೇಗೆ ಮಾಡಿದ್ದಾಳೆ ?"

" ಚೆನ್ನಾಗಿಯೇ ಮಾಡಿದ್ದಾಳೆ. ಲೆಕ್ಕದಲ್ಲಿ ಏನೋ ಸ್ವಲ್ಪ ಹೆದರಿಕೆಯಾಗುತ್ತದೆಂದು ಹೇಳಿದ್ದಳು. ಆದರೆ ' ಮಿನಿಮಮ್ ' ಸಿಕ್ಕೀತೆಂದು ಕಾಣುತ್ತದೆ. ' ಗ್ರೂಪ್ 'ನಲ್ಲಿ ಖಂಡಿತ ಮೇಲೆ ಬಿದ್ದಾಳು "

ಮನೆಗೆ ಬಂದ ಪದ್ಮಾವತಿಗೆ ಮೀರೆಯ ಸಂಭ್ರಮದ ಸ್ವಾಗತ ಕಾದಿತ್ತು. ತಂದೆ ತಾಯಿಗಳಿಲ್ಲದ ತಬ್ಬಲಿ ಮಗು ಮನೆಗೆ ಮರಳುತ್ತಿದೆ ಎಂಬ ಕಲ್ಪನೆ ಪದ್ಮಾಳ ಮನಸಿನಲ್ಲಿ ಸುಳಿಯಗೊಡದಂತೆ ಮೀರೆ ಸಾಕಷ್ಟು ಎಚ್ಚರ ವಹಿಸಿ ಪದ್ಮಾವತಿಯನ್ನು ಉಪಚರಿಸಿದಳು.

ಆದರೂ ಸಂಜೆ ಮನೆಯ ಕಡೆ ಹೋಗೋಣವೆಂದು ಪದ್ಮಾ ಹಟ ಹಿಡಿದುದರಿಂದ, ಮೀರೆ ಅವಳನ್ನು ಕರೆದುಕೊಂಡು ಪಂಡಿತರಿಲ್ಲದ ಅವರ ಮನೆಗೆ ಹೋಗಬೇಕಾಗಿ ಬಂತು. ಮನೆಯ ಬಾಗಿಲು ತೆಗೆದು ಮೀರೆಯ ಜೊತೆಗೆ ಒಳಗೆ ಬಂದಾಗ ಮಾತ್ರ ಪದ್ಮಾವತಿಗೆ ದುಃಖ ತಡೆಯಲಾಗಲಿಲ್ಲ.

ಮನೆ ಸುಮಿತ್ರೆ ಬಿಟ್ಟು ಹೋದಂತಿತ್ತು. ಪಂಡಿತರು ಮಲಗುವ ಸ್ಥಳದಲ್ಲಿ ಒಂದು ಮಣೆಯ ಮೇಲೆ ಬಾಲಕೃಷ್ಣನ ಒಂದು ಸಣ್ಣಮೂರ್ತಿ, ಒಂದು ಗೀತೆಯ ಪುಸ್ತಕ. ತುಸು ದೂರದಲ್ಲೇ ಸುಮಿತ್ರೆಯ ಆಲ್ಜಿಬ್ರಾ, ಜಾಮೆಟ್ರಿಯ ಅಭ್ಯಾಸ ಪುಸ್ತಕಗಳು. ನಡುಮನೆಯಲ್ಲಿ ಸ್ಟ್ಯಾಂಡಿನಮೇಲೆ ಗೋಪಿ ಮದರಾಸಿನಲ್ಲಿ ತೆಗೆಸಿದ್ದ ಗೋಪಿ-ಪದ್ಮಾವತಿಯರ ಭಾವಚಿತ್ರ. ಅಡಿಗೆಯ ಮನೆಯಲ್ಲಿ ಸುಮಿತ್ರೆಯ ಒಂದೆರಡು ಬಟ್ಟೆಗಳು.

ಪಂಡಿತರಿಲ್ಲದ ಮನೆ.

ಮೌನವಾಗಿಯೆ ಪದ್ಮಾವತಿ ಮನೆಯೆಲ್ಲ ಸುತ್ತಿದಳು. ದಿನಾ ದೇವರ ಪೂಜೆಗೆಂದು ಅಕ್ಕನ ಕೈಗಳು ಕೇಳಿ ಕೊಯ್ದಿಡುತ್ತಿದ್ದ ಮರಜಾಜಿ ಹೂವಿನ ಗಿಡ ನೋಡಿದಾಗಲಂತೂ ಅವಳಿಗೆ ಅಳು ತಡೆಯಲಾಗಲಿಲ್ಲ.

"ಅಕ್ಕ ಒಬ್ಬಳೇ ಈ ಮನೆಯಲ್ಲಿ ಹೇಗಿದ್ದಳು ಮೀರಕ್ಕ ?" ಎಂದು ಕೇಳಿದಾಗ ಮೀರೆ ಹೇಳಿದಳು.

"ಅವಳನ್ನು ನೋಡಿದರೆ ನಿನಗೇ ತಿಳಿಯುತ್ತದೆ ಪದ್ಮಾ. ಕಡ್ಡಿಯ ಹಾಗಾಗಿ ಹೋಗಿದ್ದಾಳೆ. ಎಷ್ಟು ಹೇಳಿದರೂ ನಮ್ಮ ಮನೆಯಲ್ಲಿ ನಿಲ್ಲಲಿಕ್ಕೆ ಕೇಳಲೇ ಇಲ್ಲ ಪರೀಕ್ಷೆಯ ಗಲಾಟೆಯೊಂದಿದ್ದುದರಿಂದ ಅವಳಿಗೆ ಸಮಯ ಹೋದದ್ದು ತಿಳಿಯಲಿಲ್ಲ. ಇಲ್ಲವಾದರೆ ಏನು ಮಾಡಿಕೊಳ್ಳುತ್ತಿದ್ದಳೋ ದೇವರಿಗೇ ಗೊತ್ತು."

ಎಂಟು ದಿನಗಳ ಮೇಲೆ ಮಂಗಳೂರಿಗೆ ಮರಳಿ ಬಂದ ಸುಮಿತ್ರೆಯನ್ನು ಕಂಡಾಗ ಪದ್ಮಾವತಿಗೆ ಮೀರೆಯ ಮಾತಿನ ಹಿಂದಿದ್ದ ಸತ್ಯ ಸ್ಪಷ್ಟವಾಗಿ ಗೋಚರಿಸಿತ್ತು.

ಸುಮಿತ್ರೆ ಪುತ್ತೂರಿನಿಂದ ಮರಳಿದವಳು ನೇರವಾಗಿ ಮೂರ್ತಿಯ ಮನೆಗೇ ಬಂದಿದ್ದಳು. ಆಕೆ ಬಂದುದು ಮನೆಯ ಬೀಗದ ಕೈಯನ್ನು ಪಡೆಯಲೆಂದು. "ಬೀಗದ ಕೈ ಕೊಡುತ್ತೀರಾ ಮೀರಕ್ಕ. ಪುತ್ತೂರು ಟ್ರಿಪ್ ಮುಗಿಯಿತು." ಎಂದು ಪಡಸಾಲೆಗೆ ಧಾವಿಸಿಬಂದ ಸುಮಿತ್ರೆ ಪದ್ಮಾವತಿಯನ್ನು ಕಂಡು ಒಂದು ಕ್ಷಣ ದಿಗ್ಭ್ರಾಂತಳಾದಳು.

"ಅರೆ ! ಪದ್ಮಾ........ಯಾವಾಗ ಬಂದಿಯೇ?" ಎಂದು ಓಡಿಹೋಗಿ ತಂಗಿಯನ್ನು ತಬ್ಬಿಕೊಂಡಾಗ ಮೂರು ತಿಂಗಳ ಅಗಲುವಿಕೆಯ ನೋವು ಅವಳ ಮಾತಿನಲ್ಲಿ ತುಂಬಿತ್ತು. ಪದ್ಮಾವತಿಗೆ ಅಕ್ಕನ ಸ್ನೇಹಪ ಆಲಿಂಗನ ಸ್ವರ್ಗಸುಖವನ್ನು ಕೊಟ್ಟಿತ್ತು.

"ಪದ್ಮಾ........ಏನೇ ಇದು, ಹೇಳದೆ ಬಂದುಬಿಟ್ಟೆ ? ಯಾರೊಟ್ಟಿಗೆ ಬಂದಿಯೇ ?"

ಸುಮಿತ್ರೆಯ ಮಾತು ಅರ್ಧ ಸಂದೇಹ, ಅರ್ಧ ಕುತೂಹಲಗಳ ಮಿಶ್ರಣವಾಗಿತ್ತು. ಗೋಪಿಯೂ ಜೊತೆಗೆ ಬಂದಿರಬಹುದೆಂಬ ಸಂದೇಹ ವಿದ್ದುದರಿಂದ ಆರೀತಿ ಕೇಳಿದಳು.

ಪದ್ಮಾವತಿ ಸಂತೋಷದಿಂದ ಮಾತಾಡುವ ಸ್ಥಿತಿಯಲ್ಲಿರಲಿಲ್ಲ. ಮೀರೆಯೇ ಸುಮಿತ್ರೆಯ ಸಹಾಯಕ್ಕೆ ಬರಬೇಕಾಗಿ ಬಂತು.

“ ಒಬ್ಬಳೇ ಬಂದಳು ಸುಮಿ. ಯಾರೋ ಬರುವವರಿದ್ದರು ಸ್ಟೀಮರಿನಲ್ಲಿ. ಒಟ್ಟಿಗೇ ಬಂದಿದ್ದಾಳೆ. ಬಂದಮೇಲೆಯೇ ಗೊತ್ತಾಗಬೇಕೆಂದು ನಿನಗೆ ತಿಳಿಸಲೇ ಇಲ್ಲ.”

ಆಶ್ಚರ್ಯದ ಭೆಟ್ಟಿಯ ಆರಂಭದ ಉದ್ವೇಗ ಕಡಿಮೆಯಾದೊಡನೆ, ಸುಮಿತ್ರೆ ತಂಗಿಯನ್ನು ಅಡಿಯಿಂದ ಮುಡಿಯ ತನಕ ಪರೀಕ್ಷಿಸುವಂತೆ ನೋಡಿದಳು. ಹೊಸ ದಾಂಪತ್ಯದ ಸಂಭ್ರಮದ ಪ್ರತೀಕವೆಂಬಂತೆ ಮೈತುಂಬಿಕೊಂಡು ಪದ್ಮಾ ಮುದ್ದಾಗಿ ಕಾಣಿಸುತ್ತಿದ್ದಳು. ಪದ್ಮಾವತಿ ಮೀರೆಯ ಮಾತನ್ನು ನೆನೆಸಿಕೊಂಡು ‘ಕಡ್ಡಿ’ಯಂತಾಗಿದ್ದ ಅಕ್ಕನನ್ನು ನೆಟ್ಟ ನೋಟದಿಂದ ನೋಡುತ್ತಿದ್ದುದನ್ನೂ ಗಮನಿಸದೆ ಸುಮಿತ್ರೆ ಕೇಳಿದಳು.

“ ಮುಂಬಯಿ ಚೆನ್ನಾಗಿ ಹಿಡಿಯುತ್ತದೆ ಪದ್ಮಾಳಿಗೆ, ಅಲ್ಲವೆ ಮೀರಕ್ಕ?”

“ ಹಿಡಿಯದಿದ್ದರೆ ಹಿಡಿಸಲಿಕ್ಕೆ ಗಂಡ ಹತ್ತಿರದಲ್ಲಿದ್ದಾರಲ್ಲ.” ಎಂದು ಮೀರೆ ನಗೆಮಾತು ಆಡಿದಳು.

“ ನೀನ್ಯಾಕೆ ಹೀಗಾಗಿಬಿಟ್ಟೆಯಕ್ಕ ?” ಎಂದು ಪದ್ಮಾವತಿ ಅರ್ಧ ಹೆದರಿಕೊಂಡೇ ಕೇಳಿದಳು.

“ ನನಗೇನಾಗಿದೆ ಧಾಡಿ? ” ಎಂದಳು ಸುಮಿತ್ರೆ, ಆ ಮಾತನ್ನು ಹಾರಿಸಿ ವಿಷಯ ಮರೆಸುವ ಉದ್ದೇಶದಿಂದ—

“ ಹೋಗೋಣ ನಡಿ, ಮನೆಗೆ ” ಎಂದಾಗ ಮೀರೆ ಮಾತನಾಡಬೇಕಾಗಿ ಬಂತು.

“ ಈಗೆಲ್ಲಿ ಮನೆಗೆ ಸುಮೀ. ಅವರು ಹಾಗೆಯೇ ಹೇಳಿಹೋಗಿದ್ದಾರೆ. ಈಗ ಬರುವ ಹೊತ್ತಾಯಿತು. ಸುಮಿತ್ರೆ ಬಂದರೆ ಬಿಡಬೇಡ—ನನ್ನನ್ನು ಕೇಳದೆ ಅವಳು ಮನೆಗೆ ಹೋಗಬಾರದು, ಹೇಳು ಎಂದಿದ್ದಾರೆ. ಅವರನ್ನು ಕೇಳಿ ಪದ್ಮೆಯನ್ನು ಕರೆದುಕೊಂಡು ಹೋಗು ಬೇಕಾದರೆ ಈಗ ಊಟಕ್ಕೇಳು. ನನ್ನ ಸೀರೆಯಿದೆ ನೋಡು ಆ ಕೋಣೆಯಲ್ಲಿ. ಸೀರೆ ಬದಲಿಸಬೇಕಾದರೆ ಅದನ್ನು ಉಟ್ಟುಕೋ.” ಎಂದು ಮೀರೆ ಹೇಳಿದಾಗ ಸುಮಿತ್ರೆಗೆ ‘ ಒಲ್ಲೆ’ ಎನ್ನುವ ಎದೆಗಾರಿಕೆ ಉಂಟಾಗಲಿಲ್ಲ.

ಮೂರ್ತಿ ಬಂದಮೇಲೆ ಸುಮಿತ್ರೆ ಇನ್ನೊಮ್ಮೆ ತಂಗಿಯನ್ನು ಮನೆಗೆ ಕರೆದೊಯ್ಯಲು ಪ್ರಯತ್ನಿಸಿ ವಿಫಲಳಾದಳು. " ರಜೆ ಮುಗಿಯುವ ವರೆಗೆ ಪದ್ಮಾ ಇಲ್ಲಿಯೇ ಇರುತ್ತಾಳೆ. ಅವಳ ಜೊತೆಗೆ ನೀನೂ ಇರಬೇಕು. ಅವಳು ಹೋದಮೇಲೆ ಮತ್ತೆ ನೋಡೋಣ—ಅಷ್ಟರಲ್ಲಿ ನಿಸಲ್ಪ ಬರುತ್ತದಲ್ಲ. ಅಷ್ಟರ ತನಕ ಯಾವ ಆಲೋಚನೆಯೂ ಮಾಡದೆ ನೀನಿಲ್ಲಿ ಇರು." ಎಂದು ಸ್ಪಷ್ಟ ವಾಗಿ ಮೂರ್ತಿ ಹೇಳಿಬಿಟ್ಟ.

ಮೂರ್ತಿಯೇ ಈಗ ತನ್ನ ಬದುಕಿನ ಬಂಧುವಾಗಿ, ಆಧಾರಸ್ತಂಭವಾಗಿ ಉಳಿದಿರುವಾಗ ಅವನ ಮಾತನ್ನು ಸುಮಿತ್ರೆ ತಿರಸ್ಕರಿಸುವಂತಿರಲಿಲ್ಲ.

ಹೀಗಾಗಿ ಸುಮಿತ್ರೆಯ ರಜಾದಿನಗಳು ಮೂರ್ತಿಯ ಮನೆಯಲ್ಲಿ ತಂಗಿ ಪದ್ಮಾವತಿಯ ಒಡನಾಟದಲ್ಲಿ ಆರಂಭವಾದವು.

ತಾನು ಪದ್ಮಾವತಿಯನ್ನು ಮನೆಗೆ ಕರೆದುಕೊಂಡು ಹೋಗಲು ಮೂರ್ತಿ ಒಪ್ಪದಿದ್ದರೂ ಮನೆ ಹೇಗಿದೆಯೆಂದು ನೋಡಹೋಗುವ ನೆಪದಿಂದ ಸುಮಿತ್ರೆ ತಂಗಿಯನ್ನು ಅದೇ ಸಂಜೆ ಕರೆದುಕೊಂಡು ಹೋದಳು. ಪದ್ಮಾ ಮೀರೆಯನ್ನು ಜೊತೆಗೆ ಬರುವಂತೆ ಒತ್ತಾಯಿಸಿದರೂ ಆಕೆ ಇಲ್ಲದ ನೆಪ ಹೇಳಿ ತಪ್ಪಿಸಿ ಕೊಂಡಳು. ಅಕ್ಕ ತಂಗಿಯರ ಏಕಾಂತಕ್ಕೆ ತನ್ನಿಂದ ಭಂಗ ಬೇಡ ಎಂದೇ ನೆಪ ಹೂಡಿದುದು. ಸುಮಿತ್ರೆಗೆ ಬೇಕಾಗಿದ್ದುದೂ ಅಷ್ಟೆ. ತಂಗಿಯೊಡನೆ ತುಂಬ ಮಾತನಾಡಬೇಕಿತ್ತು. ಈಗ ಸರಿಯಾದ ಸಂದರ್ಭ ಒದಗಿಬಂತು.

ಮೀರೆ ಬಾರದಿದ್ದುದರಿಂದ ಇನ್ನೆಲ್ಲಿ ಅಕ್ಕನ ದುಃಖಪ್ರದರ್ಶನದಲ್ಲಿ ತಾನೊಬ್ಬಳೇ ಭಾಗಿಯಾಗಬೇಕಾಗುವುದೋ ಎಂದು ಹೆದರಿಕೊಂಡಿದ್ದ ಪದ್ಮಾ ವತಿಗೆ ಮನೆಯಲ್ಲಿ ವಿಚಿತ್ರ ಅನುಭವವಾಯಿತು. ಸುಮಿತ್ರೆ ಅಳಲಿಲ್ಲ. ತಂದೆಯ ಮರಣದ ವಿಚಾರ ಯಾವ ಮಾತನ್ನೂ ಆಡಲಿಲ್ಲ. ಅಡುಗೆಯ ಮನೆಯಲ್ಲಿ ಕಾಫಿಗೆ ನೀರಿಟ್ಟು ತಂಗಿಯನ್ನು ಬಳಿಗೆ ಕರೆದು ಮಲಗಿಸಿ ಅವಳ ತಲೆಯನ್ನು ತನ್ನ ತೊಡೆಯ ಮೇಲಿರಿಸಿ, ಪದ್ಮೆಯ ಮುಂಗುರುಳು ತೀಡುತ್ತ ಸುಮಿತ್ರೆ ತಂಗಿಯ ಮುಂಬಯಿ ಜೀವನದ ವಿಚಾರ ನೂರೆಂಟು ಪ್ರಶ್ನೆ ಹಾಕಿದಳು.

" ನಿನ್ನ ಅಕ್ಕ, ಭಾವನ ಹೆಂಡತಿ, ನಿನ್ನನ್ನು ಚೆನ್ನಾಗಿ ನೋಡಿಕೊಂಡಿ ದ್ದಾರೆಯೆ ? ಅವರ ಸ್ವಭಾವ ಹೇಗೆ. ಹೇಗಿದ್ದಾರೆ? "

" ನಾನು ಎಂದರೆ ಜೀವ ಅಕ್ಕ. ಒಂದೇ ಒಂದು ಕೆಟ್ಟ ಮಾತು ಅವರ ಬಾಯಿಂದ ಕೇಳಲಿಕ್ಕೆ ಸಾಧ್ಯವೇ ಇಲ್ಲ. ಹೂವಿನ ಹಾಗೆ ಅವರ ಮನಸ್ಸು."

" ಅವರು ಗಂಡನನ್ನು ಬಹಳ ನೆಚ್ಚಿಕೊಂಡಿದ್ದಾರಂತಲ್ಲ ? "

" ಅಯ್ಯೋ ಗಂಡ ಎಂದರೆ ದೇವರಿದ್ದ ಹಾಗೆ. ಭಾವನಿಗೂ ಅಷ್ಟೆ. ಹೆಂಡತಿಯೆಂದರೆ ಪಂಚಪ್ರಾಣ. ಆದರೆ ನಿನಗೆ ಹೇಗೆ ಗೊತ್ತಾಯಿತು ? "

" ನಿನ್ನ ಗಂಡನೇ ಇಲ್ಲಿ ಹೇಳುತ್ತಿದ್ದರಲ್ಲ, ಅತ್ತಿಗೆಯನ್ನು ಯಾಕೆ ಕರೆದು ಕೊಂಡು ಬರಲಿಲ್ಲವೆಂತ ಕೇಳಿದ್ದಕ್ಕೆ. ಅಣ್ಣನಿಗೆ ಅವಳನ್ನು ಒಂದು ದಿನವೂ ಬಿಟ್ಟಿರಲು ಸಾಧ್ಯವಾಗುವುದಿಲ್ಲ ಎಂದು ಹೇಳುತ್ತಿದ್ದರು. ನಿನ್ನ ಗಂಡ ಮಾತ್ರ. ಎರಡೇ ತಿಂಗಳಿಗೆ ನಿನ್ನನ್ನು ತಾಯಿಯ ಮನೆಗೆ ಓಡಿಸಿದರೇ........ ? " ಸುಮಿತ್ರೆಯ ಹುಸಿಮುನಿಸಿನ ಹಾಸ್ಯದ ಪ್ರಶ್ನೆ ಅದು. ಕೇಳಿ ಪದ್ಮಾವತಿಯ ಮುಖ ನಾಚಿಕೆಯಿಂದ ಕೆಂಪಾಯಿತು.

" ಇಲ್ಲಪ್ಪ. ನಾನು ಬರುವ ಮುಂಚಿನ ರಾತ್ರಿ ಅವರು ನಿದ್ದೆಯೇ ಮಾಡ ಲಿಲ್ಲ. ಆದರೆ ನಾನು ಹೊರಟಾಗಿತ್ತು. ಹೋಗಲೇ ಬೇಕೆಂತ ಹಟ ಹಿಡಿದಿದ್ದೆ. ಹೀಗಾಗಿ ಕಳುಹಿಸಿಕೊಟ್ಟರು.

" ನಾನು ಏನು ಹೇಳಿದರೂ ನಿನ್ನ ಗಂಡನನ್ನು ನೀನು ಬಿಟ್ಟು ಕೊಟ್ಟೀಯಾ ?" ತಂಗಿಯ ಕೆನ್ನೆಯನ್ನು ಸುಮಿತ್ರೆ ಮೃದುವಾಗಿ ಚಿವುಟಿದಳು.

" ಹೋಗಕ್ಕ. ನಿನಗೆ ತಮಾಷೆಯೆ, ಅವರ ಮನಸ್ಸು ನಿನಗೆ ಗೊತ್ತಿಲ್ಲ. ಇಲ್ಲಿಂದ ತಂತಿ ಬಂದ ದಿವಸ ಅವರನ್ನು ನೋಡಬೇಕಿತ್ತು."

ಮಾತು ಅನಿರೀಕ್ಷಿತವಾಗಿ ತಂದೆಯ ಮರಣದ ಕಡೆ ತಿರುಗುತ್ತಿತ್ತು. ಆದರೆ ಸುಮಿತ್ರೆ ತಂಗಿಯನ್ನು ತಡೆಯುವ ಪ್ರಯತ್ನ ಮಾಡಲಿಲ್ಲ.

" ಅವರು ಅಳಬಹುದೆಂದು ನಾನೆಣಿಸಿರಲಿಲ್ಲ ಅಕ್ಕ. ಎಷ್ಟಾದರೂ ನನ ತಂದೆಯೆಂದಷ್ಟೇ ಅವರಿಗೆ ದುಃಖವಾದೀತು, ಎಂದೆಣಿಸಿದ್ದೆ. ಅವರು ಮೂರು ದಿನ ಸರಿಯಾಗಿ ಊಟ ಸಹ ಮಾಡಿರಲಿಲ್ಲ. ಆಮೇಲೆ ಯಾವಾಗಲೂ ನಿನಗೆ ಎಷ್ಟು ಕಷ್ಟವಾಗಬಹುದು, ದುಃಖವಾಗಬಹುದು ಎಂದು ಯೋಚನೆ ಮಾಡಿ ಕೊಂಡೇ ಇದ್ದರು."

" ಅಪ್ಪಯ್ಯ ನಮ್ಮನ್ನು ಬಿಟ್ಟು ಹೋದಾಗ ನಿನಗೆ ದುಃಖವಾಗಲಿಲ್ಲವೇ ಪದ್ಮಾ ?"

" ಇದೇನಕ್ಕ ಹೀಗೆ ಕೇಳುತ್ತೀ? ನನ್ನ ಅಪ್ಪಯ್ಯ ನನಗೆ ಬೇಡವಾದಾರೆ? ' ಅವರು ' ಹೇಳಿದ ಹಾಗೆ ನಿನ್ನ ಕಷ್ಟ ನೋಡುವಾಗ ನಮ್ಮದೆಲ್ಲ ದುಃಖವೇ ? ಎಂದು ಕಾಣುತ್ತದೆ.''

ಸುಮಿತ್ರೆ ಕ್ಷಣಕಾಲ ಮಾತನಾಡಲಿಲ್ಲ.

ಆ ಮೇಲೆ ಬಂತು ದುಃಖದ ಮಹಾಪೂರ. ಬಳಿಯಲ್ಲೇ ಸೋಸಿ ತಂಗಿಗೆ ಕೊಡಲೆಂದು ಇಟ್ಟಿದ್ದ ಕಾಫಿ ತಣ್ಣಗಾಗುತ್ತಲೇ ಇತ್ತು. ಸುಮಿತ್ರೆ, ತನ್ನ ಹೃದಯದ ಅಳಲನ್ನೆಲ್ಲ ತಂಗಿಯ ಮುಂದೆ ತೋಡಿಕೊಂಡಳು.

ತಂಗಿಯನ್ನು ಬಸ್ ನಿಲ್ದಾಣದಲ್ಲಿ ಬಿಟ್ಟು ಪಂಡಿತರು ಬಂದು ಮಲಗಿದಲ್ಲಿಂದ, ಅವರ ಕೊನೆಯ ದಿನಗಳು, ಸಾಯುವ ಮುನ್ನ ಪದ್ಮಳನ್ನು ನೋಡಬಯಸಿದುದು, ಸುಮಿತ್ರೆಯ ಕುರಿತಾದ ಕಳವಳ, ಅವರ ಮರಣದಿಂದ ಬರಿದಾದ ಮನೆ, ಮರಣದ ನಂತರದ ಅಸಹ್ಯ ದಿನಗಳು, ಮೂರ್ತಿಯ ದುಃಖ, ಮೀರೆಯ ಸಹಾನುಭೂತಿ, ಸಹಾಯ, ವಸಂತಿಯ ಸಖ್ಯ, ಪರೀಕ್ಷೆ, ಹೀಗೆ ಸುಮಿತ್ರೆ ತನ್ನ ಮನಸ್ಸಿನ ಮೇಲೆ ಕಳೆದ ಹಲವು ತಿಂಗಳುಗಳಲ್ಲಿ ವಿಲಕ್ಷಣ ಪರಿಣಾಮ ಮಾಡಿದ್ದ ಎಲ್ಲ ಭಾವನೆಗಳನ್ನು, ಇಷ್ಟು ದಿನ ಹತ್ತಿಕ್ಕಿ ಹಿಡಿದಿದ್ದ ಎಲ್ಲ ಭಾವನೆಗಳನ್ನು ತಂಗಿಯ ಇದಿರಲ್ಲಿ ಸಂಕೋಚವಿಲ್ಲದೆ ವಿವರಿಸಿ ಹೇಳಿದಳು.

ಸುಮಿತ್ರೆಯ ದುಃಖಕ್ಕೆ ಬಿಡುಗಡೆಯ ಹಾದಿ ಬೇಕಾಗಿತ್ತು. ಸಹಭಾಗಿ ಆತ್ಮೀಯ ಜೀವ, ಕೇಳುವ ಸಹನೆ ತಾಳ್ಮೆಗಳುಳ್ಳ ಜೀವ, ಬಳಿಯಲ್ಲಿರುವಾಗ ಆ ದುಃಖವೆಲ್ಲ ಮಾತಿನಲ್ಲಿ ಪ್ರಕಟವಾಯಿತು.

"ಬೆಳಗಾವಿಯ ಚಿಕ್ಕಪ್ಪಯ್ಯ ಅವರ ಮನೆಗೆ ಬಂದಿರಲಿಕ್ಕೆ ಹೇಳಿದ್ದಾರೆ, ಪದ್ಮಾ. ನಾನು ಅಲ್ಲಿಗೆ ಹೋಗಿರುವುದು ಸಾಧ್ಯವೇನಮ್ಮಾ. ಆ ಚಿಕ್ಕಮ್ಮ ಯಾರೋ—ನಾನು ಹುಟ್ಟಿದಂದಿನಿಂದ ನೋಡಲಿಲ್ಲ. ಅವರ ನಡವಳಿಕೆ ಹೇಗೆಯೋ, ರೀತಿ ನೀತಿಗಳೆಲ್ಲ ಹೇಗೆಯೋ. ಇನ್ನು ಬೇಡವಾದ ಭಾರವೊಂದು ಕುತ್ತಿಗೆಗೆ ಬಿದ್ದಿದೆಯೆಂದು ಬರಲಿಕ್ಕೆ ಹೇಳಿದ್ದಾರೆಂದು ಹೋಗಿ ನನಗೂ ದುಃಖ, ಅವರಿಗೂ ಕಷ್ಟ, ಹೀಗಾದರೆ ದೇವರೇ ಗತಿ."

ಪದ್ಮಾ ಬಯಸಿದ ಸಂಧಿ ಈಗ ಬಂತು. ಗೋಪಿಯ ಆಮಂತ್ರಣವನ್ನು ಅಕ್ಕನಿಗೆ ತಲುಪಿಸುವುದು ಹೇಗೆ ಎಂದು ಕಾದುಕೊಂಡಿದ್ದ ಪದ್ಮಾವತಿ ಈ ಸಂದರ್ಭವನ್ನು ಬಿಡುವಂತಿರಲಿಲ್ಲ.

ಅಕ್ಕನ ಮುಖವನ್ನು ನೆಟ್ಟ ನೋಟದಿಂದ ನೋಡುತ್ತ ಅವಳು ಹೇಳಿದಳು.

" ನೀನು ಬೇಜಾರು ಮಾಡಿಕೊಳ್ಳದಿದ್ದರೆ ನಾನೊಂದು ಮಾತು ಹೇಳುತ್ತೇನೆ ಅಕ್ಕ. ಅದು ನನ್ನ ಮನಸ್ಸಿನ ಇಚ್ಛೆಯೇ ಆದರೂ, ಅವರು ಒತ್ತಾಯ ಮಾಡಿ ತಿಳಿಸಿದ ಅಭಿಪ್ರಾಯ ಕೂಡ ಹೌದು. "

ಸುಮಿತ್ರೆ ಸ್ಪಷ್ಟವಾಗಿ ಏನನ್ನೂ ಊಹಿಸಿ ತಿಳಿಯುವಂತಿರಲಿಲ್ಲವಾದರೂ ನಗು ತಂದುಕೊಂಡು ಹೇಳಿದಳು.

" ಹೇಳೇ ಕಳ್ಳಿ. ನಿನ್ನನ್ನು ಬಿಟ್ಟು ಇನ್ನು ಯಾರಿದ್ದಾರೆ ನನಗೆ ? "

" ನೀನು ಬೊಂಬಾಯಿಗೇಕೆ ಬರಬಾರದು ? "

" ಬೊಂಬಾಯಿಗೆ ? "

" ಹ್ಞೂ. ಇಲ್ಲಿಯಾದರೂ ನಿನಗೆ ಕಲಿಯುವ ಆಸೆಯೇ ಮುಖ್ಯವಲ್ಲ ? ಬೆಳಗಾವಿಗೆ ಹೋಗಿ ನೀನು ನಿಲ್ಲುತ್ತೀಯೆಂದು ನಾನು ನಂಬುವುದಿಲ್ಲ. ಇಲ್ಲಿ ಇನ್ನು ಟ್ರೈನಿಂಗಿಗೆ ವರ್ಷ ಹಾಳು ಮಾಡಿಕೊಂಡು ಎಲ್ಲಿ ಟೀಚರ್ ಕೆಲಸ ಸಿಕ್ಕೀತು ಎಂತ ಹುಡುಕುತ್ತ ಕುಳಿತುಕೊಳ್ಳುವುದಕ್ಕಿಂತ ಈಗಲೇ ನಿನ್ನ ತಂಗಿಯ ಮನೆಗೆ ಬರಬಾರದೆ ? ಬೊಂಬಾಯಿಯಲ್ಲಿ ನಿನಗೆ ಕೆಲಸ ಸಿಗುವುದು ಕಷ್ಟವಲ್ಲ—ನಿನಗೆ ಕೆಲಸ ಮಾಡಲೇ ಬೇಕೆಂದಿದ್ದರೆ. ಅವರು ಕೂಡ ಬರುವಾಗ ನಿನ್ನನ್ನು ಕರೆದುಕೊಂಡು ಬರಬೇಕೆಂದು ಹೇಳಿದ್ದಾರೆ. ' ಇಬ್ಬರಾದರೆ ನಿಮಗೆ ಹೆದರಿಕೆಯೂ ಇಲ್ಲ. ಕಡೂರಿನಿಂದ ಸೀದಾ ಬನ್ನಿ; ಪುಣೆಗೆ ಬರುತ್ತೇನೆ ' ಎಂದು ಹೇಳಿದ್ದಾರೆ. "

ಹೇಳಬೇಕಾಗಿದ್ದುದನ್ನು ಪದ್ಮಾವತಿ ಹೇಳಿ ತನ್ನ ಮಾತಿನ ಪರಿಣಾಮವೇನಾಗುವುದೆಂದು ನಿರೀಕ್ಷಿಸತೊಡಗಿದಳು.

ಸುಮಿತ್ರೆ ಯಾವ ಮಾತನ್ನೂ ಆಡಲಿಲ್ಲ.

ತಂಗಿಯ ಕರೆಯಲ್ಲಿ ಸ್ವತಂತ್ರ ಜೀವನದ ಪ್ರಲೋಭನ ತೋರುವ ಮಮತೆಯ ಆತ್ಮೀಯ ಸಲಹೆಯಿತ್ತು. ಆದರೆ ತಾನು ಸಿಲುಕಿಕೊಂಡ ಪರಿಸ್ಥಿತಿಯಲ್ಲಿ ಸ್ವಾಧೀನತೆ ತಪ್ಪಿ, ಸ್ವಾಭಿಮಾನ ಕೆದರಿ ದೊರಕಿಸಿಕೊಂಡ ಏಟಿನ ನೋವಿತ್ತು. ತಂದೆಯ ಮರಣದ ದುಃಖವನ್ನು ಮರೆಯಲು ದೂರದ ಊರಿಗೆ ಹೊರಟುಹೋಗುವುದರಿಂದ ಯಾವ ರೀತಿಯ ಪ್ರಯೋಜನವಾಗಬಹುದು

ಎಂಬ ಸ್ವಾಭಾವಿಕ ಶಂಕೆಯೂ ಇತ್ತು. ಅನಾಥಳಾದ ತನಗೂ ಆತ್ಮೀಯ ಬಂಧುಗಳಾಗಿ ಉಳಿದಿರುವ ಮೂರ್ತಿ ಮೀರೆಯನ್ನು ಬಿಟ್ಟು ಹೋಗುವುದು ಉಚಿತವೇ ಎಂಬ ಬಂಧುತ್ವದ ಪ್ರಶ್ನೆಯೂ ಉದ್ಭವಿಸದಿರಲಿಲ್ಲ. ಅವರಿಗೆ ಭಾರವಾಗಿ ಎಷ್ಟುರತನಕ ಉಳಿದೇನು ಎಂಬ ಲೋಕರೂಢಿಯ ವೇದಾಂತವೂ ಮನಸ್ಸಿನಲ್ಲಿ ಸುಳಿಯದೆ ಇರಲಿಲ್ಲ.

ಇವೆಲ್ಲ ಕಾರಣಗಳಿಂದ ಸುಮಿತ್ರೆ ಪದ್ಮಾವತಿಯ ಪ್ರಶ್ನೆಗೆ ಉತ್ತರ ಕೊಡಲಿಲ್ಲ.

“ ಏನು, ಬರುತ್ತೀಯಲ್ಲಕ್ಕ ! ಹಾಗೆಯೇ ಕಾಗದ ಬರೆಯುತ್ತೇನೆ. ”

ಈಗ ಮಾತ್ರ ಸುಮಿತ್ರೆಗೆ ಮಾತನಾಡದೆ ಬೇರೆ ದಾರಿಯಿದ್ದಿಲ್ಲ.

“ ನೀನು ಹೇಳುವುದೆಲ್ಲ ಸರಿ ಪದ್ಮಾ. ನಿನಗೆ ನಾನು ಅಕ್ಕ. ಆದುದರಿಂದ ನಿನ್ನ ಗಂಡ ಕೂಡ ನನ್ನನ್ನು ಆದರದಿಂದಲೇ ನೋಡಬಹುದು. ಆದರೆ ನಿನ್ನ ಭಾವ ಮತ್ತು ಅಕ್ಕ ತಮ್ಮ ಮನೆಯಲ್ಲಿ ನಾನು ಇರಬೇಕೆಂದು ಬಯಸಿಯಾರೆ ? ಚಿಕ್ಕಪ್ಪಯ್ಯನಿಗೆ, ಮೂರ್ತಿಮಾಷ್ಟ್ರಿಗೆ, ಭಾರವಾಗುವುದು ಬೇಡ ಎಂದು ಹೋಗಿ ಇನ್ನೊಬ್ಬರಿಗೆ ಭಾರವಾಗುವುದು ಹೇಗಮ್ಮಾ ? ”

ಮನೆಯಲ್ಲಿ ತಾನು ಊರಿಗೆ ಮರಳುವ ಸಂದರ್ಭದಲ್ಲಿ ಬೀಸಿದ್ದ ಬಿರುಗಾಳಿಯ ಅರಿವಿರದ ಪದ್ಮಾವತಿಗೆ ಅಕ್ಕನ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟವಾಗಲಿಲ್ಲ.

“ ನೀನು ಭಾವಯ್ಯನನ್ನು ನೋಡಿಲ್ಲ ಅಕ್ಕ. ಶೀಲಕ್ಕ ಹೇಳಿದ ಒಂದು ಮಾತಿಗೆ ಅವರು ಬೇಡವೆಂದು ಹೇಳುವುದಿಲ್ಲ. ”

“ ನೋಡೋಣಮ್ಮ. ಈಗ ಯಾಕೆ ಅವಸರ ? ಯಾವುದಕ್ಕೂ ರಿಸಲ್ಟ್ ಬರಬೇಕಲ್ಲ. ”

“ ನಿನಗೂ ಫೈಲಾಗುವ ಹೆದರಿಕೆಯೆ ? ”

ಸುಮಿತ್ರೆಗೆ ನಗು ಬಂತು.

“ ನಮ್ಮ ಪೇಪರುಗಳೆಲ್ಲ ನಿನಗೇ ಬಂದಿರಬೇಕು ಹಾಗಾದರೆ. ಮತ್ತೇನು ಹೆದರಿಕೆ ? ಖಂಡಿತ ಪಾಸು. ”

ಅಕ್ಕ ತಂಗಿಯರಿಬ್ಬರೂ ಮೂರ್ತಿಯ ಮನೆಗೆ ಹಿಂದಿರುಗುವಾಗ ಕತ್ತಲಾಗಿತ್ತು.

ಮಂಗಳೂರಿಗೆ ಬಂದಂದೇ ಪದ್ಮಾವತಿ, ಸುಮಿತ್ರೆಯನ್ನು ಮುಂಬಯಿಗೆ ಕರೆದುಕೊಂಡು ಹೋಗುವ ವಿಚಾರ ಗೋಪಿಯ ಅಭಿಪ್ರಾಯವನ್ನು ಮೂರ್ತಿಗೆ ತಿಳಿಸಿದ್ದಳು. ಆಮೇಲೆ ಮೀರೆಯೊಡನೆಯೂ ಮಾತನಾಡಿದ್ದಳು. ಮೂರ್ತಿಗೆ ಈ ಯೋಜನೆ ಸಮಂಜಸವಾದುದೆಂದು ಕಂಡುಬಂದಿದ್ದಿತಾದರೂ, ತಾನು ಪಂಡಿತರೊಡನೆ ಒಪ್ಪಿಕೊಂಡಿದ್ದ ಹೊಣೆಯನ್ನು ಹೊರಲು ಉದಾಸೀನನಾಗಿದ್ದೇನೆಂಬ ತಪ್ಪು ಅಭಿಪ್ರಾಯ ಉಂಟಾಗಬಾರದೆಂದು ಈ ವಿಚಾರ ಆಸಕ್ತಿ ವಹಿಸಿ ಗೋಪಿಯ ಆಮಂತ್ರಣಕ್ಕೆ ಸೈಗುಟ್ಟಿರಲಿಲ್ಲ. ಮೀರೆ ಮಾತ್ರ ಈ ವಿಚಾರ ಉದಾಸೀನಳಾಗಿದ್ದಳೆಂದರೂ ಸರಿಯೆ. ಸುಮಿತ್ರೆ ತಂಗಿಯ ಆಶ್ರಯದಲ್ಲಿ ಬೀಳುವುದು ಅವಳಿಗೆ ಸರಿಯೆಂದು ತೋರಲಿಲ್ಲ. ಆದರೆ ಪದ್ಮಾವತಿಗೆ ನೋವಾಗಬಾರದೆಂದು ತನ್ನ ಅಭಿಪ್ರಾಯವನ್ನು ತಿಳಿಸಿರಲಿಲ್ಲ.

ಸುಮಿತ್ರೆ ಮುಂಬಯಿಗೆ ಹೋಗುವುದು ಸರಿಯಲ್ಲವೆಂದು ತಿಳಿದು ಗೋಪಿಯ ಸಲಹೆಯನ್ನು ವಿರೋಧಿಸಿದವರಲ್ಲಿ ಶ್ರೀಕಂಠಶಾಸ್ತ್ರಿಗಳ ಹೆಸರನ್ನು ಒತ್ತಿಹೇಳಬೇಕು. ಪಂಡಿತರ ಮರಣದನಂತರ ಮೂರ್ತಿಯನ್ನು ಬಿಟ್ಟು ಸುಮಿತ್ರೆಗೆ ಸಮೀಪದ ಬಂಧುವಾಗಿ ನಿಂತವರು ಅವರೇ. ಪದ್ಮಾವತಿ ಮಂಗಳೂರಿಗೆ ಬಂದ ಸುದ್ದಿ ತಿಳಿದು ಅವಳನ್ನು ನೋಡಲೆಂದು ಬಂದಿದ್ದ ಅವರಿಗೆ ಪದ್ಮಾವತಿ ಗಂಡನ ಅಭಿಪ್ರಾಯವನ್ನು ತಿಳಿಸಿದ್ದಳು. ಆಗ ಅವರು ಆ ವಿಚಾರ ಏನನ್ನೂ ಮಾತನಾಡಲಿಲ್ಲವಾದರೂ ಸುಮಿತ್ರೆ ಪುತ್ತೂರಿನಿಂದ ಮರಳಿಬಂದ ಮೇಲೆ ಮೂರ್ತಿಯೊಡನೆ ಪ್ರಸ್ತಾಪ ಮಾಡಿದ್ದರು.

"ಪದ್ಮಾವತಿ ಅಕ್ಕನನ್ನು ಕರೆದುಕೊಂಡು ಹೋಗುವ ಉದ್ದೇಶದಿಂದಲೇ ಬಂದ ಹಾಗೆ ಕಾಣುತ್ತದೆ ರಾಯರೆ. ಆದರೆ ಸುಮಿತ್ರೆ ಮುಂಬಯಿಗೆ ಹೋಗುವುದು ಸರಿಯೆ? ಶ್ರೀನಿವಾಸನ ಅಭಿಪ್ರಾಯಕ್ಕೆ ವಿರುದ್ಧವಾಗಿ ಆ ಹುಡುಗಿಯ ಮನಸ್ಸಿಗೆ ನೋವಾಗುವಂಥ ಏನಾದರೂ ಕೆಲಸವಾಗಬಾರದಲ್ಲ. ತಂಗಿಯ ಮನೆ ಶಾಶ್ವತವೆ. ಅವಳ ಟ್ರೈನಿಂಗೋ ಗ್ರೈನಿಂಗೋ ಆಗುವವರೆಗೆ ಇಲ್ಲಿರಬಾರದೆ. ನಾನೂ ಮದುವೆಯ ವಿಚಾರ ಪ್ರಯತ್ನ ಮಾಡುತ್ತಿದ್ದೇನೆ."

"ಹೌದು ಶಾಸ್ತ್ರಿಗಳೆ. ನೀವು ಹೇಳುವುದು ಸರಿ. ಸುಮಿತ್ರೆಯನ್ನು ಒಂದೆರಡು ವರ್ಷ ಕಾಲ ನೋಡಿಕೊಳ್ಳಲು ನಾನು ಹಿಂಜರಿಯುವುದಿಲ್ಲ. ಆದರೆ ಅವಳ ವಿದ್ಯಾಭ್ಯಾಸಕ್ಕೂ, ಮುಂದಿನ ಮದುವೆಯ ಪ್ರಶ್ನೆಗೂ ಮುಂಬ ಯಿಯೇ ಹೆಚ್ಚು ಸಹಾಯ ಮಾಡಬಹುದಾದರೆ, ಅವಳು ಹೋಗಬಾರದು ಯಾಕೆ ? ಯಾವುದಕ್ಕೂ ರಿಸಲ್ಟ ಬರಲಿ. ಸುಮಿತ್ರೆಯೇನು ಮಗುವಲ್ಲ. ಅವಳಿಗೆ ಸರಿಕಂಡಂತೆ ಮಾಡುತ್ತಾಳೆ."

ಶ್ರೀಕಂಠ ಶಾಸ್ತ್ರಿಗಳು ಆ ಮೇಲೆ ಮಾತನಾಡಲಿಲ್ಲ.

ಇತ್ತ ಪದ್ಮಾವತಿ ಅಕ್ಕನನ್ನು ತಾನು ಕರೆದುಕೊಂಡು ಹೋಗುವುದು ಖಂಡಿತವೆಂದು ನಂಬಿ ಅದಕ್ಕಾಗಿ ಸಿದ್ಧತೆಯಲ್ಲಿ ತೊಡಗಿದಳು. ಅಕ್ಕನ ಅಸ್ಪಷ್ಟ ಉತ್ತರದಿಂದ ಅವಳು ನಿರಾಶಳಾಗಲಿಲ್ಲ. ಅಕ್ಕ ವ್ಯಕ್ತಪಡಿಸಿದ್ದ ಸಂದೇಹವನ್ನು ಮಾತ್ರ ಅವಳು ಗೋಪಿಗೆ ಬರೆದು ತಿಳಿಸಿದ್ದಳು. ಅದಕ್ಕೆ ಗೋಪಿಯಿಂದ ಸಮಾಧಾನ ಬೇಗನೆ ಬಂದಿತು. "ನೀನು ಯಾವ ಯೋಚನೆ ಯನ್ನೂ ಮಾಡಬೇಡ. ನಾನು 'ಬಾ' ಎಂದು ಕಾಗದ ಬರೆದ ಕೂಡಲೆ ಅಕ್ಕನನ್ನು ಕರೆದುಕೊಂಡು ಬಾ. ಕಡೂರಿನ ತನಕ ಮೂರ್ತಿಗೆ ಬರುವಂತೆ ಹೇಳು. ಸುಮಿತ್ರೆಯ ರಿಸಲ್ಟ ಹೇಗಿದ್ದರೂ ಜೂನ್ ಮೊದಲನೆಯ ವಾರದ ತನಕ ಬರುವುದಿಲ್ಲ. ಅದು ಬಂದ ಮೇಲೆಯೇ ಹೊರಟರೆ ಸಾಕು." ಎಂದು ಬರೆದಿದ್ದ.

ಸುಮಿತ್ರೆಯ ಪರೀಕ್ಷೆಯ ಫಲಿತಾಂಶ ಅಕ್ಕ ತಂಗಿಯರಿಬ್ಬರ ನಿರೀಕ್ಷೆಯ ಗುರಿಯಾಗಿತ್ತು. ರಜೆಯ ದಿನಗಳು ಒಂದೊಂದಾಗಿ ಸಂದು ಹೋಗುತ್ತಿದ್ದವು. ಪಂಡಿತರ ಮರಣದ ನಂತರ ತುಂಬ ಇಳಿದು ಹೋಗಿದ್ದ ಸುಮಿತ್ರೆ ತಂಗಿಯ ಆಗಮನದಿಂದ ಚೇತರಿಸಿಕೊಂಡಳು. ಅವಳ ದೇಹ ಪ್ರಕೃತಿಯೂ ತುಸು ಸುಧಾರಿಸಿತು.

ಈ ಮಧ್ಯೆ ಪದ್ಮಾವತಿ ಮಂಗಳೂರು ತಲುಪಿ ಎರಡು ತಿಂಗಳಾಗುತ್ತ ಬರುತ್ತಿದೆಯೆನ್ನುವಾಗ, ಸುಮಿತ್ರೆಯ ಫಲಿತಾಂಶ ಬರಲು ತುಸುವೇ ದಿನಗಳಿವೆ ಯೆನ್ನುವಾಗ, ಬಹಳ ದಿನಗಳಿಂದ ಏನನ್ನೋ ಪರೀಕ್ಷಿಸುವಂತೆ ವರ್ತಿಸು ತ್ತಿದ್ದ ಮೀರೆ ಒಂದು ದಿನ ಸುಮಿತ್ರೆಯ ಇದಿರಿನಲ್ಲೇ ಪದ್ಮಾವತಿಯನ್ನು ಕರೆದು ಕೇಳಿದಳು.

" ಏನೇ ಪದ್ಮಾ, ನಿನ್ನ ಗಂಡನಿಗೆ ಕಾಗದ ಬರೆದಿದ್ದಿಯೇನೆ ? "

ಪದ್ಮಾವತಿಗೆ ಈ ಪ್ರಶ್ನೆ ಅರ್ಥವಾಗಲಿಲ್ಲ. " ಯಾಕೆ ಮೊನ್ನೆ ಬರೆದಿದ್ದೆ ನಲ್ಲ. ಹಾಗೇನು ವಿಶೇಷ ? "

" ಎಲ್ಲ ಸತ್ಯ ಹೇಳಿದ್ದಿಯಲ್ಲಾ ? "

ಪದ್ಮಾವತಿಗೆ ಈ ಮಾತು ಅರ್ಥವಾಗಲಿಲ್ಲ. ಸುಮಿತ್ರೆಗೂ ಮೀರೆಯ ಮಾತು ಒಗಟಾಗಿ ಕಂಡುಬಂತು.

" ಮಗುವನ್ನು ಕರೆದುಕೊಂಡೇ ವಾಪಸು ಬರುತ್ತೇನೆಂದು ಬರೆದಿದ್ದಿ ಯೇನು ? ''

" ಮಗುವನ್ನು ? ಯಾವ ಮಗು.... ? '' ಪದ್ಮಾವತಿ ಗಲಿಬಿಲಿಗೊಂಡು ಕೇಳಿದಳು.

ಮೀರೆಗೆ ನಗು ತಡೆಯಲಾಗಲಿಲ್ಲ. ಸುಮಿತ್ರೆಗೆ ಮೊದಲು ಈ ನಗು ಅರ್ಥವಾಗಲಿಲ್ಲವಾದರೂ ಕ್ರಮೇಣ ಒಂದು ಸಂದೇಹ ಬಲವಾಗತೊಡಗಿತು.

" ಯಾವ ಮಗುವಂತೆ. ಪದ್ಮಾವತಿಯ ಮಗು. ಕಳ್ಳಿ, ನೀನು ಬಂದು ಎಷ್ಟು ತಿಂಗಳಾಯಿತೆ ? "

" ಯಾಕೆ ಮೀರಕ್ಕ ? "

" ಯಾಕೆ ಮೀರಕ್ಕ.... ? ನೋಡು ಸುಮೀ. ಬಂದಮೇಲೆ ಪದ್ಮಾ ಹೊರಗಾದದ್ದು ನನಗೆ ಗೊತ್ತಿಲ್ಲ. ಎಷ್ಟು ಸಲ ವಾಂತಿ ಮಾಡಿದ್ದಾಳೆಂದು ಅವಳನ್ನೆ ಕೇಳು. ಈಗ ' ಯಾಕೆ ಮೀರಕ್ಕ ? ' ಎನ್ನುತ್ತಾಳೆ. ಏನೇ, ಸಕ್ಕರೆ ಕೊಡಬೇಕೆಂದು ಹೆದರಿಕೆಯಾಗುತ್ತಿದೆಯೇನು, ಗಂಡುಮಗುವಾದರೆ ? "

" ಹೌದೇನೇ ? '' ಎಂದು ಸುಮಿತ್ರೆ ತಂಗಿಯ ಕಡೆ ನೋಡಿ ನಕ್ಕಳು. ಪದ್ಮಾವತಿ ಅಡುಗೆಯ ಮನೆಯಿಂದೆದ್ದು ಹೊರ ಅಂಗಳಕ್ಕೆ ಓಡಿಹೋದಳು.

ಪದ್ಮಾವತಿಗೆ ತಾನು ತಾಯಿಯಾಗಲಿದ್ದೇನೆ ಎಂಬ ಸಂದೇಹ ಈ ಮುಂಚೆಯೇ ಬಂದಿತ್ತು. ಆದರೆ ಸುಮಿತ್ರೆಯೊಡನೆಯೂ ಈ ವಿಚಾರ ಹೇಳುವ ಮನಸ್ಸು ಮಾಡಿರಲಿಲ್ಲ. ಒಂದೆರಡುಬಾರಿ ಊಟಮುಗಿಸಿ ವಾಂತಿ ಮಾಡಿದಾಗ ಬಳಿಯಲ್ಲಿದ್ದ ಸುಮಿತ್ರೆ "ಏನೇ ಇದು? " ಎಂದಾಗ "ಪಿತ್ಥ ಅಕ್ಕ; ನಿನ್ನೆ ರಾತ್ರಿ ನಿದ್ದೆಯೇ ಬಂದಿರಲಿಲ್ಲ. " ಎಂದು ಹೇಳಿ ತಪ್ಪಿಸಿಕೊಂಡಿದ್ದಳು.

ಆದರೆ ಮೀರೆಯ ಪರೀಕ್ಷೆಯ ಕಣ್ಣಿಂದ ಪದ್ಮಾವತಿ ತಪ್ಪಿಸಿಕೊಳ್ಳುವಂತಿರಲಿಲ್ಲ.

ಸುಮಿತ್ರೆ ತಂಗಿಯ ಬೆನ್ನಟ್ಟಿ ತಾನೂ ಅಂಗಳಕ್ಕೆ ಓಡಿವಳು.

೧೩

ಪರೀಕ್ಷೆಯ ಫಲಿತಾಂಶ ಬರುವ ದಿನ ಸಮೀಪಿಸಿದಾಗ ಸುಮಿತ್ರೆ ಅಧೀರೆಯಾಗ ತೊಡಗಿದಳು. ತನ್ನ ಭವಿಷ್ಯಕ್ಕೂ ಫಲಿತಾಂಶಕ್ಕೂ ನಿಕಟ ಸಂಬಂಧವಿದೆಯೆಂದು ತಿಳಿದು ಅದಕ್ಕಾಗಿ ಕಾಯುತ್ತಿದ್ದಾಗ ಹೀಗಾದುದರಲ್ಲಿ ಆಶ್ಚರ್ಯವಿರಲಿಲ್ಲ. ನಿಜಕ್ಕೂ ಆಕೆ ಮುಂಬಯಿಗೆ ಹೋಗುವೆನೆಂಬ ಆಸೆಯನ್ನು ಕಟ್ಟಿಕೊಂಡಿರಲಿಲ್ಲ. ಪಾಸಾದರೆ, ಟ್ರೈನಿಂಗಿಗೆ ಸೇರಲು ಅನುಕೂಲ ವಾತಾವರಣ ದೊರಕಿದರೆ, ಮುಂಬಯಿಗೆ ಹೋಗುವುದಿಲ್ಲ; ಹಾಸ್ಟೆಲಿನಲ್ಲಿದ್ದುಬಿಡುತ್ತೇನೆ ಎಂದು ನಂಬಿಕೊಂಡಿದ್ದಳು. ತಂಗಿಗೆ ಹೇಳಿ ಒಮ್ಮೆಗೇ ಮನ ನೋಯಿಸುವ ಇಚ್ಛೆಯಿಲ್ಲದೆ, ಮಾತನಾಡದೆ ಕುಳಿತಿದ್ದಳು.

'ರಿಸಲ್ಟ್' ಬರುವ ದಿನ ಸುಮಿತ್ರೆಯ ಚಡಪಡಿಕೆಯಂತೂ ಹೇಳಿತೀರದು. ನೂರೆಂಟು ಸಲ ವಸಂತಿಯ ಮನೆಗೆ ಧಾವಿಸದೆ ಇರಲಿಲ್ಲ. ಅಂದಿನ ಆತುರ ಬರೀ ಸುಮಿತ್ರೆಗೊಬ್ಬಳಿಗೇ ಸಂಬಂಧಿಸಿರಲಿಲ್ಲ. ಮನೆಯವರೆಲ್ಲರಿಗೆ ಆ ಜಾಡ್ಯ ಅಂಟಿತ್ತು. ಸುಮಿತ್ರೆಯಷ್ಟೇ ಆತುರವನ್ನು ಮೂರ್ತಿಯೂ ವ್ಯಕ್ತಪಡಿಸಿದ್ದ. ಮೀರೆಯಂತೂ ರಾತ್ರೆ ಹಾಲುಪಾಯಸ ಮಾಡುತ್ತೇನೆಂದು ನಂಬಿಕೊಂಡೇ ಅದರ ಸಿದ್ಧತೆ ನಡೆಸಿದ್ದಳು.

ಆದರೆ ಸಂಜೆ 'ಹಿಂದೂ' ಬಂದಾಗ ಮುತ್ತಿಗೆ ಹಾಕಿದ ವಿದ್ಯಾರ್ಥಿಗಳಲ್ಲಿ ಸುಮಿತ್ರೆಗೆ, ಅವಳ ಜೊತೆಗೇ ಬಂದಿದ್ದ ವಸಂತಿ, ಪದ್ಮಾವತಿ, ಮೂರ್ತಿಯರಿಗೆ ನಿರಾಸೆ ಕಾದಿತ್ತು.

ಸುಮಿತ್ರೆ ಫೇಲಾಗಿದ್ದಳು.

ಸುಮಿತ್ರೆಯ ಭವಿಷ್ಯಜೀವನದ ಕಲ್ಪನೆ ಒಂದು ವರ್ಷದ ಮಟ್ಟಿಗಾದರೂ—ಆ ಕಾಲ ಸುಮಿತ್ರೆಗಾದರೂ ಆಗ ಅನಂತ ವೇದನೆಯ ಇನ್ನೊಂದು ವರ್ಷವೆಂದೇ ಕಂಡಿತ್ತು—ಕುಸಿದು ಬಿದ್ದಿತ್ತು.

ನಿರಾಶೆಯಿಂದ ಕಂಗಾಲ್ಲಾಗಿ, ಸೋಲನ್ನನುಭವಿಸಿ ಕಣ್ಣೀರಿಳಿಸಿದ ಸುಮಿತ್ರೆಗೆ ಸಮಾಧಾನ ಹೇಳುವುದು ಮೂರ್ತಿಗೆ ತುಂಬ ಕಷ್ಟವಾಯಿತು.

" ಲೆಕ್ಕ ಎಂದು ಕಾಣುತ್ತದೆ. ಹೆದರಬೇಡ ಸುಮಿ. ಮುಂದಿನ ಸಲ ಖಂಡಿತ ಪಾಸಾಗುತ್ತೀ. ಒಂದು ವರ್ಷವಲ್ಲ. ಎಂಥೆಂಥವರೆಲ್ಲ ಫೈಲಾಗಿದ್ದಾರೆ. "

ಸುಮಿತ್ರೆಗೆ ಈ ವೇದಾಂತ ಬೇಕಿರಲಿಲ್ಲ.

ಒಂದು ವರ್ಷ !

ಅವಳ ಬದುಕಿನ ಈ ಸಂಧಿಕಾಲದಲ್ಲಿ, ತಂದೆಯನ್ನು ಕಳೆದುಕೊಂಡು ಅನಾಥೆಯಾದ ಈ ವಿಷಘಟ್ಟದಲ್ಲಿ ಒಂದು ವರ್ಷ ಒಂದು ಯುಗಪ್ರಾಯವಾಗಿತ್ತು.

ಇನ್ನು ಒಂದು ವರ್ಷದ ವೇದನೆ !

ಸುಮಿತ್ರೆ ಹೇಗೋ ಕಾಲೆಳೆದುಕೊಂಡು ಮನೆಗೆ ಬಂದಳು. ಸಂಭ್ರಮದ ಹಬ್ಬದೂಟ ಮಾಡಿಯೇವು ಎಂಬ ಆಸೆಯಿಂದಿದ್ದ ಮೀರೆಗೆ ಸುಮಿತ್ರೆಯ ಸೋಲು ತನ್ನ ಸೋಲೆನ್ನುವಷ್ಟು ನೋವಾಯಿತು.

ಪರೀಕ್ಷೆಯ ಫಲಿತಾಂಶದ ನೋವಿನಿಂದ ಸುಮಿತ್ರೆ ನರಳಿದ್ದು ಒಂದು ದಿನ ಮಾತ್ರ. ಮಾರನೆಯ ದಿನ ಅವಳ ಮುಂದಿನ ಕಾರ್ಯಕ್ರಮದ ನಿರ್ಧಾರ ಮನಸ್ಸಿನಲ್ಲಿ ರೂಪುಗೊಂಡಿತ್ತು.

" ನಾನು ಮುಂಬಯಿಗೆ ಬರುತ್ತೇನೆ ಪದ್ಮಾ " ಎಂದಳು ತಂಗಿಯೊಡನೆ.

ಈ ನಿರ್ಧಾರ ಪದ್ಮಾವತಿಗೆ ಆಶ್ಚರ್ಯವನ್ನುಂಟುಮಾಡಲಿಲ್ಲವಾದರೂ ಇದರಿಂದ ಮೂರ್ತಿಗೆ ತುಂಬ ಆಶ್ಚರ್ಯವಾಯಿತು. ಪಾಸಾದರೆ ಮಾತ್ರ ಮುಂದಿನ ಓದಿನ ಆಸೆಯಿಂದ ಸುಮಿತ್ರೆ ಮುಂಬಯಿಗೆ ಹೋಗಬಹುದು ಎಂದು ತಿಳಿದಿದ್ದ ಆತ, ಸ್ವತಂತ್ರ ಜೀವನದ ಆಸೆ ಸುಮಿತ್ರೆಯನ್ನು ಈ ನಿರ್ಧಾರಕ್ಕೆ ಕೆಡವಿದೆಯೆಂದು ಊಹಿಸಲು ಅಸಮರ್ಥನಾದ.

ಜೂನ್ ಎರಡನೆಯ ವಾರದಲ್ಲಿ ಪದ್ಮಾವತಿಗೆ ಗೋಪಿಯ ತಂತಿ ಬಂತು, ' ಕೂಡಲೇ ಸುಮಿತ್ರೆಯನ್ನು ಕರೆದುಕೊಂಡು ಹೊರಟುಬಾ ' ಎಂದು. ಮೀರೆ ಪದ್ಮಾವತಿಯನ್ನು ನೋಡಿ ಅವಳನ್ನು ಕಳುಹಿಸುವುದೇ ಬೇಡವೇ ಎಂದು

ಆದರೆ ಮೀರೆಯ ಪರೀಕ್ಷೆಯ ಕಣ್ಣಿಂದ ಪದ್ಮಾವತಿ ತಪ್ಪಿಸಿಕೊಳ್ಳುವಂತಿರಲಿಲ್ಲ.

ಸುಮಿತ್ರೆ ತಂಗಿಯ ಬೆನ್ನಟ್ಟಿ ತಾನೂ ಅಂಗಳಕ್ಕೆ ಓಡಿವಳು.

೧೩

ಪರೀಕ್ಷೆಯ ಫಲಿತಾಂಶ ಬರುವ ದಿನ ಸಮೀಪಿಸಿದಾಗ ಸುಮಿತ್ರೆ ಅಧೀರೆಯಾಗ ತೊಡಗಿದಳು. ತನ್ನ ಭವಿಷ್ಯಕ್ಕೂ ಫಲಿತಾಂಶಕ್ಕೂ ನಿಕಟ ಸಂಬಂಧವಿದೆಯೆಂದು ತಿಳಿದು ಅದಕ್ಕಾಗಿ ಕಾಯುತ್ತಿದ್ದಾಗ ಹೀಗಾದುದರಲ್ಲಿ ಆಶ್ಚರ್ಯವಿರಲಿಲ್ಲ. ನಿಜಕ್ಕೂ ಆಕೆ ಮುಂಬಯಿಗೆ ಹೋಗುವೆನೆಂಬ ಆಸೆಯನ್ನು ಕಟ್ಟಿಕೊಂಡಿರಲಿಲ್ಲ. ಪಾಸಾದರೆ, ಟ್ರೈನಿಂಗಿಗೆ ಸೇರಲು ಅನುಕೂಲ ವಾತಾವರಣ ದೊರಕಿದರೆ, ಮುಂಬಯಿಗೆ ಹೋಗುವುದಿಲ್ಲ; ಹಾಸ್ಟೆಲಿನಲ್ಲಿದ್ದುಬಿಡುತ್ತೇನೆ ಎಂದು ನಂಬಿಕೊಂಡಿದ್ದಳು. ತಂಗಿಗೆ ಹೇಳಿ ಒಮ್ಮೆಗೇ ಮನ ನೋಯಿಸುವ ಇಚ್ಛೆಯಿಲ್ಲದೆ, ಮಾತನಾಡದೆ ಕುಳಿತಿದ್ದಳು.

'ರಿಸಲ್ಟ್' ಬರುವ ದಿನ ಸುಮಿತ್ರೆಯ ಚಡಪಡಿಕೆಯಂತೂ ಹೇಳಿ ತೀರದು. ನೂರೆಂಟು ಸಲ ವಸಂತಿಯ ಮನೆಗೆ ಧಾವಿಸದೆ ಇರಲಿಲ್ಲ. ಅಂದಿನ ಆತುರ ಬರೀ ಸುಮಿತ್ರೆಗೊಬ್ಬಳಿಗೇ ಸಂಬಂಧಿಸಿರಲಿಲ್ಲ. ಮನೆಯವರೆಲ್ಲರಿಗೆ ಆ ಜಾಡ್ಯ ಅಂಟಿತ್ತು. ಸುಮಿತ್ರೆಯಷ್ಟೇ ಆತುರವನ್ನು ಮೂರ್ತಿಯೂ ವ್ಯಕ್ತಪಡಿಸಿದ್ದ. ಮೀರೆಯಂತೂ ರಾತ್ರೆ ಹಾಲುಪಾಯಸ ಮಾಡುತ್ತೇನೆಂದು ನಂಬಿಕೊಂಡೇ ಅದರ ಸಿದ್ಧತೆ ನಡೆಸಿದ್ದಳು.

ಆದರೆ ಸಂಜೆ 'ಹಿಂದೂ' ಬಂದಾಗ ಮುತ್ತಿಗೆ ಹಾಕಿದ ವಿದ್ಯಾರ್ಥಿಗಳಲ್ಲಿ ಸುಮಿತ್ರೆಗೆ, ಅವಳ ಜೊತೆಗೇ ಬಂದಿದ್ದ ವಸಂತಿ, ಪದ್ಮಾವತಿ, ಮೂರ್ತಿಯರಿಗೆ ನಿರಾಸೆ ಕಾದಿತ್ತು.

ಸುಮಿತ್ರೆ ಫೇಲಾಗಿದ್ದಳು.

ಸುಮಿತ್ರೆಯ ಭವಿಷ್ಯಜೀವನದ ಕಲ್ಪನೆ ಒಂದು ವರ್ಷದ ಮಟ್ಟಿಗಾದರೂ—ಆ ಕಾಲ ಸುಮಿತ್ರೆಗಾದರೂ ಆಗ ಅನಂತ ವೇದನೆಯ ಇನ್ನೊಂದು ವರ್ಷವೆಂದೇ ಕಂಡಿತ್ತು—ಕುಸಿದು ಬಿದ್ದಿತ್ತು.

ನಿರಾಶೆಯಿಂದ ಕಂಗಾಲ್ಲಾಗಿ, ಸೋಲನ್ನನುಭವಿಸಿ ಕಣ್ಣೀರಿಳಿಸಿದ ಸುಮಿತ್ರೆಗೆ ಸಮಾಧಾನ ಹೇಳುವುದು ಮೂರ್ತಿಗೆ ತುಂಬ ಕಷ್ಟವಾಯಿತು.

" ಲೆಕ್ಕ ಎಂದು ಕಾಣುತ್ತದೆ. ಹೆದರಬೇಡ ಸುಮಿ. ಮುಂದಿನ ಸಲ ಖಂಡಿತ ಪಾಸಾಗುತ್ತೀ. ಒಂದು ವರ್ಷವಲ್ಲ. ಎಂಥೆಂಥವರೆಲ್ಲ ಫೈಲಾಗಿದ್ದಾರೆ. "

ಸುಮಿತ್ರೆಗೆ ಈ ವೇದಾಂತ ಬೇಕಿರಲಿಲ್ಲ.

ಒಂದು ವರ್ಷ !

ಅವಳ ಬದುಕಿನ ಈ ಸಂಧಿಕಾಲದಲ್ಲಿ, ತಂದೆಯನ್ನು ಕಳೆದುಕೊಂಡು ಅನಾಥೆಯಾದ ಈ ವಿಷಘಟ್ಟದಲ್ಲಿ ಒಂದು ವರ್ಷ ಒಂದು ಯುಗಪ್ರಾಯವಾಗಿತ್ತು.

ಇನ್ನು ಒಂದು ವರ್ಷದ ವೇದನೆ !

ಸುಮಿತ್ರೆ ಹೇಗೋ ಕಾಲೆಳೆದುಕೊಂಡು ಮನೆಗೆ ಬಂದಳು. ಸಂಭ್ರಮದ ಹಬ್ಬದೂಟ ಮಾಡಿಯೇವು ಎಂಬ ಆಸೆಯಿಂದಿದ್ದ ಮೀರೆಗೆ ಸುಮಿತ್ರೆಯ ಸೋಲು ತನ್ನ ಸೋಲೆನ್ನುವಷ್ಟು ನೋವಾಯಿತು.

ಪರೀಕ್ಷೆಯ ಫಲಿತಾಂಶದ ನೋವಿನಿಂದ ಸುಮಿತ್ರೆ ನರಳಿದ್ದು ಒಂದು ದಿನ ಮಾತ್ರ. ಮಾರನೆಯ ದಿನ ಅವಳ ಮುಂದಿನ ಕಾರ್ಯಕ್ರಮದ ನಿರ್ಧಾರ ಮನಸ್ಸಿನಲ್ಲಿ ರೂಪುಗೊಂಡಿತ್ತು.

" ನಾನು ಮುಂಬಯಿಗೆ ಬರುತ್ತೇನೆ ಪದ್ಮಾ " ಎಂದಳು ತಂಗಿಯೊಡನೆ.

ಈ ನಿರ್ಧಾರ ಪದ್ಮಾವತಿಗೆ ಆಶ್ಚರ್ಯವನ್ನುಂಟುಮಾಡಲಿಲ್ಲವಾದರೂ ಇದರಿಂದ ಮೂರ್ತಿಗೆ ತುಂಬ ಆಶ್ಚರ್ಯವಾಯಿತು. ಪಾಸಾದರೆ ಮಾತ್ರ ಮುಂದಿನ ಓದಿನ ಆಸೆಯಿಂದ ಸುಮಿತ್ರೆ ಮುಂಬಯಿಗೆ ಹೋಗಬಹುದು ಎಂದು ತಿಳಿದಿದ್ದ ಆತ, ಸ್ವತಂತ್ರ ಜೀವನದ ಆಸೆ ಸುಮಿತ್ರೆಯನ್ನು ಈ ನಿರ್ಧಾರಕ್ಕೆ ಕೆಡವಿದೆಯೆಂದು ಊಹಿಸಲು ಅಸಮರ್ಥನಾದ.

ಜೂನ್ ಎರಡನೆಯ ವಾರದಲ್ಲಿ ಪದ್ಮಾವತಿಗೆ ಗೋಪಿಯ ತಂತಿ ಬಂತು, ' ಕೂಡಲೇ ಸುಮಿತ್ರೆಯನ್ನು ಕರೆದುಕೊಂಡು ಹೊರಟುಬಾ ' ಎಂದು. ಮೀರೆ ಪದ್ಮಾವತಿಯನ್ನು ನೋಡಿ ಅವಳನ್ನು ಕಳುಹಿಸುವುದೇ ಬೇಡವೇ ಎಂದು

ಯೋಚಿಸುತ್ತಿದ್ದಳು. ಮೂರ್ತಿಗೂ ಆತನಕ ಪದ್ಮಾವತಿ ತಾಯಿಯಾಗಲಿದ್ದಾಳೆಂಬ ವಿಚಾರ ತಿಳಿದಿರಲಿಲ್ಲ. ಈಗ ಮೀರ ತಿಳಿಸಿದಾಗ ಅವನಿಗೂ ಏನು ಮಾಡುವುದೆಂಬ ಯೋಚನೆ ತಲೆಗಂಟಿತು. ಆದರೂ ಸದ್ಯ ಗೋಪಿ ಬರೆದಂತೆ ಕಳುಹಿಸಿಕೊಡುವುದೇ ಸೂಕ್ತವೆಂದು ಬಗೆದು ಪದ್ಮಾವತಿಯೊಡನೆ ಹಾಗೆಯೇ ಹೇಳಿದ. "ಹೆರಿಗೆಯ ಸಮಯ ನಿನಗೆ ತಾಯಿಯ ಮನೆಯಿಲ್ಲವೆಂದು ಈ ಸಲ ನೀನು ಯೋಚಿಸಬಾರದು ಪದ್ಮಾ. ಗೋಪಿಗೂ ಕಾಗದ ಬರೆಯುತ್ತೇನೆ; ಬಂದುಬಿಡು." ಎಂದಿದ್ದ. ಪದ್ಮಾವತಿ "ಅಕ್ಕ ಇದ್ದಾಳಲ್ಲ, ಮೀರಕ್ಕ" ಎಂದಿದ್ದಳು.

ಆದರೆ ಸುಮಿತ್ರೆ ಮಾತ್ರ, ನಗಲಿಲ್ಲ.

ಮೂರ್ತಿ ಅಕ್ಕತಂಗಿಯರಿಬ್ಬರನ್ನು ಕಳುಹಿಸಿಕೊಡಲು ಕಡೂರಿನತನಕ ಬಂದಿದ್ದ. ಸುಮಿತ್ರೆಯ ಭವಿಷ್ಯದ ಕುರಿತು ಫಲಿತಾಂಶ ಬಂದಮೇಲೆ ಅವಳೊಡನೆ ಯಾವ ವಿಚಾರವೂ ಆತ ಮಾತನಾಡಿರಲಿಲ್ಲ. ಮೂರ್ತಿ ಮಾತನಾಡಬಹುದೆಂಬ ನಿರೀಕ್ಷೆಯಲ್ಲಿದ್ದ ಸುಮಿತ್ರೆಗೂ ಇದರಿಂದ ಆಶ್ಚರ್ಯವಾಯಿತು. ದಾರಿಯಲ್ಲಿ ಕೂಡ ಆತ ತನ್ನ ಮೌನವನ್ನು ಬಿಟ್ಟಿರಲಿಲ್ಲ. ಕಡೂರು ತಲುಪಿದ ಮೇಲೆ ಟ್ರೈನಿಗಾಗಿ ಕಾಯುತ್ತಿದ್ದಾಗ ಮೂರ್ತಿ ಕೇಳಿದ.

"ಮುಂಬಯಿಗೆ ಹೋಗಿ ಏನು ಮಾಡುತ್ತಿ ಸುಮೀ. ಬೇಸರವಾದರೆ ಬೇಗ ಬಂದುಬಿಡು. ಪ್ರೈವೇಟ್ ಆಗಿ ಮುಂದಿನ ಸಲ ಪರೀಕ್ಷೆಗೆ ಕುಳಿತುಕೊಳ್ಳುವುದಾದರೂ ಸ್ವಲ್ಪ ಅಭ್ಯಾಸ ಆಗಬೇಕಲ್ಲ."

"ಪರೀಕ್ಷೆಯ ಆಸೆ ಬಿಟ್ಟಿದ್ದೇನಣ್ಣಾ. ಹೇಗೂ ಎಸ್ ಎಸ್ ಎಲ್. ಸಿ. ತನಕ ಓದಿದ್ದೇನಲ್ಲ. ಮುಂಬಯಿಯಲ್ಲಿ ಒಂದು ಕೆಲಸ ಸಿಗಲಿಕ್ಕೆ ಕಷ್ಟವಾಗಲಿಕ್ಕಿಲ್ಲ."

'ಅಣ್ಣಾ' ಎಂದು ಸುಮಿತ್ರೆ ಮೂರ್ತಿಯನ್ನು ಸಂಬೋಧಿಸಿದುದು ಅದೇ ಮೊದಲು. ಅವನ ಕರುಳು ಕಿವುಚಿದಂತಾಯಿತು.

"ನೀನು ದುಡಿದು ಜೀವಿಸಬೇಕೇನಮ್ಮಾ. ಕೆಲಸದ ಹುಚ್ಚು ಬಿಟ್ಟುಬಿಡು. ಮುಂದಿನ ಸಲ ಪರೀಕ್ಷೆಗೆ ನಿಲ್ಲಲೇಬೇಕು. ಬೇರೆ ಏನಾದರೂ ಕಲಿಯುವುದು ಸಾಧ್ಯವಿದ್ದರೆ ನೋಡು. ಗೋಪಿಗೆ ಹಾಗೆಯೇ ಬರೆಯುತ್ತೇನೆ. ಕ್ರಿಸ್‌ಮಸ್ ರಜೆಗೆ ಸಾಧ್ಯವಾದರೆ ನಾನೂ ಬರುತ್ತೇನೆ" ಎಂದ.

ಸುಮಿತ್ರೆ ಕ್ಷಣಕಾಲ ಮಾತನಾಡಲಿಲ್ಲ.

" ನೋಡೋಣ ಅಣ್ಣ. ಅಲ್ಲಿಗೆ ಹೋದಮೇಲೆ ವಿಚಾರ ಮಾಡುತ್ತೇನೆ. ಮನೆಯ ಕಡೆ ಎಲ್ಲ ನೋಡಿಕೊಳ್ಳಲು ನಿಮ್ಮನ್ನೇ ನಂಬಿದ್ದೇನೆ. ನನಗೆ ಈಗ ಉಳಿದವರು ನೀವೊಬ್ಬರೇ ಬಂಧು ಅಣ್ಣಾ." ಎಂದಳು.

" ನೀನು ಆ ವಿಚಾರ ಯೋಚನೆ ಮಾಡಬೇಡ ಸುಮೀ. ಬಾಡಿಗೆಗೆ ಜನ ನೋಡಿದ್ದೇನೆ. ಎಲ್ಲ ವ್ಯವಸ್ಥೆಯನ್ನು ನಾನು ಮಾಡುತ್ತೇನೆ " ಎಂದು ಮೂರ್ತಿ ಭರವಸೆ ಹೇಳಿದ.

ಸುಮಿತ್ರೆಯ ಕಣ್ಣಲ್ಲಿ ನೀರು ತುಂಬಿತ್ತು. ಮೂರ್ತಿಯ ದೌರ್ಬಲ್ಯದ ಕಟ್ಟೆಯೊಡೆದು ಕಣ್ಣೀರು ಇಳಿಯುವುದರಲ್ಲಿತ್ತು. ಅಷ್ಟರಲ್ಲಿ ಗಾಡಿ ಬಂತು.

ಪದ್ಮಾವತಿ ಟಿಕೇಟಿಗೆಂದು ಗೋಪಿ ಕಳಿಸಿದ್ದ ಹಣವನ್ನು ಕೊಡ ಹೋದರೂ ತೆಗೆದುಕೊಳ್ಳದೆ ಮೂರ್ತಿ ಎರಡು ಸೆಕೆಂಡ್ ಕ್ಲಾಸ್ ಟೀಕೇಟು ತಂದು ಅಕ್ಕತಂಗಿಯರನ್ನು ಗಾಡಿಯಲ್ಲಿ ಕುಳ್ಳಿರಿಸಿದ. ಗಾಡಿಬಿಡಲು ಸಮಯ ವಾಯಿತೆನ್ನುವಾಗ ಸುಮಿತ್ರೆಯ ಕೈಯ್ಯಲ್ಲಿ ನೂರು ರುಪಾಯಿಯ ಒಂದು ನೋಟು ಇಟ್ಟು " ಯಾವುದಕ್ಕಾದರೂ ಬೇಕಾದೀತು ಸುಮೀ. ಇನ್ನೂ ಬೇಕಾದರೆ ಮೊದಲು ನಿನ್ನ ಅಣ್ಣನನ್ನು ಕೇಳಬೇಕು ಎಂಬುದನ್ನು ಮರೆಯ ಬೇಡ." ಎಂದ.

ಗಾಡಿ ಕಡೂರು ಬಿಟ್ಟು ಪುಣೆಯ ಹಾದಿ ಹಿಡಿಯಿತು.

ಗಾಡಿ ಮುಂದುವರಿದಂತೆ ಅಣ್ಣನ ಆಶ್ರಯ ಬಿಟ್ಟು ತಂಗಿಯ ಆಶ್ರಯಕ್ಕೆ ಬಿದ್ದೆ ಎಂಬ ಅರಿವು ಮೊದಮೊದಲು ಸುಮಿತ್ರೆಗೆ ಆಗತೊಡಗಿತು. ಮೂರ್ತಿಯನ್ನು ಬೀಳ್ಕೊಟ್ಟ ನೆನಪಿನ ವೇದನೆ ಅರ್ಧದಾರಿಯತನಕವೂ ಮರೆಯಾಗಲಿಲ್ಲ. ಆದರೆ ಕನ್ನಡದ ಗಡಿ ದಾಟಿ ಮರಾಟೀ ರಾಜ್ಯದಲ್ಲಿ ಗಾಡಿ ಕಾಲಿರಿಸಿದೊಡನೆ ಹೊಸ ಜನರ ರೀತಿ ನೀತಿಗಳ ನಿರೀಕ್ಷಣೆ ಪರೀಕ್ಷಣೆಗಳಲ್ಲಿ, ನಡತೆ ನಡವಳಿಕೆಗಳನ್ನು ಕಾಣುವಲ್ಲಿ ಕುತೂಹಲ ವಿಸ್ಮಯಗಳು ಹುಟ್ಟಿ ಕೊಂಡಂತೆ ಸುಮಿತ್ರೆ ಮುಂಬಯಿಯ ವಿಚಾರ ಚಿಂತಿಸತೊಡಗಿದಳು. ತಂಗಿಯೊಡನೆ ಮುಂಬಯಿಯ ಜೀವನದ ಕುರಿತಾದ ವಿವರಗಳಿಗಾಗಿ ಹಲವಾರು ಪ್ರಶ್ನೆ ಹಾಕಿದಳು. ಸಮಯದ ಗತಿ ವೇಗವಾಯಿತು. ಸುಮಿತ್ರೆಯ ಮನಸ್ಸು ಕನಸು ಕಾಣತೊಡಗಿತು. ಮಾರನೆಯ ದಿನ ಸಂಜೆ ಗಾಡಿ ಪುಣೆಗೆ ತಲುಪಿತು.

ಗೋಪಿ ಪ್ಲಾಟ್‌ಫಾರ್ಮಿನಲ್ಲಿ ಕಾದು ನಿಂತಿದ್ದ. ಗಾಡಿಯ ಕಿಟಕಿಯಿಂದ ಕೊರಳು ಕೊಂಕಿಸಿ ಗೋಪಿಯನ್ನು ಹುಡುಕುತ್ತಿದ್ದ ಪದ್ಮಾವತಿಗೆ ಅವನನ್ನು ಕಾಣುವುದು ಕಷ್ಟವಾಗಲಿಲ್ಲ. ಸುಮಿತ್ರೆ ಸಾಮಾನು ಸರಿಪಡಿಸುತ್ತಿದ್ದಂತೆಯೇ, ಪದ್ಮಾವತಿ "ಅವರು ಬಂದಿದ್ದಾರೆ ಅಕ್ಕ" ಎಂದು ಕೂಗಿಕೊಂಡಳು. ಗೋಪಿ ಬಾಗಿಲಿಗೆ ಬಂದಿದ್ದ.

ಗಾಡಿಯಿಂದಿಳಿಯುತ್ತಿದ್ದ ಪದ್ಮಾವತಿಯ ಕೆನ್ನೆಯನ್ನು ಚಿವುಟಿ "ಏನೇ, ಹೇಗಿತ್ತೇ ಪ್ರಯಾಣ?" ಎಂದು ಗೋಪಿ ನಗುತ್ತಲೇ ಕೇಳಿದ. ಆ ಮೇಲೆ ಸುಮಿತ್ರೆಯನ್ನು ನೋಡಿ "ಹೇಗಿದ್ದಿ ಸುಮಿತ್ರಾ" ಎಂದ.

ಸುಮಿತ್ರೆ ಇಳಿಯುತ್ತಿದ್ದವಳು ನಗುವ ಪ್ರಯತ್ನ ಮಾಡಿದಳು. ಆದರೆ ನಗು ಬರಲಿಲ್ಲ. ಎದೆ ತುಂಬ ಅಳುಕು ತುಂಬಿತ್ತು.

ಊರಿನಲ್ಲಿ ತಾನು ಅಭಿಮಾನದಿಂದಲೇ ಕಂಡ ತನ್ನ ತಂಗಿಯ ಗಂಡ— ಈಗ ಅವನ ಆಶ್ರಯದಲ್ಲಿ ತಾನಿರಬೇಕಾಗಿದೆ. ಇದು ಸರಿಯೇ ಎಂಬ ಪ್ರಶ್ನೆ ಅವಳನ್ನು ಕಾಡುತ್ತಿತ್ತು.

ಅವಳ ಎದೆಯಲ್ಲಿ ಉದ್ವೇಗ ತುಂಬಿತ್ತು.

ಹೊಸ ಊರಿನ, ಹೊಸ ಜೀವನದ ಹೊಸತಿನ ಸಂದೇಹ ಸಂಭ್ರಮಗಳಿಂದ ಅವಳು ವಿಹ್ವಲೆಯಾಗಿದ್ದಳು.

ಅವಳ ಮನಸ್ಸಿನಲ್ಲಿ ತೀವ್ರ ಹೊಯ್ದಾಟ ಆರಂಭವಾಗಿತ್ತು.

ಗೋಪಿ ಸಾಮಾನೆಲ್ಲವನ್ನು ಮುಂಬಯಿ ಗಾಡಿಗೆ ದಾಟಿಸಿ, ನಿಲ್ದಾಣದ ಉಪಹಾರ ಗೃಹದಲ್ಲೇ ಕಾಫಿ ಉಪಹಾರ ಮುಗಿಸಿ ಪದ್ಮಾ ಸುಮಿತ್ರೆಯರೊಂದಿಗೆ ಮುಂಬಯಿ ಗಾಡಿ ಹತ್ತಿದ. ಹೊತ್ತು ಕಂತಲು ಸರಿಯುತ್ತಿದ್ದಂತೆಯೇ ದೊಡ್ಡ ಜಿ. ಆಯ್. ಪಿ. ಗಾಡಿ ಪುಣೆ ಬಿಟ್ಟು ಮುಂಬಯಿಗೆ ಧಾವಿಸಲಾರಂಭಿಸಿತು.

ದಾರಿಯಲ್ಲಿ ಪದ್ಮಾ ಗಂಡನೊಡನೆ ಸಾಕಷ್ಟು ಮಾತನಾಡಿದಳು. ಶೀಲೆಯ ವಿಚಾರ, ಮೋಹನನ ವಿಚಾರ ಹಲವಾರು ಪ್ರಶ್ನೆ ಹಾಕಿದಳು. ಶೀಲಕ್ಕ ಸ್ಟೇಶನಿಗೆ ಬರುತ್ತಾರೆಯೆ? ಎಂದು ಕೇಳಿದಳು. ಮನೆಯ ಕುರಿತಾದ ಎಲ್ಲ ಪ್ರಶ್ನೆಗಳಿಗೂ ಗೋಪಿ ಅರ್ಧಮರ್ಧ ಉತ್ತರ ಹೇಳುತ್ತಿದ್ದ.

ಸುಮಿತ್ರೆಗೆ ಏಕಾಂತತೆಯ ಅರಿವುಂಟಾಗಬಾರದೆಂದು ಮಾತನಾಡಿಸಲು ಪ್ರಯತ್ನಿಸಿದ.

"ರಿಸಲ್ಟ್ ಬಂತೇ ?" ಎಂದೇ ಆತ ಕೇಳಿದ ಮೊದಲನೆಯ ಪ್ರಶ್ನೆ. ಆದರೆ ಸುಮಿತ್ರೆ ಉತ್ತರಕೊಡಲಿಲ್ಲ. ಪದ್ಮಾವತಿಯೇ ಉತ್ತರಕೊಡಬೇಕಾಗಿ ಬಂತು.

"ಹಾಳಾದ 'ಲೆಕ್ಕ'ವೊಂದು ಬಂದು ಅಕ್ಕ ಫೇಲಾಗಬೇಕಾಯಿತು" ಎಂದಳು.

ಗೋಪಿ ತುಟಿ ಕಚ್ಚಿಕೊಂಡ. ತಾನು ಕೇಳಿದ ಮೊದಲನೆಯ ಪ್ರಶ್ನೆಯೇ ಪರೀಕ್ಷೆಯ ಕುರಿತಾಗಬೇಕಿತ್ತೇ ಎಂದು ನೊಂದುಕೊಂಡ.

ಆದರೂ ಆತ ಸುಮಿತ್ರೆಯನ್ನು ಮಾತನಾಡಿಸುವ ಸಾಹಸವನ್ನು ಎರಡು ಮೂರುಬಾರಿ ಮಾಡಿದ. ತನ್ನ ಸುತ್ತಮುತ್ತ ಕುಳಿತ ಬೇರೆ ಬೇರೆ ಪ್ರಾಂತ್ಯದ ಜನರ ನಡವಳಿಕೆಗಳ ಪರಿಚಯು ಮಾಡಿಕೊಡುವ ನೆಪದಿಂದ ಮಾತು ಬೆಳೆಸಿದ. ಸುಮಿತ್ರೆ ಇಲ್ಲದ ಧೈರ್ಯ ತಂದುಕೊಂಡು ಮಾತನಾಡಲು ಯತ್ನಿಸಿದಳು. ಒಂದೆರಡು ಪ್ರಶ್ನೆಗಳನ್ನೂ ಕೇಳಿದಳು. ಆದರೂ ಸಂಪೂರ್ಣ ವೈ ಛಳಿ ಬಿಟ್ಟು ಗೋಪಿಯೊಡನೆ ಮುಂಬಯಿ ತಲುಪುವ ತನಕವೂ ಅವಳಿಗೆ ಮಾತನಾಡುವುದು ಸಾಧ್ಯವಾಗಲಿಲ್ಲ.

ಗಾಡಿ ಮುಂಬಯಿ ತಲುಪಿದಾಗ ರಾತ್ರೆ ಹತ್ತಾಗಿತ್ತು. ಒಂದು ಮಹಾ ಶಹರವನ್ನು ಸೇರುವಾಗ ಉಂಟಾಗುವ ಭವ್ಯತೆಯ ಕಲ್ಪನೆಗೆ ರಾತ್ರಿಯ ತೆರೆ ಅಡ್ಡಬಂದಿತ್ತು. ಆದರೂ ಆ ಪ್ರಚಂಡ ಜನಕೋಟಿಯ ತಾವಿಗೆ, ಭಾರತದ ಪ್ರಪ್ರಥಮ ಶಹರಿನೊಳಗೆ, ಗಾಡಿ ಪ್ರವೇಶಿಸಿದೆ ಎಂಬ ಅರಿವುಂಟಾದಾಗ ಸುಮಿತ್ರೆಯ ಮನಸ್ಸಿನಲ್ಲಿ ವಿಚಿತ್ರ ರೀತಿಯ ಕಳವಳ.

ದಾದರ್ ನಿಲ್ದಾಣೆಯಲ್ಲಿ ಗಾಡಿನಿಂತಾಗ ಎಲ್ಲರಿಗೂ ಮೊದಲು ಗಾಡಿಯಿಂದ ಜಿಗಿದವಳು ಪದ್ಮಾವತಿ. ಅವಳ ಜಿಗಿತದಲ್ಲಿ, ತನ್ನ ಊರಿಗೆ ಬಂದಿದ್ದೇನೆ, ಅಕ್ಕನಿಗೆ ಈ ಮಹಾಶಹರಿನ ಪರಿಚಯವನ್ನು ತಾನು ಮಾಡಿಕೊಡುತ್ತಿದೇನೆ ಎಂಬ ಗರ್ವವಿತ್ತು. ಇದೇ ಅಭಿಮಾನದಿಂದಲೇ, ಗೋಪಿ ಕಾರಿಗೆ ಸಾಮಾನು ಸಾಗಿಸುತ್ತಿದ್ದಾಗ,

"ಅಯ್ಯೋ ! ಇಷ್ಟು ಹತ್ತಿರಕ್ಕೆ ಕಾರೇ ? ನಡೆದು ಹೋಗಬಹುದಲ್ಲ. ಹಾಗೆ ಬೇಕಾದರೆ ವಿಕ್ಟೋರಿಯಾ ಮಾಡಿದರೆ ಸಾಕು. ಕಾರು ಯಾಕೆ ?" ಎಂದು ಗಂಡನನ್ನು ಕೇಳಿದಳು.

ಗೋಪಿ ನಕ್ಕು ಉತ್ತರ ಕೊಟ್ಟ.

"ಏನು ಹಟಮಾರಿಯಾಗಿದ್ದೀಯೋ ಊರಿಗೆ ಹೋಗಿ ? ಈಗ ಕಾರಿನಲ್ಲಿ ಕುಳಿತುಕೊ. ಮತ್ತೆ ಉಪದೇಶ" ಎಂದ.

ಸುಮಿತ್ರೆಯೂ ಉಪಚಾರಕ್ಕಾಗಿ "ಮನೆ ಹತ್ತಿರವಿದ್ದರೆ ಕಾರು ಯಾಕೆ?" ಎಂದಾಗ ಪದ್ಮಾವತಿ ನಡುವೆಯೇ ಬಾಯಿಹಾಕಿ

"ಇಲ್ಲಿಯೇ ಅಕ್ಕಾ. ಒಂದು ಫರ್ಲಾಂಗೂ ಕೂಡ ದೂರವಿಲ್ಲ— ಹಿಂದೂ ಕಾಲನಿಗೆ." ಎಂದಳು.

ಗೋಪಿ ಮಾತನಾಡದೆ ಕಾರಿನ ಬಾಗಿಲು ತೆಗೆದ ಮೇಲೆ ಪದ್ಮಾ ಇನ್ನು ಚರ್ಚಿಸಿ ಉಪಯೋಗವಿಲ್ಲವೆಂದು ಕಾರಿನೊಳಹೋಗಿ ಕುಳಿತಳು. ಸುಮಿತ್ರೆ ಅವಳನ್ನನುಸರಿಸಿದಳು.

ಡ್ರೈವರನಿಗೆ ಗೋಪಿ ಮೊದಲೇ ಕೊಟ್ಟಿದ್ದ ನಿರ್ದೇಶನದಂತೆ ಕಾರು ನಿಲ್ಮನೆ ಬಿಟ್ಟು ವಿನ್ಸೆಂಟ್ ರಸ್ತೆ ಹಿಡಿದು ಸಾಗಿತು.

ಈಗ ಪದ್ಮಾ ಕಂಗಾಲಾದಳು.

"ಇವನೇನು ಕಾರನ್ನು ಮಾತುಂಗಾಕ್ಕೆ ತೆಗೆದುಕೊಂಡು ಹೋಗುತ್ತಾನೋ. ಇವನಿಗೆ ಹಿಂದೂಕಾಲನಿ ಎಲ್ಲೀಂತ ಗೊತ್ತಿಲ್ಲ." ಎಂದಳು.

"ನೀನು ಬಾಯಿ ಮುಚ್ಚಿ ಕುಳಿತುಕೊಳ್ಳೆ. ಅವನಿಗೆ ದಾರಿ ಸರೀ ಗೊತ್ತಿದೆ. ಸುಮಿತ್ರಾ, ನಿನ್ನ ತಂಗಿಯ ಬಾಯಿಗೆ ಸ್ವಲ್ಪ ಕೈ ಹಿಡಿಯಬಾರದೆ?" ಎಂದು ಮುಂದಿನ ಸೀಟಿನಲ್ಲಿದ್ದ ಗೋಪಿ ನಗುತ್ತಲೇ ಹೇಳಿದ.

ಪದ್ಮಾವತಿಯ ಆಶ್ಚರ್ಯ ಹೆಚ್ಚುತ್ತ ಹೋದಂತೆ ಮಾತು ನಿಂತಿತು. ಕಾರು ಮನೆಯ ದಾರಿ ಬಿಟ್ಟು ಮಾತುಂಗದ ದಾರಿ ಹಿಡಿದು ಸಾಗಿತು.

ಐದೇ ನಿಮಿಷಗಳ ಪ್ರಯಾಣ. ಕಾರು ಕಿಂಗ್ಸ್‌ಸರ್ಕಲ್ ವಿಭಾಗದಲ್ಲಿ ಸ್ಟೇಶನಿನ ಸಮೀಪ ಹೊಸದಾಗಿ ಕಟ್ಟಿದ್ದ ಒಂದು ದೊಡ್ಡ ಕಟ್ಟಡವೊಂದರ ಪ್ರಾಕಾರವನ್ನು ದಾಟಿ ಒಳಗೆ ಬಂದು ನಿಂತಿತು. ಗೋಪಿ ಮೊದಲು ಇಳಿದು ಬಾಗಿಲು ತೆಗೆದು "ಇಳಿಯೆ ಪದ್ಮಾ" ಎಂದ.

ಪದ್ಮಾವತಿ ಆಶ್ಚರ್ಯದಿಂದ ದಂಗುಬಡಿದವಳಂತಾಗಿದ್ದಳು. ತಾವು ಬಂದುದು ಎಲ್ಲಿಗೆಂದು ತಿಳಿಯಲಿಲ್ಲ.

“ ಭಾವ ಬೇರೆ ಮನೆ ಮಾಡಿದ್ದಾರೆಯೆ ? ಇದು ಯಾರ ಮನೆ ? ” ಎಂದು ಕೇಳಿದಳು.

ಪ್ರಶ್ನೆ ಕೇಳಿದ್ದು ಪದ್ಮಾವತಿ. ಆದರೆ ಅವಳಿಗಿಂತ ಹೆಚ್ಚಿಗೆ ಕುತೂಹಲ ಭೀತಿಗಳು ಸುಮಿತ್ರೆಯನ್ನಾವರಿಸಿದ್ದುವು.

ಗೋಪಿ ತಮಗಾಗಿ, ಅಲ್ಲ ತನಗಾಗಿ, ಬೇರೆ ಮನೆ ಮಾಡಿದ್ದಾನೆಯೆ ಎಂಬ ಸಂದೇಹ ಬಂತು.

ತಾನು ಪರಾಧೀನೆ. ತನ್ನಿಂದಾಗಿ ಇಷ್ಟೆಲ್ಲ ಅನಾಹುತ. ತನ್ನಿಂದಾಗಿ ಅಣ್ಣ ತಮ್ಮಂದಿರಲ್ಲಿ ಒಡಕು ಎಂಬ ಕಳವಳ ತುಂಬಿತು.

ಗೋಪಿ ಪದ್ಮಾವತಿಯ ಪ್ರಶ್ನೆಗೆ ಉತ್ತರ ಕೊಡುವಂತೆ,

“ ಇದು ನಿನ್ನ ಮನೆಯೆ ಪದ್ಮಾ. ಯಾಕೆ ಇಷ್ಟೆಲ್ಲ ಯೋಚನೆ. ನಡಿಯಲ್ಲ ” ಎಂದ.

ಪದ್ಮಾವತಿ ಮೆಲ್ಲಮೆಲ್ಲ ಮುಂದುವರಿದಳು. ಕಾರಿನ ಬಾಡಿಗೆ ಕೊಟ್ಟು, ಸಾಮಾನೆಲ್ಲವನ್ನು ಮಾಲಿಯ ಮೂಲಕ ಹೊರಿಸಿಕೊಂಡು ಗೋಪಿ ಬಂದ. ಹಿಂದಿನಿಂದ ಸುಮಿತ್ರೆ ಅವನನ್ನನುಸರಿಸಿದಳು.

ಮೊದಲನೆಯ ಮಾಳಿಗೆಯ ಮೆಟ್ಟಲು ಹತ್ತುತ್ತಿರುವಾಗಲೇ ಶೀಲೆ ಓಡಿಕೊಂಡು ಮೆಟ್ಟಲಿಳಿದು ಬಂದಳು, “ ಬಂದಿಯೇನಮ್ಮಾ ಪದ್ಮಾ ” ಎಂದು ಕರೆಯುತ್ತ. ಪದ್ಮಾವತಿಗೆ ಅರ್ಧ ಜೀವ ಬಂದ ಹಾಗಾಯಿತು. ಒಮ್ಮೆಗೇ ಸಂತೋಷವುಕ್ಕಿ ಬಂತು. ಕಳವಳ ದೂರಾಯಿತು.

“ ಅಕ್ಕಾ, ಇವರೇ ನೋಡು ಶೀಲಕ್ಕ ” ಎಂದು ಸುಮಿತ್ರೆಗೆ ಶೀಲೆಯ ಪರಿಚಯ ಮಾಡಿಸಿದಳು.

ಶೀಲೆ ಸುಮಿತ್ರೆಯನ್ನು ನೋಡಿ “ ಏನಮ್ಮಾ ಚೆನ್ನಾಗಿದ್ದೀಯ ? ” ಎಂದಳು.

ಗೋಪಿ ಮುಂದೆ ಹೋದ.

ಹೊಸ ಮನೆಯನ್ನು ಅಕ್ಕ ತಂಗಿಯರು ಪ್ರವೇಶಿಸಿದರು. ಮನೆಯಲ್ಲಿ ಎಲ್ಲ ಹೊಸತೆ. ಸಾಮಾನೆಲ್ಲ ಹೊಸತಾದವು. ಕುರ್ಚಿ, ಮೇಜು, ಪಾತ್ರೆ ಪರಡಿ ಎಲ್ಲ ಹೊಸತನ್ನೇ ಸೂಚಿಸುತ್ತಿದ್ದುವು.

ಒಳಗೆ ಬಂದ ಪದ್ಮಾವತಿ

"ಭಾವ ಎಲ್ಲಿ ? ಕಾಣುವುದಿಲ್ಲವಲ್ಲ." ಎಂದಳು. ಈ ಪ್ರಶ್ನೆಯಿಂದ ಶೀಲೆಯೂ ತುಸು ಗಾಬರಿಯಾದಳು.

"ಅವರು ಬರಲಿಲ್ಲ. ಮನೆಗೆ ಬೀಗ ಹಾಕಿ ಬರಬೇಕಲ್ಲ. ಯಾರಾದರೂ ರಾತ್ರಿಗೆ ಬಂದು ಕರೆದರೆ ಕಷ್ಟವಾದೀತು ಎಂದು ಬರಲಿಲ್ಲ. ಒಂದೆರಡು ಸೀರಿಯಸ್ ಕೇಸುಗಳಿವೆಯಂತೆ."

ಪದ್ಮಾವತಿಯ ಆಶ್ಚರ್ಯ ಮತ್ತೆ ಚಿಗುರಿತು.

"ಹಾಗಾದರೆ ಇದು ಬೇರೆ ಮನೆಯೆ ? ನಮಗೋಸ್ಕರವೆ ?" ಎಂದು ತುಂಬಿದ ಕಳವಳದಿಂದ ಕೇಳಿದಳು.

ಈಗ ಮಾತ್ರ ಶೀಲೆಗೆ ಉತ್ತರಕೊಡುವುದು ಸಾಧ್ಯವಾಗಲಿಲ್ಲ. ಆದರೂ ಪದ್ಮಾವತಿಗೆ ಅಸಮಾಧಾನವಾಗಬಾರದು ಎಂಬ ಉದ್ದೇಶದಿಂದ ಏನೋ ಸಮಾಧಾನ ಹೇಳಿದಳು.

"ಹೊಸಮನೆ ಮಾಡುವ ಆಸೆಯಪ್ಪ ನಿನ್ನ ಗಂಡನಿಗೆ. ಅಲ್ಲಿ ಜಾಗ ಕಡಿಮೆಯೆಂದು ಬೇರೆ ಮನೆ ಮಾಡಿದ್ದಾನೆ. ಎಲ್ಲಾದರೇನು, ಹತ್ತಿರವೇ ಇದ್ದೇವಲ್ಲ. ಈಗ ಯಾವ ಮನೆಯಾದರೇನು ನಿನಗೆ. ನಿನ್ನೆಯೋ ಮೊನ್ನೆಯೋ ಊಟ. ಬೇಗ ಸ್ನಾನಮಾಡಿ ಬೇರೆ ಸೀರೆ ಉಟ್ಟುಕೊ. ಊಟಕ್ಕೆ ಹೊರಡು. ನಿನ್ನ ಅಕ್ಕನನ್ನು ಕರಿ" ಎಂದಳು.

ಪದ್ಮಾವತಿಗೆ ತನ್ನ ಗಂಡ ತಮಗಾಗಿ ಬೇರೆ ಮನೆ ಮಾಡಿದ್ದಾರೆ ಎಂಬ ಸತ್ಯ ಸತ್ಯವಾಗಿ ಕಂಡುದು ಈಗಲೆ. ಹೊಸಮನೆಯ ಸುಂದರ ಆವರಣ. ಹೊಸತಿನ ಸಂಭ್ರಮಗಳನ್ನು ನೋಡಿ ಹೆಮ್ಮೆ ಸಮಾಧಾನಗಳಾದರೂ, ಶೀಲಕ್ಕನನ್ನು ಬಿಟ್ಟು ಬೇರೆಕಡೆಯಿರಬೇಕಲ್ಲಾ ಎಂಬ ನೋವು ಉಂಟಾಗದಿಲ್ಲ.

ಮನೆ ಚಿಕ್ಕದಾಗಿದ್ದರೂ ಅಚ್ಚುಕಟ್ಟಾಗಿತ್ತು. ದೊಡ್ಡವೆರಡು ಕೋಣೆಗಳು. ಚಿಕ್ಕದೊಂದು ಅಡುಗೆಯ ಮನೆ, ತಾಗಿಯೇ ಬಚ್ಚಲು ಮನೆ ಮತ್ತು ಪಾಯಿಖಾನೆ. ನಡುಮನೆಯ ಸುತ್ತ ಅರ್ಧ ಚೌಕಾಕೃತಿಯ ಬಾಲ್ಕನಿ. ಸುತ್ತ

ಮುತ್ತಲೆಲ್ಲ ಹೊಸತಾಗಿ ಎದ್ದು ನಿಂತಿದ್ದ ಕಟ್ಟಡಗಳು. ಮುಂಬಯಿಯಲ್ಲಿ ಮನೆ ಸಿಗಲು ಪಡಬೇಕಾದ ಅವಸ್ಥೆಯ ಪರಿಚಯ ತುಸುಮಟ್ಟಿಗಾದರೂ ಇದ್ದ ಪದ್ಮಾವತಿಗೆ, ಗಂಡ ಈ ಮನೆಗಾಗಿ ಸಾವಿರಾರು ರೂಪಾಯಿ ವ್ಯಯಿಸಿದ್ದಾನೆ ಎಂದು ತಿಳಿದುಕೊಳ್ಳಲು ಹೆಚ್ಚು ಸಮಯ ಬೇಕಾಗಲಿಲ್ಲ.

ಶೀಲೆ ಮುಂಬಯಿಯ ಮನೆಗೆ ಮರಳಿದ ಪದ್ಮಾವತಿಗೆ ಔತಣದ ಊಟದ ಏರ್ಪಾಡು ಮಾಡಿದ್ದಳು. ಅಡುಗೆಯ ಮನೆಯಲ್ಲಿ ಪದ್ಮಾವತಿಗೆ ಯಾವ ಕಷ್ಟವೂ ಆಗದಂತೆ ಬೇಕಾದ ವ್ಯವಸ್ಥೆಗಳನ್ನೆಲ್ಲ ಮಾಡಿದ್ದಳು. ಊಟದ ಹೊತ್ತಿನಲ್ಲಿ ಗೋಪಿ ಮನೆಯ ವಿಚಾರವೊಂದನ್ನು ಬಿಟ್ಟು ಬೇಕಾದಷ್ಟು ನಗೆಮಾತು ಆಡಿದ. ಸುಮಿತ್ರೆಯನ್ನೂ ನಗಿಸಿದ. ಶೀಲೆಯೊಡನೆ ಸರಸವಾಡಿದ. ಪದ್ಮಾವತಿಯನ್ನು ಕೆಣಕಿದ.

ಪ್ರಯಾಣದ ಆಯಾಸದಿಂದ ಪದ್ಮಾವತಿ ಬಹುಬೇಗ ನಿದ್ದೆ ಹೋದಳು. ಶೀಲೆಯೂ ಆ ದಿನ ರಾತ್ರೆ ಅಲ್ಲಿಯೇ ಮಲಗಿದ್ದಳು. ಹೆಂಗಸರೆಲ್ಲ ಒಂದು ಕೋಣೆಯಲ್ಲಿ ಮಲಗಿದ್ದರು. ಮಲಗುವ ಮನೆಯಲ್ಲಿ ಗೋಪಿ ಮಾತ್ರ ಮಲಗಿದ್ದ. ಹೀಗಾಗಿ, ರಾತ್ರಿ ಗಂಡನೊಡನೆ ತನ್ನನ್ನು ಕಾಡುತ್ತಿದ್ದ ಶಂಕೆಗಳಿಗೆಲ್ಲ ಸಮಾಧಾನ ಕೇಳಿ ತಿಳಿಯುವುದು ಪದ್ಮಾವತಿಗೆ ಸಾಧ್ಯವಾಗಲಿಲ್ಲ. ಆದರೆ ಬಹಳ ಹೊತ್ತು ಈ ಕುರಿತು ಯೋಚಿಸಲು ಪ್ರಯಾಣದ ಆಯಾಸ ಬಿಡಲಿಲ್ಲ. ನಿದ್ದೆ ಬಂದಿತ್ತು.

ಆ ರಾತ್ರಿ ನಿದ್ರಿಸದ ವ್ಯಕ್ತಿ ಸುಮಿತ್ರೆ. ಹೊಸ ಮನೆಯನ್ನು ಕಂಡೇ ಏನೋ ಉತ್ಪಾತ ನಡೆದಿದೆ, ಅಣ್ಣ ತಮ್ಮ ಬೇರೆಯಾಗಿದ್ದಾರೆ ಎಂಬ ಸಂದೇಹ ತಂದುಕೊಂಡ ಆಕೆಗೆ ರಾತ್ರೆಯಿಡೀ ನಿದ್ರೆ ಬರಲಿಲ್ಲ.

ಹೊಸ ಬಾಳು ಅವಳನ್ನು ಅಣಕಿಸುತ್ತಿತ್ತು:

ಸ್ವತಂತ್ರ ವೃತ್ತಿಯ ಅಪೇಕ್ಷೆಯಿಂದ ಓಡಿಬಂದಿ, ಈಗ ನೋಡು; ಪರಾಧೀನೆಯಾದೆ. ತಂಗಿಯ ಗಂಡ ನಿನಗಾಗಿ ಇಷ್ಟೆಲ್ಲ ನಷ್ಟವನ್ನು ಸಹಿಸಬೇಕಾಗಿ ಬಂತು. ಈ ಕೃತಜ್ಞತೆಯ ಆಶ್ರಯದಲ್ಲಿ ಸ್ವಾತಂತ್ರ್ಯ ಹೇಗೆ ಸಾಧ್ಯ—ಎಂದು ಮನಸ್ಸು ಅವಳನ್ನು ಅಣಕಿಸಿ ಕೇಳುತ್ತಿತ್ತು.

ನಸುಕು ಹರಿಯುತ್ತಿದೆಯೆನ್ನುವಾಗ, ಕಿಂಗ್ಸ್‌ಸರ್ಕಲ್ ನಿಲ್ದಾಣದತ್ತ ಗಾಡಿಗಳ ಸದ್ದು ಹೆಚ್ಚಾಗತೊಡಗಿದಾಗ, ಸುಮಿತ್ರೆ ನಿದ್ದೆ ಹೋದಳು.

೧೪

ಸುಮಿತ್ರೆ ಕಣ್ಣು ತೆರೆದಾಗ ಒಮ್ಮೆಗೆ ತಾನು ಪ್ರವೇಶಿಸಿದ್ದ ಹೊಸ ಜಗತ್ತಿನ ಪರಿಚಯ ಆಗಲಿಲ್ಲ. ತಾನು ನಿತ್ಯ ನೋಡುತ್ತಿದ್ದ ಮನೆಯ ಮುಖ ಮಂಟಪದ ಬಾಗಿಲಾಗಲೀ ಮೂರ್ತಿಯ ಮನೆಯಲ್ಲಿ ಮಲಗಿದಾಗ ಬೆಳಿಗ್ಗೆ ಮೊದಲು ನೋಡುತ್ತಿದ್ದ ತುಳಸಿಯ ಕಳವಾಗಲೀ ಕಾಣಿಸಲಿಲ್ಲ. ತಾನು ಮುಂಬಯಿಯಲ್ಲಿದ್ದೇನೆ ಎಂಬ ಅರಿವು ಬರಲು ಸುಮಿತ್ರೆಗೆ ತುಸು ಸಮಯ ಬೇಕಾಯಿತು. ಪಕ್ಕದ ಮನೆಯಿಂದ, ಅಂದರೆ ತಾನು ಮಲಗಿದ್ದ ಕೋಣೆಯ ಗೋಡೆಯ ಇನ್ನೊಂದು ಬದಿಯಿಂದ, ರೇಡಿಯೋ ಸಂಗೀತ ಕೇಳಿಬರುತ್ತಿತ್ತು. ದೊಡ್ಡ ರಾಜರಸ್ತೆಯಲ್ಲಿ ಓಡುತ್ತಿದ್ದ ಬಸ್ಸುಗಳ ಸದ್ದು ಮಾತ್ರ ಕಂಕನಾಡಿಯ ರಾಜಮಾರ್ಗದ ನೆನಪು ತಂದುಕೊಡುವಂತಿತ್ತು.

ಎರಡು ನಿಮಿಷ ಹಾಗೆಯೇ ಮಲಗಿದ್ದಳು. ಆಮೇಲೆ ಬಳಿ ತಿರುಗಿ ಶೀಲಿ ಪದ್ಮಾವತಿಯರು ಎಲ್ಲಿದಾರೆಂದು ನೋಡಿದಳು. ಇಬ್ಬರೂ ಎದ್ದಿದ್ದರು. ಕೋಣೆಯಲ್ಲಿ ಯಾರ ಸುಳಿವೂ ಇರಲಿಲ್ಲ. ಬಳಿಯಲ್ಲೇ ಇದ್ದ ಅಡಿಗೆಯ ಮನೆಯಿಂದ ಮಾತ್ರ ಪದ್ಮಾವತಿಯ ಮಾತು ಕೇಳಿಬರುತ್ತಿತ್ತು. ಆಕೆ ಮಾತನಾಡುತ್ತಿದ್ದುದು ಗೋಪಿಯೊಡನೆ.

“ ಅಯ್ಯೊ ! ಅವಾಂತರ. ಇದು ಕಾಫಿಯೇನೇ ಅಥವಾ ಪಾಯಸವೆ ? ಸಕ್ಕರೆ ಏನಾದರೂ ಉಳಿದಿದೆಯೆ ? ” ಗೋಪಿ ನಗುತ್ತಿದ್ದ.

“ ಸಿಹಿ ಹೆಚ್ಚು ಬೇಕೆಂದು ಹೇಳಿದವರೂ ನೀವೇ. ಈಗ ಪಾಯಸವಾಯಿತು ಎನ್ನುವುದೂ ನೀವೇ. ”

“ ಅಲ್ಲವೆ. ಹೆಚ್ಚು ಎಂದರೆ ಒಂದು ಖಂಡುಗ ಹಾಕಬೇಕೇನೇ. ಇರಲಿ ಬಿಡು. ಇನ್ನು ಆ ಉಪ್ಪಿಟ್ಟಿನ ಸ್ವರೂಪ ಹೇಗಿದೆಯೋ ”

“ ಮುದ್ದೆ ಮುದ್ದೆಯಾಗಿದೆ. ಸ್ವಲ್ಪ ನೀರು ಹೆಚ್ಚಾಯಿತೆಂದು ಕಾಣುತ್ತದೆ. ”

ಗೋಪಿ ಪದ್ಮಾವತಿಯರಿಬ್ಬರೂ ನಗಲಾರಂಭಿಸಿದರು.

ಮಲಗಿದಲ್ಲೇ ಸುಮಿತ್ರೆಗೂ ನಗುಬಂತು. ಆದರೆ ಆಕೆ ಏಳುವ ಪ್ರಯತ್ನ ಮಾಡಲಿಲ್ಲ.

" ಅತ್ತಿಗೆ ಕಾಫಿ ಮಾಡಿಟ್ಟು ಹೋಗುತ್ತೇನೆಂದು ಹೇಳಿದಳು. ನಾನೇ ಬೇಡವೆಂತ ಹೇಳಿದೆ. ಮಾಡಿಟ್ಟಿದ್ದರೆ ತಣ್ಣಗಾಗಿ ಹೋಗುತ್ತಿತ್ತು."

ಎಷ್ಟು ಘಂಟೆಗೆ ಎದ್ದರೋ, ಯಾವಾಗ ಹೋದರೋ, ನನಗೆ ಒಂದೂ ಗೊತ್ತಿಲ್ಲ.

" ಗೊರಕೆ ಹೊಡೆಯುತ್ತಿರುವಾಗ ನಿನಗೆ ಎಚ್ಚರವಾಗುವುದು ಹೇಗೆ. ಆರು, ಆರೂಕಾಲಾಗಿತ್ತು ಅವಳು ಹೋಗುವಾಗ."

" ಇನ್ನು ಹೋಗಿ ಭಾವನಿಗೆ ಕಾಫಿ ತಿಂಡಿ ಎಲ್ಲ ಆಗಬೇಕು."

" ಒಂದು ದಿನ ತಡವಾದರೇನು ಊರು ಮುಳುಗಿ ಹೋಗಲಿಕ್ಕಿಲ್ಲ. ಅವನಿಗೆ ರಾತ್ರಿ ಒಂದರ್ಧ ಘಂಟೆ ಬಂದು ಹೋಗಲಿಕ್ಕೆ ಸಹ ಆಗಲಿಲ್ಲ."

" ನಿಮಗೆ ಯಾಕೆ ಅಷ್ಟು ಸಿಟ್ಟು ಭಾವನ ಮೇಲೆ ?"

" ಸಿಟ್ಟಲ್ಲ. ಪೂಜೆಮಾಡುತ್ತೇನೆ ಮಂಗಳಾರತಿ ಹಿಡಿದುಕೊಂಡು. ತಮ್ಮ ಎಂದು ಸ್ವಲ್ಪವಾದರೂ ಅಭಿಮಾನವಿದ್ದಿದ್ದರೆ ಅವನು ಹೀಗೆ ಮಾಡುತ್ತಿದ್ದಿಲ್ಲ."

" ಏನು ಮಾಡಿದರೀಗ ? ಏನಾಯಿತು. ನೀವು ಕಾಗದದಲ್ಲಿ ಸಹ ಏನನ್ನೂ ಬರೆಯಲಿಲ್ಲ. ಭಾವನ ಹತ್ತಿರ ಜಗಳಾಡಿದಿರೆ ?"

" ಜಗಳಾಡಿದ್ದರಾದರೂ ಇಷ್ಟು ರಗಳೆಯಿರಲಿಲ್ಲ. ನನಗೂ ಅವನಿಗೂ ಏನೂ ಸಂಬಂಧವೇ ಇಲ್ಲದವರ ಹಾಗೆ ಅವನು ಮಾತನಾಡುವಾಗ ಸಿಟ್ಟು ಬರುವುದಿಲ್ಲವೆ ?"

" ಏನು ಹೇಳಿದರು ?"

" ಅದನ್ನೆಲ್ಲ ಕಟ್ಟಿಕೊಂಡು ನೀನು ಏನು ಮಾಡುತ್ತಿ, ಬಿಡು. ನೀನೂ ನಿನ್ನ ಅಕ್ಕನೂ ಸುಖವಾಗಿದ್ದರಾಯಿತು."

" ಅಕ್ಕನಿಂದಾಗಿ ತೊಂದರೆಯೆ ? ಅದಕ್ಕೇ ಬೇರೆ ಮನೆ ಮಾಡಿದ್ದೆ ?'

ಗೋಪಿ ಈ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಸುಮಿತ್ರೆ ಅವನ ಉತ್ತರವನ್ನೆ ನಿರೀಕ್ಷಿಸಿ ಮಲಗಿದ್ದಳು. ಗೋಪಿ ಬೇಕೆಂದೇ ವಿಷಯ ಬದಲಿಸಿದ.

" ಉಪ್ಪಿಟ್ಟು ಆದರೆ ಹಾಕಲ್ಲ. ಸುಮಿತ್ರೆಯೂ ಏಳಬಹುದು ಈಗ."

" ತುಂಬ ನಿದ್ದೆ ಬಂದಿರಬೇಕು. ರೈಲಿನಲ್ಲಿಯೂ ನಿದ್ದೆ ಮಾಡಿರಲಿಲ್ಲ. ನನ್ನನ್ನು ಮಲಗಿಸಿ ತಾನು ಎಚ್ಚರವಾಗಿದ್ದಳು."

" ನೀನು ಯಾವಾಗಲೂ ಹಾಗೇನೇ. ಮೊದಲು ನಿನ್ನ ಷೋಡಶೋಪಚಾರ ಆಗಬೇಕು. ಮತ್ತೆ ಬೇರೆಯವರ ಸುಖದುಃಖ."

ಪದ್ಮಾವತಿಗೆ ಈ ಮಾತಿಗೆ ಉತ್ತರಕೊಡುವುದು ಸಾಧ್ಯವಾಗಲಿಲ್ಲ. ರೈಲಿನಲ್ಲಿ ತಾನು ಮಲಗುವಂತೆ ಅಕ್ಕ ಒತ್ತಾಯಿಸಿದುದೇಕೆಂಬ ನೆನಪು ಬಂದಾಗ, ತಾನು ಗಂಡನಿಂದ ಮರೆಮಾಚಿರಿಸಿದ್ದ ಒಂದು ಸತ್ಯ ನೆನಪಿಗೆ ಬಂತು. ಆದರೆ ಬಾಯಿಬಿಟ್ಟು ಹೇಳುವ ಸಂದರ್ಭ ಬಂದಾಗ ನಾಚಿಕೆ ತಡೆಯಾಗಿ ಬಂತು.

ಗೋಪಿಗೆ ತಾನು ತಂದೆಯಾಗಲಿದೇನೆಂದು ಇನ್ನೂ ತಿಳಿದಿರಲಿಲ್ಲ.

ಸುಮಿತ್ರೆಗೆ ಮತ್ತೆ ಮಲಗಲಾಗಲಿಲ್ಲ. ಎದೆ ತುಂಬ ಕಕುಲಾತಿಯುಕ್ಕಿ ಬಂದು, ಗಂಡನೊಡನೆ ತನ್ನ ಅಸಹಾಯ ಪರಿಸ್ಥಿತಿಯನ್ನೊಪ್ಪಿಕೊಳ್ಳಲು ನಾಚುತ್ತಿದ್ದ ತಂಗಿ ಪದ್ಮಾವತಿಯನ್ನು ಅಪ್ಪಿಕೊಂಡು ಸಮಾಧಾನಪಡಿಸಬೇಕು ಎನ್ನುವಷ್ಟು ಮನಸ್ಸಿನಲ್ಲಿ ಉದ್ವೇಗ ತುಂಬಿತು. ದಿಗ್ಗನೆದ್ದು ಬಂದು ಅಡುಗೆಯ ಮನೆಯ ಬಾಗಿಲಿಗೆ ಇಳಿಯ ಬಿಟ್ಟಿದ್ದ ಪರದೆಯನ್ನು ಬದಿಗೆ ಸರಿಸಿ ಪದ್ಮಾವತಿಯ ಕಡೆ ನೋಡಿ ನಕ್ಕಳು. ಆ ಮೇಲೆ

" ಭಾವಾ !" ಎಂದಳು.

ಗೋಪಿಗೆ ಆ ಕರೆ ಕೇಳಿ ಆಶ್ಚರ್ಯವಾಯಿತು. ಸುಮಿತ್ರೆಯಿಂದ ಅಷ್ಟು ಆತ್ಮೀಯ ದನಿಯ ಕರೆಯನ್ನು ಆತ ಕೇಳಿರಲಿಲ್ಲ. ಅದೂ ಮುಖತುಂಬ ನಗು; ಮೈತುಂಬ ಉಲ್ಲಾಸದ ಸುಮಿತ್ರೆಯನ್ನು ಆತ ಕಂಡುದು ಇದೇ ಮೊದಲು. ಅವಳ ಕರೆ ಪ್ರಶ್ನಾರ್ಥಕವಾಗಿದ್ದಿತಾದರೂ ಗೋಪಿ ನಗುತ್ತಲೇ ಕೇಳಿದ.

" ನಿದ್ದೆ ಆಯಿತೇನು ? ಈ ಕೆಟ್ಟ ಹುಡುಗಿ ರೈಲಿನಲ್ಲೂ ಗೊರಕೆ ಹೊಡೆದು ಬಂದಿದ್ದಾಳೆ. ಅದೇ, ಊರಿಗಿಂತ ಮುಂಚೆ ಎದ್ದಿದ್ದಾಳೆ. "

ಈಗ ಸುಮಿತ್ರೆ ಪದ್ಮಾವತಿಯ ಕಡೆ ತಿರುಗಿದಳು.

" ಏನೇ ಪದ್ಮಾ, ನೀನು ಭಾವನ ಹತ್ತಿರ ಹೇಳಲೇ ಇಲ್ಲವೇನೇ ? ಕಾಗದದಲ್ಲಿಯೂ ಬರೆಯಲಿಲ್ಲ ಹಾಗಾದರೆ ? ''

ಪದ್ಮಾವತಿ ಅಲ್ಲಿ ನಿಲ್ಲಲೇ ಇಲ್ಲ. ಬರೀ "ಅಕ್ಕಾ" ಎಂದು ಕೂಗಿಕೊಂಡು ಗೋಪಿಯ ಕೋಣೆಯೊಳಗೋಡಿ ಹೋದಳು.

ಗೋಪಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ.

" ಏನಾಯಿತೇ ? " ಎಂದು ತುಸು ಗಾಬರಿಯಿಂದಲೇ ಸುಮಿತ್ರೆಯನ್ನು ಕೇಳಿದ.

" ಆಗೋದೇನಿಲ್ಲ. ಒಂದು ಗಂಡು ಮಗು, ಅಷ್ಟೆ. ಗಂಡನ ಹತ್ತಿರ ಹೇಳಲಿಕ್ಕೂ ನಾಚಿಕೆ ಹುಡುಗಿಗೆ. " ಎಂದು ಸುಮಿತ್ರೆ ಪದ್ಮಾವತಿಯನ್ನರಸಿ ಕೊಂಡು ಹೋದಳು. ಗೋಪಿ " ಹೌದೇನೇ ಪದ್ಮಾ " ಎಂದು ಅವಳನ್ನೇ ಹಿಂಬಾಲಿಸಿದ. ಪದ್ಮಾವತಿ ಗೋಪಿಯ ಮಂಚದ ಮೇಲೆ ಮಲಗಿ ದಿಂಬಿ ನಿಂದ ಮುಖವನ್ನಡಗಿಸಿಕೊಂಡಿದ್ದಳು. ಗೋಪಿ ಒಳಬಂದವನೇ ಆ ದಿಂಬನ್ನು ಹಿಡಿದೆಳೆದ. ಸುಮಿತ್ರೆ ನಗುತ್ತಲೇ ನಿಂತಿದ್ದಳು. ದಿಂಬು ಕೈತಪ್ಪಿದ ಮೇಲೆ ಪದ್ಮಾವತಿ ಮುಖವನ್ನು ಹಾಸಿಗೆಯಲ್ಲೇ ಅಡಗಿಸಿಕೊಂಡಳು. ಆದರೂ ಗೋಪಿ ಬಿಡದೆ ಪ್ರಯತ್ನಪೂರ್ವಕ ಅವಳ ಮುಖವನ್ನು ತಿರುಗಿಸಿ ಆಕೆ ತನ್ನೆಡೆ ನೋಡುವಂತೆ ಮಾಡಿದ. ಪುನಃ ಕೇಳಿದ

" ಅಷ್ಟು ನಾಚಿಕೆಯೇನೇ ? "

ಪದ್ಮಾವತಿಯ ಮುಖ ಗೋಪಿಯ ಕೈಯ ಹಿಡಿತದೊಳಗಿತ್ತು. ಮುಖ ಗುಲಾಬಿಯಂತೆ ಕೆಂಪೇರಿತ್ತು. ಪದ್ಮಾವತಿ ಗಂಡನನ್ನೇ ನೆಟ್ಟನೋಟದಿಂದ ನೋಡುತ್ತ ನಗಲಾರಂಭಿಸಿದಳು. ಗೋಪಿಗೆ ಅಷ್ಟೇ ಸಾಕಿತ್ತು. ಸುಮಿತ್ರೆ ಬಳಿಯಲ್ಲಿರದಿದ್ದರೆ ಪದ್ಮಾವತಿಯ ಚೆಂದುಟಿಗಳಿಗೆ ಅಲ್ಲೇ ಮುದ್ದಿಡುತ್ತಿದ್ದನೊ ಏನೊ. ಸುಮಿತ್ರೆಗೂ ಈ ವಿಚಾರ ಒಮ್ಮಿಂದೊಮ್ಮೆಗೆ ಮನಸ್ಸಿಗೆ ಬಂತೇನೊ.

ಇಲ್ಲಿ, ಈ ಸಂದರ್ಭದಲ್ಲಿ, ತನ್ನದು ಅನಧಿಕೃತ ಪ್ರವೇಶ ಎಂಬ ಅರಿವು ಬಂದಾಗ ಸುಮಿತ್ರೆಗೆ ಸಾವಿರ ಚೇಳು ಕುಟುಕಿದಂತಾಯಿತು. ಬೇಗ ಅಲ್ಲಿಂದ ಬಾಲ್ಕನಿಯ ಕಡೆ ನಡೆದಳು. ಗೋಪಿ ಪದ್ಮಾವತಿಯನ್ನು ಹಾಗೆಯೇ ಬಿಟ್ಟು ಬಳಿಯಿದ್ದ ದಿಂಬಿನಿಂದ ಏಟುಕೊಟ್ಟು ಅಡುಗೆಯ ಮನೆಗೆ ಹಿಂದಿರುಗಿದ.

ಸುಮಿತ್ರೆಯ ಉತ್ಸಾಹ, ಉಲ್ಲಾಸಗಳೆಲ್ಲ ಒಂದು ಕ್ಷಣದಲ್ಲಿ ಮಾಯ ವಾದವು. ಆ ರೀತಿಯ ವಿಚಿತ್ರ ವೇದನೆಯನ್ನು ಆಕೆ ಎಂದೂ ಅನುಭವಿಸಿರ ಲಿಲ್ಲ. ಯಾವ ಸಂದರ್ಭವೂ ಇರದಿದ್ದರೂ ಮನಸ್ಸಿನಲ್ಲಿ ತಂದೆಯ ತಲೆಗೆ ತಾನು ಬಿಸಿ ನೀರು ಸುರಿದ ಚಿತ್ರ ಸುಳಿಯಿತು. ತಾನೇಕೆ ಪದ್ಮಾವತಿಯನ್ನನು

ಸರಿಸಿ ಹೋಗಿ ಗಂಡ ಹೆಂಡಿರ ಏಕಾಂತತೆಗೆ ಭಂಗ ತಂದೆ ಎಂದು ತನ್ನನ್ನೆ ತಾನು ಸಾವಿರಬಾರಿ ಶಪಿಸಿಕೊಂಡಳು.

ತಾನು ಇಂದು ಪರಾಧೀನೆ, ಸ್ವತಂತ್ರಳಲ್ಲ; ಹೆಜ್ಜೆಹೆಜ್ಜೆಗೂ ಅಧಿಕಾರದ ಪ್ರಶ್ನೆಯುದ್ಭವಿಸಲಿದೆ, ಹೆಜ್ಜೆಹೆಜ್ಜೆಗೂ ಯೋಚಿಸಿ ಮುಂದುವರಿಯಬೇಕಾಗಿದೆ ಎಂಬ ತಿಳಿವು ಬಂದಾಗ ಅವಳ ಕಣ್ಣು ಹನಿಗೂಡುವುದರಲ್ಲಿತ್ತು.

ಪದ್ಮಾ ಅಡುಗೆಯ ಮನೆಯಿಂದಲೇ ಕೂಗುತ್ತಿದ್ದಳು.

"ಅಕ್ಕಾ, ಕಾಫಿ ಕುಡಿಯುವುದಿಲ್ಲವೇನೇ ? ಮುಖ ತೊಳೆದಾಯಿತೇನೇ ?''

ಸುಮಿತ್ರೆ ಮುಖ ತೊಳೆಯುವ ನೆಪದಿಂದ ಬಚ್ಚಲು ಮನೆಗೆ ಹೋದಳು.

ಮರಳಿ ಆಕೆ ಅಡುಗೆಯ ಮನೆಗೆ ಬಂದಾಗ, ಎದ್ದು ಬಂದಾಗಿನ ಉಲ್ಲಾಸ ಇದ್ದಿರಲಿಲ್ಲವಾದರೂ, ಆಕೆ ಗೋಪಿ ಪದ್ಮಾವತಿಯರ ಸರಸದಲ್ಲಿ ಬೆರೆಯಲು ಸಾಕಷ್ಟು ಪ್ರಯತ್ನಿಸಿದಳು.

ಕಾಫಿ ಉಪಹಾರ ಮುಗಿಸುತ್ತಿದ್ದಂತೆ ಗೋಪಿ ಪದ್ಮಾವತಿಯೊಡನೆ ಕೇಳಿದ.

"ಅಕ್ಕನಿಗೆ ಮುಂಬಯಿ ಯಾವಾಗ ತೋರಿಸುತ್ತೀಯೆ ?''

"ಟ್ಯಾಕ್ಸಿ ಮಾಡಿಯಲ್ಲ. ಈಹೊತ್ತೇ ತೋರಿಸುತ್ತೇನೆ."

"ಇವೊತ್ತು ಅಣ್ಣನ ಮನೆಗೆ ಹೋಗಬೇಕಲ್ಲ ಸಂಜೆಗೆ. ಹೋಗದಿದ್ದರೆ ಅತ್ತಿಗೆ ರಂಪಾ ಮಾಡಿಯಾಳು. ರಾತ್ರಿ ಊಟ ಕೂಡ ಅಲ್ಲಿಯೇ ಎಂದು ಹೇಳಿದ್ದಾಳೆ. ನಾಳೆ ಆದಿತ್ಯವಾರ. ಹೇಗೂ ರಜೆಯಿದೆ. ಬೇಗ ಊಟ ಮುಗಿಸಿ ಹೋಗೋಣ. ಮಧ್ಯಾಹ್ನ 'ಲಿಬರ್ಟಿ', ಆಮೇಲೆ ಚೌಪಾಟಿ, ಬ್ಯಾಕ್‌ಬೇ, ಅಪೋಲೋ ಪಿಯರ್ ಎಲ್ಲ ನೋಡಿ 'ಪುರೋಹಿತ್' ಹೊಟೇಲಿನಲ್ಲಿ ಊಟ ಮುಗಿಸಿಕೊಂಡು ರಾತ್ರೆ ವಾಪಾಸು. ಆಯಿತೇ ?" ಎಂದು ಗೋಪಿ ಕೇಳಿದ.

"ಅಂತೂ ಟ್ಯಾಕ್ಸಿ ದುಡ್ಡು ಉಳಿಸುವ ಯೋಚನೆ ನಿಮಗೆ." ಎಂದು ಪದ್ಮಾವತಿ ನಗೆಮಾತು ಆಡಿದಳು.

"ಹೊಸ ಮನೆಯಾದ ಕೂಡಲೆ ದೊಡ್ಡ ಮಹಾರಾಣಿಯಾಗಿ ಬಿಟ್ಟೆಯಲ್ಲ. ಟ್ಯಾಕ್ಸಿ ಬೇಕಂತೆ ಟ್ಯಾಕ್ಸಿ. ನಾಳೆ ಟ್ರಾಂ ಬಿಟ್ಟು ಬಸ್ಸಿಗೆ ಸಹ ಒಂದು

ಪೈ ನಾನು ಖರ್ಚು ಮಾಡುವುದಿಲ್ಲ.” ಎಂದು ಉತ್ತರಕೊಟ್ಟು ಗೋಪಿ ಆಫೀಸಿಗೆ ಹೊರಡುವ ಸಿದ್ಧತೆ ನಡೆಸಿದ.

ಶನಿವಾರ ಅರ್ಧದಿನದ ಬಿಡುವಿದ್ದುದರಿಂದ, ಗೋಪಿ ಮಧ್ಯಾಹ್ನ ಊಟಕ್ಕೆ ಮನೆಗೇ ಬರುವವನಿದ್ದುದರಿಂದ ಬೇಗ ಅಡುಗೆಯ ತಯಾರಿ ಅಗತ್ಯವಿರಲಿಲ್ಲ. ಆ ಕಾರಣ ಅಕ್ಕತಂಗಿಯರಿಗೆ ಆಲಸ್ಯಕ್ಕೆ ಸಾಕಷ್ಟು ಅವಕಾಶವಿತ್ತು.

ಗೋಪಿ ಆಫೀಸಿಗೆ ಹೊರಟು ಹೋದಮೇಲೆ, ಅರ್ಧ ಕುತೂಹಲದಿಂದ ಅರ್ಧ ತಂಗಿಯ ಒತ್ತಾಯಕ್ಕಾಗಿ ಸುಮಿತ್ರೆ ತಂಗಿಯ ಜೊತೆಗೆ ಕಟ್ಟಡವಿಡೀ ಸುತ್ತಿ ಬಂದಳು. ನೆರೆಕರೆಯುವರನ್ನೆಲ್ಲ ತುಂಬ ಕುತೂಹಲದಿಂದಲೇ ನೋಡಿದಳು. ಎರಡು ಮೂರು ಕೋಣೆಗಳಲ್ಲೇ ಬ್ರಹ್ಮಾಂಡವನ್ನು ನಿರ್ಮಿಸಿಕೊಂಡು ಸಂಸಾರ ನಡೆಸುವ ಮುಂಬಯಿಯ ಕುಟುಂಬಜೀವನವನ್ನು ಕಂಡು ಆಕೆಗೆ ಸೋಜಿಗವೇ ಆಯಿತು. ಅವರ ಮನೆಯ ನೆರೆಯಲ್ಲೇ ಒಂದು ಸಿಂಧೀ ವಸತಿಯಿತ್ತು. ಅದಕ್ಕೆ ಮುಂದೆ ಇನ್ನೊಂದು ಮನೆಯಲ್ಲಿ ಒಂದು ಮಹಾರಾಷ್ಟ್ರೀಯ ಕುಟುಂಬ. ತಮ್ಮ ಮನೆಯ ಇದಿರಿನ ಮೂರು ಮನೆಗಳಲ್ಲಿ, ಮೊದಲನೆಯದರಲ್ಲಿ ಒಂದು ಮದರಾಸೀ ಸಂಸಾರವಿದ್ದಂತೆ ಕಾಣುತ್ತಿತ್ತು. ಉಳಿದೆರಡು ಮನೆಗಳಲ್ಲಿ ಅಷ್ಟರ ತನಕ ವಸತಿಯಿದ್ದಂತೆ ಕಂಡುಬರಲಿಲ್ಲ.

ಮನೆಯೆಲ್ಲ ನೋಡುವ ಕೆಲಸ ಮುಗಿದೊಡನೆ, ಅಕ್ಕನಿಗೆ ಮುಂಬಯಿಯ ಪರಿಚಯ ಮಾಡಿಕೊಡುವವರಲ್ಲಿ ತಾನು ಮೊದಲಿಗಳಾಗಬೇಕು ಎಂಬ ಹೆಮ್ಮೆಯಿಂದ ಶೀಲೆ ತಂದಿರಿಸಿದ್ದ ತರಕಾರಿ ಮನೆತುಂಬ ಬಿದ್ದಿದ್ದರೂ ತರಕಾರಿ ತರುವ ನೆಪದಿಂದ ಅಕ್ಕನನ್ನು ಕರೆದುಕೊಂಡೇ ಪದ್ಮಾ ಮಾತುಂಗ ಮಾರ್ಕೆಟಿನತನಕ ನಡೆದಳು.

ಮುಂಬಯಿಯ ಪರಿಚಯವಾಗಲು ಆರಂಭವಾದಾಗ ಸುಮಿತ್ರೆಗೆ ಮೊದಲು ಆಶ್ಚರ್ಯಕ್ಕಿಂತ ಹೆಚ್ಚು ಭಯವೇ ಆಯಿತು. ಕೇಳಿ ಮಾತ್ರ ತಿಳಿದಿದ್ದ ಶಹರಿನ ವೈಭವವನ್ನು ಪ್ರತ್ಯಕ್ಷ ಕಾಣುವಾಗ ವಿಸ್ಮಯಕ್ಕಿಂತ ಹೆಚ್ಚು ಅಂಜಿಕೆಯೇ ಉಂಟಾಯಿತು. ತಮ್ಮ ಮನೆಯಂತೆಯೇ ಇದ್ದ ಸಾವಿರಾರು ಮನೆಗಳನ್ನು ನೋಡಿಕೊಂಡು ದಿನವೂ ಜಾತ್ರೆಯ ನೆನಪು ತಂದುಕೊಡುವಂತೆ ಜನ ನಿಬಿಡವಾಗಿದ್ದ ಬೀದಿಗಳನ್ನು ಮೊದಲಾಗಿ, ತಾನು ನೋಡಿದ

ಟ್ರಾಂ ಬಂಡಿಗಳು, ವಿದ್ಯುತ್ ರೈಲು ಬಂಡಿಗಳು, ಇವನ್ನೆಲ್ಲ ನೋಡಿ ತಂಗಿಯೊಡನೆ ಹರಟುತ್ತ ಮನೆಗೆ ಮರಳಿದ ಸುಮಿತ್ರೆಗೆ ಬೆಳಗಿನ ಸಿಹಿ-ಕಹಿ ಅನುಭವಗಳೆಲ್ಲ ಸ್ವಲ್ಪ ಸಮಯವಾದರೂ ಮರೆತುಹೋದವು.

ಹೊಸ ಜಗತ್ತಿನ ಪ್ರವೇಶದ ಅನುಭವಗಳನ್ನು ಅರಗಿಸಿಕೊಳ್ಳುವಲ್ಲಿ ತನ್ನ ವೈಯಕ್ತಿಕ ಸುಖ-ದುಃಖದ ಪ್ರಶ್ನೆಗಳನ್ನೆಲ್ಲ ಸುಮಿತ್ರೆ ಬದಿಗಿರಿಸಬೇಕಾಗಿ ಬಂದುದು ಸ್ವಾಭಾವಿಕವೆ.

ಮಧ್ಯಾಹ್ನ ಒಂದೂವರೆ ಘಂಟೆಗೆ ಗೋಪಿ ಆಫೀಸಿನಿಂದ ಮರಳಿಬಂದ. ಅಕ್ಕ ತಂಗಿಯರು ಅಡುಗೆ ಮುಗಿಸಿ ಅವನ ದಾರಿ ಕಾಯುತ್ತಿದ್ದರು. ಎಲ್ಲ ಒಟ್ಟಿಗೆ ಊಟ ಮಾಡುತ್ತಿದ್ದಾಗ ಗೋಪಿ ಕೇಳಿದ :

“ ಇದು ಪದ್ಮಾನ ಅಡಿಗೆಯ ಹಾಗೆ ಕಾಣುವುದಿಲ್ಲ. ”

“ ಅಲ್ಲ. ಅಕ್ಕನೇ ಮಾಡಿದ್ದಾಳೆ ” ಎಂದು ಪದ್ಮಾವತಿ ನಡುವೆಯೇ ತಡೆದು ಹೇಳಿದಳು.

“ ಯಾಕೆ, ಏನಾದರೂ ಕೆಟ್ಟಿವೆಯೇನು ? ’’ ಎಂದು ಸುಮಿತ್ರೆ ಕೇಳಿದಳು.

“ ಕೆಟ್ಟಿದ್ದರೆ ಪದ್ಮಾ ಮಾಡಿರಬೇಕೆಂದು ಕೂಡಲೇ ತಿಳಿಯುತ್ತಿತ್ತು. ” ಎಂದು ಗೋಪಿ ಹೆಂಡತಿಯ ಕಡೆ ನೋಡುತ್ತ ನಗು ತಂದುಕೊಂಡು ಹೇಳಿದ.

ಗೋಪಿ ಹಾಗೆ ಮಾತನಾಡಿದ್ದುದು ಪದ್ಮಾವತಿಯನ್ನು ಕೆಣಕಿಯಾದರೂ ಸುಮಿತ್ರೆಯನ್ನು ಮಾತಿಗೆಳೆಯೋಣವೆಂದು. ಈ ಹಾಸ್ಯದಿಂದ ಪದ್ಮಾವತಿ ನೊಂದುಕೊಳ್ಳುವಂತೆಯೂ ಇರಲಿಲ್ಲ.

ಆದರೆ ಸುಮಿತ್ರೆಗೆ ಒಮ್ಮಿಂದೊಮ್ಮೆಗೆ ಸಿಟ್ಟು ಬಂತು.

ಇವನೇಕೆ ನನ್ನ ಕುರಿತು ಈ ರೀತಿಯ ಸಹಾನುಭೂತಿ ತೋರುತ್ತಿದ್ದಾನೆ ? ಎಂದು ಮನಸ್ಸು ಪ್ರಶ್ನಿಸಿತು.

ಸ್ವಾಭಿಮಾನ ಕೆದರಿದಾಗಲೂ, ತಾನು ಅನಾಥೆ, ಪರಾಧೀನೆಯೆಂಬ ನೋವು ಅವಳನ್ನು ಕಾಡತೊಡಗಿತು. ಅವಳಿಗೆ ಊಟ ರುಚಿಸಲಿಲ್ಲ.

ಗೋಪಿಗೆ ಇದಾವುದರ ಅರಿವೂ ಇರಲಿಲ್ಲ. ಆತ ಊಟ ಮುಗಿಸಿ ತುಸು ವಿರಮಿಸಿಕೊಂಡ. ಅಕ್ಕ-ತಂಗಿಯರಿಬ್ಬರೂ ಹಿಂದಿನ ರಾತ್ರಿ ಮಲಗಿದಲ್ಲೇ ಒರಗಿಕೊಂಡರು.

ಸಂಜೆ ಕಾಫಿ ಮುಗಿಸಿ ಮೂವರೂ 'ಹಿಂದೂ-ಕಾಲನಿ'ಗೆ ನಡೆದೇ ಹೋದರು. ನಡೆದೇ ಹೋಗುವ ಆಸೆ ತೋರಿಸಿದ್ದು ಪದ್ಮಾವತಿ. ಸುಮಿತ್ರೆಗೂ ಅದೇ ಬೇಕಾಗಿತ್ತು. ಹೀಗಾಗಿ ಗೋಪಿ 'ಬೇಡ' ಎನ್ನಲಿಲ್ಲ.

ಬಾಲ್ಕನಿಯಿಂದಲೇ ಇವರು ಬರುವುದನ್ನು ನೋಡಿದ್ದ ಶೀಲೆ ಬಾಗಿಲಲ್ಲೇ ಕಾದಿದ್ದಳು. ಪದ್ಮಾವತಿಗೂ ತನ್ನ ಮುಂಬರುವ ಜೀವನದ ಆರಂಭದ ಎರಡು ತಿಂಗಳುಗಳನ್ನು ಕಳೆದ ಮನೆಗೆ ಬರಲು ಎಲ್ಲಿಲ್ಲದ ಅವಸರ. ಎಲ್ಲರಿಗಿಂತ ಮೊದಲು ಮಾಳಿಗೆಯ ಮೆಟ್ಟಿಲೇರಿ ಬಂದವಳು ಶೀಲೆಯನ್ನು ಕಂಡು "ಭಾವ ಇದ್ದಾರೆಯೆ ಶೀಲಕ್ಕ ?" ಎಂದು ಕೇಳಿದಳು.

"ಇದ್ದಾರಮ್ಮ. ಇಷ್ಟು ಬೇಗ ಏನಿದೆ ಡಿಸ್ಪೆನ್ಸರಿಯಲ್ಲಿ ?" ಎಂದು ಶೀಲೆ ಹೇಳಿದಳು. ಹಾಗೆಯೇ ಸುಮಿತ್ರೆಯನ್ನು ಕಂಡು 'ಬಂದೆಯಾ ?' ಎಂದು ಕೇಳಿದಳು.

ಗೋಪಿ ಉದಾಸೀನನಾಗಿಯೇ ಬಂದಿದ್ದನಾದರೂ ನಗುತ್ತಲೇ ಇದ್ದ. ಇವರೆಲ್ಲ ಒಳಗೆ ಬಂದಾಗ ಮೋಹನ ಏನೋ ಓದುತ್ತಿದ್ದವನು ಪದ್ಮಾವತಿ 'ಭಾವಾ !' ಎಂದು ಕರೆದಾಗ ಮುಖವೆತ್ತಿದ.

"ಏನೇ ! ಊರಿಗೆ ಹೋಗಿ ಹಂದಿಯ ಹಾಗಾಗಿಬಿಟ್ಟಿದ್ದೀಯಲ್ಲ." ಎಂದು ನಗುತ್ತಲೇ ಹೇಳಿದ.

"ಥೂ. ಅವಲಕ್ಷಣದ ಹಂದಿಯನ್ನೆ ಹೋಲಿಸಬೇಕೇನೊ" ಎಂದು ಶೀಲೆ ಸಿಟ್ಟಿಗೆದ್ದು ನುಡಿದಳು.

ಸುಮಿತ್ರೆಗೆ ನಗು ತಡೆಯಲಾಗಲಿಲ್ಲ. ಮೋಹನ ಸುಮಿತ್ರೆಯನ್ನು ನೋಡಿದುದು ಆಗಲೇ. ಆಕೆಯನ್ನು ಕಂಡವನು ಪುಸ್ತಕವನ್ನು ಕೆಳಗಿರಿಸಿ ಎದ್ದ.

ಇವನ ಕುತೂಹಲವನ್ನು ಗುರುತಿಸಿ ಪದ್ಮಾವತಿ "ಇದು ನನ್ನ ಅಕ್ಕ ಸುಮಿತ್ರೆ, ಭಾವಾ" ಎಂದಳು. ಮೋಹನ "ಹಾಗೇನು" ಎಂದವನು ಪುನಃ ಸುಮಿತ್ರೆಯನ್ನು ನೋಡಿದನಷ್ಟೆ. ಮಾತನಾಡಲಿಲ್ಲ.

ಸುಮಿತ್ರೆಗೆ ಪುನಃ ಅಪಮಾನದ ವೇದನೆಯ ಅನುಭವ.

"ಹೇಗಿದೆ ನಿನ್ನ ಹೊಸಮನೆ ?" ಎಂದು ಮೋಹನ ಸುಮಿತ್ರೆಯ ಇರವನ್ನೇ ಮರೆತವನಂತೆ ಪದ್ಮಾವತಿಯನ್ನು ಪ್ರಶ್ನಿಸಿದ.

ಪದ್ಮಾವತಿಗೂ ಮೋಹನ ಅಕ್ಕನನ್ನು ಮಾತನಾಡಿಸದೆ ಉಳಿದುದರಿಂದ ತುಂಬ ಬೇಸರವಾಯಿತು. ಇದೇ ಕಾರಣ ಮೋಹನನ ಪ್ರಶ್ನೆಗೆ "ಚೆನ್ನಾಗಿದೆ" ಎಂದಿಷ್ಟೇ ಹೇಳಿದಳು.

ಸುಮಿತ್ರೆ ಕಲ್ಲಿನಂತೆ ನಿಂತಿದ್ದಳು. ಬಳಿಯಲ್ಲೇ ಇದ್ದ ಗೋಪಿಗೂ ಮೋಹನನ ತಿರಸ್ಕಾರ ದೃಷ್ಟಿ ತುಂಬ ನೋವನ್ನುಂಟುಮಾಡಿತು. ಆದರೂ ಆ ಸಂದರ್ಭದಲ್ಲಿ ಆತ ಸಿಟ್ಟಾಗುವುದು ತರವಲ್ಲವೆಂದು "ನಾಳೆ ಸಾಧ್ಯವಾದರೆ ಆನಂದರಾಯರನ್ನು ನೀನು ಕಾಣಬೇಕಂತೆ ಅಣ್ಣಾ" ಎಂದು ವಿಷಯ ಒಡ ಲಿಸಿ ಮಾತನಾಡಿದ.

ಶೀಲೆಗೂ ಮೋಹನ ಸುಮಿತ್ರೆಯೊಡನೆ ಒಂದು ಮಾತು ಕೂಡ ಆಡದಿ ದ್ದುದು ಬೇಸರವನ್ನುಂಟುಮಾಡಿತು. ಆದರೆ ಆಕೆಯೂ ಅಲ್ಲಿ ಮಾತನಾಡು ವಂತಿರಲಿಲ್ಲವಾದಕಾರಣ "ಬಾ ಸುಮಿತ್ರಾ, ಬಾ ಪದ್ಮಾ" ಎಂದು ಇಬ್ಬರನ್ನೂ ಅಡುಗೆಯ ಮನೆಗೆ ಕರೆದಳು. ಗೋಪಿ ತಾನು ಮುಂಚೆ ಇರುತ್ತಿದ್ದ ಕೋಣೆಗೆ ಹೊರಟುಹೋದ.

ಶೀಲೆ ಅಕ್ಕ-ತಂಗಿಯರನ್ನು ಒಳಗೆ ಕರೆದುಕೊಂಡು ಹೋದವಳು ಸುಮಿತ್ರೆಯನ್ನು ಮಾತನಾಡಿಸಲು ತುಂಬ ಪ್ರಯತ್ನ ಮಾಡಿದಳು. ಪದ್ಮಾ ವತಿಯಾದರೂ ಸುಧಾರಿಸಿಕೊಂಡು ತುಂಬ ಹರಟತೊಡಗಿದಳಾದರೂ, ಸುಮಿತ್ರೆ ಮಾತ್ರ ಶೀಲೆಯ ನೂರೆಂಟು ಪ್ರಶ್ನೆಗಳಿಗೆ ಆಗೊಂದು ಈಗೊಂದು ಉತ್ತರ ಕೊಡುತ್ತಿದ್ದಳು.

ಅವಳು ಪುನಃ ಅಂತರ್ಮುಖಿಯಾದಳು.

ತನ್ನ ತಂಗಿಯ ಭಾವ ತನ್ನನ್ನು ಆ ರೀತಿ ತಿರಸ್ಕಾರ ದೃಷ್ಟಿಯಿಂದ ನೋಡಲು ಕಾರಣವೇನೆಂಬುದು ಆಕೆಗೆ ಹೊಳೆಯಲಿಲ್ಲ.

ಅಣ್ಣ-ತಮ್ಮಂದಿರ ಒಡಕಿಗೆ ತಾನೇ ಕಾರಣವೆಂದು ಎಲ್ಲಾದರೂ ತನ್ನ ಮೇಲೆ ಅವರು ಸಿಟ್ಟಿಗೆದ್ದಿದ್ದಾರೆಯೆ ಎಂದು ತನ್ನನ್ನೆ ತಾನು ಕೇಳಿಕೊಂಡಳು.

ಅಥವಾ ತನ್ನ ತಮ್ಮನಿಗೆ ಭಾರವಾಗಿ ಬಂದ ಇನ್ನೊಂದು ಜೀವ ಎಂಬ ದೃಷ್ಟಿಯಿಂದ ಅಸಮಾಧಾನವೇ ಎಂದು ಶಂಕೆಯೆದ್ದಿತು.

ಈ ಶಂಕೆ ಕುಶಂಕೆಗಳಿಗೆ ಯಾವ ಸಮಾಧಾನವೂ ಸಿಗಲಿಲ್ಲ.

ಮೋಹನ ತುಸು ತಡೆದು ಒಳಮನೆಗೆ ಬಂದವನು ಪದ್ಮಾವತಿ ಯೊಡನೆ ತುಂಬ ಸರಸವಾಡಿದ. ಮಂಗಳೂರಿನ ಕುರಿತು ಪ್ರಶ್ನಿಸಿದ. ಪ್ರಯಾಣದ ಅನುಭವ ಕೇಳಿದ. ಆದರೆ ಸುಮಿತ್ರೆಯೊಂದಿಗೆ ಮಾತ್ರ ಚಕಾರ ಮಾತನಾಡಲಿಲ್ಲ.

ರಾತ್ರಿಯ ಊಟವೂ ಗೋಪಿ ಸುಮಿತ್ರೆಯರಿಗೆ ರುಚಿಸಿಲ್ಲವೆಂದೇ ಹೇಳಬೇಕು.

ಊಟಕ್ಕೆ ಮೋಹನನೂ ಜೊತೆಗಿದ್ದ. ಅದಕ್ಕಾಗಿಯೆ ಬಿಡುವು ಮಾಡಿಕೊಂಡು ಬಂದಿದ್ದ. ಊಟ ಮುಗಿಸಿ ಮೂವರೂ ಹೊರಟಾಗ ಪದ್ಮಾವತಿಯನ್ನುದ್ದೇಶಿಸಿ " ಬೇರೆ ಮನೆಯಾಗಿದೆಯೆಂದು ಅಲ್ಲಿಯೇ ಕುಳಿತುಕೊಂಡು ಬಿಡಬೇಡ. ಬಹಳ ದೂರವೇನೂ ಇಲ್ಲ. ಆಗಾಗ ಬರುತ್ತಲೇ ಇರು " ಎಂದು ಹೇಳಿದ.

ಆದರೆ " ನಿನ್ನ ಅಕ್ಕನನ್ನೂ ಕರೆದುಕೊಂಡು ಬರುತ್ತಿರು " ಎಂದು ಹೇಳಲಿಲ್ಲ.

ಸುಮಿತ್ರೆ ಮಾತ್ರ ಮೋಹನ ಉದ್ದೇಶಪೂರ್ವಕವಾಗಿಯೇ ಹೀಗೆ ಹೇಳಿದ್ದಾನೆಂದು ತಿಳಿದಳು. " ನೀನೂ ಬರುತ್ತಿರು ಸುಮಿತ್ರಾ " ಎಂದು ಗಂಡನ ತಪ್ಪನ್ನು ತಿದ್ದಲು ಶೀಲೆ ಪ್ರಯತ್ನಿಸಿದರೂ ಅವಳಿಗೆ ಅದರಿಂದ ಸಮಾಧಾನ ದೊರಕಲಿಲ್ಲ.

ದಾರಿಯಲ್ಲಿ ಬರುತ್ತ ಗೋಪಿ " ಪದ್ಮಾನಿಗೆ ಬರಲಿಕ್ಕೆ ' ಫ್ರೀಡಮ್ ' ಕೊಟ್ಟಿದ್ದಾನೆ ಅಣ್ಣ. ನನಗೂ ಸುಮಿತ್ರೆಗೂ ಇಲ್ಲವೇನೋ " ಎಂದು ನಗುತ್ತಲೇ ಪದ್ಮಾವತಿಯೊಡನೆ ಕೇಳಿದ.

" ಏನು ಮಾತು !" ಎಂದು ಪದ್ಮಾವತಿ ಹೇಳಿದಳು.

ಗೋಪಿಯ ಮಾತು ಸಮರ್ಪಕವೇ ಆಗಿದ್ದಿತಾದರೂ ಸುಮಿತ್ರೆಗೆ, ಗೋಪಿ ಇಲ್ಲಿಯೂ ತನ್ನ ಕುರಿತಾದ ಸಹಾನುಭೂತಿ ತೋರಿಸಿದುದು ಸರಿ ಕಾಣಲಿಲ್ಲ. ಎಂತಲೇ ಅವಳು ಮಾತನಾಡಲಿಲ್ಲ.

ಸುಮಿತ್ರೆ, ಸುಮ್ಮಗಿದ್ದುದನ್ನು ಕಂಡು " ನೀನು ಸಿಟ್ಟಾಗಬೇಡ ಸುಮಿತ್ರಾ. ನನ್ನ ಅಣ್ಣನ ಸ್ವಭಾವವೇ ಹಾಗೆ " ಎಂದು ಗೋಪಿ ಅವಳನ್ನುದ್ದೇಶಿಸಿ ಹೇಳಿದಾಗ ಸುಮಿತ್ರೆ ಉಪಚಾರಕ್ಕಾಗಿ " ಛೆ ! ಛೆ ! ಹಾಗೇನೂ ಇಲ್ಲ." ಎಂದು

ಹೇಳಿದರೂ ಗೋಪಿಗೂ ಸುಮಿತ್ರೆಗೂ ಇದು ಸುಳ್ಳುಮಾತು ಎಂಬುದು ಚೆನ್ನಾಗಿ ತಿಳಿದಿತ್ತು.

ಮಾರನೆಯ ದಿನ ಮುಂಬಯಿ ದರ್ಶನದ ಭಾಗ್ಯದ ರವಿವಾರ. ಒಬ್ಬಿಬ್ಬರು ಗೆಳೆಯರು ಗೋಪಿಯ ಹೊಸ ಮನೆಯನ್ನು ನೋಡಲೆಂದು ಬಂದಿದ್ದುದರಿಂದ ಬೆಳಿಗ್ಗೆ ಗೋಪಿ ಮನೆಯಲ್ಲೇ ಇದ್ದ. ಮಧ್ಯಾಹ್ನ ಊಟ ತೀರಿಸಿದ ಮೇಲೆ ಅವಸರದಲ್ಲೇ 'ಲಿಬರ್ಟಿ'ಯಲ್ಲಿ ಸಿನೆಮಾ ನೋಡಲೆಂದು ಮೂವರೂ ಹೊರಟರು.

ವಿರಾಟ್‌ಶಕ್ತಿಯ ಮಹಾಶಹರಾದ ಮುಂಬಯಿಯ ಭವ್ಯತೆಯ ತಿಳಿವುಂಟಾದುದು ಸುಮಿತ್ರೆಗೆ ಅಂದೇ. ಹಿಂದಿನ ದಿನ ಮಾತುಂಗಾ ಸುತ್ತಿದ ಅಲ್ಪಾನುಭವದ ಮಾನದಂಡದಿಂದ ಮುಂಬಯಿಯ ಯೋಗ್ಯತೆಯನ್ನಳೆಯುವುದು ಸಾಧ್ಯವಿಲ್ಲ ಎಂದು ತೋರಿಬಂದುದು ಆಕೆಗೆ ಮೊದಲು ವಿಕ್ಟೋರಿಯಾ ಟರ್ಮಿನಸ್ ನಿಲ್ದಾಣ ತಲುಪಿದಾಗ. ಆ ಕಿಕ್ಕಿರಿದು ತುಂಬಿದ್ದ ಬಂಡಿಗಳಲ್ಲಿ ಪ್ರಯಾಣ, ಕಂಡಕಂಡಲ್ಲಿ ಕಾಣುವ ಜನ ಕೋಟಿ, ಆಕಾಶವನ್ನು ನಾಚಿಸಲು ನಿಂತ ಭವ್ಯ ಕಟ್ಟಡಗಳು, ಎಲ್ಲಕ್ಕಿಂತಲೂ ಮಿಗಿಲಾಗಿ ಯಂತ್ರಕ್ಕಿಂತಲೂ ಹೆಚ್ಚಿನ ಆಸಕ್ತಿಯ ಮನುಷ್ಯನ ಗತಿ ಇವನ್ನೆಲ್ಲ ಕಂಡು ಕಂಗಾಲಾದ ಸುಮಿತ್ರೆ 'ಲಿಬರ್ಟಿ'ಯ ಸಮೀಪ ಟ್ಯಾಕ್ಸಿಯಿಂದಿಳಿಯುವ ವರೆಗೂ ಮಾತನಾಡಲಿಲ್ಲ.

ಚಿತ್ರ ಮುಗಿಸಿದ ಮೇಲೆ ಸಂಜೆಗೆ ಚೌಪಾಟಿ, ಮಲಬಾರ್ ಬೆಟ್ಟ, ಬಾಬುಲ್‌ನಾಥ್ ದೇವಾಲಯ, ಮೆರೀನ್ ಡ್ರ್ಯಾವ್‌ದ ದಂಡೆಗುಂಟ ರಜಾದಿನದ ವಿಹಾರ ಸಂಭ್ರಮಕ್ಕಾಗಿ ಬಂದಿದ್ದ ಜನಸಾಗರ, ಬ್ಯಾಕ್‌ಬೇಯ ರಿಕ್ಲಮೇಶನಿನ ಕಟ್ಟಡಗಳು, ಚರ್ಚಗೇಟ್ ನಿಲ್ದಾಣ, ತಾಜ್‌ಮಹಾಲ್ ಹೊಟೇಲು, ಅಪೋಲೋ ಬಂದರ ಇವೆಲ್ಲವುಗಳ ಸಂದರ್ಶನ ಪದ್ಮಾವತಿಯ ಬಯಕೆಯಂತೆ 'ಟ್ಯಾಕ್ಸಿ'ಯಲ್ಲೇ ಆಯಿತು. ಪದ್ಮಾವತಿ ಈ ಮೊದಲೇ ಇವನ್ನೆಲ್ಲ ಎರಡೆರಡು ಬಾರಿ ಕಂಡಿದ್ದಳಾದ ಕಾರಣ ಈ ಸಂದರ್ಶನ ತನಗಾಗಿಯೇ ಎಂಬ ಯೋಚನೆ ಸುಮಿತ್ರೆಗೆ ಬಾರದಿರಲಿಲ್ಲ. ಅದರಿಂದ ತುಸು ಬೇಸರವೂ ಆಗದಿರಲಿಲ್ಲ. ಆದರೆ ಈಯೆಲ್ಲ ವೈಭವ ಸಾಮ್ರಾಜ್ಯದ ಸ್ವರೂಪದರ್ಶನದ

ಗುಂಗಿನಲ್ಲಿ ಅವಳಿಗೆ ಮನಸ್ಸಿನ ಅಂತರಾಳದಲ್ಲಿ ಹುದುಗಿದ್ದ ನೋವು ಕೂಡ ನೋವಾಗಿ ಕಾಣಿಸಲಿಲ್ಲ.

'ಪುರೋಹಿತ್' ಹೊಟೆಲಿನಲ್ಲಿ ಊಟ ತೀರಿಸಿ ಎಲ್ಲ ಮನೆಗೆ ಮರಳು ವಾಗ ರಾತ್ರಿ ಘಂಟೆ ಹತ್ತಾಗಿತ್ತು.

' ರಾತ್ರಿ ತನ್ನ ಕೋಣೆಯಲ್ಲಿ—ಗೋಪಿ ಹಿಂದಿನದಿನ ಆ ಕೋಣೆಯನ್ನು ಹಾಗೆಯೇ ಹೆಸರಿಸಿದ್ದ—ಒಬ್ಬಳೇ ಮಲಗಿ ಸುಮಿತ್ರೆ ತಾನು ಕಂಡ ನೋಟ ಗಳನ್ನು, ಪಡೆದ ಅನುಭವಗಳನ್ನು ಮೆಲುಕುಹಾಕುತ್ತಿದ್ದಾಗ ಪುನಃ ದಾರಿಯಲ್ಲಿ ಅನುಭವಿಸಿದ ಅವ್ಯಕ್ತ ನೋವು ಹೆಚ್ಚು ಸ್ಪಷ್ಟವಾಗಿ ಪ್ರಕಟವಾಯಿತು.

ತಾನು ಮಲಗಿದ್ದ ಕೋಣೆಯನ್ನು ಸುಮಿತ್ರೆಯ ಕೋಣೆಯೆಂದು ಕರೆಯುತ್ತಿದ್ದುದಲ್ಲದೆ ಗೋಪಿ ಎಲ್ಲ ಸೌಕರ್ಯಗಳನ್ನು ಒದವಿಸಿದ್ದ. ಇಷ್ಟು ದಿನ ಬರೀ ಚಾಪೆಯ ಮೇಲೆ ಮಲಗುತ್ತಿದ್ದವಳಿಗೆ ಈಗ ಗೋಪಿ ಒದಗಿ ಸಿದ್ದ ಮೆತ್ತನ್ನ ಹಾಸಿಗೆ ಮುಳ್ಳಿನಂತೆ ಕಂಡಿತು.

ಗೋಪಿಯೇಕೆ ತನಗಾಗಿ, ತನ್ನ ಸಮಾಧಾನ, ಸುಖ ಸೌಕರ್ಯಗಳಿ ಗಾಗಿ ಇಷ್ಟು ಹಣ ವ್ಯಯಿಸುತ್ತಿದ್ದಾನೆ, ಇಷ್ಟು ಶ್ರಮ ಪಡುತ್ತಿದ್ದಾನೆ ಎಂದು ಆಕೆಯ ಮನಸ್ಸು ಪದೇ ಪದೇ ಕೇಳುತ್ತಿತ್ತು.

ಇಂದು ಟ್ಯಾಕ್ಸಿಗೆ ಹತ್ತಿಪ್ಪತ್ತು ರುಪಾಯಿ, ಸಿನೆಮಾಕ್ಕೆ ಇನ್ನಷ್ಟು ರುಪಾಯಿ, ಹೋಟೆಲಿನ ಊಟಕ್ಕಾಗಿ ಹಣ, ನೋಟಕ್ಕಾಗಿ, ಆಟಕ್ಕಾಗಿ ಹಣ, ಇಷ್ಟೆಲ್ಲ ಖರ್ಚು ಪದ್ಮಾವತಿಯ ಸುಖಕ್ಕಾಗಿಯೇ ಎಂದು ಮನಸ್ಸು ಕೇಳು ತ್ತಿತ್ತು.

ಅಷ್ಟೆಯೆ ?

ಈ ಮನೆಗೆ ಸಾವಿರಾರು ರುಪಾಯಿಗಳ ಕೊಡುಗೆ—ಶೀಲೆಯಿಂದ ಈ ವಿಚಾರ ಸುಮಿತ್ರೆಗೆ ತಿಳಿದಿತ್ತು—ಯಾರಿಗೋಸ್ಕರ ಎಂದು ಅದೇ ಮನಸ್ಸು ಪುನಃ ಪ್ರಶ್ನಿಸುತ್ತಿತ್ತು.

ತನಗೆ ಇಲ್ಲಿರಲು ಯಾವ ಅಧಿಕಾರವೂ ಇಲ್ಲ; ಆದರೂ ತಾನಿಲ್ಲಿದ್ದೇನೆ. ಇರುವಾಗ ತನ್ನ ಮನಸ್ಸು ನೋಯಬಾರದೆಂದು ಗೋಪಿ ಈ ರೀತಿ ಖರ್ಚು ಮಾಡುತ್ತಿದ್ದಾನೆ ಎಂದು ಅದೇ ಮನಸ್ಸು ಪುನಃ ಸಮಾಧಾನ ಹೇಳಿತು.

"ಅಣ್ಣನನ್ನು ಬಿಟ್ಟುಬಂದು ತಪ್ಪುಮಾಡಿದೆ. ಅಣ್ಣನಿಗೆ ಭಾರವಾಗಿರುವುದು ಬೇಡವೆಂದು ಬಂದು ಈಗ ತಂಗಿ ಭಾವಂದಿರ ಉದಾರಾಶ್ರಯದಲ್ಲಿ ಎಷ್ಟು ದಿನ ನಿನ್ನನ್ನು ನೋಡಿಕೊಳ್ಳುವಿ ?" ಎಂದು ಮತ್ತೊಂದು ಪ್ರಶ್ನೆ ಮನಸ್ಸಿನ ಅಂತರಾಳದಲ್ಲಿ.

ಸ್ವತಂತ್ರ ವೃತ್ತಿಯ ಪ್ರಲೋಭನದಿಂದಾಗಿ ತಾನಿಲ್ಲಿಗೆ ಬಂದಿದ್ದೇನೆ ಎಂಬ ಸಮಾಧಾನ ಮತ್ತೆ ಮನಸ್ಸಿನಲ್ಲಿ ಸುಳಿಯಿತಾದರೂ, ಆ ವಿಚಾರ ಆಕೆ ತಂಗಿಯೊಡನಾಗಲೀ ಗೋಪಿಯೊಡನಾಗಲೀ ಈ ವರೆಗೆ ಮಾತನಾಡಿರಲಿಲ್ಲ. ಮಾತನಾಡಲು ಒಂದೆರಡುಬಾರಿ ಪ್ರಯತ್ನಿಸಿದ್ದರೂ ಸಾಧ್ಯವಾಗಿರಲಿಲ್ಲ. ಎರಡು ದಿನಗಳ ಅನುಭವದಲ್ಲಿ ಕಂಡುಬಂದ ಸತ್ಯ ಇದು.

ಸಾಧ್ಯವಾದಷ್ಟು ಬೇಗನೆ ಒಂದು ಉದ್ಯೋಗ ದೊರಕಿಸಿಕೊಳ್ಳಬೇಕು. ಸಾಧ್ಯವಾದಷ್ಟು ಬೇಗನೆ ಈ ವಿಚಾರ ಗೋಪಿಯೊಡನೆ ಮಾತನಾಡಬೇಕು ಎಂಬ ನಿರ್ಧಾರಕ್ಕೆ ಬಂದಳು ಸುಮಿತ್ರೆ.

ಆದರೆ ಉದ್ಯೋಗ ದೊರಕಿದರೂ, ಇಲ್ಲಿಂದ ಬೇರೆ ಹೋಗುವುದೆಲ್ಲಿಗೆ ಎಂಬ ಪ್ರಶ್ನೆಗೆ ಮಾತ್ರ ಆಕೆಗೆ ಸಮಾಧಾನ ದೊರಕಲಿಲ್ಲ.

ಈ ವಿಚಾರ ತುಮುಲದಲ್ಲೇ ಸುಮಿತ್ರೆಗೆ ನಿದ್ದೆ ಬಂತು. ಆದರೆ ಆಕೆಯ ಮನಸ್ಸಿನ ನಿರ್ಧಾರವನ್ನು ಗೋಪಿಯ ಇದಿರು ಪ್ರಕಟಿಸಲು ಮಾತ್ರ ಹೆಚ್ಚು ಸಮಯ ಕಾಯಬೇಕಾಗಿ ಬರಲಿಲ್ಲ. ಬರೇ ಒಂದು ವಾರದೊಳಗೆ ಅಂಥ ಸಂದರ್ಭವೊಂದು ಒದಗಿಬಂತು.

ಮುಂದಿನ ಶುಕ್ರವಾರ ಸಂಜೆ ಗೋಪಿ ಆಫೀಸಿನಿಂದ ತುಸು ತಡವಾಗಿ ಮರಳಿದವನು ಬಂದು ಬಾಗಿಲಲ್ಲಿ 'ಬೆಲ್' ಸದ್ದುಮಾಡಿದಾಗ ಪದ್ಮಾವತಿ ಬಚ್ಚಲು ಮನೆಯಲ್ಲಿದ್ದುದರಿಂದ ಸುಮಿತ್ರೆಯೇ ಬಾಗಿಲು ತೆಗೆದಳು. ಒಳಗೆ ಬಂದ ಗೋಪಿಯ ಕೈಯಲ್ಲಿ ದೊಡ್ಡದೊಂದು ಗಂಟಿತ್ತು.

"ಪದ್ಮಾ ಎಲ್ಲಿ?" ಎಂದು ಆತ ಕೇಳುತ್ತಿರುವಾಗಲೇ ಪದ್ಮಾವತಿ ಬಂದವಳು ಗಂಡನ ಕೈಯುಲ್ಲಿದ್ದ ಗಂಟು ನೋಡಿ 'ತಂದಿರಾ ?' ಎಂದು ಕೇಳಿ ಅದನ್ನು ಕಸಿದುಕೊಂಡಳು.

"ಏನಿದೆಯೇ ಅದರಲ್ಲಿ ?" ಎಂದು ಸುಮಿತ್ರೆ ಪದ್ಮಾವತಿಯನ್ನು ಕೇಳಿದಳು.

" ಹೇಳಲ್ಲ ಗಟ್ಟಿಗಳಾದರೆ " ಎಂದವಳೇ ಪದ್ಮಾವತಿ ಅಕ್ಕನನ್ನೆಳೆದು ಕೊಂಡು ತನ್ನ ಕೋಣೆಗೆ ಹೋದಳು.

ಪದ್ಮಾವತಿ ಗಂಟುಬಿಚ್ಚಿದಾಗ ಅಕ್ಕತಂಗಿಯರಿಗೆ ಕಂಡುದು ಅದರಲ್ಲಿ ನಾಲ್ಕು ಸೀರೆಗಳು.

" ಇಷ್ಟೆಯೆ ? " ಎಂದು ಸುಮಿತ್ರೆ ಕೇಳಿದಾಗ ಪದ್ಮಾವತಿ ಮಾತನಾಡ ಲಿಲ್ಲ. ಎರಡು ಸೀರೆಯನ್ನು ತೆಗೆದು ಬೀರುವಿನಲ್ಲಿ ತುರುಕಿ, ಇನ್ನೆರಡನ್ನು ತೆಗೆದು ಅವಕ್ಕೆ ಕುಂಕುಮ ಹಚ್ಚಿ ಸುಮಿತ್ರೆಯ ಬಳಿ ಬಂದು "ಉಟ್ಟುಕೋ. ಇವತ್ತು ಶುಕ್ರವಾರ." ಎಂದಾಗ ಮಾತ್ರ ಸುಮಿತ್ರೆಗಾದ ಆಶ್ಚರ್ಯ ಅಷ್ಟಿಷ್ಟಲ್ಲ.

" ನೀನು ಉಟ್ಟುಕೊಳ್ಳೇ. ನನಗೆ ಯಾಕೆ ಸೀರೆ ? " ಎಂದು ಆಶ್ಚರ್ಯ ದಿಂದ ಕೇಳಿದಳು ಸುಮಿತ್ರೆ.

" ಒಂದು ನಾನು ಉಟ್ಟುಕೊಳ್ಳುತ್ತೇನೆ. ಇನ್ನೊಂದು ನಿನಗೆ " ಎಂದಾಗ ಸುಮಿತ್ರೆಗೆ ಏನು ಉತ್ತರ ಹೇಳುವುದೆಂದು ತಿಳಿಯಲಿಲ್ಲ.

" ಅಲ್ಲ ಪದ್ಮಾ ! ನಿನಗೆ ತಂದ ಸೀರೆಯನ್ನು ನನಗೆ ಯಾಕೆ ಕೊಡು ತ್ತೀಯೆ ? ನನಗೀಗ ಹೊಸ ಸೀರೆ ಬೇಕಾಗಿದೆಯೆ ? " ಎಂದು ತಂಗಿಯನ್ನು ಪ್ರಶ್ನಿಸಿದಳು.

ಆಗ ಗೋಪಿ ಒಳಗಿಂದ " ಎರಡು ನಿನಗೆ ಸುಮಿತ್ರಾ. ಎರಡು ಪದ್ಮಗೆ" ಎಂದು ಹೇಳಿದ.

ಸುಮಿತ್ರೆ ಆಶ್ಚರ್ಯದಿಂದ " ನನಗೆ ! ನನಗೆ ಸೀರೆ ಬೇಕೆಂದು ಯಾರು ಹೇಳಿದರು. ಪದ್ಮಾ, ಹೇಳಿದಿಯೇನೇ? " ಎಂದು ತಂಗಿಯೊಡನೆ ಕೇಳಿದಳು.

ಅಕ್ಕನ ಸಿಟ್ಟಿನ ದನಿಯಿಂದ ಬೆದರಿದ ಪದ್ಮಾವತಿಗೆ ಉತ್ತರ ಕೊಡು ವುದು ಪ್ರಯಾಸದ ಮಾತಾಯಿತು.

" ನಿನಗೆಂದೇನು ಹೇಳಲಿಲ್ಲ ಬಿಡಕ್ಕ. ನನಗೆ ನಿತ್ಯ ಉಡಲಿಕ್ಕೆ ಎರಡು ಸೀರೆಗಳ ಅಗತ್ಯವಿತ್ತು. ಇನ್ನೆರಡು ತಂದರೆ ನಿನಗೂ ಆಗುತ್ತದೆಂದು ಹೇಳಿದೆ. ಅಷ್ಟೆ. ಉಟ್ಟುಕೊ " ಎಂದಳು.

ಸುಮಿತ್ರೆ ಮರುಮಾತನಾಡಲಿಲ್ಲ. ಸೀದಾ ತನ್ನ ಕೋಣೆಗೆ ತೆರಳಿ ತನ್ನ ಪೆಟ್ಟಿಗೆಯ ಬಾಗಿಲು ತೆರೆದು ಮೂರ್ತಿ ಬರುವಾಗ ಕೊಟ್ಟಿದ್ದ ನೂರು ರೂಪಾ ಯಿಯ ನೋಟನ್ನು ಹೊರತೆಗೆದು ತಂದು ಗೋಪಿಗೆ ಕೊಡಹೋದಳು.

"ತೆಗೊಳ್ಳಿ ಭಾವಾ. ಎರಡು ಸೀರೆಗೆ ಎಷ್ಟಾಗುತ್ತದೋ ಅಷ್ಟು ತೆಗೆದುಕೊಳ್ಳಿ. ಬಾಕಿಯಿದ್ದದ್ದು ಈಗ ನಿಮ್ಮ ಹತ್ತಿರವೇ ಇರಲಿ." ಎಂದಳು.

ಗೋಪಿ ನೋಟನ್ನು ತೆಗೆದುಕೊಳ್ಳಲಿಲ್ಲ. ಅವನಿಗೆ ಏನು ಮಾಡಬೇಕೆಂದೂ ಹೊಳೆಯಲಿಲ್ಲ. ಪದ್ಮಾವತಿ ಮಾತ್ರ ಅಳತೊಡಗಿದಳು.

"ಏನಕ್ಕಾ ಇದು. ನೀನು ಬರೀ ಹೊರಗಿನವರ ಹಾಗೆ ಮಾಡುತ್ತಿಯಲ್ಲ. ನಾನು ನಿನಗೆ ಏನೂ ಆಗಬೇಡವೆ?" ಎಂದು ಅಳುತ್ತಲೇ ಹಾಸಿಗೆಯ ಮೇಲೆ ಬಿದ್ದ ಪದ್ಮಾವತಿಯನ್ನು ಸಮಾಧಾನಪಡಿಸದೆ ಸುಮಿತ್ರೆಗೆ ಬೇರೆ ದಾರಿಯಿದ್ದಿಲ್ಲ. ಆಕೆ ಓಡಿ ಬಂದು ತಂಗಿಯ ಕಣ್ಣೀರು ಒರಸುತ್ತ "ಹಾಗಲ್ಲ ಪದ್ಮಾ. ನಾನು ಹುಟ್ಟುವಾಗಲೇ ಕೆಟ್ಟ ಅದೃಷ್ಟ ಪಡೆದುಕೊಂಡು ಬಂದಿದ್ದೇನೆ. ಎಷ್ಟೆಲ್ಲ ಜನರಿಗೆ ಕಷ್ಟ ಕೊಟ್ಟೆ. ಈಗ ಭಾವನಿಗೂ ನಾನು ಭಾರವಾಗಬಾರದು ಎಂದು ತಿಳಿದು ಹಾಗೆ ಮಾಡಿದೆ. ನೀನೇನೂ ಬೇರೆ ತಿಳಿದುಕೊಳ್ಳಬೇಡಮ್ಮ....ಅಳಬೇಡ....ಪದ್ಮಾ....ಪದ್ಮಾ...." ಎಂದು ತಂಗಿಯನ್ನು ಸಂತೈಸಿದಳು.

"ನೀನು ಯಾರಿಗೂ ಭಾರವೆಂದು ತಿಳಿದುಕೊಳ್ಳುವುದು ತಪ್ಪು ಸುಮಿತ್ರಾ," ಎಂದಿಷ್ಟೇ ಹೇಳಿದ ಗೋಪಿ

ಆಗ ಸುಮಿತ್ರೆಯ ಬಾಯಿಂದ ಅವಳ ಬಯಕೆ ಪ್ರಕಟವಾಯಿತು.

"ನೀವು ವಿಶ್ವಾಸದಿಂದ ಹಾಗೆ ಹೇಳಿದಿರಿ ಭಾವಾ. ಆದರೆ ನನ್ನ ಮನಸ್ಸು ಯಾವಾಗಲೂ ಅಳುತ್ತಲೇ ಇರುತ್ತದೆ. ನನ್ನಿಂದ ಇನ್ನೆಷ್ಟು ಜನರಿಗೆ ಇನ್ನೆಷ್ಟು ದಿನ ತೊಂದರೆಯೋ ಎಂದು ಯೋಚಿಸಿಕೊಂಡೇ ಇದ್ದೇನೆ. ದಯಮಾಡಿ ನನಗೊಂದು ಕೆಲಸ ಎಲ್ಲಿಯಾದರೂ ತೆಗೆಸಿಕೊಡಿ. ಸ್ವತಂತ್ರ ಜೀವನದ ಆಸೆಯಿಂದ ಇಲ್ಲಿಗೆ ಬಂದೆ. ಮೆಟ್ರಿಕ್ ಫೇಲಾದರೂ ಇಲ್ಲಿ ಕೆಲಸ ಸಿಗಬಹುದೆಂದು ನನ್ನ ಗೆಳತಿಯರು ಕೆಲವರು ಹೇಳಿದ್ದಾರೆ. ದಯಮಾಡಿ ಅಷ್ಟು ಸಾಧ್ಯವೇ ನೋಡಿ...." ಎಂದಳು.

"ಕೆಲಸ ನಿನಗೆ ಸಿಕ್ಕುವುದು ಕಷ್ಟವಲ್ಲ ಸುಮಿತ್ರಾ. ಆದರೆ ನಾವೆಲ್ಲ ಇದ್ದೂ ನೀನು ಕೆಲಸ ಮಾಡಬೇಕೇ?" ಎಂದು ಗೋಪಿ ಕೇಳಿದ.

"ಆದರೆ ಹಾಗೆಯೋ ಇರಲಿಕ್ಕೆ ಸಾಧ್ಯವೇ ಭಾವಯ್ಯ. ಹೇಗಾದರೂ ಮಾಡಿ ಒಂದು ಕೆಲಸ ತೆಗೆಸಿಕೊಡಿ." ಎಂದಳು.

ಗೋಪಿ ಮಾತನಾಡಲಿಲ್ಲ. ಪದ್ಮಾವತಿಯ ತಲೆಯನ್ನು ನೇವರಿಸುತ್ತ ಸುಮಿತ್ರೆ ಸಮಾಧಾನ ಮಾಡುತ್ತಿದ್ದಳು.

ಕೆಲಸದ ಆಳು ಬಂದು ಬಾಗಿಲು ಸದ್ದು ಮಾಡುವವರೆಗೆ ಮೂವರೂ ಹಾಗೆಯೇ ಮೌನವಾಗಿದ್ದರು. ಗೋಪಿ ಕೋಣೆಯಲ್ಲೇ ಅತ್ತಿಂದಿತ್ತ ತಿರುಗುತ್ತಿದ್ದ.

೧೫

ಬಾಗಿಲ ಸದ್ದು ಕೇಳಿ ಹೊರಗೆ ಬರಲು ಹೊರಟುದು ಮೊದಲು ಗೋಪಿ. ಆದರೆ ಸುಮಿತ್ರೆ ತಾನೇ ಅವಸರದಿಂದೆದ್ದು ತಂಗಿಯೊಡನೆ “ ಭಾವನಿಗೆ ಕಾಫಿ ಕೊಡಬಾರದೆ ಪದ್ಮಾ.... ” ಎಂದವಳೇ ಬಾಗಿಲು ತೆಗೆಯಲೆಂದು ಹೋದಳು. ಅಳುತ್ತಿದ್ದ ಪದ್ಮಾವತಿಗೂ ಅಲ್ಲಿಂದ ಎದ್ದು ಹೋಗಿಪ್ಪರೆ ಸಾಕಿತ್ತು. “ ಬನ್ನಿ ” ಎಂದು ಗಂಡನೊಡನೆ ಹೇಳಿ ತಾನು ಅಡುಗೆಯ ಮನೆಯ ಕಡೆ ನಡೆದಳು.

ಗೋಪಿ ಮಾತನಾಡಲಿಲ್ಲ.

ಸುಮಿತ್ರೆ ಪದ್ಮಾವತಿಯರು ಆ ಕೋಣೆಯಿಂದ ಹೊರಬಿದ್ದ ಮೇಲೆ ಆತ ಒಬ್ಬನೇ ಕೋಣೆಯಲ್ಲಿ ಶತಪಥ ತಿರುಗಲಾರಂಭಿಸಿದ. ಅವನ ತಲೆ ತುಂಬ ಯೋಚನೆ. ಎದೆ ತುಂಬ ಕೆದರಿದ ಸ್ವಾಭಿಮಾನದ ಬೇಗುದಿ.

ಗೋಪಿಗೆ ಸಿಟ್ಟು ಬಂದಿತ್ತು.

ತನಗರಿಯದೇನೇ ಆತನ ಮನಸ್ಸು ಅಂತರ್ಮುಖಿಯಾಗತೊಡಗಿತು. ಕಳೆದುಹೋದ ದಿನಗಳನ್ನು ಮತ್ತೆ ಮತ್ತೆ ಸ್ಮರಿಸಿಕೊಳ್ಳತೊಡಗಿತು. ಸುಮಿತ್ರೆಯನ್ನು ನೋಡಲೆಂದು ಹೋಗಿ ಪದ್ಮಾವತಿಯನ್ನು ಮದುವೆಯಾಗಿ ಬಂದ ಸಂದರ್ಭವನ್ನು ಮತ್ತೆ ಮತ್ತೆ ನೆನಪು ಮಾಡಿಕೊಂಡಿತು.

“ ನನಗೇಕೋ ಹೆದರಿಕೆಯಾಗುತ್ತದೆ ಮೂರ್ತಿ. ನಾನು ಸುಮಿತ್ರೆಯನ್ನು ಮದುವೆಯಾಗಲಾರೆ. ಪದ್ಮಾವತಿಯನ್ನಾದರೆ, ಅಣ್ಣನ ಬಳಿ ಕೇಳಿ ನೋಡುತ್ತೇನೆ. ”

ಆ ಹೆದರಿಕೆಯ ಹುಟ್ಟು ಎಲ್ಲಿಂದ ಎಂದು ಗೋಪಿ ತಿಳಿದಿರಲಿಲ್ಲ. ತಿಳಿಯಲು ಪ್ರಯತ್ನಿಸಿದರೂ ಸಾಧ್ಯವಾಗುತ್ತಿರಲಿಲ್ಲ. ಸುಮಿತ್ರೆಯನ್ನು ನೋಡಿದಷ್ಟು ಬಾರಿ, ಆಕೆಯೊಡನೆ ಮಾತನಾಡಿದಷ್ಟು ಬಾರಿ, ಆಕೆ ನಕ್ಕಷ್ಟು ಬಾರಿ ಅವನಿಗೆ ಅನುಭವಕ್ಕೆ ಸಿಗುತ್ತಿದ್ದುದು ಆಕೆಯ ಕಣ್ಣುಗಳಲ್ಲಿನ ದೃಢತೆ, ಆ ದೃಢತೆಯ ಆಹ್ವಾನ, ಆ ಆಹ್ವಾನದ ಪ್ರತಿಭಟನೆ........

ಗೋಪಿಯ ಪೌರುಷ ಅವಮಾನಿಸಲ್ಪಟ್ಟಿತ್ತು.

ಯಾವ ರೀತಿಯಲ್ಲಿ ನಾನು ಕೆಲಸ ಮಾಡಿದರೆ, ಯಾವ ಹಾದಿ ಹಿಡಿದು ನಡೆದರೆ, ಸುಮಿತ್ರೆ ನನ್ನನ್ನು ಗೌರವಿಸುವಂತೆ ಮಾಡಿಯೇನು ಎಂದು ಗೋಪಿ ತನ್ನನ್ನೆ ತಾನು ಪ್ರಶ್ನಿಸಿಕೊಳ್ಳುತ್ತಿದ್ದ.

ಸುಮಿತ್ರೆಯನ್ನು ತನ್ನ ಹಂಗಿನ ಅಂಕೆಯೊಳಗೆ ಸಿಲುಕಿಸಿಕೊಂಡೇ ಸಿದ್ಧ; ಅವಳ ಮಿತಿಮೀರಿದ ಸ್ವಾಭಿಮಾನವನ್ನು ಕೆಣಕಿಯೇ ಸಿದ್ಧ ಎಂಬ ತೀರ್ಮಾನಕ್ಕೆ ಗೋಪಿ ಬರುತ್ತಿದ್ದ.

ಈ ತೀರ್ಮಾನದಿಂದಾಗಿ, " ಸುಮಿತ್ರೆ ಕೆಲಸಕ್ಕಾಗಿ, ಸ್ವಾತಂತ್ರ್ಯಕ್ಕಾಗಿ ಅಪೇಕ್ಷಿಸುತ್ತಿದ್ದಾಳಲ್ಲಾ. ಆ ಸ್ವಾತಂತ್ರ್ಯದಲ್ಲಿಯೂ ಆಕೆ ಪರಾಧೀನೆಯೆಂಬುದನ್ನು ತೋರಿಸಿ ಕೊಡುತ್ತೇನೆ. ಅವಳಿಗೆ ಕೆಲಸ ಕೊಡಿಸಿಯೂ ಗೋಪಿಯ ಕೃತಜ್ಞತೆಯ ಸೆರೆಯಲ್ಲಿ ಸಿಲುಕಿಸುತ್ತೇನೆ. " ಎಂಬ ಆಲೋಚನೆಗೆ ಗೋಪಿ ಎಡೆಗೊಟ್ಟಿದ್ದ.

ಪದ್ಮಾವತಿ ಕೂಗಿದಾಗಲೇ ಅವನಿಗೆ ಎಚ್ಚರ. " ಕಾಫಿ ತಣ್ಣಗಾಗಿ ಹೋಗಿದೆ. ಬರಬಾರದೆ ?"

ಗೋಪಿ ಅಡುಗೆಯ ಮನೆಯ ಕಡೆ ನಡೆದಾಗ ಪದ್ಮಾವತಿ ಸುಮಿತ್ರೆಯನ್ನು ಕರೆಯುತ್ತಿದ್ದಳು. " ಕಾಫಿ ಬೇಕೇನೇ ಅಕ್ಕಾ....?" ಎಂದು.

ಆದರೆ ಸುಮಿತ್ರೆ ಮನೆಬಿಟ್ಟು ಎರಡು ಮೂರು ನಿಮಿಷಗಳಾದರೂ ಆಗಿರಬೇಕು ಆಗ.

ಬಾಗಿಲು ತೆರಯಲು ಬಂದ ಸುಮಿತ್ರೆಗೆ ಬಾಗಿಲು ತೆಗೆದಮೇಲೆ ಪುನಃ ಒಳಗೆ ಹೋಗುವ ಮನಸ್ಸಾಗಲಿಲ್ಲ. ಹೊರಗೆ ಮಾಳಿಗೆಯ ಮೆಟ್ಟಲಿಳಿಯುವಲ್ಲಿ ದಂಡೆಗೊರಗಿ ಬೀದಿಯ ಕಡೆ ನೋಡುತ್ತಿದ್ದಳು.

ಅವಳ ಮನಸ್ಸಿನಲ್ಲಿಯೂ ವಿಚಾರದ ವಿಪ್ಲವ ಆರಂಭವಾಗಿತ್ತು.

" ಭಾವನನ್ನು ಅನ್ಯಾಯವಾಗಿ ನೋಯಿಸಿದೆ. ನೀನು ಅಷ್ಟು ಮುಂದುವರಿದು ಹೋಗಬಾರದಿತ್ತು." ಎಂದು ವಿಚಾರ ಹೇಳುತ್ತಿತ್ತು.

ಆದರೆ ಈ ತುಮುಲಕ್ಕೆ ಒತ್ತಾಯದ ತಡೆ ತರುವಂತೆ ಒಂದು ಮಾತು ಕೇಳಿ ಬಂತು, ಅಪರಿಚಿತ ಕಂಠವೊಂದರಿಂದ.

" ಗಾರ್ಡನಿಗೆ ಬರುತ್ತೀರೇನು ?"

ಸುಮಿತ್ರೆ ಸರಕ್ಕನೆ ತಿರುಗಿನೋಡಿದಳು. ಇದಿರು ಮನೆಯ ಮಹಾರಾಷ್ಟ್ರೀಯ ದಂಪತಿಗಳು ಮೆಟ್ಟಲಿಳಿಯಲು ಸಿದ್ಧರಾಗಿ ನಿಂತಿದ್ದರು. ಮಹಾರಾಷ್ಟ್ರೀಯ ಮಹಿಳೆ ಕನ್ನಡದಲ್ಲಿ ಸುಮಿತ್ರೆಯನ್ನು 'ಜೊತೆಗೆ ಬರುವಿಯಾ ?' ಎಂದು ಕೇಳಿದ್ದಳು.

ಸುಮಿತ್ರೆಗೆ ನಗುತ್ತಾ ನಿಂತಿದ್ದ ಈ ಮರಾಟೀ ಮಹಿಳೆಯನ್ನು ಕಂಡು ಆಶ್ಚರ್ಯದ ಮೇಲೆ ಆಶ್ಚರ್ಯ.

"ಬನ್ನಿ. ಒಂದರ್ಧ ತಾಸು ಗಾಳಿತಿಂದು ಮರಳಬಹುದು. ಮನೆಯಲ್ಲೇ ಕುಳಿತು ಬೇಸರವಾಗುವುದಿಲ್ಲವೆ ?"

ಈಗ ಸುಮಿತ್ರೆಯ ಮುಖದಲ್ಲಿ ನಗು ನಿಂತಿತು.

ಈ ಅಪರಿಚಿತ ವ್ಯಕ್ತಿಯ ಸ್ನೇಹದ ಕರೆ ಆಜ್ಞೆಯಂತೆಯೇ ಇದ್ದುದರಿಂದ ಸುಮಿತ್ರೆ ಮಾತನಾಡದೆ ಬಾಗಿಲ ಬಳಿಯೇ ಇದ್ದ ಚಪ್ಪಲಿಗಳನ್ನು ಸಿಕ್ಕಿಸಿಕೊಂಡು, ಬಾಗಿಲೆಳೆದುಕೊಂಡು ಬಂದಳು.

ಒಂದು ಕ್ಷಣ ಅವಳಿಗೆ ತಾನು ಹೊರಗೆ ಹೋಗಲಿರುವ ವಿಚಾರವನ್ನು ಪದ್ಮಾವತಿಗೆ ತಿಳಿಸಿಲ್ಲ, ಸಂಜೆಯ ವಿಹಾರಕ್ಕೆ ಸಿಂಗರಿಸಿಕೊಂಡು ಹೊರಟಿದ್ದ ದಂಪತಿಗಳ ಏಕಾಂತತೆಗೆ ತನ್ನಿಂದ ಭಂಗ ಒದಬಹುದು, ಎಂಬೆಲ್ಲ ವಿಚಾರಗಳು ಮರೆತು ಹೋದವು.

ಮೆಟ್ಟಲಿಳಿಯುತ್ತಿದ್ದಂತೆ ಹೊಸ ಗೆಳತಿಯ ಗಂಡ ಇಗ್ಲೀಷಿನಲ್ಲಿ ಮಾತನಾಡಿದ.

"ಇವಳ ಕನ್ನಡ ಕೇಳಿ ನಿಮಗೆ ಆಶ್ಚರ್ಯವಾಗಿರಬಹುದು. ಇವಳು ಕಾರವಾರದವಳು. ನನ್ನ ಕೈ ಹಿಡಿಯುವ ಮುಂಚೆ ವಾಗಳೆ ಆಗಿದ್ದಳು. ಈಗ ಮಾತ್ರ ಮಿಸೆಸ್ ನಾಡಕರ್ಣಿ. ಹೀಗಾಗಿ ಹೈಸ್ಕೂಲಿನಲ್ಲಿ ಕಲಿತ ಕನ್ನಡದ ಉಪಯೋಗ ಈಗ ಮಾಡಿಕೊಳ್ಳುತ್ತಿದ್ದಾಳೆ."

ಸುಮಿತ್ರೆಗೆ ನಗು ಬಂತು. ಅವಳ ಗೆಳತಿಯೂ ನಗುತ್ತಿದ್ದಳು.

"ಇಲ್ಲಿ ಕನ್ನಡ ಬರುವ ಯಾರೊಬ್ಬರನ್ನೂ ಹುಡುಕಿ ತೆಗೆಯಲು ಕೂಡ ಸಾಧ್ಯವಿಲ್ಲವೆಂದು ತಿಳಿದಿದ್ದೆ." ಎಂದು ಸುಮಿತ್ರೆ ಇಂಗ್ಲೀಷಿನಲ್ಲೆ ಉತ್ತರ ಕೊಟ್ಟಾಗ ಆ ದಂಪತಿಗಳಿಗೆ ಆಶ್ಚರ್ಯವಾಗಿರಬೇಕು.

"ಎಷ್ಟು ಚೆನ್ನಾಗಿ ಇಂಗ್ಲೀಷು ಮಾತನಾಡುತ್ತೀರಿ ?" ಎಂದು ಗೆಳತಿಯ ಗಂಡ ಹೇಳಿದರು. ಇದಕ್ಕೂ ಸುಮಿತ್ರೆಯ ಉತ್ತರ ತಕ್ಷಣ ಬಂತು.

"ನಮ್ಮತ್ತ ಕಡೆ ಇಂಗ್ಲೀಷಿಗೆ ಕೊಡುವ ಪ್ರಾಧಾನ್ಯ ಊಟಕ್ಕೂ ಕೊಡು ವುದಿಲ್ಲ. ಅದೇ ದುರದೃಷ್ಟದಿಂದ ಈ ಭಾಷೆಯ ನಂಟುತನವನ್ನು ಇಷ್ಟು ಹಚ್ಚಿ ಕೊಂಡಿದ್ದೇವೆ."

ಮೂವರೂ ನಕ್ಕರು.

ಮತ್ತೆ ಗಾರ್ಡನ್ ತಲಪುವವರೆಗೂ ಮಾತೇ ಮಾತು. ಕುಸುಮಾ ವತಿ ನಾಡಕರ್ಣಿಯ ಹೊಸ ಪರಿಚಯದಿಂದ ಸುಮಿತ್ರೆಯ ಮನಸ್ಸು ತುಂಬ ಹಗುರಾಯಿತು. ಆ ದಂಪತಿಗಳ ಸ್ವಾತಂತ್ರ್ಯ, ಅವರ ಹೃದಯ ವೈಶಾಲ್ಯ, ಸ್ನೇಹಾತುರತೆ ಇವುಗಳಿಂದಾಗಿ ಸುಮಿತ್ರೆಯ ತಪ್ತ ಮನಸ್ಸಿಗೆ ಅಂದು ತುಂಬ ಸಮಾಧಾನ.

ಗೆಳತಿ ಕುಸುಮಾವತಿ ಸುಮಿತ್ರೆಯೊಡನೆ ಹತ್ತಾರು ಪ್ರಶ್ನೆ ಕೇಳಿದಳು. ಇವರಿಬ್ಬರನ್ನೂ 'ಕಿಂಗ್ಸ್ ಸರ್ಕಲ್' ತೋಟದಲ್ಲಿ ಬಿಟ್ಟು ಕುಸುಮಾವತಿಯ ಗಂಡ "ನಾನು ಕೊದದಾದ್ ಸರ್ಕಲಿನವರೆಗೆ 'ವಾಕಿಂಗ್' ಹೋಗಿ ಬರು ತ್ತೇನೆ. ಇಲ್ಲವಾದರೆ ಬೊಜ್ಜು ಬೆಳೆಯಲು ಆರಂಭವಾಗುತ್ತದೆ. ಅಷ್ಟರೊಳಗೆ ನಿಮ್ಮ ಮಾತುಕತೆಯೆಲ್ಲ ಮುಗಿಯಬೇಕು" ಎಂದು ಹೇಳಿ ಹೋಗಿದ್ದರು. ಆದರೆ ಅವರು ಮರಳಿ ಬಂದಾಗಲೂ ಸುಮಿತ್ರೆ ಕುಸುಮಾವತಿಯರ ಮಾತು ಕತೆ ಮುಗಿದಿರಲಿಲ್ಲ. ಸುಮಿತ್ರೆಗೆ ಮೊದಮೊದಲು ಹೊಸ ಗೆಳತಿಯೊಡನೆ ತನ್ನ ಕುರಿತು ಹೇಳುವಾಗಲೆಲ್ಲ ತುಂಬ ಸಂಕೋಚವಾಗುತ್ತಿತ್ತು. ತನಗೆ ಮದುವೆಯಾಗದೆ ಪದ್ಮಾವತಿಗೆ ಮದುವೆಯಾದ ಸಂದರ್ಭ, ತಾನು ಮೆಟ್ರಿಕ್ ನಲ್ಲಿ ಫೇಲಾದುದು, ಮುಂಬಯಿಯಲ್ಲಿ ಕೆಲಸ ದೊರಕಿಸಿಕೊಳ್ಳುವ ಆಲೋ ಚನೆ, ಇವೆಲ್ಲ ವಿವರಗಳನ್ನು ಹೇಳುವಾಗ ತುಂಬ ಸಂಕೋಚವಾದರೂ ಕುಸುಮಾ ಎಲ್ಲ ಸಂಗತಿಗಳನ್ನು ನಗುನಗುತ್ತಲೇ ಕೇಳಿ ತಿಳಿದುಕೊಂಡಳು. ಮನಸ್ಸಿಗೆ ನೋವಾಗದಂತೆ ಎಲ್ಲ ನೋವಿನ ಮಾತುಗಳನ್ನು ತನ್ನಿಂದ ಸೆಳೆದ ಕುಸುಮೆಯ ಜಾಣತನವನ್ನು ಕಂಡು ಸುಮಿತ್ರೆಗಾದ ಆಶ್ಚರ್ಯ ಅಷ್ಟಿಷ್ಟಲ್ಲ.

ಮೂವರೂ ಮನೆಗೆ ಮರಳುವಾಗ ಚೆನ್ನಾಗಿ ಕತ್ತಲಾಗಿತ್ತು. ಜೂನ್ ತಿಂಗಳ ಮಧ್ಯಭಾಗ. ವಿಪರೀತ ಸೆಖೆ. ಮೊದಲ ಮಳೆಬೀಳುವ ಸೂಚ ನೆಯೋ ಎಂಬಂತೆ ಆಗಸ ತುಂಬ ಮುಚ್ಚಿ ಕತ್ತಲಿಗೆ ಇನ್ನಷ್ಟು ಕಳೆ ಬಂದಿತ್ತು.

ಮಾಳಿಗೆಯೇರಿ ಗೆಳತಿಯನ್ನು ಬೀಳ್ಕೊಟ್ಟು ಮನೆಯ ಬಾಗಿಲು ದೂಡಿ ಒಳಗೆ ಹೋದಾಗಲೇ ಸುಮಿತ್ರೆಗೆ ತಾನು ಮನೆಬಿಡುವ ಮುನ್ನ ಜರಗಿದ

ಘಟನೆಗಳ ನೆನಪು ಬಂದುದು. ಸೀದಾ ಅಡುಗೆಯ ಮನೆಗೇ ಹೋದಳು. ಪದ್ಮಾ ಚಪಾತಿಯ ತಯಾರಿಯಲ್ಲಿದ್ದಳು. ಗೋಪಿ ಅಲ್ಲಿರಲಿಲ್ಲ. ದೀಪವಿದ್ದು ದರಿಂದ ಒಳಗಿನ ಕೋಣೆಯಲ್ಲಿರುವನೆಂದು ತಿಳಿಯುವಂತಿತ್ತು.

ಸುಮಿತ್ರೆ ಬಂದಾಗ ಪದ್ಮಾ ತಲೆಯೆತ್ತಿ ನೋಡಿದಳಷ್ಟೆ. ಮಾತನಾಡ ಲಿಲ್ಲ. "ಎಲ್ಲಿಗೆ ಹೋಗಿದ್ದೆ ?" ಎಂದು ಪದ್ಮಾ ಕೇಳುತ್ತಾಳೆ, ಅದಕ್ಕೆ ತಾನು ಉತ್ತರ ಕೊಡಬೇಕಾಗುವುದು ಎಂದು ಉತ್ತರವನ್ನು ಸಿದ್ಧಪಡಿಸಿಕೊಂಡು ಬಂದಿದ್ದ ಸುಮಿತ್ರೆಗೆ ಪದ್ಮಾವತಿಯ ಉದಾಸೀನ ಕಂಡು ಮೊದಲು ನಿರಾಸೆ ಯಾಯಿತು. ಆಮೇಲೆ ತುಸು ಭಯವಾಯಿತು.

"ಏಳು ಬಿಡು. ನಾನು ಮಾಡುತ್ತೇನೆ ಚಪಾತಿ.'' ಎಂದವಳೇ ತಂಗಿಯ ಕೈಯಿಂದ ಲಟ್ಟಣಿಗೆಯನ್ನು ಕಸಿಯ ಹೋದಳು.

"ಬೇಡ." ಎಂದು ಕೈಯನ್ನು ಹಿಂದೆ ಸೆಳೆದುಕೊಂಡ ಪದ್ಮಾವತಿಯ ಸ್ವರ ಗುಡುಗಿನಂತಿತ್ತು.

ಸುಮಿತ್ರೆ ತಂಗಿಯಿಂದ ಈ ರೀತಿಯ ಮಾತು ಕೇಳಿದುದು ಆಕೆಯ ಜೀವಮಾನದಲ್ಲೇ ಮೊದಲಬಾರಿಗೆ. ಆಕೆ ಕ್ಷಣಕಾಲ ಆಶ್ಚರ್ಯದಿಂದ ತಂಗಿಯ ಕಡೆ ನೋಡಿದಳು. ಆದರೆ ಸಿಟ್ಟು ಬರಲಿಲ್ಲ. ತನ್ನದೇ ಏನೋ ತಪ್ಪಿದೆ ಎನ್ನುವ ಭಾವ ತಂದುಕೊಂಡು,

"ಬಿಡು ಪದ್ಮಾ. ನಾನು ಮಾಡುತ್ತೇನೆ. ನೀನು ಸ್ವಲ್ಪ ಹೋಗಿ ಮಲ ಗಿಕೋ'' ಎಂದು ಮೃದುವಾಗಿಯೇ ಹೇಳಿದಳು.

ಆದರೆ ಪದ್ಮಾವತಿ ಈ ಸಲ ಉತ್ತರಕೊಡಲಿಲ್ಲ. ತನ್ನ ಕೆಲಸವನ್ನು ನಿಲ್ಲಿ ಸಲೂ ಇಲ್ಲ. ತಗ್ಗಿಸಿದ ಮುಖ ಚಪಾತಿಯ ಹಪ್ಪಳದ ಕಡೆಗೇ ನೆಟ್ಟ ನೋಟ ದಿಂದ ನೋಡುತ್ತಿತ್ತು. ಕೈ ತನ್ನ ಕೆಲಸ ಮಾಡುತ್ತಿತ್ತು.

ಸುಮಿತ್ರೆಗೆ ಸಹನಾತೀತ ವೇದನೆ.

ಮುಂದೆ ಬಂದು ಈ ಸಲ ಸ್ವಲ್ಪ ಶಕ್ತಿಯನ್ನುಪಯೋಗಿಸಿಯೇ ತಂಗಿಯ ಕೈಯಿಂದ ಚಪಾತಿಯ ಮಣೆ ಲಟ್ಟಣಿಗೆಗಳನ್ನು ಸೆಳೆದುಕೊಂಡು 'ಸ್ಟವ್'ನ ಬಳಿ ಹೋಗಿ ಕುಳಿತಳು.

ಪದ್ಮಾವತಿ ಮಾತನಾಡದೆ ಅಡುಗೆಯ ಮನೆಯಿಂದೆದ್ದು ಹೋದಳು.

ಸುಮಿತ್ರೆಯ ಮನಸ್ಸಿನ ವೇದನೆಯನ್ನು ಹೇಳಿ ತೀರದು. ಆದರೂ ಯಾವುದೋ ಒಂದು ವಿಚಿತ್ರ ರೀತಿಯ ಧೈರ್ಯ ಆಕೆಗೆ ಸಮಾಧಾನ ಕೊಡುತ್ತಿತ್ತು. ಇಷ್ಟು ದಿನ ಪ್ರತಿಯೊಂದು ಸ್ಪಂದನಕ್ಕೂ ಅಳುಕುತ್ತಿದ್ದ ಎದೆ ಇಂದೇಕೆ ಈ ಹುಚ್ಚು ಧೈರ್ಯವನ್ನು ತಂದುಕೊಂಡಿದೆಯೆಂಬುದು ಆಕೆಗೆ ಸಮಸ್ಯೆಯೆ. ಸಂಜೆ ಕುಸುಮಾವತಿಯ ಗೆಳೆತನವಾದುದು, ಆ ದಂಪತಿಗಳ ಪರಿಚಯವಾದುದು ಕುಸುಮೆಯ ಮಾತಿನ ರೀತಿ, ಸ್ನೇಹದ ಹಂಬಲ, ಉಜ್ವಲ ಆಶಾವಾದ ಇವುಗಳ ಸಾನ್ನಿಧ್ಯಸುಖದ ಯೋಚನೆಯಿಂದಾಗಿ ಈ ಧೈರ್ಯ ಬಂದಿದೆಯೋ ಎಂದು ತನ್ನನ್ನೆ ತಾನು ಕೇಳಿಕೊಂಡಳು. ಮನೆಗೆ ಬಂದವಳೇ ಪದ್ಮಾವತಿಗೆ ನಾಡಕರ್ಣಿ ದಂಪತಿಗಳ ಕುರಿತು ತುಂಬ ಹೇಳಬೇಕು, ಸಂಜೆ ನಡೆದ ನೋವಿನ ಪ್ರಕರಣ ಆದಷ್ಟು ಬೇಗ ಮರೆತುಹೋಗುವಂತೆ ಶಕ್ತಿಮೀರಿ ಪ್ರಯತ್ನಿಸಬೇಕು, ಎಂದು ಬಂದಿದ್ದ ಸುಮಿತ್ರೆಗೆ ತಂಗಿಯ ಸಿಟ್ಟಿನಿಂದಾದ ನಿರಾಶೆ ಅಷ್ಟಿಷ್ಟಲ್ಲ.

ಸುಮಿತ್ರೆ ಕೆಲಸ ಮುಗಿಸಿ ಊಟಕ್ಕೆ ಕರೆಯಲೆಂದು ಗೋಪಿಯ ಕೋಣೆಗೆ ಹೋದಾಗ ಗೋಪಿ ಓದುತ್ತಿದ್ದ. ಪದ್ಮಾವತಿ ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದಳು. ತಂಗಿಯ ಮೈ ಕುಲುಕಿ ಎಬ್ಬಿಸಿ "ಊಟ ಮಾಡು ಪದ್ಮಾ." ಎಂದಾಗ ಪದ್ಮಾವತಿ ಮಾತನಾಡದೆ ಯಂತ್ರದಂತೆಯೇ ಅಡುಗೆಯ ಮನೆಯ ಕಡೆ ನಡೆದಳು. "ಬನ್ನಿ ಭಾವಾ" ಎಂದಾಗ ಗೋಪಿ ಮಾತ್ರ ನಗುತ್ತ ಬಂದ.

ಆದರೆ ಊಟ ಮಾತ್ರ ಮೌನವಾಗಿಯೇ ಸಾಗಿತು. ಪದ್ಮಾವತಿ ಅರ್ಧ ಊಟದಲ್ಲೆ ಎದ್ದು ತಿಂದುದನ್ನೆಲ್ಲ ಹೊರಗೆ ಚೆಲ್ಲಿ ಹೋಗಿ ಪುನಃ ಮಲಗಿಕೊಂಡಳು. ಆಗ ಮಾತ್ರ ಸುಮಿತ್ರೆ ಗೋಪಿಯೊಡನೆ "ಒಮ್ಮೆ ಯಾರಿಗಾದರೂ ಡಾಕ್ಟರರಿಗೆ ತೋರಿಸಿ ಭಾವಾ ಪದ್ಮಾಳನ್ನು" ಎಂದಳು. ಗೋಪಿ ಸುಮಿತ್ರೆಯ ಕಡೆ ನೋಡಿ ನಕ್ಕ. "ನಾಳೆ ರಜೆಯಿದೆಯಲ್ಲ !" ಎಂದಿಷ್ಟೇ ಹೇಳಿದ.

ಗೋಪಿ ಊಟ ಮುಗಿಸಿ ಹೋದ ಮೇಲೆ ಪದ್ಮಾ ಎಲ್ಲಿಯಾದರೂ ಕರೆಯುವಳೋ ಎಂದು ಸುಮಿತ್ರೆ ತನಗೆ ಬಡಿಸಿಕೊಳ್ಳುತ್ತಿದ್ದಂತೆಯೇ ದಾರಿ ನೋಡಿದಳು. ಆದರೆ ಪದ್ಮಾವತಿ ನಿತ್ಯದಂತೆ ಬಂದು ಅಕ್ಕನಿಗೆ ಬಡಿಸಲಿಲ್ಲ. ತುಂಬ

ಆಯಾಸವಾಗಿರಬಹುದು, ಮಲಗಿಕೊಳ್ಳಲಿ ಎಂದು ಸುಮಿತ್ರೆ ಸಮಾಧಾನ ತಂದುಕೊಂಡರೂ, ಪದ್ಮಾವತಿ ಎದುರಿಗಿರದೆ ಆಕೆಗೆ ಅನ್ನ ಸೇರಲಿಲ್ಲ. ಬಟ್ಟಲಿ ನಲ್ಲಿದ್ದುದನ್ನೆಲ್ಲ ಬದಿಗೆ ಸರಿಸಿ ಕೈ ತೊಳೆದುಕೊಂಡು, ಅಡುಗೆಯ ಮನೆ ಚೊಕ್ಕಮಾಡಿ, ಪದ್ಮಾ ಗೋಪಿಯರಿಗೆ ರಾತ್ರಿಯ ಹಾಲನ್ನು ಹಿಡಿದುಕೊಂಡು ಗೋಪಿಯ ಕೋಣೆಗೆ ಹೋದಾಗಲೂ ಪದ್ಮಾ ಮಲಗಿಯೇ ಇದ್ದಳು. ಆದರೆ ನಿದ್ರಿಸಿರಲಿಲ್ಲ. ತೆರೆದ ಕಣ್ಣಿಂದ ತಿರುಗುತ್ತಿದ್ದ ' ಫ್ಯಾನ್ ' ನ ಕಡೆ ನೋಡು ತ್ತಿದ್ದವಳು ಅಕ್ಕ ಬಂದು ಹಾಲನ್ನು ಮೇಜಿನ ಮೇಲಿಟ್ಟಾಗಲೂ ದೃಷ್ಟಿಯನ್ನು ಬೇರೆ ಕಡೆ ಹೊರಳಿಸಲಿಲ್ಲ.

ಸುಮಿತ್ರೆ ಮಾತನಾಡದೆ ತನ್ನ ಕೋಣೆಗೆ ನಡೆದಳು.

ಹೊರಗಿನ ಬಾಗಿಲು ಹಾಕಿಬಂದು ತನ್ನ ಹಾಸಿಗೆಯ ಸುರುಳಿಯ ಬಳಿ, ಅದನ್ನು ಬಿಡಿಸದೆಯೇ ಅದಕ್ಕೊರಗಿ ಕುಳಿತಾಗ ಸುಮಿತ್ರೆಗೆ ಒಮ್ಮೆಂದೊಮ್ಮೆಗೆ ತನ್ನ ಏಕಾಂತತೆಯ ಅರಿವು ಬಂದಿತು.

ದೀಪವಾರಿಸಿ ಬಂದು ಕುಳಿತುಕೊಂಡ ಆಕೆಯ ಯೋಚನೆಯ ಗತಿ ಆ ಸಂದರ್ಭದಲ್ಲಿ ತಾನು ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ತಂದೆಯ ಕಡೆ ಹರಿದಿತ್ತು. ತನ್ನ ತಂಗಿಗೆ ದುಃಖಶಮನಕ್ಕೆ ಗಂಡನಾದರೂ ಇದ್ದಾರೆ, ತನಗೆ ಮಾತ್ರ ಯಾರೂ ಇಲ್ಲ ಎಂದು ಯೋಚಿಸಿಕೊಂಡು ಸುಮಿತ್ರೆ ಅಳತೊಡಗಿ ದಳು. ಅಡುಗೆಯ ಮನೆಯಲ್ಲಿ ಆಕೆಯ ಹೃದಯದಲ್ಲಿ ತುಂಬಿದ್ದ ಆಶಾವಾದ ಈಗ ಕೋಣೆಯ ಕತ್ತಲಿನಲ್ಲಿ ಮರೆಗೆ ಸರಿದು ಹೋಯಿತು. ನೆನಪು ಇಂದಿ ನಿಂದ ಹಿಂದೆ ಹಿಂದೆ ಓಡಲಾರಂಭಿಸಿತು. ಮೂರ್ತಿ, ಮೀರೆ, ಸುರೇಶ, ಮೂರ್ತಿಯ ತಾಯಿ, ಶ್ರೀಕಂಠಶಾಸ್ತ್ರಿಗಳು ಇವರೆಲ್ಲ ದೃಷ್ಟಿಪಥದಲ್ಲಿ ಬಂದರು. ಸುಮಿತ್ರೆಯ ಧೈರ್ಯವೆಲ್ಲ ಉಡುಗಿಹೋಗಿ ಮನಸ್ಸಿನಲ್ಲಿ ದುಃಖ ತುಂಬಿ ಕೊಂಡಿತು.

ಆ ನೀರವ ರಾತ್ರಿಗೆ ಸುಮಿತ್ರೆಯ ಅಳು ಮಾತ್ರ ಸಾಕ್ಷಿಯಾಗಿ ನಿಂತು ಕೊಂಡಿತು.

ಗೋಪಿಯ ಕೋಣೆಯ ದೀಪವಾರಿದುದು ಸುಮಿತ್ರೆಗೆ ಗೊತ್ತು. ಸುತ್ತ ಮುತ್ತ ಮನೆಗಳಲ್ಲಿ ಸದ್ದು ಕಡಿಮೆಯಾಗಿ, ರಾತ್ರಿಯ ನೀರವತೆ, ಮುಂಬಯಿ ಯಂಥ ಮಹಾಶಹರಿಗೂ ಅಪೀಮಿನ ಅಮಲಿನಂಥ ಗುಂಗು ಹಿಡಿಸುತ್ತಿ

ದ್ದುದು ಅನುಭವಕ್ಕೆ ತಂದುಕೊಡುವಂತಿತ್ತು. ರೈಲು ಬಂಡಿಗಳ ಸದ್ದು ಕಡಮೆ ಯಾಗತೊಡಗಿತು: ಬಸ್ಸುಗಳ ಓಡಾಟ ನಿಂತಿತು.

ಆದರೆ ಸುಮಿತ್ರೆಗೆ ಮಾತ್ರ ನಿದ್ರೆ ಬರಲೇ ಇಲ್ಲ. ಆಕೆ ಅಳುತ್ತಲೇ ಇದ್ದಳು.

ತಂದೆಯ ಕುರಿತು ಚಿಂತಿಸಿ ಚಿಂತಿಸಿ, ಆ ವೇದನೆ ಅಸ್ಪಷ್ಟವಾದು ದೊಂದು ಹಾದಿಹಿಡಿದುಹೋಗಿ ತಾಯಿಯ ಸಾನ್ನಿಧ್ಯದ ಕನಸಿನ ನೆಲೆಯತ್ತ ಮನಸ್ಸನ್ನು ಕೊಂಡೊಯ್ದಾಗ ಸುಮಿತ್ರೆಗೆ ತುಸು ಸಮಾಧಾನ. 'ಕ್ಯಾನ್ಸರ್'ನ ವೇದನೆಯಿಂದ ಕಳೆಗುಂದಿ ಬಿಳಿಚಿಕೊಂಡಿದ್ದ ಒಂದು ಮುಖ ಸುಮಿತ್ರೆಗೆ ಸಮಾಧಾನ ಹೇಳುತ್ತಿತ್ತು.

"ಅಳಬಾರದು ಸುಮೀ. ನೀನು ಅತ್ತರೆ ನಿನ್ನ ಅಪ್ಪಯ್ಯನಿಗೆಷ್ಟು ದುಃಖ ಗೊತ್ತೇ?"

"ಇಲ್ಲಮ್ಮಾ. ಅಳುವುದಿಲ್ಲ. ಖಂಡಿತವಾಗಿಯೂ ಅಳುವುದಿಲ್ಲ. ನೀನು ಇಷ್ಟು ದಿನ ನನ್ನನ್ನು ಬಿಟ್ಟು ಹೋದಿಯೆಂದು ನಗುತ್ತೇನೆ."

"ಹಾಗಲ್ಲ ಸುಮೀ. ನನ್ನ ನಿನ್ನಂಥ ಅದೃಷ್ಟಹೀನರಿಗೆ ಧೈರ್ಯವೇ ಮುಖ್ಯ. ಧೈರ್ಯವೊಂದಿದ್ದರೆ ಜಗತ್ತನ್ನೇ ಜಯಿಸಬಹುದು."

"ಧೈರ್ಯವೇನು ಕೇಳಿದರೆ ಸಿಗುವ ಸೊತ್ತೇನು?"

"ಖಂಡಿತವಾಗಿಯೂ ಅಲ್ಲ. ಆದರೆ ಪ್ರಯತ್ನದಿಂದ ಸಿಗುವ ವಸ್ತು. ಕುಸುಮಾವತಿಯ ಧೈರ್ಯ ನೋಡು. ಅವಳು ನಿನ್ನ ಪರಿಚಯ ಮಾಡಿಸಿ ಕೊಂಡು, ನಿನ್ನಲ್ಲಿಯೂ ಭರವಸೆಯ ಭವಿಷ್ಯದ ಧೈರ್ಯ ತುಂಬಿದಳಲ್ಲ."

"ಹಾಗಾದರೆ ನಾನೇನು ಮಾಡಬೇಕೆನ್ನುತ್ತೀ?"

"ಮಾಡಬೇಕಾದುದನ್ನೆಲ್ಲ ಮಾಡಿಸುವ ದೇವರಿದ್ದಾನೆ ಸುಮೀ. ನೀನು ಅಳಬಾರದು. ಯಾವ ಕಷ್ಟಕ್ಕೂ, ಯಾವ ದುಃಖಕ್ಕೂ ಅಳಬಾರದು. ಹೆಣ್ಣೆದೆ ಯನ್ನು ಕಲ್ಲುಮಾಡಿಕೊಂಡು ಅದು ಗಂಡೆದೆಯಾಗಿರುವಂತೆ ಪ್ರಯತ್ನಿಸು. ಆಗ ನಿನಗೆ ಸಮಾಧಾನ ಸಿಗುತ್ತದೆ."

ಸುಮಿತ್ರೆಗೆ ತಾಯಿಯ ಮಾತುಗಳಿಂದ ತುಂಬ ಸಮಾಧಾನ. ಅಳು ತ್ತಿದ್ದ ತನ್ನನ್ನು ತೊಡೆಯ ಮೇಲೆ ಮಲಗಿಸಿ ಚಿಕ್ಕ ಮಗುವಿನಂತೆ ಸಾಂತ್ವನದ ಜೋಗುಳ ಹಾಡಿ ನಿದ್ದೆ ಬರುವಂತೆ ಮಾಡುತ್ತಿದ್ದಾಳೆ ಎಂದೆನಿಸಿತು.

ಆದರೂ ಒಂದು ಅತೃಪ್ತಿ ಇನ್ನೂ ಇದೆ. ತಾಯಿಯೊಡನೆ ಏನೋ ಕೇಳ ಬೇಕೆಂದು ಕಾತರಿಸುತ್ತಿದೆ. ಆದರೆ ಬಾಯಿಂದ ಮಾತು ಹೊರಡುವುದಿಲ್ಲ.

“ ನಾನು ಹೋಗಲೇ ? ” ಎಂದು ತಾಯಿ ಕೇಳಿದಂತೆ ಭಾಸವಾಯಿತು. ಸುಮಿತ್ರೆ ಒಮ್ಮೆಗೇ ಹೆದರಿಕೊಂಡಳು. ತಾಯಿ ತನ್ನನ್ನು ಬಿಟ್ಟು ಹೋಗುವ ಳೆಂದಲ್ಲ, ತಾನು ಕೇಳಬೇಕೆಂದಿದ್ದ ಪ್ರಶ್ನೆ ಕೇಳದೆಯೇ ಉಳಿಯುವುದೆಂಬ ಹೆದರಿಕೆಯಿಂದ. ತಾಯಿ ಪುನಃ ಹೇಳಿದಳು.

“ ನಿದ್ದೆ ಮಾಡು ಸುಮೀ. ನಾನು ಹೋಗುತ್ತೇನೆ. ”

ಸುಮಿತ್ರೆ ಕಿರಿಚಿಕೊಳ್ಳಬೇಕೆಂದು ಪ್ರಯತ್ನಿಸಿದಳು. ತಾಯಿ ತನ್ನನ್ನು ತೊಡೆಯಿಂದಿಳಿಸಿ ಬಾಗಿಲ ಕಡೆ ಹೋಗುತ್ತಿದ್ದಾಳೆ, ತನ್ನ ಪ್ರಶ್ನೆಯನ್ನು ಕೇಳ ಲಾಗುವುದಿಲ್ಲ ಎಂದು ಹೆದರಿಕೊಂಡಿರುವಾಗ ಫಕ್ಕನೆ ಆ ಪ್ರಶ್ನೆ ನೆನಪಿಗೆ ಬಂತು.

“ ಅಮ್ಮಾ.... ಅಮ್ಮಾ.... ನಾನು ಎಲ್ಲಿಯಾದರೂ ಕೆಲಸಕ್ಕೆ ಸೇರಿಕೊಂಡರೆ ನಿನಗೆ ಬೇಸರವೇನಮ್ಮಾ ? ” ಎಂದು ಸುಮಿತ್ರೆ ಕೂಗಿಕೊಂಡಳು.

ಆದರೆ ಈ ಪ್ರಶ್ನೆ ಅವಳ ತಾಯಿಗೆ ಕೇಳಿಸಲೇ ಇಲ್ಲ. ಅವಳು ಬಾಗಿಲು ತೆರೆದು ಹೊರಗೆ ಚಿಲುಕವೆಳೆದುಕೊಂಡು ಹೋದಳೆಂದು ಖಚಿತವಾಗಿ, ಸುಮಿತ್ರೆ ದನಿಯೆತ್ತಿ ಕೂಗಿದಳು.

ಆಗ ಬಾಗಿಲು ತೆರೆಯಿತು.

ಸುಮಿತ್ರೆಗೆ ಎಚ್ಚರವಾಯಿತು.

ಅವಳ ತುಟಿ ಅಲುಗಾಡುತ್ತಿತ್ತು. ಹಣೆಯೆಲ್ಲ ಬೆವರಿತ್ತು. ಬಾಗಿಲಲ್ಲಿ ಪದ್ಮಾವತಿ ನಿಂತಿದ್ದಳು.

“ ಏನಾಯಿತಕ್ಕ.... ? ” ಎಂದು ಹತ್ತಿರ ಬಂದ ಪದ್ಮಾವತಿಯನ್ನು ಕಂಡಾಗ ಸುಮಿತ್ರೆಗೆ ಏನು ಹೇಳುವುದೆಂದೂ ತೋಚಲಿಲ್ಲ. “ ಅಮ್ಮ.... ಅಮ್ಮ.... ಹೋಗಿಬಿಟ್ಟಳು.... ಬಂದಿದ್ದಳು, ಹೋಗಿಬಿಟ್ಟಳು” ಎಂದಿಷ್ಟೇ ಅಸ್ಪಷ್ಟ ವಾಗಿ ಹೇಳಿದಳು.

ಪದ್ಮಾವತಿಯ ಕಣ್ಣಲ್ಲಿ ನೀರು ತುಂಬಿತು.

“ ಹಾಸಿಗೆಯನ್ನೂ ಬಿಡಿಸಿಕೊಳ್ಳಲಿಲ್ಲವೇನೇ ? ಬರೀ ನೆಲದ ಮೇಲೆ ಮಲಗಿಕೊಂಡು ತಲೆತುಂಬ ಯೋಚನೆ ಹಚ್ಚಿಕೊಂಡರೆ ಕನಸಾಗದೆ

ಇರುತ್ತದೆಯೆ ? ” ಎಂದವಳೇ ಸುಮಿತ್ರೆಯ ಹಾಸಿಗೆಯನ್ನು ಬಿಡಿಸಿ ಅಕ್ಕ ನನ್ನು ಚಿಕ್ಕ ಮಗುವಿನಂತೆ ಹೊರಳಿಸಿ ಹಾಸಿಗೆಯ ಮೇಲೆ ಮಲಗಿಸಿದಳು. ತಾನೂ ಬಳಿಯಲ್ಲಿಯೇ ಮಲಗಿಕೊಂಡಳು.

ತಂಗಿಯನ್ನು ತಬ್ಬಿಕೊಂಡು ಸುಮಿತ್ರೆಗೆ ಚಿಕ್ಕಂದಿನಲ್ಲಿ ಹಾಗೆಯೇ ಮಲಗಿದ ಮಲಗಿದ್ದ ನೂರಾರು ದಿನಗಳು ನೆನಪಿಗೆ ಬಂದು ಮನಸ್ಸು ಆ ಸ್ಮೃತಿಸಂಚಯದ ನೆನವರಿಕೆಯ ಜೋಗುಳದಿಂದ ಹಕ್ಕಿಗಿಂತ ಹಗುರಾಯಿತು. ಎರಡು ನಿಮಿಷಗಳೊಳಗೆ ನಿದ್ದೆ ಬಂತು.

ನಸುಕು ಹರಿಯಲು ಇನ್ನೂ ಹೊತ್ತಿರುವಾಗ ಹಾಲಿನ ಭಯ್ಯಾ ಬಂದು ಬಾಗಿಲ ಸದ್ದುಮಾಡಿದ. ಎಷ್ಟು ಸದ್ದು ಮಾಡಿದರೂ ಅಕ್ಕ ತಂಗಿಯರಿಗೆ ಎಚ್ಚರವಾಗಲಿಲ್ಲ. ಗೋಪಿಯೇ ಬಾಗಿಲು ತೆರೆಯಲೆಂದು ಹೊರಗೆ ಬಂದಾಗ ಗಾಢ ನಿದ್ರೆಯಲ್ಲಿ ಒಬ್ಬರನ್ನೊಬ್ಬರು ತಬ್ಬಿಕೊಂಡು ಚಿಕ್ಕ ಮಕ್ಕಳಂತೆ ಮಲ ಗಿದ್ದ ಅಕ್ಕ ತಂಗಿಯರನ್ನು ನೋಡಿ ಒಂದು ಕ್ಷಣ ಅಲ್ಲೇ ನಿಂತ.

ಅವನ ಕಣ್ಣು ತುಂಬಿ ಬಂತು. ಬೇಗ ಮುಂದುವರಿದು ಹೋಗಿ ಹಾಲು ಪಡೆದುಕೊಂಡು ಬಂದು ಮಲಗಿದ.

ಗೋಪಿಯ ನಿರ್ಧಾರ ಕಾರ್ಯರೂಪಕ್ಕೆ ಬರಲು ಮತ್ತೆರಡು ತಿಂಗಳು ಬೇಕಾಯಿತು. ಸುಮಿತ್ರೆಗೆ ಕೆಲಸ ಕೊಡಿಸುವ ವಿಚಾರ ಮೂರ್ತಿಗೆ ಕೂಡ ಕಾಗದ ಬರೆದು ಆತನ ಅಭಿಪ್ರಾಯ ಸಂಗ್ರಹಿಸಿದ್ದ. ಮೂರ್ತಿಗಂತೂ ಸುಮಿತ್ರೆ ಆಳಾಗಿ ದುಡಿಯುವುದು ಮನಸ್ಸಿಗೆ ಬಂದಿರಲಿಲ್ಲ. ‘ ಈ ವರ್ಷ ಪುನಃ ಅಭ್ಯಾಸ ನಡೆಸಿ ಮಾರ್ಚ್‌ನಲ್ಲಿ ಬಂದು ‘ ಮೆಟ್ರಿಕ್ ’ ಮುಗಿಸಿಕೊಂಡು ಹೋಗಲಿ; ಆಮೇಲೆ ಇಷ್ಟವಿದ್ದರೆ ಕಾಲೇಜು ವಿದ್ಯಾಭ್ಯಾಸ ಮುಂಬಯಿ ಯಲ್ಲೇ ಮುಂದುವರಿಸಬಹುದು. ಈ ಸಂಬಂಧದ ಖರ್ಚಿಗೆಲ್ಲ ನಾನು ಹೊಣೆ ಗಾರಿಕೆ ವಹಿಸುತ್ತೇನೆ ” ಎಂದು ಬರೆದಿದ್ದ. ಆತ ಸುಮಿತ್ರೆಗೆ ಬರೆದ ಕಾಗದ ದಲ್ಲೂ ಇದೇ ಅಭಿಪ್ರಾಯವಿತ್ತು. ಆದರೆ ಸುಮಿತ್ರೆ ಮಾತ್ರ ಇದಕ್ಕೊಪ್ಪಲಿಲ್ಲ. “ ನನ್ನ ವಿದ್ಯಾಭ್ಯಾಸ ನಿಂತಂತೆಯೇ ಭಾವ. ನನಗೆ ಎಲ್ಲಾದರೂ ಕೆಲಸ ದೊರ ಕಿಸಿ ಕೊಡಿ ” ಎಂದೇ ಗೋಪಿಯೊಡನೆ ಹಟಹಿಡಿದಳು.

ಗೋಪಿ ಮೂರ್ತಿಯ ಅಭಿಪ್ರಾಯವನ್ನು ಅನುಮೋದಿಸುವ ಮನಃ ಸ್ಥಿತಿಯಲ್ಲಿದ್ದನಾದರೂ ಸುಮಿತ್ರೆಯ ಆಸೆಗೆ ನಿಷ್ಠುರವಾಗಿ “ ಅದು ಸಾಧ್ಯವೇ

ಇಲ್ಲ. ನೀನು ಕಲಿಯಲೇ ಬೇಕು." ಎಂದು ಹೇಳುವಂತಿರಲಿಲ್ಲ. ಹೀಗಾಗಿ ಸುಮಿತ್ರೆಗೆ ಗುಮಾಸ್ತಗಿರಿಯ ಅನುಭವ ಕೆಲವು ತಿಂಗಳ ಮಟ್ಟಿಗಾದರೂ ಇರಲಿ, ಅದರಿಂದ ನೊಂದುಕೊಂಡರೆ ತನ್ನ ತಾನೇ ಹಾದಿಗೆ ಬರುತ್ತಾಳೆ ಎಂದು ಕೆಲಸಕ್ಕಾಗಿ ಪ್ರಯತ್ನಿಸಿದ.

ಸುಮಿತ್ರೆ ಕೆಲಸಕ್ಕೆ ಸೇರುವ ವಿಚಾರ ವಿರೋಧ ವ್ಯಕ್ತಪಡಿಸಿದವರಲ್ಲಿ ಪದ್ಮಾವತಿಯೂ ಒಬ್ಬಳು. ಏಕೋ, ಸೀರೆಯ ಪ್ರಕರಣದ ರಾತ್ರಿಯಿಂದ ಪದ್ಮಾ-ಸುಮಿತ್ರೆಯರ ವ್ಯವಹಾರ ತುಂಬ ಬದಲಿತ್ತು. ಕನಸಿನಲ್ಲಿ ಚೀರಿಕೊಂಡ ಅಕ್ಕನನ್ನು ಸಮಾಧಾನಪಡಿಸಲು ಬಂದ ಪದ್ಮಾವತಿ ಒಂದೆರಡು ದಿನ ಅಕ್ಕನ ಒಲವಿಗಾಗಿ ತುಂಬ ಪ್ರಯತ್ನಿಸಿದಳು. ಅಕ್ಕ ಒಬ್ಬಳೇ ಕುಳಿತು ಯೋಚಿಸದಂತೆ ಅವಳ ಬಿಡುವೇಳೆಯನ್ನೆಲ್ಲ, ತನ್ನ ಸಾಮಿಪ್ಯದಿಂದ ಹಾಳು ಮಾಡಿದಳು. ಆದರೂ ಒಮ್ಮೊಮ್ಮೆ ಸುಮಿತ್ರೆಯೊಂದಿಗೆ ಮಾತನಾಡುವಾಗ ಇಷ್ಟು ದಿನ ಇರದ ಅಣಕದ ಸ್ಪಷ್ಟ ಛಾಯೆ ಕಂಡುಬಂದುದು ಸುಮಿತ್ರೆಯ ಕಳವಳ ಹೆಚ್ಚಲು ಕಾರಣವಾಯಿತು,

ಕೆಲಸ ಸಿಕ್ಕಿದರೆ, ತನ್ನ ಸ್ವತಂತ್ರ ಜೀವನದ ಕಲ್ಪನೆ ಹೇಗೆ ಗರಿಗೆದರಿ ಹಾರುವುದೆಂಬುದನ್ನು ಒಂದು ದಿನ ತುಂಬ ಆನಂದದಿಂದ ತಂಗಿಯೊಡನೆ ವಿವರಿಸುತ್ತಿದ್ದಾಗ ಪದ್ಮಾವತಿ ನಡುವೆಯೇ ಬಾಯಿ ಹಾಕಿ ಹೇಳಿದಳು.

" ನಿನ್ನ ಕೈ ತುಂಬ ದುಡ್ಡಾದರೆ, ನಿನಗೆ ಯಾರ ಹಂಗೂ ಇಲ್ಲ ಅಕ್ಕ. ನಿನಗೆ ನೀನೇ ರಾಣಿ ಅಲ್ಲವೇ ?'' ಎಂದು.

ಸುಮಿತ್ರೆಗೆ ಈ ಮಾತಿನ ಹಿಂದಿದ್ದ ವ್ಯಂಗ್ಯ ಅರ್ಥವಾಗಲು ತುಸು ಹೊತ್ತು ಬೇಕಾಯಿತು. ತಿಳಿದಾಗ ಮಾತು ನಿಲ್ಲಿಸಿದ್ದಳು.

ಆದರೆ ಅವಳಿಗೆ ಕುಸುಮಾವತಿಯ ಸ್ನೇಹ ಮಾತ್ರ ಹೃದಯದ ಏಕಾಂತ ತೆಯನ್ನು ದೂರ ಮಾಡಿಸಲು ತುಂಬ ಸಹಾಯ ಮಾಡಿತು. ಅವಳ ಸ್ನೇಹದ ವರ್ಚಸ್ಸು ತನ್ನ ಮೇಲೆ ಮಾಡಿದ ಪರಿಣಾಮವನ್ನು ಸುಮಿತ್ರೆಯೇ ತಿಳಿದಿರ ಲಿಲ್ಲ. ಅದು ತಿಳಿದುದು ಪದ್ಮಾವತಿಗೆ ಮಾತ್ರ. ಈ ಸ್ನೇಹ ಸ್ವಾಭಾವಿಕ ಅಸೂಯೆಯನ್ನು ಕೆರಳಿಸಿತೆಂಬಂತೆ, ಸುಮಿತ್ರೆ ತಂಗಿಯೊಡನೆ ಯಾವುದಾದ ರೊಂದು ವಿಚಾರ ಸಲಹೆ ಕೇಳಿದಾಗ " ನಿನ್ನ ನಾಡಕರ್ಣಿಯನ್ನೇ ಕೇಳಲ್ಲ, ಹೋಗು " ಎನ್ನುತ್ತಿದ್ದಳು.

ಹಿಂದಿನ ದಿನಗಳಲ್ಲಾಗಿದ್ದರೆ, ಇಂಥ ಮಾತುಗಳನ್ನು ಕೇಳಿದಾಗ ಮೊನಚು ಕಲ್ಲಿನಿಂದ ಮಿದುವಾದ ಎದೆಯನ್ನು ಇರಿದಷ್ಟು ವೇದನೆ ಸುಮಿತ್ರೆಗಾಗುತ್ತಿತ್ತು. ಆದರೆ ಈಗ ಮಾತ್ರ ತಂಗಿಯ ಮಾತು ಕೇಳಿದಾಗ ಉಂಟಾಗುತ್ತಿದ್ದುದು ಬರೀ ಜುಗುಪ್ಸೆ.

ಅಕ್ಕ ತನ್ನಿಂದ ದೂರ ದೂರ ಸರಿಯುತ್ತಿದ್ದಾಳೆ ಎಂದು ಪದ್ಮಾವತಿ ಯೋಚಿಸಿದುದರಲ್ಲಿ ತಥ್ಯವಿರಲಿಲ್ಲ. ಆದರೆ ಆ ಯೋಚನೆ ಮಾತ್ರ ಆಕೆ ಕುಸುಮಾವತಿಯಿಂದ ದೂರ ದೂರ ಸರಿದು ಶೀಲೆಯನ್ನು ಇನ್ನಷ್ಟು ನೆಚ್ಚಿಕೊಳ್ಳುವಂತೆ ಮಾಡಿತು. ಮೊದಮೊದಲು ಶೀಲೆಯ ಮನೆಗೆ ಹೋಗುತ್ತಿದ್ದಾಗ ಪದ್ಮಾವತಿ ಸುಮಿತ್ರೆಯನ್ನು ಬರುವಂತೆ ಒತ್ತಾಯ ಮಾಡುತ್ತಿದ್ದಳು. ಆದರೆ ಸುಮಿತ್ರೆಗೆ ಮೋಹನನ ಭೀತಿ ಕಾಡುತ್ತಿದ್ದುದರಿಂದ ಅಲ್ಲಿಗೆ ಹೋಗುವ ವಿಚಾರ ಉದಾಸೀನಳಾಗಿಯೇ ಇದ್ದಳು. ಶೀಲೆಯೇ ಬಂದು ಒತ್ತಾಯ ಮಾಡಿದಾಗ ಆಗೊಮ್ಮೆ ಈಗೊಮ್ಮೆ ಹೋಗುತ್ತಿದ್ದಳು. ಆದರೆ ಸುಮಿತ್ರೆಗೆ ಕುಸುಮಾವತಿಯ ಸ್ನೇಹ ಅಂಟಿಕೊಂಡ ಮೇಲೆ, ಶೀಲೆಯ ಮನೆಗೆ ಪದ್ಮಾವತಿ ತಾನೊಬ್ಬಳೇ ಹೋಗಲಾರಂಭಿಸಿದಾಗ, ಸುಮಿತ್ರೆಯೂ ಜೊತೆಗೆ ಹೊರಡುವ ಇಚ್ಛೆಯನ್ನು ತೋರಿಸಲಿಲ್ಲ.

ಗೋಪಿಯೊಡನೆ 'ಕೆಲಸಕ್ಕಾಗಿ ಪ್ರಯತ್ನಿಸಿ' ಎಂದು ಬೇಡಿಕೊಂಡರೂ ಸುಮಿತ್ರೆ ತನ್ನ ವೈಯುಕ್ತಿಕ ಪ್ರಯತ್ನವನ್ನೂ ಮಾಡದಿರಲಿಲ್ಲ. "ಟ್ಯಾಮ್ಸ್"ನ ಜಾಹೀರಾತು ನೋಡಿ ಬರೆದುಕೊಳ್ಳಲು ಆರಂಭಿಸಿದಾಗ ಗೋಪಿ ನಕ್ಕು ಬಿಟ್ಟಿದ್ದ. ಹತ್ತಿರದಲ್ಲೇ ಒಂದೆರಡು ಕಡೆ ಕರೆಬಂದಾಗ ಹೋಗಿ ಅಲ್ಲಿ ಪರೀಕ್ಷೆಯ ನೆಪದಿಂದ ಸರಸಕ್ಕೆಳೆಯುವ ಅಧಿಕಾರಿಗಳ ಅಸಹ್ಯ ವರ್ತನೆಯಿಂದ ಹೇಸಿಕೊಂಡು ಅರ್ಧದಲ್ಲೇ ಎದ್ದು ಬಂದಿದ್ದಳು. ಗೋಪಿ ಈ ವಿಚಾರ ತಿಳಿದು ಹೊಟ್ಟೆ ಹುಣ್ಣಾಗುವಂತೆ ನಕ್ಕಿದ್ದ.

ಕೊನೆಗೂ ಕೆಲಸ ದೊರಕಿಸಿಕೊಡಲು ಗೋಪಿಯೇ ಸಹಾಯಕ್ಕೆ ಬರಬೇಕಾಗಿ ಬಂತು.

ತನ್ನಂತೆಯೇ ಉಚ್ಚಪದವಿಗಳಲ್ಲಿದ್ದ ಹಲವಾರು ಗೆಳೆಯರೊಡನೆ ಗೋಪಿ ಸುಮಿತ್ರೆಯ ಕುರಿತಾಗಿ ಕೇಳಿಕೊಂಡಿದ್ದ. ಎರಡು ತಿಂಗಳು ಕಳೆದ ಮೇಲೊಂದುದಿನ ಅವನ ಗೆಳೆಯರೊಬ್ಬರು ಈ ವಿಚಾರ ನೆರವಾದರು. "ನಮ್ಮ

ಆಫೀಸಿನಲ್ಲಿ ಒಂದು ಜಾಗ ಖಾಲಿಬಿದ್ದಿದೆ. ಕೆಲಸವೂ ಕಷ್ಟದ್ದಲ್ಲ. ಆವರಣವೂ ಚೆಂತಿಲ್ಲ. ನಾಡಿದ್ದು ಸೋಮವಾರ ಕಳುಹಿಸಿಕೊಡಿ." ಎಂದು ಅವರು ಟೆಲಿಫೋನ್ ಮೂಲಕ ತಿಳಿಸಿದಾಗ ಗೋಪಿಗೆ ಸಂತೋಷವಾಗಬೇಕಿತ್ತು. ಬದಲು ಬೇಸರವಾಯಿತು.

"ಹೇಗಾದರೂ ಪ್ರಯತ್ನಿಸಿ ನಾನೇ ನಮ್ಮ ಆಫೀಸಿನಲ್ಲೇ ಯಾಕೆ ಅವಳಿಗೆ ಕೆಲಸ ಕೊಡಿಸಬಾರದಿತ್ತು?" ಎಂದು ಗೋಪಿ ಮೊದಲ ಬಾರಿಗೆ ತನ್ನನ್ನೇ ಕೇಳಿಕೊಂಡ.

೧೬

ಗೋಪಿ ಸುಮಿತ್ರೆಗೆ ಕೆಲಸ ಸಿಗುವುದೆಂದು ಸುದ್ದಿ ತರಲು ಎಂಟು ದಿನಗಳಿಗೆ ಮುಂಚೆ ಆಕೆಗೆ ಮೂರ್ತಿಯಿಂದೊಂದು ಪತ್ರ ಬಂದಿತ್ತು. ಮೂರ್ತಿ ಆರಂಭದಿಂದಲೂ ಸುಮಿತ್ರೆ ಕೆಲಸಕ್ಕೆ ಸೇರುವ ವಿಚಾರ ಯಾವ ಉತ್ಸಾಹವನ್ನೂ ತೋರಿಸಿರಲಿಲ್ಲ. ಈ ಪತ್ರದಲ್ಲಿ ಪದ್ಮಾವತಿಯ ಆರೈಕೆಯ ಕುರಿತು ಸುಮಿತ್ರೆಗೆ ಎಚ್ಚರ ಕೊಟ್ಟಿದ್ದ. "ತಿಂಗಳು ತುಂಬುತ್ತಿರುವ ಬಸುರಿ. ಅವಳನ್ನು ಅಲಕ್ಷ್ಯ ಮಾಡಿ ಕೆಲಸದ ಹುಚ್ಚು ತಲೆಯಲ್ಲಿರಿಸಿಕೊಳ್ಳಬೇಡ" ಎಂದು ಬರೆದಿದ್ದ. ಜೊತೆಗೇ ಇನ್ನೊಂದು ಕಳವಳದ ಸುದ್ದಿ. ವೀರೆಯೂ ಈಗ ಮುಂಚಿನಂತಿಲ್ಲ. ಹತ್ತು ಹದಿನೈದು ದಿನಗಳಿಗೊಮ್ಮೆ ಜ್ವರ ಬರುತ್ತಿದೆ" ಎಂದೂ ಬರೆದಿತ್ತು.

ಸುಮಿತ್ರೆಯ ಕಳವಳ ತುಂಬಿದ ಮನಸ್ಸಿಗೆ ಮೂರ್ತಿಯ ಪತ್ರ ಇನ್ನಷ್ಟು ಬೇಸರ ತಂದುಕೊಡಲು ಕಾರಣವಾಯಿತು.

ಪದ್ಮಾವತಿಯ ಆರೈಕೆಯ ವಿಚಾರ ಆಕೆ ಅಲಕ್ಷಿಸಿರಲಿಲ್ಲ. ಆದರೆ "ಕೆಲಸ ಸಿಕ್ಕಿದರೆ ಆಮೇಲೆ ಪದ್ಮಾವತಿ ಒಬ್ಬಳನ್ನೇ ಮನೆಯಲ್ಲಿ ಬಿಟ್ಟು ಹೋಗುವುದು ಸರಿಯೆ ?" ಎಂದು ಮನಸ್ಸು ಪ್ರಶ್ನಿಸುತ್ತಿತ್ತು. ಮುಂಚಿನಂತೆ ತಂಗಿಯೊಡನೆ ಸರಸವಾಡುತ್ತಿದ್ದರೆ ಪದ್ಮಾವತಿಯನ್ನೇ ನೇರ ಕೇಳಿಬಿಡಬಹುದಿತ್ತು. ಆದರೆ ಈಗ ಸಂಕೋಚವಾಗುತ್ತಿತ್ತು. ಪದ್ಮಾವತಿಗೆ ಸುಮಿತ್ರೆ ಕೆಲಸಕ್ಕೆ ಸೇರುವುದು ಇಷ್ಟವಿಲ್ಲವೆಂದು ತಿಳಿದಂದಿನಿಂದ ಆಕೆ ತಂಗಿಯೊಡನೆ ಕೆಲಸದ ವಿಚಾರ ಮಾತನಾಡುತ್ತಿದ್ದಿಲ್ಲ.

ಹೀಗಾಗಿ ಮೂರ್ತಿಯ ಪತ್ರದ ವಿಚಾರ ಸುಮಿತ್ರೆ ಸಲಹೆ ಕೇಳಿದುದು ಕುಸುಮಾವತಿಯೊಡನೆ.

" ಇದನ್ನೆಲ್ಲ ಹಚ್ಚಿಕೊಳ್ಳಬೇಡ ಸುಮಿತ್ರಾ. ಆಫೀಸಿಗೆ ಹೋಗುವುದಾದರೂ ಹೋಗದೆ ಇರುವುದಾದರೂ ಬೆಳಿಗ್ಗೆ ಎಂಟು ಒಂಭತ್ತು ಘಂಟೆಯೊಳಗೆ ಅಡಿಗೆಯಾಗಲೇಬೇಕು. ಆಮೇಲೆ ಮತ್ತೇನು ಕೆಲಸ? ಪದ್ಮಾವತಿ ಹೆರುವುದಂತೂ ಆಸ್ಪತ್ರೆಯಲ್ಲಿ. ಒಂದೆರಡು ತಿಂಗಳು ಹೇಗಾದರೂ ಸುಧಾರಿಸಿ ಕಳೆಯಬಹುದು ಬಿಡು. "

ಸುಮಿತ್ರೆಗೆ ಈ ಸಮಾಧಾನ ಮನಸ್ಸಿಗೆ ಒಪ್ಪಿಗೆಯಾಗದಿದ್ದರೂ ಬೇರೆ ಸಮಾಧಾನವಿದ್ದಿಲ್ಲ.

ಒಮ್ಮೆ ಶೀಲೆಯೊಡನೆ ಈ ವಿಚಾರ ಪ್ರಸ್ತಾಪ ಮಾಡಿದಾಗಲೂ ಅವಳೂ ಹೇಳಿದುದು ಇದೇ ರೀತಿಯ ಸಮಾಧಾನ.

ಸುಮಿತ್ರೆ ಕೆಲಸಕ್ಕೆ ಹೋಗುವಂತಾದರೆ ಮನೆಗೆಲಸ ನೋಡಿಕೊಳ್ಳಲು ಯಾರಾದರೂ ಆಳನ್ನು ಗೊತ್ತು ಮಾಡಬೇಕು ಎಂದು ಯೋಚಿಸಿ ಆ ದೆಸೆಯಲ್ಲಿ ಪ್ರಯತ್ನ ಮಾಡುತ್ತಿದ್ದುದು ಗೋಪಿ ಮಾತ್ರ.

ಸುಮಿತ್ರೆಗೆ ಕೆಲಸ ದೊರಕಿಸಲಿರುವ ಸುದ್ದಿ ಬಂದುದು, ಗೋಪಿ ಮನೆಗೆ ಬರುವಾಗ, ಈ ಸುದ್ದಿಯಿಂದ ಸುಮಿತ್ರೆಗಾಗಬಹುದಾದ ಸಂತೋಷವನ್ನು ಊಹಿಸಿಕೊಂಡು ತುಂಬ ಉತ್ಸಾಹದಿಂದಲೇ ಬಂದಿದ್ದ. ಆದರೆ ಅವನ ಉತ್ಸಾಹಕ್ಕೆಲ್ಲ ತಣ್ಣೀರೆರಚುವಂಥ ಒಂದು ಪ್ರಸಂಗ ಮನೆಯಲ್ಲಿ ಜರಗಿತ್ತು.

ಗೋಪಿ ಸಂಜೆ ಬಂದಾಗ ಮನೆಯ ಬಾಗಿಲಲ್ಲೇ ನೆರೆಮನೆಯ ಸಿಂಧೀ ಹೆಂಗಸು, ಕುಸುಮಾವತಿ ನಾಡಕರ್ಣಿ ಮತ್ತು ಒಬ್ಬಿಬ್ಬರು ಹೆಂಗಸರಿದ್ದರು. " ಗೋಪಿ ಬಂದ ಸುದ್ದಿಯನ್ನು ಕುಸುಮಾವತಿ ಸುಮಿತ್ರೆಗೆ ಕರೆದು ತಿಳಿಸಿದಾಗ ಅವಳು ಓಡಿಯೋಡಿ ಬಾಗಿಲಿಗೆ ಬಂದಳು.

ಗೋಪಿ ಹೆದರಿಕೊಂಡು ಕೇಳಿದ " ಏನು ಸುಮಿತ್ರಾ, ಏನಾಯಿತು ? " ಎಂದು.

" ಹೆದರಬೇಕಾದ್ದೇನೂ ಇಲ್ಲ ಭಾವಾ. ಏಕೋ ಪದ್ಮಾಗೆ ಒಮ್ಮಿಂದೊಮ್ಮೆಗೇ ಹೊಟ್ಟೆನೋವು ಸುರುವಾಗಿ ಕಣ್ಣು ಕತ್ತಲೆ ಬಂತು. ನಾನು ಡಾಕ್ಟರರನ್ನು ಕರೆಯಲು ನಾಡಕರ್ಣಿಯವರನ್ನು ಕಳಿಸಿದೆ. ಅವರು ಬಂದು ನೋಡಿ

ಹೋಗಿದ್ದಾರೆ. ಈಗೇನು ಹೋಗಿ ಹತ್ತು ನಿಮಿಷವಾಯಿತು. ಈಗ ಸರಿಯಾಗಿ ದ್ದಾಳೆ ಪದ್ಮಾ. 'ಏನೂ ಗಾಬರಿಯಿಲ್ಲ'ವೆಂದು ಹೇಳಿದ್ದಾರೆ. ನಿಮ್ಮ ಆಫೀಸಿಗೆ ಟೆಲಿಫೋನ್ ಮಾಡಿದಾಗ ಹದಿನೈದು ನಿಮಿಷ 'ಲೈನ್' ಸಿಗಲೇ ಇಲ್ಲ."

ಗೋಪಿ ಪದ್ಮಾವತಿಯನ್ನು ನೋಡಲೆಂದು ಒಳಗೆ ಹೋದಾಗ ಬಂದವ ರೆಲ್ಲ ಚೆದರಿದರು.

ಪದ್ಮಾವತಿ ಮಲಗಿದ್ದಳು. ಗೋಪಿ ಬಂದಾಗ ಅವಳು ಮೆಲ್ಲ ಮೆಲ್ಲ ನಗಲು ಪ್ರಯತ್ನಿಸಿದಳು. "ಏನಾಯಿತು ಪದ್ಮಾ?" ಎಂದು ಗೋಪಿ ಪ್ರೀತಿ ಯಿಂದ ಬಳಿ ಕುಳಿತು ತಲೆಯನ್ನು ನೇವರಿಸುತ್ತ ಕೇಳಿದಾಗ "ಏನೂ ಇಲ್ಲ. ಏನೋ ಕಣ್ಣು ಕತ್ತಲೆ ಬಂತು. ಒಂದು ಕ್ಷಣ ಕಂಗಾಲಾಗಿ ಬಿದ್ದುಬಿಟ್ಟೆ. ಈಗೇನೂ ಇಲ್ಲ. ಸರಿಯಾಗಿದ್ದೇನೆ" ಎಂದಾಗ ಗೋಪಿಗೆ ತುಸು ಸಮಾಧಾನ ವಾಯಿತು.

ರಾತ್ರೆ ಊಟದ ವೇಳೆ ಗೋಪಿ ಸುಮಿತ್ರೆಗೆ ಕೆಲಸ ದೊರಕುವ ವಿಚಾರ ತಿಳಿಸಿದ.

"ಸೋಮವಾರ ದಿನ ಸುಮಿತ್ರೆ ಕೆಲಸಕ್ಕೆ ಹೋಗಬೇಕಾಗುತ್ತದೆ. ಇವೊತ್ತು ನನ್ನ ಸ್ನೇಹಿತರೊಬ್ಬರು ಟೆಲಿಫೋನ್ ಮಾಡಿ ಹೇಳಿದ್ದಾರೆ" ಎಂದಾಗ ಪದ್ಮಾವತಿ ಊಟ ಮಾಡುತ್ತಿದ್ದವಳು ಕ್ಷಣಕಾಲ ಸುಮ್ಮಗಾದಳು.

ತಂಗಿ ಭಾವಂದಿರ ಜೊತೆಗೆ ತಾನೂ ಬಡಿಸಿಕೊಂಡು ಊಟಮಾಡುತ್ತಿದ್ದ ಸುಮಿತ್ರೆಗೆ ತುತ್ತು ಗಂಟಲಿಂದ ಕೆಳಗಿಳಿಯಲಿಲ್ಲ. ಅವಳ ಸ್ವಾತಂತ್ರ್ಯದ ಸಂದೇಶ ತಂದ ಮಾತು ಪ್ರಕಟವಾದ ಸಂದರ್ಭ ಹಿತಕರವಾಗಿರಲಿಲ್ಲ.

ಆಕೆ ಅಪೇಕ್ಷಿಸಿದ್ದ ಬದುಕಿನ ಯುಗಾದಿಯ ಸೂಚನೆಯಿಂದ ಸಂತೋಷ ಗೊಳ್ಳಬೇಕಾಗಿದ್ದ ಅವಳು ಕಾತರಳಾಗಿ ಕೇಳಿದಳು.

"ಈಗ ಪದ್ಮೆಯನ್ನು ಬಿಟ್ಟು ನಾನು ಕೆಲಸಕ್ಕೆ ಹೋಗುವುದು ಸಾಧ್ಯವೆ?"

ಪದ್ಮಾವತಿಯ ಮನಸ್ಸಿನಲ್ಲಿದ್ದ ಪ್ರಶ್ನೆಯನ್ನು ಸುಮಿತ್ರೆಯೇ ಕೇಳಿದ್ದಳು. ಇದರಿಂದಾಗಿ ಪದ್ಮಾವತಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಗೋಪಿ ಉತ್ತರ ಕೊಡುವುದನ್ನೇ ಆಕೆ ಇದಿರು ನೋಡುತ್ತಿದ್ದಳು.

ಗೋಪಿಗೂ ಈ ಪ್ರಶ್ನೆಗೆ ಯಾವ ಉತ್ತರ ಕೊಡಬೇಕೆಂದು ಕೂಡಲೆ ಹೊಳೆಯಲಿಲ್ಲ. ಸುಮಿತ್ರೆಗೆ ಕೆಲಸ ಸಿಗಬಹುದೆಂದು ನಂಬಿಕೊಂಡು ಆತ ಮನೆಯ ಕೆಲಸಕ್ಕಾಗಿ ಜನ ಹುಡುಕಿದ್ದ. ಆದರೆ ಈ ಪ್ರಯತ್ನಗಳಿಗೆಲ್ಲ "ನಾಳೆ ಹೇಳುತ್ತೇನೆ; ನಾಡಿದ್ದು ಖಂಡಿತ ಹೇಳುತ್ತೇನೆ." ಎಂದು ಮುಂದುವರಿಯುತ್ತಲೇ ಬಂದಿದ್ದ ಒಂದೆರಡು ಆಶ್ವಾಸನೆಗಳ ಆಧಾರದಿಂದ ಈಗ " ಜನಕ್ಕೇನು ತೊಂದರೆ ?" ಎಂದು ಆತ ಹೇಳುವಂತಿರಲಿಲ್ಲ. ಈ ಸಂದರ್ಭದಲ್ಲಿ ಸುಮಿತ್ರೆ ಮನೆಯಲ್ಲಿರದೆ ಪದ್ಮಾವತಿಯೊಬ್ಬಳನ್ನೇ ಬಿಟ್ಟಿರುವುದು ಹೇಗೆಂದು ಯೋಚಿಸುತ್ತಿರುವಾಗ, ಪದ್ಮಾವತಿಯೇ ಮಾತನಾಡಿದಳು.

" ಶೀಲಕ್ಕ ಬಂದಾರು, ಹಾಗೆ ಬೇಕಾದಾಗ.''

" ಅವಳೇಕೆ ಬರಬೇಕು ? ನಾನು ಜನ ನೋಡುತ್ತಿದ್ದೇನೆ. ಅವರು ಇವೊತ್ತು ನಾಳೆಯೆಂದು ಕುಣಿಸುತ್ತಿದ್ದಾರಷ್ಟೆ. ನಾಡಿದ್ದು ಆದಿತ್ಯವಾರ ಏನಾದರೊಂದು ನಿಶ್ಚಯ ಮಾಡಿಕೊಂಡು ಬರುತ್ತೇನೆ." ಎಂದು ಹೇಳಿದ.

ಸುಮಿತ್ರೆಗೆ ಇಡೀ ಜಗತ್ತೇ ತನ್ನನ್ನು ಅವಮಾನಿಸುತ್ತಿದೆಯೆಂಬಷ್ಟು ವೇದನೆಯಾಯಿತು.

" ಇಲ್ಲ. ಶೀಲಕ್ಕ ಹೇಳಿದ್ದಾರೆ, ಒಂದೆರಡು ತಿಂಗಳು ಅಲ್ಲಿಯೇ ಇರುವುದು ಒಳ್ಳೆಯದು ಎಂದು. ಆಫೀಸು ಸುರುವಾದರೇನು ಅಕ್ಕ ಬೆಳಿಗ್ಗೆ ಏಳು ಘಂಟೆಗೆ ಹೋಗುತ್ತಾಳೆಯೆ ? ಬೆಳಗಿನ ಕೆಲಸವೆಲ್ಲ ಮುಗಿಯುವ ತನಕ ಅವಳೂ ಇದ್ದಾಳೆ. ಆಮೇಲೆ ಕೆಲಸವೇನಿದೆ ? ಹೆರಿಗೆಯ ದಿನ ಬಂದಾಗ ಒಂದೆರಡು ವಾರ ಶೀಲಕ್ಕನೊಟ್ಟಿಗೆ ಇರುತ್ತೇನೆ. ಭಾವನೂ ಹೆರಿಗೆಯ ಸಮಯ ಅಲ್ಲಿಯೇ ಇರಲಿಕ್ಕೆ ಹೇಳಿದ್ದಾರೆ." ಎಂದು ಪದ್ಮಾವತಿ ಹೇಳಿದಾಗ ಗೋಪಿಗೆ ತುಸು ಸಮಾಧಾನವಾದರೂ ಸುಮಿತ್ರೆಗೆ ಊಟ ಮಾಡುವುದೇ ಕಷ್ಟವಾಯಿತು.

ತಾನು ತಂಗಿಯ ಆರೈಕೆಗೆ ತಾಯಿಯ ಸ್ಥಾನದಲ್ಲಿ ನಿಲ್ಲಬೇಕಾದ ಸಂದರ್ಭ ಬಂದಿರುವಾಗ, ತಾನೇ ಸಾಕಿದ್ದ ಪದ್ಮಾವತಿಯ ಚೊಚ್ಚಲು ಬಸುರಿಯ ದಿನಗಳಲ್ಲಿ ಅವಳ ಆರೈಕೆ ಮಾಡುವ ಅಗತ್ಯವಿದ್ದಾಗ, ಕೆಲಸದ ನೆಪದಿಂದ ತಂಗಿಯಿಂದ ದೂರವಾಗಬೇಕಾಗಿ ಬಂತೇ ಎಂದು ಒಳದನಿ ಮರುಗುವಾಗ,

ತನ್ನ ಇಂದಿನ ತನಕದ ಸೋಲಿನ ಇತಿಹಾಸ ಅವಳನ್ನು ಅಣಕಿಸುತ್ತಿತ್ತು. ಮದುವೆಯ ಪ್ರಕರಣದಿಂದ ನೊಂದಿದ್ದ ಮನಸ್ಸಿಗೆ, ತಂದೆಯ ಮರಣ, ತನ್ನ ಅಸಹಾಯತೆ, ಏಕಾಂತತೆಗಳ ಅರಿವಿನ ಹಿನ್ನೆಲೆಯಲ್ಲಿ, ಒಂದು ಸ್ವತಂತ್ರ ಉದ್ಯೋಗ ಭರವಸೆಯ ಬದುಕಿನ ವಿಶ್ವ ತೋರೀತು ಎಂಬ ಆಶೆ ದೂರದಲ್ಲಿ ಕಾಣುವಾಗ, ಒಡಹುಟ್ಟಿದ ತಂಗಿ ತನ್ನನ್ನು ಕಡೆಗಣಿಸುತ್ತಿರುವಳಲ್ಲಾ ಎಂಬ ದುಃಖ ತುಂಬಿ ಬಂತು.

ಸುಮಿತ್ರೆ ತಲೆ ತಗ್ಗಿಸಿ ಬಟ್ಟಲಿನಲ್ಲಿದ್ದ ಅನ್ನವನ್ನು ಹಿಚುಕಿ ಹಿಚುಕಿ ಸಣ್ಣ ಗುಳಿಗೆಗಳಾಗಿ ಮಾಡಿ ಬದಿಗೆ ಸರಿಸುತ್ತಿದ್ದಳು.

ಪದ್ಮಾವತಿ ಅಕ್ಕನ ಮುಖ ನೋಡುವಷ್ಟು ಧೈರ್ಯ ತಂದುಕೊಳ್ಳಲಿಲ್ಲ.

"ನೋಡೋಣ. ಹೇಗಿದ್ದರೂ ಸುಮಿತ್ರೆ ಕೆಲಸಕ್ಕೆ ಹೋಗದಿರುವುದು ಬೇಡ. ನಾನು ಆ ಹುಡುಗನನ್ನು ವಿಚಾರಿಸುತ್ತೇನೆ. ಬಂದರೆ ಸರಿ. ಹೇಗೂ ಮನೆಗೆಲಸಕ್ಕೆ ಒಂದು ಜನ ಬೇಕಲ್ಲ. ಮತ್ತೇನೂ ಕೆಲಸವಿಲ್ಲದಿದ್ದರೆ ಒಂದೆರಡು ತಿಂಗಳು ಕಳೆದ ಮೇಲೆ ಮಗುವನ್ನೆತ್ತಿಕೊಳ್ಳಲಿಕ್ಕಾದರೂ ಅವನನ್ನು ಉಪಯೋಗಿಸಿಕೊಳ್ಳಬಹುದು." ಎಂದು ಗೋಪಿ ನಗೆಯಲ್ಲಿ ಮಾತನ್ನು ತೇಲಿಸಿದ.

ಕೊನೆಯ ಮಾತು ಕೇಳಿ ಸುಮಿತ್ರೆಗೂ ನಗುಬಂತು. ಒಂದು ಕ್ಷಣ ಹೃದಯದ ದುಮ್ಮಾನ ಕಡಿಮೆಯಾಗಿ ಭಾವನ ಹಾಸ್ಯ ಉಂಟುಮಾಡಿದ ಕಲ್ಪನೆಯ ಸೃಷ್ಟಿಯಲ್ಲಿ ಆಕೆ ಸಮಾಧಾನವನ್ನು ಗುರುತಿಸಿದಳು.

"ನಿಮಗೆ ಇನ್ನೂ ಹುಡುಗಾಟಿಕೆಯೆ" ಎಂದು ಪದ್ಮಾವತಿ ಊಟ ಮುಗಿಸಿ ತಾಟನ್ನೆತ್ತಿಕೊಂಡು ಕೈತೊಳೆಯಲೆಂದು 'ಬೇಸಿನ್'ನ ಕಡೆ ಹೋದಳು.

ಕೆಲಸದಾಳಿನ ಬೇಟೆಯಲ್ಲಿ ಗೋಪಿಯ ಪ್ರಯತ್ನ ಸುಮಿತ್ರೆಯ ಸುದೈವದಿಂದಾಗಿ ಫಲಕೊಟ್ಟಿತು. ಭಾನುವಾರ ಬೆಳಿಗ್ಗೆ ಹಿಂದೆ ಮಾತನಾಡಿದ್ದ ಹುಡುಗನನ್ನು ಕಂಡು ಬರುತ್ತೇನೆಂದು ಹೋದವನು ಮಧ್ಯಾಹ್ನ ಊಟದ ಹೊತ್ತಿಗೆ ಮರಳಿ ಬಂದಾಗ ಚಿಕ್ಕ ಮರಾಟೀ ಹುಡುಗನೊಬ್ಬನನ್ನು ಕರೆದುಕೊಂಡೇ ಬಂದಿದ್ದ.

ಸುಮಿತ್ರೆಗೆ ಒಮ್ಮೆ ಜೀವ ಬಂದಂತಾಯಿತು. ಆದರೆ ಪದ್ಮಾವತಿಗೆ ಮಾತ್ರ ಎಷ್ಟು ಸಮಾಧಾನವಾಯಿತೋ.

ಆದಿತ್ಯವಾರ ರಾತ್ರೆಯ ತನಕವೂ ಪದ್ಮಾವತಿ ಸುಮಿತ್ರೆಯೊಡನೆ ಪ್ರತ್ಯಕ್ಷವಾಗಿ ಆಕೆಯ ಕೆಲಸದ ವಿಚಾರ ಮಾತನಾಡಲಿಲ್ಲ. ತಂಗಿ ಈಗ ಬಂದಾಳು, ಇನ್ನೊಂದುಗಳಿಗೆಯಲ್ಲಿ ಬಂದಾಳು, ಅಕ್ಕನಿಗೆ ಒಂದು ಜೀವನೋಪಾಯ ದೊರಕಿದುದಕ್ಕಾಗಿ ಸಂತೋಷದಿಂದ ಕುಣಿದಾಡಿಯಾಳು, ತಂಗಿಯ ಇಚ್ಛೆಯ ವಿರುದ್ಧ ಕೆಲಸಮಾಡುತ್ತಿರುವೆನೇ ಎಂಬ ತನ್ನ ಮನಸ್ಸಿನ ತುಮುಲದಿಂದ ತನ್ನನ್ನು ಬಿಡುಗಡೆಮಾಡಿಯಾಳು, ಎಂದು ಯೋಚಿಸುತ್ತಿದ್ದ ಸುಮಿತ್ರೆಗೆ ನಿರಾಶೆಯೇ ಆಯಿತು. ಕೊನೆಗೆ ತನ್ನ ಮನಸ್ಸಿನ ಉದ್ವೇಗವನ್ನು ತಡೆಯಲಾಗದೆ ಭಾನುವಾರ ರಾತ್ರೆ ಗೋಪಿ ಊಟ ಮುಗಿಸಿ ಸಿಗರೇಟು ತರಲೆಂದು ಹೊರಗೆ ಹೋದಾಗ, ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದ ತಂಗಿಯ ಬಳಿ ಹೋಗಿ ಕೇಳಿದಳು.

" ಪದ್ಮಾ!"

" ಏನಕ್ಕಾ ?"

" ನನಗೆ ಖಂಡಿತವಾಗಿ ಒಂದು ಮಾತು ಹೇಳಮ್ಮಾ. ನಾನು ಕೆಲಸಕ್ಕೆ ಹೋಗುವುದು ನಿನಗಿಷ್ಟವಿಲ್ಲವಾದರೆ ನಾನು ಹೋಗುವುದಿಲ್ಲ. ಕೆಲಸ ಹಿಡಿದು ಬದುಕಿಯೇನು ಎಂಬಾಸೆಯಿಂದ ಇಲ್ಲಿಯ ತನಕ ಬಂದೆ. ಆದರೆ ನಾನು ಸಾಕಿದ ತಂಗಿಗೆ ಕಷ್ಟಕೊಟ್ಟು, ಅವಳಿಗೆ ನೆರವಾಗಬೇಕಾದ ಹೊತ್ತಿನಲ್ಲಿ ನಾನು ಅವಳ ಇಚ್ಛೆಯ ವಿರುದ್ಧ ಕೆಲಸಕ್ಕೆ ಹೋಗುವುದಿಲ್ಲ. ಏನು ಮಾಡಲಿ ಪದ್ಮಾ ?"

ಸುಮಿತ್ರೆಯ ಕಣ್ಣಿಂದ ನೀರಿಳಿಯುತ್ತಿತ್ತು. ಪದ್ಮಾವತಿಯ ಸಿಟ್ಟೆಲ್ಲ ಮಂಜಿನಂತೆ ಕ್ಷಣಾರ್ಧದಲ್ಲಿ ಕರಗಿತು. ಅಕ್ಕನ ಕೊರಳಿಗೆ ಜೋತು ಬಿದ್ದು ಬರೀ ' ಅಕ್ಕಾ, ಅಕ್ಕಾ' ಎಂದು ಹೇಳತೊಡಗಿದಳು.

" ನಿನಗೆ ಬೇಸರ ತರಿಸಿ ನಿನ್ನನ್ನು ಬಿಟ್ಟು ಹೋದರೆ ಅಮ್ಮ ಏನು ಹೇಳಿಯಾಳು ಪದ್ಮಾ ?" ಸುಮಿತ್ರೆಯ ಅಳು ಉಕ್ಕಿಯುಕ್ಕಿ ಬರುತ್ತಿತ್ತು.

" ಇಲ್ಲಕ್ಕಾ ಇಲ್ಲ. ಖಂಡಿತವಾಗಿಯೂ ಬೇಸರವಿಲ್ಲ. ನೀನು ಕೆಲಸಕ್ಕೆ ಹೋಗಲೇ ಬೇಕು. ನೀನು ಹೋದರೆ ನಾನೊಬ್ಬಳೇ ಏನು ಮಾಡುವುದೆಂದು

ಇಲ್ಲದ ಸಲ್ಲದ ವಿಚಾರಗಳನ್ನು ಮನಸ್ಸಿಗೆ ಹಚ್ಚಿಕೊಂಡೆ. ನೀನು ಸಂತೋಷ ದಿಂದ ಹೋಗು ಅಕ್ಕಾ. ನಿನ್ನ ದುಃಖ ಎಷ್ಟೆಂದು ಗೊತ್ತಿದ್ದೂ ನಾನು ನಿನ್ನನ್ನು ಕಟ್ಟಿಹಾಕಿಯೇನೇ ?" ಎಂದು ಪದ್ಮಾವತಿ ಇಷ್ಟು ದಿನ ತಾನು ಅಕ್ಕನೊಂದಿ ಗಿರಿಸಿದ್ದ ಉದಾಸೀನದ ವ್ಯವಹಾರಕ್ಕೆ ತಿಲಾಂಜಲಿ ಕೊಟ್ಟಳು.

ತಂಗಿಯಿಂದ ಈ ರೀತಿಯ ಸಮಾಧಾನ ದೊರಕಿದಾಗ ಸುಮಿತ್ರೆಯ ಚಂಚಲ ಮನಸ್ಸು ಎಷ್ಟೋ ಹಗುರಾಯಿತು. ಮಂಗಳೂರಿನ ಮನೆಯಲ್ಲಿ, ಹೊರಗೆ ಜಡಿಮಳೆ ಸುರಿಯುತ್ತಿದ್ದಾಗ, ಕರಾವಳಿಯ ಮಳೆಯ ವೈಭವವನ್ನು ಕಿಟಕಿಯ ಬಳಿ ಕುಳಿತು ಅಕ್ಕತಂಗಿಯರು ತಬ್ಬಿಕೊಂಡು ನೋಡುತ್ತಿ ದ್ದಂತೆಯೇ ಈಗಲೂ ಪದ್ಮಾ ಸುಮಿತ್ರೆಯರು ಕುಳಿತಿದ್ದರು. ಕುಳಿತಿದ್ದುದು ಮಾತ್ರ ಹಾಸಿಗೆಯ ಮೇಲೆ. ಬಾಲ್ಯದ ಮಧುರ ಸ್ಮೃತಿ ಕಣ್ಣ ಮುಂದೆ ಬರು ವಂತೆ ಮಾಡಲು ಹೊರಗಿನಿಂದ ಏಕಪ್ರಕಾರ ಮಳೆಸುರಿಯಲು ಆರಂಭಿಸಿತು. ನೆನೆದುಕೊಂಡು ಓಡಿಬಂದಿದ್ದ ಗೋಪಿ ಕೈಲಿದ್ದ ಟವೆಲಿನಿಂದ ತಲೆಯೊರಸಿ ಕೊಂಡು ಕೋಣೆಯ ಬಾಗಿಲ ಬಳಿ ಬಂದುದೂ ಅಕ್ಕ ತಂಗಿಯರಿಗೆ ತಿಳಿಯ ಲಿಲ್ಲ. ಗೋಪಿ ಒಂದು ಕ್ಷಣ ಬಾಗಿಲಲ್ಲೇ ನಿಂತ.

ಆ ಮೇಲೆ ಮಾತ್ರ ಆತನಿಗೆ ನಗು ತಡೆಯಲಾಗಲಿಲ್ಲ.

ಸುಮಿತ್ರೆ ನಾಚಿಕೆಯಿಂದೆದ್ದು ಬಾಲ್ಕನಿಗೆ ಓಡಿದಳು.

೧೭

ಅಂದು ರಾತ್ರಿ ಸುಮಿತ್ರೆ ನಿದ್ರಿಸಿರಲಿಲ್ಲ. ಮುಂಬಯಿಗೆ ಬಂದ ಮೊದಲ ರಾತ್ರಿಯಂತೆಯೇ ಮನಸ್ಸಿನ ವಿಹ್ವಲತೆ ಆಕೆಯನ್ನು ನಿದ್ರಿಸಲು ಬಿಡಲಿಲ್ಲ. ಅವಳು ಮುಂಬಯಿಗೆ ಬರಲು ನಿಶ್ಚಯಿಸಿದಾಗ ತನ್ನ ಆಯುಷ್ಯದ ಒಂದು ಮಹತ್ವದ ನಿರ್ಧಾರವನ್ನು ಮಾಡಿರುವೆನೆಂಬಷ್ಟು ಭೀತಿಯುಂಟಾಗಿತ್ತು. ಆ ನಿರ್ಧಾರದ ಹಿಂದಿನ ಆಸೆ ಕಾರ್ಯರೂಪಕ್ಕೆ ಬರುವ ಮುನ್ನಾದಿನ ರಾತ್ರಿ ಕೂಡಾ ಅದೇ ರೀತಿಯ ಭೀತಿ.

" ಕೆಲಸ ಸಿಗಲಿದೆ. ಸ್ವತಂತ್ರ ಜೀವನ ಆರಂಭವಾಗಲಿದೆ. ಮುಂದೇನು?" ಎಂದು.

ಬೆಳಿಗ್ಗೆ ಮಾತ್ರ ಪದ್ಮಾವತಿಯೇ ಆಕೆಯನ್ನು ಎಬ್ಬಿಸಬೇಕಾಗಿ ಬಂದಿತ್ತು. ನಸುಕು ಹರಿಯುವ ಹೊತ್ತಿಗೆ ಬಂದ ಜಡಿಮಳೆಯ ಪ್ರಭಾವ

ಸುಮಿತ್ರೆಗೆ ಒಮ್ಮೆ ಜೀವ ಬಂದಂತಾಯಿತು. ಆದರೆ ಪದ್ಮಾವತಿಗೆ ಮಾತ್ರ ಎಷ್ಟು ಸಮಾಧಾನವಾಯಿತೋ.

ಆದಿತ್ಯವಾರ ರಾತ್ರೆಯ ತನಕವೂ ಪದ್ಮಾವತಿ ಸುಮಿತ್ರೆಯೊಡನೆ ಪ್ರತ್ಯಕ್ಷವಾಗಿ ಆಕೆಯ ಕೆಲಸದ ವಿಚಾರ ಮಾತನಾಡಲಿಲ್ಲ. ತಂಗಿ ಈಗ ಬಂದಾಳು, ಇನ್ನೊಂದುಗಳಿಗೆಯಲ್ಲಿ ಬಂದಾಳು, ಅಕ್ಕನಿಗೆ ಒಂದು ಜೀವನೋಪಾಯ ದೊರಕಿದುದಕ್ಕಾಗಿ ಸಂತೋಷದಿಂದ ಕುಣಿದಾಡಿಯಾಳು, ತಂಗಿಯ ಇಚ್ಛೆಯ ವಿರುದ್ಧ ಕೆಲಸಮಾಡುತ್ತಿರುವೆನೇ ಎಂಬ ತನ್ನ ಮನಸ್ಸಿನ ತುಮುಲದಿಂದ ತನ್ನನ್ನು ಬಿಡುಗಡೆಮಾಡಿಯಾಳು, ಎಂದು ಯೋಚಿಸುತ್ತಿದ್ದ ಸುಮಿತ್ರೆಗೆ ನಿರಾಶೆಯೇ ಆಯಿತು. ಕೊನೆಗೆ ತನ್ನ ಮನಸ್ಸಿನ ಉದ್ವೇಗವನ್ನು ತಡೆಯಲಾಗದೆ ಭಾನುವಾರ ರಾತ್ರೆ ಗೋಪಿ ಊಟ ಮುಗಿಸಿ ಸಿಗರೇಟು ತರಲೆಂದು ಹೊರಗೆ ಹೋದಾಗ, ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದ ತಂಗಿಯ ಒಳಿ ಹೋಗಿ ಕೇಳಿದಳು.

" ಪದ್ಮಾ!"

" ಏನಕ್ಕಾ ?"

" ನನಗೆ ಖಂಡಿತವಾಗಿ ಒಂದು ಮಾತು ಹೇಳಮ್ಮಾ. ನಾನು ಕೆಲಸಕ್ಕೆ ಹೋಗುವುದು ನಿನಗಿಷ್ಟವಿಲ್ಲವಾದರೆ ನಾನು ಹೋಗುವುದಿಲ್ಲ. ಕೆಲಸ ಹಿಡಿದು ಬದುಕಿಯೇನು ಎಂಬಾಸೆಯಿಂದ ಇಲ್ಲಿಯ ತನಕ ಬಂದೆ. ಆದರೆ ನಾನು ಸಾಕಿದ ತಂಗಿಗೆ ಕಷ್ಟಕೊಟ್ಟು, ಅವಳಿಗೆ ನೆರವಾಗಬೇಕಾದ ಹೊತ್ತಿನಲ್ಲಿ ನಾನು ಅವಳ ಇಚ್ಛೆಯ ವಿರುದ್ಧ ಕೆಲಸಕ್ಕೆ ಹೋಗುವುದಿಲ್ಲ. ಏನು ಮಾಡಲಿ ಪದ್ಮಾ ?"

ಸುಮಿತ್ರೆಯ ಕಣ್ಣಿಂದ ನೀರಿಳಿಯುತ್ತಿತ್ತು. ಪದ್ಮಾವತಿಯ ಸಿಟ್ಟೆಲ್ಲ ಮಂಜಿನಂತೆ ಕ್ಷಣಾರ್ಧದಲ್ಲಿ ಕರಗಿತು. ಅಕ್ಕನ ಕೊರಳಿಗೆ ಜೋತು ಬಿದ್ದು ಬರೇ 'ಅಕ್ಕಾ, ಅಕ್ಕಾ' ಎಂದು ಹೇಳತೊಡಗಿದಳು.

" ನಿನಗೆ ಬೇಸರ ತರಿಸಿ ನಿನ್ನನ್ನು ಬಿಟ್ಟು ಹೋದರೆ ಅಮ್ಮ ಏನು ಹೇಳಿಯಾಳು ಪದ್ಮಾ ?" ಸುಮಿತ್ರೆಯ ಅಳು ಉಕ್ಕಿಯುಕ್ಕಿ ಬರುತ್ತಿತ್ತು.

" ಇಲ್ಲಕ್ಕಾ ಇಲ್ಲ. ಖಂಡಿತವಾಗಿಯೂ ಬೇಸರವಿಲ್ಲ. ನೀನು ಕೆಲಸಕ್ಕೆ ಹೋಗಲೇ ಬೇಕು. ನೀನು ಹೋದರೆ ನಾನೊಬ್ಬಳೇ ಏನು ಮಾಡುವುದೆಂದು

ಇಲ್ಲದ ಸಲ್ಲದ ವಿಚಾರಗಳನ್ನು ಮನಸ್ಸಿಗೆ ಹಚ್ಚಿಕೊಂಡೆ. ನೀನು ಸಂತೋಷದಿಂದ ಹೋಗು ಅಕ್ಕಾ. ನಿನ್ನ ದುಃಖ ಎಷ್ಟೆಂದು ಗೊತ್ತಿದ್ದೂ ನಾನು ನಿನ್ನನ್ನು ಕಟ್ಟಿಹಾಕಿಯೇನೇ ?" ಎಂದು ಪದ್ಮಾವತಿ ಇಷ್ಟು ದಿನ ತಾನು ಅಕ್ಕನೊಂದಿಗಿರಿಸಿದ್ದ ಉದಾಸೀನದ ವ್ಯವಹಾರಕ್ಕೆ ತಿಲಾಂಜಲಿ ಕೊಟ್ಟಳು.

ತಂಗಿಯಿಂದ ಈ ರೀತಿಯ ಸಮಾಧಾನ ದೊರಕಿದಾಗ ಸುಮಿತ್ರೆಯ ಚಂಚಲ ಮನಸ್ಸು ಎಷ್ಟೋ ಹಗುರಾಯಿತು. ಮಂಗಳೂರಿನ ಮನೆಯಲ್ಲಿ, ಹೊರಗೆ ಜಡಿಮಳೆ ಸುರಿಯುತ್ತಿದ್ದಾಗ, ಕರಾವಳಿಯ ಮಳೆಯ ವೈಭವವನ್ನು ಕಿಟಿಕಿಯ ಬಳಿ ಕುಳಿತು ಅಕ್ಕತಂಗಿಯರು ತಬ್ಬಿಕೊಂಡು ನೋಡುತ್ತಿದ್ದಂತೆಯೇ ಈಗಲೂ ಪದ್ಮಾ ಸುಮಿತ್ರೆಯರು ಕುಳಿತಿದ್ದರು. ಕುಳಿತಿದ್ದುದು ಮಾತ್ರ ಹಾಸಿಗೆಯ ಮೇಲೆ. ಬಾಲ್ಯದ ಮಧುರ ಸ್ಮೃತಿ ಕಣ್ಣ ಮುಂದೆ ಬರುವಂತೆ ಮಾಡಲು ಹೊರಗಿನಿಂದ ಏಕಪ್ರಕಾರ ಮಳೆಸುರಿಯಲು ಆರಂಭಿಸಿತು. ನೆನೆದುಕೊಂಡು ಓಡಿಬಂದಿದ್ದ ಗೋಪಿ ಕೈಲಿದ್ದ ಟವೆಲಿನಿಂದ ತಲೆಯೊರಸಿಕೊಂಡು ಕೋಣೆಯ ಬಾಗಿಲ ಬಳಿ ಬಂದುದೂ ಅಕ್ಕ ತಂಗಿಯರಿಗೆ ತಿಳಿಯಲಿಲ್ಲ. ಗೋಪಿ ಒಂದು ಕ್ಷಣ ಬಾಗಿಲಲ್ಲೇ ನಿಂತ.

ಆ ಮೇಲೆ ಮಾತ್ರ ಆತನಿಗೆ ನಗು ತಡೆಯಲಾಗಲಿಲ್ಲ.

ಸುಮಿತ್ರೆ ನಾಚಿಕೆಯಿಂದೆದ್ದು ಬಾಲ್ಕನಿಗೆ ಓಡಿದಳು.

೧೭

ಅಂದು ರಾತ್ರಿ ಸುಮಿತ್ರೆ ನಿದ್ರಿಸಿರಲಿಲ್ಲ. ಮುಂಬಯಿಗೆ ಬಂದ ಮೊದಲ ರಾತ್ರಿಯಂತೆಯೇ ಮನಸ್ಸಿನ ವಿಹ್ವಲತೆ ಆಕೆಯನ್ನು ನಿದ್ರಿಸಲು ಬಿಡಲಿಲ್ಲ. ಅವಳು ಮುಂಬಯಿಗೆ ಬರಲು ನಿಶ್ಚಯಿಸಿದಾಗ ತನ್ನ ಆಯುಷ್ಯದ ಒಂದು ಮಹತ್ವದ ನಿರ್ಧಾರವನ್ನು ಮಾಡಿರುವೆನೆಂಬಷ್ಟು ಭೀತಿಯುಂಟಾಗಿತ್ತು. ಆ ನಿರ್ಧಾರದ ಹಿಂದಿನ ಆಸೆ ಕಾರ್ಯರೂಪಕ್ಕೆ ಬರುವ ಮುನ್ನಾದಿನ ರಾತ್ರಿ ಕೂಡಾ ಅದೇ ರೀತಿಯ ಭೀತಿ.

" ಕೆಲಸ ಸಿಗಲಿದೆ. ಸ್ವತಂತ್ರ ಜೀವನ ಆರಂಭವಾಗಲಿದೆ. ಮುಂದೇನು?" ಎಂದು.

ಬೆಳಿಗ್ಗೆ ಮಾತ್ರ ಪದ್ಮಾವತಿಯೇ ಆಕೆಯನ್ನು ಎಬ್ಬಿಸಬೇಕಾಗಿ ಬಂದಿತ್ತು. ನಸುಕು ಹರಿಯುವ ಹೊತ್ತಿಗೆ ಬಂದ ಜಡಿಮಳೆಯ ಪ್ರಭಾವ

ದಿಂದ ಸುಮಿತ್ರೆ ಒಂದರ್ಧ ತಾಸು ನಿದ್ರಿಸಿದ್ದಳಷ್ಟೆ. ಪದ್ಮಾವತಿ ಬಂದು ಕರೆದಳು.

"ಏಳಕ್ಕ. ಯಾವಾಗಿನ ಹಾಗಲ್ಲ. ಇವೊತ್ತು ಆಫೀಸು ಬೇರೆ ಇದೆ."

ಕಣ್ಣೊರಸಿಕೊಂಡು, ಮುಖ ತೊಳೆದುಕೊಂಡು ಅಂದು ಪದ್ಮಾವತಿಯೇ ಮಾಡಿದ್ದ ಕಾಫಿ ಕುಡಿಯಲು ಬಂದಾಗ ಗೋಪಿ ಚೇಷ್ಟೆಗಾಗಿ ಕೇಳಿದ.

"ಆಫೀಸು ಆರಂಭವಾಗುವುದಕ್ಕೆ ಮೊದಲೇ ಆಫೀಸು ಜೀವನದ ಆಲಸ್ಯ ಅಂಟಿಕೊಂಡಿತೇನು ?"

ಸುಮಿತ್ರೆ ರಾತ್ರಿಯಿಡೀ ನಿದ್ದೆಯಿಲ್ಲದೆ ಕಳೆದಿದ್ದಳೆಂದು ಅವರಿಬ್ಬರೂ ತಿಳಿದಿರಲಿಲ್ಲ.

ಗೋಪಿಯ ಜೊತೆಗೇ ಸುಮಿತ್ರೆ ಹೊರಡುವ ಸಿದ್ಧತೆ ನಡೆಸಿದಳು. ಬಂದು ಮೂರು ತಿಂಗಳಾದರೂ ಮುಂಬಯಿಯ ಅಲ್ಪ ಪರಿಚಯವಿದ್ದ ಅವಳಿಗೆ ಇಂದು ಗೋಪಿಯೇ ಮಾರ್ಗದರ್ಶಕನಾಗಬೇಕಿತ್ತು.

ಹೊರಡುವ ಮುಂಚೆ ಸುಮಿತ್ರೆ ಕುಸುಮಾವತಿಯನ್ನು ಕಂಡು ಬಂದಿದ್ದಳು. ಕೆಲಸ ಸಿಗುವುದೆಂಬ ಹಿಗ್ಗಿನಲ್ಲಿ ಆಕೆ ಕೂಡ ಸುಮಿತ್ರೆಯೊಂದಿಗೆ ಭಾಗವಹಿಸಿದ್ದಳಾದರೂ "ಇದು ಅನುಭವಕ್ಕಾಗಿ ಇರಲಿ ಸುಮಿತ್ರಾ. ಆದರೆ ಇದನ್ನೇ ಶಾಶ್ವತವಾಗಿ ನೆಚ್ಚಿಕೊಳ್ಳುವ ಜೀವನವೆಂದು ಬಗೆಯಬೇಡ." ಎಂದು ಎರಡು ಮೂರು ಬಾರಿ ಹೇಳಿದ್ದಳು.

ಸುಮಿತ್ರೆಗೆ ಆ ಮಾತು ಕೇಳಿದಾಗಲೆಲ್ಲ, ಹಾಗಾದರೆ ತನಗೆ ಮದುವೆಯೊಂದಲ್ಲದೆ ಬೇರೆ ವಿಮೋಚನೆಯ ದಾರಿಯೇ ಇಲ್ಲವೇ ಎಂಬ ವಿಚಾರ ಮನಸ್ಸಿನ ಕಾರ್ಯ ಕ್ಷೇತ್ರವನ್ನು ಪ್ರವೇಶಿಸುತ್ತಿತ್ತು.

ಇಂದು ಕೂಡ ಕುಸುಮಾವತಿ ಹೇಳಿದುದು ಅದೇ ಮಾತನ್ನು.

"ಹೋಗು. ಹೋಗಿನೋಡು. ಸಮಾನತೆಯ ಯುಗ ಇದು. ಸ್ವಾತಂತ್ರ್ಯ ಸಾಧ್ಯ ಎಂದು ಉದ್ಯೋಗಜೀವನ ಹೇಳಿಕೊಡುವುದಾದರೆ ಅದರ ಹಿಂದಿರುವ ಪ್ರಲೋಭನಗಳ ಸೀಮೆಗಿಳಿಯುವುದು ಅಪಾಯಕರವೆಂದೂ ಅದು ಹೇಳಿಕೊಡಬಹುದು. ಒಂದು ವರ್ಷ ಒಬ್ಬಳ ಆಯುಷ್ಯದಲ್ಲಿ ಬಹಳ ಹೆಚ್ಚಿನ ಸಮಯವಲ್ಲ ಸುಮಿತ್ರಾ. ಈ ಕೆಲಸ ಸೇರುವುದಿಲ್ಲವೆಂದಾದರೆ ಬೇರೆ ದಾರಿ ಹುಡುಕಬಹುದು."

ಗೋಪಿ ಕಾಯುತ್ತಿದ್ದ. ಪದ್ಮಾವತಿಗೆ ಕೆಲಸಕ್ಕೆ ಹೊರಟ ಅಕ್ಕನನ್ನು ನೋಡಿದಾಗ ಏಕೋ ದುಃಖ ತುಂಬಿ ಬಂತು. ಸುಮಿತ್ರೆ ತನ್ನ ಮನಸ್ಸಿನ ಯಾವ ಭಾವವೂ ಹೊರಗೆ ಪ್ರಕಟವಾಗದಂತೆ ತುಂಬ ಪ್ರಯತ್ನಿಸಿದಳು. ಆದರೂ ಬಾಗಿಲ ಬಳಿಗೆ ಬಂದಿದ್ದ ತನಗೆ, ಊಟ ಮುಗಿದು ಅರ್ಧ ತಾಸು ಕೂಡ ಆಗಿರದಿದ್ದರೂ, ಕುಡಿಯಲೆಂದು ಒಂದು ಲೋಟ ತುಂಬ ಹಾಲು ಹಿಡಿದುಕೊಂಡು ಬಂದ ತಂಗಿಯನ್ನು ನೋಡಿದಾಗ ಮಾತ್ರ ಅಳು ಬಂತು.

"ಏನೇ ಪದ್ಮಾ. ಊರು ಬಿಟ್ಟು ಹೋಗುವವರಿಗೆ ಮಾಡುವ ರೀತಿಯ ಉಪಚಾರ ಮಾಡುತ್ತೀಯಲ್ಲಾ?" ಎಂದು ಕಣ್ಣ ಹನಿಯನ್ನು ಹರಿಯಗೊಡು ತ್ತಲೇ ಕೇಳಿದಳು.

ಪದ್ಮಾವತಿ ಮಾತನಾಡಲಿಲ್ಲ.

ಗೋಪಿಗೂ ಸುಮಿತ್ರೆಯನ್ನು ಕರೆದೊಯ್ಯುವುದು ಒಂದು ರೀತಿಯಲ್ಲಿ ಹೊಸ ಅನುಭವ. ಸುಮಿತ್ರೆಯೊಂದಿಗೆ ಏಕಾಂತದಲ್ಲಿ ಮಾತನಾಡುವ ಸಂದರ್ಭಗಳೇನೋ ಬೇಕಾದಷ್ಟು ಬಂದಿದ್ದುವಾದರೂ ಜೊತೆಗೂಡಿ ಪ್ರಯಾಣ ಮಾಡಬೇಕಾಗಿ ಬಂದುದು ಇದೇ ಮೊದಲು. ಅಂದರೆ ಎಲ್ಲ ಹೆಂಗಸರೊಂದಿಗೆ ವ್ಯವಹರಿಸುವಾಗ ತುಂಬ ಸಂಕೋಚ ತಂದುಕೊಳ್ಳುವ ವ್ಯಕ್ತಿ ಗೋಪಿ ಯೆಂದಲ್ಲ. ಆದರೆ ಸುಮಿತ್ರೆಯೊಂದಿಗೆ ಯಾವ ವ್ಯವಹಾರದಲ್ಲೂ ಏಕೋ ಒಂದು ರೀತಿಯ ಭಯ ಆತನನ್ನು ಕಾಡುತ್ತಿತ್ತು. ತಾನು ಯಾವುದಾದ ರೊಂದು ಮಾತಿನಲ್ಲಿ ಯಾವುದಾದರೊಂದು ನಡವಳಿಕೆಯಲ್ಲಿ ತಪ್ಪಿದರೆ ಅವಳ ದೃಷ್ಟಿಯನ್ನೆದುರಿಸಲಾರೆ, ಅವಳ ಮಾತನ್ನಿದಿರಿಸಲಾರೆ ಎಂಬ ಸಂಶಯ ಅವನಲ್ಲಿತ್ತು.

ಇಂದು ಸುಮಿತ್ರೆಯನ್ನು ಅವಳ ಆಫೀಸಿಗೆ ಮೊದಲಬಾರಿ ಕರೆದು ಕೊಂಡು ಹೋಗುವಾಗಲೂ ಅದೇ ರೀತಿಯ ಕಳವಳ. ಆದರೆ ಸುಮಿತ್ರೆ ಒಂದು ಮಾತೂ ಆಡಲಿಲ್ಲ. ಮಾತನಾಡುವಷ್ಟು ವ್ಯವಧಾನ ಅವಳ ಮನಸ್ಸಿ ಗಿರಲಿಲ್ಲವೆಂದರೂ ಸರಿಯೆ. ಯಂತ್ರದಂತೆ ಗೋಪಿಯನ್ನನುಸರಿಸಿದ್ದಳು. ತಾನು ಫಸ್ಟ್ ಕ್ಲಾಸ್‌ನಲ್ಲಿ ಪ್ರಯಾಣಮಾಡುವವನಾದುದರಿಂದ ಸುಮಿತ್ರೆಗೂ ಗೋಪಿ ಫಸ್ಟ್ ಕ್ಲಾಸ್ ಟಿಕೇಟು ಕೊಂಡುಕೊಂಡಾಗ ಅವಳು ಮಾತ ನಾಡಲಿಲ್ಲ. ವಿ. ಟಿ. ಯಲ್ಲಿಳಿದು 'ಟ್ಯಾಕ್ಸಿ' ಮಾಡಿದಾಗಲೂ ಅವಳು

ಯಾಕೆ ?' ಎಂದು ಕೇಳಲಿಲ್ಲ. "ದಾರಿ ಚೆನ್ನಾಗಿ ನೋಡಿಕೊ. ಸಂಜೆ ನೀನು ಒಬ್ಬಳೇ ಬರಬೇಕಾಗುತ್ತದೆ." ಎಂದಾಗ ಮಾತ್ರ ನಕ್ಕಿದ್ದಳಷ್ಟೆ.

ಸುಮಿತ್ರೆಯ ಆಫೀಸು ತಲುಪಿದ ಮೇಲೆ ಗೋಪಿ ಹೆಚ್ಚು ಹೊತ್ತು ಅಲ್ಲಿ ನಿಲ್ಲಲಿಲ್ಲ. ತನ್ನ ಗೆಳೆಯರಿಗೆ ಅವಳ ಪರಿಚಯ ಮಾಡಿಸಿಕೊಟ್ಟವನೇ "ಎಲ್ಲ ಇವರು ಹೇಳುತ್ತಾರೆ ಸುಮಿತ್ರಾ. ಏನೂ ಹೆದರಬೇಕಾದುದಿಲ್ಲ." ಎಂದು ಹೇಳಿ ಹೊರಟು ಹೋಗಿದ್ದ.

ಸುಮಿತ್ರೆ ಹೆದರಬೇಕಾದಂಥ ಪ್ರಮೇಯ ನಿಜಕ್ಕೂ ಅಲ್ಲಿರಲಿಲ್ಲ. ಆದರೆ ಮಂಗಳೂರಿನಿಂದ ಬಂದ ಹುಡುಗಿಯಾಗಿ ಮುಂಬಯಿಯ ಸೂಕ್ಷ್ಮ ಪರಿಚಯವಿರದೆ, ವಿದ್ಯಾರ್ಥಿದೆಸೆಯ ಸೀಮಿತ ಕಾರ್ಯಕ್ಷೇತ್ರದಿಂದ ಅಧಿಕಾರ ಉತ್ಪನ್ನಗಳ ಸೀಮಾತೀತ ವಿಶಾಲ ಜಗತ್ತಿಗಿಳಿಯುವಾಗ ಕೊಂಚ ಕಳವಳವೇ ಆಯಿತು.

"ಆರಂಭಕ್ಕೆ ನೂರು ರೂಪಾಯಿ ಕೊಡುತ್ತಾರೆ. 'ಎಲವೆನ್ಸ್' ಬೇರೆಯಿದೆ. ಮುಂದೆಲ್ಲ ಕೆಲಸದ ಯೋಗ್ಯತೆ, ನಿಮ್ಮ ಯೋಗ್ಯತೆಯನ್ನವಲಂಬಿಸಿವೆ. ಕೆಲಸವೇನೂ ಕೆಟ್ಟದ್ದಲ್ಲ. ನಿಮಗೆ ಯಾವುದೇ ವಿಚಾರದಲ್ಲಿ ಸಂದೇಹವಿದ್ದರೆ, ಅಥವಾ ಬೇಸರವಾಗುವಂಥ ಪ್ರಸಂಗ ಜರಗಿದರೆ, ಮೊದಲು ಬಂದು ನನ್ನೊಡನೆ ಹೇಳಿ" ಎಂದು ಗೋಪಿಯ ಸ್ನೇಹಿತರು ಹೇಳಿದಾಗ ಸುಮಿತ್ರೆ 'ಹೂಂ' ಎಂದಳಷ್ಟೆ.

ತಿಂಗಳಿಗೆ ನೂರೆಂಭತ್ತು ರೂಪಾಯಿಗಳ ಸ್ವಾತಂತ್ರ್ಯ !

ಅಪ್ಪಯ್ಯ ೨೫ ವರ್ಷ ಕೆಲಸ ಮಾಡಿ ಪಡೆಯುತ್ತಿದ್ದ ಸಂಬಳ ಬರೀ ಎಪ್ಪತ್ತು ರೂಪಾಯಿ. ಮೆಟ್ರಿಕ್ ಮುಗಿಸದೆಯೂ ತನಗೆ ನೂರ ಎಂಭತ್ತು !

ನೂರ ಎಂಭತ್ತರ ವಿಶಾಲ ಪ್ರಪಂಚ ಒಂದು ಕ್ಷಣ ಜಗತ್ತಿನ ಐಶ್ವರ್ಯವನ್ನೆಲ್ಲ ಸುಮಿತ್ರೆಯ ಮುಂದೆ ತಂದು ಸುರುವಿದಂತಿತ್ತು.

ಆ ರೀತಿಯ ಅನುಭವ ಆಕೆಗೆ ಹೊಸದು.

ಕೆಲಸದ ಪರಿಚಯವಾಗಲು ಹೆಚ್ಚು ಸಮಯ ಹಿಡಿಯಲಿಲ್ಲ. ಗಂಡಸರೊಂದಿಗೆ ಮಾತನಾಡುವಾಗ ಒಂದೆರಡು ಘಂಟೆ ಕಾಲ ಮಾತ್ರ ತುಂಬ ಸಂಕೋಚವಾಯಿತು. ಆದರೆ ಅವಳಂತೆಯೇ ಇನ್ನೂ ನಾಲ್ಕಾರು ಹೆಂಗಸರು ಅದೇ ಆಫೀಸಿನಲ್ಲಿ ದುಡಿಯುವ ವರ್ಗದಲ್ಲಿದ್ದುದರಿಂದ, ಆಫೀಸಿನ

ವ್ಯವಹಾರ ತುಂಬ ಕಷ್ಟವಾಗಲಿಲ್ಲ; ಹೇಳಿದ ಕೆಲಸದಲ್ಲಿ ಮಾತಿಲ್ಲದ ತನ್ಮಯತೆ ತಂದುಕೊಂಡು ಸುಮಿತ್ರೆ ದಿನ ಕಳೆದಳು. ಮಧ್ಯಾಹ್ನದ ಬಿಡುವಿನ ವೇಳೆಯಲ್ಲಿಯೂ ಆಕೆ ಆಫೀಸು ಬಿಟ್ಟು ಹೋಗುವ ಸಾಹಸ ಮಾಡಲಿಲ್ಲ. "ಇದಾವ ರೀತಿಯ ವಿಚಿತ್ರ ಪ್ರಾಣಿ ?" ಎಂದು ಬೇರೆಯವರು ಭಾವಿಸಿದರೂ ಚಿಂತಿಲ್ಲವೆಂದು ತನ್ನ ಜಾಗ ಬಿಟ್ಟು ಕದಲಲಿಲ್ಲ.

ಸಂಜೆ ಬಿಡುಗಡೆಯ ಐದು ಘಂಟೆ ಬಂದಾಗ ಮಾತ್ರ ಆಕೆ ಎಲ್ಲರಿಗಿಂತ ಮುಂಚೆ ಹೊರಡುವ ಅವಸರದಲ್ಲಿದ್ದಳು.

ಆಗಿನ ಅವಳ ಸಂತೋಷ ಒಂದುರೀತಿಯ ಉನ್ಮಾದವೇ ಆಗಿದ್ದಿರಲೂ ಬಹುದು. ತನ್ನ ಆರ್ಥಿಕ ಸ್ವಾತಂತ್ರ್ಯ ಎಲ್ಲ ದುಃಖಗಳ ಬಿಡುಗಡೆಯ ಹಾದಿಯನ್ನು ಖಂಡಿತವಾಗಿ ತೋರಿಸುವುದು ಎಂಬ ಭರವಸೆ ಆಕೆಯ ಮನಸ್ಸಿನ ಮೇಲೆ ಆಗ ಮಾಡಿದ ಪರಿಣಾಮ ಇಷ್ಟೇ ಎಂದು ಹೇಳುವಂತಿಲ್ಲ.

ಗೋಪಿ ಹೇಳಿದ್ದ ದಾರಿಯ ನೆನಪೂ ಆಕೆಗೆ ಅಗತ್ಯವಿರಲಿಲ್ಲ. ಆಕೆಯ ಸಂತೋಷವೇ ಆಕೆಗೆ ಹಾದಿ ತೋರಿಸುತ್ತಿದ್ದಿತೆಂದರೂ ಸರಿಯೆ. ಇದೇ ವಿಜಯದ ಹುಚ್ಚುಹೊಳೆಯಿಂದಾಗಿಯೇ, ಆಕೆ ಸೀದಾ ತಂಗಿಯ ಕಡೆ ಧಾವಿಸದೆ ಶೀಲೆಯನ್ನು ಕಂಡು ಹೋಗೋಣ, ತನ್ನ ಕೆಲಸದ ವಿಚಾರವನ್ನು ಆಕೆಗೆ ತಿಳಿಸಿ ಮತ್ತೆ ಮನೆಯ ಕಡೆ ಹೋದರಾಯಿತು ಎಂದು ದಾದರಿನಲ್ಲಿಳಿದು ಹಿಂದೂ ಕಾಲನಿಯ ದಾರಿ ಹಿಡಿದಳು.

ಶೀಲೆಯ ಮನೆಯ ಬಾಗಿಲು ಸದ್ದು ಮಾಡಿದಾಗ ಸುಮಿತ್ರೆಗೆ ಒಂದು ಆಶ್ಚರ್ಯ ಕಾದಿತ್ತು. ಬಾಗಿಲು ತೆಗೆದುದು ಮೋಹನ. ಸುಮಿತ್ರೆ ಕೊಂಚ ಸಮಯ ಅವಾಕ್ಕಾದಳು. ಅದೂ ಮೋಹನ ಡಾಕ್ಟರ್ ಮೋಹನರಾಯರಂತಿರಲಿಲ್ಲ. ಕೈತುಂಬ ಮಸಿಯಿದ್ದುದರಿಂದ 'ಸ್ಟವ್' ಹಿಡಿದು ಏನೋ ಆಟ ನಡೆಸಿದ್ದಾರೆಂದು ಹೇಳಬಹುದಿತ್ತು. ಮುಖವೆಲ್ಲ ಬೆವರಿತ್ತು. ಮೋಹನ ಸಾದಾ ಉಡುಪಿನಲ್ಲಿದ್ದ.

"ಅರೆ ! ನೀನು. ನಾನು ಅವಳು ಬಂದಳೋ ಎಂದೆಣಿಸಿದ್ದೆ. ಇನ್ನೂ ಹೊರಡುವ ಆಲೋಚನೆಯಲ್ಲಿಲ್ಲವೆ ?"

"ಶೀಲಕ್ಕ ಮನೆಯಲ್ಲಿಲ್ಲವೆ ?" ಎಂದು ಸುಮಿತ್ರೆ ತುಸು ಅಧೈರ್ಯದಿಂದಲೇ ಕೇಳಿದಳು.

" ನೀನು ಮನೆಯಲ್ಲಿರಲಿಲ್ಲವೆ? ನಿಮ್ಮಲ್ಲಿಗೇ ಹೋಗಿದ್ದಳಲ್ಲ ಮಧ್ಯಾಹ್ನ ಬಿಸಿಲಿಗೆ ?" ಎಂದು ಮೋಹನ ಮರುಸವಾಲು ಹಾಕಿದ.

ಸುಮಿತ್ರೆಗೆ ಇದ್ದ ತುಸು ಧೈರ್ಯವೂ ಈ ಪ್ರಶ್ನೆಯಿಂದಾಗಿ ಮಾಯವಾಯಿತು. ಆದರೂ ಆಕೆ ಸರಿಯಾದ ಉತ್ತರ ಕೊಡದಿರುವಂತಿರಲಿಲ್ಲ.

" ಇಲ್ಲ. ನಾನು ಮನೆಯಲ್ಲಿರಲಿಲ್ಲ. ಬಹಳ ಬೇಗ ಹೋಗಿದ್ದರೇನು ?"

" ಊಟ ಮಾಡಿ ಒಂದು ಕ್ಷಣ ಕೂಡ ನಿಲ್ಲಲಿಲ್ಲ. ಮೂರು ಘಂಟೆಗೆ ಬರುತ್ತೇನೆಂದಳು. ಇನ್ನೂ ಕಾಣೆ. ನಾನು ಡಿಸ್ಪೆನ್ಸರಿಗೆ ಹೋಗಬೇಕೆನ್ನುವ ವಿಚಾರವೂ ಅವಳಿಗೆ ಮರೆತು ಹೋಯಿತೆಂದು ಕಾಣುತ್ತದೆ."

ಮೋಹನನ ಕೈಯ ಮುಸಿ 'ಸ್ಟವ್'ನ ಇತಿಹಾಸ ಹೇಳುತ್ತಿತ್ತು. ಸುಮಿತ್ರೆಗೆ ಎಲ್ಲಿಲ್ಲದ ಧೈರ್ಯ ಬಂತು.

" ಏನು ತಡವಾಯಿತೊ. ನೀವು ಕಾಫಿ ಕೂಡ ಕುಡಿಯಲಿಲ್ಲವೆಂದು ಕಾಣುತ್ತದೆ. ನಾನು ಈಗ ಹತ್ತು ನಿಮಿಷಗಳಲ್ಲಿ ಮಾಡಿಕೊಡುತ್ತೇನೆ."

ಮೋಹನ " ಛೆ ! ಛೆ ! ಹಾಗೇನೂ ಇಲ್ಲ. ಈಗ ಬಂದಾಳು ಅವಳು" ಎಂದು ಹೇಳಿದನಾದರೂ ಹೊತ್ತಾಗಿ ಹೋಗಿದೆಯೆಂಬ ಅವಸರ ಅವನ ಮುಖದಲ್ಲಿ ವ್ಯಕ್ತವಾಗುತ್ತಿತ್ತು.

ಸುಮಿತ್ರೆ ಮೋಹನನಿಗೆ ಉತ್ತರಕೊಡಲಿಲ್ಲ. ಸೀದ ಅಡುಗೆಯ ಮನೆಯ ಕಡೆ ನಡೆದಳು. ಅಲ್ಲಿ ' ಸ್ಟವ್'ನ ಭಾಗಗಳೆಲ್ಲ ಅಸ್ತವ್ಯಸ್ತವಾಗಿ ಬಿದ್ದಿರುವುದನ್ನು ಕಂಡು ಆಕೆಗೆ ನಗು ತಡೆಯಲಾಗಲಿಲ್ಲ.

" ಹಾಳಾದ ಸ್ಟವ್ ಕೂಡ ಕೆಟ್ಟು ಹೋಗಿದೆ. ನೀನೇನೂ ಮಾಡುವುದು ಬೇಡ ಸುಮಿತ್ರಾ. ನಾನು ಈಗಲೇ ಹೋಗಬೇಕಾಗಿದೆ. ಹೊತ್ತಾಯಿತು." ಎಂದು ಮೋಹನ ಹೇಳಿದಾಗಲೂ ಸುಮಿತ್ರೆ ಮಾತನಾಡಲಿಲ್ಲ.

' ಸ್ಟವ್' ಏನಾಗಿದೆಯೆಂದು ನೋಡಿ, ಬೇಗ ಬೇಗ ಎಣ್ಣೆ ತುಂಬಿ ಹಚ್ಚಿ ಕಾಫಿಗೆ ನೀರಿಟ್ಟಾಗ ಅದೇ ಅಡುಗೆಯ ಮನೆಯ ಬಾಗಿಲಿಗೆ ಬಂದ ಮೋಹನನಿಗೆ ಆಶ್ಚರ್ಯವಾಯಿತು.

" ಅಷ್ಟು ಬೇಗ ' ಸ್ಟವ್' ಸರಿಯಾಯಿತೇನು ?"

" ಅದಕ್ಕೆ ಆಗಿದ್ದಾದರೂ ಏನು ? ಎಣ್ಣೆ ಮಾತ್ರ ಬರಿದಾಗಿದ್ದಿತಷ್ಟೆ."

" ಅಷ್ಟೆಯೆ ? ಆದರೆ ಇವೊತ್ತು ಬೆಳಿಗ್ಗೆ ಅವಳು ಎಣ್ಣೆ ತುಂಬಿದ್ದನ್ನು ನಾನು ನೋಡಿದ್ದೆ. ಅಷ್ಟು ಬೇಗ ಅದು ಖರ್ಚಾಗಿ ಹೋಯಿತೆ ?"

ಮೋಹನನ ಮುಗ್ಧತೆಯ ಪರಿಚಯ ಸುಮಿತ್ರೆಗೆ ಇದೇ ಮೊದಲು. ಮಂಗಳೂರಲ್ಲಿ ತಾನು ರಂಗವಲ್ಲಿ ಬಿಡಿಸುತ್ತಿದ್ದಾಗ ಗೋಪಿ ಅಣ್ಣನ ಕುರಿತಾಗಿ ಆಡಿದ್ದ ಮಾತುಗಳು ಈಗ ನೆನಪಿಗೆ ಬಂದವು.

" ಅಣ್ಣ ಒಂದು ದಿನವೂ ಅತ್ತಿಗೆಯನ್ನು ಬಿಟ್ಟಿರಲಾರ. ಅವಳಿಲ್ಲದಿದ್ದರೆ ಮನೆಯೆಲ್ಲ ಅವ್ಯವಸ್ಥೆ."

" ಮನುಷ್ಯರ ಪರೀಕ್ಷೆ ಮಾಡಿ ಮಾತ್ರ ಅಭ್ಯಾಸ ನಿಮಗೆ. ಸ್ಟವ್‌ನ ನಾಡಿಯ ಬಡಿತ ಹೇಗೆ ಗೊತ್ತಾದೀತು." ನೀರು ಕುದಿಯುತ್ತಿದ್ದಂತೆ, ಸುಮಿತ್ರೆ ಕೇಳಿದಳು.

ಬಾಗಿಲಲ್ಲೇ ನಿಂತಿದ್ದ ಮೋಹನನಿಗೆ ನಗು ತಡೆಯಲಾಗಲಿಲ್ಲ. ಸುಮಿತ್ರೆಗೆ ಆ ನಗು ಇನ್ನಷ್ಟು ಆತ್ಮವಿಶ್ವಾಸವನ್ನು ತಂದುಕೊಟ್ಟಿತು.

ಮೋಹನನನ್ನು ಮೊದಲು ಕಂಡ ಸಂದರ್ಭದಲ್ಲಿ ಉಂಟಾದ ಅಪಮಾನದ ನೋವು ಇನ್ನೂ ಹೋಗಿರಲಿಲ್ಲವಾದರೂ ಆತನೊಡನೆ ಆಗೊಮ್ಮೆ ಈಗೊಮ್ಮೆ ನಾಲ್ಕೆಂಟು ಬಾರಿ ಮಾತನಾಡಿದ ಅನುಭವವಿತ್ತು. ಆದರೆ ಮೋಹನ ಪದ್ಮಾವತಿಯೊಡನೆ ತೋರಿದಷ್ಟು ಸಲಿಗೆಯಿಂದ ತನ್ನೊಡನೆಯೂ ಮಾತನಾಡಬಲ್ಲ ಎಂದು ಆಕೆಗೆ ತಿಳಿದುದು ಮಾತ್ರ ಇಂದೇ.

" ಮೂರು ಘಂಟೆಗೆ ಬರುತ್ತೇನೆಂದು ಹೋಗಿದ್ದವಳಿಗೆ ಘಂಟೆ ಆರಾದರೂ ಮನೆಯ ವಿಚಾರ ಯೋಚನೆಯಾಗಬೇಡವೆ?" ಮೋಹನ ತನ್ನನ್ನೆ ತಾನು ಕೇಳಿಕೊಂಡಂತೆ, ಮಾತನಾಡಿದ್ದನಾದರೂ ಪ್ರಶ್ನೆಯನ್ನುದ್ದೇಶಿಸಿದ್ದುದು ಸುಮಿತ್ರೆಗೆ.

ಆದರೆ ಇದರಿಂದ ಸುಮಿತ್ರೆಯ ಮನಸ್ಸಿನ ಕಳವಳವೂ ಹೆಚ್ಚಾಯಿತು. ಶೀಲೆ ಗಂಡನಿಗೆ ಉಪದ್ರಕೊಡುವಷ್ಟರ ಮಟ್ಟಿಗೆ ಹೊತ್ತುಮಾಡಿ ಬರುವಂಥ ಪ್ರಸಂಗವೆಂದರೆ ಏನಾದರೂ ಅಂಥ ಅಗತ್ಯದ ಕೆಲಸವಿದ್ದಿರಬೇಕು. ಪದ್ಮಾವತಿಯೊಡನೆ ಅಂಥ ಕೆಲಸವೇನಿದೆ ?

ಎಲ್ಲಾದರೂ....!

ಸುಮಿತ್ರೆಗೆ ಶುಕ್ರವಾರದ ನೆನಪು ಬಂದು ಹೆದರಿಕೆಯಾಯಿತು.

“ ಪದ್ಮಾಳಿಗೆ ಸೌಖ್ಯವಿಲ್ಲವೆ ?”

ಬೆಚ್ಚಿ ಬಿದ್ದಂತೆ ಸುಮಿತ್ರೆ ಈ ಮಾತು ಆಡಿದ್ದಳು. ಮೋಹನ ಡಿಸ್ಪೆನ್ಸರಿಗೆ ಹೋಗಲೆಂದು ಬಟ್ಟೆ ಧರಿಸುತ್ತಿದ್ದವನು “ ಪದ್ಮೆಗೆ ಏನಾಗಿದೆ ?” ಎಂದು ಕೇಳಿದ.

“ ಏನಿಲ್ಲ. ಮೊನ್ನೆ ಶುಕ್ರವಾರ ಒಮ್ಮೊಂದೊಮ್ಮೆಗೆ ಕಣ್ಣು ಕತ್ತಲೆ ಕವಿದಂತಾಗಿ ಬಿದ್ದು ಬಿಟ್ಟಿದ್ದಳು. ಅಲ್ಲೇ ಪಕ್ಕದ ಮನೆಯ ಡಾಕ್ಟರರು ನೋಡಿ ‘ ಏನೂ ಗಾಬರಿಯಿಲ್ಲ ’ ಎಂದು ಹೇಳಿ ಹೋಗಿದ್ದರು. ಇವೊತ್ತು ಶೀಲಕ್ಕ ಇಷ್ಟು ತಡಮಾಡಿರುವುದನ್ನು ನೋಡುವಾಗ ಹಾಗೇನಾದರೂ ಆಗಿದೆಯೋ ಎಂದು ಸಂದೇಹ ಬಂತು.” ಎಂದು ಬೇಗ ಬೇಗ ಕಾಫಿ ಸೋಸಿ ಹಾಲು ಬೆರೆಸುತ್ತ ಸುಮಿತ್ರೆ ಹೇಳಿದಳು.

ಮೋಹನ ಒಂದು ಕ್ಷಣ ಸುಮ್ಮಗಿದ್ದು ಆಮೇಲೆ ಕೇಳಿದ

“ ನೀನು ಮನೆಯಲ್ಲಿರಲಿಲ್ಲವೇನು ಇವೊತ್ತು ? ”

ಈಗ ಸುಮಿತ್ರೆ ಸುಳ್ಳಾಡುವಂತಿರಲಿಲ್ಲ. ವಿಷಯ ಬದಲಿಸುವಂತೆಯೂ ಇರಲಿಲ್ಲ.

“ಇಲ್ಲ. ನಾನು ಬೆಳಿಗ್ಗೆ ಕೆಲಸಕ್ಕೆ ಹೋದವಳು ಈಗ ಬರುತ್ತಿದ್ದೇನಷ್ಟೆ.”

“ ಕೆಲಸಕ್ಕೆ ? ” ಮೋಹನ ಆಶ್ಚರ್ಯದಿಂದ ಕೇಳಿದ. “ಎಂಥ ಕೆಲಸ?”

ಸುಮಿತ್ರೆಗೆ ಈಗ ಮಾತನಾಡುವಾಗ ಇನ್ನಷ್ಟು ಕಷ್ಟವಾಯಿತು.

“ ಕೆಲಸಕ್ಕೆಂದೇ ಮುಂಬಯಿಗೆ ಬಂದೆ. ಭಾವನ ಸಹಾಯದಿಂದ ಒಂದು ಕೆಲಸ ಸಿಕ್ಕಿತು. ಅದೂ ಇವೊತ್ತೇ ಮೊದಲನೆಯ ದಿನ. ಮನೆಗೆ ಹೋಗುವಾಗ ಶೀಲಕ್ಕನನ್ನು ಕಂಡು ಹೋಗೋಣ ಎಂದು ಬಂದೆ. ಈಗ ಇನ್ನು ಮನೆಯಲ್ಲಿ ಏನಾಗಿದೆಯೊ ? ” ಸುಮಿತ್ರೆ ಕಾಫಿಯ ಲೋಟವನ್ನು ಮೋಹನನ ಮುಂದಿರಿಸಿ ಪಾತ್ರೆಗಳನ್ನೆಲ್ಲ ಸರಿಪಡಿಸಿಡುತ್ತಿದ್ದಂತೆ ಹೇಳಿದಳು.

ಮೋಹನ ಕಾಫಿ ಕುಡಿಯುತ್ತಿದ್ದವನು ಏನನ್ನೋ ಆಲೋಚಿಸುತ್ತಿದ್ದ. ಸುಮಿತ್ರೆಗೆ ತಂಗಿಯ ಕುರಿತು ಚಿಂತೆ ಹೆಚ್ಚಾಗತೊಡಗಿತು.

“ ಒಮ್ಮೆ ನೀವೂ ಬಂದು ಪದ್ಮೆಯನ್ನು ನೋಡುತ್ತೀರೇನು ? ಶೀಲಕ್ಕ ತಡಮಾಡಿರುವುದನ್ನು ನೋಡುವಾಗ ಏನೋ ಗಲಾಟೆಯಾಗಿರಬಹುದೆಂದು ನನಗೆ ಹೆದರಿಕೆಯಾಗುತ್ತಿದೆ. ”

ಮೋಹನ ಸುಮಿತ್ರೆಯ ಮಾತನ್ನು ಗಮನಿಸಿದಂತೆಯೇ ಕಾಣಲಿಲ್ಲ.

“ ಮೂರು ಕಾಸಿನ ಗುಲಾಮಗಿರಿ ಮಾಡಿಸಲಿಕ್ಕೆಂದು ಮಂಗಳೂರಿನಿಂದ ಇಲ್ಲಿಯತನಕ ನಿನ್ನನ್ನು ಕರೆಸಿದನೇನು ? ”

ಮೋಹನನ ಮಾತಿನಲ್ಲಿದ್ದ ನೈಷ್ಠುರ್ಯವನ್ನು ಗುರುತಿಸಿ ಸುಮಿತ್ರೆ ಭಯಗ್ರಸ್ತಳಾದಳು. ಅವಳ ಹೊಸ ಕೆಲಸದ ವಿಚಾರವಾಗಿ ಯಾರೂ ಇಂಥ ಕಟುವಾದ ಮಾತನ್ನು ಹೇಳಿರಲಿಲ್ಲ. ಅಂದು ಬೆಳಿಗ್ಗೆ ಆಕೆಗೆ ದೊರಕಿದ ಆರ್ಥಿಕ ಸ್ವಾತಂತ್ರ್ಯದ ಸುಖವೂ ಮೋಹನನ ಮಾತಿನ ಮುಂದೆ ನೀರಸವಾಗಿ ಕಂಡುಬರುವಷ್ಟು ಅಧೈರ್ಯ ಅವಳ ಮನಸ್ಸಿನಲ್ಲುಂಟಾಯಿತು.

“ ನನ್ನ ಒತ್ತಾಯದಿಂದಾಗಿ ಭಾವ ಕೆಲಸ ದೊರಕಿಸಿಕೊಟ್ಟರಷ್ಟೆ. ಅವರಾಗಿ ಮುಂದೆ ಬಂದು ಕೆಲಸಮಾಡು ಎಂದು ಹೇಳಲಿಲ್ಲ. ”

“ ಕರೆದುಕೊಂಡು ಬಂದು ನೋಡಿಕೊಳ್ಳುವೆನೆಂದು ಭರವಸೆ ಕೊಟ್ಟ ಮೇಲೆ, ಕೂಲಿಗೆಲಸಕ್ಕಿಂತ ಕಡೆಯಾದ ಕೆಲಸಕ್ಕೆ ಹೋಗೆಂದು ಹೇಳಲು ಅವನಿಗೆ ಧೈರ್ಯವಾದರೂ ಎಲ್ಲಿಂದ ಬಂದಿತೋ ! ” ಮೋಹನನ ಉತ್ತರದಲ್ಲಿ ಗೋಪಿಯ ಕುರಿತು ಸ್ಪಷ್ಟವಾದ ತಿರಸ್ಕಾರವಿತ್ತು.

“ ದಮ್ಮಯ್ಯ, ಇಂಥ ಮಾತುಗಳನ್ನು ಹೇಳಬೇಡಿ. ಭಾವನದೇನೂ ತಪ್ಪಿಲ್ಲ. ನನ್ನನ್ನು ಓದೆಂದು ಆಗ್ರಹಪಡಿಸಿದರೂ ಮೆಟ್ರಿಕ್ ಫೇಲಾದ ಮೇಲೆ ವಿದ್ಯೆಯ ಆಸೆ ಮಣ್ಣಾದಂತೆಯೆ ಎಂದು ಕೆಲಸಕ್ಕಾಗಿ ಹಾತೊರೆದೆ. ನನ್ನ ಜೀವನಕ್ಕೆ ಒಂದು ಗುರಿ, ಒಂದು ಮುಖ ಇವನ್ನು ಕೆಲಸ ಕೊಡಬಹುದು ಎಂದು ತಿಳಿದು ಭಾವನನ್ನು ಕಾಡಿದ್ದರಿಂದ ಅವರು ಈ ಕೆಲಸ ದೊರಕಿಸಿ ಕೊಟ್ಟರು. ಇದು ಕೂಲಿ ಕೆಲಸವಲ್ಲ........ ”

ಮೋಹನ ನಡುವೆಯೇ ತಡೆದು ಹೇಳಿದ.

“ ಕೂಲಿ ಕೆಲಸ ಇದಕ್ಕಿಂತಲೂ ವಾಸಿ ಸುಮಿತ್ರಾ. ಅಲ್ಲಿ ನಿನ್ನ ಸ್ವಾತಂತ್ರ್ಯಕ್ಕೆ ಚ್ಯುತಿ ಬರುವುದಿಲ್ಲ. ಆದರೆ ಗುಮಾಸ್ತಿಕೆಯ ಗುಲಾಮಗಿರಿ ಗೋಪಿಯಂಥ ಅಲ್ಪರಿಗೇ ಸರಿ. ”

ಸುಮಿತ್ರೆಗೆ ಮುಂದೆ ಮಾತನಾಡುವುದೇ ಕಷ್ಟವಾಯಿತು. ಗೋಪಿಯನ್ನು ಕಾರಕೂನರ ಸಾಲಿನಲ್ಲಿ ನಿಲ್ಲಿಸಿ ಅವಮಾನ ಮಾಡುತ್ತಿರುವ ಮೋಹನನ ಇದಿರು ಮಾತನಾಡಬೇಕೋ ಬಾರದೋ ಎಂದು ಆಕೆ ಯೋಚಿಸುವಂತಾ

ಯಿತು. ತಾನು ಭಾವಿಸಿದ ಸಂಭ್ರಮದ ಸ್ವರ್ಗವನ್ನು ಹೀಗಳೆಯುವ ಒಂದು ದೃಷ್ಟಿಕೋನವೂ ಇದೆ ಎಂದು ಆಕೆ ಮನಗಂಡುದು ಮೋಹನ ಈ ರೀತಿ ಮಾತನಾಡಿದಾಗಲೆ. ಆದರೆ ಮೋಹನ ತಮ್ಮನ ನಿಂದೆಯಲ್ಲಿ ತನ್ನ ಮನಸ್ಸಿನ ಯಾವುದೋ ಒಂದು ಭಯಂಕರ ಅತೃಪ್ತಿಯನ್ನು ಹೊರಗೆಡಹುವ ಪ್ರಯತ್ನ ದಲ್ಲಿದ್ದಂತೆ ಕಂಡಾಗ ಆಕೆಗೆ ಮುಂದೆ ಮಾತನಾಡುವುದು ಅನುಚಿತವೆನಿಸಿತು.

ಆವರೆ ಮೋಹನನೂ ಮತ್ತೆ ವಿಷಯವನ್ನು ಬೆಳೆಸಲಿಲ್ಲ.

" ಇರಲಿಬಿಡು. ಅವರವರ ಯೋಗ್ಯತೆಯನ್ನು ಹೊಂದಿಕೊಂಡು ಅವ ರವರ ಬದುಕು ರೂಪುಗೊಳ್ಳುತ್ತದೆ. ನಾನು ನಿಮ್ಮಲ್ಲಿಗೇ ಹೊರಟೆ. ಡಿಸ್ಪೆನ್ಸ ರಿಗೆ ತಡವಾದರೂ ಚಿಂತಿಲ್ಲ. ಪದ್ಮಾವತಿಯನ್ನು ನೋಡಿ ಬರುತ್ತೇನೆ. ನೀನೂ ಬರುತ್ತೀಯಾ ಅಥವಾ ಶೀಲೆಯ ದಾರಿ ಕಾಯುವ ಆಲೋಚನೆಯೆ ? "

ಸುಮಿತ್ರೆ ಹೊರಡಲೆಂದೆದ್ದಳು. ಆಗ ಮೋಹನನಿಗೆ ನೆನಪು ಬಂತು.

" ನೀನು ಕಾಫಿ ಕುಡಿಯಲೇ ಇಲ್ಲ. ಇದೆಯಲ್ಲ, ಕುಡಿಯಬಾರದೆ ? "

" ಬೇಡ. ನಾನು ಬರುವಾಗ ಕುಡಿದುಬಂದಿದ್ದೇನೆ. ಇಷ್ಟು ಬೇಗ ಪುನಃ ಕಾಫಿಯ ಅಗತ್ಯವೇನಿದೆ ? " ಸುಮಿತ್ರೆ ಬೇಕೆಂದೇ ಸುಳ್ಳು ಹೇಳಿದಳು. ಬೆಳಿಗ್ಗೆ ತಂಗಿ ಕೊಟ್ಟಿದ್ದ ಹಾಲು ಕುಡಿದಮೇಲೆ ಆಕೆಗೆ ಹಸಿವು ಬಾಯಾರಿಕೆ ಗಳ ಯೋಚನೆಯಾದುದೇ ಈಗ.

" ಊಹೂಂ. ಅದೇನೂ ಸಾಧ್ಯವಿಲ್ಲ. ಕುಡಿದು ಹೊರಡು " ಎಂದು ಮೋಹನ ಹೇಳಿದಾಗ ಸುಮಿತ್ರೆ ಪ್ರತಿ ಮಾತನಾಡದೆ ಕಾಫಿ ಬಗ್ಗಿಸಿಕೊಂಡಳು.

ಇಬ್ಬರೂ ಜೊತೆಯಾಗಿ ಮನೆ ಸೇರಿದಾಗ ಸುಮಿತ್ರೆಯ ಸಂಶಯ ಸತ್ಯ ವಾದುದನ್ನು ನೋಡಬೇಕಾಗಿ ಬಂದಿತ್ತು. ಗಂಡನನ್ನು ಕಂಡ ಶೀಲೆಗೆ ತುಂಬ ಸಮಾಧಾನವಾಯಿತು. ಪದ್ಮಾವತಿ ಮಲಗಿದ್ದಳು. ಗೋಪಿ ಆಗ ತಾನೇ ಬಂದಿದ್ದವನು ಪದ್ಮಾವತಿಯನ್ನು ನೋಡಿಹೋಗಿದ್ದ ನೆರೆಯ ಡಾಕ್ಟರರ ಅಭಿ ಪ್ರಾಯವನ್ನು ತಿಳಿಯಲೆಂದು ತೆರಳಿದ್ದ. ಕುಸುಮಾವತಿ ಶೀಲೆಯರು ಮಾತ ನಾಡುತ್ತಿದ್ದರು.

ಸುಮಿತ್ರೆ ಬಂದವಳೇ ಪದ್ಮಾ ಮಲಗಿದ್ದಲ್ಲಿಗೆ ಓಡಿದವಳು

" ಏನಾಯಿತು ಶೀಲಕ್ಕ ?" ಎಂದಳು.

“ ಈಗ ಮಲಗಿದ್ದಾಳೆ ಸುಮಿತ್ರಾ. ಎಬ್ಬಿಸಬೇಡ. ಮೊನ್ನೆ ಶುಕ್ರವಾರ ಬಿದ್ದಿದ್ದಳಂತಲ್ಲ—ಹಾಗೆಯೇ ಬವಳಿ ಬಂದು ಬಿದ್ದಳು. ಹತ್ತು ನಿಮಿಷ ಪ್ರಜ್ಞೆಯೇ ಇದ್ದಂತೆ ಕಾಣಲಿಲ್ಲ. ಆಮೇಲೆ ಡಾಕ್ಟರರು ಬಂದು ಇಂಜೆಕ್ಷನ್ ಚುಚ್ಚಿದ ಮೇಲೆ ಸರಿಯಾಯಿತು. ಕೇಳಿದಾಗ ಏನೂ ಇಲ್ಲ ಎನ್ನುತ್ತಾಳೆ.” ಎಂದಳು.

ಮೋಹನ ಮಾತನಾಡದೆ ಪದ್ಮಾವತಿಯಿದ್ದಲ್ಲಿಗೆ ನಡೆದ. ಶೀಲೆ ಅವನನ್ನೆ ಹಿಂಬಾಲಿಸಿದಳು. ಕೋಣೆಯಲ್ಲಿ ಇಬ್ಬರು ಮೂವರು ಬಂದ ಸದ್ದಿನಿಂದಾಗಿ ಪದ್ಮಾವತಿ ಕಣ್ಣು ತೆರೆದು “ ಭಾವಾ !” ಎಂದಳು.

ಮೋಹನನಿಗೆ ಗೋಪಿಯ ಮೇಲಣ ಸಿಟ್ಟು ಇನ್ನೂ ಇಳಿದಿರಲಿಲ್ಲ. ಆದರೂ ಮಾತನಾಡದೆ ಪದ್ಮಾವತಿಯ ಪರೀಕ್ಷೆಯ ವಿಧಿ ಆರಂಭಿಸಿದ. ಅವನು ಪದ್ಮಾವತಿಯೊಡನೆ ಆಕೆಯ ದೇಹಸ್ಥಿತಿಯ ಲಕ್ಷಣಗಳನ್ನು ವಿಚಾರಿಸುತ್ತಿದ್ದಾಗಲೇ ಗೋಪಿ ಒಳಗೆ ಬಂದ. ಮೋಹನ ಮಾತು ನಿಲ್ಲಿಸಲಿಲ್ಲ.

ಪದ್ಮಾವತಿಯಿಂದ ಎಲ್ಲ ವಿವರಗಳನ್ನು ಸಂಗ್ರಹಿಸಿದ ಮೇಲೆಯೇ ಅವನು ಗೋಪಿಯ ಕಡೆ ತಿರುಗಿ ನೋಡಿದುದು.

“ ನಿನ್ನ ಅಣ್ಣ ಜೀವಂತ ಇದ್ರೂ ನಿನಗೆ ಮಿರಚಂದಾನಿ, ಲಾಲ್ವಾನಿ, ಗಿದ್ವಾನಿಗಳೆಲ್ಲ ಬೇಕಾದರಲ್ಲ ?”

“ ಇಲ್ಲಣ್ಣ. ನಿನ್ನ ಹತ್ತಿರ ಬರುವಷ್ಟು ವಿಶೇಷ ಏನೂ ಆಗಿರಲಿಲ್ಲ. ಮೊನ್ನೆ ಶುಕ್ರವಾರದ ತನಕ ಚೆನ್ನಾಗಿದ್ದಳು ಪದ್ಮಾ. ಇವೊತ್ತೇ ನಾನು ನಿನ್ನ ಹತ್ತಿರ ಬರಬೇಕಿತ್ತು, ಅಷ್ಟರಲ್ಲಿ ನೀನೇ ಬಂದಿ.”

“ ನೀನು ಬಾರದಿದ್ದರೂ ನಾನು ಪದ್ಮಾವತಿಯನ್ನು ಪರೀಕ್ಷಿಸದೆ ಉಳಿಯುತ್ತಿರಲಿಲ್ಲ ಬಿಡು. ನಿನ್ನ ಕೃತಘ್ನತೆಗೆ ಪದ್ಮಾವತಿಯನ್ನು ಬಲಿಕೊಡುವ ಇಚ್ಛೆ ನನಗಿಲ್ಲ.”

ಚಾಟಿಯೇಟಿನಂತೆ ಬಂದ ಮಾತಿನಿಂದ ಗೋಪಿಗಾದ ವೇದನೆ ಅಷ್ಟಿಷ್ಟಲ್ಲ. ಆದರೆ ಶೀಲೆಯೇ ಅವನ ಸಹಾಯಕ್ಕೆ ಬಂದಳು.

“ ನಿಮ್ಮ ಮಾತಿಗೊಂದು ಹೊತ್ತು ಗೊತ್ತು ಇಲ್ಲ. ಈಗ ಆದದ್ದಾದರೂ ಏನು ಹೇಳಬಾರದೆ ? ಗೋಪಿ ಒಂದು ವೇಳೆ ಬುದ್ಧಿಯಿರದೆ ಹೋದರೂ ಸಿಕ್ಕಾಬಟ್ಟೆ ಬಯ್ಯಲಿಕ್ಕೆ ಇದು ಸಮಯವೆ ?”

"ಭಾವ, ಶೀಲಕ್ಕ, ಎಲ್ಲ ಸ್ವಲ್ಪ ಆ ಕೋಣೆಗೆ ಬರುತ್ತೀರಾ ? ಮಾತ ನಾಡುವುದಿದ್ದರೂ ಅಲ್ಲಿ ಮಾತನಾಡಬಹುದು." ಸುಮಿತ್ರೆ ಧೈರ್ಯತಂದು ಕೊಂಡು ಹೇಳಿದಳು.

ಮೋಹನ ಸುಮಿತ್ರೆಯ ಕಡೆ ನೋಡಿ ನಕ್ಕ. ತನ್ನ ಸಿಟ್ಟಿಗಾಗಿ ಆತ ನಾಚಿಕೊಂಡಂತಿತ್ತು. "ರೋಗಿಯ ಪರಿಚಯವಿರುವುದು ಇಲ್ಲಿ ಸುಮಿತ್ರೆಗೆ ಮಾತ್ರ" ಎಂದು ಹೇಳಿ ಹೊರಬಂದ.

ಅಣ್ಣ ತಮ್ಮಂದಿರ ಜಗಳ ಸದ್ಯಕ್ಕಾದರೂ ನಗುವಿನಲ್ಲಿ ತೇಲಿಹೋಯಿತು.

ಶೀಲೆ ಪದ್ಮಾವತಿಯ ಆರೋಗ್ಯದ ವಿಚಾರ ಗಂಡನನ್ನು ಕೇಳಿದಾಗ ಗೋಪಿಯೂ ಬಳಿಯಲ್ಲೇ ಇದ್ದ. "ಗಾಬರಿಯಾಗಬೇಕಾದುದೇನಿಲ್ಲ. ಹುಕ್ ವರ್ಮ್ಸ್ ಇರಬಹುದೇ ಎಂದು ಸಂದೇಹ." ಎಂದಾಗ ಗೋಪಿಗೆಷ್ಟು ಸಮಾಧಾನವಾಯಿತೋ. ಮೋಹನ ಡಿಸ್ಪೆನ್ಸರಿಗೆ ಹೋಗುವ ಅವಸರವನ್ನು ಪುನಃ ಸೂಚಿಸಿ ಸುಮಿತ್ರೆಯನ್ನು ಜೊತೆಗೆ ಬರುವಂತೆ ಹೇಳಿದ. ಹಾಗೆಯೇ ಗೋಪಿಗೆ "ಸುಮಿತ್ರೆಯ ಹತ್ತಿರ ಔಷಧಿ ಕೊಟ್ಟು ಕಳಿಸುತ್ತೇನೆ. ಇನ್ನು ನನ್ನನ್ನು ಕೇಳದೆ ಬೇರೆ ಯಾರ ಹತ್ತಿರವಾದರೂ ಹೋದರೆ ನಿನ್ನನ್ನು ಬಲಿ ತೆಗೆದು ಬಿಟ್ಟೇನು" ಎಂದು ಹೇಳಿದ.

ದಾದರಿನ ತನಕ ಶೀಲೆ ಜೊತೆಗಿದ್ದಳು. ಡಿಸ್ಪೆನ್ಸರಿಗೆ ಹೋದುದು ಮಾತ್ರ ಸುಮಿತ್ರೆಯೊಬ್ಬಳೇ—ಮೋಹನನ ಜತೆಯಲ್ಲಿ ತನ್ನ ವಿಚಾರ ತುಸು ಸಮಾಧಾನದಿಂದಿರುವನಲ್ಲಾ ಎಂದು ಆಕೆಯ ಮನಸ್ಸು ಹರ್ಷಗೊಂಡಿತ್ತು. ಆದರೆ ತನ್ನ ಕೆಲಸದ ವಿಚಾರ ಆತ ವ್ಯಕ್ತಪಡಿಸಿದ ತಿರಸ್ಕಾರವೂ ಆಕೆಯ ಮನಸ್ಸನ್ನು ಕೊರೆಯುತ್ತಲಿತ್ತು.

ಎಂದಿಗಿಂತ ತುಂಬ ತಡವಾಗಿ ಇಂದು ಮೋಹನ ಡಿಸ್ಪೆನ್ಸರಿ ಸೇರಿದಾಗ ಅಲ್ಲಿ ಒಂದು ಜಾತ್ರೆಯೇ ನೆರೆದಿತ್ತು. ಔಷಧಿಗಾಗಿ, ಇಂಜೆಕ್ಶನ್‌ಗಾಗಿ, ಬ್ಯಾಂಡೇಜ್, ಪ್ಲಾಸ್ಟರ್‌ಗಳಿಗಾಗಿ ಜನ ಸಾಲು ಹಿಡಿದು ಕುಳಿತಿದ್ದರು. ಒಳಗೆ ಬರುತ್ತಿದ್ದಂತೆಯೇ ಮೋಹನ ಸುಮಿತ್ರೆಯೊಡನೆ "ನನ್ನ ಸಾಮ್ರಾಜ್ಯ ನೋಡಿದೆಯಾ ?" ಎಂದು ಕೇಳಿದ. ಒಮ್ಮೆಗೇ ಬಂದ ಈ ಪ್ರಶ್ನೆಗೆ ಏನು ಉತ್ತರ ಹೇಳಬೇಕೆಂದು ಸುಮಿತ್ರೆಗೆ ಹೊಳೆಯಲಿಲ್ಲ. ಆಕೆಯ ನಗುವನ್ನೇ ಉತ್ತರವಾಗಿ ಗ್ರಹಿಸಿದ ಮೋಹನ ಇನ್ನೊಂದು ಮಾತು ಹೇಳಿದ.

" ನಿನಗೆ ಬೇಗನೇ ಹೋಗಬೇಕೆಂದಿದ್ದರೆ ಹೋಗು. ಔಷಧಿ ಕೊಡಿಸುತ್ತೇನೆ. ಇಲ್ಲವಾದರೆ ಒಂದರ್ಧ ಘಂಟೆ ಇಲ್ಲಿಯ ವೈಭವ ನೋಡಿಕೊಂಡು ಹೋಗು.''

" ನಾನು ನಿಲ್ಲುತ್ತೇನೆ." ಎಂದು ನಗುತ್ತಲೇ ಸುಮಿತ್ರೆ ಉತ್ತರ ಹೇಳಿದಳು.

ಡಿಸ್ಪೆನ್ಸರಿಯ ಒಳಗೆ ಪರೀಕ್ಷಾ ಗೃಹವನ್ನು ತಲುಪಿದ ಮೋಹನ ಹದಿನೈದು ನಿಮಿಷಗಳ ತನಕ ಹೊರಗೆ ಬರಲೇ ಇಲ್ಲ. ಮೊದಲು ಬಂದ ಹಲವಾರು ರೋಗಿಗಳನ್ನು ಪರೀಕ್ಷಿಸಿ ಔಷಧಿಯ ವಿವರಗಳನ್ನು ತಿಳಿಸಿಯಾದ ಮೇಲೆ, ಇಂಜೆಕ್ಷನ್‌ಗಾಗಿ ಕಾದುನಿಂತಿದ್ದ ರೋಗಿಗಳ ಸಹಾಯಕ್ಕಾಗಿ ಪಕ್ಕದ ಕೋಣೆಗೆ ಬಂದ. ಮೋಹನನ ನಿರ್ದೇಶನದಂತೆ ಕಂಪೌಂಡರನ ಬಳಿ ಒಂದು ಕುರ್ಚಿಯೊಳೆದುಕೊಂಡು ಡಿಸ್ಪೆನ್ಸರಿಯ ಚಟುವಟಿಕೆಗಳನ್ನು ಸುಮಿತ್ರೆ ನಿರೀಕ್ಷಿಸುತ್ತಿದಳು. ಒಂದು ನಿಮಿಷ ಬಿಡುವಿಲ್ಲದೆ ಔಷಧಿ ಸರಿಪಡಿಸಿಕೊಡುತ್ತಿದ್ದ ಕಂಪೌಂಡರನ ಪಾಡು ನೋಡಿದಾಗ ಸುಮಿತ್ರೆಗೆ ' ಅಯ್ಯೋ' ಎನಿಸಿತು.

ಇಂಜೆಕ್ಷನ್ ರೋಗಿಗಳ ನೆರವಿಗೆ ಬಂದ ಮೋಹನ ಕೋಣೆಯೊಳಗಿನಿಂದಲೇ " ಸುಮಿತ್ರಾ !" ಎಂದು ಕರೆದಾಗ ಸುಮಿತ್ರೆಗೆ ಆಶ್ಚರ್ಯವಾಯಿತು. ಬೇಗನೆದ್ದು ಅಲ್ಲಿಗೆ ಹೋದಳು. " ನಮ್ಮ ಕಂಪೌಂಡರನ ಅವಸ್ಥೆ ನೀನೇ ನೋಡಿದ್ದೀ. ಈಗ ಅವನಿಗೆ ಅದನ್ನು ಬಿಟ್ಟುಬರಲು ಸಮಯವಿಲ್ಲ. ಸ್ವಲ್ಪ ಇಂಜೆಕ್ಷನ್ ಕೊಡಲು ಸಹಾಯಮಾಡು. ನೀನು ಬೇರೇನೂ ಮಾಡಬೇಕಾಗಿಲ್ಲ. ಈ ಮಕ್ಕಳನ್ನು ಸ್ವಲ್ಪ ಚೆನ್ನಾಗಿ ಹಿಡಿದುಕೋ."

ಮೋಹನ ಅಷ್ಟು ಕೆಲಸದ ನಡುವೆಯೂ ಸುಮಿತ್ರೆಯ ಮುಖಭಾವವನ್ನು ಪರೀಕ್ಷಿಸುತ್ತಿದ್ದ. ಆಸ್ಪತ್ರೆಯ ವಾತಾವರಣಕ್ಕೆ ಹೊಂದಿಕೊಳ್ಳುವ ಜೀವವೇ ಇದು ಎಂದು ಆತ ಯೋಚಿಸುತ್ತಿದ್ದಿರಬಹುದು. ಆದರೆ ಮೋಹನನ ಆದರದ ಸ್ವಾಗತದ ಸಂಭ್ರಮದಿಂದಲೆ ಸುಖಿಯಾಗಿದ್ದ ಸುಮಿತ್ರೆಗೆ ಅದೇ ಡಿಸ್ಪೆನ್ಸರಿ ಸ್ವರ್ಗಸಮಾನವಾಗಿತ್ತು. ಮೋಹನನ ನಿರ್ದೇಶನದಂತೆ ಅಲ್ಲಿ ಆಕೆ ಯಾವ ಕೆಲಸವನ್ನೂ ಮಾಡಲು ಸಿದ್ಧಳೆನ್ನುವಷ್ಟು ಅವಳಲ್ಲಿ ಅಪೂರ್ವ ಉತ್ಸಾಹ ತುಂಬಿತ್ತು. ಮೋಹನ ಆ ಉತ್ಸಾಹವನ್ನು ಗುರುತಿಸಿದ್ದ.

ಆ ಮೇಲೆ ಪದ್ಮಾವತಿಯ ಔಷಧವೆಲ್ಲ ಸರಿಪಡಿಸಿ ಕೊಟ್ಟು ಪಥ್ಯದ ವಿವರಗಳನ್ನೆಲ್ಲ ಹೇಳಿಯಾದ ಮೇಲೆ ಮೋಹನ ಸುಮಿತ್ರೆಯೊಡನೆ "ಏನು ಹೆಚ್ಚು ಕಡಿಮೆಯಾದರೂ ಗೋಪಿಯ ಮುಖಾಂತರ ಬರಬೇಕೆಂದು ಕಾದು ಕುಳಿತುಕೊಳ್ಳಬೇಡ. ಸೀದಾ ಮನೆಗೆ ಬಂದು ತಿಳಿಸು. ನಾನು ಮನೆಯಲ್ಲಿಲ್ಲವಾದರೆ ಡಿಸ್ಪೆನ್ಸರಿಗೆ ಬಾ." ಎಂದು ಹೇಳಿದ.

ಸುಮಿತ್ರೆಗೆ ತುಂಬ ಆಶ್ಚರ್ಯವಾಯಿತು. "ಶೀಲೆಯ ಬಳಿ ಹೇಳು" ಎಂದಿದ್ದರಾದರೂ ಅವಳಿಗೆ ಆಶ್ಚರ್ಯವಾಗುತ್ತಿರಲಿಲ್ಲ. ಎಲ್ಲ ಹೊಣೆಗಾರಿಕೆಯನ್ನು ತನ್ನ ಮೇಲಿರಿಸಿ ಇಷ್ಟು ವಿಶ್ವಾಸದಿಂದ ಮೋಹನ ಮಾತನಾಡಿದುದನ್ನು ಕಂಡಾಗ ಅವಳಿಗೆ ಆತ್ಮಾಭಿಮಾನಕ್ಕಿಂತ ಹೆಚ್ಚು ಸಂತೋಷವಾಯಿತು.

ಮನೆಗೆ ಮರಳಿದ ಮೇಲೆ ಸುಮಿತ್ರೆ ತಂಗಿಯ ಆರೈಕೆಯಲ್ಲಿ ತೊಡಗಿದಳು. ಕೆಲಸದ ಹುಡುಗ ಅಡುಗೆಯ ಸಿದ್ಧತೆ ನಡೆಸಿದ್ದ. ಗೋಪಿ ಮನೆಯಲ್ಲೇ ಇದ್ದ. ಸುಮಿತ್ರೆ ತಂಗಿಯ ಔಷಧೋಪಚಾರಗಳನ್ನೆಲ್ಲ ಮುಗಿಸಿ ಅಡುಗೆಯ ಮನೆಯ ಮೇಲ್ವಿಚಾರಣೆಗೆ ಬಂದಾಗ ಗೋಪಿಯೇ ಹೇಳಿದ: "ಆಫೀಸಿನ ಕೆಲಸ, ಮತ್ತೆ ಈ ಓಡಾಟ. ಸ್ವಲ್ಪ ಬಿದ್ದುಕೊಳ್ಳಬಾರದೆ ಸುಮಿತ್ರಾ. ಆ ಹುಡುಗ ಮಾಡುವುದಿಲ್ಲವೆ ?"

ಸುಮಿತ್ರೆಗೆ ನಿಜವಾಗಿಯೂ ಆಯಾಸವಾಗಿತ್ತು. ಮೋಹನನ ಮನೆಯಲ್ಲಿ ಕುಡಿದ ಒಂದು ಲೋಟ ಕಾಫಿಯ ಹೊರತು ಆಕೆ ಬೆಳಿಗ್ಗೆ ಊಟ ಮಾಡಿ ಹೋದವಳು ಬೇರೇನನ್ನೂ ತೆಗೆದುಕೊಂಡಿರಲಿಲ್ಲ. ಆದರೂ ಅವಳಿಗೆ ರಾತ್ರಿ ಊಟ ಸೇರದು. ಬೆಳಗಿನ ಕೆಲಸದ ಉತ್ಸಾಹ, ಸಂಜೆಯ ಘಟನೆಗಳು, ಮೋಹನನ ಸಹವಾಸದಲ್ಲಿ ಸಂಜೆ ಡಿಸ್ಪೆನ್ಸರಿಯಲ್ಲಿ ಕಳೆದ ಒಂದು ಘಂಟೆ, ಇವೆಲ್ಲವುಗಳಿಂದಾಗಿ ಆಕೆಯ ಮನಸ್ಸು ಉದ್ವಿಗ್ನವಾಗಿತ್ತು. ಹೃದಯದಲ್ಲಿ ಆನಂದ ಕಳವಳಗಳೆರಡೂ ವಿಚಿತ್ರ ಭಾವನೆಗಳ ತೆರೆಯುಕ್ಕಿಸುತ್ತಿದ್ದವು.

ಊಟದ ಹೊತ್ತಿಗೆ ಗೋಪಿ ಸುಮಿತ್ರೆಯರ ಬಲವಂತಕ್ಕಾಗಿ ಪದ್ಮಾ ಎರಡು ತುತ್ತು ಉಣಲೆಂದು ಬಟ್ಟಲ ಬಳಿ ಬಂದಿದ್ದಳು. ನಗುತ್ತಲೇ ಅಕ್ಕನೊಡನೆ ಹೊಸ ಕೆಲಸದ ಅನುಭವ ಕೇಳಿದಳು.

ರಾತ್ರೆ ಮಲಗುವಾಗ ಮಾತ್ರ ಸುಮಿತ್ರೆ "ನನ್ನ ಸ್ವಾತಂತ್ರ್ಯ ಇಷ್ಟರಲ್ಲಿಯೆ ಮುಗಿಯಿತೇ ?" ಎಂದು ತನ್ನನ್ನೆ ತಾನು ಕೇಳಿಕೊಳ್ಳದಿರಲಿಲ್ಲ.

೧೮

ಮಾರನೆಯ ದಿನ ಆಫೀಸಿಗೆ ಹೊರಡುವಾಗ ಹಿಂದಿನ ದಿನವಿದ್ದ ಉಲ್ಲಾಸ ಸುಮಿತ್ರೆಯಲ್ಲಿರಲಿಲ್ಲ. 'ಹೋಗಬೇಕೋ ಬೇಡವೋ' ಎಂಬ ಶಂಕೆ ಕೂಡಾ ಮನಸ್ಸಿನಲ್ಲಿ ಬಂದಿತ್ತು. ಆದರೆ ಪದ್ಮಾವತಿಯೇ ಸುಮಿತ್ರೆ ಹೊರಡುವ ಸೂಚನೆ ಕಾಣದುದರಿಂದ ಆಶ್ಚರ್ಯ ಸೂಚಿಸಿದಾಗ ಸುಮಿತ್ರೆ ಮನಸ್ಸಿಲ್ಲದ ಮನಸಿನಿಂದ ಆಫೀಸಿಗೆ ಹೊರಟಳು.

ಸಂಜೆ ಡಿಸ್ಪೆನ್ಸರಿಗೆ ಔಷಧ ತರಲೆಂದು ಹೋದಾಗ ಮೋಹನ ಸುಮಿತ್ರೆಯೊಡನೆ ಪುನಃ ಕೇಳಿದ: "ಇವೊತ್ತು ಕೆಲಸಕ್ಕೆ ಹೋಗಿದ್ದಿಯೇನು ?" ಎಂದು.

ಸುಮಿತ್ರೆಗೆ 'ಹೌದು' ಎಂದು ಹೇಳಲು ಸಾಕುಬೇಕಾಗಿತ್ತು. ಆದರೆ ಸುಮಿತ್ರೆಯ ಉತ್ತರ ಕೇಳಿದ ಮೇಲೆ ಆ ವಿಚಾರ ಆತ ಮಾತು ಬೆಳೆಸಲಿಲ್ಲ.

ತಂಗಿ ನಾಲ್ಕಾರು ದಿನಗಳಲ್ಲಿ ಸುಧಾರಿಸಿಕೊಂಡಳು. ಮೋಹನ ಪ್ರತಿ ದಿನ ಮಧ್ಯಾಹ್ನ ಬಂದು ಪದ್ಮಾವತಿಯನ್ನು ನೋಡಿ ಹೋಗುತ್ತಿದ್ದ. ತಂಗಿ ಗುಣಮುಖಳಾಗುತ್ತ ನಡೆದಂತೆ ಸುಮಿತ್ರೆಯ ಕಾರ್ಯಾಸಕ್ತಿ ಕುದುರಿತು. ಮನಸ್ಸು ಹಗುರಾಯಿತು. ಆಫೀಸು ಜೀವನ ಅದರ ಯಾಂತ್ರಿಕ ಸ್ವರೂಪದ ವ್ಯವಸ್ಥಿತ ನಿಲುಗಡೆಗೆ ಹೊಂದಿಕೊಳ್ಳುತ್ತಲಿತ್ತು.

ಬರೇ ಎರಡು ವಾರಗಳಲ್ಲಿ ಸುಮಿತ್ರೆ ದುಡಿಯುವ ಮಹಿಳೆಯರ ವರ್ಗದ ಪರಿಣತ ಸದಸ್ಯೆಯಾದಳು.

ಅವಳ ಸಂಕೋಚ ದಾಕ್ಷಿಣ್ಯಗಳೂ ಬರಬರುತ್ತ ಮಾಯವಾದವು. ಮುಂಚಿನ ನಗು ನಲಿವುಗಳು ಮತ್ತೆ ಕಾಣಿಸಿಕೊಂಡವು. ಅದೂ ತಿಂಗಳ ಅಂತ್ಯಕ್ಕೆ ಆ ತಿಂಗಳಲ್ಲಿ ಇವಳು ದುಡಿದ ದಿನಗಳ ಪ್ರತಿಫಲವಾಗಿ ೧೫೦ ರೂಪಾಯಿ ಕೈಯಲ್ಲಿ ಬಿದ್ದಾಗ ಸುಮಿತ್ರೆಗೆ ಸ್ವರ್ಗ ಅತಿ ಸಮೀಪದಲ್ಲೇ ಇದೆ ಎಂಬಷ್ಟು ಸುಖಾನುಭವವಾಯಿತು.

ಬಿಡುಖರ್ಚಿಗೆಂದು ಒಂದಿಪ್ಪತ್ತು ರೂಪಾಯಿ ಉಳಿಸಿಕೊಂಡು ಉಳಿದೆಲ್ಲ ಹಣವನ್ನು ಗೋಪಿಯ ಕೈಯಲ್ಲಿಡಹೋದಾಗ ಅವನು ಆಶ್ಚರ್ಯದಿಂದ ಕೇಳಿದ—

" ಇದೇನಿದು ಸುಮಿತ್ರಾ ? "

" ನನ್ನ ರಕ್ಷಣೆಯ ಭಾರ ನೀವು ವಹಿಸಿದ್ದೀರಿ. ನನ್ನ ಖರ್ಚಿಗೆ ಬೇಕಾದಷ್ಟನ್ನು ಇಟ್ಟುಕೊಂಡಿದ್ದೇನೆ. ಉಳಿದ ಎಲ್ಲ ಹಣ ನಿಮಗೆ ಹೇಗೆ ಸರಿ ಕಾಣುವುದೋ ಹಾಗೆ ವಿನಿಯೋಗಿಸಬೇಕು. ಮೂರ್ತಿ ಅಣ್ಣನೂ ಹಾಗೇ ಬರೆದಿದ್ದಾರೆ. "

ಮೂರ್ತಿ ಸುಮಿತ್ರೆಗೆ ಆ ರೀತಿ ಬರೆದಿದ್ದುದು ನಿಜ. ಆದರೆ ಇನ್ನು ಬೇರೆ ಕೆಲವು ವಿಚಾರಗಳನ್ನೂ ಆತ ಬರೆದಿದ್ದ. ಕೆಲಸವಾಯಿತೆಂದು ಹಿಗ್ಗಿ ಸುಮಿತ್ರೆ ಕಾಗದ ಬರೆದಾಗ, ಮೂರ್ತಿಗೆ, ಮೋಹನನೊಬ್ಬನನ್ನು ಬಿಟ್ಟು ಉಳಿದೆಲ್ಲರಿಗಾದಷ್ಟು ಸಂತೋಷ ಆಗಿರಲಿಲ್ಲ. " ನನಗಿನ್ನೂ ಇದು ಬರೀ ಕೆಲವು ದಿನಗಳ ಸಮಾಧಾನವೆಂದು ಕಾಣುತ್ತದೆ ಸುಮೀ. ನಿನ್ನ ಮದುವೆಯ ವಿಚಾರ ನಾನು ಇನ್ನೂ ಯೋಚಿಸುತ್ತಿದ್ದೇನೆ. ಗೋಪಿಗೂ ಬರೆದಿದ್ದೇನೆ. ಯಾವ ಸಂಪ್ರದಾಯದ ಗೊಡ್ಡು ಬೆದರಿಕೆಗೂ ಈಗ ಹೆದರಿ ನಡೆಯುವ ಅಗತ್ಯವಿಲ್ಲವೆಂದು ನಾನು ತಿಳಿದಿರುವುದರಿಂದ ಒಂದೆರಡು ವರ್ಷ ಮುಂದುವರಿದರೂ ಚಿಂತಿಲ್ಲ; ನೀನು ಯೋಗ್ಯ ಹುಡುಗನೊಬ್ಬನ ಕೈಹಿಡಿಯಬೇಕು ಎಂದಿಷ್ಟೇ ಆಸೆ. ಅಷ್ಟರ ತನಕ ನಿನಗೆ ದುಡಿಯುವ ಇಚ್ಛೆಯಿದ್ದರೆ ನಾನು ಬೇಡವೆಂದು ಹೇಳಲಾರೆ. ಆದರೆ ಆ ಪ್ರಲೋಭನದ ರಾಜ್ಯದಲ್ಲಿ ಜಾಗ್ರತೆಯಿಂದಿರುವುದು ವಾಸಿ. ನಿನ್ನ ಸಂಬಳದ ಹಣವೆಲ್ಲ ಗೋಪಿಯ ಕೈಯಲ್ಲಿ ಕೊಡು. ನಿನ್ನ ಒಳ್ಳೆಯದಕ್ಕೆ ಏನು ಮಾಡಬೇಕೆಂಬುದು ಅವನಿಗೆ ಚೆನ್ನಾಗಿ ತಿಳಿದಿದೆಯೆಂದು ನಂಬಿದ್ದೇನೆ."

ಗೋಪಿಗೆ ಕಾಗದ ಬರೆದಿರುವೆನೆಂದು ಮೂರ್ತಿ ಸುಮಿತ್ರೆಗೆ ತಿಳಿಸಿದ್ದರೂ ವಾಸ್ತವವಾಗಿ ಅವನ ಕಾಗದ ಗೋಪಿಯ ಕೈಸೇರಿರಲಿಲ್ಲ. ಮೀರೆ ಹಾಸಿಗೆ ಹಿಡಿದಿದ್ದುದರಿಂದ ಗೋಪಿಗೆ ಬರೆಯುವ ವಿಚಾರ ಮೂರ್ತಿ ವಿಲಂಬಿಸಿದ್ದ. ಹೀಗಾಗಿ ಸುಮಿತ್ರೆಯ ಹಣ ತನ್ನ ಕೈಗೆ ಬಂದಾಗ ಗೋಪಿಗೆ ಆಶ್ಚರ್ಯವಾಯಿತು.

ಸುಮಿತ್ರೆ ಮೂರ್ತಿಯ ಹೆಸರೆತ್ತಿದೊಡನೆ ಗೋಪಿ ಮಾತನಾಡಲಿಲ್ಲ. ಆದರೆ ಸೀರೆಯ ಗಲಭೆಯ ದಿನದ ಸುಮಿತ್ರೆ ಅವನ ಸ್ಮೃತಿಪಥದಲ್ಲಿ ನಿಂತಳು. ಅವಳನ್ನು ಹಂಗಿಸಿ ನೋಯಿಸಬೇಕೆಂದಿದ್ದರೆ ಇದೇ ಒಳ್ಳೆಯ ಸಮಯ ಎಂದೂ ಮನಸ್ಸು ಹೇಳಿತು.

ಆದರೆ ಸುಮಿತ್ರೆಯ ಮುಖ ನೋಡಿದಾಗ ಮಾತು ಹೊರಡಲಿಲ್ಲ. ಆತನಿಗೆ ಏನೂ ಹೇಳಲಾಗಲಿಲ್ಲ.

ಪದ್ಮಾವತಿಗೆ ದಿನತುಂಬುತ್ತ ಬಂದಂತೆ ಮಲಗಿದಲ್ಲಿಂದ ಏಳುವುದೇ ಕಷ್ಟವಾಗುತ್ತಲಿದ್ದಿತಾದರೂ ಮನೆಗೆಲಸದ ವಿಚಾರ ಸುಮಿತ್ರೆ ಯೋಚಿಸಬೇಕಾದ ಪ್ರಮೇಯ ಬಂದೊದಗಲಿಲ್ಲ. ಕೆಲಸದ ಹುಡುಗ ಹೇಳಿದ ಕೆಲಸಗಳನ್ನೆಲ್ಲ ದಕ್ಷತೆಯಿಂದ ನಿರ್ವಹಿಸುತ್ತಿದ್ದ. ಶೀಲೆ ದಿನಬಿಡದೆ ಬಂದು ಹೋಗುತ್ತಿದ್ದಳು. ಅಡುಗೆಯ ಕೆಲಸಕ್ಕೆ ಮಾತ್ರ ಸುಮಿತ್ರೆ ಹುಡುಗನಿಗೆ ನೆರವಾಗಬೇಕಿತ್ತು. ಆದರೆ ಇದು ಆಕೆಗೆ ಕಷ್ಟದ ಮಾತಾಗಿರಲಿಲ್ಲ.

ಹೀಗೆ ಹಲವು ಆಲೋಚನೆಗಳಿಂದ ಸದ್ಯಕ್ಕಾದರೂ ಬಿಡುಗಡೆ ಹೊಂದಿದ್ದ ಸುಮಿತ್ರೆಯ ಅಂತರಂಗದ ಸಂತೋಷ ಆಕೆಯ ದೇಹದ ಮೇಲೂ ಪರಿಣಾಮ ಮಾಡುತ್ತ ಬಂತು. ತಂಗಿಯ ಮದುವೆ, ತಂದೆಯ ಮರಣ, ಮೆಟ್ರಿಕ್‌ನ ಅಪಜಯ ಇವೆಲ್ಲವುಗಳಿಂದ ನೊಂದು ಕೃಶಳಾಗಿದ್ದ ಸುಮಿತ್ರೆ ಪುನಃ ಮೊದಲಿನ ಆರೋಗ್ಯವನ್ನು ಪಡೆಯುವಂತಾದಳು.

ಇದಕ್ಕೆ ಇನ್ನೊಂದು ಕಾರಣವೂ ಇತ್ತು. ಮನಸ್ಸಿಗೆ ವಿರಾಮಕ್ಕೆ ಬಿಡುವು ದೊರಕುತ್ತಿರಲಿಲ್ಲ. ಬೆಳಿಗ್ಗೆ ಪದ್ಮಾ ಏಳುವ ಮುಂಚೆಯೇ ಎದ್ದರೆ ಮನೆಯ ಕಸ ಮುಸುರೆಗಳಿಂದ ಹಿಡಿದು ಅಡುಗೆಯ ತನಕ ಕೈ ಓಡುವಾಗ ಆಫೀಸಿನ ಅವಸರ ಆರಂಭವಾಗುತ್ತದೆ. ಆಫೀಸಿನ ದುಡಿತ ಮುಗಿಸಿ ಬರುವಾಗ, ಡಿಸ್ಪೆನ್ಸರಿಯ ಸಂದರ್ಶನವಿರದಿದ್ದರೆ ಕುಸುಮಾವತಿ ಪದ್ಮಾವತಿಯರಿದ್ದಾರೆ. ಅದೂ ಒಂದರ್ಧ ಘಂಟೆ ಹೊತ್ತು; ಆಮೇಲೆ ರಾತ್ರೆಯ ಅಡುಗೆಯ ಸಿದ್ಧತೆ. ಊಟಮುಗಿಯುವಾಗ ಕಣ್ಣಂಚಿನಲ್ಲಿ ನಿದ್ದೆ ನಲಿಯುತ್ತಿರುತ್ತದೆ. ಮಲಗಿದ ಮೇಲೆ ಬೆಳಗಿನ ಹಾಲಿನ ಭಯ್ಯಾ ಬಾಗಿಲ ಸದ್ದು ಮಾಡುವಾಗಲೇ ಎಚ್ಚರ. ಹೀಗಾಗಿ ಹೇಗೆ ದಿನ ಕಳೆಯುತ್ತಿದೆಯೆಂದು ಯೋಚಿಸಲು ಕೂಡಾ ಸುಮಿತ್ರೆಗೆ ಅವಕಾಶ ದೊರಕುತ್ತಿರಲಿಲ್ಲ.

ಆಫೀಸಿನ ಕೆಲಸ ಆಕೆಗೆ ಬೇಸರ ಬರಿಸಲಿಲ್ಲ. ಆರಂಭದ ಕೆಲವು ದಿನ, ಯಾರ ಪರಿಚಯವೂ ಇಲ್ಲದೆ ಕೆಲಸವನ್ನೇ ನೆಚ್ಚಿಕೊಂಡು ಹೆಚ್ಚಿನ ಆಸಕ್ತಿಯಿಂದ ದುಡಿದುದರ ಪರಿಣಾಮವಾಗಿ “ಹೆಂಗಸರೂ ಇಷ್ಟು ಕೆಲಸ ಮಾಡಬಲ್ಲರೆ ?” ಎಂದು ತನ್ನ ಮೇಲಧಿಕಾರಿಯಿಂದ ಮೆಚ್ಚುಗೆ ದೊರಕಿಸಿಕೊಂಡಿ

ದ್ದಳು. ಇದರಿಂದಾಗಿ ಬಂದ ಧೈರ್ಯ ಆಕೆಗೆ ನಾಲ್ಕು ಭುಜ ಕೊಟ್ಟಿತ್ತು; ತುಂಬ ಆತ್ಮವಿಶ್ವಾಸವನ್ನು ತಂದುಕೊಟ್ಟಿತ್ತು. ಮೊದಮೊದಲು ಯಾರೊಬ್ಬರೊಡನೆಯೂ ಮಾತಾಡಲು ಹಿಂಜರಿಯುತ್ತಿದ್ದವಳು ಕ್ರಮೇಣ ಮೈಚಳಿ ಬಿಟ್ಟು ಎಲ್ಲರೊಡನೆಯೂ ಮಾತಾಡುವ ಧೈರ್ಯ ತಂದುಕೊಂಡಳು.

ಇದೇ ಸಂದರ್ಭದಲ್ಲಿ ಆಕೆಗೆ ಶಶಿಭೂಷಣ ಮುಖರ್ಜಿಯ ಪರಿಚಯವಾದುದು.

ಮುಖರ್ಜಿ ಅವಳ ಸಹೋದ್ಯೋಗಿ. ಸುಮಿತ್ರೆ ಆಫೀಸಿಗೆ ಸೇರಿದ ಒಂದೆರಡು ದಿನಗಳಲ್ಲೇ ಆತನ ಮುಖಪರಿಚಯ ಆಗಿದ್ದಿತಾದರೂ ಮಾತಾಡಲು ಸಂದರ್ಭ ದೊರಕಿದುದು ಮತ್ತೊಂದು ತಿಂಗಳ ಮೇಲೆ. ಆಫೀಸಿನ ಬೇರೆಲ್ಲ ಗಂಡಸರೊಡನೆ ಆಕೆ ಒಂದೆರಡು ಬಾರಿಯಾದರೂ ಮಾತನಾಡುವ ಪ್ರಸಂಗ ಬಂದಿದ್ದಿತಾದರೂ ಮುಖರ್ಜಿಯೊಡನೆ ಮಾತನಾಡಿರಲಿಲ್ಲ. ಇದಕ್ಕೆ ಆತ ಮೌನಾವಲಂಬಿಯಾಗಿದ್ದುದೇ ಮುಖ್ಯಕಾರಣ. ಸುಮಿತ್ರೆ ತಾನಾಗಿ ಯಾರನ್ನೂ ಮಾತನಾಡಿಸಲು ಹೋಗುತ್ತಿದ್ದಿಲ್ಲ.

ಆದರೆ ಒಂದು ದಿನ ಹೆಡ್ ಕ್ಲಾರ್ಕನ ಕೋಣೆಯಿಂದ ನಗುತ್ತಾ ಬಂದ ವಸುಧಾ ಕಾಳೆ ಸುಮಿತ್ರೆಯೊಡನೆ "ನೀನು ಎಸ್. ಬಿ. ಗೆ ಸ್ವಲ್ಪ ಸಹಾಯ ಮಾಡಬೇಕಂತೆ ಏನೋ 'ಇನ್ವೆಂಟರಿ' ತಯಾರಿಸುತ್ತಿದ್ದಾನೆ. ಹೆಡ್ ಕ್ಲಾರ್ಕರ ಆಜ್ಞೆಯಾಗಿದೆ" ಎಂದಳು.

ಸುಮಿತ್ರೆಗೆ ಈ ಎಸ್. ಬಿ. ಯಾರೆಂದು ಮೊದಲು ಗೊತ್ತಾಗಲಿಲ್ಲ.

"ಎಸ್. ಬಿ. ಯ ಪರಿಚಯವಿಲ್ಲವೆ ?—ಸಿಲ್ಲಿ ಬೂರ್ ಮುಖರ್ಜಿ" ಎಂದು ಶಶಿಭೂಷಣ ಮುಖರ್ಜಿಯ ಪರಿವರ್ತಿತ ನಾಮಕರಣದ ಇತಿಹಾಸವನ್ನು ವಸುಧಾ ತಿಳಿಸಿದಾಗ ಸುಮಿತ್ರೆಗೆ ನಗು ತಡೆಯಲಾಗಲಿಲ್ಲ.

ಶಶಿಭೂಷಣನ ಏಕಾಂತ ಪ್ರಿಯತೆ ಆತನಿಗೆ ಈ ಅಡ್ಡ ಹೆಸರು ತಂದಿತ್ತು. ಆತ ಮುಂಬಯಿಗೆ ಬಂದು ಒಂದು ವರ್ಷದ ಮೇಲಾಗಿರಲಿಲ್ಲ. ಪೂರ್ವ ಬಂಗಾಲದಲ್ಲಿ ಹಿಂದೂ–ಮುಸ್ಲಿಮ್ ವೈಷಮ್ಯದ ದಾವಾನಲ ಮಾಡಿದ ಅನಾಹುತದ ಪರಿಣಾಮವಾಗಿ ಡಾಕ್ಕಾದಿಂದ ಶಶಿಭೂಷಣ ಮೊದಲು ಕಲ್ಕತ್ತೆಗೆ ಅನಂತರ ಮುಂಬಯಿಗೆ ಓಡಿಬಂದಿದ್ದ. ಇದೇ ಕಂಪೆನಿಯ ಡಾಕ್ಕಾ ಶಾಖೆಯಲ್ಲಿ ಆತ ಕೆಲಸ ಮಾಡುತ್ತಿದ್ದುದರಿಂದ, ಮುಂಬಯಿಗೆ ಬಂದೊಡನೆಯೇ

ಕೇಂದ್ರ ಕಚೇರಿಯಲ್ಲಿ ಕೆಲಸ ದೊರಕುವುದು ಕಷ್ಟವಾಗಲಿಲ್ಲ. ಮುಖರ್ಜಿಯ ಮೌನ ಆತನ ವ್ಯಕ್ತಿತ್ವದ ವೈಶಿಷ್ಟ್ಯ; ಹಿರಿಮೆ. ಆದರೆ ಸ್ವಭಾವತಃ ರಸಿಕರಾದ ಮುಂಬಯಿ ಸಹೋದ್ಯೋಗಿಗಳಿಗೆ ಈ ಗಾಂಭೀರ್ಯ ರುಚಿಸಲಿಲ್ಲ. ಎಂತಲೇ ಬಂತು ನಾಮಕರಣ.

" ಸಿಲ್ಲಿ ಬೂರ್—ಎಸ್. ಬಿ."

ಸುಮಿತ್ರೆ ತನ್ನ ಸ್ಥಳ ಬಿಟ್ಟೆದ್ದು ಮುಖರ್ಜಿಯಿದ್ದಲ್ಲಿಗೆ ನಡೆದಳು.

ಅವಳು ಬಂದು ಹತ್ತಿರ ನಿಂತು ಎರಡು ನಿಮಿಷಗಳಾದರೂ ಆತ ಮುಖವೆತ್ತಿ ನೋಡಲಿಲ್ಲ.

ಸುಮಿತ್ರೆ ತುಸು ಅಧೀರೆಯಾದಳು.

" ನಿಮಗೆ 'ಅಸಿಸ್ಟ್' ಮಾಡಲು ಹೇಳಿದ್ದಾರೆ ಹೆಡ್ ಕ್ಲಾರ್ಕ್. "

ಈಗ ಮುಖರ್ಜಿ ಮುಖವೆತ್ತಿ ನೋಡಿದ.

ಆತ ಎವೆಯಿಕ್ಕದೆ ಸುಮಿತ್ರೆಯನ್ನೇ ನೋಡತೊಡಗಿದ. ಸುಮಿತ್ರೆಗೆ ಆತನ ನೆಟ್ಟ ನೋಟ ಅಸಹ್ಯವಾಗಿ ಕಂಡಿತು. ಅವಳು ಮಾತನಾಡದೆ ಇದ್ದಿದ್ದರೆ ಬಹುಶಃ ಆತ ದೃಷ್ಟಿಯನ್ನು ಕೆಳಗಿಳಿಸುತ್ತಲೇ ಇರಲಿಲ್ಲ.

" ಯಾವುದೋ 'ಇನ್ವೆಂಟರಿ'ಯ ವಿಚಾರ ನಿಮಗೆ ಸಹಾಯ ಮಾಡಬೇಕೆಂದು ಹೇಳಿದ್ದಾರೆ. ಏನಾದರೂ ಕೆಲಸವಿದೆಯೇ ? "

ಈಗ ಮುಖರ್ಜಿ ಮಾತನಾಡಿದ.

" ಕ್ಷಮಿಸಿ. ನಿಮ್ಮನ್ನು ನೋಡಿದೊಡನೆ ಯಾರದೋ ನೆನಪು ಬಂದು ನಾನು ಮಾತನಾಡಲಿಲ್ಲ. ಹೌದು, 'ಇನ್ವೆಂಟರಿ'ಗೆ ನಿಮ್ಮ ಸಹಾಯ ಕೊಡಿಸುತ್ತೇನೆಂದು ಹೆಡ್ ಕ್ಲಾರ್ಕ್ ಹೇಳಿದ್ದರು ಬನ್ನಿ, ಇಲ್ಲೇ ಕುಳಿತುಕೊಳ್ಳಿ " ಎಂದು ಸಮೀಪದ ಕುರ್ಚಿಯೊಂದನ್ನು ತೋರಿಸಿದ.

ಸುಮಿತ್ರೆಗೆ ಮುಖರ್ಜಿಯ ಮಾತು ಕೇಳಿ ತುಸು ಆಶ್ಚರ್ಯವಾದರೂ ಈ 'ಸಿಲ್ಲಿ ಬೂರ್'ನ ಸಹವಾಸ ಕಷ್ಟವೆಂದು ಮನಸ್ಸಿನಲ್ಲೇ ಎಣಿಸಿಕೊಂಡಳು.

ನಾಲ್ಕಾರು ದಿನ ಅವನ ಜೊತೆಗೆ ಕುಳಿತು ಸುಮಿತ್ರೆ ಕೆಲಸ ಮಾಡುತ್ತಿದ್ದಾಗ, ಆತ ವೈಯಕ್ತಿಕವಾದ ಯಾವುದೊಂದು ಮಾತನ್ನೂ ಆಡಿರಲಿಲ್ಲ. ಅವಳ ಸಹಾಯದ ಅವಧಿ ಮುಗಿದ ಮೇಲೆ ಆಕೆ ಮರಳಿ ತನ್ನ ಜಾಗಕ್ಕೆ ಹೋಗುವ ಸಮಯ ಬಂದಾಗ ಮಾತ್ರ ಒಂದು ಮಾತು ಹೇಳಿದ.

" ನೀವು ಆಫೀಸಿಗೆ ಸೇರಿದಂದಿನಿಂದ ಪ್ರತಿನಿತ್ಯ ನಿಮ್ಮನ್ನು ನೋಡು ತ್ತಿದ್ದೇನೆ. ನೋಡಿದಾಗ ನನಗೆ, ಬಂಧುವೊಬ್ಬಳ ನೆನಪು ಬರುತ್ತದೆ. ಈ ವಿಚಾರ ನೀವು ತಪ್ಪು ತಿಳಿದುಕೊಳ್ಳಬಾರದು. ನಿಮ್ಮನ್ನು ನೋಡಿದಾಗಲೆಲ್ಲ ನನಗೆ ತೀರಿಹೋದ ನನ್ನ ಅತ್ತಿಗೆಯ ನೆನಪಾಗುತ್ತದೆ. ಅವಳು ತೀರಿಹೋದ ಸಂದರ್ಭ ತುಂಬ ದುಃಖದಾಯಕವಾಗಿದ್ದುದರಿಂದ, ಆ ನೆನಪು ಪಕ್ಕನೆ ಮಾಸುವಂತಿಲ್ಲ. ಬೇರೇನೂ ಯೋಚಿಸಬೇಡಿ. "

ಸುಮಿತ್ರೆಗೆ ಪತ್ರಿಕೆಗಳಲ್ಲಿ ಓದಿದ್ದ ಪೂರ್ವ ಬಂಗಾಲದ ಜಾತೀಯ ಹತ್ಯಾಕಾಂಡಗಳೆಲ್ಲ ನೆನಪಾಗಿ "ಅಯ್ಯೋ ಪಾಪ" ಎನಿಸಿತು.

" ಛೆ ! ಛೆ ! ಹಾಗೇನೂ ಇಲ್ಲ. ಥ್ಯಾಂಕ್ಸ್ " ಎಂದಳಷ್ಟೆ.

ಆದರೆ ಹಾಗೆ ಹೇಳುವಾಗ ಈ ಸಹಾನುಭೂತಿ ಅತಿಪರಿಚಯಕ್ಕಿಳಿ ಯುವುದೆಂದು ಆಕೆ ಎಣಿಸಿರಲಿಲ್ಲ.

ಆತನ ಗಂಭೀರ ಮುಖಭಾವವೊಂದನ್ನು ಬಿಟ್ಟರೆ ಯಾರ ಕುತೂಹಲ ವನ್ನಾದರೂ ಕೆರಳಿಸಬಹುದಾಗಿದ್ದ ವ್ಯಕ್ತಿತ್ವ ಮುಖರ್ಜಿಯದು. ಸಾಧಾರಣ ೨೮ ವರ್ಷ. ವಯಸ್ಸನ್ನು ಮರೆಯಿಸುವಂಥ ಬೆಳವಣಿಗೆಯೋ ಆದರೂ ಕೊಬ್ಬಿದ ದೇಹವೇನಲ್ಲ. ಆಜಾನುಬಾಹುವಲ್ಲದಿದ್ದರೂ ಆತನ ತೋಳುಗಳು ಜಗತ್ತನ್ನೇ ಜಯಿಸುವ ಇಚ್ಛೆಯುಳ್ಳ ಶಕ್ತಿಯ ತೋಳುಗಳಂತಿದ್ದವು. ಆತನ ವೇಷಭೂಷಣಗಳೆಲ್ಲ ಅಚ್ಚ ಬಂಗಾಲೀ ಮಾದರಿಯವೆ.

ಸುಮಿತ್ರೆ ಮುಖರ್ಜಿಯರ ಪರಿಚಯ ಬೆಳೆದುದರಲ್ಲಿ ಆಶ್ಚರ್ಯವೇನೂ ಇರಲಿಲ್ಲ. ಆಫೀಸಿನಲ್ಲಿ ಕಂಡಾಗಲೆಲ್ಲ ಆಕೆ ಪರಿಚಯದ ನಗು ನಗುತ್ತಿದ್ದಳು ಮುಖರ್ಜಿಗೆ. ಆತನೂ ಶಿಷ್ಟಾಚಾರದ ಮಾತು ಆಗ-ಈಗ ಆಡುತ್ತಿದ್ದ. ಇದನ್ನು ನೋಡಿದ ವಸುಧಾ

" ಆ ಎಸ್. ಬಿ. ಗೂ ನೀನು ಬಾಯಿ ಬರಿಸಿದಿಯೋನೇ? " ಎಂದು ಸುಮಿತ್ರೆಯೊಡನೆ ಹೇಳಿದಾಗ ಸುಮಿತ್ರೆಗೆ ನಗು ಬಂತು. ಆದರೆ ಅಸಮಾ ಧಾನವಾಗಲಿಲ್ಲ.

ಈ ಪರಿಚಯ ಇದೇ ರೀತಿ ಇದ್ದಾಗ ಸುಮಿತ್ರೆ ದಾದರಿನಲ್ಲೊಮ್ಮೆ ಶಶಿಭೂಷಣನನ್ನು ಸಂಧಿಸುವ ಸಂದರ್ಭ ಒದಗಿ ಬಂತು.

ಒಂದು ಸಂಜೆ ಆಕೆ ಮೋಹನನನ್ನು ಕಾಣಲೆಂದು ಡಿಸ್ಪೆನ್ಸರಿಯನ್ನು ಪ್ರವೇಶಿಸುತ್ತಿದ್ದಾಗ ಮುಖರ್ಜಿ ಹೊರಬರುತ್ತಿದ್ದ. ಅಲ್ಲಿ ಸುಮಿತ್ರೆಯನ್ನು ಕಂಡು ಆತನಿಗೆ ಆಶ್ಚರ್ಯವಾಗಿರಬೇಕು. ಆದರೂ ಅವಸರದಿಂದ ಒಳಗೆ ಹೋಗುತ್ತಿದ್ದ ಸುಮಿತ್ರೆಯೊಡನೆ ಆಗ ಆತ ಹೆಚ್ಚಿನ ಮಾತು ಆಡಲಿಲ್ಲ.

" ಔಷಧಿಗಾಗಿ ಬಂದಿರಾ ? "

" ಹೌದು " ಎಂದು ನಕ್ಕು ಸುಮಿತ್ರೆ ಮರೆಯಾಗಿದ್ದಳು.

ಅವಳು ಅರ್ಧ ತಾಸಿನ ಮೇಲೆ ಔಷಧಿ ಹಿಡಿದುಕೊಂಡು ಹೊರಗೆ ಬಂದಾಗ ಬಾಗಿಲಲ್ಲೇ ಶಶಿಭೂಷಣ ಕಾಯುತ್ತಿದ್ದುದು ತಿಳಿದುಬಂತು. ಈಗ ಮಾತ್ರ ಅವಳಿಗೆ ಆಶ್ಚರ್ಯವಾಯಿತು. ಆದರೂ ಅದನ್ನು ತೋರಗೊಡಲಿಲ್ಲ.

" ನನಗೋಸ್ಕರ ಕಾಯುತ್ತಿದ್ದಿರೇನು ? "

" ಹೌದು. ನೀವು ದಾದರಿನಲ್ಲಿರುವಿರೆಂದು ತಿಳಿದಿರಲಿಲ್ಲ. ನಾನೂ ದಾದರಿನಲ್ಲೇ ಇರುತ್ತೇನೆ. ನೀವು ಹಿಂದೂ ಕಾಲನಿಯ ದಾರಿಯಲ್ಲಿ ಹೋಗುವವರಾದರೆ ಒಟ್ಟಿಗೆ ಮಾತಾಡಿಕೊಂಡು ಹೋಗಬಹುದು ಎಂದು ಕಾದು ನಿಂತೆ."

" ನಾನಿರುವುದು ದಾದರಿನಲ್ಲಲ್ಲ; ಕಿಂಗ್ಸ್ ಸರ್ಕಲ್‌ನಲ್ಲಿ "

" ಕಿಂಗ್ಸ್ ಸರ್ಕಲ್ ? ಅಲ್ಲಿಂದ ಇಲ್ಲಿಯ ತನಕ ಔಷಧಿಗಾಗಿ ಬರುತ್ತಿದ್ದೀರಿ. ಹತ್ತಿರ ಯಾರೂ ಡಾಕ್ಟರರಿಲ್ಲವೆ ? "

" ಬೇಕಾದಷ್ಟು ಜನ ಇದ್ದಾರೆ. ಆದರೆ ಡಾ. ರಾವ್ ಸಮೀಪದ ಸಂಬಂಧಿಗಳಾದುದರಿಂದ ಇಲ್ಲಿಗೆ ಬರುತ್ತಿದ್ದೇನೆ. "

" ಹಾಗೇನು ? " ಎಂದು ಶಶಿಭೂಷಣ ಮಾತು ನಿಲ್ಲಿಸಿದ.

ಇಬ್ಬರೂ ವಿನ್ಸೆಂಟ್ ರಸ್ತೆಯುದ್ದ ಟ್ರಾಂ ಜಂಕ್ಶನ್ ದಾಟಿ ಮುಂದೆ ಬಂದಿದ್ದರು. ಶಶಿಭೂಷಣ ಹಿಂದೂ ಕಾಲನಿಯತ್ತ ಕಡೆ ತಿರುಗುವ ಲಕ್ಷಣ ಕಂಡು ಬರಲಿಲ್ಲ.

" ನಡೆದೇ ಹೋಗುವಿರೇನು ? ಇನ್ನೊಂದೆರಡು ನಿಮಿಷ ನಿಂತರೆ ಟ್ರಾಂ ಸಿಕ್ಕೀತು. "

" ಅದು ಹೌದು '' ಎಂದು ಸುಮಿತ್ರೆ ಹೇಳಿದರೂ ಹಿಂದಿರುಗಿ ಟ್ರಾಂ ಜಂಕ್ಶನಿಗೆ ಬರಲಿಲ್ಲ. ಮುಂದುವರಿದು ಹೋಗುತ್ತಿದ್ದಳು.

“ನೀವು ನಡೆದೇ ಹೋಗುವಿರಾದರೆ, ನಿಮ್ಮ ಜೊತೆಗೆ ಕಿಂಗ್ಸ್‌ಸರ್ಕಲ್ ಗಾರ್ಡನಿನ ತನಕ ಬರುತ್ತೇನೆ. ಆಕ್ಷೇಪವಿದೆಯೆ ?”

ಮುಂದೆ ನೋಡುತ್ತಿದ್ದ ಸುಮಿತ್ರೆ ತಿರುಗಿ ಶಶಿಭೂಷಣನ ಕಡೆ ನೋಡಿ ದಳು. ಅವನ ಮಾತಿನಲ್ಲಿ ಯಾಚನೆಯಿತ್ತು.”

“ಮೊದಲೇ ನಿಮಗೆ ದೇಹಸ್ಥಿತಿ ಚೆನ್ನಾಗಿಲ್ಲವೆಂದು ತೋರುತ್ತದೆ. ಇನ್ನು ಅಲ್ಲಿಯ ತನಕ ನಡೆದು ಆಯಾಸ ಹೆಚ್ಚಿಸಿಕೊಳ್ಳಬೇಕೇ ? ”

“ಇಲ್ಲ, ಇಲ್ಲ. ನನಗೇನೂ ಆಗಿಲ್ಲ. ಔಷಧಿ ನಮ್ಮ ನೆರೆಯಲ್ಲಿರುವ ಒಂದು ಮಗುವಿಗೆ. ಆ ಮಗು ನನ್ನನ್ನು ಬಹಳ ಹಚ್ಚಿಕೊಂಡಿದೆ. ನನಗೆ ಬೇರಾವ ಬಂಧುವೂ ಇಲ್ಲ. ಹೀಗಾಗಿ ನಾನೇ ಔಷಧಿ ತರಲೆಂದು ಹೊರಟು ಬಂದೆ.”

ಸುಮಿತ್ರೆಯ ಮನಸ್ಸು ಮಿಡುಕಿತು. ಮುಖರ್ಜಿಯ ಏಕಾಂತತೆಯ ಅರಿವಾಯಿತು. ಹೃದಯದಲ್ಲಿ ಅನುಕಂಪ ಮೂಡಿತು.

“ನೀವು ನಿಮ್ಮ ಅತ್ತಿಗೆಯನ್ನು ತುಂಬ ಪ್ರೀತಿಸುತ್ತಿದ್ದಿರೇನು ?”

ಸಹಾನುಭೂತಿಗಾಗಿ ಹಾತೊರೆಯುತ್ತಿದ್ದ ಮುಖರ್ಜಿಯ ದುಃಖದ ಕಟ್ಟೆಯೊಡೆಯಿತು.

“ಎಂದು ನಾನು ನನ್ನ ತಾಯನ್ನು ಕಳೆದುಕೊಂಡು, ಅವಳ ವಾತ್ಸಲ್ಯದ ಅನ್ನವನ್ನು ಕಳೆದುಕೊಂಡೆನೋ ಅಂದಿನಿಂದ ನನಗೆ ನನ್ನ ಅಣ್ಣ ಅತ್ತಿಗೆಯ ವರೇ ತಂದೆ ತಾಯಿಗಳಾಗಿ ನಿಂತಿದ್ದರು. ಅತ್ತಿಗೆಯ ಪ್ರೀತಿಯೊಂದಲ್ಲದಿದ್ದರೆ ನಾನು ಕೈಲಾಸದ ಹಾದಿ ಎಂದೋ ಹಿಡಿಯುತ್ತಿದ್ದೆ. ಆದರೆ ಆ ಪ್ರೀತಿ ಒಂದು ದಿನ ನನ್ನನ್ನು ದುಃಖದ ಮಡುವಿನಲ್ಲಿ ದೂಡುವುದೆಂದು ನಾನು ತಿಳಿದಿರಲಿಲ್ಲ. ಜ್ವರದಲ್ಲಿ ಮಲಗಿದ್ದ ಅಣ್ಣ, ಶುಶ್ರೂಷೆಗಾಗಿ ಬಳಿಯಲ್ಲಿ ಇದ್ದ ಅತ್ತಿಗೆ ಇಬ್ಬರೂ ಜಾತೀಯ ಗಲಭೆಯ ಉರಿಯಲ್ಲಿ ಜೀವಂತ ಸುಟ್ಟುಹೋದರು. ನಾನು ಆ ದಿನ ಕಚೇರಿಯಲ್ಲಿದ್ದುದರಿಂದ, ನಮ್ಮ ಕಚೇರಿ ಪೋಲೀಸ್ ಆಫೀ ಸಿನ ಪಕ್ಕದಲ್ಲಿದ್ದುದರಿಂದ ಬದುಕಿಕೊಂಡೆ ಆದರೆ ಒಮ್ಮೊಮ್ಮೆ ನಾನೂ ಮನೆ ಯಲ್ಲೇ ಉಳಿದಿದ್ದು ಬೆಂಕಿಗಾಹುತಿಯಾಗಿದ್ದರೆ ಲೇಸಾಗಿತ್ತು ಎನಿಸುತ್ತದೆ.”

ಸುಮಿತ್ರೆ ಮೌನವಾಗಿಯೇ ಕೇಳುತ್ತಿದ್ದಳು.

" ಮುಂಬಯಿಗೆ ಬಂದ ಮೇಲಾದರೂ ಆ ಕಟು ಅನುಭವದ ನೋವು ಮರೆಯಲಾಗುವುದೆಂದು ನಂಬಿದ್ದೆ. ಮುಂಬಯಿಯಲ್ಲಿ ನನಗಾವ ಬಂಧುಗಳೂ ಇಲ್ಲ. ಒಬ್ಬ ಮಿತ್ರ ಒಂದು ಕೋಣೆ ತೆಗೆಸಿಕೊಟ್ಟಿದ್ದಾನೆ. ಹಿಂದೆ ನಾಲ್ಕಾರು ಬ್ರಹ್ಮಚಾರಿಗಳಿದ್ದರಂತೆ ಅಲ್ಲಿ. ಈಗ ಮಾತ್ರ ನಾನು ಒಬ್ಬಂಟಿಗನಾಗಿಯೇ ಇದ್ದೇನೆ. ಈ ಜೀವನ ಹಿಂದಿನ ಇತಿಹಾಸಕ್ಕೆ ತೆರೆಯೆಳೆಯುವುದೆಂದು ನಾನೆಣಿಸಿದ್ದೆ. ಆದರೆ ನಿಮ್ಮನ್ನು ಆಫೀಸಿನಲ್ಲಿ ಕಂಡಂದಿನಿಂದ ಪುನಃ ಡಾಕ್ಕಾ ಕಣ್ಣಮುಂದೆ ಸುಳಿಯುತ್ತಿದೆ. ನಿಮ್ಮನ್ನು ಮೊದಲ ಬಾರಿ ಕಂಡಂದು ನಾನು " ಅತ್ತಿಗೆ " ಎಂದು ಕರೆಯಲೇ ಎಂದೆಣಿಸಿದ್ದೆ. ಆಮೇಲೆ ನೀವು ಮಂಗಳೂರಿನವರೆಂದು ತಿಳಿದು ಬಂತು. ಆದರೆ ಇಂಥ ಹೋಲುವಿಕೆಯನ್ನು ನಾನು ನನ್ನ ಜೀವಮಾನದಲ್ಲೇ ಬೇರೆ ಕಂಡಿಲ್ಲ."

ಸುಮಿತ್ರೆಗೆ ತಾನು ಈ ಆಫೀಸಿಗೆ ಸೇರಿಕೊಂಡದ್ದು ತಪ್ಪು ಎನ್ನುವಷ್ಟು ದುಃಖವಾಯಿತು.

ತುಸು ಹೊತ್ತು ಇಬ್ಬರೂ ಮೌನವಾಗಿ ಮುಂದೆ ಸಾಗಿದ್ದರು. ಕಿಂಗ್ಸ್ ಸರ್ಕಲ್ ತೋಟ ಸಮೀಪಿಸಿದುದರಿಂದ ಮುಖರ್ಜಿ ನಿಂತ.

" ನಿಮ್ಮ ಮನೆ ಇನ್ನೂ ಬಹಳ ದೂರವಿದೆಯೆ ? "

" ಇಲ್ಲೇ ಸ್ಟೇಷನಿನ ಸಮೀಪ."

" ಹಾಗಾದರೆ ನಾನು ಇಲ್ಲಿ ತಿರುಗಲೇ ? ನಾಳೆ ಆಫೀಸಿನಲ್ಲಿ ಸಿಗುವಿರಲ್ಲ........"

ಎಂದವನೇ

" ಕೈಯಲ್ಲಿ ಔಷಧ ಬೇರೆ ಇದೆ. ಇಷ್ಟು ಹೊತ್ತು ನಿಮ್ಮ ಪ್ರಕೃತಿಗೆ ಇನ್ನಷ್ಟು ಆಯಾಸವಾಗುವಂತೆ ನಾನು ನನ್ನ ಪುರಾಣ ಹೇಳಿದೆನ ? "

" ಇಲ್ಲ " ಎಂದಳು ಸುಮಿತ್ರೆ, ನಗುತ್ತ. " ಔಷಧಿ ನನ್ನ ತಂಗಿಗೆ "

" ತಂಗಿ ! ಹಾಗಾದರೆ ನೀವು ಕುಟುಂಬ ಸಹಿತ ಮುಂಬಯಿಯಲ್ಲಿರುವಂತಿದೆ. "

" ಅಷ್ಟು ದೊಡ್ಡ ಕುಟುಂಬವೇನಿಲ್ಲ. ನನ್ನ ತಂಗಿಯೊಬ್ಬಳೇ ನನಗೆ ಉಳಿದಿರುವ ಬಂಧು. ಅವಳು ಗಂಡನ ಜೊತೆಗಿದ್ದಾಳೆ. ನಾನು ಅವರ ಮನೆಯಲ್ಲೇ ಇದ್ದೇನೆ."

"ಹಾಗಾದರೆ ನಿಮಗೆ ಮದುವೆಯಾಗಿಲ್ಲವೇ ?"

ಒಂದು ಕ್ಷಣ ಸುಮಿತ್ರೆಗೆ ಈ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟವಾಯಿತು. ಆಮೇಲೆ

"ಇಲ್ಲ" ಎಂದಳು ಸಮಾಧಾನದಿಂದ.

"ಇವೆಲ್ಲ ವಿಚಾರಗಳನ್ನು ನಾನು ಕೇಳಬಾರದಿತ್ತೆಂದು ನಿಮಗನಿಸುವುದೇನೋ ಕ್ಷಮಿಸಿ. ಬರುತ್ತೇನೆ" ಎಂದು ಮುಖರ್ಜಿ ತನ್ನ ಹಾದಿ ಹಿಡಿದು ಹೋದ.

ಒಂದೆರಡು ನಿಮಿಷ ಸುಮಿತ್ರೆ ನಿಂತಲ್ಲೇ ನಿಂತಿದ್ದಳು—ಸಂಜೆಯ ವಿಹಾರಕ್ಕೆಂದು ತೋಟದ ಸುತ್ತು ಅತ್ತಿಂದಿತ್ತ ತಿರುಗುತ್ತಿದ್ದ ಜನಸಾಗರವನ್ನು ನೋಡುತ್ತ.

ತೋಟ ದಾಟಿ ಮನೆಯ ಹಾದಿ ಹಿಡಿಯುವಾಗ ಅವಳ ಮನಸ್ಸಿನಲ್ಲಿ ಒಮ್ಮಿಂದೊಮ್ಮೆ ವಿಚಾರವಿಪ್ಲವ ಆರಂಭವಾಯಿತು.

"ಅವನೇಕೆ ನನ್ನ ಮದುವೆಯ ವಿಚಾರ ಪ್ರಶ್ನಿಸಿದ ?"

ಸ್ವಾಭಾವಿಕವಾಗಿ ಸುಮಿತ್ರೆ ಆ ಪ್ರಶ್ನೆಯಿಂದ ಅವಮಾನಿತಳಾಗಬೇಕಿತ್ತು. ಆಕೆಗೆ ಸಿಟ್ಟು ಬರಬೇಕಿತ್ತು. ಆದರೆ ಹಾಗೇನೂ ಆಗಲಿಲ್ಲ. ಆಕೆ ಯಾವ ಸಂಕೋಚವೂ ಇಲ್ಲದೆ "ನನ್ನ ಮದುವೆಯಾಗಿಲ್ಲ" ಎಂದು ಉತ್ತರ ಕೊಟ್ಟಿದ್ದಳು. ತಿಳಿಯಾದ ಒಂದು ಸಹಾನುಭೂತಿಯ ಹಿನ್ನೆಲೆಯಲ್ಲಿ ತಾನು ಎಲ್ಲ ಸಂಕೋಚವನ್ನು ಬದಿಗಿರಿಸುವುದು ಸರಿಯೇ ಎಂದು ಮನಸ್ಸು ಶಂಕಿಸಿತು. ಆದರೆ ಇಲ್ಲಿ ಸಂಕೋಚದ ಪ್ರಶ್ನೆಯೇಕೆ ಉದ್ಭವಿಸುತ್ತಿದೆಯೆಂದು ಆಕೆಗೆ ತಿಳಿಯಲಿಲ್ಲ.

ಮುಖರ್ಜಿಯೊಡನೆ ಮಾತನಾಡುವುದರಿಂದ ಆಕೆಗೆ ಬೇಸರವಾಗುತ್ತಿರಲಿಲ್ಲ. ಆತನ ದುಃಖ ಒಂಟಿತನಗಳನ್ನು ನೆನೆದು ಆಕೆಗೆ ಮರುಕವುಂಟಾಗಿತ್ತು. ಆತನೊಡನಿರಿಸಿದ್ದ ಯಾವ ವ್ಯವಹಾರದಲ್ಲೂ ಆಕೆಗೆ ನಾಚಿಕೊಳ್ಳಬೇಕಾದ ಅಂಶವಿದೆಯೆಂದು ಎನಿಸಿರಲಿಲ್ಲ.

ಆದರೂ ಆತ ತನ್ನ ಮದುವೆಯ ವಿಚಾರ ಪ್ರಶ್ನಿಸಿ ಯಾವುದೋ ಒಂದು ಹೊಸ ಜಗತ್ತಿಗೆ ತನ್ನನ್ನು ಕೊಂಡೊಯ್ಯುತ್ತಿದ್ದಾನೆ ಎಂದು ತಿಳಿದಳು.

ಈ ವಿಚಾರ ಪ್ರತಿಭಟಿಸುವ ಯೋಚನೆ ಸುಮಿತ್ರೆಯ ಮನಸ್ಸಿನಲ್ಲಿ ಸುಳಿಯಲಿಲ್ಲ.

ಸುಮಿತ್ರೆ ಮನೆ ಸೇರಿದಾಗ ರಾತ್ರಿಯೇರಿತ್ತು. ಬಾಲ್ಕನಿಯಲ್ಲಿ ನಿಂತು ಇವಳು ಬರುತ್ತಿರುವುದನ್ನೇ ನೋಡುತ್ತಿದ್ದ ಗೋಪಿ ಸುಮಿತ್ರೆ ಹತ್ತಿರ ಬಂದಾಗ "ಎಷ್ಟು ಹೊತ್ತಾಯಿತು ಸುಮಿತ್ರಾ. ಅಣ್ಣ ಡಿಸ್ಪೆನ್ಸರಿಯಲ್ಲಿ ಇರಲಿಲ್ಲವೇ" ಎಂದು ನಗುತ್ತ ಕೇಳಿದ.

"ನಡೆದು ಬಂದೆ, ತಡವಾಯಿತು" ಎಂದು ಉತ್ತರಕೊಡುವಾಗ ಸುಮಿತ್ರೆಯ ಮುಖದಲ್ಲಿ ನಗು ನಾಟ್ಯವಾಡುತ್ತಿತ್ತು.

ನಗುತ್ತ ಇದಿರು ನಿಂತ ಗೋಪಿಯನ್ನು ಕಂಡಾಗ ಆಕೆಗೆ ಏಕೋ ಜಗ ವಿಡೀ ತನ್ನಂತೆಯೇ ನಗುತ್ತಿದೆ, ತನ್ನಷ್ಟು ಸುಖಿ ಇನ್ನಾರೂ ಇಲ್ಲ—ಎಂದು ತೋರಿತು.

ಕಾರಣವಿಲ್ಲದೆ, ಅಂದು ಸುಮಿತ್ರೆ ಆಕೆಯ ಜೀವಮಾನದಲ್ಲೇ ಮೊದಲ ಬಾರಿಗೆ ಅತ್ಯಂತ ಸುಖಿ.

೧೯

ಸುಮಿತ್ರೆಯ ಪರಿಚಯ ಬೆಳೆದಂತೆ ಮುಖರ್ಜಿ ಆಕೆಯ ಸಹವಾಸ ವನ್ನು ಹೆಚ್ಚು ಹೆಚ್ಚು ಬಯಸುತ್ತಿದ್ದ. ಮುಖರ್ಜಿಯ ಸಹವಾಸದಿಂದ ಸುಮಿ ತ್ರೆಗೆ ಬೇಸರವೂ ಆಗುತ್ತಿರಲಿಲ್ಲ.

ಆತನದೂ ಒಂಟಿ ಜೀವನ, ತನ್ನ ಏಕಾಂತತೆಯ ಬಿಡುಗಡೆಗೆ ಏಕಾಂತತೆ ಯನ್ನು ಅರಿತ ಇನ್ನೊಂದು ಜೀವದಿಂದ ತುಸುವಾದರೂ ಸಮಾಧಾನ ಸಿಗ ಬಹುದು ಎಂಬ ನಂಬಿಕೆ ಸುಮಿತ್ರೆ ಮುಖರ್ಜಿಯ ಸಹವಾಸವನ್ನು ಸಹಿಸು ವಂತೆ ಮಾಡಿತು.

ಮೊದಮೊದಲು ಆಫೀಸಿನಲ್ಲಿ ಆಕೆಗೆ ಮಾತಾಡಲು ಧೈರ್ಯ ವಿರುತ್ತಿದ್ದುದು ಸಹೋದ್ಯೋಗಿ ಗೆಳತಿಯರೊಡನೆ ಮಾತ್ರ ವಸುಧಾ ಕಾಳೆ, ರುಕ್ಮಿಣಿ ಥಾಕುರ್‌ದಾಸ್, ಲಿಲ್ಲಿ ಡಿಸೋಜ, ಮಿಸೆಸ್ ಪಟವರ್ಧನ್ ಇವರೇ ಆಕೆಯ ಪರಿಚಿತ ಗೆಳತಿಯರು. ಲಂಚ್ ಬಿಡುವಿನ ವೇಳೆಯ ಹರಟೆ, ಸಂಜೆ

ಆಫೀಸಿನಿಂದ, ವಿ. ಟಿ. ಯ ತನಕದ ಹಾದಿ ತುಳಿಯುವಿಕೆ, ಇವೆಲ್ಲ ಇವರ ಜೊತೆಗೇ ಸಾಗುತ್ತಿತ್ತು. ಆದರೆ ಇದೆಲ್ಲ ಕೆಲವು ದಿನ ಮಾತ್ರ. ಮಿಸೆಸ್ ಪಟವರ್ಧನ್ ಒಬ್ಬಳ ಹೊರತಾಗಿ ಸುಮಿತ್ರೆಯನ್ನು ಗೆಳತಿಯೆಂದು ಪರಿಗಣಿಸುವವರು ಉಳಿದ ಮೂರು ನಾಲ್ಕು ಮಂದಿ ಮಹಿಳೆಯರಲ್ಲಿ ಯಾರೂ ಇರಲಿಲ್ಲ.

ಇದಕ್ಕೆ ಕಾರಣ ತಿಳಿಯಲು ಸುಮಿತ್ರೆಗೆ ಹೆಚ್ಚು ಸಮಯ ಬೇಕಾಗಿರಲಿಲ್ಲ.

ಮಿಸೆಸ್ ಪಟವರ್ಧನ್ ಒಬ್ಬಳ ಹೊರತಾಗಿ ಉಳಿದೆಲ್ಲರಿಗೂ ಅವರವರ ಒಲವಿನ ದೃಷ್ಟಿ ಬೇರೆಯೇ ಇತ್ತು. ಅವರವರ ಪ್ರಣಯಕಥೆ ಅವರವರ ವೈಯಕ್ತಿಕ ಸೊತ್ತು. ಅದರ ವಿವರಗಳನ್ನು ಆಫೀಸಿನ ಗೆಳತಿಯರಿಗೆ ತಿಳಿಸಲು ಅವರು ಅಷ್ಟು ಉತ್ಸುಕರಾಗಿರಲಿಲ್ಲ. ಆದರೆ ಲಂಚ್ ಹೊತ್ತಿನಲ್ಲಿ ಆಫೀಸು ಬಿಟ್ಟೊಡನೆ ಅಥವಾ ಸಂಜೆ ಬಿಡುಗಡೆಯ ಹೊತ್ತು ಬಂದಾಗ, 'ಕ್ಯಾಲ್ಟೆಕ್ಸ್' ಪಂಪಿನ ಬಳಿ, 'ಡಿ' ರೂಟ್ ಬಸ್ ಸ್ಟ್ಯಾಂಡಿನಲ್ಲಿ, ಫಾರಿನ್ ಪೋಸ್ಟಾಫೀಸಿನ ಮುಂದುಗಡೆ, ಬೆಲ್ಲಾರ್ಡ್ ಕೆಫೆಯ 'ಕಾರ್ನರ್ ಸೀಟ್'ನಲ್ಲಿ–ಹೀಗೆ ಗೊತ್ತು ಪಡಿಸಿದ ಸ್ಥಳಗಳಲ್ಲಿ ಅವರಿಗೆಲ್ಲ ಒಬ್ಬೊಬ್ಬ ಕಾಯುವ ಗೆಳೆಯರಿದ್ದಾರೆ ಎಂದು ತಿಳಿದಮೇಲೆ ಸುಮಿತ್ರೆ ತಾನಾಗಿಯೇ ಅವರ ಸಹವಾಸವನ್ನು ಕಡಿಮೆ ಮಾಡಿದಳು. ಮೊದಲು ಕೆಲವು ದಿನ ಜತೆಯಾಗಿ ಮಧ್ಯಾಹ್ನ ಕಾಫಿ ಕುಡಿಯಲು ಹೋಗುತ್ತಿದ್ದರು. ಆದರೆ ಇದು ಅವರಿಗೆ ತೊಂದರೆಯುಂಟುಮಾಡುತ್ತಿದೆಯೆಂದು ತಿಳಿದಮೇಲೆ, ಸುಮಿತ್ರೆ ಹೊತ್ತು ತಪ್ಪಿಸಿ ಒಬ್ಬಳೇ ಹೋಗಿ ತನ್ನ ಉಪಾಹಾರ ಮುಗಿಸಿ ಬರುತ್ತಿದ್ದಳು.

ಆದರೆ ಮುಖರ್ಜಿಯ ಪರಿಚಯ ಬೆಳೆದಂತೆ ಈ ಹೊತ್ತಿನಲ್ಲೆಲ್ಲ ಅವನ ಸಹವಾಸ ಆಕೆಗೆ ದೊರಕತೊಡಗಿತು. ಲಂಚ್ ಹೊತ್ತಿನಲ್ಲಿ ಆತ, ಸುಮಿತ್ರೆ ಕುರ್ಚಿ ಬಿಟ್ಟೇಳುವ ಹೊತ್ತಿಗೇ ದಾರಿಗೆ ಅಡ್ಡವಾಗಿ ಬರುತ್ತಿದ್ದ. ಸಂಜೆ ಮನೆಯ ಹಾದಿ ಹಿಡಿಯುವಾಗ ಆಕೆಗಿಂತ ಹತ್ತು ಹೆಜ್ಜೆ ಮುಂದೆಯಿದ್ದು ಸುಮಿತ್ರೆಗಾಗಿ ಕಾದು ನಿಲ್ಲುತ್ತಿದ್ದ.

ಮಾತು ಮೊದಲು ಅವನ 'ಅತ್ತಿಗೆ'ಯ ಕುರಿತೇ ಪ್ರಾರಂಭವಾಗುತ್ತಿತ್ತು; ಪರ್ಯಾಯವಾಗಿ ಸಾಮಾನ್ಯ ಎಲ್ಲರೂ ಚರ್ಚಿಸಬಹುದಾದ ಎಲ್ಲ ವಿಚಾರಗಳ ಕಡೆಗೂ ತಿರುಗುತ್ತಿತ್ತು.

ಮುಖರ್ಜಿ ಸುಮಿತ್ರೆಯ ಸ್ನೇಹವನ್ನು ಸಂಪಾದಿಸಿದ ಮೇಲೆ ಮೊದ ಮೊದಲು ತನ್ನ ಸಹವಾಸವನ್ನು ಒತ್ತಾಯಪೂರ್ವಕ ಆಕೆಯ ಮೇಲೆ ಹೇರು ತ್ತಿರಲಿಲ್ಲ. ಆಕೆಯ ಸಮಯ, ಆಕೆಯ ವಿಚಾರ, ಆಕೆಯ ನಡವಳಿಕೆಗಳಿಗೆ ಹೊಂದುವಂತೆ ತನ್ನ ವರ್ತನೆಯನ್ನಿರಿಸಿದ್ದ. ಆದರೆ ಬರಬರುತ್ತ ತಾನಾಗಿಯೇ " ಇವತ್ತು ಫಿರೋಜ್ ಶಾ ಮೇಥಾ ರಸ್ತೆಗಾಗಿ ಹೋಗೋಣವೇ " ಎಂದು ಆಕೆಯನ್ನು ದೂರದ ಹಾದಿಯಲ್ಲಿ ವಿ. ಟಿ.ಗೊಯ್ಯುತ್ತಿದ್ದ. " ಒಂದಿಷ್ಟು ಕಾಫಿ ಕುಡಿಯೋಣವೇ " ಎಂದು ಸುಮಿತ್ರೆಯ ಅಭಿರುಚಿಯನ್ನು ಗುರುತಿಸಿ ಕೊಂಡು ಯಾವುದಾದರೊಂದು ಮದರಾಸೀ ಹೋಟೆಲಿಗೆ ಆಕೆಯನ್ನು ಕರೆ ದೊಯ್ಯುತ್ತಿದ್ದ. ಸಲಿಗೆ ಬೆಳೆದರೂ ಸುಮಿತ್ರೆ ಮುಖರ್ಜಿಯ ಸ್ನೇಹವನ್ನು ತಿರಸ್ಕರಿಸುತ್ತಿರಲಿಲ್ಲ. ಆಕೆಗೆ ಆತನ ಅತಿಯಾದ ಸ್ನೇಹ, ಸಲುಗೆ, ಆತ್ಮೀಯತೆ ಗಳು ಬೇಕಾಗಿದ್ದುವೆಂದಲ್ಲ. ಆದರೆ ಯಾವುದೋ ಒಂದು ಕನಸಿನ ರಾಜ್ಯಕ್ಕೆ ದಾರಿ ತೋರಿಸಲು ಮುಖರ್ಜಿ ನೆರವಾಗುತ್ತಿದ್ದಾನೆ ಎಂದು ಆಕೆಯ ಮನಸ್ಸು ಹೇಳುತ್ತಿತ್ತು.

ತನ್ನ ಮನಸ್ಸನ್ನು ವಿರೋಧಿಸಿ ಯಾವ ಕೆಲಸವನ್ನೂ ಮಾಡುವ ಸ್ಥಿತಿ ಯಲ್ಲಿ ಸುಮಿತ್ರೆ ಈಗ ಇರಲಿಲ್ಲ.

ಒಂದು ಶನಿವಾರ ಮಧ್ಯಾಹ್ನ, ಒಂದು ಘಂಟೆಗೆ ಆಫೀಸು ಮುಚ್ಚಿ ದೊಡನೆ ಸುಮಿತ್ರೆ ಹೊರಬಂದಾಗ ಮುಖರ್ಜಿ ಸಿಕ್ಕಿದ.

" ನಿಮಗೆ ಬೇಗ ಮನೆ ತಲುಪಬೇಕಾಗಿದೆಯೇನು, ಸುಮಿತ್ರಾದೇವಿ ? " ಎಂದು ಕೇಳಿದ.

" ಬೇಗವೆಂದೇನು, ಆಫೀಸು ಬಿಟ್ಟರೆ ಮನೆ, ಮನೆ ಬಿಟ್ಟರೆ ಆಫೀಸು, ಇದ್ದೇಇದೆಯಲ್ಲ " ಎಂದಳು ಸುಮಿತ್ರೆ.

ವಾಸ್ತವವಾಗಿ ಅವಳಿಗೆ ಶನಿವಾರ ಮಧ್ಯಾಹ್ನ ಕಳೆಯುವುದು ತುಂಬ ಕಷ್ಟವಾಗುತ್ತಿತ್ತು. ಗೋಪಿ ಶನಿವಾರ ಮಧ್ಯಾಹ್ನ ತಪ್ಪದೆ ಪದ್ಮಾವತಿಯ ಜೊತೆಗೆ ಸಿನೆಮಾಕ್ಕೆ ಹೋಗುತ್ತಿದ್ದ. ದೂರ ಪ್ರಯಾಣ ಪದ್ಮಾವತಿಗೆ ಸದ್ಯ ಸಾಧ್ಯವಾಗುತ್ತಿರಲಿಲ್ಲವಾದ ಕಾರಣ ಶನಿವಾರ ಮಧ್ಯಾಹ್ನ ಅವಳನ್ನು ' ಅರೋರಾ ' ದ ತನಕ ಕರೆದುಕೊಂಡು ಹೋಗುವ ಕಾರ್ಯ ಕ್ರಮವನ್ನು ಗೋಪಿ ತಪ್ಪಿಸುತ್ತಿರಲಿಲ್ಲ. ಕುಸುಮಾವತಿ ನಾಡಕರ್ಣಿ

ಶನಿವಾರ ತಪ್ಪದೆ ಗ್ರಾಂಟ್ ರೋಡಿನಲ್ಲಿರುವ ತನ್ನ ಅಕ್ಕನ ಮನೆಗೆ ಹೋಗುತ್ತಿದ್ದಳು. ಹೀಗಾಗಿ ಸುಮಿತ್ರೆ ಹೆಚ್ಚಾಗಿ ದಾದರಿನತನಕ ಹೋಗಿ ಶೀಲೆಯ ಜೊತೆಗೆ, ಇಲ್ಲವಾದರೆ ಮನೆಯಲ್ಲೇ ಏನಾದರೂ ಪುಸ್ತಕ ಹಿಡಿದು ಬಿಡುವನ್ನು ಕಳೆಯಬೇಕಾಗಿ ಬರುತ್ತಿತ್ತು.

ಇಂದು, ಮುಖರ್ಜಿಯ ಪ್ರಶ್ನೆಗೆ ಅದೇ ಕಾರಣ, ಆಕೆಗೆ ಹೊಳೆದುದು ಒಂದು ಅಸಮರ್ಪಕ ಉತ್ತರ.

"ಮನೆ ಎಲ್ಲರಿಗೂ ಇದೆ ಬಿಡಿ. ಬೇರೇನೂ ಕೆಲಸವಿಲ್ಲವಾದರೆ ಮೆಟ್ರೋ' ಗೆ ಹೋಗೋಣವೇ ಎಂದು ಕೇಳಿದೆ."

"ಮೆಟ್ರೋ!"

"ಹೌದು ಮೆಟ್ರೋ."

ಸುಮಿತ್ರೆ ಈ ಪ್ರಶ್ನೆಯನ್ನು ನಿರೀಕ್ಷಿಸಿರಲಿಲ್ಲ. ಎಲ್ಲ ಸಂಕೋಚವನ್ನು ಬದಿಗಿರಿಸಿ ತನ್ನನ್ನು ಸಿನೆಮಾ ನೋಡಲು ಬಾ ಎಂದು ಕರೆಯುತ್ತಿರುವನಲ್ಲಾ ಎಂದೆನಿಸಿತಾದರೂ ಆಕೆಗೆ ಸಿಟ್ಟು ಬರಲಿಲ್ಲ. ಪದ್ಮಾವತಿ ಸಿನೆಮಾಕ್ಕೆ ಜೊತೆಗೆ ಬಾ' ಎಂದರೆ ಬೇಡವೆಂದು ಮನಸ್ಸು ಹೇಳುತ್ತಿತ್ತು. ಗಂಡ ಹೆಂಡಿರ ಏಕಾಂತತೆಗೆ ನನ್ನಿಂದಾಗಿ ತೊಂದರೆ ಬೇಡ ಎಂದೇ ಪದ್ಮಾವತಿಯ ಒತ್ತಾಯವನ್ನು ಮನ್ನಿಸುತ್ತಿರಲಿಲ್ಲ. ಈಗ ಮುಖರ್ಜಿ ಜೊತೆಯಾಗಿ ಸಿನೆಮಾ ನೋಡೋಣವೇ ಎಂದಾಗ, ಸುಮಿತ್ರೆಗೆ ಏನು ಉತ್ತರ ಹೇಳುವುದೆಂದು ತೋರಲಿಲ್ಲ. ಶನಿವಾರ ಹೊತ್ತುಮಾಡಿ ಮನೆಗೆ ಮರಳಿದರೂ ಪದ್ಮಾವತಿ ಎಲ್ಲಿಗೆ ಹೋಗಿದ್ದೆ; ಏಕೆ ತಡ?' ಎಂದು ಕೇಳುವ ಸ್ಥಿತಿಯಲ್ಲಿರಲಿಲ್ಲ. ಒಂದು ವೇಳೆ 'ಸಿನೆಮಾ ನೋಡಲು ಹೋಗಿದ್ದೆ' ಎಂದು ಹೇಳಿದರೂ ಯಾಕೆ? ಏನು' ಎಂದು ಪ್ರಶ್ನಿಸುವಾಕೆ ಪದ್ಮಾವತಿಯಾಗಿರಲಿಲ್ಲ.

ಆದರೂ ಮುಖರ್ಜಿಯೊಡನೆ ಸಿನೆಮಾ ಎಂದು ತಿಳಿದಾಗ ಮನಸ್ಸಿನಲ್ಲಿ ಏನೋ ಒಂದು ತೆರನಾದ ಉದ್ವೇಗ, ಏನೋ ಒಂದು ರೀತಿಯ ಆನಂದ. ಅದರಲ್ಲೂ ಮತ್ತೆ ಸಂಕೋಚ.

"ಇಲ್ಲ ಕ್ಷಮಿಸಿ. ಇವತ್ತು ಬರುವುದಿಲ್ಲ. ಡಾ. ಮೋಹನರಾಯರ ಮನೆಗೆ ಹೋಗಬೇಕಾಗಿದೆ. ಇನ್ನೊಮ್ಮೆ ಯಾವಾಗಲಾದರೂ ಹೋಗಬಹುದು.

ಸುಮಿತ್ರೆಯ ಸಂಕೋಚ ಈ ಮಾತನ್ನಾಡಿಸಿತು.

ತನ್ನ ಸಂಕೋಚದ ಉತ್ತರದಿಂದಲೇ ಮನಸ್ಸಿನ ದಾಕ್ಷಿಣ್ಯವನ್ನು ಗುರುತಿಸಿ ಮುಖರ್ಜಿ ಇನ್ನು ಸಿನೆಮಾದ ಮಾತು ಆಡುವುದಿಲ್ಲವೆಂದು ಸುಮಿತ್ರೆ ಭಾವಿಸಿದ್ದಳು. ಆದರೆ ಈ ಭಾವನೆ ಸುಳ್ಳಾಯಿತು. ಸುಮಿತ್ರೆಯ ಅರ್ಧ ಸಮ್ಮತಿಯ ಆಧಾರದಿಂದಲೇ ಇನ್ನೊಂದು ಶನಿವಾರ ಆಫೀಸಿನಲ್ಲೇ ಮುಖರ್ಜಿ ಸುಮಿತ್ರೆಯೊಡನೆ " ಬರುತ್ತೀರೇನು " ಎಂದು ಕೇಳಿದ.

ಸುಮಿತ್ರೆಗೆ ಮೊದಲು ಆತ ಏನು ವಿಚಾರಿಸುತ್ತಿದ್ದಾನೆಂದು ತಿಳಿಯಲಿಲ್ಲ. ಆದರೆ ಶನಿವಾರದ ನೆನಪು ಒಂದೊಡನೆ ' ಸಿನೆಮಾ ' ಕಣ್ಣಮುಂದೆ ಬಂತು. ಕಳೆದ ವಾರ ಹೋದರೂ ಹೋಗಬಹುದು ಎಂಬಾಸೆ ಮನಸ್ಸಿನಲ್ಲಿ ಸುಳಿದಿತ್ತು. ಈ ವಾರ ಮಾತ್ರ ' ಅಯ್ಯೋ, ಇವನು ಪೀಡಿಸುತ್ತಾನಲ್ಲಾ ' ಎಂದು ತೋರಿತು. ಆದರೂ ಒಪ್ಪಿಕೊಂಡ ಮಾತನ್ನು ಹಿಂದೆಗೆದುಕೊಳ್ಳಲು ಸಂಕೋಚವಾಯಿತು. ಒಂದುಬಾರಿ ಹೋಗಿ ಈ ರಗಳೆ ತೀರಿಸಿಬಿಟ್ಟರಾಗದೇ ಎಂಬ ಆಲೋಚನೆಯೂ ಸುಳಿಯಿತು.

" ನೋಡಿ ಮುಖರ್ಜಿ ಬಾಬು, ನನ್ನ ತಂಗಿಗೆ ದಿನ ತುಂಬುತ್ತಿದೆ. ಅವಳನ್ನೊಬ್ಬಳನ್ನೆ ನಾನು ಮನೆಯಲ್ಲಿ ಬಿಟ್ಟಿರಲಾರೆ. ಆದರೆ ಕಳೆದ ವಾರ ಒಪ್ಪಿಕೊಂಡೆನೆಂದು ಇವೊತ್ತು ಬರುತ್ತೇನೆ. ಆದರೆ ಮನೆಯ ನೆನಪಾದರೆ ನಾನು ಸಿನೆಮಾ ಬಿಟ್ಟು ಅರ್ಧದಲ್ಲೆ ಹೊರಟರೂ ಹೊರಟೆ " ಎಂದಳು.

ಮುಖರ್ಜಿ ಉತ್ತರ ಕೊಡಲಿಲ್ಲ. ಸುಮಿತ್ರೆ ಜೊತೆಗೆ ಬರುವಳೆಂಬ ಸಂತೋಷ ಅವನ ಮನಸ್ಸಿನಲ್ಲಿ ಮೂಡಿಸಿದ ಭಾವನೆಗಳೆಲ್ಲ ಅವನ ನಗುವಿನಲ್ಲಿ ಪ್ರತಿಬಿಂಬಿತವಾಗಿದ್ದವು.

ಆದರೂ ಸುಮಿತ್ರೆಗೆ ಆದಿನ ಮುಖರ್ಜಿಯ ಜೊತೆಗೆ ಸಿನೆಮಾ ನೋಡಲಾಗಲಿಲ್ಲ.

ಆಫೀಸು ಬಿಡಲು ಇನ್ನರ್ಧ ಘಂಟೆಯಿದೆಯೆನ್ನುವಾಗ ಹೊರಗೆ ' ವಿಸಿಟರ್ಸ್ ರೂಮ್ ' ನಲ್ಲಿ ಸುಮಿತ್ರೆಗಾಗಿ ಯಾರೋ ಕಾದಿದ್ದಾರೆ ಎಂದು ಜನ ಬಂತು. ಸುಮಿತ್ರೆಗೆ ಮೊದಲು ಆಶ್ಚರ್ಯವಾಯಿತು; ತನ್ನನ್ನು ಆಫೀಸಿನಲ್ಲಿ ಕಾಣಲು ಬಂದವರು ಯಾರಿರಬಹುದೆಂದು. ಗೋಪಿಯಾಗಿದ್ದರೆ ನೇರವಾಗಿ ತಾನು ಕುಳಿತಿದ್ದಲ್ಲಿಗೇ ಬರುತ್ತಿದ್ದ; ಅಥವಾ ಟೆಲಿಫೋನ್ ಮೂಲಕ

ಮಾತನಾಡುತ್ತಿದ್ದ. ಬೇರೆ ಕೇಳಿಕೊಂಡು ಬರುವ ಗೆಳತಿಯರಾರೂ ಅವಳಿಗೆ ಇರಲಿಲ್ಲ. ಇದ್ದರೆ ಕುಸುಮಾವತಿಯೊಬ್ಬಳಿರಬೇಕು. ಆದರೆ ಅವಳು ಇಲ್ಲಿಗೆ ಬರಲಾರಳು, ಎಂದು ತುಂಬ ಅಸಮಾಧಾನದಿಂದಲೇ ಸುಮಿತ್ರೆ 'ವಿಸಿಟರ್ಸ್ ರೂಮ್' ನತ್ತ ತೆರಳಿದಳು.

ಅಲ್ಲಿ ಅವಳಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ.

ತನ್ನ ತಂದೆಯ ಹಾಗೂ ಮೂರ್ತಿಯ ಸಹೋದ್ಯೋಗಿಯಾಗಿದ್ದ, ಮಂಗಳೂರಿನ ಶಾಲೆಯ ಲೆಕ್ಕದ ಅಧ್ಯಾಪಕ ಕುಡುಮತ್ತಾಯರು ಸುಮಿತ್ರೆಯ ದಾರಿ ನೋಡುತ್ತಿದ್ದರು.

ಗುರುವಿಗೆ ನಗುತ್ತಲೇ ನಮಸ್ಕರಿಸಿದ ಸುಮಿತ್ರೆಯ ಆಶ್ಚರ್ಯದ ಆರಂಭದ ಉದ್ವೇಗ ಇನ್ನೂ ಇಳಿದಿರಲಿಲ್ಲ.

"ಇದೇನಿದು ಮಾಸ್ಟ್ರೆ. ನೀವೂ ಮುಂಬಯಿಗೆ ಬಂದುಬಿಟ್ಟಿರಾ?"

"ಹೌದಮ್ಮ, ಬರಬೇಕಾಗಿ ಬಂತು. ನೀನು ಹೇಗಿದ್ದಿ? ಪದ್ಮಾವತಿ ಹೇಗಿದ್ದಾಳೆ?"

"ನಾವೆಲ್ಲ ಚೆನ್ನಾಗಿದ್ದೇವೆ. ಅಲ್ಲಿ ಅಣ್ಣ ಹೇಗಿದ್ದಾರೆ? ಅವರ ಮನೆಗೆ ಹೋಗಿದ್ದಿರೇನು? ಮೀರಕ್ಕ ಹೇಗಿದ್ದಾರೆಂದು ಗೊತ್ತಿದೆಯೆ?"

ಕುಡುಮತ್ತಾಯರ ಮುಖ ಕಳೆಗುಂದಿತ್ತು. ಸುಮಿತ್ರೆಗೆ ಮೊದಲ ನೋಟಕ್ಕೆ ಅದು ಗೋಚರಿಸಲಿಲ್ಲ. ಅದೂ ಸುಮಿತ್ರೆ "ಅಣ್ಣ ಹೇಗಿದ್ದಾರೆ" ಎಂದು ಕೇಳಿದಾಗ ಅತೀವ ವೇದನೆಯಿಂದ ಅವರು ಬಳಲುತ್ತಿರುವಂತೆ ತೋರುತ್ತಿತ್ತು.

ವಾಸ್ತವವಾಗಿ ಸುಮಿತ್ರೆಯ ವಿಚಾರ ಕುಡುಮತ್ತಾಯರು ಮಂಗಳೂರಲ್ಲೇ ತುಂಬ ವೇದನೆಯನ್ನನುಭವಿಸಿದ್ದರು.

ಪಂಡಿತರು ತೀರಿ ಹೋದಮೇಲೆ ಕುಡುಮತ್ತಾಯರಿಗೆ, ಅವರ ಮರಣದಿಂದುಂಟಾದ ಕೊರತೆ ಅಷ್ಟೊಂದು ಅನುಭವಕ್ಕೆ ಬಂದಿತ್ತು. ಅಧ್ಯಾಪಕರೊಳಗೇ ಆಗುವ ನೂರೆಂಟು ಕಚ್ಚಾಟಗಳಲ್ಲಿ ಯಾರಿಗೂ ಸೋಲಾಗದಂತೆ ಮಧ್ಯಸ್ಥಿಕೆ ವಹಿಸಬಲ್ಲ, ಯಾವ ವಿರಸ ಪ್ರಸಂಗವನ್ನೂ ಸರಸದ ಹೊಸ್ತಿಲಿಗೆ ತಂದು ಬಿಡಬಲ್ಲ ವ್ಯಕ್ತಿ, ಶ್ರೀನಿವಾಸರಾಯರಾಗಿದ್ದರು. ಅವರು ತೀರಿ ಹೋದ ಮೇಲೆ ಶಾಲೆಗೇ ಸ್ವಲ್ಪ ಮಂಕು ಬಡಿದಂತಾಗಿತ್ತು. ಕುಡುಮತ್ತಾಯರಿಗೆ ಶ್ರೀನಿವಾಸರಾಯರ ಸ್ನೇಹದ ನೆನಪು ಅವರ ಮರಣದ ನಂತರ ಆಗತೊಡಗಿ

ದಾಗ, ಸುಮಿತ್ರೆಯ ಮದುವೆಯ ವಿಚಾರ ತಾನು ನಡೆಸಿದ್ದ ಅಪಪ್ರಚಾರದ ನೆನಪು ಬಂದು ಪಶ್ಚಾತ್ತಾಪದ ಹೃದಯಮಂಥನ ಆರಂಭವಾಯಿತು. ಸುಮಿತ್ರೆ ಫೇಲೆಂದು ತಿಳಿದಮೇಲಂತೂ ಅವಳ ಭವಿಷ್ಯಕ್ಕೆ ತಾನೇ ಹೊಣೆಯೇ ಎನ್ನುವ ರೀತಿಯ ಬೇಸರವನ್ನು ಕುಡುಮತ್ತಾಯರು ತಂದುಕೊಂಡಿದ್ದರು. ತನ್ನ ಮಗ ಶ್ರೀಧರ ಅದೇ ವರ್ಷ ಇಂಟರಿನಲ್ಲಿ ನಾಪಾಸಾಗಿದ್ದರೂ ಅದ ರಿಂದಾದ ಬೇಸರಕ್ಕಿಂತ ಹೆಚ್ಚು ನೋವನ್ನು ಸುಮಿತ್ರೆಯ ಅಪಜಯದಿಂದಾಗಿ ಅನುಭವಿಸಿದ್ದರು. ಅದೂ ಅವಳ ಮಾರ್ಕ್ಸ್ ಲಿಸ್ಟ್ ಬಿಡಿಸಿ ನೋಡಿ 'ಲೆಕ್ಕ' ದಲ್ಲೇ ಆಕೆ ಪರಾಜಿತೆಯಾದುದೆಂದು ಅವರಿಗೆ ತಿಳಿದುಬಂದಾಗ, ತಾನು ಲೆಕ್ಕದ ಅಧ್ಯಾಪಕನಾಗಿದ್ದುದರಿಂದಲೇ ಹೀಗಾಯಿತೇ ಎಂಬ ಅನುಮಾನವೂ ಬಾರದಿರಲಿಲ್ಲ. ಹೇಗಾದರೂ ಸುಮಿತ್ರೆ ಇನ್ನೊಂದು ವರ್ಷ ಲೆಕ್ಕದಲ್ಲಿ ಮೊದ ಲನೆಯವಳಾಗಿ ಉತ್ತೀರ್ಣಳಾಗುವಂತೆ ತರಬೇತುಗೊಳಿಸುವುದು ತನ್ನ ಕರ್ತವ್ಯ, ಇದಕ್ಕಾಗಿ ಮೂರ್ತಿರಾಯರ ಸ್ನೇಹವನ್ನು ಸಂಪಾದಿಸಬೇಕು, ಎಂದುಕೊಂಡೇ ಮೂರ್ತಿಯ ಮನೆಗೆ ಬಂದಾಗ ಸುಮಿತ್ರೆ ತಂಗಿಯ ಜೊತೆಗೆ ಮುಂಬಯಿಗೆ ಹೋಗಿರುವಳೆಂದು ತಿಳಿದುಬಂತು.

ಅಂದಿನಿಂದ ಅವರು ಮೂರ್ತಿಯೊಡನೆ ಅತ್ಯಂತ ಸ್ನೇಹದಿಂದ ಇರ ತೊಡಗಿದರು. ಮೂರ್ತಿ ಈ ಮೊದಲೂ ಅವರನ್ನು ಎಂದೂ ಅಗೌರವದಿಂದ ಕಂಡವನಲ್ಲವಾದಕಾರಣ, ಆದರಕ್ಕೆ ಪ್ರತ್ಯಾದರವನ್ನು ತೋರಿಸಿದ. ಕುಡು ಮತ್ತಾಯರಿಂದ ಸುಮಿತ್ರೆಯ ವಿಚಾರ ಸಹಾನುಭೂತಿಪರ ಅಭಿಪ್ರಾಯಗಳು ಹೊರಟಾಗ ಆತನೂ ದನಿಗೂಡಿಸಿದ್ದ; ಅವರ ಸಲಹೆ ಸೂಚನೆಗಳನ್ನು ಕೇಳಿದ್ದ.

ಸುಮಿತ್ರೆಗೆ ಕೆಲಸ ಸಿಕ್ಕಿದೆ ಎಂದು ಆತ ಕುಡುಮತ್ತಾಯರಿಗೆ ತಿಳಿಸಿ ದಾಗ—

" ಕೆಲಸದ ಹುಚ್ಚು ಬೇಡವಿತ್ತು ಅವಳಿಗೆ. ಇನ್ನೊಂದು ವರ್ಷ ಹೇಗಾ ದರೂ ಪಾಸಾಗುತ್ತಿದ್ದಳು. ಮೆಟ್ರಿಕ್ ಒಂದು ಮುಗಿದಿದ್ದರೆ ಮುಂದಿನ ದಾರಿ ಹೇಗಾದರೂ ನೋಡಿಕೊಳ್ಳಬಹುದಿತ್ತು. ಈ ಕೆಲಸವೇನು ಶಾಶ್ವತವೇ " ಎಂದಿದ್ದರು.

" ಹೌದು ಕುಡುಮತ್ತಾಯರೆ, ಆದರೆ ಮದುವೆಯ ಪ್ರಕರಣದ ನೋವಿ ನಿಂದ ಸುಮಿತ್ರೆ ಹಣ್ಣಾಗಿದ್ದಾಳೆ. ನಾಲ್ಕು ದಿನ ಸ್ವತಂತ್ರವಾಗಿ ದುಡಿದು

ಬರುವ ಧೈರ್ಯದಿಂದ ಅವಳ ಮುಂದಿನ ಜೀವನ ಇನ್ನಷ್ಟು ಸುಗಮವಾದೀತು ಎಂತಲೇ ನಾನು ನಂಬಿದ್ದೇನೆ."

ಮೂರ್ತಿಯ ಉತ್ತರ ಕೇಳಿದಮೇಲೆ ಮೂರ್ತಿಯ ವಿಚಾರ ತಾನೆಣಿಸಿದ್ದ ತಪ್ಪು ವಿಚಾರಗಳೆಲ್ಲ ನೆನಪಿಗೆ ಬಂದು ಕುಡುಮತ್ತಾಯರಿಗೆ ಸೀಮಾತೀತ ವೇದನೆಯಾಗಿತ್ತು. ಎಲ್ಲ ಮಾನಾಪಮಾನಗಳ ಪ್ರಶ್ನೆಗಳನ್ನು ಬದಿಗಿರಿಸಿ

"ನಿಮ್ಮ ವಿಚಾರವೂ ನಾನು ಏನೆಲ್ಲ ತಪ್ಪು ಕಲ್ಪನೆ ಇಟ್ಟುಕೊಂಡಿದ್ದೆ ಮೂರ್ತಿರಾಯರೆ. ಶ್ರೀನಿವಾಸರಾಯರ ಮಗನಂತೆ ಅವರ ಮಕ್ಕಳನ್ನು ನೋಡಿಕೊಂಡಿರುವ ನಿಮ್ಮ ವಿಚಾರ ಸಂಶಯ ತಂದುಕೊಂಡು ಏನೆಲ್ಲ ಮಾತಾಡಿದೆನೆಂದು ನನಗೆ ಈಗ ತುಂಬ ದುಃಖವಾಗುತ್ತಿದೆ" ಎಂದಿದ್ದರು.

ಮೂರ್ತಿಗೆ ಕುಡುಮತ್ತಾಯರ ಈ ಮಾತಿನಿಂದ ತುಂಬ ಸಮಾಧಾನ ದೊರಕಿತ್ತು. ಪಂಡಿತರ ಮರಣದ ಕೆಲವು ದಿನಗಳ ಮುಂಚೆ ತಾನು ಕೇಳಿದ್ದ ಆರೋಪದಲ್ಲಿ ಕುಡುಮತ್ತಾಯರ ಪಾತ್ರ ಎಷ್ಟೆಂಬುದು ಆತನಿಗೆ ಆಮೇಲೂ ತಿಳಿಯಲಿಲ್ಲವಾದರೂ ಅವರ ಹೃದಯ ಪರಿವರ್ತನೆ ಆತನ ಮನಸ್ಸಿನ ಮೇಲೆ ಹಿತಕರವಾದ ಪರಿಣಾಮವನ್ನೇ ಮಾಡಿತು. ಯಾವುದೋ ಒಂದು ಕ್ಷುದ್ರ ಆಪಾದನೆಗೆ ಹೆದರಿ ಸುಮಿತ್ರೆಯನ್ನು ಇಲ್ಲಿಂದ ಓಡಿಸಿದೆನೇ; ಆಕೆ ಮಂಗಳೂರಲ್ಲೇ ಇರಬಾರದಿತ್ತೇ ಎಂದು ಆತ ಯೋಚಿಸಿದುದೂ ಉಂಟು.

ಸುಮಿತ್ರೆ, 'ಅಣ್ಣ ಹೇಗಿದ್ದಾರೆ?' ಎಂದು ಕುಡುಮತ್ತಾಯರನ್ನುದ್ದೇಶಿಸಿ ಕೇಳಿದಳು. ತಾನು ಮೂರ್ತಿಯನ್ನು 'ಅಣ್ಣ' ಎಂದು ಸಂಬೋಧಿಸುತ್ತಿರುವುದು ಕುಡುಮತ್ತಾಯರಿಗೆ ತಿಳಿದಿದೆಯೋ ಇಲ್ಲವೇ ಎಂದು ಕೂಡಾ ಆಕೆ ಯೋಚಿಸಲಿಲ್ಲ.

ಈ ಸ್ವಾಭಾವಿಕ ವಿಶ್ವಾಸದ ಹಿನ್ನೆಲೆಯನ್ನು ಗುರುತಿಸಿದ ಕುಡುಮತ್ತಾಯರಿಗೆ ಹೃದಯ ತುಂಬಿ ಬಂದು ಮಾತನಾಡುವುದೇ ಕಷ್ಟವಾಯಿತು.

"ನಿನ್ನ ಅಣ್ಣ ಚೆನ್ನಾಗಿದ್ದಾನಮ್ಮಾ. ಅವರ ಹೆಂಡತಿಗೆ ನಾಲ್ಕು ದಿನವೈ ಚೆನ್ನಾಗಿರಲಿಲ್ಲ. ಈಗ ಹುಷಾರಾಗಿದ್ದಾರೆ. ಮೊನ್ನೆ ಕದಿರೆ ದೇವಸ್ಥಾನದಲ್ಲಿ ನೋಡಿದ್ದೆ."

"ನಿಮ್ಮಲ್ಲಿ ಎಲ್ಲಾ ಸೌಖ್ಯ ತಾನೆ? ನಿಮ್ಮ ಮಗ ಬಿ. ಎ. ಗೆ ಓದುತ್ತಿದ್ದಾರೆಯೆ?"

ಈಗ ಮಾತ್ರ ಕಾಡುಮುತ್ತಾಯರಿಗೆ ದುಃಖ ತಡೆಯಲಾಗಲಿಲ್ಲ.

"ಅವನ ವಿಚಾರವೇ ನೋಡಮ್ಮ, ಈ ಹಾಳು ಊರಿಗೆ ಬಂದಿರುವುದು. ಅವನು ಇಂಟರ್ ಫೈಲಾದ ವಿಚಾರ ಬಹುಶಃ ನಿನಗೆ ಗೊತ್ತೇ ಇಲ್ಲ. ಎರಡು ಪಾರ್ಟಿನಲ್ಲಿ ಲಾಟಿ ಹೊಡೆದಿದ್ದ. ಸಪ್ಟಂಬರದಲ್ಲಾದರೂ ಮೇಲೆ ಬಿದ್ದಾನು ಎಂದು ಆಲೋಚನೆ ಮಾಡಿದ್ದೆ. ಆದರೆ ಮೊನ್ನೆ ಪರೀಕ್ಷೆಗೆಂದು ಹೋದವನು ಮನೆಗೆ ವಾಪಸು ಬರಲೇಇಲ್ಲ. ಮಂಗಳೂರೆಲ್ಲ ಹುಡುಕಾಡಿಯಾಯಿತು. ಆಮೇಲೆ ಯಾರೋ ಬೊಂಬಾಯಿಗೆ ಬರಲಿಕ್ಕೆಂದು ಕಡೂರು ಬಸ್ಸು ಹಿಡಿದಿದ್ದಾನೆ ಎಂದು ಹೇಳಿದರು. ಕೇಳಿದ ಮೇಲೆ ಜೀವ ಸುಮ್ಮಗಿರುತ್ತದೆಯೆ. ಅದೂ ಅವನ ತಾಯಿಯ ದುಃಖ ಹೇಳುವಂತಿಲ್ಲ, ರಜೆ ಪಡೆದು ಹುಡುಕಲಿಕ್ಕೆಂದು ಓಡಿಬಂದೆ. ಬರುವಾಗ ಮೂರ್ತಿರಾಯರು ನಿನ್ನ ಆಫೀಸು ಹಾಗೂ ಮನೆ ಎರಡರ ಎಡ್ರೆಸ್ ಕೂಡಾ ಕೊಟ್ಟಿದ್ದರು. ನಾನು ಇಲ್ಲೀ ಮಾಡರ್ನ್ ಹಿಂದೂ ಹೋಟಲಿನಲ್ಲಿ ಉಳಕೊಂಡಿದ್ದೇನೆ. ಬಂದು ಎರಡು ದಿನವಾಯಿತಷ್ಟೆ. ಇವತ್ತು ನಿನ್ನನ್ನು ಆಫೀಸಿನಲ್ಲಿ ಕಂಡು ನಿನ್ನ ಜೊತೆಗೇ ನಿಮ್ಮ ಮನೆಯವರೆಗೆ ಹೋಗಿ ಬರೋಣ ಎಂದು ಇಲ್ಲಿಗೆ ಬಂದೆ. ಇಲ್ಲವಾದರೆ ನಿಮ್ಮ ಮನೆ ಹುಡುಕಿಕೊಂಡು ಬರುವುದು ಸಾಧ್ಯವೆ? ನಾನು ಮುಂಬಯಿಯನ್ನು ಮುಂಚೆ ನೋಡಿರಲಿಲ್ಲ. ನೋಡಿದ್ದರೆ ಖಂಡಿತ ಬರುತ್ತಿದ್ದಿಲ್ಲ. ಇಲ್ಲಿ ಶ್ರೀಧರ ಒಂದುವೇಳೆ ಬಂದಿದ್ದರೂ ಅವನನ್ನು ಹುಡುಕುವುದೆಂದರೆ ಹುಲ್ಲಿನ ರಾಶಿಯಲ್ಲಿ ಸೂಜಿ ಹುಡುಕಿದ ಹಾಗಾದೀತು."

ಶ್ರೀಧರ ಕಾಡುಮುತ್ತಾಯರ ಒಬ್ಬನೇ ಮಗ. ಆ ಕಾರಣ ಸುಮಿತ್ರೆಗೆ ಅವರ ದುಃಖದ ಆಳ ಅಳೆಯಲು ಕಷ್ಟವಾಗಲಿಲ್ಲ.

"ನೀವು ಸೀದಾ ನಮ್ಮಲ್ಲಿಗೇ ಬರಬಹುದಿತ್ತಲ್ಲ ಮಾಷ್ಟ್ರೆ. ಹೋಟಲಿನಲ್ಲಿ ಸಿಲ್ಲುವ ಆಲೋಚನೆ ಯಾಕೆ ಬಂತು?"

"ಅದೇ ನೋಡು, ಹೇಳಿದೆನಲ್ಲಮ್ಮ, ಎಲ್ಲಿಗೋ ಕಿಂಗ್ಸ್ ಸರ್ಕಲ್ ಅಂತೆ; ಕ್ವೀನ್ಸ್ ಸರ್ಕಲ್ ಅಂತೆ. ನನಗೇನು ಗೊತ್ತಾಗುತ್ತೆ. ಬೋರಿಬಂದರ್ ಸ್ಟೇಷನಿನ ಹತ್ತಿರ ನಮ್ಮವರ ಹೋಟೆಲು ಯಾವುದೆಂದು ವಿಚಾರಿಸಿದೆ. ಇಲ್ಲಿಯೇ ನಿಂತಿದ್ದೇನೆ. ಇನ್ನು ಒಂದೆರಡು ದಿವಸ ಎಲ್ಲಾದರೂ ಶ್ರೀಧರ ಕಾಣ ಸಿಗುತ್ತಾನೋ ನೋಡುತ್ತೇನೆ. ಆಮೇಲೆ ಮನೆಯ ದಾರಿಯಿದೆಯಲ್ಲ...."

ಅವರ ನಿರಾಸೆಯ ಮಾತಿಗೆ ಉತ್ತರ ಹೇಳಲು ಸುಮಿತ್ರೆ ಸಮರ್ಥಳಾಗಿರಲಿಲ್ಲ.

ಆಫೀಸು ಬಿಡಲು ಬರೇ ಸ್ವಲ್ಪ ಸಮಯ ಉಳಿದಿತ್ತು. ಸುಮಿತ್ರೆ ಕಾಡುಮತ್ತಾಯರನ್ನು ಅಲ್ಲೇ ನಿಲ್ಲುವಂತೆ ಹೇಳಿ, ಒಂದೈದು ನಿಮಿಷ ಮುಂಚಿತವಾಗಿ ಹೊರಡಲು ಅನುಮತಿ ಪಡೆಯಲೆಂದು ಹೆಡ್‌ಕ್ಲಾರ್ಕನ ಬಳಿ ಹೋದಳು. ಅಲ್ಲಿಂದ ಹೊರಟು ಬರುವಾಗ ಮುಖರ್ಜಿಯ ನೆನಪಾಯಿತು.

ಈ ಶನಿವಾರವೂ ಮುಖರ್ಜಿಯ ಜೊತೆಗೆ ಸಿನೆಮಾ ನೋಡುವಂತಿಲ್ಲ.

"ಕ್ಷಮಿಸಿ ಮುಖರ್ಜಿಬಾಬು. ಊರಿನಿಂದ ನನ್ನ ಪರಿಚಯದ ಬಂಧುವೊಬ್ಬರು ಬಂದು ನನಗಾಗಿ ಕಾದು ನಿಂತಿದ್ದಾರೆ. ಅವರಿಗೆ ನಮ್ಮ ಮನೆ ತೋರಿಸಬೇಕಾಗಿದೆ. ಇವೊತ್ತು ನನಗೆ ಬರಲಾಗುವುದಿಲ್ಲ. ಕ್ಷಮಿಸಿ ಪ್ಲೀಸ್. ಇನ್ನೊಂದು ಶನಿವಾರ ಖಂಡಿತ ಬರುತ್ತೇನೆ. ಎಷ್ಟು ಮಾತ್ರಕ್ಕೂ ಮಾತಿಗೆ ತಪ್ಪುವುದಿಲ್ಲ. ಇವತ್ತು ಸಾಧ್ಯವೇ ಇಲ್ಲ. ಪ್ಲೀಸ್...."

ಮುಖರ್ಜಿಗೆ ನಿರಾಸೆಯಾಗಿದೆಯೆಂದು ಆತನ ಮುಖಚರ್ಯೆಯಿಂದ ಸ್ಪಷ್ಟವಾಗಿ ತಿಳಿಯಬಹುದಿತ್ತು. ಆದರೂ ಆತ ಸಮಾಧಾನದಿಂದಲೇ ಹೇಳಿದ:

"ಅವಶ್ಯ, ಸುಮಿತ್ರಾದೇವಿ. ಅದರಲ್ಲೇನಂತೆ. ಮುಂದಿನ ಶನಿವಾರ ನೋಡೋಣ. ಥ್ಯಾಂಕ್ಸ್"

ಸುಮಿತ್ರೆ ಕಾಡುಮತ್ತಾಯರ ಜೊತೆಗೆ ಮನೆಯ ದಾರಿ ಹಿಡಿದಳು.

ಅಕ್ಕನ ಜೊತೆಗೆ ಬಂದ ಗುರುವನ್ನು ಕಂಡ ಪದ್ಮಾವತಿಗೂ ಅಕ್ಕನಿಗಾದಷ್ಟೆ ಆಶ್ಚರ್ಯವಾಗಿತ್ತು. ಸಿನೆಮಾಕ್ಕೆಂದು ಹೊರಟಿದ್ದರಷ್ಟೆ. ಆ ಕಾರ್ಯಕ್ರಮ ಅಲ್ಲಿಗೇ ನಿಂತಿತು. ಗೋಪಿಗೆ ಕಾಡುಮತ್ತಾಯರ ಪರಿಚಯವಿರಲಿಲ್ಲ. ಅವನ ಮದುವೆಯ ಸಂಬಂಧದ ಟೀ ಪಾರ್ಟಿಗೆ ಅವರು ಬಂದಿರಲಿಲ್ಲ. ಸುಮಿತ್ರೆಯೇ ಅವರ ಪರಿಚಯ ಮಾಡಿಕೊಟ್ಟಳು. ಮುಖ ಪರಿಚಯವಿರದಿದ್ದರೂ ಇಬ್ಬರ ಮಿತ್ರನಾಗಿ ಮೂರ್ತಿಯಿದ್ದುದರಿಂದ ಮಾತಾಡಲು ಬೇಕಾದಷ್ಟು ವಿಷಯವಿತ್ತು. ಎಲ್ಲರ ಒತ್ತಾಯದಿಂದಾಗಿ ಕಾಡುಮತ್ತಾಯರಿಗೆ ಆ ದಿನ ಅಲ್ಲಿಂದ ಹೊರಡುವ ಮಾತಿರಲಿ, ಭಾನುವಾರ ಸಂಜೆಯತನಕವೂ ತನ್ನ ವಸತಿಯ ಹೋಟೆಲಿಗೆ ಮರಳಲಾಗಲಿಲ್ಲ.

ಪದ್ಮಾವತಿಯನ್ನು ನೋಡಿದಾಗ ಕುಡುಮತ್ತಾಯರಿಗೆ ಸುಮಿತ್ರೆಯ ಕುರಿತು ಅನುಕಂಪ ತುಂಬಿ ಇನ್ನಷ್ಟು ದುಃಖವಾಗಿರಬೇಕು. ತುಂಬಿದ ಬಸುರಿ ದೇವತೆಯಂತೆ ತೋರುತ್ತಿದ್ದಳು. ಅವಳ ಕುತ್ತಿಗೆಯ ಕರಿಮಣಿ ಸರ ಸುಮಿತ್ರೆಯನ್ನು ಅಣಕಿಸುವಂತಿತ್ತು. ಮಾತು ಮಾತಿಗೆ ಅಕ್ಕ ತಂಗಿಯರೆಡೆ ನೋಡುತ್ತ ಕುಡುಮತ್ತಾಯರು 'ಪಂಡಿತರು ಇದ್ದಿದ್ದರೆ; ಪಂಡಿತರು ಇದ್ದಿದ್ದರೆ' ಎನ್ನುತ್ತಿದ್ದರು. ಅವರ ಅಂತರಂಗದ ಹೃದಯಮಥನ ಸುಮಿತ್ರೆಗೆ ತಿಳಿಯಲೇ ಇಲ್ಲ. ಪದ್ಮಾವತಿಯ ಊಹೆಗಂತೂ ಅದು ದೂರವೆ.

ಕುಡುಮತ್ತಾಯರ ಮನಸಿನಲ್ಲಿ ಇನ್ನೊಂದು ಆಲೋಚನೆಯೂ ಸುಳಿದಿತ್ತು.

"ನಮ್ಮ ಶ್ರೀಧರನಿಗೇ ಸುಮಿತ್ರೆಯನ್ನು ತಂದುಕೊಳ್ಳಬಾರದಿತ್ತೆ?"

ಆದರೆ ಇಂದು ಶ್ರೀಧರನೇ ಕಾಣೆಯಾಗಿದ್ದಾನೆ.

ಓಡಿಹೋದ ಮಗನ ವಿಚಾರ ಗೋಪಿಯೊಡನೆ ಕುಡುಮತ್ತಾಯರು ಗೋಳುಹೊಯ್ದುಕೊಂಡರು. ಆದರೆ ಮುಂಬಯಿಯಂಥ ಶಹರಿನಲ್ಲಿ ಯಾರನ್ನಾದರೂ ಹುಡುಕುವುದು ಸಾಧ್ಯವೆ? ಕುಡುಮತ್ತಾಯರ ಸಮಾಧಾನಕ್ಕಾಗಿ "ನಾನೂ ಪ್ರಯತ್ನಮಾಡಿ ನೋಡುತ್ತೇನೆ. ಆದರೆ ಮುಂಬಯಿಯಲ್ಲಿ ಯಾರದಾದರೂ ಪತ್ತೆ ಹಚ್ಚುವುದು ನೀವು ಹೇಳಿದ ಹಾಗೆ ಹುಲ್ಲಿನ ರಾಶಿಯಲ್ಲಿ ಸೂಜಿ ಹುಡುಕಿದಂತೆ ಆದರೂ ಪ್ರಾಯ ಬಂದ ಹುಡುಗ. ಇಂದಲ್ಲ ನಾಳೆ ಮನೆಗೆ ಬರುತ್ತಾನೆ. ನೀವು ಅಷ್ಟು ಯೋಚನೆ ಮಾಡುವ ಅಗತ್ಯವಿಲ್ಲ" ಎಂದ.

ಕುಡುಮತ್ತಾಯರಿಗೆ ಅದು ಕಡೆಯ ಸಮಾಧಾನ. ಆದರೂ ಸುಮಿತ್ರೆಯನ್ನು ನೋಡಿದಾಗಲೆಲ್ಲ ಅವರ ಮನಸ್ಸಿನಲ್ಲಿ ಸುಳಿಯುತ್ತಿದ್ದ ವಿಚಾರ ಒಂದೇ.

"ನನ್ನ ಶ್ರೀಧರನಿಗೆ ಅವಳನ್ನು ತಂದುಕೊಂಡಿದ್ದರೆ ಅವನು ಊರಲ್ಲೇ ನಿಲ್ಲುತ್ತಿದ್ದನೋ ಏನೋ........"

ಹೊರಡುವ ಮುಂಚೆ ಕುಡುಮತ್ತಾಯರು ಸುಮಿತ್ರೆಯನ್ನು ಬಳಿಗೆ ಕರೆದು ಮಗಳಂತೆಯೇ ಉಪದೇಶದ ಎರಡು ಮಾತು ಹೇಳಿದರು.

"ನಿನಗೆ ಮೆಟ್ರಿಕ್ ಮುಗಿಸಬಹುದಿತ್ತು ಸುಮಿತ್ರಾ. ಒಂದು 'ಸಬ್ಜೆಕ್ಟ್' ಮುಂದಿನ ವರ್ಷ ಹೇಗಾದರೂ ಸುಧಾರಿಸಿಕೊಳ್ಳಬಹುದಿತ್ತು. ಇನ್ನೂ ಸಮಯವಿದೆ; ಯೋಚನೆ ಮಾಡಿನೋಡು"

ಸುಮಿತ್ರೆ ಇದಕ್ಕೆ ಉತ್ತರ ಹೇಳಲಿಲ್ಲ. ಬರೀ ನಗುತ್ತ ನಿಂತಿದ್ದಳು.

"ಜಾಗ್ರತೆಯಮ್ಮಾ. ಮುಂಬಯಿಯ ಥಳಕು ಬೆಳಕನ್ನು ನಾನು ನಾಲ್ಕು ದಿನ ಕಂಡೇ ಹೆದರಿ ಹೋಗಿದ್ದೇನೆ. ಸ್ವತಂತ್ರ ಜೀವನದ ಹಾದಿ, ಅದೂ ಹುಡುಗಿಯರಿಗೆ ತುಂಬ ಕಷ್ಟ" ಎಂದಿದ್ದರು.

ಈ ಮಾತಿಗೂ ಸುಮಿತ್ರೆ ಉತ್ತರ ಹೇಳಲಿಲ್ಲ.

೨೦

ಕುಡುಮತ್ತಾಯರು ಗೋಪಿಯ ಮನೆಯಿಂದ ಹೊರಟುಹೋದಮೇಲೆ ಅವರ ಹೋಟೆಲಿನಲ್ಲಿ ಸುಮಿತ್ರೆ ಅವರನ್ನು ಎರಡು ಬಾರಿ ಕಂಡು ಬಂದಿದ್ದಳು. ಶ್ರೀಧರನಿಗಾಗಿ ಅವರ ಹುಡುಕುವಿಕೆಯೆಲ್ಲ ವ್ಯರ್ಥವಾಗಿ ಅವರು ಊರಿಗೆ ಹೋಗುವ ದಿನ ಸೂಚಿಸಿದಾಗ ಆಕೆ ಗೋಪಿಯಿಂದ ಸ್ವಲ್ಪ ಹಣ ಪಡೆದು ಮೀರೆಗೆ ಒಂದು ಬನಾರಸ್ ಸೀರೆ, ಸುರೇಶನಿಗೆ ಒಂದು ಜೊತೆ ಅಂಗಿ, ನಾಲ್ಕಾರು ಆಟದ ಸಾಮಾನು ಇವನ್ನು ಕೊಂಡುಕೊಂಡು ಅವರ ಕೈಯಲ್ಲಿ ಕೊಟ್ಟು ಬಂದಿದ್ದಳು.

ಬುಧವಾರ ದಿನ ಕುಡುಮತ್ತಾಯರು ನಿರಾಸೆಯಿಂದ ಊರಿಗೆ ಮರು ಪ್ರಯಾಣ ಬೆಳೆಸಿದರು.

ಕುಡುಮತ್ತಾಯರು ಊರಿಗೆ ಮರಳಿದ ಮೇಲೆ ಒಂದು ದಿನವಿಡೀ ಬಳಕೆಯ ವಸ್ತುವೊಂದನ್ನು ಕಳೆದುಕೊಂಡಷ್ಟು ಬೇಸರವಾಗಿತ್ತು. ಕುಡುಮತ್ತಾಯರು ಮುಂಬಯಿಯಲ್ಲಿದ್ದಷ್ಟು ದಿನ, ಮಂಗಳೂರೇ ಬಂದು ಮುಂಬಯಿಯಲ್ಲಿ ನಿಂತಂತಿತ್ತು. ಆ ನೆನಪು ಮರುಕಳಿಸಿ ಬರುವಾಗ ಮನಸ್ಸಿಗೆ ಎಷ್ಟು ದುಃಖವಾಗುತ್ತಿದೆ; ಮಂಗಳೂರು ಮುಂಬಯಿಯಿಂದ ನೂರಾರು ಮೈಲು ದೂರವಿದೆ ಎಂಬ ಸತ್ಯ ಮನಸ್ಸನ್ನು ಎಚ್ಚರಿಸುವಾಗ ಎಷ್ಟು ನೋವಾಗುತ್ತದೆ ಎಂದು ಸುಮಿತ್ರೆಗೆ ತಿಳಿದುದು ಕುಡುಮತ್ತಾಯರು ಮರಳಿ ಹೋದ ಮೇಲೆ.

ಶನಿವಾರ ದಿನ ಬೆಳಿಗ್ಗೆ ಪುನಃ ಮುಖರ್ಜಿ ಅವಳ ಮೇಜಿನ ಬಳಿ ಬಂದಿದ್ದ.

ಅವನು ಒಳಗೆ ಬಂದೊಡನೆ, ತುಂಬ ಪ್ರಸನ್ನಚಿತ್ತಳಾಗಿದ್ದ ಸುಮಿತ್ರೆ "ಇವತ್ತು ನೀವು ಕೇಳಬೇಕಾಗಿಯೇ ಇಲ್ಲ. ನಾನು ಈ ಮೊದಲೇ ನಿಶ್ಚಯ ಮಾಡಿದ್ದೇನೆ." ಎಂದಳು.

ಮುಖರ್ಜಿ "ಥ್ಯಾಂಕ್ಸ್" ಎಂದಿಷ್ಟೇ ಹೇಳಿದ. ಆತನ ದನಿಯಲ್ಲಿ ಅಪಾರ ಸಂತೋಷ ತುಂಬಿತ್ತು.

ಸುಮಿತ್ರೆಯ ಪ್ರಸನ್ನತೆಗೆ ಕಾರಣವೂ ಇತ್ತು. ನಾಲ್ಕು ದಿನಗಳ ಹಿಂದೆ ಪದ್ಮಾವತಿಯನ್ನು ಪರೀಕ್ಷೆ ಮಾಡಿದ್ದ ಡಾ. ವಸುಂಧರಾದೇವಿ ಪದ್ಮಾವತಿ ಇನ್ನು ಎಂಟು ಹತ್ತು ದಿನಗಳಲ್ಲಿ ಖಂಡಿತ ಹೆರುತ್ತಾಳೆ ಎಂದು ಹೇಳಿದ್ದಳು. ಬೆಳಿಗ್ಗೆ ಆಫೀಸಿಗೆ ಹೊರಟಾಗ, ಪದ್ಮಾವತಿ "ಸಂಜೆ ನಾನು ಬರುವಾಗ ತಡ ವಾಗುತ್ತದೋ ಏನೋ ಅಕ್ಕ. ನೀನು ಆಫೀಸು ಬಿಟ್ಟು ಬರುವಾಗ ಇದ್ದರೂ ಇರುವೆ; ಹೋದರೂ ಹೋದೆ. ಅವರ ಸ್ನೇಹಿತರು ಯಾರೋ ವಡಾಲಾದಿಂದ ಕಾರು ಕಳುಹಿಸುತ್ತೇನೆ, ಬರಲೇಬೇಕು ಎಂದು ಹೇಳಿದ್ದಾರಂತೆ. ಅಲ್ಲಿಗೆ ಹೋದರೆ ಸಂಜೆ ಬರುವಾಗ ಹೊತ್ತಾಗಬಹುದು" ಎಂದಿದ್ದಳು.

ತಂಗಿಯ ಮಾತು ಕೇಳಿದಾಗ ಸುಮಿತ್ರೆಗೆ, ಮುಖರ್ಜಿಗೆ ಕೊಟ್ಟ ಮಾತಿನ ನೆನಪಾಯಿತು. ಇವತ್ತು ಸಿನೆಮಾದ ರಗಳೆ ಮುಗಿಸಿ ಬಂದರೆ ಇನ್ನು ಅವನು ತನ್ನನ್ನು ಕಾಡಲಿಕ್ಕಿಲ್ಲ ಎಂದು ತಿಳಿದು ತಂಗಿಯೊಡನೆ,

"ನನಗೂ ಒಂದು ಕಡೆ ಹೋಗಬೇಕಾಗಿದೆ. ನಾನೂ ಬರುವಾಗ ತಡ ವಾಗುತ್ತದೋ ಏನೋ" ಎಂದಿದ್ದಳು.

"ಹಾಗಿದ್ದರೆ ಯೋಚನೆಯೇ ಇಲ್ಲ. ನಾನು ಹೋಗುವಾಗ ಶೀಲಕ್ಕ ನನ್ನು ನೋಡಿಹೋಗುತ್ತೇನೆ. ಅವರು ಮನೆಗೆ ಬಂದು ವಾಪಸು ಹೋಗು ವುದು ಬೇಡ." ಎಂದೂ ಪದ್ಮಾವತಿ ಅಂದಿದ್ದಳು.

ಆಫೀಸಿಗೆ ಬಂದ ಸುಮಿತ್ರೆಗೆ ಮೂರ್ತಿಯ ಕಾಗದ ಸಿಕ್ಕಿತ್ತು. ಕುಡು ಮತ್ತಾಯರು ಮುಂಬಯಿಗೆ ಬಂದಿರುವ ವಿಚಾರ ಮೂರ್ತಿ ಬರೆದ ಪತ್ರ ಅದು. ಆ ಪತ್ರ ಕೈ ಸೇರುವುದರೊಳಗೆ ಕುಡುಮತ್ತಾಯರು ಪ್ರವಾಸ ಮುಗಿಸಿ ಮರಳಿಯೂ ಆಗಿದೆಯಲ್ಲಾ ಎಂದು ಸುಮಿತ್ರೆಗೆ ನಗು ಬಂತು. ಆದರೂ ಮೂರ್ತಿಯ ಕಾಗದ ಬರುವ ದಿನ ಆಕೆಗೆ ಹಬ್ಬದ ದಿನ.

ಸುಮಿತ್ರೆಯ ಪಾಲಿಗೆ ಮೂರ್ತಿಯ ಕಾಗದಗಳಲ್ಲಿ ತುಂಬಿರುತ್ತಿದ್ದುದು ಪ್ರೀತಿಯ ಮಂಗಳೂರಿನ ಮಣ್ಣು. ಅದೇ ಬಾವುಟಗುಡ್ಡ, ಅದೇ ಕಂಕನಾಡಿ, ಅದೇ ಕದ್ರಿ ಬೆಟ್ಟ, ಅದೇ ಮಂಗಳೂರು ಮಡಿಕೇರಿಯ ರಾಜಮಾರ್ಗ, ಕಾರ್‌ಸ್ಟ್ರೀಟಿನಿಂದ ಕಂಕನಾಡಿಯತನಕ, ತಾನು ಹುಟ್ಟಿ ಬೆಳೆದ ನೆಲದಲ್ಲಿ ವ್ಯಾಪಿಸಿರುವ ಪರಿಚಿತ ಬಳಗದ ಆತ್ಮೀಯ ಸಂದರ್ಶನವನ್ನು ಸುಮಿತ್ರೆ ದೂರದ ಮುಂಬಯಿಯಲ್ಲಿ ಪಡೆಯುತ್ತಿದ್ದುದು ಮೂರ್ತಿಯ ಪತ್ರಗಳಿಂದ.

ಒಂದು ಘಂಟೆಗೆ ಆಫೀಸು ಬಿಟ್ಟಾಗ ಸುಮಿತ್ರೆ ಬಾಗಿಲಲ್ಲಿ ಮುಖರ್ಜಿಗಾಗಿ ಕಾದಿದ್ದಳು. ಹೊಸತೊಂದು ಅನುಭವದ ನಿರೀಕ್ಷೆಯ ಸುಳಿಯಲ್ಲಿ ಸಿಕ್ಕು ಅವಳ ಮನಸ್ಸು ಉದ್ವಿಗ್ನವಾಗಿತ್ತು. ಮುಖರ್ಜಿ ಯಾರೋ ಏನೋ. ಈ ಆಫೀಸಿಗೆ ಸೇರುವತನಕ ಅಪರಿಚಿತ ವ್ಯಕ್ತಿ. ಅವನ ಜೊತೆಯಲ್ಲಿ ಇಂದು ಸಿನೆಮಾ ನೋಡಲು ಹೋಗುತ್ತಿದ್ದೇನೆ.

ತನ್ನನ್ನು ಸಿನೆಮಾಕ್ಕೆ ಬಾ ಎಂದು ಕರೆಯುವ ಆತನ ಉದ್ದೇಶವಾದರೂ ಏನಿರಬಹುದು. ಬರೇ ಸ್ನೇಹವೆ ?

ಸ್ನೇಹವೇ ಏಕಾಗಿರಬಾರದು. ಅವನು ತನ್ನ ಅತ್ತಿಗೆಯನ್ನು ತುಂಬ ಪ್ರೀತಿಸುತ್ತಿರಲಿಲ್ಲವೆ ಅತ್ತಿಗೆಯಂತೆಯೇ ಕಾಣುವ ತನ್ನಲ್ಲಿ ಆತ ಇರಿಸಿದ ಅಭಿಮಾನದ ನಿಮಿತ್ತ ತಾನು ಈಗ ಆತನ ಜೊತೆಯಲ್ಲಿ ಸಿನೆಮಾಕ್ಕೆ ಹೋಗಬೇಕಾಗಿದೆ.

ಅಥವಾ ಇದು ತನ್ನ ಸ್ವಾತಂತ್ರ್ಯದ ಸ್ಪಷ್ಟೀಕರಣವೆ ?

ಸುಮಿತ್ರೆ ಉಟ್ಟಿದ್ದುದು ಕಡುಹಸುರು ಬಣ್ಣದ ವ್ಯಾಲ್ ಸೀರೆ. ಶೀಲಿ ಕೊಟ್ಟಿದ್ದ ಒಂದು ಧರ್ಮಾವರ ಕಣದ ಕುಪ್ಪಸ ಅವಳ ತೋಳನ್ನು ಬಿಗಿದಿತ್ತು. ಅವಳ ನೀಳವಾದ ಜಡೆ ಎಡತೋಳಿಗೆ ಇಳಿಯಬಿಟ್ಟಿದ್ದ 'ವ್ಯಾನಿಟಿ ಬ್ಯಾಗ್' ನೊಂದಿಗೆ ಭೂಮಿಗಿಳಿಯಲು ಸ್ಪರ್ಧಿಸುತ್ತಿತ್ತು.

" ಬೈತಲೆ ಬಿಡಿಸಿದಲ್ಲಿ ಸ್ವಲ್ಪ ಸಿಂಧೂರದ ಹುಡಿ ಹಾಕಿದ್ದರೆ ನಿಮ್ಮನ್ನು ಬಂಗಾಳಿಯಲ್ಲವೆಂದು ಯಾರೂ ಹೇಳುವಂತಿಲ್ಲ " ಎಂದು ನಗುತ್ತ ಮೆಟ್ಟಿಲಿಳಿದು ಬಂದ ಮುಖರ್ಜಿ ಹೇಳಿದ.

ಇಬ್ಬರೂ ಮೌನವಾಗಿಯೆ ತುಸು ದೂರ ನಡೆದರು.

ಒಂದು ಅಡ್ಡ ರಸ್ತೆಗೆ ತಿರುಗಿದಮೇಲೆ, ಆಫೀಸಿನ ಪರಿಚಿತ ಜನ ಅತ್ತಿತ್ತ ಬೇರೆ ಬೇರೆ ರಸ್ತೆಗಳಲ್ಲಿ ಚೆದರಿದುದನ್ನು ಕಂಡಮೇಲೆ ಮುಖರ್ಜಿ

' ಹೆಯ್ ಟ್ಯಾಕ್ಸಿ ' ಎಂದು ಪಕ್ಕದಲ್ಲಿದ್ದ ಟ್ಯಾಕ್ಸಿಯೊಂದನ್ನು ಕರೆದ.

" ಮೆಟ್ರೋತನಕ ನಡೆದು ಹೋಗಬಾರದೆ. ಅದಕ್ಕೆ ಟ್ಯಾಕ್ಸಿ ಯಾಕೆ. ಅದೂ ಸಿನೆಮಾ ಆರಂಭವಾಗಲು ಇನ್ನೂ ತುಂಬ ಹೊತ್ತಿದೆಯಲ್ಲ ? " ಎಂದು ಸುಮಿತ್ರೆ ತುಸು ಆಶ್ಚರ್ಯದಿಂದಲೇ ಕೇಳಿದಳು.

" ಹೊತ್ತಿದೆಯೆಂದೇ ಟ್ಯಾಕ್ಸಿಗೆ ಹೇಳಿದ್ದು. ಸ್ವಲ್ಪ ತಿರುಗಾಡಿಕೊಂಡು ಮತ್ತೆ ಹೋದರಾಯಿತಲ್ಲ " ಎಂದು ಮುಖರ್ಜಿ ಹೇಳಿದ.

ಟ್ಯಾಕ್ಸಿಯಲ್ಲಿ ಮುಖರ್ಜಿಯೊಂದಿಗೆ ಕುಳಿತಾಗ ಇಷ್ಟರತನಕ ಸುಮಿತ್ರೆ ಅನುಭವಿಸದ ಸಂಕೋಚ ಈಗ ಮೊದಲ ಬಾರಿಗೆ ತಲೆ ಹಾಕಿತು. ಆದರೆ ಮಾತಿನ ಭರದಲ್ಲಿ ಅದನ್ನು ಮರೆಯಬೇಕಾಗಿಬಂತು.

" ನಿಮಗೆ ಸಿನೆಮಾ ನೋಡುವುದರಲ್ಲಿ ತುಂಬ ಆಸಕ್ತಿಯಿದೆಯೆ ಸುಮಿತ್ರಾದೇವಿ ? "

" ವಿಶೇಷ ಆಸಕ್ತಿಯೇನೂ ಇಲ್ಲ. ನಾನು ಮುಂಬಯಿಗೆ ಬಂದಮೇಲೆ ನೋಡಿದ್ದು ಒಂದೋ ಎರಡೋ ಚಿತ್ರ."

" ಹಾಗಾದರೆ ಇವೊತ್ತಿನ ಸಿನೆಮಾ ಪ್ರೋಗ್ರಾಂ ನಿಲ್ಲಿಸಿ ಬಿಡೋಣವೆ ? ನೀವು ಬರುವಿರೆಂಬ ನಂಬಿಕೆಯಿರದ್ದರಿಂದ ನಾನು ' ಟಿಕೆಟ್ ಬುಕ್ ' ಮಾಡಿಲ್ಲ. ಈಗ ಟಿಕೇಟು ಪಡೆಯುವುದೂ ಕಷ್ಟ. ಬೇರೆ ಎಲ್ಲಿಯೂ ಸಮೀಪ ದಲ್ಲಿ ಒಳ್ಳೆಯ ಚಿತ್ರವಿಲ್ಲ. "

ಸಿನೆಮಾದ ರಗಳೆಯಿಂದ ಪಾರಾಗಿ ಹೋಗಬಹುದೆಂಬ ಆಸೆಯಿಂದ ಸುಮಿತ್ರೆಗೆ ತುಂಬ ಸಮಾಧಾನವಾಯಿತು.

" ಹಾಗಾದರೆ ಖಂಡಿತ ಬೇಡ. ಮತ್ತೆ ' ಟ್ಯಾಕ್ಸಿ ' ಯಾಕೆ ಮಾಡಿದಿರಿ?"

" ಜೋಗೇಶ್ವರಿಗೆ ಹೋಗೋಣವೆ ? "

" ಜೋಗೇಶ್ವರಿ ? ಅಂಧೇರಿಯ ಹತ್ತಿರ ? "

" ಹೌದು. "

" ಅಲ್ಲೇನಿದೆ ? "

" ಅಲ್ಲಿ, ನೋಡಬೇಕಾದ ಗುಹೆಯೊಳಗೆ ಕಡೆದ ಒಂದು ದೇವಾಲಯವಿದೆ. ಒಂದು ಸನ್ಯಾಸಿಯ ಆಶ್ರಮವೂ ಇದೆ. ನೋಡಲು ರಮ್ಯ ಪ್ರಕೃತಿ ಇದೆ. ಮುಂಬಯಿಯ ಗೌಜಿಯಿಂದ ಬಿಡುಗಡೆ ಪಡೆಯಬೇಕಾದರೆ ಅಲ್ಲಿಗೆ ಹೋಗಬೇಕು. ನಾನು ಹೆಚ್ಚಾಗಿ ಶನಿವಾರ ಸಂಜೆ ಅಲ್ಲಿಗೆ ಹೋಗುತ್ತೇನೆ. ಅಲ್ಲಿ ಒಂದೆರಡು ತಾಸು ಇದ್ದು ಬಂದರೆ ಮನಸ್ಸು ತುಂಬ ಹಗುರಾಗುತ್ತದೆ. ನೀವೂ ಬರುವಿರಾದರೆ ಇವೊತ್ತು ಹೋಗಿ ಸುತ್ತಾಡಿಕೊಂಡು ಬರಬಹುದು. ನಿಮ್ಮ ಹತ್ತಿರ ಮಾತಾಡುತ್ತ ಕೂತಾಗ ನನಗೆ ನನ್ನ ಅತ್ತಿಗೆಯೊಡನೆ ಮಾತನಾಡಿದ ಸಂದರ್ಭಗಳೆಲ್ಲ ನೆನಪಿಗೆ ಬರುತ್ತವೆ. ನಿಮ್ಮ ಒಡನಾಟದಲ್ಲಿ ಜೋಗೇಶ್ವರಿಯ ಸ್ಮೃತಿ ನನ್ನ ಮನಸ್ಸಿಗೆ ನಿತ್ಯ ಸಮಾಧಾನ ಕೊಡುವ ಸಂಜೀವಿನಿಯಾಗಬಹುದು. "

ಅವನ ಮಾತಿನಲ್ಲಿ ಒತ್ತಾಯವಿರಲಿಲ್ಲ. ಆದರೆ ದನಿಯಲ್ಲಿ ಇತ್ತು. ಆತನ ನಡವಳಿಕೆಯಲ್ಲಿ ಸಂಯಮವಿತ್ತು. ಆದರೆ ಮಾತಿನ ಹಿಂದೆ ಅಡಗಿದ್ದ ಭಾವದಲ್ಲಿ ಕಾತರ ಒಡೆದು ಕಾಣುತ್ತಿತ್ತು. ಸುಮಿತ್ರೆ ಮುಖರ್ಜಿಯ ವಿಚಾರ ತನ್ನ ಮನಸ್ಸಿನ ಪ್ರತಿಕ್ರಿಯೆಯಲ್ಲಿ ಅಡಗಿರುವುದು ಅನುಕಂಪವೇ, ಸ್ವಾರ್ಥವೇ ಎಂದು ನಿಶ್ಚಯಿಸಲಾರದೆ ಹೋದಳು.

" ಹೂಂ, ಹೋಗೋಣ. ನನಗೂ ಮುಂಬಯಿ ಬೇಸರ ಹಿಡಿಸಿ ಹೋಗಿದೆ. "

ಮುಖರ್ಜಿ ಡ್ರೈವರನಿಗೆ "ಯುನಿವರ್ಸಿಟಿ, ಇಂಡಿಯಾ ಕಾಫಿಹೌಸ್" ಎಂದು ಬದಲಿದ ನಿರ್ದೇಶನ ಕೊಟ್ಟ. ಟ್ಯಾಕ್ಸಿ ಹಾರ್ನಬೀ ರಸ್ತೆಗೆ ತಿರುಗಿ ಅಪೋಲೊ ಬಂದರಕ್ಕೆ ಅಭಿಮುಖವಾಗಿ ಓಡಲಾರಂಭಿಸಿತು.

ಮುಖರ್ಜಿ ಟ್ಯಾಕ್ಸಿಯ ಹಣ ಕೊಟ್ಟಾದ ಮೇಲೆ ಇಂಡಿಯಾ ಕಾಫಿ ಹೌಸಿನಲ್ಲಿ ಇಬ್ಬರೂ ಕಾಫಿಸೇವನೆ ಮುಗಿಸಿದರು.

" ಏನಾದರೂ ಕಟ್ಟಿಕೊಂಡು ಹೋಗೋಣವೇ. ಜೋಗೇಶ್ವರಿಯಲ್ಲಿ ಏನೂ ಸಿಗುವುದಿಲ್ಲ " ಎಂದು ಮುಖರ್ಜಿ ಹೇಳಿದ.

"ನಾವೇನೂ ನಾಲ್ಕು ದಿನದ ಯಾತ್ರೆಗೆ ಹೊರಟಿಲ್ಲ. ಆರು ಘಂಟೆಯೊಳಗೆ ವಾಪಸು ಬರುವುದಿಲ್ಲವೇ? ನನಗೇನೂ ಬೇಡ" ಎಂದು ಹೇಳಿದಳು ಸುಮಿತ್ರೆ.

"ನೀವು ಬೇಡವೆಂದು ಹೇಳಿದಮೇಲೆ ನಾನು 'ಬೇಕು' ಎಂದು ಹೇಳಿ ಸ್ವಾರ್ಥಿಯಾಗಲಾರೆ." ಮುಖರ್ಜಿ ನಗುತ್ತಲೇ ಉತ್ತರ ಹೇಳಿದ.

ಇಬ್ಬರೂ ಚರ್ಚ್‌ಗೇಟ್ ನಿಲ್ದಾಣದತನಕ ನಡೆದೇ ಹೋದರು. ಶನಿವಾರ ಮಧ್ಯಾಹ್ನ ಎಲ್ಲ ಆಫೀಸು ಮುಚ್ಚುವ ಸಮಯವಾದ ಕಾರಣ ನೂಕುನುಗ್ಗಲು ವಿಪರೀತವಾಗಿತ್ತು. ಸುಮಿತ್ರೆಗೆ ಹೆಚ್ಚಾಗಿ ಹೆಂಗಸರ ಡಬ್ಬಿಯಲ್ಲಿ ಪ್ರಯಾಣ ಮಾಡಿಯೇ ಗೊತ್ತು. ಇಂದು ಮುಖರ್ಜಿಯ ಸಂಗಾತಿಯಾಗಿ ಪ್ರಯಾಣ ಮಾಡುವಾಗ 'ನಾನು ಹೆಂಗಸರ ಡಬ್ಬಿಯಲ್ಲಿ ಬರುತ್ತೇನೆ' ಎಂದು ಹೇಳುವುದು ಶಿಷ್ಟಾಚಾರದ ಮಾತಲ್ಲವೆಂದು ಅವನ ಜೊತೆಯಲ್ಲೇ ಗಂಡಸರ ಡಬ್ಬಿಯಲ್ಲಿ ಹೋಗಿ ಕುಳಿತಳು.

ಕಿಟಕಿಯ ಬಳಿಯ ಜಾಗದಲ್ಲಿ ಸುಮಿತ್ರೆ ಕುಳಿತಿದ್ದಳು. ಪಕ್ಕದಲ್ಲೇ ಮುಖರ್ಜಿಯಿದ್ದ. ಮೂರು ಜನ ಕುಳಿತುಕೊಳ್ಳುವ ಜಾಗದಲ್ಲಿ ಇನ್ನೊಬ್ಬ ಬಂದು ಸ್ಥಳ ಬೇಡಿದುದರಿಂದ ಮುಖರ್ಜಿಯೂ ಅವನ ಬಳಿಯಿದ್ದವರೂ ತುಸು ಸರಿದು ಕೂತುಕೊಳ್ಳಬೇಕಾಗಿ ಬಂತು. ಹೀಗಾಗಿ ಮುಖರ್ಜಿ ಸುಮಿತ್ರೆಗೆ ತಾಗಿಕೊಂಡು ತೀರ ಸಮೀಪದಲ್ಲಿ ಕುಳಿತುಕೊಳ್ಳಬೇಕಾಯಿತು.

ಮುಖರ್ಜಿಯ ದೇಹಸ್ಪರ್ಶದಿಂದ ಸುಮಿತ್ರೆಯ ಮೈಯಲ್ಲಿ ವಿದ್ಯುತ್ ಪ್ರವಹಿಸಿದಂತಾಯಿತು. ಅವಳು ಇನ್ನಷ್ಟು ಕಂಡಿಯ ಬಳಿ ಸರಿದು ಕುಳಿತುಕೊಳ್ಳಲು ಪ್ರಯತ್ನಿಸಿದಳು. ಆದರೆ ಅದು ವ್ಯರ್ಥ ಪ್ರಯತ್ನವೆಂದು ಆಕೆಗೆ ತಿಳಿದಿತ್ತು.

ಗಾಡಿಯಲ್ಲಿ ಗಲಭೆ ಹೆಚ್ಚಾಯಿತು. ಮುಖರ್ಜಿ ಸುಮಿತ್ರೆಯ ಕಡೆ ನೋಡಿ ನಕ್ಕ. ಅವನ ಹಣೆಯೆಲ್ಲ ಬೆವರಿತ್ತು. "ಏನು ರಶ್" ಎಂದ. ಸುಮಿತ್ರೆಯ ಮುಖದಲ್ಲಿ ನಗೆಯ ಛಾಯೆಯೊಂದನ್ನು ಕಾಣಬಹುದಿತ್ತು. ಆದರೆ ಆಗಲೇ ಅವಳು ಅಂತರ್ಮುಖಿಯಾಗಿದ್ದಳು.

ಮುಖರ್ಜಿಯ ಮೈ ಸೋಂಕಿದಾಗ ಸುಮಿತ್ರೆಯ ಹೃದಯದಲ್ಲಿ ಯಾವುದೋ ಒಂದು ಭಾವನೆಯ ಸಾಗರದ ಅಲೆಗಳು ಮೇಲೆದ್ದು ಬಡಿಯ

ಲಾರಂಭಿಸಿದವು. ಅವಳ ಶ್ವಾಸ-ನಿಶ್ವಾಸ ಜೋರಾಯಿತು. ಹೃದಯದ ಒಡಿತ ಕಿವಿಗೆ ಕೇಳಿಸುವಂತಿತ್ತು. ಕಣ್ಣು ತೆರೆದಿಡಲಾರೆ, ಮುಚ್ಚಿಕೊಳ್ಳುತ್ತೇನೆ ಎಂದು ಅವಳು ತನಗೆ ತಾನೇ ಹೇಳಿಕೊಳ್ಳುವಂತಾಯಿತು. ಮುಖ ತಿರುಗಿಸಿ ಮುಖರ್ಜಿಯ ಕಡೆ ನೋಡಿದಳು. ಎದುರಿಗೇ ಇದ್ದರೂ ಅವಳಿಗೆ ಅವನ ಮುಖ ಕಾಣಿಸುತ್ತಿರಲಿಲ್ಲ. ಯಾವುದೋ ಒಂದು ಪರಿಚಿತ ದನಿ "ಏನು ರಶ್" ಎಂದು ಹೇಳಿದಂತೆ ಕೇಳಿಸಿತು. ಆಗಲೇ ಅವಳ ಮುಖದಲ್ಲಿ ನಗುವಿನ ರೂಪರೇಷೆಯೊಂದು ಮೂಡಿಬಂದುದು.

ಗಾಡಿ ಹೊರಟಮೇಲೆ ಸುಮಿತ್ರೆಗೆ ತುಸು ಧೈರ್ಯ ಬಂತು. ಕಿಟಕಿಯ ಹೊರಗೆ ದೃಷ್ಟಿ ಹೊರಳಿಸಿ ನೋಡತೊಡಗಿದಳು. ಮೆರೀನ್ ಡ್ರೈವ್‌ದ ದೊಡ್ಡ ಕಟ್ಟಡಗಳನ್ನು ನೋಡುತ್ತ ಪ್ರಯತ್ನ ಪೂರ್ವಕ ತನ್ನ ಮನಸ್ಸಿನಲ್ಲಿ ನಡೆದ ಕೋಲಾಹಲಕ್ಕೆ ಸುಮಿತ್ರೆ ಮುಗಿತಾಯ ತರಲೆಳಸಿದಳು. ಆದರೂ ಆ ತುಮುಲ ನಿಲ್ಲಲಿಲ್ಲ. ಗಾಡಿಯ ಸದ್ದಿಗೆ ಹೊಂದಿಕೆಯಾಗುವಂತೆ ಅವಳ ಹೃದಯದಲ್ಲಿ ಒಂದು ವಿಚಿತ್ರ ಸಂಗೀತದ ಸಮಾರಾಧನೆಯಾಗುತ್ತಿತ್ತು. ಆ ಅನುಭವ ಹಿತಕರವಾದುದೇ—ನೋವನ್ನುಂಟುಮಾಡುತ್ತಿದೆಯೋ ಎಂದು ಅವಳು ಹೇಳುವಂತಿರಲಿಲ್ಲ.

ಮುಖರ್ಜಿ ಮಾತನಾಡತೊಡಗಿದ. ಸುಮಿತ್ರೆಗೆ ಅವನ ಎಲ್ಲ ಮಾತುಗಳೂ ಅರ್ಥವಾಗುತ್ತಿದ್ದಿಲ್ಲ. ಆಗೊಮ್ಮೆ ಈಗೊಮ್ಮೆ 'ಹಾಂ, ಹೂಂ' ಎನ್ನುತ್ತಿದ್ದಳು. ಬಹುಶಃ ಆಯಾಸದಿಂದಾಗಿ ನಿದ್ರೆ ಬರುತ್ತಿದೆಯೋ ಏನೋ ಎಂದು ಮುಖರ್ಜಿ ಊಹಿಸಿದ. ಅವಳ ಮುಖ ನೋಡುವಾಗ ಹಾಗೆಯೇ ಹೇಳಬಹುದಾಗಿತ್ತು. ಆದರೆ ವಾಸ್ತವವಾಗಿ ಸುಮಿತ್ರೆ ನಿದ್ರಿಸಿರಲಿಲ್ಲ. ಅವಳ ಮನಸ್ಸಿನ ಆಳದಲ್ಲಿ ಎದ್ದ ಪ್ರಚಂಡ ಬಿರುಗಾಳಿಯಿಂದ ಅವಳು ಕಂಗಾಲಾದಳು. ಏಕೆ ಹೀಗಾಗುತ್ತಿದೆಯೆಂದು ಅವಳಿಗೇ ತಿಳಿದಿರಲಿಲ್ಲ. ಒಮ್ಮೆ ಮಂಗಳೂರಿನ ನೆನಪು ಬರುತ್ತಿತ್ತು. ಮತ್ತೊಮ್ಮೆ ಮಂಗಳೂರಿನ ಮನೆಯ ಮುಂದಿನ ರಂಗವಲ್ಲಿಯ ನೆನಪಾಗುತ್ತಿತ್ತು. ಇನ್ನೊಮ್ಮೆ ದೇವರ ಕೋಣೆಯನ್ನು ನೆನೆಸಿಕೊಂಡಳು. ತಂದೆ ಮಲಗುವ ಕೋಣೆಯಲ್ಲಿಟ್ಟ ಗೋಪಿ ಪದ್ಮಾವತಿಯರ ಭಾವಚಿತ್ರ ಒಮ್ಮೆಗೇ ನೆನಪಿಗೆ ಬಂತು.

ಮಂಗಳೂರ ಮನೆಯ ಬಚ್ಚಲಲ್ಲಿ ಮೈ ಸುಡುವಂತೆ ನೀರು ಬಿಸಿಮಾಡಿ ಸ್ನಾನ ಮಾಡಬೇಕೆಂದು ಸುಮಿತ್ರೆಗೆನಿಸಿತು. ಅರ್ಥಾರ್ಥ ಸಂಬಂಧವಿಲ್ಲದ ಸಣ್ಣಪುಟ್ಟ ಘಟನೆಗಳೆಲ್ಲ ನೆನಪಿಗೆ ಬರಲಾರಂಭಿಸಿದವು. ಆ ಎಲ್ಲ ಘಟನೆಗಳಿಗೂ ಎಲ್ಲ ವಿಚಾರಗಳಿಗೂ ಯಾವುದೋ ಒಂದು ಉದ್ದೇಶವಿದೆ. ಅವು ಯಾವುನ್ನೋ ಒಂದು ಆಕೃತಿಯನ್ನು ರೂಪಿಸಲು ಪ್ರಯತ್ನಿಸುತ್ತಿವೆ ಎಂದು ಮಾತ್ರ ಸುಮಿತ್ರೆಗೆ ತಿಳಿದಿತ್ತು.

" ಬಿಸಿಲು ಬಹಳ. ಗಾಡಿಯ ಸದ್ದಿನ ಜೋಗುಳದಿಂದಾಗಿ ನಿದ್ದೆ ಬರುತ್ತಿದೆಯೆಂದು ಕಾಣುತ್ತದೆ. " ಅದೇ ಪರಿಚಿತ ದನಿ.

ಸುಮಿತ್ರೆ ' ಹೂಂ ' ಎಂದಳಷ್ಟೆ.

ಗಾಡಿ ಜೋಗೇಶ್ವರಿಯನ್ನು ಸಮೀಪಿಸಿದಾಗ ಸುಮಿತ್ರೆಗೆ ನಿಜವಾಗಿಯೂ ನಿದ್ರೆ ಬಂದಿತ್ತು. ಮುಖರ್ಜಿ ಅವಳ ತೋಳು ಹಿಡಿದು ಅಲುಗಿಸಿದ. " ಹೋಗೋಣವೆ ? ನಿಮಗೆ ಚೆನ್ನಾಗಿ ನಿದ್ದೆ ಬಂತೆಂದು ಕಾಣುತ್ತದೆ. "

ಸುಮಿತ್ರೆಗೆ ಅವನು ಮೈಹಿಡಿದು ಅಲುಗಿಸಿದಾಗ ಪುನಃ ಮೈಯಲ್ಲೆಲ್ಲ ವಿದ್ಯುತ್ ಪ್ರವಹಿಸಿದಂತೆ ಒಂದು ಹಿತವಾದ ಅನುಭವ. ಜಗ್ಗನೆದ್ದು ಕಣ್ಣೊರಸಿಕೊಂಡಳು.

ಜೋಗೇಶ್ವರಿಯ ನಿಲ್ದಾಣದ ಸಮೀಪದ ರೆಸ್ಟೋರಾಂಟಿನಲ್ಲಿ ಇಬ್ಬರೂ ಐಸ್‌ಕ್ರೀಮ್ ತಿಂದರು. ಮುಖರ್ಜಿ ಒಂದು ಡಜನ್ ಬಾಳೆಹಣ್ಣುಗಳನ್ನು ತೆಗೆದುಕೊಂಡು ಕರವಸ್ತ್ರದಲ್ಲಿ ಸುತ್ತಿಕೊಂಡ. ಆಮೇಲೆ ಇಬ್ಬರೂ ಗುಹೆಗಳ ಸೌಂದರ್ಯವನ್ನು ನೋಡಲು ಒಂದು ಮೈಲು ದೂರ ನಡೆದು ಹೋದರು.

ದಾರಿಯಲ್ಲಿ ಮಾತ್ರ ಸುಮಿತ್ರೆ ತುಂಬ ಮಾತನಾಡಿದಳು. ಮಾತು ಆರಂಭಿಸಿದ್ದು ಮುಖರ್ಜಿಯೇ. ವಿಷಯ ಕೂಡಾ ಆತನ ಆತ್ಮೀಯ ಅತ್ತಿಗೆಯದೇ. ಆದರೆ ಯಾವ ಸಂಕೋಚವೂ ಇಲ್ಲದೆ ನಗುತ್ತ ಆತನೊಡನೆ ಅಷ್ಟು ಆಸಕ್ತಿವಹಿಸಿ ಚರ್ಚಿಸುತ್ತಿರುವಂತೆ ತನ್ನನ್ನು ಪ್ರೇರೇಪಿಸುತ್ತಿರುವ ಶಕ್ತಿ ಯಾವುದೆಂದು ಆಲೋಚಿಸಲಿಲ್ಲ. ಮುಖ್ಯ ಅವಳಿಗೆ ರೈಲಿನ ಅನುಭವ ಮರುಕಳಿಸಬಹುದೆಂಬ ಭಯವಿತ್ತು. ಆ ಕಾರಣ ಮನಸ್ಸನ್ನು ಅಂತರ್ಮುಖಿಯಾಗಲು ಬಿಡುವುದಿಲ್ಲೆಂಬ ನಿರ್ಧಾರದಿಂದ ಮುಖರ್ಜಿಯೊಡನೆ ಮಾತನಾಡತೊಡಗಿದಳು.

ಸುಮಿತ್ರೆಯ ರಸಿಕತೆಯ ಪರಿಚಯ ಮುಖರ್ಜಿಗಾದುದು ಇಂದೇ. ಅವಳು ತನ್ನೊಂದಿಗೆ ಇಷ್ಟು ಸಲಿಗೆಯಿಂದ ವರ್ತಿಸಬಹುದೆಂದು ಆತ ನಂಬಿರಲಿಲ್ಲ.

ಇಬ್ಬರೂ ಕಲ್ಲು ಮುಳ್ಳಿನ ಹಾದಿ ತುಳಿದು ಗುಹೆಯ ಬಳಿ ಬಂದರು. ಪಕ್ಕದ ಆಶ್ರಮವನ್ನು ಪ್ರವೇಶಿಸಿ ಅಲ್ಲಿರುವ ಸನ್ಯಾಸಿಯನ್ನೂ ಅವನು ಸಾಕಿದ ಹುಲಿಯನ್ನೂ ಕಂಡರು. ಆಮೇಲೆ ಬದಿಯಲ್ಲೇ ಇರುವ ಮಾವಿನ ತೋಪಿನಲ್ಲಿ ಬಾಳೆಹಣ್ಣುಗಳನ್ನು ತಿಂದು, ಬೇಡಿ ಒಂದಿಷ್ಟು ನೀರು ಕುಡಿದರು. ಇದಾದ ಮೇಲೆ ಗುಹೆಯೊಳಗೆ ಕಡೆಗಿದ್ದ ದೇವಾಲಯವನ್ನು ನೋಡಹೋದರು.

ಶನಿವಾರವಾದುದರಿಂದ ಹೆಚ್ಚು ಮಂದಿ ಯಾರೂ ಬಂದಿರಲಿಲ್ಲ. ರವಿವಾರ ಗುಹೆ ನೋಡಲೆಂದು, 'ಪಿಕ್‌ನಿಕ್' ಗೆಂದು, ಮೋಜಿಗೆಂದು ಬರುವವರ ಸಂಖ್ಯೆ ವಿಪರೀತ. ಆದರೆ ಅಂದು ಯಾರೂ ಇರಲಿಲ್ಲ. ಮುಖರ್ಜಿ ಸುಮಿತ್ರೆ ಗುಹೆಯನ್ನೆಲ್ಲ ಶೋಧಿಸಿದರು. ನೋಡಬೇಕಾದುದನ್ನೆಲ್ಲ ನೋಡಿ ಮುಗಿಸಿದರು. ಸುಮಿತ್ರೆಯ ಗಾಂಭೀರ್ಯವೆಲ್ಲ ಮಾಯವಾಗಿತ್ತು. ಅವಳ ಜೀವಮಾನದಲ್ಲೇ ಆಕೆ ಇಷ್ಟು ತಿಳಿಯಾದ ಮನಸ್ಸಿನಿಂದ ಯಾರೊಡನೆಯೂ ಸರಸವಾಡಿರಲಿಲ್ಲ.

ಗುಹೆಯ ಹಿಂಭಾಗದ ಬಾಗಿಲಿನ ಮೆಟ್ಟಲೇರಿ ಮೇಲೆ ಬಂದರೆ ಎತ್ತರದ ದಿನ್ನೆ. ದೂರದಲ್ಲಿ ಕಾಣುವ ಮಾವಿನ ತೋಪು, ಈಚಲ ಮರಗಳು, ಗದ್ದೆಗಳು ಇವೆಲ್ಲ ಆ ದಿನ್ನೆಗೆ ಒಂದು ವಿಚಿತ್ರ ಸೌಂದರ್ಯವನ್ನು ಕೊಟ್ಟಿವೆ.

ಮುಖರ್ಜಿ ಸುಮಿತ್ರೆ ದಿನ್ನೆಯೇರುವಾಗ ಘಂಟೆ ನಾಲ್ಕೂವರೆಯಾಗಿತ್ತು. ಅಲ್ಲಿಂದಲೇ ಸುತ್ತಲಿನ ಬಳಸು ದಾರಿಯನ್ನನುಸರಿಸಿ ಬಂದರೆ ರೈಲು ನಿಲ್ದಾಣಕ್ಕೆ ಹೋಗುವ ದಾರಿ ಸಿಗುತ್ತದೆ. ಆದರೆ ಮುಖರ್ಜಿ ಆ ದಾರಿ ಹಿಡಿಯಲಿಲ್ಲ.

"ಘಂಟೆ ನಾಲ್ಕೂವರೆಯಾಗಿದೆಯಷ್ಟೆ. ಒಂದರ್ಧ ತಾಸು ಇಲ್ಲಿ ಕುಳಿತುಕೊಳ್ಳೋಣವೆ. ನಾನು ಯಾವಾಗಲೂ ಕುಳಿತುಕೊಳ್ಳುವ ಜಾಗವೊಂದಿದೆ. ತೋರಿಸುತ್ತೇನೆ, ಬನ್ನಿ. ಆರು ಘಂಟೆಯೊಳಗೆ ಹೇಗಿದ್ದರೂ ಮಾತುಂಗಾ ತಲಪಬಹುದು" ಎಂದು ಮುಖರ್ಜಿ ಹೇಳಿದ.

ಸುಮಿತ್ರೆ ಅವನನ್ನು ಅನುಸರಿಸಿದಳು.

ಮುಖರ್ಜಿ ಆರಿಸಿದ್ದ ಸ್ಥಳ ತುಂಬ ಏಕಾಂತ ಪ್ರದೇಶ. ಎತ್ತರಕ್ಕೆ ಬೆಳೆದು ನಿಂತ ಹುಲ್ಲು ಒಂದು ಕಡೆ. ಇನ್ನೊಂದು ಕಡೆ ಆಳೆತ್ತರದ ಬಂಡೆ. ಕುರುಚಲು ಗಿಡಗಳ ಪೊದೆಗಳು ಅಡ್ಡ ಬಂದು ಕಾಡಿಗೆ ಹಾಯುವ ದಾರಿ ತುಂಬ ದೂರದಲ್ಲಿ ಕವಲೊಡೆಯುತ್ತಿತ್ತು.

" ಸನ್ಯಾಸಿಯಾಗಲು ಇದಕ್ಕಿಂತ ಒಳ್ಳೆ ಜಾಗ ಸಿಗಲಾರದು " ಎಂದು ನಗುತ್ತಲೇ ಸುಮಿತ್ರೆ ಹೇಳಿದಳು. ಮುಖರ್ಜಿ ತನ್ನ ಕರವಸ್ತ್ರ ಹಾಸಿ ಸುಮಿತ್ರೆ ಯೊಡನೆ ಕುಳಿತುಕೊಳ್ಳುವಂತೆ ಹೇಳಿ, ತಾನೂ ಪಕ್ಕದಲ್ಲಿ ಬಂಡೆಗೊರಗಿ ಕುಳಿತುಕೊಂಡ.

" ಈ ಆಫೀಸಿನ ನರಕಕ್ಕಿಂತ ಸನ್ಯಾಸಿಯಾಗುವುದೇ ವಾಸಿಯೆಂದು ನನಗೆ ಕಾಣುತ್ತದೆ."

" ಅದೇನು ಆಫೀಸು ಅಷ್ಟು ಬೇಸರಹಿಡಿಸಿದೆಯೇನು ?"

ಮುಖರ್ಜಿ ತನ್ನ ಆಸೆ ಆಕಾಂಕ್ಷೆಗಳ ಗೋಪುರದ ಚಿತ್ರವನ್ನು ಇದಿರು ಬಿಡಿಸತೊಡಗಿದ. ತನ್ನ ಬಾಲ್ಯದ ದಿನಗಳನ್ನೆಲ್ಲ ವಿವರಿಸ ತೊಡಗಿದ. ಅದನ್ನು ಕೇಳುತ್ತಿದ್ದಂತೆ ಸುಮಿತೆ, ಪುನಃ ಅಧೀರೆಯಾದಳು. ಅವಳ ಮನಸ್ಸಿನಲ್ಲಿ ಮತ್ತೆ ಹೊಯ್ದಾಟ ಆರಂಭವಾಯಿತು. ಪುನಃ ಬಾಲ್ಯದ ಸ್ಮೃತಿಗಳು, ಅಸ್ಪಷ್ಟ ಘಟನೆ ಗಳು ಕ್ರಮಬದ್ಧವಲ್ಲದ ಒಂದು ಅವ್ಯವಸ್ಥಿತ ಘಟನಾವಳಿಗಳ ಮಾಲೆಯಂತೆ ಆಕೆಯ ಕಣ್ಣಮುಂದೆ ಹಾಯತೊಡಗಿದವು.

ಆದರೂ ಮುಖರ್ಜಿ ಹೇಳುತ್ತಿದ್ದ ಮಾತುಗಳೆಲ್ಲ ಅವಳಿಗೆ ಕೇಳುತ್ತಿ ದ್ದವು. ಅವನ ವಿದ್ಯಾಭ್ಯಾಸಕ್ಕಾಗಿ ಅತ್ತಿಗೆ, ಅಣ್ಣಂದಿರು ಪಟ್ಟ ಕಷ್ಟ, ವೈದ್ಯ ಕೀಯ ಅಭ್ಯಾಸ ಮಾಡಬೇಕೆಂಬ ಆತನ ಹಂಬಲ, ಆರ್ಥಿಕ ದುರ್ದೆಸೆ ಯಿಂದ ಈಡೇರದ ಆ ಆಸೆ—

' ಮೆಡಿಕಲ್ ಕಾಲೇಜು ' ಸೇರುವ ಆಸೆ ಹೇಗೆ ನಿರಾಸೆಯಾಯಿತೆಂದು ಮುಖರ್ಜಿ ವಿವರಿಸುತ್ತಿದ್ದಾಗ ಸುಮಿತ್ರೆಗೆ ಏಕೋ ಮೈ ನಡುಗಿತು.

" ಸೇವಾದೀಕ್ಷೆ; ' ಮೆಡಿಕಲ್ ' ಓದುವಿಕೆ...."

ಯಾವುದೋ ಒಂದು ಕನಸಿನ ರಾಜ್ಯದಲ್ಲಿ ತಾನೊಂದು ದಿನವಿದ್ದೆ. ' ಮೆಡಿಕಲ್ ' ಮುಗಿಸಿ ದೊಡ್ಡದೊಂದು ಆಸ್ಪತ್ರೆಯನ್ನೇ ನಡೆಸಿಕೊಂಡು ಹೋಗುವ ಕನಸು ಕಟ್ಟಿದ್ದೆ....ಎಂಬ ನೆನಪಾಗಿ ಸುಮಿತ್ರೆ ಪುನಃ ಆ ಕನಸಿನ

ಕುರಿತೇ ಯೋಚನೆ ಮಾಡತೊಡಗಿದಳು. ಈಯೆಲ್ಲ ವಿಚಾರಗಳಿಗೆ ಸಂಬಂಧಿಸಿದ ಒಂದು ಯಾವುದೋ ಶಕ್ತಿಯನ್ನು ನಾನು ಈತನಕ ಗುರುತಿಸದೆ ಬಿಟ್ಟಿದ್ದೇನೆ, ಎಂದು ಸುಮಿತ್ರೆ ವಿಚಾರದ ಗುಂಗಿನಲ್ಲಿ ಮೈಮರೆತಳು.

ಒಮ್ಮಿಂದೊಮ್ಮೆಗೆ ಅವಳ ಹೃದಯದಲ್ಲಿ ಸಂತೋಷ ಉಕ್ಕಿ ಬಂತು. ಪುನಃ ರೈಲಿನದೇ ಅವಸ್ಥೆ. ಒಂದು ಕೈ ನೆಲಕ್ಕೂರಿ ಬಂಡೆಗೆ ಬೆನ್ನುಕೊಟ್ಟು ಕುಳಿತಿದ್ದಾಕೆ ಹಾಗೆಯೇ ಅರ್ಧ ನಿಮೀಲಿತ ನೇತ್ರಗಳಿಂದ ದಿಕ್ಕಿಲ್ಲದ ದಿಕ್ಕನ್ನು ನೋಡುತ್ತಿದ್ದಳು. ನಗು ಅವಳ ತುಟಿಗಳಂಚಿನಲ್ಲಿ ನಲಿಯುತ್ತಿತ್ತು.

ಸುಮಿತ್ರೆ ಮುಖರ್ಜಿಗೆ ಸೌಂದರ್ಯದ ಪ್ರತಿಮೂರ್ತಿಯಾಗಿ ಕಂಡು ಬಂದಳು.

ಒಂದು ಕೈಯಿಂದ ಭೂಮಿಯನ್ನು ಆಧರಿಸಿದ್ದುದರಿಂದ ಆಕೆಯ ಸೆರಗು ಜಾರಿ ಎದೆಯ ಕೆಳಗೆ ಇಳಿದಿತ್ತು. ಸೆರಗು ಮುಚ್ಚದ ಎದೆಯನ್ನು ನಾನು ಮುಚ್ಚುತ್ತೇನೆ ಎಂದು ಆಕೆಯ ಜಡೆ ಮಾತ್ರ ಎದೆಯುದ್ದ ಇಳಿದು ಬಂದು ಬಳಿಯಲ್ಲಿ ಬಿದ್ದಿದ್ದ 'ವ್ಯಾನಿಟಿ ಬ್ಯಾಗ್'ನ ಮೇಲೆ ಸುರುಳಿಯಾಗಿ ಕೊನೆಗೊಂಡಿತ್ತು. ಹಾಯಾಗಿ ಮಡಗಿದ್ದ ಆಕೆಯ ಕಾಲುಗಳು ಮುಖರ್ಜಿಗೆ ವರ್ಣ ಚಿತ್ರಗಳಲ್ಲಿ ತೋರುವ ಒಂದು ಕ್ರೋಟೆಯಂತೆ ಕಂಡುಬಂದವು. ಅವಳ ಶ್ವಾಸ-ನಿಶ್ವಾಸಕ್ಕೆ ಸರಿಯಾಗಿ ಎದೆ ನಾಟ್ಯವಾಡುತ್ತಿತ್ತು. ಮುಡಿಯಿಂದ ಬಿಡುಗಡೆ ಪಡೆದು ಕಣ್ಣನ್ನು ಮುಚ್ಚುತ್ತೇನೆ ಎಂದು ಬಂದ ಒಂದು ಕುರುಳು ಹಣೆಯಮೇಲೆಯೇ ಗಾಳಿಯ ಸಹಾಯದಿಂದ ಕೆಳಗಿಳಿಯಲು ವಿಶ್ವಪ್ರಯತ್ನ ಮಾಡುತ್ತಿತ್ತು.

ಮುಖರ್ಜಿ ಕುಳಿತಲ್ಲಿಯೇ ಸುಮಿತ್ರೆಯ ಸೌಂದರ್ಯವನ್ನು ಮನ ದಣಿಯೆ ಸವಿದ. ತುಸು ಆಕೆಯ ಕಡೆ ಸರಿದು

"ಸುಮಿತ್ರಾ....." ಎಂದ. ಅವನ ದನಿಯಲ್ಲಿ ಕಾತರದ ಮಹಾಪೂರವಿತ್ತು.

ಸುಮಿತ್ರೆ ಕನಸಿನ ರಾಜ್ಯದಿಂದಲೇ 'ಹೂಂ' ಎಂದಳು. ಮುಖರ್ಜಿಗೆ ಬೇಕಾಗಿದ್ದುದೂ ಅಷ್ಟೆ. ಆತ ಯಾವ ವಿರೋಧವನ್ನೂ ನಿರೀಕ್ಷಿಸಿರಲಿಲ್ಲ. ಎಲ್ಲ ತನ್ನ ಅಪೇಕ್ಷೆಯಂತೆಯೇ, ಆಕೆಯ ಇಚ್ಛೆಯಂತೆಯೇ ಜರುಗುತ್ತಿದೆಯೆಂದು ತಿಳಿದು ಮೆಲ್ಲಮೆಲ್ಲ ಅವಳ ಕೈಯನ್ನು ಹಿಡಿದ.

ಸುಮಿತ್ರೆ ಒಂದು ಕ್ಷಣ ನಡುಗಿದಳು. ಎದೆಯ ಉಬ್ಬರವಿಳಿತ ಜೋರಾಯಿತು. ಆದರೆ ಅರೆತೆರೆದಿದ್ದ ಕಣ್ಣುಗಳನ್ನು ಪೂರ್ಣ ಬಿಡಿಸಲಿಲ್ಲ. ಅವಳ

ತುಟಿಯಂಚಿನಲ್ಲಿ ಕುಣಿಯುತ್ತಿದ್ದ ನಗು ಮಾಯವಾಯಿತಾದರೂ, ಆಕೆ ಕೈಯನ್ನು ಹಿಂದಕ್ಕೆಳೆಯುವ ಸಾಹಸ ಮಾಡಲಿಲ್ಲ.

ಮುಖರ್ಜಿಗೆ ಎಲ್ಲಿಲ್ಲದ ಧೈರ್ಯ ಬಂತು.

ಅವಳನ್ನು ಬರಸೆಳೆದು ಎದೆಗವಚಿಕೊಂಡ. ತುಟಿಗಳ ಮೇಲೆ ಮುದ್ದಿನ ಮಳೆಗರೆದ. ತುಟಿಯಿಂದಲೇ ಅವಳ ಹಣೆಯಮೇಲೆ ಕುಣಿಯುತ್ತಿದ್ದ ಕುರುಳನ್ನು ಬದಿಗೆ ಸರಿಸಿದ.

ಇಷ್ಟೆಲ್ಲ ನಡೆದುದು ಒಂದೇ ಕ್ಷಣದಲ್ಲಿ. ಸುಮಿತ್ರೆ ಕಣ್ಣು ತೆರೆಯಲು ಪ್ರಯತ್ನಿಸಿದಳು. ಯಾವುದೋ ಒಂದು ಊಹನಾತೀತ ಸಂಭ್ರಮದ ರಾಜ್ಯದಿಂದ ಆಕೆ ಮರಳುತ್ತಿರುವಂತೆ ಕಾಣುತ್ತಿತ್ತು. ಆಕೆಯ ಹೃದಯದ ಹೋರಾಟ ಒಮ್ಮೆಗೆ ನಿಂತು, ಬೇರೆ ಯಾವುದೋ ಒಂದು ಹೋರಾಟಕ್ಕೆಡೆಮಾಡಿಕೊಡುವಂತೆ ಕಂಡುಬಂತು. ಅವಳಿಗೆ ತನ್ನ ಇಡೀ ದೇಹವೇ ಒಂದು ದೊಡ್ಡ ಸಾಗರದಲ್ಲಿ ಮುಳುಗಿ ಒಮ್ಮೆಗೇ ಅದೃಶ್ಯವಾಗಿ ಹೋಗಲಿಚ್ಛಿಸುವಂತೆ ಕಂಡುಬಂತು. ನೋವಿನಿಂದ ನರಳುವ ಮೈಗೆ ಹಿಮದ ಶಾಖ ಕೊಟ್ಟಂತೆ ಒಂದು ಹಿತವಾದ ಅನುಭವ ಆಕೆಯನ್ನು ಬಾ ಬಾ ಎಂದು ಕರೆದೊಯ್ಯುತ್ತಿತ್ತು.

ಮುಖರ್ಜಿ ಮುದ್ದಿಟ್ಟುದೂ ಆಕೆಗೆ ಸ್ವಪ್ನದಲ್ಲಿ ನಡೆದಂತೆ ಕಂಡು ಬಂದಿತ್ತು.

ಅವಳ ಮೈಯೆಲ್ಲ ಪುಡಿಯಾಗುವಂತೆ ಬಿಗಿಹಿಡಿದುಕೊಂಡು ಮುಖರ್ಜಿ ಇನ್ನೊಮ್ಮೆ ಅವಳ ಚೆಂದುಟಿಗಳಿಗೆ ಮುತ್ತಿಟ್ಟ.

ಸುಮಿತ್ರೆ ಕಣ್ಣು ತೆರೆದಳು.

ಒಮ್ಮಿಂದೊಮ್ಮೆಗೆ ತನ್ನ ಎದೆಗೆ ಯಾರೋ ಬಲವಾದ ಏಟು ಕೊಟ್ಟಂತಾಯಿತು. ಸುಮಿತ್ರೆ ಎವೆಯಿಕ್ಕದೆ ಒಂದುಕ್ಷಣ ಮುಖರ್ಜಿಯ ಮುಖವನ್ನೇ ನೋಡಿದಳು. ಬಯಕೆಯ ರಾಕ್ಷಸೀ ಸ್ವರೂಪ ಆತನ ಮುಖದಲ್ಲಿ ಕಂಡು ಬಂತು. ಅವನ ಕೈ ತನ್ನ ಎದೆಯ ಮೇಲೆ ಆಡುತ್ತಿತ್ತು. ತನ್ನ ಇಡೀ ಶರೀರ ಅವನ ಒಂದು ಕೈಯಲ್ಲಿ ಬಂಧಿಸಲ್ಪಟ್ಟಿದೆ ಎಂದು ತಿಳಿದುಬಂತು.

ಆಕೆ ತನ್ನನ್ನೇ ತಾನು ಕೊಡವಿಕೊಳ್ಳಲು ಯತ್ನಿಸಿದಳು. ಮುಖರ್ಜಿಯ ಹಿಡಿತ ಇನ್ನಷ್ಟು ಬಲವಾಯಿತು. "ಸುಮಿತ್ರಾ....ಸುಮಿತ್ರಾ...." ಎನ್ನುತ್ತಿದ್ದ.

ಸುಮಿತ್ರೆ ಚೀರಿಕೊಂಡಳು.

“ ಗೋಪೀssssss ? ”

ಮುಖರ್ಜಿ ಆಶ್ಚರ್ಯದಿಂದ ಅವಾಕ್ಕಾದ. ಆದರೆ ತನ್ನ ಹಿಡಿತವನ್ನು ಸಡಲಿಸಲಿಲ್ಲ. ಸುಮಿತ್ರೆ ಬಳಿಯಲ್ಲೇ ಬಿದ್ದ ‘ ವ್ಯಾನಿಟಿ ಬ್ಯಾಗ ’ ನ್ನು ಎತ್ತಿ ಫಳೀರೆಂದು ಮುಖರ್ಜಿಯ ಕೆನ್ನೆಗೆ ಚೆನ್ನಾಗಿ ಒಂದೇಟು ಕೊಟ್ಟಳು.

ಮುಖರ್ಜಿ ಸುಮಿತ್ರೆಯನ್ನು ಬಿಟ್ಟುಬಿಟ್ಟ. ಆಕೆ ಅಲ್ಲೇ ಬಿದ್ದುಬಿಟ್ಟಳು.

“ ಗೋಪೀ s s s ಗೋಪೀ s s s ” ಸುಮಿತ್ರೆಯ ಹೋರಾಟದ ಘಟ್ಟ ಮುಗಿದಿತ್ತು. ಆಕೆ ಅಳಲಾರಂಭಿಸಿದಳು. “ ಗೋಪೀ s s s ”

ಮುಖರ್ಜಿ ಎದ್ದು ನಿಂತಿದ್ದ.

“ ಸುಮಿತ್ರಾದೇವಿ........ ”

ಬುಸುಗುಟ್ಟುವ ಹಾವಿನಂತೆ ಎದ್ದುನಿಂತ ಸುಮಿತ್ರೆಯನ್ನು ಕಂಡು ಮುಖರ್ಜಿ ಹೆದರಿದ.

“ ಮರ್ಯಾದೆಗೆಟ್ಟ ಕಸುಬು ಮಾಡುವ ಉದ್ದೇಶದಿಂದ ನೀವು ಡಾಕ್ಕಾದಿಂದ ಇಲ್ಲಿಗೆ ಬಂದಿರೇನು ? ನಿಮ್ಮ ಅತ್ತಿಗೆಯನ್ನೂ ನೀವು ಇದೇ ರೀತಿ ಪ್ರೀತಿಸುತ್ತಿದ್ದಿರೇನು ? ”

ಸುಮಿತ್ರೆಯ ಕಣ್ಣಲ್ಲಿ ಧಾರಾಕಾರವಾಗಿ ನೀರಿಳಿಯುತ್ತಿತ್ತು.

ಮುಖರ್ಜಿ ತಡವರಿಸುತ್ತ “ ಕ್ಷಮಿಸಿ....ಸುಮಿತ್ರಾದೇವಿ....ಕ್ಷಮಿಸಿ.... ಸುಮಿತ್ರಾದೇವಿ.... ” ಎಂದ.

ಸುಮಿತ್ರೆ ಅಲ್ಲಿ ನಿಲ್ಲಲೇ ಇಲ್ಲ. ಸೀರೆಯ ಸೆರಗಿನಿಂದಲೇ ಕಣ್ಣೊರಸಿಕೊಂಡು ಅಲ್ಲಿಂದ ನಿಲ್ಮನೆಯ ಹಾದಿ ಹಿಡಿದು ತುಸು ದೂರ ಓಡಿದಳು. ಮುಖರ್ಜಿ “ ಒಬ್ಬರೇ ಹೋಗಬೇಡಿ....ಸುಮಿತ್ರಾದೇವಿ....ನಾನೂ ಬರುತ್ತೇನೆ....ಸುಮಿತ್ರಾದೇವಿ ” ಎಂದರೂ ಅವಳು ಕೇಳದಂತೆ ಓಡಿದಳು. ತಾನು ಹತ್ತಿರ ಹೋಗುವುದರಿಂದ ಆಕೆ ಇನ್ನಷ್ಟು ಸಿಟ್ಟಿಗೇಳಬಹುದೆಂದು ಮುಖರ್ಜಿ ಒಂದೈದು ನಿಮಿಷ ಅಲ್ಲಿಯೇ ನಿಂತ.

ಸುಮಿತ್ರೆ ಹಿಂದಿರುಗಿ ನೋಡದೆ ಜೋಗೇಶ್ವರಿ ನಿಲ್ಮನೆಯ ದಾರಿ ಹಿಡಿದು ಓಡುತ್ತಿದ್ದಳು. ಯಾರಾದರೂ ನೋಡಿ ನಗಬಹುದು ಎಂಬ ಭಯವೂ ಅವಳಿಗಿರಲಿಲ್ಲ. ಬೇಗ ಇಲ್ಲಿಂದ ಹೋಗಬೇಕು, ಈ ರಾಕ್ಷಸನ ಬಳಿ ನಿಲ್ಲಬಾರದು ಎಂಬುದಷ್ಟೆ ಆಕೆಗೆ ಗೊತ್ತು.

ನಿಲ್ದಾಣ ತಲುಪುವವರೆಗೂ ಆಕೆ ಸರಿಯಾಗಿ ಉಸಿರು ಬಿಡಲಿಲ್ಲ. ಟಿಕೇಟು ಪಡೆದು ಪ್ಲಾಟ್‌ಫಾರ್ಮಿಗೆ ಬರುವಾಗಲೇ ಸುದೈವವಶಾತ್ ಗಾಡಿ ಬಂತು. ಬೇಗ ಹೆಂಗಸರ ಡಬ್ಬಿಯೊಳಗೆ ಹೋಗಿ ಒಂದು ಕಂಡಿಯ ಬಳಿಯಿದ್ದ ಜಾಗದಲ್ಲಿ ಕಂಡಿಯ ಸರಳಿಗೆ ತಲೆಯಿಟ್ಟು ಸುಮಿತ್ರೆ ಒಮ್ಮೆ ಬಿಕ್ಕಳಿಸಿ ದೀರ್ಘವಾಗಿ ಉಸಿರುಬಿಟ್ಟಳು.

ಅವಳ ನಾಲಿಗೆ ಅವಳಿಗರಿಯದಂತೆ ಎರಡೇ ಅಕ್ಷರಗಳನ್ನು ಉಚ್ಚರಿಸುತ್ತಿತ್ತು.

" ಗೋಪಿ....ಗೋಪಿ.... "

ಆ ಕ್ಷಣದಲ್ಲಿ ಅವಳಿಗೆ ಮಧ್ಯಾಹ್ನವಿಡೀ ಬಾಧಿಸುತ್ತಿದ್ದ ಮನಸ್ಸಿನ ಹೋರಾಟದ ಅರ್ಥವಾಯಿತು. ಈ ಮಾನಸಿಕ ವಿಪ್ಲವದ ಹಿಂದಿನ ವ್ಯಕ್ತಿಯ ಆಕಾರ ಕಣ್ಣ ಮುಂದೆ ಬಂತು.

ಗೋಪಿ !

ತಾನು ಗೋಪಿಯನ್ನು ಪ್ರೀತಿಸುತ್ತಿದ್ದೇನೆ.

೨೧

ನೋವಿನಿಂದ ಸುಮಿತ್ರೆಯ ತಲೆ ಸಿಡಿದು ಹೋಗುವಂತಿತ್ತು. ತನಗೆ ಜ್ವರಬಂದಿದೆಯೋ ಎಂದು ಸುಮಿತ್ರೆ ಶಂಕಿಸುವಂತೆ ಅವಳ ಹಣೆ ಕಾದ ಕೆಂಡದಂತಿತ್ತು.

ಕರವಸ್ತ್ರದಿಂದ ಮುಖವನ್ನು ಮುಚ್ಚಿಕೊಂಡು ಸುಮಿತ್ರೆ ಸದ್ದಿಲ್ಲದೆ ಅಳಲಾರಂಭಿಸಿದಳು.

" ನಾನು ಗೋಪಿಯನ್ನು ಪ್ರೀತಿಸುತ್ತಿದ್ದೇನೆ."

ಪಕ್ಕದಲ್ಲಿ ಕುಳಿತಿದ್ದ ಸಿಂಧೀ ಮುದುಕಿಯೊಬ್ಬಳು ಸುಮಿತ್ರೆಯ ಅವಸ್ಥೆಯನ್ನು ಕಂಡು,

" ತಲೆ ನೋಯುತ್ತಿದೆಯೆ ?" ಎಂದು ಕೇಳಿದಳು.

ತಲೆಯಲ್ಲಾಡಿಸಿ ಹೌದೆಂದು ಸೂಚಿಸಿದ ಸುಮಿತ್ರೆಗೆ ತನ್ನ ತಲೆ ಸಿಡಿದು ಹೋಗಿದ್ದರೇ ಚೆನ್ನಾಗಿತ್ತು ಎಂದು ಒಂದು ಕ್ಷಣ ಕಂಡಿತು.

ಭಾವ ಗೋಪಿಯನ್ನು, ತಂಗಿ ಪದ್ಮಾವತಿಯ ಗಂಡನನ್ನು ತಾನು ಪ್ರೀತಿಸುತ್ತಿದ್ದೇನೆ.

ಗೋಪಿ ! ಗೋಪಿ ! ಗೋಪಿ ! ಆ ಹೆಸರನ್ನು ಎಷ್ಟು ಸಲ ಉಚ್ಚರಿಸಿದರೂ ತೃಪ್ತಿಯಿಲ್ಲ. ಎಷ್ಟು ಬಾರಿ ಆ ಮೂರ್ತಿಯನ್ನು ನೆನೆಸಿಕೊಂಡರೂ ಮನಸ್ಸಿಗೆ ಇನ್ನೂ ಅಸಮಾಧಾನ.

ಗೋಪಿಯ ತೋಳ ಸೆರೆಯಲ್ಲಿ, ಅವನ ಎದೆಯ ಮೇಲೆ ತಲೆಯಿರಿಸಿ ಹಾಯಾಗಿ ನಿದ್ರಿಸಿದರೆ !

ಸುಮಿತ್ರೆಯ ಕನಸಿನ ಸ್ವರ್ಗದ ಸಂಭ್ರಮವನ್ನು ಊಹಿಸಿದ ತಲೆಯ ನರಗಳೆಲ್ಲ ಊದಿಕೊಂಡಿದ್ದವು, ನೋವಿನಿಂದ.

ಮಧ್ಯಾಹ್ನ ರೈಲಿನಲ್ಲಿ ಆರಂಭವಾಗಿದ್ದ ಚಿತ್ತಚಾಂಚಲ್ಯದ ಕಳವಳಗಳೆಲ್ಲ ಸುಮಿತ್ರೆಗೆ ತಿಳಿಸಿದುದು ಒಂದೇ ಸತ್ಯ

" ಗೋಪಿಯನ್ನು ಕಂಡಂದಿನಿಂದ ನಾನು ಆ ಸಪುರ, ಉದ್ದ, ಬೆಳ್ಳಗಿನ ವ್ಯಕ್ತಿಯನ್ನು ಪ್ರೀತಿಸುತ್ತಿದ್ದೇನೆ."

ಆ ಸತ್ಯಾನ್ವೇಷಣೆಯಲ್ಲಿ ಮುಖರ್ಜಿ ಬರೇ ಒಂದು ಸಾಧನವಾಗಿದ್ದ.

ಆದರೂ ಆ ಸಾಧನೆಯ ಅನುಭವ ನರಕಸಮಾನ !

ಕರವಸ್ತ್ರದಿಂದ ಸುಮಿತ್ರೆ ತನ್ನ ತುಟಿಗಳನ್ನೊರಸಿಕೊಂಡಳು. " ಥೂ " ಎಂದು ಒಮ್ಮೆ ಹೊರಗೆ ಉಗುಳಿದಳು. ಮತ್ತೊಮ್ಮೆ ತುಟಿಗಳ ಮೇಲೆ ಕೈ ಸವರಿದಳು.

ಅವಳ ತುಟಿಗಳು ಉರಿಯುತ್ತಿದ್ದವು.

ಮುಖರ್ಜಿಗೆ ತಾನು ಆ ರೀತಿ ಸಲಿಗೆ ಕೊಟ್ಟುದು ತಪ್ಪು. ಅವನ ಜೊತೆಗೆ ಹೋಗಲೇ ಬಾರದಿತ್ತು. ಅವನ ಜೊತೆಗೆ ಮಾತನಾಡಲೇ ಬಾರದಿತ್ತು. ಅವನ ಜೊತೆಗೆ ಕೆಲಸ ಮಾಡಲೇ ಬಾರದಿತ್ತು

ಆದರೂ ಮುಖರ್ಜಿ ಅವಳ ಹೃದಯಮಂದಿರದ ಮಹಾದ್ವಾರವನ್ನು ತೆರೆದಿದ್ದ. ಅವಳ ಆರಾಧ್ಯದೇವತೆಯ ದರ್ಶನಮಾಡಿಸಿದ್ದ.

ಗೋಪಿ !

" ಮೂರ್ತಿ ಮಾಸ್ತ ಹಾಗೆಯೆ ಅಕ್ಕಾ,—ಸಪುರ, ಉದ್ದ, ಬೆಳ್ಳಗೆ."

ಎಷ್ಟೋ ದಿನಗಳ ಹಿಂದೆ, ಎಷ್ಟೋ ವರ್ಷಗಳ ಹಿಂದೆ, ಎಷ್ಟೋ ಯುಗಗಳ ಹಿಂದೆ ತಂಗಿ ಪದ್ಮಾವತಿ ಕೂಗಿದ್ದಳು.

ಸುಮಿತ್ರೆ, ಗೋಪಿ ಪದ್ಮಾವತಿಯೊಡನೆ ಸರಸವಾಡಿದ್ದ ನೂರಾರು ಸಂದರ್ಭಗಳನ್ನು ನೆನಸಿಕೊಂಡಳು. ಅವನ ತುಂಟತನದಲ್ಲಿ ಅಡಗಿದ್ದ ರಸಿಕತೆಯ ಹಲವಾರು ಸನ್ನಿವೇಶಗಳನ್ನು ನೆನಪಿಗೆ ತಂದುಕೊಂಡಳು.

ಇಡೀ ಮೈ ಮಲೇರಿಯಾ ಜ್ವರ ಬಂದವರಂತೆ ಕಂಪಿಸಲಾರಂಭಿಸಿತು.

ಪದ್ಮಾವತಿ ! ತನ್ನ ಪ್ರೀತಿಯ ತಂಗಿ, ತಾನು ಸಾಕಿದ ಹುಡುಗಿ. ಅವಳ ಗಂಡ ಗೋಪಿ.

ತನ್ನ ಮನಸ್ಸು ಅವನ ಕುರಿತು ಚಿಂತಿಸುತ್ತಿದೆ.

" ಅಯ್ಯೋ ! ನನ್ನ ತಲೆ ಹೋಳಾಗಿ ಸಿಡಿದು ಹೋಗಬಾರದೆ ? ಈ ನೋವು ತಡೆಯಲಾರೆ " ಎಂದು ಸುಮಿತ್ರೆ ಹೇಳುವಂತಾಗಿತ್ತು.

ಪದ್ಮಾವತಿಗೆ ಎಂಥ ಅನ್ಯಾಯ ಮಾಡುತ್ತಿದ್ದೇನೆ ?

ಸುಮಿತ್ರೆಯ ಮೈ ನಡುಗುತ್ತಿರುವುದನ್ನು ಕಂಡು ಸಿಂಧೀ ಮುದುಕಿ ಪುನಃ ಕೇಳಿದಳು.

"ಜ್ವರ ಬರುತ್ತಿದೆಯೇನು ಮಗಳೆ ! ನಿನಗೆ ಎಲ್ಲಿಗೆ ಹೋಗಬೇಕಾಗಿದೆ?"

ಗಾಡಿ ಒಂದು ನಿಲ್ದಾಣದಲ್ಲಿ ನಿಂತಿತ್ತು. ಸುಮಿತ್ರೆ ಮುದುಕಿಯ ಪ್ರಶ್ನೆಗೆ ಉತ್ತರ ಹೇಳದೆ ಸ್ಟೇಷನ್ ಯಾವುದೆಂದು ಮುಖತಿರುಗಿಸಿ ನೋಡಿದಳು.

' ಬಾಂದ್ರಾ !'

ಗಡಿಬಿಡಿಯಿಂದೆದ್ದು ಸುಮಿತ್ರೆ ಗಾಡಿಯಿಂದಿಳಿದಳು. ಅವಳು ಟಿಕೇಟ್ ಪಡೆದಿದ್ದುದು ಕಿಂಗ್ಸ್ ಸರ್ಕಲಿಗೆ. ಬಾಂದ್ರಾದಲ್ಲಿ ಗಾಡಿ ಬದಲಿಸಬೇಕಿತ್ತು.

ಆದರೆ ಗಾಡಿಯಿಂದಿಳಿದೊಡನೆಯೇ ತಾನು ಸೀದಾ ಮನೆಗೆ ಹೋಗಿ ಪದ್ಮಾವತಿಯನ್ನು ನೋಡಲಾರೆ, ಗೋಪಿಯನ್ನು ಇದಿರಿಸಲಾರೆ ಎಂದು ಮನಸ್ಸು ಅಳುಕಿದುದರಿಂದ, ಶೀಲಕ್ಕನನ್ನು ನೋಡಿಯೇ ಮತ್ತೆ ಮನೆಗೆ ಹೋಗುತ್ತೇನೆಂದು ಹೊರಟಿದ್ದ ಗಾಡಿಯೇರಿ ಮೊದಲ ಜಾಗಕ್ಕೇ ಬಂದು ಕುಳಿತಳು.

ತನ್ನ ಟಿಕೇಟು ಕಿಂಗ್ಸ್ ಸರ್ಕಲಿನದು ಎಂಬ ವಿಚಾರವೂ ಅವಳಿಗೆ ಮರೆತು ಹೋಗಿತ್ತು.

ದಾದರಿನಲ್ಲಿ ಗಾಡಿಯಿಳಿದು ದೊಡ್ಡ ರೈಲ್ವೆಸಂಕದಾಟಿ ಹಿಂದೂ ಕಾಲನಿಗೆ ಬರುವಾಗ ಘಂಟೆ ಆರೂವರೆಯಾಗಿತ್ತು. ತಲೆಯೆಲ್ಲ ಕೆದರಿದೆ, ಅತ್ತುದರಿಂದ ಕಣ್ಣೆಲ್ಲ ಕೆಂಪಾಗಿದೆ ಎಂಬುದರ ಅರಿವು ಸುಮಿತ್ರೆಗಿದ್ದಿಲ್ಲ.

ಅವಳ ಮನಸ್ಸು ಕಾಡುತ್ತಿದ್ದ ವಿಚಾರ ಒಂದೇ.

“ಇವೊತ್ತು ಮನೆಗೆ ಹೋಗಿ ಹೇಗೆ ಇರುತ್ತೇನೆ ? ಪದ್ಮಾವತಿಯ ಮುಖ ಹೇಗೆ ನೋಡುತ್ತೇನೆ ?”

ಮಾಳಿಗೆಯ ಮೆಟ್ಟಲೇರಿ ಶೀಲೆಯ ಮನೆಗೆ ಬಂದಾಗ ಸುಮಿತ್ರೆಗೆ ನಿರಾಸೆಯಾಯಿತು. ಮನೆಗೆ ಬೀಗ ಹಾಕಿತ್ತು.

ಭಾರವಾದ ಮನಸ್ಸಿನಿಂದಲೇ ಸುಮಿತ್ರೆ ಅಲ್ಲಿಂದಿಳಿದು ಟ್ರಾಂ ಹಿಡಿದು ಕಿಂಗ್ಸ್ ಸರ್ಕಲಿಗೆ ಹೋದಳು. ಮನೆಗೆ ಆದಷ್ಟು ವಿಲಂಬಿಸಿ ಹೋಗಬೇಕೆಂದು ಮನಸ್ಸು ಹೇಳುತ್ತಿದ್ದರೂ, ಅವಳಿಗೆ ಬೇರೆಲ್ಲಿಗೆ ಹೋಗುವುದೆಂದು ತಿಳಿಯಲಿಲ್ಲ. ಟ್ರಾಂ ಕಿಂಗ್ಸ್ ಸರ್ಕಲ್ ಹೂದೋಟದ ಬಳಿ ಬಂದಾಗ ಒಂದರ್ಧ ಘಂಟೆ ಇಲ್ಲಿ ಕುಳಿತು ಮುಂದೆ ಹೋಗೋಣವೇ ಎಂದು ಆಕೆ ಯೋಚಿಸಿದಳು. ಆದರೆ ಮರುಕ್ಷಣ, ಪದ್ಮಾವತಿ ಮನೆಗೆ ಬಂದಿದ್ದರೆ ತುಂಬ ಆಯಾಸದಿಂದಿರಬಹುದು. ಹುಡುಗ ಎಲ್ಲಿಗಾದರೂ ಹೊರಗೆ ಹೋಗಿದ್ದರೆ ಅವಳಿಗೆ ಹಾಲು ಬೇಕಾದರೂ ತಾನೇ ಕಾಯಿಸಿಕೊಳ್ಳಬೇಕಾಗುತ್ತದೆ; ಮನೆಗೆ ಹೋಗುವುದು ಒಳ್ಳೆಯದು ಎಂದು ಎಲ್ಲಿಯೂ ನಿಲ್ಲದೆ ಮನೆಯ ದಾರಿ ಹಿಡಿದಳು.

ನಾಲ್ಕೈದು ತಿಂಗಳಿಂದ ಸುಮಿತ್ರೆಗೆ ಮನೆಯಾಗಿದ್ದ ವಸತಿಗೆ ಇಂದು ಬರುವಾಗ ಅವಳ ಎದೆಯೇಕೋ ಹೊಡೆದುಕೊಳ್ಳುತ್ತಿದೆ. ಕಾಲಿನ ಶಕ್ತಿಯೆಲ್ಲ ಒಮ್ಮಿಂದೊಮ್ಮೆ ಇಂಗಿಹೋದಂತೆ ಭಾಸವಾಗುತ್ತಿದೆ. ತಲೆಯ ಮೇಲೆ ಹೊರಲಾರದ ಭಾರವನ್ನು ತುಂಬಿ ಯಾರೋ ಹಿಡಿದೆಳೆದಂತಾಗುತ್ತಿದೆ.

ಸುಮಿತ್ರೆ ತುಂಬ ಪ್ರಯಾಸದಿಂದ ಮಾಳಿಗೆಯ ಮೆಟ್ಟಲೇರಿ ಮನೆಯ ಬಾಗಿಲ ಬಳಿ ಬಂದಳು.

ಮನೆಗೆ ಬೀಗ ಹಾಕಿತ್ತು.

ಸುಮಿತ್ರೆಯ ಮನಸ್ಸು ತುಂಬ ಕಸಿವಿಸಿಗೊಂಡಿತು. ಯಾವುದೋ ಒಂದು ರುಪ್ರಶಾಂತಿ ತನ್ನನ್ನಣಕಿಸುತ್ತಿದೆಯೆಂದು ಭಾಸವಾಯಿತು. ಬೀಗದ ಕೈ ಅವಳ ಬಳಿಯಿರಲಿಲ್ಲ. ನಾಡಕರ್ಣಿಯವರ ಮನೆಯಲ್ಲಿ ಕೊಟ್ಟಿರಬಹುದೆಂದು ಅಲ್ಲಿಗೆ ಹೋಗಿ ಬಾಗಿಲು ಬಡಿದಳು.

ಬಾಗಿಲು ತೆಗೆದುದು ಕುಸುಮಾವತಿಯ ಗಂಡ.

ಸುಮಿತ್ರೆಯನ್ನು ಕಂಡು ಒಮ್ಮೆ ಅವರು ಹೆದರಿದಂತೆ ಕಂಡುಬಂತು. ಅವಳು ಪ್ರಯತ್ನಪೂರ್ವಕ ಕೃತ್ರಿಮವಾದೊಂದು ನಗು ತಂದುಕೊಂಡು

" ನಿಮ್ಮ ಮಿಸೆಸ್ ಇನ್ನೂ ಬರಲಿಲ್ಲವೆ ? " ಎಂದು ಕೇಳಿದಳು.

ಅವರು ಇವಳ ಪ್ರಶ್ನೆಗೆ ಉತ್ತರ ಕೊಡಲಿಲ್ಲ.

" ಹೇಗಿದ್ದಾರೆ ? " ಎಂದು ಕೇಳಿದರು.

ಸುಮಿತ್ರೆಗೆ ತುಂಬ ಆಶ್ಚರ್ಯವಾಯಿತು.

" ಯಾರು ? "

" ನೀವು ಎಲ್ಲಿಂದ ಬರುತ್ತಿದ್ದೀರಿ ? "

" ಆಫೀಸಿನಿಂದ.... "

" ನಿಮಗೆ ಗೊತ್ತೇ ಇಲ್ಲವೆ ? "

ಸುಮಿತ್ರೆ ಈಗ ಮಾತ್ರ ಕಂಗಾಲಾದಳು.

" ಏನು, ಏನಾಗಿದೆ.... ? " ಅವಳ ದನಿ ನಡುಗುತ್ತಿತ್ತು.

" ನಿಮ್ಮ ತಂಗಿಯ ವಿಚಾರ ಏನೂ ಗೊತ್ತಿಲ್ಲವೆ ? ನಿಮಗೆ ಒಂದು ಘಂಟೆಗೆ ಆಫೀಸು ಬಿಟ್ಟಿರಬೇಕಲ್ಲ ? "

ಸುಮಿತ್ರೆ ಪುನಃ ನಡುಗಲಾರಂಭಿಸಿದಳು.

" ಹೌದು, ಆಫೀಸು ಬಿಟ್ಟಿತ್ತು. ಆದರೆ ನಾನು ಬೇರೊಂದು ಕಡೆ ಹೋಗಲಿದೆಯೆಂದು ಹೇಳಿದ್ದೆ. ಏನಾಗಿದೆ....ಏನಾಗಿದೆ ಪದ್ಮಾವತಿಗೆ....ನಾನು ಈಗ ಬರುತ್ತಿದ್ದೇನಷ್ಟೆ.... " ಸುಮಿತ್ರೆ ಅಳಲಾರಂಭಿಸಿದಳು.

ನಾಡಕರ್ಣಿಯವರೂ ಈಗ ಕಂಗಾಲಾದರು.

" ನೀವು ಗಾಬರಿಯಾಗುವುದು ಬೇಡ. ಮಧ್ಯಾಹ್ನ ಹನ್ನೆರಡು ಘಂಟೆಗೆ ಅವರಿಗೆ ಹೊಟ್ಟೆನೋವು ಪ್ರಾರಂಭವಾಯಿತೆಂದು ತೋರುತ್ತದೆ. ಆಗ ಅವರು ಬಚ್ಚಲು ಮನೆಯಲ್ಲಿದ್ದರಂತೆ. ಬಿದ್ದುಬಿಟ್ಟರೆಂದು ತೋರುತ್ತದೆ. ಹುಡುಗ

ನಮ್ಮಲ್ಲಿಗೆ ಓಡಿಬಂದ. ಪುಣ್ಯಕ್ಕೆ ನನಗೆ ಇವತ್ತು 'Off duty' ಇತ್ತು. ನಾನು ಡಾ ಗಿದ್ವಾನಿಯವರನ್ನು ಕರೆದುಕೊಂಡು ಬಂದೆ. ಆಮೇಲೆ ಮೋಹನ ರಾಯರಿಗೂ, ಗೋಪೀನಾಥರಾಯರಿಗೂ ಟೆಲಿಫೋನ್ ಮಾಡಿದೆ. ಕುಸುಮಾ ವತಿ ನಿಮ್ಮ ತಂಗಿಯ ಸಮೀಪವೇ ಇದ್ದಳು. ಮೋಹನರಾಯರು ಕಾರು ಮಾಡಿಕೊಂಡು ಓಡಿಬಂದರು. ಒಂದು ಘಂಟೆ ನಿಮ್ಮ ತಂಗಿಗೆ ಸ್ಮೃತಿ ಬರಲೇ ಇಲ್ಲ. ಆಮೇಲೆ ಅವರನ್ನು ವಸುಂಧರಾದೇವಿಯ ನರ್ಸಿಂಗ್‌ಹೋಮಿಗೆ, ಅಂಬುಲೆನ್ಸ್ ತರಿಸಿ ಮೋಹನರಾಯರು ಕರೆದುಕೊಂಡು ಹೋದರು. ಅಷ್ಟ ರಲ್ಲಿ ಗೋಪೀನಾಥರಾಯರೂ ಬಂದರು. ಸಂಜೆ ಮೂರು ಘಂಟೆಗೆ ನಾನು ಪುನಃ ಹೋಗಿದ್ದೆ. ಏನೋ ಒಂದು ಆಪರೇಶನ್ ಆಗಬೇಕಾದೀತೆಂದು ಹೇಳು ತ್ತಿದ್ದರು. ಮೋಹನರಾಯರು ಡಾ. ಶಿಂದೆ ಮತ್ತು ಕೂಪರ್ ಇವರನ್ನು ಕರೆಸ ಬೇಕೆಂದು ಹೇಳುತ್ತಿದ್ದರು. ಸಂಜೆಗೆ ಆಪರೇಶನ್ ಮಾಡುವ ಆಲೋಚನೆ ಯಲ್ಲಿದ್ದರು. ನೀವೂ ಬೇಗ ಹೋಗಿ. ಜೊತೆಗೆ ನಾನೂ ಬರಬೇಕೆ ?........ ಕುಸುಮಾ ಅಲ್ಲೇ ಇದ್ದಾಳೆ.... "

ಸುಮಿತ್ರೆಗೆ ಕೊನೆಯ ಮಾತುಗಳು ಸರಿಯಾಗಿ ಕೇಳಿಸಲಿಲ್ಲ. ಕೈಲಿದ್ದ ಬ್ಯಾಗನ್ನು ನಾಡಕರ್ಣಿಯವರ ಮನೆಬಾಗಿಲಲ್ಲೇ ಒಳಗೆ ಬಿಸಾಡಿ " ನಾನು ಹೋಗುತ್ತೇನೆ " ಎಂದವಳೇ ಕಿಂಗ್ಸ್‌ಸರ್ಕಲ್ ಟ್ರಾಂ ಜಂಕ್ಶನಿನ ತನಕ ಓಡಿ ದಳು.

ಅವಳು ಬಂದಿದ್ದ ಟ್ರಾಂ ಅದೇ ಮರಳಿ ಹೊರಡುವುದರಲ್ಲಿತ್ತು. ಸುಮಿತ್ರೆ ಅದನ್ನೇರಿ ಕುಳಿತಳು. ಟ್ರಾಂ ಬೇಕೆಂದೇ ಅತ್ಯಂತ ಮಂದಗತಿಯಿಂದ ಮುಂದುವರಿಯುತ್ತಿದೆ ಎಂದು ಅವಳಿಗೆ ಕಂಡುಬಂತು.

ದಾದರ್ ತಲಪುವತನಕ ಒಂದು ಯುಗ ಕಳೆದಂತೆ ಕಂಡಿತು. ಅವಳ ಮೈಯೆಲ್ಲ, ಬಟ್ಟೆಯೆಲ್ಲ ಒದ್ದೆ, ಬೆವರಿ.

ಎರಡು ಮೂರು ತಾಸುಗಳಲ್ಲೇ ಎಂಥ ವಿಚಿತ್ರ ಅನುಭವ. ಸುಮಿತ್ರೆ ಭಯದಿಂದ ತತ್ತರಿಸಿಹೋಗಿದ್ದಳು.

ಮೋಹನರಾಯರ ಡಿಸ್ಪೆನ್ಸರಿಯಿಂದ ತುಸು ದೂರದಲ್ಲೇ ಒಂದು ಅಡ್ಡ ರಸ್ತೆಗೆ ತಾಗಿ ದಾದರ್ ಸಿಲ್ಕಮನೆಯ ಸಮೀಪ ವಸುಂಧರಾದೇವಿಯ ನರ್ಸಿಂಗ್

ಹೋಮ್ ಇದೆ. ಸುಮಿತ್ರೆ ಬಾಗಿಲಲ್ಲಿ ನಿಂತ ಎರಡು ಮೂರು ಕಾರುಗಳನ್ನು ಕಂಡು ಇನ್ನಷ್ಟು ಅಧೀರೆಯಾದಳು.

ಓಡಿಯೋಡಿ ಸುಮಿತ್ರೆ ವಿಸಿಟರ್ಸ್ ರೂಮ್‌ನ ಒಳಗೆ ಪ್ರವೇಶಿಸಿದಾಗ ಅಲ್ಲಿ ಶೀಲೆ ಕುಸುಮಾವತಿಯರು ಕಂಡುಬಂದರು.

ಯಾವುದೋ ಒಂದು ಪತ್ರಿಕೆಯನ್ನು ತಿರುವಿ ಹಾಕುತ್ತಿದ್ದ ಕುಸುಮಾವತಿ ಬಂದವರು ಯಾರೆಂದು ಮುಖವೆತ್ತಿ ನೋಡಿದಾಗ ಸುಮಿತ್ರೆ ಕಂಡು ಬಂದುದರಿಂದ ಎದ್ದು ನಿಂತು,

" ಎಲ್ಲಿಗೆ ಹೋಗಿದ್ದಿ ಸುಮಿತ್ರಾ ? " ಎಂದು ತುಸು ಸಿಟ್ಟು ಬೆರೆತ ಸ್ವರದಲ್ಲೇ ಕೇಳಿದಳು.

" ಬಂದಿಯೇನಮ್ಮಾ. ನಿಮ್ಮ ಆಫೀಸಿಗೆ ಟೆಲಿಫೋನ್ ಮಾಡಿದರೆ, ಆಫೀಸು ಮುಚ್ಚಿಯಾಗಿದೆ ಎಂದು ಯಾರೋ ಹೇಳಿದನಂತೆ. ನಿನ್ನನ್ನು ಬೇರೆಲ್ಲಿ ಹುಡುಕುವುದು ಸುಮಿತ್ರಾ. ಎಲ್ಲಿಗೆ ಹೋಗಿದ್ದೆ ಮಧ್ಯಾಹ್ನ ? " ಈ ರೀತಿ ಕೇಳಿದುದು ಶೀಲೆ.

ಸುಮಿತ್ರೆಗೆ, ಏನು ಉತ್ತರ ಹೇಳುವುದೆಂದು ತಿಳಿಯಲಿಲ್ಲ. ಸತ್ಯವನ್ನಂತೂ ಖಂಡಿತ ಹೇಳುವಂತಿಲ್ಲ. ಸುಳ್ಳಾಡಲು ಮನಸ್ಸು ಹಿಂಜರಿಯುತ್ತಿತ್ತು. ಪ್ರಶ್ನೆಯನ್ನೆ ಮರೆಸಲೆಂದು,

" ಪದ್ಮಾ ಹೇಗಿದ್ದಾಳೆ ಶೀಲಕ್ಕ ? " ಎಂದಳು.

ಉತ್ತರ ಹೇಳಿದುದು ಕುಸುಮಾವತಿ.

" ಇನ್ನರ್ಧ ಘಂಟೆಯಲ್ಲಿ ' ಡಿಲೆವರಿ ' ಆಗದಿದ್ದರೆ ಆಪರೇಶನ್ ಮಾಡಬೇಕಾದೀತೆಂದು ಡಾ. ಶಿಂದೆ ಹೇಳಿದರು. ಪುರಂಧರೆಯವರಿಗೆ ಹೇಳಿಕಳುಹಿಸಿವರು. ಅವರಿಗೆ ಬೇರೆ ಏನೋ ಸೀರಿಯಸ್ ಕೇಸು ಬಂದಿದೆಯಂತೆ. ಡಾ. ಕೂಪರ್ ಇನ್ನು ಹತ್ತು ಹದಿನೈದು ನಿಮಿಷಗಳಲ್ಲಿ ಬರಬಹುದೆಂದು ಕಾಣುತ್ತದೆ. ಡಾ. ಗಿದ್ವಾನಿ ಈಗ ತಾನೇ ಡಿಸ್ಪೆನ್ಸರಿಗೆ ಹೋಗಿಬರುತ್ತೇನೆಂದು ಹೋದರು. ಮೋಹನರಾಯರು ಮತ್ತು ವಸುಂಧರಾದೇವಿ ಒಳಗಿದ್ದಾರೆ, ಪದ್ಮಾವತಿಯ ಹತ್ತಿರ. "

" ನಾನು ಪದ್ಮೆಯನ್ನು ನೋಡಬಹುದೆ ? "

"ನೋಡು ಬೇಕಾದರೆ. ಆದರೆ ಅವಳಿಗಿನ್ನೂ ಸ್ಮೃತಿ ಬಂದಿಲ್ಲ. ಒರೇ ಒಂದರ್ಧ ತಾಸು ಎಚ್ಚರವಿತ್ತು; ಅಷ್ಟೆ."

ಸುಮಿತ್ರೆ ಬಳಿಯಲ್ಲೇ ಇದ್ದ ಒಂದು ಸೋಫಾದಲ್ಲಿ ಕುಸಿದು ಬಿದ್ದಳು. ಅವಳ ತಲೆ ಪುನಃ ಸಿಡಿದು ಹೋಗುವಂತೆ ನೋವು ಕೊಡಲಾರಂಭಿಸಿತು.

ಕುಸುಮಾವತಿ ಹತ್ತಿರ ಬಂದು ಸುಮಿತ್ರೆಯ ಬಳಿ ಕುಳಿತಳು.

ಸುಮಿತ್ರೆ ಬಿಕ್ಕಿ ಬಿಕ್ಕಿ ಅಳತೊಡಗಿದಳು.

"ನಾನು ಯಾಕೆ ಅಲ್ಲಿಗೆ ಹೋದೆ....ನಾನು ಯಾಕೆ ಅಲ್ಲಿಗೆ ಹೋದೆ ಪದ್ಮಾಳನ್ನು ಬಿಟ್ಟು........"

ಕುಸುಮಾವತಿ ಒಂದು ಕೈಯಿಂದ ಬೆನ್ನು ಸವರುತ್ತ ಕೇಳಿದಳು.

"ಎಲ್ಲಿಗೆ ಹೋಗಿದ್ದಿ ಸುಮಿತ್ರಾ ?"

ಈಗಲೂ ಸುಮಿತ್ರೆಗೆ ಸತ್ಯ ಹೇಳುವುದು ಸಾಧ್ಯವಾಗಲಿಲ್ಲ. ಒಂದು ಕ್ಷಣ ಎಲ್ಲವನ್ನೂ ಕುಸುಮಾವತಿಯ ಇದಿರು ಒಪ್ಪಿಕೊಳ್ಳೋಣವೇ ಎಂದು ಕಂಡಿತಾದರೂ, ತುಸುದೂರದಲ್ಲಿ ಕುಳಿತಿದ್ದ ಶೀಲೆಯ ಕಡೆ ನೋಡಿದಾಗ ಧೈರ್ಯವೆಲ್ಲ ಮಾಯವಾಯಿತು.

"ಜೋಗೇಶ್ವರಿಯ ತನಕ ಹೋಗಿದ್ದೆ. ಪದ್ಮಾ ಮನೆಯಲ್ಲಿರುವುದಿಲ್ಲ ವೆಂದು ಹೇಳಿದ್ದಳು. ಆ ಕಾರಣ ನಮ್ಮ ಆಫೀಸಿನವರೊಬ್ಬರ ಮನೆಗೆ ಹೋಗಿದ್ದೆ."

"ಯಾರು ವಸುಧಾ ಕಾಳೆಯೆ; ಅಥವಾ ಮಿಸೆಸ್ ಪಟವರ್ಧನ್ ?"

ಸುಮಿತ್ರೆಯ ಗೆಳತಿಯರ ವಿಚಾರವೆಲ್ಲ ಅವಳಿಂದ ಕುಸುಮಾವತಿಗೆ ತಿಳಿದಿದ್ದಿತಾದ ಕಾರಣ ಅವಳು ಹೀಗೆ ಕೇಳಿದಳು. ಆಫೀಸಿನ ಸಹೋದ್ಯೋಗಿ ಗಂಡಸಾಗಿರಬಹುದೆಂದು ಆಕೆ ಎಣಿಸಲಿಲ್ಲ.

"ಪಟವರ್ಧನ್" ಎಂದು ಸುಮಿತ್ರೆ ಹೇಳಿದಳು. ಸುಳ್ಳಾಡಿದೆ ಎಂಬ ನಾಚಿಕೆಯಿಂದ ಮುಖ ಕೆಂಪಾಯಿತು. ಆದರೆ ಅಲ್ಲಿ ಯಾರೂ ಇದನ್ನು ಗಮನಿಸುವ ಸ್ಥಿತಿಯಲ್ಲಿರಲಿಲ್ಲ.

"ಬಾ, ಪದ್ಮಾವತಿಯನ್ನು ನೋಡಬೇಕಾದರೆ" ಎಂದು ಕುಸುಮಾವತಿ ಕೈ ಹಿಡಿದೆಳೆದಾಗ ಸುಮಿತ್ರೆ ಎದ್ದಳು.

ಪದ್ಮಾವತಿಯಿದ್ದ ಕೋಣೆಯಲ್ಲಿ ಮೋಹನ ಮತ್ತು ಒಬ್ಬಾಕೆ ನರ್ಸ್ ಮಾತ್ರ ನಿಂತಿದ್ದರು. ವಸುಂಧರಾ ಬೇರೊಬ್ಬ ರೋಗಿಯನ್ನು ನೋಡಲೆಂದು ಹೋಗಿದ್ದರು. ಸುಮಿತ್ರೆ ದೂಡುವ ಬಾಗಿಲನ್ನು ಅರ್ಧ ಓರೆಮಾಡಿದಾಗ

"ಯಾರು ?" ಎಂದು ಸಿಟ್ಟಿನಿಂದಲೇ ಮೋಹನ ಕೇಳಿದ. ಸುಮಿತ್ರೆಯನ್ನು ನೋಡಿದೊಡನೆ

"ಬಾ, ಒಳಗೆ" ಎಂದ. ಕುಸುಮಾವತಿ ಸುಮಿತ್ರೆಯರು ಒಳಗೆ ಹೋದರು.

"ಇಷ್ಟೇಕೆ ತಡ ಸುಮಿತ್ರಾ. ಎಲ್ಲಿ ಹೋಗಿದ್ದೆ. ಕೂಲಿ ಕೆಲಸಕ್ಕೇನು?"

ಪುನಃ ಅದೇ ಪ್ರಶ್ನೆ. ಆ ಮಾತಿನ ಹಿಂದೆ ನಂಜು ಬೇರೆ.

"ಪದ್ಮಾ ಮನೆಯಲ್ಲಿರುವುದಿಲ್ಲವೆಂದು ನಾನು ಒಬ್ಬ ಗೆಳತಿಯ ಮನೆಗೆ ಹೋಗಿದ್ದೆ." ಒಮ್ಮೆ ಸುಳ್ಳು ಹೇಳಿದ್ದುದರಿಂದ ಈಗ ಅದು ಸರಾಗವಾಗಿ ಬರತೊಡಗಿತು.

"ಹಾಗೇನು ?"

ಸುಮಿತ್ರೆ ಮಲಗಿದ್ದ ಪದ್ಮಾವತಿಯ ಕಡೆ ನೋಡಿದಳು. ನೋವಿನಿಂದ ಅವಳ ಮುಖ ಒಂದು ವಿಚಿತ್ರ ರೂಪ ಪಡೆದಿತ್ತು. ಆಕೆ ಉಸಿರು ಬಿಡುತ್ತಿದ್ದಳೇ ಇಲ್ಲವೇ ಎಂದು ಹೇಳುವಂತಿರಲಿಲ್ಲ.

ಸುಮಿತ್ರೆ ಒಳಗೆ ಬಂದವಳೇ "ಪದ್ಮಾ....ಪದ್ಮಾ....ನನ್ನ ಪದ್ಮಾ...." ಎಂದು ಪ್ರೀತಿಯಿಂದ ಎರಡು ಮೂರು ಬಾರಿ ಕರೆದಳು. ಉತ್ತರ ಬರಲಿಲ್ಲ. ಸುಮಿತ್ರೆಗೆ ಅಳು ತಡೆಯಲಾಗಲಿಲ್ಲ.

"ಶ್ಶ್ ! ಅಳಬೇಡ ಸುಮಿತ್ರಾ. ನಿನಗೆ ಸ್ವಲ್ಪವಾದರೂ ಧೈರ್ಯವಿದೆಯೆಂದು ನಂಬಿದ್ದೆ" ಮೋಹನನ ಮಾತು.

ಸುಮಿತ್ರೆಗೆ ಈಗಲೂ ಅಳು ತಡೆಯಲಾಗಲಿಲ್ಲ.

"ನೋಡು. ಇದು ಅಳುವ ಜಾಗವೂ ಇಲ್ಲ; ಅಳುವ ಸಮಯವೂ ಅಲ್ಲ. ದಯಮಾಡಿ ಹೊರಗೆ ಹೋಗಿ ಕುಳಿತುಕೋ. ಇನ್ನೊಂದು ಘಂಟೆಯಲ್ಲಿ ಪದ್ಮಾ ಸರಿಯಾಗುತ್ತಾಳೆ. ನೀನೆ ಧೈರ್ಯಗೆಟ್ಟರೆ ಇನ್ನು ಗೋಪಿಯೇನು ಮಾಡಿಯಾನು ? ಅವನಿಗೆ ಸ್ವಲ್ಪ ಧೈರ್ಯ ಹೇಳು ಹೋಗು. ಅವಳಂತೂ (ಶೀಲೆ) ಮಂಕು ಹಿಡಿದವರಂತಿದ್ದಾಳೆ."

ಗೋಪಿಯ ಹೆಸರು ಕಿವಿಗೆ ಬಿದ್ದೊಡನೆಯೇ ಸುಮಿತ್ರೆಯ ಅಳು ನಿಂತಿತು. ಪುನಃ ಯಾವುದೋ ಒಂದು ಭಾವನಾವೇಗ ಮನಸ್ಸನ್ನು ಆಕ್ರಮಿಸಿತು. ಸಂಜೆಯ ಘಟನೆಗಳೆಲ್ಲ ನೆನಪಿಗೆ ಬಂದವು.

ಹೊರಗೆ ಬರುತ್ತಿದ್ದಂತೆ ಕುಸುಮಾವತಿಯೊಡನೆ

" ಅವರೆಲ್ಲಿ ?'' ಎಂದು ಕೇಳಿದಳು.

'ಗೋಪೀನಾಥ' ಎಂದು ಹೆಸರು ಹೇಳಲು ಸಾಧ್ಯವಾಗಲಿಲ್ಲ. ಭಾವನೆಂದು ಕರೆಯಲಾಗಲಿಲ್ಲ. ಗೋಪಿಯ ಹೆಸರು ಹೇಳಿದರೆ ಸಂಜೆಯ ಘಟನೆಗಳೆಲ್ಲ ಆ ಹೆಸರಿನ ಉಚ್ಚಾರ ಮಾತ್ರದಿಂದ ಬಹಿರಂಗವಾಗಿ ಹೋದಾವು ಎಂಬ ಹೆದರಿಕೆಯೊಂದು ಅವಳ ಮನಸ್ಸನ್ನು ವ್ಯಾಪಿಸಿತು.

ಆದರೆ ಅವಳ ಪ್ರಶ್ನೆಗೆ ಕುಸುಮಾವತಿ ಉತ್ತರ ಹೇಳಬೇಕಾದ ಅಗತ್ಯ ಬರಲಿಲ್ಲ.

ಗೋಪಿಯೂ ಡಾ. ಕೂಪರ್ ಮತ್ತು ಡಾ. ಶಿಂದೆ ಕಾರಿನಿಂದಿಳಿದು ಬರುತ್ತಿದ್ದರು.

ಗೋಪಿಯನ್ನು ನೋಡಿದಾಗ ಸುಮಿತ್ರೆಗೆ ತಲೆಯ ಮೇಲೆ ದೊಡ್ಡದೊಂದು ಬೆಟ್ಟ ಬಿದ್ದಂತಾಯಿತು. ಅವನ ಮುಖ ಬಾಡಿತ್ತು. ತಲೆ ಕೆದರಿತ್ತು. ಕಣ್ಣು ಗುಳಿಬಿದ್ದಿದ್ದವು. ಪ್ರಯತ್ನದಿಂದ ಆತ ಹೆಜ್ಜೆಯಿಡುವಂತಿತ್ತು.

ಒಂದುಕ್ಷಣ—ಒಂದುಕ್ಷಣ ಮಾತ್ರ ಸುಮಿತ್ರೆ ಇಡೀ ಜಗತ್ತನ್ನೇ ಮರೆತಳು.

ಗೋಪಿಯ ತಲೆಯನ್ನು ತನ್ನ ಮಡಿಲಲ್ಲಿರಿಸಿ ಜೋಗುಳ ಹಾಡಿ ಆತ ನಿದ್ರಿಸುವಂತೆ ಮಾಡಬೇಕು ಎಂಬುದೊಂದು ವಿಚಾರ ತಲೆಯಲ್ಲಿ ಬಂತು.

ಅದರ ಹಿಂದೆಯೇ ತನ್ನ ಆಸೆಯ ಅನುಚಿತತೆ, ಅನ್ಯಾಯ ಮತ್ತು ಸಂದರ್ಭಗಳ ನೆನಪಾಗಿ ಮನಸ್ಸು ಮುದುಡಿತು. ಸುಮಿತ್ರೆ ತನ್ನನ್ನೆ ತಾನು ಹಳಿದುಕೊಂಡಳು.

ಗೋಪಿ ಸುಮಿತ್ರೆಯನ್ನು ನೋಡಿ ನಗುವ ಪ್ರಯತ್ನಮಾಡಿ 'ಬಂದಿಯಾ' ಎಂದ. ಅವನ ದನಿಯ ಮಾರ್ದವ ಸುಮಿತ್ರೆಯ ಎದೆಯನ್ನು ಕೊರೆಯತೊಡಗಿತು. ಆದರೆ ತನ್ನ ಪ್ರಶ್ನೆಗೆ ಉತ್ತರ ನಿರೀಕ್ಷಿಸುವಷ್ಟು ವ್ಯವಧಾನ ಗೋಪಿಗಿರಲಿಲ್ಲ. ಡಾಕ್ಟರರಿಬ್ಬರನ್ನೂ ಪದ್ಮಾವತಿಯ ಕೋಣೆಗೆ ಕರೆದೊಯ್ದ.

ಗೋಪಿ ಮತ್ತೆ ಒಂದೆರಡು ನಿಮಿಷಗಳಲ್ಲಿ ಮರಳಿಬಂದ. ಬಂದವನೇ ' ವಿಸಿಟರ್ಸ್ ರೂಮ್ ' ನಲ್ಲಿ ಒಂದು ಕುರ್ಚಿಗೊರಗಿ ಬಿದ್ದುಬಿಟ್ಟ. ಶೀಲಿ ಅವನ ಬಳಿ ಓಡಿಬಂದಳು. ಸುಮಿತ್ರೆಯೂ ಓಡಿಬಂದಳು. " ಏನಾಗಿಲ್ಲ ಅತ್ತಿಗೆ, ನನಗೇನೂ ಆಗುವುದಿಲ್ಲ. ಪದ್ಮಾ ಸುಖವಾಗಿ ಹೆತ್ತಿದ್ದರೆ ? "

ಗೋಪಿಗೆ ಅಳು ಬರುವುದರಲ್ಲಿತ್ತು. ಆದರೆ ಆತ ಅಳಲಿಲ್ಲ. ಸುಮಿತ್ರೆಯ ಕಣ್ಣಿನಿಂದ ನೀರಿಳಿಯುತ್ತಿತ್ತು. ಕುಸುಮಾವತಿ ಓಡಿಹೋಗಿ ಒಂದು ಕಪ್ ಚಾ ಹಿಡಿದುಕೊಂಡು ಬಂದು ಗೋಪಿಯ ಕೈಗೆ ಕೊಟ್ಟು ಕುಡಿಯುವಂತೆ ಒತ್ತಾಯ ಮಾಡಿದಳು.

ಆತ ಮಧ್ಯಾಹ್ನ ಆಫೀಸಿನಿಂದ ಹೊರಟಮೇಲೆ ಏನೂ ತೆಗೆದುಕೊಂಡಿರಲಿಲ್ಲ. ಕುಸುಮಾವತಿಯ ಒತ್ತಾಯದಿಂದಾಗಿ ಚಾ ಕುಡಿದ.

ಚಾ ಕುಡಿದಾದಮೇಲೆ ಆತ ಕೋಣೆಯಲ್ಲಿ ಅತ್ತಿಂದಿತ್ತ ತಿರುಗಲಾರಂಭಿಸಿದ.

ಸುಮಿತ್ರೆ, ಕುಸುಮಾವತಿ, ಶೀಲೆಯರು ಅಲ್ಲಿಯೇ ಕುಳಿತಿದ್ದರು. ಯಾರಿಗೂ ಮನೆಯ ಯೋಚನೆಯಿರಲಿಲ್ಲ. ಸುಮಿತ್ರೆ ತಗ್ಗಿಸಿದ ಮುಖವನ್ನು ಮೇಲಕ್ಕೆತ್ತುತ್ತಲೇ ಇರಲಿಲ್ಲ. ಮುಖ ಮೇಲಕ್ಕೆತ್ತಿದರೆ ಆಕೆಗೆ ಗೋಪಿಯ ಕಡೆ ನೋಡಬೇಕಾಗಿ ಬರುತ್ತಿತ್ತು. ಅವನೆಡೆ ನೋಡಿದಾಗಲೆಲ್ಲ ಅವಳ ಹೃದಯ ಅಲ್ಲೋಲ-ಕಲ್ಲೋಲವಾಗುತ್ತಿತ್ತು.

ಎಂಟು ಘಂಟೆಯ ತನಕ ಪದ್ಮಾವತಿಗೆ ಪ್ರಜ್ಞೆ ಬಂದೀತೆಂದು ಡಾಕ್ಟರರೆಲ್ಲ ನಿರೀಕ್ಷೆಯಲ್ಲಿದ್ದರು. ಆದರೆ ಪದ್ಮಾವತಿಗೆ ಎಚ್ಚರವಾಗಲೇ ಇಲ್ಲ. ಆಮೇಲೆ ಆಪರೇಶನಿನ ಸಿದ್ಧತೆ ನಡೆಯಿತು.

ಆ ರಾತ್ರೆ ಮುಂಬಯಿಯ ನಾಲ್ಕೈದು ಮಂದಿ ಪ್ರಸಿದ್ಧ ತಜ್ಞ ಡಾಕ್ಟರರು ಪದ್ಮಾವತಿಗೆ ಶಸ್ತ್ರಕ್ರಿಯೆ ನಡೆಸಿ ಅವಳ ಹೆರಿಗೆ ಸುಗಮವಾಗುವಂತೆ ಪ್ರಯತ್ನಿಸಿದರು. ' ಆಪರೇಶನ್ ' ಆಗಲೇ ಬೇಕೆಂದು ಎಂಟು ಘಂಟೆಗೆ ಮೋಹನ ಬಂದು ಹೇಳಿದಾಗ ಗೋಪಿ ಕಂಗಾಲಾಗಿದ್ದ.

"ಅಣ್ಣಾ........ಪದ್ಮಾಳನ್ನು ಉಳಿಸಿಕೊಡು ಅಣ್ಣಾ" ಎಂದು ಅಂಗಲಾಚಿ ಬೇಡಿಕೊಂಡಿದ್ದ.

ಮೋಹನನಿಗೂ ದುಃಖ ತುಂಬಿ ಬಂತು. ಸುಮಿತ್ರೆಯ ಕಡೆ ತಿರುಗಿ "ಗೋಪಿಯನ್ನು ನೋಡಿಕೋ ಎಂದು ಹೇಳಿದರೆ ನೀನೂ ಅಳುತ್ತಾ ಕುಳಿತಿದ್ದೀಯಾ ?" ಎಂದು ಕೇಳಿದ. ಆಮೇಲೆ ಗೋಪಿಯನ್ನು ಸಂತೈಸುವಂತೆ

"ಹೆದರ ಬೇಡ ಗೋಪೀ, ಏನೂ ಆಗುವುದಿಲ್ಲ. ಮುಂಬಯಿಯ 'ಕ್ರೀಮ್ ಮೆಡಿಕಲ್ ಟೆಲೆಂಟ್' ಪದ್ಮಾವತಿಯನ್ನು ನೋಡಿಕೊಳ್ಳುತ್ತಿದೆ" ಎಂದಿದ್ದ.

ಗೋಪಿಗೆಷ್ಟು ಸಮಾಧಾನವಾಯಿತೊ.

ಆಪರೇಶನ್ ನಡೆಯುತ್ತಿದ್ದಾಗ ಪ್ರತಿಯೊಂದು ನಿಮಿಷವೂ ಹೊರಗೆ ಕುಳಿತಿದ್ದ ನಾಲ್ಕು ವ್ಯಕ್ತಿಗಳಿಗೆ ಒಂದೊಂದು ಯುಗದಂತೆ ಕಂಡುಬರುತ್ತಿತ್ತು. ಎಲ್ಲರಿಗೂ ಸಮಾಧಾನ ಹೇಳುವ ಧೈರ್ಯವಿದ್ದುದು ಕುಸುಮಾವತಿಗೆ ಮಾತ್ರ.

ಒಂಭತ್ತೂವರೆ ಘಂಟೆಗೆ ಪದ್ಮಾವತಿಯಿದ್ದ ಕೋಣೆಯಿಂದ ನರ್ಸ್ ಒಬ್ಬಾಕೆ ಮಗುವನ್ನು ಹಿಡಿದುಕೊಂಡು ತೊಳೆಯಲೆಂದು ಹೊರಗೆಬಂದಳು. ಮಗು ಕಿರಿಚಿಕೊಳ್ಳುತ್ತಿತ್ತು.

ಒಮ್ಮೆ ಕಾಯುತ್ತಿದ್ದ ನಾಲ್ಕು ಮಂದಿಗೂ ಜೀವ ಬಂದಂತಾಯಿತು. ಗೋಪಿಯಂತೂ ಬಾಗಿಲು ದೂಡಿ ಪದ್ಮಾವತಿಯ ಕೋಣೆಯೊಳಗೆ ಪ್ರವೇಶಿಸುವುದರಲ್ಲಿದ್ದ. ಆದರೆ ಬಾಗಿಲಲ್ಲಿದ್ದ ನರ್ಸ್ ತಡೆದಳು.

"ಈಗ ಸಾಧ್ಯವಿಲ್ಲ ಮಿಸ್ಟರ್ ರಾವ್. ಸ್ವಲ್ಪಹೊತ್ತು ನೀವು ಕಾಯಬೇಕು."

ಘಂಟೆ ಹತ್ತಾದರೂ ಒಳಗಿದ್ದ ಎಲ್ಲ ಡಾಕ್ಟರರು ಹೊರಗೆ ಬರಲಿಲ್ಲ. ಮೋಹನ ಮತ್ತು ವಸುಂಧರಾದೇವಿ ಎರಡುಬಾರಿ ಹೊರಗೆ ಬಂದು ಏನೋ ಸಲಕರಣೆಗಳನ್ನೆಲ್ಲ ಹಿಡಿದುಕೊಂಡು ಒಳಗೆ ಹೋದರು.

ಒಮ್ಮೆ ಗೋಪಿ ಅಣ್ಣನನ್ನು ತಡೆದು ಕೇಳಲು ಯತ್ನಿಸಿದ. ಮೋಹನನಿಗೆ ಸಿಟ್ಟುಬಂತು. "ಸ್ವಲ್ಪ ಅವಸರ ಮಾಡಬೇಡ ಗೋಪಿ, ನಾವು ಸರ್ವ ಪ್ರಯತ್ನ ಮಾಡುತ್ತಿದ್ದೇವೆ" ಎಂದ.

ಗೋಪಿಗೆ ಪುನಃ ಮನಸ್ಸೆಲ್ಲ ಕಸಿವಿಸಿಯಾಯಿತು. ಅವರಿಬ್ಬರು ತಮ್ಮ ತಮ್ಮೊಳಗೆ ಮಾತನಾಡಿಕೊಳ್ಳುತ್ತಿದ್ದಾಗ ಕಿವಿಗೆ ಬಿದ್ದ "ಹೆಮೊರೇಜ್"

ಆಕ್ಸಿಜನ್ " ಎಂಬ ಒಂದೆರಡು ಶಬ್ದಗಳಿಂದಲೇ ಪರಿಸ್ಥಿತಿ ಸುಧಾರಿಸಿಲ್ಲ ಎಂದಿಷ್ಟೇ ತಿಳಿದ.

ಪುನಃ ಕೋಣೆಗೆ ಬಂದು ಶತಪಥ ತಿರುಗಲಾರಂಭಿಸಿದ.

ಹತ್ತು ಘಂಟೆಗೆ ಎಲ್ಲರಿಗೂ ಒಳಗೆ ಬರಲು ಕರೆ ಬಂತು. ಗೋಪಿ, ಸುಮಿತ್ರೆಯರು ಧಾವಿಸಿದರು. ಶೀಲ ಕುಸುಮಾವತಿಯರು ಅವರನ್ನನುಸರಿಸಿ ದರು.

ಒಳಗೆ ಹೋದಾಗ ಮೋಹನ ಮಾತ್ರ ಗೋಪಿಯನ್ನು ನೋಡಿದೊಡನೆ ಮುಖ ಬೇರೆ ಕಡೆ ತಿರುಗಿಸಿದ. ಇದನ್ನು ಗಮನಿಸಿದವಳು ಕುಸುಮಾವತಿ. ಅವಳು ಸುಮಿತ್ರೆಯ ಕೈಯನ್ನು ಬಲವಾಗಿ ಹಿಡಿದುಕೊಂಡಳು.

ಪದ್ಮಾವತಿ ಮಲಗಿದಲ್ಲೇ ಇದ್ದಳು. ಕುತ್ತಿಗೆಯತನಕ ಹೊದ್ದಿಕೆ ಮುಚ್ಚಿತ್ತು. ಅರೆತೆರೆದ ಕಣ್ಣುಗಳಿಂದ ಅವಳು ಬಾಗಿಲೆಡೆ ನೋಡುತ್ತಿದ್ದಳು. ಅವಳ ಬಾಯಿಯಿಂದ ಏನೋ ದನಿ ಹೊರಡುತ್ತಿದೆಯೆಂದು ನೋಡಿ ಹೇಳ ಬಹುದಿತ್ತಷ್ಟೆ.

ಸುಮಿತ್ರೆ ಹತ್ತಿರ ಹೋದಾಗ ಅವಳಿಗೆ ಅದು ತಿಳಿಯಿತು. ಪದ್ಮಾವತಿ " ಅಕ್ಕಾ....ಅಕ್ಕಾ...." ಎನ್ನುತ್ತಿದ್ದಳು.

ಮೋಹನ ಮತ್ತು ವಸುಂಧರಾ ಇವರನ್ನುಳಿದು ಡಾಕ್ಟರರಿಬ್ಬರೂ ಹೊರಗೆ ಬಂದಿದ್ದರು.

ಮೋಹನ ಪದ್ಮಾವತಿಯನ್ನು ಕುರಿತು " ಪದ್ಮಾ.... ? " ಎಂದು ಮೆಲು ದನಿಯಲ್ಲಿ ಕರೆದ.

ಪದ್ಮಾವತಿ ಮೋಹನನೆಡೆ ನೋಡಿದಳು. ಗಂಡನೆಡೆಗೆ ನೋಡಿದಳು. ನಗಲು ಪ್ರಯತ್ನಿಸಿದಳು. ನಗು ಬರಲಿಲ್ಲ. ನಗಲು ಒಂದು ಭಯಂಕರ ಹೋರಾಟವನ್ನೆ ಆಕೆ ಮಾಡುತ್ತಿರುವಂತೆ ಕಂಡಿತು. ಗೋಪಿ " ಪದ್ಮಾ.... ಪದ್ಮಾ....ಪದ್ಮಾ " ಎಂದು ಕೂಗಿ ಮಂಚದ ಬಳಿ ಬಂದ.

ಅವನನ್ನು ತಡೆದುದು ವಸುಂಧರಾದೇವಿ.

" ಕರೇಜ್ ಮಿ. ರಾವ್ " ಎಂದಾಗಲೇ ಗೋಪಿಗೆ ಏನೋ ಅನಾಹುತ ವಾಗುತ್ತಿದೆಯೆಂದು ತಿಳಿದುಬಂದುದು.

ಪದ್ಮಾವತಿ ನಗಲಿಲ್ಲ. ಮುಚ್ಚಿದ ಕಣ್ಣು ತೆರೆಯಲಿಲ್ಲ.

ಸುಮಿತ್ರೆ ಪ್ರಜ್ಞಾಶೂನ್ಯೆ.

೨೩

ಮೂರ್ತಿ ಕೂಡಲೇ ಹೊರಟು ಮುಂಬಯಿಗೆ ಬಂದ.

ಅವನು ಬರುವಾಗ ಸುಮಿತ್ರೆಗೆ ವಿಪರೀತ ಜ್ವರ.

ವಸುಂಧರಾದೇವಿಯ ಕೈಯ ಹಿಡಿತದಿಂದ ತಪ್ಪಿಸಿಕೊಂಡು ಪದ್ಮಾವತಿಯ ಶವದ ಮೇಲೆ ಬಿದ್ದ ಗೋಪಿಗೆ ತುಸು ಹೊತ್ತಿನಮೇಲೆ ಎಚ್ಚರವಾಗಿತ್ತು. ಆದರೂ ಅಂದು ರಾತ್ರಿ ಆತನ ನಡತೆ ಹುಚ್ಚರಂತೆಯೇ ಇತ್ತು. ತಮ್ಮನ ಅವಸ್ಥೆಯನ್ನು ನೋಡಿದ ಮೋಹನನ ಕಣ್ಣಲ್ಲಿಯೂ ನೀರು ಬಂದಿತ್ತು. ಆದರೆ ಆತ ಕಣ್ಣೀರಿಳಿಸುತ್ತ ಕಾಳಿತುಕೊಳ್ಳುವ ಸಮಯ ಅದಾಗಿರಲಿಲ್ಲ. ಸುಮಿತ್ರೆಯನ್ನು ಉಪಚರಿಸಬೇಕಿತ್ತು.

ಬಹಳ ಕಷ್ಟದಿಂದ ಗೋಪಿ ಶವಸಂಸ್ಕಾರದ ಕೆಲಸ ಮುಗಿಸಿದ. ಸುಮಿತ್ರೆಗೆ ಮಾತ್ರ ಬೆಳಗಿನತನಕ ಅರ್ಧ ಜಾಗೃತಾವಸ್ಥೆಯೇ ಗತಿಯಾಗಿತ್ತು.

ಮರುದಿನ ಗೋಪಿ ಸುಧಾರಿಸಿಕೊಂಡ. ಅವನ ಹುಚ್ಚು ವರ್ತನೆ ನಿಂತಿತು. ದುಃಖ ಕಡಿಮೆಯಾಗಿರಲಿಲ್ಲ. ಆದರೆ ಹಿಂದಿನ ದಿನದ ಹೆಂಗರುಳು ಇಂದು ಗಂಡೆದೆಯಾಗಿತ್ತು.

ಪದ್ಮಾವತಿ ಮರಳಿ ಬರುವಂತಿರಲಿಲ್ಲ.

ಸುಮಿತ್ರೆಗೆ ಮಾತ್ರ ಜ್ವರ ಬರಲಾರಂಭಿಸಿತು. ಆಕೆಗೆ ಜೋಗೇಶ್ವರಿಯಿಂದ ಮರಳುವಾಗಲೇ ಮೈಯೆಲ್ಲ ಬಿಸಿಯಾಗಿದ್ದುದರ ಅನುಭವವಿತ್ತು. ಆ ರುದ್ರ ರಾತ್ರಿಯಲ್ಲಿ ಜ್ವರ ಇಳಿಯಲಿಲ್ಲ. ಮಾರನೆ ದಿನ ಆಕೆ ಹಾಸಿಗೆ ಹಿಡಿದಳು.

ಬಾಡಿದ ಮೊಗದಿಂದ ಮಲಗಿದಲ್ಲಿಂದ ಸುಮಿತ್ರೆ ಮೂರ್ತಿಯನ್ನು ಸ್ವಾಗತಿಸಿದಳು. ಅವಳು ಇದ್ದುದು ಮೋಹನನ ಮನೆಯಲ್ಲೇ. ಗೋಪಿಯ ಮನೆಗೆ ಹಾಕಿದ ಬೀಗವನ್ನು ಕೆಲವು ದಿನ ಯಾರೂ ತೆರೆಯಲೇ ಇಲ್ಲ. ಕೆಲಸದ ಹುಡುಗ ಕೂಡಾ ಮೋಹನನ ಮನೆಯಲ್ಲೇ ನಿಂತಿದ್ದ.

" ಅಣ್ಣಾ.... " ಎಂದು ಸುಮಿತ್ರೆ ಮೂರ್ತಿಯನ್ನು ನೋಡಿದೊಡನೆ ಅಳಲಾರಂಭಿಸಿದಳು. ಮೋಹನನೂ ಬಳಿಯಲ್ಲೇ ಇದ್ದ. ಗೋಪಿ ಮಾತ್ರ

ಪಕ್ಕದ ಕೋಣೆಯಲ್ಲಿ ಮಲಗಿದ್ದ. ಈ ಬಾರಿ ಸುಮಿತ್ರೆಯು ಅಳಲನ್ನು ತಡೆಯುವ ಪ್ರಯತ್ನ ಮೋಹನ ಮಾಡಲಿಲ್ಲ.

ಮೂರ್ತಿ ಸುಮಿತ್ರೆಯ ಹಾಸಿಗೆಯ ಬಳಿ ಬಂದು ಅವಳ ತಲೆಯನ್ನು ನೇವರಿಸಿದ. "ಅಳಬೇಡ ಸುಮಿತ್ರಾ. ದೈವೇಚ್ಛೆ ಯಾರಿಂದಲೂ ತಪ್ಪಿಸಲಿಕ್ಕೆ ಸಾಧ್ಯವಿಲ್ಲ" ಎಂದು ಸಂತೈಸಿದ. ತಂತಿ ನೋಡಿದ ಮೂರ್ತಿಯ ಮೂಕ ಅಳು ಮಂಗಳೂರಲ್ಲೇ ಮುಗಿದಿತ್ತು. ಎಲ್ಲರನ್ನು ಸಂತೈಸಲೆಂದು ಆತ ಮುಂಬಯಿಗೆ ಬಂದಿದ್ದ.

ಪದ್ಮಾವತಿಯ ಅಂತಿಮ ಕ್ರಿಯೆ ಮುಂಬಯಿಯಲ್ಲೇ ಮುಗಿಯಿತು. ಮೋಹನನ ಸಂತತ ಪ್ರಯತ್ನದಿಂದ ಸುಮಿತ್ರೆಯ ಜ್ವರ ಇಳಿಯಿತು. ಬಿಳಿಚಿ ಹೋದ ಮುಖದ, ಕೃಶವಾದ ದೇಹದ ಸುಮಿತ್ರೆ ತಂಗಿಯ ಅಪರಕ್ರಿಯೆಯ ಅಕ್ಷತೆಯನ್ನು ತಲೆಯಲ್ಲಿ ಹೊತ್ತಳು.

ಸುಮಿತ್ರೆ ಜ್ವರದಲ್ಲಿ ಮಲಗಿದ್ದಾಗ ಗೋಪಿ ಬಂದು ಆಗಾಗ ನೋಡಿ ಹೋಗುತ್ತಿದ್ದ. ಆಕೆ ಎದ್ದು ಮನೆಯಲ್ಲಿ ಅತ್ತಿತ್ತ ತಿರುಗುವಂತಾದಮೇಲೆ ಬೇಕೆಂದೇ ಗೋಪಿಯಿಂದ ತುಂಬ ದೂರ ಇರಲು ಪ್ರಯತ್ನಿಸುತ್ತಿದ್ದಳು. ಗೋಪಿಯ ಕೃಶವಾದ ದೇಹವನ್ನು ನೋಡಿದಾಗಲೆಲ್ಲ ಅವಳ ಕರುಳು ಕಿತ್ತು ಬರುತ್ತಿತ್ತು. ಒಮ್ಮೊಮ್ಮೆ ಮನೆಯವರೆಲ್ಲ ಬೇಕೆಂದೇ ಅವನ ಕುರಿತು ಅನಾದರ ದೃಷ್ಟಿ ತಳೆದಿದ್ದಾರೆಂದು ಭಾವಿಸುತ್ತಿದ್ದಳು. ಆದರೆ ಮರುಕ್ಷಣ ತನ್ನ ಸಂಶಯಕ್ಕಾಗಿ ತನಗೇ ನಾಚಿಕೆಯಾಗುತ್ತಿತ್ತು.

ಗೋಪಿಗಾಗಿ ಅವಳ ಹೃದಯದಿಂದ ಪ್ರೀತಿಯ ಮಹಾಪೂರ ಹರಿಯುತ್ತಿತ್ತು. ನಿಂತಲ್ಲಿ, ಕೂತಲ್ಲಿ, ತಿರುಗುವಲ್ಲಿ ಆಕೆಗೆ ಕಾಣುತ್ತಿದ್ದುದು ಗೋಪಿಯೆ. ಆದರೆ ಗೋಪಿಯ ಪ್ರೀತಿ ತನ್ನ ಮೇಲಿದೆಯೋ ಎಂದು ಆಕೆ ಒಂದು ಬಾರಿಯೂ ಯೋಚಿಸಲಿಲ್ಲ.

ಆತನ ಪ್ರೀತಿಯ ಪದ್ಮಾವತಿಯ ಸಾವು ಆಕೆಗೆ ತಂಗಿಯ ಸಾವಷ್ಟೇ ಆಗಿರಲಿಲ್ಲ. ತಾನು ಹಿತವನ್ನು ಬಯಸುವ ಪ್ರೀತಿಯ ಜೀವದ ಒಡನಾಡಿಯ ಸಾವು ಕೂಡಾ ಆಗಿತ್ತು.

ಆದರೂ ಒಮ್ಮೊಮ್ಮೆ ಸುಮಿತ್ರೆಗೆ ತನ್ನ ನಡತೆ ತನ್ನ ಹೃದಯವನ್ನು ಬಯಲಿಗೆಳೆದೀತು ಎಂದು ಸಂದೇಹ. ಅದಕ್ಕಾಗಿ ತನ್ನ ಮನಸ್ಸಿನೊಡನೆ

ಪ್ರಯತ್ನಪೂರ್ವಕ ಹೋರಾಟ ನಡೆಸಿ ಗೋಪಿಯಿಂದ ದೂರವಾಗಿರುತ್ತಿದ್ದಳು.

ಮೂರ್ತಿಯಿದ್ದುದು ಸುಮಿತ್ರೆಯ ಪಾಲಿಗೆ ದೈವಕೃಪೆಯಂತಾಗಿತ್ತು.

ಕುಸುಮಾವತಿಯ ನಿರ್ವ್ಯಾಜ ಸ್ನೇಹ ಅವಳು ಆಗಾಗ ಅಂತರ್ಮುಖಿಯಾಗದಂತೆ ತಡೆಯಿತು.

ಸುಮಿತ್ರೆಗೆ ಜ್ವರಬಂದಾಗ ಶೀಲೆ ಆಕೆಯ ಪಾಲಿಗೆ ತಾಯಿಯೇ ಆಗಿದ್ದಳು. ಜ್ವರವೇರಿದಾಗ ಒಂದೆರಡು ಬಾರಿ ಸುಮಿತ್ರೆ ಶೀಲೆಯನ್ನೇ ಬಿಗಿಹಿಡಿದು 'ಅಮ್ಮಾ' ಎಂದುದೂ ಉಂಟು.

ಅಂಥ ಸಂದರ್ಭಗಳಲ್ಲಿ ಹಿಂದೆಂದೂ ಅನುಭವಿಸದಂಥ ಸಂತೋಷವನ್ನು ಶೀಲೆ ಅನುಭವಿಸಿದ್ದಳು.

ಮೂರ್ತಿ ಮುಂಬಯಿಯಲ್ಲಿ ಮೂರು ವಾರವಿದ್ದು ಹೊರಡುವ ಯೋಚನೆ ಮಾಡಿದ. ಮೊದಲು ಗೋಪಿಯೊಡನೆ ಈ ವಿಚಾರ ಪ್ರಸ್ತಾಪ ಮಾಡಿದ.

"ನಾನು ಹೊರಡುತ್ತೇನೆ ಗೋಪಿ. ಇನ್ನಿದ್ದು ಏನುಮಾಡುವುದು. ಸುಮಿತ್ರೆಯನ್ನು ಕರೆದುಕೊಂಡು ಹೋಗುತ್ತೇನೆ."

"ನಾನೂ ಟ್ರಾನ್ಸ್‌ಫರ್ ಕೇಳಿದ್ದೇನೆ ಮೂರ್ತಿ, ಡಿಲ್ಲಿಗೆ ಬಹುಶಃ ಒಂದೆರಡು ವಾರದಲ್ಲಿ ಹೋಗಲಿಕ್ಕಾಗಬಹುದು. ನನಗೆ ಸ್ವಲ್ಪ ಸಮಯ ಇಲ್ಲಿರುವುದು ಸಾಧ್ಯವಿಲ್ಲ."

"ಡಿಲ್ಲಿಗೆ ? ನಿನಗೇನು ಹುಚ್ಚುಹಿಡಿದಿದೆಯೇ ಗೋಪಿ. ಮನೆ, ಮಠ ಎಲ್ಲ ಬಿಟ್ಟು ಡಿಲ್ಲಿಗೆ ಹೊರಡುವ ಆಲೋಚನೆ ಮಾಡಿದ್ದಿಯಲ್ಲ."

"ಮನೆ ಪದ್ಮಾವತಿಯ ಹಿಂದೆಯೇ ಹೋಯಿತು ಮೂರ್ತಿ. ಈಗ ಇರುವುದು ಮಠ ಮಾತ್ರ. ಮಠಕ್ಕೆ ಡಿಲ್ಲಿ ಮುಂಬಯಿಯೆಂದೇನು. ಮಗುವನ್ನು ಹೇಗಾದರೂ ಶೀಲತ್ತಿಗೆ ನೋಡಿಕೊಳ್ಳುತ್ತಾಳೆ. ನನಗೆ ಆಲೋಚನೆ ಸುಮಿತ್ರೆಯದೆ."

"ಸುಮಿತ್ರೆಯನ್ನು ನಾನು ಕರೆದುಕೊಂಡು ಹೋಗುತ್ತೇನೆ. ನೀನು ಆ ವಿಚಾರ ಯೋಚನೆ ಮಾಡುವುದು ಬೇಡ."

"ಹಾಗಾದರೆ ಒಂದು ಮಾತು ನೆಡೆಸಿಕೊಡು ಮೂರ್ತಿ. ಸುಮಿತ್ರೆಗೆ ಓದಿಸು. ಅವಳಿಗೆ ಯೋಗ್ಯನಾದ ಒಬ್ಬ ವರನನ್ನು ಗೊತ್ತು ಮಾಡು. ಮದುವೆಯ ಖರ್ಚೆಲ್ಲ ನಾನು ನೋಡಿಕೊಳ್ಳುತ್ತೇನೆ. ಇದು ಪದ್ಮಾವತಿಗಾಗಿ ನಾನು ಮಾಡುವ ಕೆಲಸ....ದಯಮಾಡಿ ಅಷ್ಟು ನಡೆಸಿಕೊಡು."

ಮೂರ್ತಿ “ನೋಡ್ತೋಣ....” ಎಂದಿದ್ದ. ಆತ ಗೋಪಿಯ ಮಾತಿಗೆ ಬೇರೇನೂ ಉತ್ತರ ಹೇಳುವ ಸ್ಥಿತಿಯಲ್ಲಿರಲಿಲ್ಲ.

ಗೋಪಿ ಬಳಿಯಲ್ಲಿರುವಾಗಲೇ ಮೂರ್ತಿ ಮೋಹನನೊಡನೆ ಮಂಗಳೂರಿಗೆ ಮರಳುವ ವಿಚಾರ ಹೇಳಿದ.

“ಸುಮಿತ್ರೆಯನ್ನು ಕರೆದುಕೊಂಡು ಹೋಗುತ್ತೇನೆ ಮೋಹನರಾಯರೆ.”

ಮೋಹನನೂ ಒಂದು ಕ್ಷಣ ಮಾತನಾಡಲಿಲ್ಲ.

“ ಮುಂದೇನು ಮೂರ್ತಿ ?”

“ ಮೆಟ್ರಿಕ್ ಮುಗಿಸುತ್ತಾಳೆ. ಮುಂದಿನ ವಿಚಾರ ಮುಂದೆ.”

“ ಅವಳ ಸಬ್ಜಕ್ಟ್ ಯಾವುದು ?”

“ ಕೆಮಿಸ್ಟ್ರಿ.”

“ ಸರಿಯಾಯಿತು ” ಎಂದು ಮೋಹನ ನಕ್ಕ. ಆ ನಗೆ ಯಾರಿಗೂ ಅರ್ಥವಾಗಲಿಲ್ಲ.

“ ಸುಮಿತ್ರೆಯನ್ನು ಕರೆದುಕೊಂಡು ಹೋಗು ಬೇಕಾದರೆ. ಶೀಲೆಯೂ ಜೊತೆಗೆ ಬರುತ್ತಾಳೆ. ಒಂದೆರಡು ತಿಂಗಳು ಮಂಗಳೂರಲ್ಲಿ ನಿಲ್ಲಲು ನಿನಗೇನಾದರೂ ಆಕ್ಷೇಪವಿದೆಯೆ ?”

ಮೂರ್ತಿಗೆ ಈ ಮಾತು ಸರಿಯಾಗಿ ಅರ್ಥವಾಗಲಿಲ್ಲ.

“ ಖರ್ಚಿನ ವಿಚಾರ ನೀನು ಯೋಚಿಸಬೇಡ ಮೂರ್ತಿ. ನಾನು ಪ್ರತಿ ತಿಂಗಳೂ ಹಣ ಕಳುಹಿಸುತ್ತೇನೆ. ಶೀಲೆಗೂ ಸ್ವಲ್ಪ ವಿಶ್ರಾಂತಿ ಬೇಕಾಗಿದೆ. ಗೋಪಿಯ ಹುಡುಗ ಅಡಿಗೆ ಮಾಡುತ್ತಾನೆ. ಸ್ವಲ್ಪ ಸಮಯ ನಾವಿಬ್ಬರೂ ಇಲ್ಲಿಯೇ ಸುಧಾರಿಸಿಕೊಳ್ಳುತ್ತೇವೆ.”

ಗೋಪಿ ನಡುವೆಯೇ ತಡೆಹಾಕಿ “ ನನಗೆ ಡಿಲ್ಲಿಗೆ ವರ್ಗವಾಗಬಹುದು ಅಣ್ಣ. ನಾನು ಕೇಳಿದ್ದೇನೆ ” ಎಂದ.

ಮೋಹನ ತಮ್ಮನ ಕಡೆ ನೋಡಿದ.

“ ಬದಲಾವಣೆಗಾಗಿಯೆ ?”

ಗೋಪಿ ಮಾತನಾಡಲಿಲ್ಲ.

“ ಒಂದು ಆರು ತಿಂಗಳು ಹೋಗಿ ಬಾ ಬೇಕಾದರೆ. ಖಾಯಂ ವರ್ಗ ಮಾಡಿಸಿಕೊಳ್ಳುವ ಹುಚ್ಚಿಗೆ ಹೋದರೆ ನಿನ್ನನ್ನು ಎಂದೆಂದಿಗೂ ನಾನು ಕ್ಷಮಿಸಲಾರೆ ” ಎಂದು ಗಂಭೀರವಾಗಿಯೇ ಮೋಹನ ಹೇಳಿದ.

ಗೋಪಿಗೆ ಈಗಲೂ ಮಾತನಾಡಲು ಸಾಧ್ಯವಾಗಲಿಲ್ಲ.

"ಶೀಲಕ್ಕ ಒಂದೆರಡು ದಿನದಲ್ಲೇ ಹೊರಡಲು ತಯಾರಿದ್ದಾರೆಯೆ ?" ಮೂರ್ತಿ ಕೇಳಿದ.

ಮೋಹನನಿಗೆ ಆ ಪ್ರಶ್ನೆ ಅನವಶ್ಯವೆಂದು ಕಂಡು ಬಂತು.

"ಸುಮಿತ್ರೆ ಯಾವಾಗ ಹೊರಡುವಳೋ ಆಗ ಶೀಲೆಯೂ ಬಂದೇ ಬರುತ್ತಾಳೆ."

ಈಗ ಮೂರ್ತಿಗೆ ಮಾತನಾಡಲು ಸಾಧ್ಯವಾಗಲಿಲ್ಲ.

"ನೋಡು ಮೂರ್ತಿ. ಸುಮಿತ್ರೆಯ ಸಂಪೂರ್ಣ ರಕ್ಷಣೆಯ ಭಾರ ನಾನು ವಹಿಸಿದ್ದೇನೆ. ಇದು ನನ್ನ ಇಚ್ಛೆಯಿಂದ. ಅದಕ್ಕೆ ನೀನು ಅಡ್ಡಿ ತರುವುದಿಲ್ಲವೆಂದು ನನ್ನ ನಂಬಿಕೆ. ಅವಳು ಮೆಟ್ರಿಕ್ ಮುಗಿಸಲಿ. ಎಷ್ಟು ಹಣ ಬೇಕಾದರೂ ಖರ್ಚು ಮಾಡು. ಆದರೆ ಪರೀಕ್ಷೆ ಮುಗಿದೊಡನೆ ಮಾತ್ರ ಇಲ್ಲಿಗೆ ಕಳಿಸಿಕೊಡಬೇಕು. ಅವಳ ಇಂಟರ್ ಸಾಯನ್ಸ್ ಇಲ್ಲೇ ಆಗಲಿ. ಅವಳು 'ಮೆಡಿಕಲ್' ಕಾಲೇಜಿನಿಂದ ಯಶಸ್ವಿಯಾಗಿ ಹೊರಗೆ ಬರುವವರೆಗೆ ನನ್ನ ಮನಸ್ಸಿಗೆ ಸಮಾಧಾನವಿಲ್ಲ. ನಾನು ಪಾರ್ಸಿ ಕಾಲನಿಯಲ್ಲಿ ಒಂದು ನರ್ಸಿಂಗ್ ಹೋಮು ತೆಗೆಯುತ್ತೇನೆ. ಅದರ ಸಂಪೂರ್ಣ ಹೊಣೆಗಾರಿಕೆ ಸುಮಿತ್ರೆ ವಹಿಸುವ ದಿನ ಬರಬೇಕು. ಆ ದಿನ ನಾನು ಸುಖಿ. ನನಗೆ ಮಕ್ಕಳಿಲ್ಲ. ದೈವಕೃಪೆಯಿಂದ ದೊರಕಿರುವ ಮಗಳನ್ನೂ, ಶೀಲೆಯೇ ತಾಯಿಯಾಗಿ ನಿಲ್ಲಬೇಕಾಗಿ ಬಂದಿರುವ ಪದ್ಮಾವತಿಯ ಮಗುವನ್ನೂ ಬಿಡಲಾರೆ."

ಅವನ ದನಿಯಲ್ಲಿ ಗಾಂಭೀರ್ಯವಿತ್ತು. ನಿರ್ಧಾರವಿತ್ತು. ಕಣ್ಣಂಚಿನಲ್ಲಿ ಹಸಿಯಿತ್ತು.

ಮೂರ್ತಿ ಆಶ್ಚರ್ಯದಿಂದ ಒಮ್ಮೆ ಗೋಪಿಯ ಕಡೆ, ಒಮ್ಮೆ ಮೋಹನನ ಕಡೆ ನೋಡುತ್ತಿದ್ದ.

ಗೋಪಿ ಮಾತನಾಡಲಿಲ್ಲ.

ಶೀಲೆಯ ಕೋಣೆಯೊಳಗೆ ಪದ್ಮಾವತಿಯ ಮಗು ಅಳುವುದು ಕೇಳಿ ಬರುತ್ತಿತ್ತು.

ಸುಮಿತ್ರೆ ಟ್ರೇ ತುಂಬ ಕಾಫಿಯ ಬಟ್ಟಲುಗಳನ್ನು ಹಿಡಿದುಕೊಂಡು ಇವರಿದ್ದಲ್ಲಿಗೆ ಬಂದಳು.